# ವೇದಾಂತ ಲೇಖನಮಾಲೆ




ಲೇಖಕರು

ಬ್ರಹ್ಮಜ್ಞ ಕವಿ, ವೇದಾಂತ ಚತುರ, ಶ್ರೀ ದೇವರಾಯ
ಕುಲಕರ್ಣಿಗಳು (ಹೊಂಬಳ)



ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ - 573211, ದೂರವಾಣಿ : 08175-573820

Visit us @ www.culturalindia.org/karyalaya

2011

ಅಧ್ಯಾತ್ಮಗ್ರಂಥಾವಳಿ

# ವೇದಾಂತ ಲೇಖನಮಾಲೆ

ಲೇಖಕರು
ಬ್ರಹ್ಮಜ್ಞಕವಿ , ವೇದಾಂತ ಚತುರ, ಶ್ರೀ ದೇವರಾಯ
ಕುಲಕರ್ಣಿಗಳು (ಹೊಂಬಳ)

ಕ್ರಮಾಂಕ : 250

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ- 573211
ದೂ. : 08175 273820
Visit us at wwwadhyatmaprakasha.Org.
2011

**VEDANTA LEKHANAMALE** - Collection of Articles published in Adhyatma Prakasha & Shankara Bhaskar Magzines ; Written by **Sri DEVARAO KULAKARNI (Hombala)** ; Published by Adhyatma Prakasha Karyalaya, Public Charitable Trust, Holenarasipur - 573211 (INDIA)

☎ : **08175-273820** website : www adhyatmaprakasha.org.

ಮೊದಲನೆಯ ಮುದ್ರಣ I 2011 (1000 ಪ್ರತಿಗಳು)

ಪುಟಗಳು : 16+ 260 =276

| **ಬೆಲೆ : ರೂ. 50/-** |
|---|

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

All Rights Reserved

**ಅಕ್ಷರ ಜೋಡಣೆ :**

ಪ್ರಶಾಂತ್ ಎಂಟರ್‌ಪ್ರೈಸಸ್

ನಂ. 45, 3ನೇ ಮುಖ್ಯರಸ್ತೆ ಟಿ.ಆರ್.ನಗರ ಪೋಸ್ಟ್

ನಾಗಸಂದ್ರ, ಬೆಂ.- 28, ದೂರವಾಣಿ : 26761529

**ಮುದ್ರಣಸ್ಥಾನ :**

ಗಣೇಶ ಮಾರುತಿ ಪ್ರಿಂಟರ್ಸ್

ನಂ. 76, 6ನೇ ಮುಖ್ಯರಸ್ತೆ 3ನೇ ಬ್ಲಾಕ್

ತ್ಯಾಗರಾಜನಗರ, ಬೆಂಗಳೂರು - 560 028

ದೂ. 9845347095

# ಪ್ರಕಾಶಕರ ಬಿನ್ನಹ

ಬ್ರಹ್ಮೀಭೂತ ಪೂಜ್ಯ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು ಅಧ್ಯಾತ್ಮ ಪ್ರಕಾಶ ಕಾರ್ಯಾಲಯವನ್ನು 1920ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಿದರು. ಹೊಳೆನರಸೀಪುರದಲ್ಲಿ ಪ್ರಧಾನಕಾರ್ಯಾಲಯವಾಗಿ ಸ್ಥಿರವಾಗಿ ನೆಲೆಯಾದದ್ದು 1937ರಲ್ಲಿ, ಬೆಂಗಳೂರಿನಲ್ಲಿ ಶಾಖಾಕಾರ್ಯಾಲಯ 1969ರಲ್ಲಿ. 1948ರಲ್ಲಿ ಸಂನ್ಯಾಸ ಸ್ವೀಕರಿಸಿ ಕಾರ್ಯಕಾರಿ ಸಮಿತಿಗೆ ಆಡಳಿತವನ್ನು ವಹಿಸಿದರು. 1992ರಿಂದ ಇದು ಧರ್ಮಾರ್ಥ ಸಾರ್ವಜನಿಕ ಸಂಸ್ಥೆಯಾಗಿ (Public Chairtable Trust) ನೊಂದಣಿಯಾಗಿ ಆಡಳಿತವನ್ನು ನಿರ್ವಹಿಸುತ್ತಿದೆ.

ಅಧ್ಯಾತ್ಮ ವಿದ್ಯೆಯಲ್ಲಿ ಜನರಿಗೆ ಆಸಕ್ತಿಯನ್ನುಂಟುಮಾಡಿ ಜಾತಿ, ಮತ, ಭೇದಗಳಿಲ್ಲದೆ ಸಕಲ ಮಾನವರಿಗೂ ಸುಖ, ಶಾಂತಿ, ಆನಂದವನ್ನು ಕೊಡುವ ವೇದ ಮತ್ತು ಉಪನಿಷತ್ತುಗಳಲ್ಲಿ ಅಡಗಿರುವ ನಮ್ಮ ಪವಿತ್ರ ಭಾರತದ ಸಂಸ್ಕೃತಿಯನ್ನು ಸಂಸ್ಥೆಯ ಮೂಲಕ ಪ್ರಚಾರ ಮಾಡುವದೇ ಶ್ರೀಶ್ರೀಗಳವರ ಮುಖ್ಯ ಧ್ಯೇಯ. ಈ ಕಾರ್ಯವು ಸತತವಾಗಿ ಅಂದಿನಿಂದ ಇಂದಿನವರೆಗೂ ಭಕ್ತಾದಿಗಳ ಉದಾರ ಸಹಾಯದಿಂದ ನಡೆದುಕೊಂಡು ಬರುತ್ತಿದೆ. 1) ಗ್ರಂಥ ಪ್ರಕಟನೆ 2) ಪ್ರವಚನಗಳು 3) ಮಾಸಪತ್ರಿಕೆ (ಅಧ್ಯಾತ್ಮಪ್ರಕಾಶ ಮಾಸಪತ್ರಿಕೆ, 4) ವಿದ್ಯಾಲಯವನ್ನು ನಡೆಸಿಕೊಂಡು ಹೋಗುವುದು ಮುಖ್ಯವಾದ ಧ್ಯೇಯೋದ್ದೇಶಗಳು.

ಕಾರ್ಯಾಲಯದಿಂದ ಇಲ್ಲಿಯವರೆಗೆ ಕನ್ನಡ, ಇಂಗ್ಲಿಷ್,ಮತ್ತು ಸಂಸ್ಕೃತ ಭಾಷೆಗಳ 251 (ಸ್ವಾಮಿಗಳು ಬರೆದಿದ್ದು 201 + ಶಿಷ್ಯರುಗಳ 50 ) ಪುಸ್ತಕಗಳು ಮುದ್ರಣಗೊಂಡಿವೆ. ಪುಸ್ತಕಗಳು ಮಾರಾಟವಾದಾಗಲೆಲ್ಲಾ ಮರುಮುದ್ರಣವಾಗುತ್ತಿವೆ. ಜನಪ್ರಿಯವಾಗಿದ್ದ ಉಪನಿಷತ್ ಗ್ರಂಥಗಳು 5–6 ಬಾರಿ ಮುದ್ರಣಗಳನ್ನು ಕಂಡಿವೆ. ಎಲ್ಲಾ ಪುಸ್ತಕಗಳೂ ಸುಲಭ ಬೆಲೆಯಲ್ಲಿ ಕಾರ್ಯಾಲಯದಲ್ಲಿ ದೊರಕುತ್ತವೆ.

ಸಂಸ್ಕೃತ, ಕನ್ನಡ, ಮರಾಠಿ, ತೆಲಗು, ಇಂಗ್ಲಿಷ್ ಭಾಷಾಭಿಜ್ಞರಾದ ಶ್ರೀದೇವರಾಯ ಕುಲಕರ್ಣಿ (ಹೊಂಬಳ) ಯವರು ಅರ್ವಾಚೀನವೇದಾಂತ ಸಂಪ್ರದಾಯದಂತೆ ಶಂಕರವೇದಾಂತಾಧ್ಯಯನವನ್ನು ಮಾಡಿ 1954ರಿಂದ ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳ ಸಂಪರ್ಕ ಹೊಂದಿ, ಶಿಷ್ಯರಾಗಿ ಪ್ರಸ್ಥಾನತ್ರಯ ಶಂಕರ ಭಾಷ್ಯಾನುಸಾರವಾಗಿ ಅಧ್ಯಯನ ಮಾಡಿ ಪ್ರವಚನ ಹಾಗೂ ಗ್ರಂಥ ರಚನೆಗಳ ಮೂಲಕ ವೇದಾಂತ ತತ್ತ್ವ ಪ್ರಚಾರವನ್ನು ದೇಶ–ವಿದೇಶಗಳಲ್ಲಿ ನಡೆಸಿಕೊಟ್ಟಿರುತ್ತಾರೆ.

ಇವರು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆ, ಶಂಕರಭಾಸ್ಕರ ಮತ್ತು ಜಿಜ್ಞಾಸುಗಳ ಪತ್ರಗಳಿಗೆ ಪ್ರಶ್ನೋತ್ತರ ರೂಪದಲ್ಲಿ ಬರೆದು ಪ್ರಕಟಿಸಿದ್ದ 80 ಲೇಖನಗಳ ಸಂಗ್ರಹವೇ ಈಗ ಪ್ರಕಟವಾಗುತ್ತಿರುವ ''ವೇದಾಂತ ಲೇಖನಮಾಲೆ'' ಗ್ರಂಥ.

ಹೊಳೆನರಸೀಪುರದ ವಿದ್ಯಾನಿಲಯದ ಪ್ರಧಾನ ಆಚಾರ್ಯರು ಮತ್ತು ಕಾರ್ಯಾಲಯದ ಪುರೋಭಿವೃದ್ಧಿಗೆ ಪ್ರೋತ್ಸಾಹ ನೀಡುತ್ತಿರುವ ಶ್ರೀ ಶ್ರೀಅದ್ವಯಾನಂದೇಂದ್ರ ಸರಸ್ವತೀಸ್ವಾಮಿಗಳು, ಕುಮಟಾದಲ್ಲಿರುವ ಬಾಳಿಗಾ ಕಾಲೇಜು ಪ್ರಾಂಶುಪಾಲರೂ ಮತ್ತು ಸಂಸ್ಕೃತವಿದ್ವಾಂಸರೂ ಆದ ಡಾ|| ವಿಶ್ವನಾಥ ಕೃಷ್ಣಭಟ್ಟ ಹಂಪಿಹೊಳಿ ಮತ್ತು ಗುಂಟೂರಿನಲ್ಲಿರುವ ದೇವರಾಯ ಕುಲಕರ್ಣಿಯವರ ಶಿಷ್ಯರಾದ ಡಾ|| ಜೆ. ವಿ. ಪೂರ್ಣಚಂದ್ರರಾವ್‌ರವರ ಅನುಭವಪೂರ್ವವಾದ ಮುನ್ನುಡಿಗಳು ಪುಸ್ತಕದ ಘನತೆಯನ್ನು ಹೆಚ್ಚಿಸಿದೆ. ಲೇಖನಗಳ ಮೂಲ–ದಿಕ್ಸೂಚಿಯನ್ನು ಪರಿಶಿಷ್ಟ ರೂಪವಾಗಿ ಗ್ರಂಥದ ಕೊನೆಯಲ್ಲಿ ಸೇರಿಸಿದೆ.

ಅಮೇರಿಕದಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿರುವ ಗ್ರಂಥಕರ್ತರ ಪುತ್ರ ಶ್ರೀವಲ್ಲಭಕುಲಕರ್ಣಿಯವರ ಮತ್ತು ಶಿಷ್ಯರ ಪ್ರೇರಣೆ, ಉದಾರಕಾಣಿಕೆ ಮತ್ತು ಇತರ ಭಕ್ತರ ಉದಾರಾಶ್ರಯದಿಂದ ಪುಸ್ತಕವನ್ನು ಮುದ್ರಿಸಿ ಜಿಜ್ಞಾಸುಗಳಿಗೆ ಸುಲಭ ಬೆಲೆಯಲ್ಲಿ ದೊರೆಯುವಂತೆ ಏರ್ಪಾಟು ಮಾಡಿದೆ.

ಕೆಳಕಂಡ ಮಹನೀಯರುಗಳೂ ಸಹ ಗ್ರಂಥ ಪ್ರಕಟನೆಗೆ ಸಹಾಯ ಮಾಡಿರುತ್ತಾರೆ. ಎಲ್.ಜೆ. ಟ್ರಸ್ಟ್, ಕೋಡೆಹೌಸ್, ಬೆಂಗಳೂರು ; ಟಿ.ಆರ್. ಚಂದ್ರಶೇಖರ್, ಬೆಂ.; ಡಾ|| ಜೆ.ವಿ. ಪೂರ್ಣಚಂದ್ರರಾವ್, ಗುಂಟೂರು ; ಓಮ್‌ಪ್ರಕಾಶ್ ಸುಬ್ಬರಾವ್, ಬೆಂ.; ರಂಗಧಾಮ, ಬೆಂ, ; ಟಿ.ಆರ್. ರುಕ್ಮಿಣಿಯಮ್ಮ ಬೆಂ, ; ಪಾರಿಜಾತಾ, ಬೆಂ,; ಬಿ.ಎಸ್. ದೊರೆಸ್ವಾಮಿ ಅಯ್ಯರ್, ಬೆಂ, ; ಎಸ್. ಶ್ರೀನಿವಾಸ್ ಮೂರ್ತಿ, ಬೆಂ, ; ಟಿ. ಅಶ್ವಥ್‌ನಾರಾಯಣರಾವ್, ಬೆಂ., ಟಿ.ಆರ್. ರಾಮಕೃಷ್ಣ ಶ್ರೀಮತಿ ಉಮಾ ರಾಮಕೃಷ್ಣ ಮತ್ತು ಮಕ್ಕಳು. U.S.A.

ಗ್ರಂಥ ಪ್ರಕಾಶನಕ್ಕೆ ಧನಸಹಾಯ ಮಾಡಿರುವ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿರುವ ಎಲ್ಲಾ ಭಕ್ತವೃಂದಕ್ಕೂ ಕಾರ್ಯಾಲಯವು ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತದೆ. ಎಂದಿನಂತೆ ಮಹಾಜನರು ಪುಸ್ತಕವನ್ನು ಬರಮಾಡಿಕೊಂಡು ಓದಿ ಹೆಚ್ಚಿನ ಜ್ಞಾನಾರ್ಜನೆಯನ್ನು ಸಂಪಾದಿಸಿ ಅಧ್ಯಾತ್ಮ ಪ್ರಚಾರಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಬೇಕಾಗಿ ಪ್ರಾರ್ಥನೆ.

ಖರಸಂವತ್ಸರ
ಮಾರ್ಗಶಿರ ಶುದ್ಧ ನವಮಿ, ಭಾನುವಾರ — ಪ್ರಕಾಶಕರು
4.12.2011

## (ಅದ್ವಯಾನಂದೇಂದ್ರ ಸರಸ್ವತೀಸ್ವಾಮಿ)

# ಮೊದಲ ಮಾತು

ಮಾನ್ಯಶ್ರೀ ದೇವರಾಯಕುಲಕರ್ಣಿಯವರು ಶ್ರೀಶ್ರೀಗಳವರಿಗೆ ವರ ಪುತ್ರರಂತಿದ್ದರು. ನಾನು ಅವರನ್ನು 1977ರಿಂದ ಅವರ ಅಂತ್ಯಕಾಲವಾದ 1993ರವರೆಗೂ ಬಲ್ಲೆನು. ನಾನು ಶ್ರೀಶ್ರೀಗಳವರನ್ನು ನೇರಾಗಿ ನೋಡದಿದ್ದರೂ ಇವರ ವೇದಾಂತಪ್ರವಚನವನ್ನು ಕೇಳುತ್ತಿದ್ದರೆ ಸಾಕ್ಷಾತ್ ಶ್ರೀ ಶ್ರೀಗಳವರೇ ಇವರ ಬಾಯಿಯಿಂದ ಹೇಳುತ್ತಿದ್ದಾರೋ ಎಂಬಂತೆ ತೋರುತ್ತಿತ್ತು, ಇವರ ಪ್ರವಚನವೂ ಸಂಪೂರ್ಣ ಅನುಭವ ಪ್ರಧಾನವಾಗಿಯೇ ಇರುತ್ತಿತ್ತು, ಇವರ ಮೇಧಾಶಕ್ತಿಯೂ ಸಹ ಅದ್ವಿತೀಯವಾಗಿತ್ತು, ಶ್ರೀಶ್ರೀಗಳವರು ಎಲ್ಲಿ ಯಾವ ವಿಚಾರವನ್ನು ಹೇಗೆ ದೃಷ್ಟಾಂತಯುಕ್ತಿಗಳನ್ನು ಕೊಟ್ಟು ಹೇಳಿರುತ್ತಿದ್ದರೋ ಅದನ್ನು ಹಾಗೆಯೇ ಆ ತಾರೀಕು ಇಸವಿಯೊಂದಿಗೆ ಬಹಳ ಹೃದಯಂಗಮವಾಗಿ ಪ್ರತಿಪಾದನೆ ಮಾಡುತ್ತಿದ್ದರು. ಹೀಗೆ ಅವರ ಜ್ಞಾಪಕಶಕ್ತಿಯು ಅಸಾಧಾರಣವಾಗಿತ್ತು.

ಶ್ರೀ ದೇವರಾಯರು ಮೊದಲು (ಶ್ರೀಶ್ರೀಗಳವರ ಭೇಟಿಗಿಂತ ಮುಂಚೆ) ವಿಚಾರಸಾರ, ವೃತ್ತಿ ಪ್ರಭಾಕರ, ಅನುಭವಾಮೃತ , ಯೋಗವಾಸಿಷ್ಠ , ಹಾಗೂ ಇನ್ನೂ ಕೆಲವು ಪ್ರಸಿದ್ಧ ಪುಡಿ ಗ್ರಂಥಗಳನ್ನು – ಇಟ್ಟುಕೊಂಡು ಪ್ರವಚನವನ್ನು ಮಾಡುತ್ತಿದ್ದರಂತೆ. ಅಂದಾಜು 1954ರಲ್ಲಿರಬಹುದು. ಹೊಳೆನರಸೀಪುರದ ನಮ್ಮ ಸ್ವಾಮಿಗಳ ಭೇಟಿಯಾದ ಮೇಲೆ ಅವರು ಸಂಪೂರ್ಣ ಬದಲಾದರು. ಅದಲ್ಲದೇ ಶ್ರೀಶ್ರೀಗಳವರ ಮೇಲೆ ಅವರಿಗೆ ಅದೆಷ್ಟು ಅಪಾರವಾದ ಭಕ್ತಿ ಇತ್ತೆಂದರೆ, ಅವರೇ ಹೇಳುತ್ತಿದ್ದರೇನೆಂದರೆ – ಸಾಕ್ಷಾತ್ ದತ್ತಾತ್ರೇಯನೇ ಮತ್ತೆ ಅವತಾರವನ್ನು ಮಾಡಿ ನನ್ನನ್ನುದ್ಧರಿಸಿರುತ್ತಾನೆನ್ನುತ್ತಿದ್ದರು. ಅವರು ಮೊದಲಿನಿಂದಲೂ ದತ್ತೋಪಾಸಕರಾಗಿದ್ದರು. ಅದರ ಫಲವಾಗಿಯೇ ಶ್ರೋತ್ರಿಯ ಬ್ರಹ್ಮನಿಷ್ಠರಾದ ಗುರುಗಳ ಸಹವಾಸವೂ ಅವರ ಉಪದೇಶವೂ ಅವರಿಗೆ ಲಭಿಸಿತು.

ಶ್ರೀದೇವರಾಯರೂ ಸಹ ಗೀತಾಲಾವಣಿ, ಬ್ರಹ್ಮಜ್ಞವಚನ, ಶಂಕರ ಸಂಸ್ಕರಣಭಾಗ 1, ಭಾಗ 2, ಹಾಗೂ ಶ್ರವಣ ಮನನ ನಿಧಿಧ್ಯಾಸನ, ಶಾಂಕರವೇದಾಂತ ಸೌರಭ ಮುಂತಾದ ಕನ್ನಡ ಗ್ರಂಥಗಳನ್ನೂ, ಕೆಲವು ಇಂಗ್ಲಿಷ್ ಗ್ರಂಥಗಳನ್ನೂ ಸಹ ಬರೆದಿರುತ್ತಾರೆ. ಶ್ರೀ ದೇವರಾಯರು ಶ್ರೀಶ್ರಿಗಳವರ ಜೊತೆಯಲ್ಲಿ ಆಂಧ್ರಪ್ರವಾಸವನ್ನು

ಮಾಡಿ ಎಲ್ಲೆಲ್ಲಿ ಹೇಗೆ ಹೇಗೆ ಶ್ರೀಶ್ರೀಗಳವರ ಪ್ರವಚನಗಳು, ಚರ್ಚೆಗಳು, ನಡೆದವೋ ಅದನ್ನು ಹಾಗೆಯೇ ಜ್ಞಾಪಿಸಿಕೊಂಡು ಸಂಪೂರ್ಣ ಪ್ರವಾಸದ ವರದಿಯನ್ನು ಯಥಾವತ್ತಾಗಿ ಬರೆದು ಅಧ್ಯಾತ್ಮಪ್ರಕಾಶದ ಮಾಸ ಪತ್ರಿಕೆಗೆ ಕಳುಹಿಸಿ ಕೊಟ್ಟಿದ್ದಾರೆಂದರೆ ಅವರ ಮೇಧಾಶಕ್ತಿಯನ್ನು ಏನೆಂದು ಎಷ್ಟೆಂದು ಬಣ್ಣಿಸೋಣ ! ಅವರೇ ''ನನಗೆ ಸಂಸ್ಕೃತವು ಆಳವಾಗಿ ತಿಳಿಯದು'' ಎಂದು ಎಷ್ಟೋ ಸಲ ಹೇಳಿಕೊಂಡಿದ್ದರೂ ಅವರ ಭಾಷ್ಯ ಪ್ರವಚನಗಳು, ಅವರ ಮುಖದಲ್ಲಿ ನಲಿಯುತ್ತಿದ್ದ ಭಾಷ್ಯ ಪಂಕ್ತಿಗಳು, ಅವರು ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ ಭಾಷ್ಯವಾಕ್ಯದ ಅರ್ಥಗಳನ್ನು ಅವಲೋಕಿಸಿದರೆ ಎಂಥಹ ಪಂಡಿತರನ್ನೂ ಮುಗ್ಧಗೊಳಿಸುತ್ತಿದ್ದವು. ವಾಸ್ತವವಾಗಿಯೂ ಅವರ ಪ್ರವಚನವನ್ನು ಕೇಳಿದವರೇ ಧನ್ಯರು ! ಅವರ ವಿಚಾರಧಾರೆಯು ಆಚಂದ್ರಾರ್ಕವಾಗಿ ಸರ್ವರಿಗೂ ಮನನೀಯವಾಗಿದೆ. ನಾವೆಲ್ಲರೂ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಅವರ ಗ್ರಂಥಗಳನ್ನು ಓದಿ ಮನನಮಾಡಿ ಕೃತಾರ್ಥರಾಗೋಣ.

8–11–2011
ಹೊಳೆನರಸೀಪುರ

ಇತಿ ಅದ್ವಯಾನಂದೇಂದ್ರಸ್ವಾಮಿ

# ಮುನ್ನುಡಿ
## (ಲೇಖಕರು ಮತ್ತು ಗ್ರಂಥದ ಬಗ್ಗೆ)

ವೇದಾಂತಚತುರ, ಬ್ರಹ್ಮಜ್ಞಕವಿ, ಅಭಿನವ ಯಾಜ್ಞವಲ್ಕ್ಯ- ಮುಂತಾದ ಬಿರುದಾವಲಿಗಳಿಂದ ಭೂಷಿತರಾದ ಶ್ರೀ ದೇವರಾವ ಕುಲಕರ್ಣಿಯವರ ಕೆಲವು ಲೇಖನಗಳು ಈ **'ವೇದಾಂತ ಲೇಖನ ಮಾಲೆ'**ಯಲ್ಲಿ ಪುನಃ ಮುದ್ರಣಗೊಂಡಿವೆ. ಶ್ರೀಯುತ ಕುಲಕರ್ಣಿಯವರು ಔಪಚಾರಿಕ ಶಿಕ್ಷಣವನ್ನು ಹೆಚ್ಚು ಪಡೆದವರಲ್ಲ, ಗುರು ದತ್ತಾತ್ರೇಯನ ಅನುಗ್ರಹದಿಂದ ಮತ್ತು ಸದ್ಗುರು ಶ್ರೀ ಶ್ರೀಸಚ್ಚಿದಾನಂದ ಸರಸ್ವತೀಸ್ವಾಮಿಗಳ ಆಶೀರ್ವಾದದಿಂದ ವೇದಾಂತವನ್ನು ಅರಿತರು ಹಾಗೂ ಅನುಷ್ಠಾನ ಮಾಡಿದರು. ಶ್ರೀಯುತ ದೇವರಾಯರ ಜೀವನವೇ ಒಂದು ಸಂಘರ್ಷಮಯ ಹೋರಾಟವಾಗಿದೆ. ಭಗವಂತನು ಕೊಟ್ಟೂ ಪರೀಕ್ಷಿಸುತ್ತಾನೆ ; ಕಸಿದುಕೊಂಡೂ ಪರೀಕ್ಷಿಸುತ್ತಾನೆ ಎಂಬ ಮಾತಿಗೆ ಶ್ರೀ ದೇವರಾಯರ ಜೀವನವೇ ನಿದರ್ಶನವಾಗಿದೆ. ಅವರು ವೇದಾಂತವನ್ನು ಜೀವನದಲ್ಲಿ ಅಳವಡಿಸಿಕೊಂಡು ಸ್ಥಿತಪ್ರಜ್ಞರಂತೆ ಬದುಕಿದವರು.

ಶ್ರೀ ದೇವರಾಯರು ಹೊಳೆನರಸೀಪುರದಿಂದ ಪ್ರಕಟವಾಗುವ ಆಧ್ಯಾತ್ಮಪ್ರಕಾಶ ಮಾಸಪತ್ರಿಕೆ ಬೆಂಗಳೂರಿನಿಂದ ಪ್ರಕಾಶವಾಗುವ ಶಂಕರಭಾಸ್ಕರ ಮತ್ತು ಜಿಜ್ಞಾಸುಗಳು ಬರೆದ ಕೆಲವು ಪತ್ರಗಳಿಗೆ ಪ್ರಶ್ನೋತ್ತರರೂಪದಲ್ಲಿ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಬರೆದಿರುವ ಕೆಲವು ಲೇಖನ ಕುಸುಮಗಳನ್ನು ಈ ವೇದಾಂತ ಲೇಖನಮಾಲೆಯಲ್ಲಿ ಪೋಣಿಸಲಾಗಿದೆ. ಈ ಲೇಖನಗಳಲ್ಲಿ ಮೊದಲಿನ ಹನ್ನೆರಡು ಲೇಖನಗಳು ಲೇಖಕರು ಶ್ರೀ ಶ್ರೀಸಚ್ಚಿದಾನಂದಸರಸ್ವತೀಸ್ವಾಮಿಗಳ ಜೊತೆಗೆ ಮಾಡಿದ ಆಂಧ್ರಪ್ರದೇಶದ ಪ್ರವಾಸದ ವಾರ್ತೆಯನ್ನು ವಿವರಿಸುತ್ತವೆ. ಈ ಲೇಖನಗಳೆಲ್ಲವೂ ಕೇವಲ ಪ್ರವಾಸಕಥನವಾಗಿರದೇ ವೇದಾಂತವಿಷಯಗಳ ಸಾರವಾಗಿವೆ. ವಿಶೇಷವಾಗಿ ಬೆಜವಾಡದಲ್ಲಿ (ವಿಜಯವಾಡ) ನಡೆದ ವಾದ-ವಿವಾದಗಳು ಶ್ರೀಶ್ರೀಗಳವರ ಸ್ಥಿತಪ್ರಜ್ಞತೆಯನ್ನು ಮತ್ತು ಸಾತ್ತ್ವಿಕ ಸ್ವಭಾವವನ್ನು ನಿರೂಪಿಸುತ್ತವೆ. ಆಲವಿಲ್ಲ ಮಲ್ಲವರಂ (ಸುಬ್ರಹ್ಮಣ್ಯಕ್ಷೇತ್ರ, ಆಂ.ಪ್ರ.) ನಲ್ಲಿರುವ ಸುಬ್ರಹ್ಮಣ್ಯದೇವಸ್ಥಾನದಲ್ಲಿ ನಡೆದ ಚಮತ್ಕಾರವನ್ನು ಲೇಖಕರು ಅತ್ಯಂತ ರೋಚಕವಾಗಿ ಬರೆದಿರುವರು. ಪ್ರತಿನಗರದಲ್ಲಿ ಶ್ರೀಶ್ರೀಗಳವರು ಮಾಡಿದ ಭಾಷಣಗಳನ್ನು ಲೇಖಕರು ಅನೇಕ ಕಡೆಗಳಲ್ಲಿ ತಾವೇ

ಸ್ವತಃ, ಕೆಲವು ಕಡೆ ಇತರರು ಆಂಧ್ರಭಾಷೆಯಲ್ಲಿ ಅನುವಾದಿಸಿದ್ದಾರೆ. ಅವೆಲ್ಲವನ್ನೂ ಈ ಲೇಖನಮಾಲೆ ಸಾರಾಂಶರೂಪದಲ್ಲಿ ದಾಖಲಿಸುತ್ತದೆ. ನಲವತ್ತು ದಿವಸಗಳವರೆಗೆ ಶ್ರೀಶ್ರೀಗಳವರ ಜೊತೆಗೆ ಆಂಧ್ರಪ್ರದೇಶದ ಪ್ರವಾಸ ಮಾಡಿದ ಲೇಖಕರು ಪುನಃ ಬೆಂಗಳೂರಿಗೆ ಮರಳಿದಾಗ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ ಎಂಬ ಅನುಭವವಾದಂತೆ ಪ್ರವಾಸಕಥನ ಓದುಗರಿಗೂ ಅನುಭವವಾಗುತ್ತದೆ.

ಪರಮಾರ್ಥದಪಥದಲ್ಲಿ ಎಂಬ ಶೀರ್ಷಿಕೆಯ ಮೂರು ಲೇಖನಗಳು ಲೇಖಕರು ಶ್ರೀ ಶ್ರೀಸಚ್ಚಿದಾನಂದಸರಸ್ವತೀಸ್ವಾಮಿಗಳ ಶಿಷ್ಯತ್ವವನ್ನು ಪಡೆದ ವಿಧಾನವನ್ನು ಮತ್ತುಅಧ್ಯಾತ್ಮ ಪಥವನ್ನು ಆಯ್ಕೆಮಾಡಿದ ವಿಷಯವನ್ನು ಬಿಚ್ಚಿಟ್ಟಿದ್ದಾರೆ. ಶ್ರೀ ದೇವರಾಯರು '' ಹರಿಶ್ಚಂದ್ರ, ರಾಮಚಂದ್ರ, ನಳಮಹಾರಾಜ, ಧರ್ಮರಾಜ ಮತ್ತು ವಿಕ್ರಮ ಮಹಾರಾಜ ಎಂಬ ಐವರೂ ಅನುಭವಿಸಿದ ಕಷ್ಟಗಳನ್ನು ನಾನು ಬೇರೆ ಬೇರೆ ಪ್ರಸಂಗಗಳಲ್ಲಿ ಬೇರೆ ಬೇರೆ ರೀತಿಯಾಗಿ ಅನುಭವಿಸಬೇಕಾಗಿ ಬಂದಿತು'' ಎಂದು ಹೇಳುತ್ತಿದ್ದರು. ಅವರು ಎದುರಿಸಿದ ಕಷ್ಟ–ನಷ್ಟಗಳು ಅವರನ್ನು ಪುಟವಿಟ್ಟ ಚಿನ್ನವನ್ನಾಗಿ ಮಾಡಿವೆ. ಆದ್ದರಿಂದಲೇ ಅವರು ಮಾಡಿದ ಭಾಷಣಗಳು ಮತ್ತು ಬರೆದ ಲೇಖನಗಳು ಶ್ರೋತೃಗಳನ್ನು ಮತ್ತು ಓದುಗರನ್ನು ಆಕರ್ಷಿಸುತ್ತವೆ.

ಗೀತಾಭಾಷ್ಯವಾಕ್ಯಾನುಸಂಧಾನವೆಂಬ ಹತ್ತು ಲೇಖನಗಳು ಭಗವದ್ಗೀತೆಯ ಸಂದೇಶವನ್ನು ಸರಳವಾಗಿ ಮತ್ತುಸುಗಮವಾಗಿ ಬೋಧಿಸುತ್ತವೆ. ಉಳಿದ ಲೇಖನಗಳು ವೇದಾಂತ ಪ್ರಕ್ರಿಯೆಯ ಸಿದ್ಧಾಂತಗಳನ್ನು ನಿದರ್ಶನಗಳ ಮೂಲಕ ತಿಳಿಸಿಕೊಡುತ್ತವೆ.

ಶಂಕರಭಾಸ್ಕರದಿಂದ ಆಯ್ದ ಲೇಖನಗಳು ಶಾಂಕರ ಸಿದ್ಧಾಂತಗಳನ್ನು ತಿಳಿಯಾಗಿ ಮತ್ತುಸ್ಪಷ್ಟವಾಗಿ ನಿರೂಪಿಸುತ್ತವೆ. ಶಂಕರರ ಹಿತೋಪದೇಶ ಹಾಗೂ ಆತ್ಮವಿಜ್ಞಾನಕ್ಕೆ ಸಾಧನಗಳು ಎಂಬ ಲೇಖನಗಳು ವೇದಾಂತವನ್ನರಿಯಲು ಅಗತ್ಯವಿರುವ ಅರ್ಹತೆಯನ್ನು ಚರ್ಚಿಸುತ್ತವೆ. ಮಾರ್ಗಶೀರ್ಷದಲ್ಲಿ ಜನಿಸಿದ ಶ್ರೀ ರಮಣ ಮಹರ್ಷಿ ಮತ್ತು ಶ್ರೀ ಶ್ರೀಸಚ್ಚಿದಾನಂದೇಂದ್ರರ ಸಾಧನೆಗಳನ್ನು ಇಬ್ಬರು ವೇದಾಂತಭಾಸ್ಕರರು ಎಂಬ ಲೇಖನದಲ್ಲಿ ವಿವರಿಸಲಾಗಿದೆ. ಆತ್ಮನೆಂದರೆ ಯಾರು? ಅವನ ಸ್ವರೂಪ ಯಾವುದು? ಆತ್ಮಶಬ್ದದ ನಿರ್ವಚನ ಏನು?, ಆತ್ಮಾನುಭವದ ಅರ್ಥವೇನು?, ಅವಸ್ಥೆಗಳು ಎಷ್ಟು?, ತತ್ತ್ವದರ್ಶಿಗಳೆಂದರೆ ಯಾರು? –ಮುಂತಾದ ಪ್ರಶ್ನೆಗಳಿಗೆ ದೇವರಾಯ ಕುಲಕರ್ಣಿಯವರ ಲೇಖನಗಳು ಸರಿಯಾದ ಉತ್ತರವನ್ನು ನೀಡುತ್ತವೆ. ಶ್ರೀದೇವರಾಯ ಕುಲಕರ್ಣಿಯವರ ಲೇಖನ ವೈಶಿಷ್ಟ್ಯವೇನೆಂದರೆ ಗಹನವಾದ ವೇದಾಂತ

ಸಿದ್ಧಾಂತಗಳನ್ನು ಸುಲಭವಾಗಿ ತಿಳಿಸಿಕೊಡುವದು. ಕೆಲವು ಲೇಖನಗಳನ್ನು ನಿದರ್ಶನಗಳ ಮೂಲಕ, ಕೆಲವನ್ನು ಕಥೆಗಳ ಮೂಲಕ, ಇನ್ನೂ ಕೆಲವನ್ನು ತಮ್ಮ ಅನುಭವದ ಮೂಲಕ ವಿವರಿಸುವ ಅವರ ಶೈಲಿ ಅನನ್ಯವಾಗಿದೆ. ಅವರ ವ್ಯಕ್ತಿತ್ವದಂತೆ ಅವರ ಭಾಷೆಯೂ ಸರಳ. ಅವರ ಸಾತ್ವಿಕತೆ ಅವರ ಬರವಣಿಗೆಯಲ್ಲಿ ಎದ್ದು ಕಾಣುತ್ತದೆ. ತರ್ಕ ಕರ್ಕಶತೆಯಾಗಲಿ ಪರಮತ ನಿರಾಕರಿಸುವ ಅಥವಾ ನಿಂದಿಸುವ ಉತ್ಸಾಹವಾಗಲಿ ಎಲ್ಲಿಯೂ ಕಂಡು ಬರುವದಿಲ್ಲ. ಶುದ್ಧ ಶಾಂಕರ ಸಿದ್ಧಾಂತ ಪ್ರಕ್ರಿಯೆಗಳನ್ನು ಅತ್ಯಂತ ಪ್ರಾಮಾಣಿಕವಾಗಿ ಈ ಲೇಖನ ಮಾಲೆಯಲ್ಲಿ ಕಾಣಬಹುದು.

ಈ ಲೇಖನಗಳನ್ನು ಪುನಃ ಪ್ರಕಟಿಸುತ್ತಿರುವದು ಅತ್ಯಂತ ಆನಂದದ ಸಂಗತಿ. ಈ ಕಾರ್ಯಕ್ಕೆ ಕೈ ಹಾಕಿರುವ ಅವರ ಮಕ್ಕಳು ಮತ್ತು ಶಿಷ್ಯರು ನಿಜವಾಗಿಯೂ ಅಭಿನಂದನೀಯರು. ಇಂಥ ಪುಸ್ತಕವನ್ನು ಓದಿ, ಮನನ ಮಾಡಿ, ಅನುಷ್ಠಾನಕ್ಕೆ ತಂದಾಗ ಲೇಖಕರ ಮತ್ತು ಪ್ರಕಾಶಕರ ಪ್ರಯತ್ನ ಸಾರ್ಥಕವಾಗುವದು.

ಡಾ. ವಿಶ್ವನಾಥ ಕೃ. ಹಂಪಿಹೊಳಿ
'ಆಶೀರ್ವಾದ'
ಹೆಗ್ಡೆ –ಕುಮಟ
581330 (ಉ.ಕ.)
ಫೋನ್ : 99862 05192

ಖರ ಸಂವತ್ಸರ
ಆಷಾಢ ಶುದ್ಧ ಏಕಾದಶೀ
(11.7.2011)

# ಮುನ್ನುಡಿ

ಬ್ರಹ್ಮಶ್ರೀ ದೇವರಾಯ ಕುಲಕರ್ಣಿಗಳು ನಮ್ಮ ಪೂಜ್ಯ ಗುರುಗಳು. ಅವರು ಯಾವಾಗಲೂ ಎರಡೇ ಎರಡು ಅವಸ್ಥೆಗಳಿವೆ ಎಂದು ಹೇಳುತ್ತಿದ್ದರು. 1) ನಾನೇ ಆಗಿರುವ ಆತ್ಮನನ್ನು ಪರಮಾತ್ಮ ಎಂದು ವಿವೇಕದಿಂದ ತಿಳಿದುಕೊಂಡು ನಿಲ್ಲುವದು. 2) ಅದು ಆಗದಿದ್ದರೆ ಶ್ರದ್ಧಾಭಕ್ತಿಗಳಿಂದ ಭಗವಂತನಿಗೆ ಶರಣು ಹೋಗುವದು. ಅದನ್ನೇ ಇಂಗ್ಲೀಷ್‌ನಲ್ಲಿ Either know or Surrender ಎಂದು ಹೇಳುತ್ತಿದ್ದರು.

ಶಂಕರಭಾಷ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ ಪಂಚ ಪ್ರಾಣಗಳಂತೆ ಐದು ವಿಷಯಗಳನ್ನು ತಿಳಿದಿರಬೇಕೆಂದು ಅವರು ತಮ್ಮ ಪ್ರವಚನಗಳಲ್ಲಿ ಹೇಳುತ್ತಿದ್ದರು. 1) ಸಾರ್ವತ್ರಿಕ ಪೂರ್ಣಾನುಭವ 2) ಸಾಕ್ಷ್ಯನುಭವ 3)ಅಧ್ಯಾರೋಪಾಪವಾದ 4) ವಸ್ತುತಂತ್ರ ಮತ್ತು ಕರ್ತೃತಂತ್ರ ಸಾಧನೆಗಳಿಗಿರುವ ವ್ಯತ್ಯಾಸವನ್ನು ಸರಿಯಾಗಿ ಗುರುತಿಸುವದು. 5) ಪರಮಾರ್ಥ ದೃಷ್ಟಿ ಮತ್ತು ವ್ಯವಹಾರದೃಷ್ಟಿ. ಈ ಐದನ್ನೂ ಕುರಿತು ಅವರು ಸ್ಪಷ್ಟವಾಗಿ ಮನಸ್ಸಿಗೆ ಹತ್ತುವಂತೆ ಹೇಳುತ್ತಿದ್ದರು.

ಪೂಜ್ಯ ಶ್ರೀ ಸಚ್ಚಿದಾನಂದೇಂದ್ರಸ್ವಾಮಿಗಳ ಉಪದೇಶಗಳನ್ನು ಕುಲಕರ್ಣಿಗಳು ಹೀಗೆ ಹೇಳುತ್ತಿದ್ದರು. "ಒಂದು ದೃಷ್ಟಿಯಿಂದ ಹೇಳುವದಾದರೆ ' ತತ್ತುಸಮನ್ವಯಾತ್" ಎಂಬ ಸೂತ್ರಕ್ಕೆ ಇರುವ ಭಾಷ್ಯವೇ ಶ್ರೀ ಶಂಕರ ದಿಗ್ವಿಜಯ ಎಂದು ಹೇಳಬಹುದು. ಧರ್ಮಜಿಜ್ಞಾಸೆಯನ್ನು ಮೀರಿ ಸಾರ್ವತ್ರಿಕ ಪೂರ್ಣಾನುಭವದ ಆಧಾರದಿಂದ ಪರಮಾರ್ಥತತ್ತ್ವವನ್ನು ಬೋಧಿಸಿ ಅದರ ಫಲವಾದ ಮೋಕ್ಷವನ್ನು ಇಲ್ಲೇ ಈಗಲೇ ಜ್ಞಾನಸಮಕಾಲದಲ್ಲೇ ಅನುಭವಕ್ಕೆ ಬರುವ ಹಾಗೆ ವೇದಾಂತ ಬೋಧಕನಾಗಿಯೇ ಶ್ರೀಶಂಕರಾಚಾರ್ಯರ ದಿವ್ಯಾವತಾರವಾಯಿತು" ಎಂಬುದು ಈ ಸಮನ್ವಯಾಧಿ ಕರಣಭಾಷ್ಯದಿಂದ ತಿಳಿಯುತ್ತದೆ.

ಉಪನಿಷತ್ತುಗಳಲ್ಲಿರುವ ಬ್ರಹ್ಮಜಿಜ್ಞಾಸಾ(ಜ್ಞಾನ)ಭಾಗವನ್ನು ಬಿಟ್ಟರೆ ಮಿಕ್ಕ ಭಾಗವೆಲ್ಲಾ ಕರ್ಮ, ಉಪಾಸನೆ ಎಂಬ ಸಾಧನೆಗಳು ; ಕಾಲಾಂತರ, ಲೋಕಾಂತರ ಎಂಬ ಗತಿಗಳು, ಮುಂತಾದ ಕೇವಲ ನಂಬಿಕೆಯ ವಿಚಾರಗಳನ್ನು ಹೇಳುವ ಕರ್ಮಕಾಂಡಕ್ಕೆ ಸಮಾನವಾಗುತ್ತದೆ. ಈ ಜ್ಞಾನಭಾಗವೇ ಈ ಕರ್ಮಕಾಂಡ ವಿಷಯಗಳಿಗೆ ಬಲವನ್ನು ಕೊಡುತ್ತದೆ. ಇದು ಹೇಗೆ ಎಂಬುದನ್ನು ವಿವರಿಸುತ್ತಾ ಈ ಕೆಳಗಿನ ಭಾಷ್ಯವಾಕ್ಯವನ್ನು ಮತ್ತೆ ಮತ್ತೆ ಉದಾಹರಿಸುತ್ತಿದ್ದರು.

‘‘ಸಮ್ಯಗ್ದರ್ಶನ ವಿಧ್ವಸ್ತತಮಸಾಂ ತು ನಿತ್ಯಸಿದ್ಧನಿರ್ವಾಣಪರಾಯಣಾಂ ಸಿದ್ಧೈವ ಅನಾವೃತ್ತಿಃ’’ । ತದಾಶ್ರಯೇಣೈವ ಹಿ ಸಗುಣ ಶರಣಾನಾಂ ಅನಾವೃತ್ತಿ ಸಿದ್ಧಿಃ’’
(ಸೂ.ಭಾ. 4–4–22)

ಓಂಕಾರೋಪಾಸಕನು ಸತ್ತನಂತರ ಬ್ರಹ್ಮಲೋಕಕ್ಕೆ ಹೋಗಿ ಕಲ್ಪಾಂತದವರೆಗೂ ಐಶ್ವರ್ಯವನ್ನು ಅನುಭವಿಸಿ ಕೊನೆಗೆ ಆ ಲೋಕದಲ್ಲೇ ಆತ್ಮಜ್ಞಾನವನ್ನು ಹೊಂದಿ ಮೋಕ್ಷವನ್ನು ಪಡೆಯುತ್ತಾರೆ ಎಂಬ ವಿಷಯವನ್ನು ಹೇಗೆ ನಂಬಬೇಕು? ಎಂಬ ಪ್ರಶ್ನೆಗೆ ಸಮಾಧಾನವಾಗಿ ಈ ವಾಕ್ಯವನ್ನು ಉದಾಹರಿಸುತ್ತಿದ್ದರು. ಇದರ ಅರ್ಥ – ‘‘ಸಮ್ಯಗ್ದರ್ಶನದಿಂದ ಅಜ್ಞಾನವನ್ನು ಕಳೆದುಕೊಂಡವರಿಗೆ ಮೋಕ್ಷವು ಸಿದ್ಧವಾಗುವದರಿಂದ ಅನಾವೃತ್ತಿ ಸಿದ್ಧವೇ ಅಲ್ಲವೇ ? ಇದು ಬದುಕಿರುವಾಗಲೇ ಅನುಭವದಲ್ಲಿ ಕಂಡುಬರುತ್ತಿದೆ. ಇದರ ಬಲದಿಂದಲೇ ಸಗುಣೋಪಾಸಕನು ಬ್ರಹ್ಮಲೋಕದಲ್ಲಿ ಆತ್ಮಜ್ಞಾನವನ್ನು ಪಡೆಯುವನೆಂದು ಒಪ್ಪಬಹುದು.

ಪ್ರಸ್ಥಾನತ್ರಯಭಾಷ್ಯವೇ ಶಂಕರರ ಅವತಾರವೆಂದು ಹೇಳುತ್ತಾ ಭಾಷ್ಯ ಪುಸ್ತಕಕ್ಕೆ ಮತ್ತೆ ಮತ್ತೆ ನಮಸ್ಕರಿಸುತ್ತಿದ್ದರು.

ಶ್ರೀಶ್ರೀಗಳವರು ಹೀಗೆ ಹೇಳುತ್ತಿದ್ದರಂತೆ. ಶಂಕರ ಭಾಷ್ಯದಲ್ಲಿ Fixed rate and Term cash (net cash).. fixed rate ಎಂದರೆ ಪ್ರಸ್ಥಾನತ್ರಯ ಭಾಷ್ಯದಲ್ಲಿ ಯಾವ ವಿಷಯವನ್ನಾದರೂ ಭಾಷ್ಯಕಾರರು ಒಂದೇ ಬಗೆಯಾಗಿ ಹೇಳುತ್ತಾರೆ. ಉದಾ. ಶಾಸ್ತ್ರಂ ತು ಅಂತ್ಯಂ ಪ್ರಮಾಣಂ। ಅತದ್ಧರ್ಮಾಧ್ಯಾರೋಪಣ ಮಾತ್ರ ನಿವರ್ತಕತ್ವೇನ ಆತ್ಮನಃ ಪ್ರಾಮಾಣ್ಯಂ ಪ್ರತಿಪದ್ಯತೇ’’ (ಗೀ.ಭಾ.2–18) ಇದೇ ವಿಷಯವನ್ನು ಮತ್ತೊಂದು ಕಡೆ ‘‘ಶಾಸ್ತ್ರಂ ಜ್ಞಾಪಕಂ ನ ತು ಕಾರಕಂ ಇತಿ ಸ್ಥಿತಿಃ’’ (ಬೃ.ಭಾ. 1–4–10) ಎಂದು ಹೇಳಿದ್ದಾರೆ. Term cash ಎಂದರೆ ವೇದಾಂತಶಾಸ್ತ್ರದಿಂದ ಅನುಭವವು ಇಲ್ಲಿಯೇ ಈಗಲೇ ಉಂಟಾಗುತ್ತದೆ.

**"Shankara is not a logician but a Saint"** ‘‘ಶ್ರೀ ಶಂಕರರು ತಾರ್ಕಿಕರಲ್ಲ ಆದರೆ ಅವರೊಬ್ಬ ಮಹಾತ್ಮರು’’ ಎಂದು ಹೇಳುತ್ತಿದ್ದರು.

ರೈಲು ಹೇಗೆ ತನ್ನ ಹಳಿಯನ್ನು ಬಿಟ್ಟು ಹೋಗುವುದಿಲ್ಲವೋ ಹಾಗೆಯೇ ನಾನು ಶ್ರೀ ಶಂಕರಭಾಷ್ಯವೆಂಬ ಹಳಿಯ ಮೇಲೆಯೇ ಪ್ರವಚನ ಮಾಡುವೆನೇ ಹೊರತು ಅತ್ತ ಇತ್ತ ಸ್ವಲ್ಪವೂ ಹೋಗುವುದಿಲ್ಲ – ಎಂದು ಶ್ರೀಗಳು ಹೇಳುತ್ತಿದ್ದರಂತೆ.

ಶ್ರೀಶ್ರೀಗಳ ಬೋಧನಾಕ್ರಮವು ತನ್ನದೇ ಆದ ಒಂದು ವಿಶೇಷ ಶೈಲಿಯನ್ನು ಹೊಂದಿತ್ತು. ಪ್ರವಚನದಲ್ಲಿ ಉಪಕ್ರಮ, ಉಪಸಂಹಾರಾದಿಗಳು ಖಚಿತವಾಗಿ ಇರುತ್ತಿತ್ತು. ಉಪಸಂಹಾರದ ವೇಳೆಗೆ ಶ್ರೋತೃಗಳನ್ನು ತಮ್ಮ ಅನುಭವದಲ್ಲಿಯೇ ನಿಲ್ಲಿಸುತ್ತಿದ್ದರು.

ಶ್ರೀ ಶ್ರೀಗಳವರ ಶುದ್ಧವಾದ ಶಾಂಕರ ಪ್ರಕ್ರಿಯೆಯನ್ನು ಅನುಸರಿಸಿದ ವಿಚಾರವು ಆಂಧ್ರದಲ್ಲಿ ವ್ಯಾಪಿಸುವದಕ್ಕೆ ಕುಲಕರ್ಣಿಗಳೇ ಮುಖ್ಯ ಕಾರಣ.

ಪೂಜ್ಯಗುರುಗಳಾದ ದೇವರಾಯ ಕುಲಕರ್ಣಿಗಳ ವಿಗ್ರಹವನ್ನು ಪೀಠಾಪುರ ದಲ್ಲಿರುವ ಶ್ರೀಪಾದವಲ್ಲಭ ಸಂಸ್ಥಾನದ ಹತ್ತಿರ ಇರುವ ಪುರಾತನವಾದ ಶ್ರೀ ಕುಕ್ಕುಟೇಶ್ವರ ದೇವಾಲಯದ ಪ್ರಾಂಗಣದಲ್ಲಿ ಸ್ಥಾಪಿಸಲಾಗಿದೆ.

ಶ್ರೀರಾಮಕೃಷ್ಣಪರಮಹಂಸರಿಗೆ ವಿವೇಕಾನಂದರ ಹಾಗೆ, ಶ್ರೀಶ್ರೀಗಳವರಿಗೆ ಕುಲಕರ್ಣಿಯವರು ಎಂದು ಹೋಲಿಸುವದು ಸಮಂಜಸವೆನಿಸುತ್ತದೆ. ಇವರ ಬಗ್ಗೆ ಹೇಳುವದು ಬಹಳಷ್ಟು ಇದೆಯಾದರೂ ಇಲ್ಲಿ ಕೆಲವನ್ನು ಮಾತ್ರ ಪ್ರಸ್ತಾಪಿಸಲಾಗಿದೆ.

ಡಾ|| ಜೆ..ವಿ. ಪೂರ್ಣಚಂದ್ರರಾವ್
(ಶ್ರೀರಾಮಕೃಷ್ಣ ಹೋಮಿಯೋ ಕ್ಲಿನಿಕ್, ರೇಲ್‌ಪೇಟ
ಗುಂಟೂರು (ಆ.ಪ್ರ) 522001
☎ 9866432715

ತಾ. 15. 11.2011

# ವಿಷಯಾನುಕ್ರಮಣಿಕೆ


| ಕ್ರ. ಸಂ. | ವಿಷಯ | ಪು.ಸಂ. |
|---|---|---|
| | **ಭಾಗ–I** | |
| | **(ಆಧ್ಯಾತ್ಮಪ್ರಕಾಶ ಪತ್ರಿಕೆಯಿಂದ)** | |
| 1. | ಶ್ರೀಶ್ರೀಗಳವರ ಆಂಧ್ರಪ್ರದೇಶದ ಪ್ರವಾಸ ವಾರ್ತೆ1 | 1 |
| 2. | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–2 | 8 |
| 3. | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–3 (ವಿಜಯವಾಡ) (7.11.1963) | 14 |
| 4. | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–4 (ಗುಂಟೂರು) (8.11.63) | 20 |
| 5. | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–5 (ಪೀಠಾಪುರ) (11.11.63) | 27 |
| 6. | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–6 (ಆಲವಿಲ್ಲಮಲ್ಲವರಂ) (12.11.63) | 34 |
| 7. | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–7 (ವಿಜಯನಗರ) (19.11.63) | 40 |
| 8. | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–8 (ಪಾರ್ವತೀಪುರಮ್(22.11.63) | 49 |
| 9. | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–9 (ವಿಶಾಖಪಟ್ಟಣ) (25.11.63) | 55 |
| 10. | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–10 (ಅನಕಾಪಲ್ಲಿ) (28.11.63) | 63 |
| 11. | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–11 (ಅನಕಾಪಲ್ಲಿ) (28.11.63) | 71 |
| 12. | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–12 ಬೆಂಗಳೂರಿಗೆ ಪ್ರಯಾಣ (5.12.63) | 78 |

| ಕ್ರ. ಸಂ. | ವಿಷಯ | ಪು.ಸಂ. |
|---|---|---|
| 13. | ಪರಮಾರ್ಥದ ಪಥದಲ್ಲಿ–1 | 87 |
| 14. | ಪರಮಾರ್ಥದ ಪಥದಲ್ಲಿ–2 | 91 |
| 15. | ಪರಮಾರ್ಥದ ಪಥದಲ್ಲಿ–3 | 93 |
| 16. | ಆತ್ಮನನ್ನು ಅರಿಯುವದೆಂದರೆ ಏನು | 97 |
| 17. | ಗೀತಾಭಾಷ್ಯವಾಕ್ಯಾನುಸಂಧಾನ–1 | 99 |
| 18. | ಗೀತಾಭಾಷ್ಯವಾಕ್ಯಾನುಸಂಧಾನ–2 | 101 |
| 19. | ಗೀತಾಭಾಷ್ಯವಾಕ್ಯಾನುಸಂಧಾನ–3 | 103 |
| 20. | ಗೀತಾಭಾಷ್ಯವಾಕ್ಯಾನುಸಂಧಾನ–4 | 105 |
| 21. | ಗೀತಾಭಾಷ್ಯವಾಕ್ಯಾನುಸಂಧಾನ–5 (ವಿವೇಕ ಪ್ರತ್ಯಯ) | 107 |
| 22. | ಗೀತಾಭಾಷ್ಯವಾಕ್ಯಾನುಸಂಧಾನ–6 (ವಿವೇಕ ಪ್ರತ್ಯಯ) | 109 |
| 23. | ಗೀತಾಭಾಷ್ಯವಾಕ್ಯಾನುಸಂಧಾನ–7 (ಭಕ್ತಿಪ್ರಸಾದ ಸ್ನೇಹ | 111 |
| 24. | ಗೀತಾಭಾಷ್ಯವಾಕ್ಯಾನುಸಂಧಾನ–8 (ಭಗವದ್ಭಾವನಾಭಿನಿವೇಶ) | 113 |
| 25. | ಗೀತಾಭಾಷ್ಯವಾಕ್ಯಾನುಸಂಧಾನ–9 (ವಿರತಿ ಎಂಬ ಹಣತೆ) | 115 |
| 26. | ಗೀತಾಭಾಷ್ಯವಾಕ್ಯಾನುಸಂಧಾನ–10 (ಸಮ್ಯಗ್ದರ್ಶನರೂಪದ ಜ್ಞಾನದೀಪ) | 116 |
| 27. | ಸುಲಭ ಸಾಧನೆ – ಯದಶ್ನಾಸಿ | 120 |
| 28. | ದೃಷ್ಟಿಯ ದ್ರಷ್ಟೃ (ನೋಟವನ್ನೇ ನೋಡುವವ) | 121 |
| 29. | ಸತ್ಸಂಗತ್ವೇ ನಿಃಸಂಗತ್ವಮ್–1 | 124 |
| 30. | ಸತ್ಸಂಗತ್ವೇ ನಿಃಸಂಗತ್ವಮ್–2 | 126 |
| 31. | ಯತ್ಕರೋಷಿ | 128 |
| 32. | ನಿಜಜೀವನ | 130 |
| 33. | ಯತ್ಕರೋಷಿ | 133 |
| 34. | ಮನೋವಿಜ್ಞಾನದ ಮಹಿಮೆ | 135 |

| ಕ್ರ. ಸಂ. | ವಿಷಯ | ಪು.ಸಂ. |
|---|---|---|
| 35. | ಜೀವನ ಅಸ್ತಿತ್ವ | 136 |
| 36. | ವೇದಾಂತದ ಒಳಗುಟ್ಟು–1 | 140 |
| 37. | ವೇದಾಂತದ ಒಳಗುಟ್ಟು–2 | 142 |
| 38. | ವೇದಾಂತದ ಒಳಗುಟ್ಟು–3 | 145 |
| 39. | ವೇದಾರ್ಥ ರಹಸ್ಯ–1 | 148 |
| 40. | ವೇದಾರ್ಥ ರಹಸ್ಯ–2 | 150 |
| 41. | ಕರ್ಮಫಲತ್ಯಾಗ | 152 |
| 42. | ಸಂಕಲ್ಪ ತ್ಯಾಗ | 153 |
| 43. | ಸ್ವಕರ್ಮಣಾ ತಮಭ್ಯರ್ಚ್ಯ | 154 |
| 44. | ದಾನಂ ದಾತೃವಶಂ ಪ್ರೋಕ್ತಮ್ | 157 |
| 45. | ದರ್ವೀ ಪಾಕರಸಂ ಯಥಾ | 159 |
| 46. | ಆಮನನ್ತಿ ಚೈನಮಸ್ಮಿನ್ | 161 |
| 47. | ಅಧ್ಯಾತ್ಮವಿದ್ಯೆ | 164 |
| 48. | ವೈರಾಗ್ಯ ಚಕ್ರವರ್ತಿ | 168 |
| 49. | ಶ್ರೀಶ್ರೀಭಗವತ್ಪಾದರೊಡನೆ ಸಂದರ್ಶನ–1 | 170 |
| 50. | ಶ್ರೀಶ್ರೀಭಗವತ್ಪಾದರೊಡನೆ ಸಂದರ್ಶನ–2 | 175 |
| 51. | ಶ್ರೀಶ್ರೀಭಗವತ್ಪಾದರೊಡನೆ ಸಂದರ್ಶನ–3 | 178 |
| 52. | ಅಮೆರಿಕಾದಲ್ಲಿ ಉಪಾಕರ್ಮ | 181 |
| 53. | ಜಿಜ್ಞಾಸುಗಳೊಬ್ಬರ ಕಣ್ಮರೆ | 185 |
| 54. | ಪಾಶ್ಚಾತ್ತ್ಯರ ಜ್ಞಾನಪಿಪಾಸೆ | 186 |
| 55. | ವೇದಾಂತಸಂಪ್ರದಾಯ | 189 |
| 56. | ಆತ್ಮಾನುಭವವೆಂದರೇನು? | 191 |
| 57. | ಬ್ರಹ್ಮವು ಇದೆಯೆಂದು ಏಕೆ ಒಪ್ಪಬೇಕು? | 193 |


## ಭಾಗ 2

## (ಶಂಕರಭಾಸ್ಕರ ಪತ್ರಿಕೆಯಿಂದ)


| | | |
|---|---|---|
| 1. | ಶಂಕರರ ಹಿತೋಪದೇಶ (ಇಂದ್ರಿಯನಿಗ್ರಹ) | 196 |
| 2. | ಆತ್ಮವಿಜ್ಞಾನಕ್ಕೆ ಸಾಧನಗಳು | 198 |
| 3. | ಇಬ್ಬರು ವೇದಾಂತಭಾಸ್ಕರರು | 199 |

| ಕ್ರ. ಸಂ. | ವಿಷಯ | ಪು.ಸಂ. |
|---|---|---|
| 4. | ಬ್ರಹ್ಮವನ್ನು ಅರಿಯುವ ಬಗೆ (ವೇದಾಂತದ ಒಗಟು) | 200 |
| 5. | ಜೀವಾತ್ಮನು ಪರಮಾತ್ಮನೇ | 202 |
| 6. | ಆತ್ಮನು ನಿತ್ಯಚಿನ್ಮಾತ್ರಸ್ವರೂಪನೇ | 207 |
| 7. | ಆತ್ಮಸತ್ಯಾನುಬೋಧ | 209 |
| 8. | ಆತ್ಮಶಬ್ದದ ನಿರ್ವಚನ | 211 |
| 9. | ಅನುಭವ | 214 |
| 10. | ಕಾಣಿಸುವವನಲ್ಲ! | 216 |
| 11. | ಅವಸ್ಥೆಗಳು ಎಷ್ಟು? | 218 |
| 12. | ತತ್ತ್ವದರ್ಶಿಗಳೆಂದರೆ ಯಾರು? | 220 |
| 13. | ಅಧ್ಯಾತ್ಮಯೋಗ ಅಥವಾ ನಿಧಿಧ್ಯಾಸನ | 223 |
| 14. | ಅದ್ವಿತೀಯಾತ್ಮಾನುಭವ | 226 |
| 15. | ಸ್ವಪ್ನದೃಷ್ಟಿಯ ವಿವೇಚನೆ (ಶಾಂಕರವೇದಾಂತಸೌರಭ ಗ್ರಂಥದಿಂದ) | 229 |
| 16. | ಭಗವದ್ಭಕ್ತಸಂತಶ್ರೇಷ್ಠ ಶ್ರೀಶಂಕರರು | 231 |

## ಭಾಗ 3

## ಇತರ ಲೇಖನಗಳು

| | | |
|---|---|---|
| 1. | ಕ್ಷೇತ್ರ ಕ್ಷೇತ್ರಜ್ಞರ ಜ್ಞಾನ | 233 |
| 2. | ಪರಮ ಗುರುಗಳ ಪ್ರಬೋಧ (ಗೌಡಪಾದಾಚಾರ್ಯರು) | 237 |
| 3. | ಸುರೇಶ್ವರ ಸಿಂಹವಾಣಿ | 239 |
| 4. | Empirical and Transcendental View points | 242 |
| 5. | The nature of SELF | 243 |
| 6. | Existance of Time | 245 |
| 7. | ಗ್ರಂಥಕರ್ತರ ಪರಿಚಯ (ಶ್ರೀ ಬಿ.ಟಿ. ದಂಡವತಿ, ಹೊಂಬಳ) | 247 |
| | ಪರಿಶಿಷ್ಟ | 255 |
| | ಮಂಗಳಾರತಿ ಹಾಡು | 258 |

# ಭಾಗ –1

## ಶ್ರೀಶ್ರೀಗಳವರ ಆಂಧ್ರಪ್ರದೇಶದ ಪ್ರವಾಸವಾರ್ತೆ–1

### (ಜನವರಿ 1964)

ಶ್ರೀಶ್ರೀಸಚ್ಚಿದಾನಂದ್ರೇಂದ್ರಸರಸ್ವತೀಸ್ವಾಮಿಗಳ ಆಜ್ಞೆಯ ಮೇರೆಗೆ ಬರೆಯಿಸಿದ್ದ ಪತ್ರವೊಂದು ಕಾರ್ಯಾಲಯದಿಂದ ನನಗೆ ತಾ|| 5–10–1963ರ ಸುಮಾರಿಗೆ ಕೈಸೇರಿತು. ಅದರಲ್ಲಿ ಆಂಧ್ರಪ್ರಾಂತದಲ್ಲಿ ಪ್ರವಾಸವನ್ನು ಕೈಕೊಳ್ಳಬೇಕೆಂದೂ ಆ ಪ್ರಾಂತದಲ್ಲಿರುವ ತೀರ್ಥಕ್ಷೇತ್ರಗಳನ್ನೂ ಪಂಡಿತರುಗಳನ್ನೂ ಹಾಗೂ ಜಿಜ್ಞಾಸುಗಳನ್ನೂ ಕಂಡುಬರಬೇಕೆಂದೂ ಶ್ರೀಶ್ರೀಗಳವರು ಅಪೇಕ್ಷಿಸುತ್ತಾರೆಂದು ತಿಳಿಸಲಾಗಿತ್ತು

ಈ ಹಿಂದೆ ತಾ||9–2–62ರಿಂದ25–3–62ರವರೆಗೆ ನಾನು ಆಂಧ್ರಪ್ರಾಂತದಲ್ಲಿ ಕೆಲವು ಮುಖ್ಯಸ್ಥಳಗಳಲ್ಲಿ ಪ್ರವಾಸ ಮಾಡಿ ಬಂದಿದ್ದೆ. ಆಗ ನನಗೆ ಆಂಧ್ರಭಾಷೆ ಬರುತ್ತಿದ್ದಿಲ್ಲ. ಬೆಂಗಳೂರಿನಲ್ಲಿರುವ ನನ್ನ ಪರಮಸ್ನೇಹಿತರೂ ಒಳ್ಳೆ ಅಧ್ಯಾತ್ಮಸಾಧಕರೂ ಆಗಿರುವ ಶ್ರೀ|| ನಿಖಿಲಾನಂದಗುಪ್ತ ಎಂಬವರು ಕಳೆದ ಇಪ್ಪತ್ತು ವರ್ಷಗಳಿಂದಲೂ ತಮ್ಮ ಧರ್ಮಪತ್ನಿಯವರಾದ ಶ್ರೀಮತಿ ಮಹಿಳಾಮಾತೆಯವರಿಂದ ಒಡಗೂಡಿ ಆಂಧ್ರಪ್ರಾಂತದಲ್ಲೆಲ್ಲಸಂಚರಿಸಿ ಸುಮಾರು ಐವತ್ತು ಊರುಗಳಲ್ಲಿ ಭಗವದ್ಗೀತಾಸಮಾಜ, ಯೋಗನಿಷ್ಠಾಸಮಾಜ, ಧ್ಯಾನನಿಷ್ಠಾಸಮಾಜ–ಮುಂತಾದ ಸಮಾಜಗಳನ್ನು ಅಲ್ಲಲ್ಲಿ ಸ್ಥಾಪಿಸಿ ಜನಗಳಿಗೆಲ್ಲ ಅಧ್ಯಾತ್ಮದ ಅಭಿರುಚಿಯನ್ನು ಹುಟ್ಟಿಸಿ, ಆಂಧ್ರಪ್ರದೇಶಕ್ಕೆ ಚಿರಪರಿಚಿತರಾಗಿರುತ್ತಾರೆ. ಇವರು ನನ್ನನ್ನು ಆಂಧ್ರಪ್ರದೇಶಪ್ರವಾಸಕ್ಕೆ ಕರೆದೊಯ್ದಿದ್ದರು. ನಾನು ಕನ್ನಡದಲ್ಲಿ ''ಶುದ್ಧಶಾಂಕರಪ್ರಕ್ರಿಯೆಯ'' ವಿಚಾರವನ್ನು ಕುರಿತು ಮಾಡುತ್ತಿರುವ ಭಾಷಣವನ್ನು ಬಹಳ ಉತ್ತಮರೀತಿಯಿಂದ ತೆಲುಗಿನಲ್ಲಿ ಭಾಷಾಂತರಿಸುತ್ತಿದ್ದರು. ಆ ಸಮಯದಲ್ಲಿನಾನು ಕಂಡಂತೆ ಆಂಧ್ರಪ್ರದೇಶದಲ್ಲಿರುವ ಅಧ್ಯಾತ್ಮಪ್ರೇಮದ ವಿಚಾರವಾಗಿ ಶ್ರೀಶ್ರೀಗಳವರಿಗೆ ವರದಿಮಾಡಿದ್ದೆ.

ಈ ವರ್ಷ ಶ್ರೀಶ್ರೀಗಳವರೇ ಆಂಧ್ರಪ್ರಾಂತಪ್ರವಾಸಕ್ಕೆ ಹೊರಡುವ ಇಚ್ಛೆಯನ್ನು ವ್ಯಕ್ತಪಡಿಸಿದ್ದು ಒಳ್ಳೆ ಸುಯೋಗವೆಂದೇ ಬಗೆದು ಪ್ರವಾಸದ ಕಾರ್ಯಕ್ರಮವನ್ನು ನಿಶ್ಚಿತಗೊಳಿಸುವದಕ್ಕಾಗಿ ತಾ|| 16ನೇ ಅಕ್ಟೋಬರ್ ದಿನದಂದು ಕಾರ್ಯಾಲಯಕ್ಕೆ ಹೋಗಿ ಶ್ರೀಗಳವರ ದರ್ಶನವನ್ನು ಮಾಡಿಕೊಂಡು ಕಾರ್ಯಕ್ರಮವನ್ನು ನಿಶ್ಚಿತಗೊಳಿಸಿಕೊಂಡು ಬೆಂಗಳೂರಿಗೆ ಬಂದೆ. ಶ್ರೀ|| ಗುಪ್ತರಿಗೂ ಈ ವಿಚಾರವನ್ನು

ತಿಳಿಸಲಾಗಿ, ಅವರೂ ಅವರ ಧರ್ಮಪತ್ನಿಯರಾದ ಶ್ರೀಮತಿ ಮಹಿಳಾಮಾತೆಯವರೂ ತಮಗೆಷ್ಟೇ ಕಾರ್ಯಭಾರವಿದ್ದರೂ ಶ್ರೀಶ್ರೀಗಳವರ ಸೇವೆಸಹವಾಸಗಳು ಲಭಿಸುವವೆಂಬ ಒಂದೇ ದೃಷ್ಟಿಯನ್ನಿಟ್ಟುಕೊಂಡು, ಇಬ್ಬರೂ ನಮ್ಮ ಜೊತೆಗೆ ಹೊರಡಲು ಸ್ವಯಂಸ್ಫೂರ್ತಿಯಿಂದ ಅನುವಾದರು. ಅದರಂತೆಯೇ ಬೆಂಗಳೂರಿನಲ್ಲಿನಾನು ನಿತ್ಯವೂ ಉಪನ್ಯಾಸಮಾಡುತ್ತಿರುವ ವಿಶ್ವೇಶ್ವರಪುರದ ಶ್ರೀ ಕನ್ಯಾಕಾಪರಮೇಶ್ವರೀ ದೇವಸ್ಥಾನದಲ್ಲಿ ಸ್ಥಾಪಿತವಾಗಿರುವ ಪರಮಾರ್ಥವಿಚಾರ ಸಂಘದ ಅಧ್ಯಕ್ಷರಾದ ಶ್ರೀ|| ದೇವತಾ ಶ್ರೀರಾಮಯ್ಯನವರೂ ಮತ್ತು ಸಂಘದ ಸರ್ವಸದಸ್ಯರೂ ತುಂಬು ಹೃದಯದಿಂದ ಈ ಪ್ರವಾಸದ ಕಾರ್ಯಕ್ರಮವನ್ನು ಅನುಮೋದಿಸಿದರು. ಸಂಘದ ಸದಸ್ಯರಲ್ಲೊಬ್ಬರಾದ ಶ್ರೀ|| ಹೇಮಾ ಸಾಂಬಯ್ಯಶ್ರೇಷ್ಠಿಯರವರು ನಾವು ಪ್ರವಾಸಕ್ಕೆ ಹೋದಾಗ ಸಂಘದಲ್ಲಿ ನಡೆಯುವ ಉಪನ್ಯಾಸಕ್ಕೆ ವಿಚ್ಛಿತ್ತಿಯಾಗದಂತೆ ಶ್ರೀಶ್ರೀ ಅಶೇಷಾನಂದಸ್ವಾಮಿಗಳವರನ್ನು ನಾನು ಬರುವವರಿಗೂ ಉಪನ್ಯಾಸಮಾಡಲು ಬಹಳ ಆಸ್ಥೆಯಿಂದ ಏರ್ಪಾಡುಮಾಡಿ ನನಗೆ ಪ್ರವಾಸಕ್ಕೆ ಅನುಕೂಲಮಾಡಿಕೊಟ್ಟರು.

ಬೆಂಗಳೂರಿನ ಈ ಎಲ್ಲ ಸದ್ಭಕ್ತರ ಸಹಾಯದಿಂದ ನನಗೆ ಶ್ರೀಶ್ರೀಗಳವರ ಜೊತೆಗೆ ಪ್ರವಾಸ ಹೊರಡಲು ಅನುಕೂಲವಾಯಿತು. ಇವರೆಲ್ಲರೂ ಈ ಸುಯೋಗವನ್ನು ನನಗೆ ಒದಗಿಸಿಕೊಟ್ಟಿದ್ದಕ್ಕಾಗಿ ಭಗವದನುಗ್ರಹಕ್ಕೆ ಪಾತ್ರರಾಗಿದ್ದಾರೆಂಬುದರಲ್ಲಿ ಸಂಶಯವೇ ಇಲ್ಲ.

ಮೊದಲೇ ಗೊತ್ತುಮಾಡಲ್ಪಟ್ಟಂತೆ ತಾ||31–10–63 ನೇ ದಿನ ಶ್ರೀ|| ದೇವತಾ ಶ್ರೀರಾಮಯ್ಯನವರ ಕಾರಿನಲ್ಲಿನಾನು ಬೆಳಗ್ಗೆ5 ಘಂಟೆಗೆ ಶ್ರೀಶ್ರೀಗಳವರನ್ನು ಕರೆಯುವದಕ್ಕೆ ಹೊಳೆನರಸೀಪುರಕ್ಕೆ ಹೊರಟೆ. ಬೆಳಗ್ಗೆ9 ½ ಘಂಟೆಗೆ ಸರಿಯಾಗಿ ಕಾರ್ಯಾಲಯವನ್ನು ಸೇರಿದ್ದಾಯಿತು. ಶ್ರೀಶ್ರೀಗಳವರೂ ಅವರ ಜೊತೆಗೆ ಅವರ ಸೇವೆಗೋಸ್ಕರ ಶ್ರೀಮತಿ ಮತ್ತೂರು ಲಕ್ಷ್ಮೀದೇವಮ್ಮನವರೂ ಹೊರಡುವದಕ್ಕೆ ಸಿದ್ಧರಾಗಿಯೇ ನಿಂತಿದ್ದರು. ನಾವು ಅಲ್ಲಿಂದ ಬೆಳಗ್ಗೆ ಹನ್ನೊಂದು ಘಂಟೆಯೊಳಗೇ ಹೊರಟು 3–4 ಘಂಟೆಯೊಳಗೇ ಬೆಂಗಳೂರು ಸೇರಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೆವು. ಆದರೆ ದೈವೇಚ್ಛೆ ಹಾಗಿರಲಿಲ್ಲವೆಂದು ತೋರುತ್ತದೆ. ಹೊಳೆನರಸೀಪುರದ ಊರಿನಲ್ಲಿ ಪ್ರವೇಶಮಾಡಿದಾಗ ತಂಟೆಮಾಡಿದ ನಮ್ಮ ಕಾರು ಆಶ್ರಮಕ್ಕೆ ಬಂದು ಮುಷ್ಕರ ಹೂಡಿಬಿಟ್ಟಿತು. ಕಾರ್‌ಡ್ರೈವರಾದ ಶ್ರೀ|| ಪ್ರಸಾದರು ಸ್ವಲ್ಪ ಹೊತ್ತು ನೋಡಿದನಂತರ ಇದನ್ನು ರಿಪೇರಿಷಾಪ್‌ಗೆ ಒಯ್ಯಬೇಕೆಂದು ಅಭಿಪ್ರಾಯಪಟ್ಟರು. ಆ ಪ್ರಕಾರ ಷಾಪ್‌ಗೆ ಹೋದ ಕಾರು ಪೂರ್ಣ ರಿಪೇರಿಯಾಗಿ ತಿರುಗಿ ಬರಬೇಕಾದರೆ ರಾತ್ರಿ 8 ಘಂಟೆಯಾಯಿತು.

ಬೆಂಗಳೂರಿನಲ್ಲಿ ಶ್ರೀಶ್ರೀಗಳವರನ್ನು ಎದುರುನೋಡುತ್ತಿದ್ದ ಜನಗಳಿಗೆ ಟೆಲಿಗ್ರಾಂ ಮೂಲಕ ತಿಳಿಸಲಾಗಿತ್ತು. ಕೊನೆಗೆ ರಾತ್ರಿ 8 ½ ಘಂಟೆಗೆ "ಈಶ್ವರನಿದ್ದಾನೆ. ಎಷ್ಟೇ ವಿಘ್ನಗಳು ಬಂದರೂ ಮುಂದಿಟ್ಟ ಕಾಲು ಹಿಂದೆಗೆಯಕೂಡದು. 'ಶ್ರೇಯಾಂಸಿ ಬಹು ವಿಘ್ನಾಸಿ' ಎಂಬಂತೆ ವಿಘ್ನಗಳು ಬಂದರೂ ಭಗವಂತನ ಮೇಲೆ ಭರವಸೆಯಿಟ್ಟು ಫಲದ ಕಡೆಗೆ ಲಕ್ಷ್ಯಕೊಡದೆ ಸಿದ್ಧಿಗಳಲ್ಲಿ ಸಮಚಿತ್ತತೆಯಿಂದ ವರ್ತಿಸಬೇಕಾದ್ದೇ ಯುಕ್ತ" ಎಂಬ ಶ್ರೀಶ್ರೀಗಳವರ ಆದೇಶದಮೇರೆಗೆ ಭಗವನ್ನಾಮಗರ್ಜನೆ, ಶ್ರೀಶಂಕರಾಚಾರ್ಯರ ಜಯಘೋಷದೊಂದಿಗೆ ಆ ಬೆಳದಿಂಗಳ ರಾತ್ರಿಯಲ್ಲಿ ನಾವು ಮೂವರೂ ಕಾರಿನಲ್ಲಿ ಕುಳಿತು ಕಾರ್ಯಾಲಯದಿಂದ ಹೊರಟೆವು.

ಮಾರ್ಗದಲ್ಲಿ ಶ್ರೀಶ್ರೀಗಳವರು ರಾತ್ರಿ ಹನ್ನೆರಡುಘಂಟೆಯವರೆಗೂ ನನಗೋಸ್ಕರವಾಗಿ ಅದೆಷ್ಟೋ ಸೂಕ್ಷ್ಮವಾದ ವೇದಾಂತವಿಚಾರಗಳನ್ನು ಕುರಿತು ಬೋಧಿಸುತ್ತಬಂದರು. ಹಾಲಿನಂತಹ ಬೆಳದಿಂಗಳು, ರಾತ್ರಿಯ ಪ್ರಶಾಂತ ವಾತಾವರಣ, ಮಧ್ಯದಲ್ಲಿ ಬರುವ ಊರುಗಳಲ್ಲಿಯೂ ನಿಃಶಬ್ದತೆ, ಚಾಣಾಕ್ಷರಾದ ಶ್ರೀಪ್ರಸಾದರ ವೇಗವಾಗಿ ಕಾರು ನಡೆಸುವ ಕೌಶಲ–ಇವುಗಳೆಲ್ಲಕ್ಕೂ ಮಿಗಿಲಾಗಿ ಶ್ರೀಶ್ರೀಗಳವರ ಉತ್ಸಾಹಪೂರ್ಣವಾದ ಅದ್ಭುತೋಪದೇಶ–ಇವುಗಳ ನಡುವೆ ನಮಗೆ ಹೊತ್ತು ಆದದ್ದು ತಿಳಿಯಲಿಲ್ಲ. ಬೆಂಗಳೂರು ಬಂದದ್ದೂ ಅರಿವಾಗಲಿಲ್ಲ. ರಾತ್ರಿ ಹನ್ನೆರಡೂವರೆ ಘಂಟೆಗೆ ನಮ್ಮ ಕಾರು ಯಶವಂತಪುರವನ್ನು ಪ್ರವೇಶಿಸಿದಾಗಲೇ ಯಾವದೋ ಒಂದು ಸುಖಸ್ವಪ್ನದಿಂದ ಎಚ್ಚತ್ತಂತೆ ಭಾಸವಾಯಿತು. ರಾತ್ರಿ ಒಂದು ಘಂಟೆಗೆ ವಿಶ್ವೇಶ್ವರಪುರದ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀಶ್ರೀಗಳವರಿಗೆ ಏರ್ಪಡಿಸಿದ್ದ ನಿವಾಸದಲ್ಲಿ ಶ್ರೀಗಳವರು ಸೇರಿದ ಬಳಿಕ ನಾನು ಮನೆಗೆ ಬಂದೆನು.

ಮರುದಿನ ತಾ|| 1–11–63ನೆಯ ಬೆಳಗ್ಗೆ ಎಂಟು ಘಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ|| ದೇವತಾ ಶ್ರೀರಾಮಯ್ಯನವರೂ ಹಾಗೂ ಸದಸ್ಯರಾದ ಶ್ರೀ|| ಮಂಟಾ ವೆಂಕಟರಂಗಯ್ಯಶ್ರೇಷ್ಠಿಯವರೂ ಶ್ರೀಕನ್ಯಾಕಾಪರಮೇಶ್ವರೀ ದೇವಸ್ಥಾನದಲ್ಲಿಯೇ ಶ್ರೀಶ್ರೀಗಳವರ ಪಾದಪೂಜೆಯನ್ನು ಸಂಘದ ಸರ್ವಸದಸ್ಯರ ಸಮ್ಮುಖದಲ್ಲಿ ಆನಂದದಿಂದ ಆಚರಿಸಿದರು. ಆ ದಿನ ಶ್ರೀಗಳವರು 'ವೇದಾಂತದ ವಿಜಯ' ವೆಂಬ ವಿಷಯವನ್ನು ಕುರಿತು ಸಾಧನಗಳ ಮರ್ಮವನ್ನು ಉಪದೇಶಿಸಿದರು. ಇದೇ ಸಮಯದಲ್ಲಿ ಪರಮಾರ್ಥವಿಚಾರಸಂಘದ ವತಿಯಿಂದ ಆಂಧ್ರಪ್ರದೇಶದ ಆಧ್ಯಾತ್ಮಪ್ರೇಮಿಗಳಿಗೋಸ್ಕರ ಪ್ರಸಿದ್ಧಪಡಿಸಿದ ಪತ್ರಿಕೆಯೊಂದನ್ನು ಸಭೆಯಲ್ಲಿ ಓದಿ ಹೇಳಲಾಯಿತು. ಈ ಪತ್ರಿಕೆಯಲ್ಲಿ ಶ್ರೀಶ್ರೀಗಳವರು ಮಾಡಿರತಕ್ಕ ಮಹತ್ಕಾರ್ಯಗಳನ್ನು ಹೇಳಿರುವದಲ್ಲದೆ ಕಾರ್ಯಾಲಯದ ವಿಷಯವಾಗಿಯೂ ಜನತೆಗೆ ತಿಳಿವಳಿಕೆಯಾಗುವಂತೆ ಬರೆದು

ಶ್ರೀಶ್ರೀಗಳವರ ಪ್ರವಾಸದ ಲಾಭವನ್ನು ಆಂಧ್ರಪ್ರದೇಶದ ಜನರು ಪಡೆದು ಕೊಳ್ಳಬೇಕೆಂದು ಬಿನ್ನವಿಸಲಾಗಿತ್ತು. ಇದಲ್ಲದೆ ಶ್ರೀಶ್ರೀಗಳವರನ್ನು ಅಭಿನಂದಿಸಿ ಬರೆದ ಸನ್ಮಾನಪತ್ರವೊಂದನ್ನು ಸಹ ಓದಿ, ಶ್ರೀಶ್ರೀಗಳವರಿಗೆ ಅರ್ಪಿಸಲಾಯಿತು. ಪ್ರವಾಸವು ಸುಖಕರವಾಗಿ ನೆರವೇರಲೆಂದು ಸರ್ವಸದಸ್ಯರೂ ಹಾರೈಸಿ ಎಲ್ಲ ವಿಧದಿಂದಲೂ ಸಹಾಯವನ್ನು ಮಾಡಿದರು.

ಮಧ್ಯಾಹ್ನ 12 ½ ಯಿಂದ 1 ½ ಘಂಟೆಯವರೆಗೆ ಇದೇ ದೇವಸ್ಥಾನದಲ್ಲಿ "**ಶ್ರೀ ವಾಸವಿ ಗೀತಾ ಮಹಿಳಾಮಂಡಳಿ**"ಯ ಸದಸ್ಯರೆಲ್ಲರೂ ಸೇರಿ ಶ್ರೀಶ್ರೀಗಳವರನ್ನು ಬರಮಾಡಿಕೊಂಡರು. ಅವರೆಲ್ಲರೂ ಒಂದು ಅಧ್ಯಾಯ ಗೀತಾಪಾರಾಯಣವನ್ನೂ ಮಾಡಿ ಸುಖಪ್ರವಾಸವನ್ನು ಕೋರಿದರು. ಶ್ರೀಶ್ರೀಗಳವರು ಭಗವದ್ಗೀತೆಯ 12ನೆಯ ಅಧ್ಯಾಯದಲ್ಲಿ ವಿಶ್ವರೂಪೋಪಾಸನೆಯ ತತ್ತ್ವವನ್ನೂ, ಅದು ಆಗದಿದ್ದವರಿಗೆ ಸರ್ವಕರ್ಮಫಲತ್ಯಾಗದವರೆಗಿನ ಸಾಧನಗಳು ಹೇಗೆ ಫಲಕಾರಿಯಾಗುವದೆಂಬುದನ್ನೂ ವಿಸ್ತಾರವಾಗಿ ಸ್ಪಷ್ಟಪಡಿಸಿ ಹೇಳಿದರು. ಸಂಸ್ಥಾಪಕರಾದ ಶ್ರೀ॥ ನಿಖಿಲಾನಂದಗುಪ್ತರು ಮಹಿಳಾಸದಸ್ಯರಿಗೆಲ್ಲ ಬೋಧೆಯಾಗುವಂತೆ ಶ್ರೀಶ್ರೀಗಳವರ ವ್ಯಾಖ್ಯಾನವನ್ನು ತೆಲುಗಿನಲ್ಲಿ ಅನುವಾದಮಾಡಿದರು. ಮೊದಲಬಾರಿಗೆ ನಡೆದ ಈ ಅತ್ಯುತ್ತಮವಾದ ಶ್ರೀ॥ ಗುಪ್ತರ ಅನುವಾದಶೈಲಿಯನ್ನು ಕಂಡು ಶ್ರೀ ಶ್ರೀಗಳವರು ತುಂಬ ಹಿಗ್ಗಿದರು.

ಸಂಘದ ಬೆಂಗಳೂರಿನ ಬೇರೆಬೇರೆಯ ಭಾಗಗಳಲ್ಲಿರುವ ಭಕ್ತಜನರೆಲ್ಲ ಬಂದು ಸಾಯಂಕಾಲ ಶ್ರೀಶ್ರೀಗಳವರನ್ನು 4 ಘಂಟೆಯಿಂದ 9 ರವರೆಗೂ ಸಂದರ್ಶಿಸಿದರು. ಈ ಸಂದರ್ಶಕರಲ್ಲೊಬ್ಬರಾದ ಶ್ರೀ॥ ನಾಯಡುರವರು ಶ್ರೀ ಶ್ರೀಗಳವರು ಬೆಜವಾಡಕ್ಕೆ ದಯ ಮಾಡಿಸಿದರೆ ಹತ್ತಿರವೇ ಇರುವ ಗುಂಟೂರಿಗೆ ಹೋಗಿ ಅಲ್ಲಿರುವ ಶ್ರೀರಾಮನಾಮಕ್ಷೇತ್ರಕ್ಕೆ ಸಂದರ್ಶನವೀಯಬೇಕೆಂದೂ ಅಲ್ಲಿಯ ಕಾರ್ಯಕರ್ತರಿಗೆ ನಾನೇ ಬರೆದು ಶ್ರೀಗಳವರನ್ನು ಕರೆದುಕೊಂಡುಹೋಗುವದಕ್ಕೆ ತಿಳಿಸುವೆನೆಂದೂ ಹೇಳಿ ನಮ್ಮ ಕಾರ್ಯಕ್ರಮದ ಪಟ್ಟಿಯಲ್ಲಿ ಗುಂಟೂರನ್ನೂ ಸೇರಿಸಿಕೊಳ್ಳುವಂತೆ ಮಾಡಿದರು.

ಶ್ರೀ॥ ನಿಖಿಲಾನಂದಗುಪ್ತರು ಹಾಗೂ ಶ್ರೀಮತಿ ಮಹಿಳಾಮಾತೆಯವರೂ ಮೊದಲೇ ನಿಶ್ಚಯಿಸಿಕೊಂಡಂತೆ ಆ ದಿನವೇ ರಾತ್ರಿ (ತಾ॥ 1–11–63) ಮದ್ರಾಸ್ ಮೇಲಿನಿಂದ ಹೊರಟರು. ಹೀಗೆ ಪೂರ್ವಭಾವಿಯಾಗಿ ಹೋಗುವದರ ಉದ್ದೇಶವೆಂದರೆ ಮದ್ರಾಸ್‌ನಲ್ಲಿ ಎಲ್ಲ ವಿಧದ ವ್ಯವಸ್ಥೆಮಾಡುವದಕ್ಕಾಗಿಯೇ ಆಗಿತ್ತು. ಇದರಂತೆ ಆಂಧ್ರಪ್ರದೇಶದ ತಮ್ಮ ಪರಿಚಯದ ಎಲ್ಲ ಸ್ಥಳಗಳಿಗೂ ಮೊದಲೇ ಪತ್ರಗಳನ್ನೂ ಬೆಂಗಳೂರಿನ ಸಂಘದವರು ಪ್ರಕಟಿಸಿದ ಪತ್ರಿಕೆಯನ್ನೂ ಸಹ ಕಳುಹಿಸಿ ವ್ಯವಸ್ಥೆ ಮಾಡಲು ತಿಳಿಸಿದ್ದರು.

ತಾ|| 2–11–63ನೇ ಶನಿವಾರ ಬೆಳಗ್ಗೆ 8 ಘಂಟೆಗೆ ಸಂಘದಲ್ಲಿ ಶ್ರೀಶ್ರೀಗಳವರ ಉಪನ್ಯಾಸವು 'ಸ್ಥಿತಪ್ರಜ್ಞಲಕ್ಷಣ'ಗಳನ್ನು ಕುರಿತು ಜರುಗಿತು. ಹನ್ನೊಂದು ಘಂಟೆಗೆ ಮದ್ರಾಸ್ ಎಕ್ಸ್‌ಪ್ರೆಸ್‌ನಿಂದ ನಾವು ಪ್ರಯಾಣವನ್ನು ಬೆಳೆಸಿದೆವು. ಅಧ್ಯಕ್ಷರಾದ ಶ್ರೀ|| ದೇವತಾ ಶ್ರೀರಾಮಯ್ಯನವರು ಮೊದಲೇ ಮೂರು ಸೆಕೆಂಡ್ ಕ್ಲಾಸ್ ಟಿಕೀಟುಗಳನ್ನು ಮದ್ರಾಸ್‌ವರೆಗೂ ತೆಗೆಯಿಸಿ ರಿಝರ್ವ್‌ಮಾಡಿಸಿಟ್ಟಿದ್ದರು. ಸಂಘದ ಮುಖ್ಯಸದಸ್ಯರೆಲ್ಲ ನಮ್ಮನ್ನು ಬೀಳ್ಕೊಡಲು ಬೆಂಗಳೂರು ಸಿಟಿಯ ರೈಲ್ವೆಸ್ಟೇಷನ್ನಿಗೆ ಬಂದಿದ್ದರು.

ರೈಲ್ವೆಯಲ್ಲಿ ಕುಳಿತಾಗ ನಮ್ಮ ಎದುರಿನ ಸ್ಥಲದಲ್ಲಿ ಕುಳಿತಿದ್ದ 'ನಾಟಕರತ್ನ' ಶ್ರೀ|| ಗುಬ್ಬಿ ವೀರಣ್ಣಗೌಡರನ್ನು ನಾನು ಗುರುತಿಸಿ ಮಾತನಾಡಿಸಿದೆನು. ಅವರು ಮದ್ರಾಸ್‌ನವರೆಗೂ ಸಹಪ್ರಯಾಣಿಕರಾಗಿದ್ದರು. ಶ್ರೀ|| ವೀರಣ್ಣನವರು ಶ್ರೀಶ್ರೀಗಳವರಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸಿದಾಗ ಶ್ರೀಶ್ರೀಗಳವರಿಗೆ ನಾನು ಅವರ ಪರಿಚಯವನ್ನು ಮಾಡಿಕೊಟ್ಟೆ. ಆಗ ಮೂವತ್ತು ವರುಷಗಳ ಕೆಳಗೆ ಶ್ರೀ ವೀರಣ್ಣನವರ ಕಂಪೆನಿಯವರು ಹೊಳೆನರಸೀಪುರದಲ್ಲಿ 'ಭಕ್ತ ಕಬೀರದಾಸ' ಮೊದಲಾದ ಉತ್ತಮ ನಾಟಕಗಳನ್ನು ಅಭಿನಯಿಸಿದ್ದನ್ನೂ ಕಂಪನಿಯಲ್ಲಿಯ ಕೆಲವರು ವೇದಾಂತಪ್ರೇಮಿಗಳಿದ್ದು ಶ್ರೀಶ್ರೀಗಳವರಲ್ಲಿ ಶ್ರವಣವನ್ನೂ, ಚರ್ಚೆಯನ್ನೂ ನಡೆಸುತ್ತಿದ್ದುದನ್ನೂ ಸ್ಮರಿಸಿಕೊಂಡು ಶ್ರೀಶ್ರೀಗಳವರು ನಮ್ಮೆಲ್ಲರನ್ನೂ ಸವಿನೆನಪಿನ ಸಂತೋಷದ ಅಲೆಗಳಲ್ಲಿ ಮುಳುಗಿಸಿದರು. ಸಿನಿಮಾಗಳಿಗಿಂತಲೂ ನಾಟಕಗಳು ಹೆಚ್ಚು ಸಜೀವವಾಗಿರುವವೆಂದೂ ಜನಗಳಿಗೆ ಧರ್ಮ, ನ್ಯಾಯ, ನೀತಿ–ಇವುಗಳ ತತ್ತ್ವಗಳನ್ನು ಬೋಧಿಸುವ ಉತ್ತಮಸಾಧನಗಳೆಂದೂ ಹೇಳಿದರು. ನಾಟ್ಯಕಲೆಯ ವಿಚಾರವಾಗಿ ಮಾತನಾಡುತ್ತ ಅಧ್ಯಾತ್ಮವಿದ್ಯೆಗೆ ನಾಟಕಕಲೆಯು ಯಾವರೀತಿಯಿಂದ ಸಹಾಯವನ್ನು ಸಲ್ಲಿಸಬಲ್ಲದೆಂಬುದನ್ನು ವಿವರಿಸಿದ್ದಲ್ಲದೆ ಇಂಥ ಕಾಲದಲ್ಲಿಯೂ ಕಳೆದ ಅರ್ಧಶತಮಾನಕ್ಕಿಂತಲೂ ಹೆಚ್ಚು ವರ್ಷಗಳಿಂದ ಸರ್ವವಿಧದ ಕಷ್ಟಗಳನ್ನೂ ಎದುರಿಸಿ ಇಂದಿಗೂ ನಾಟಕಕಲೆಯನ್ನು ಎತ್ತಿಹಿಡಿದು ಪ್ರೋತ್ಸಾಹಿಸುತ್ತಿರುವ ಶ್ರೀ|| ವೀರಣ್ಣನವರನ್ನು ಶ್ಲಾಘಿಸಿ, ಜನತೆಗೆ ಇವರ ಸೇವೆ ಇನ್ನೂ ಹೆಚ್ಚಾಗಿ ದೊರೆಯಲೆಂದು ನಾರಾಯಣಸ್ಮರಣಪೂರ್ವಕವಾಗಿ ಆಶೀರ್ವದಿಸಿದರು.

ಈ ರೀತಿಯ ಆನಂದಪೂರಿತವಾದ ಮಾತುಕತೆಗಳ ಮಧ್ಯದಲ್ಲಿ ನಾವು ಪ್ರವಾಸದಲ್ಲಿರುವೆವೆಂಬುದೂ ಮರೆತೇಹೋಗಿತ್ತು. ಕೊನೆಗೆ ಸಂಜೆ 4 ಘಂಟೆಗೆ ಮದ್ರಾಸ್ ಸೆಂಟ್ರಲ್‌ಸ್ಟೇಶನ್ ತಲುಪಿದೆವು. ಪ್ಲಾಟ್‌ಫಾರ್ಮಿನ ಮೇಲೆ ಶ್ರೀ ಗುಪ್ತರೂ ಮಾತೆಯವರೂ ತಮ್ಮ ಶಿಷ್ಯಪರಿವಾರದೊಂದಿಗೆ ನಮ್ಮನ್ನು ಎದುರುನೋಡುತ್ತ ನಿಂತಿದ್ದರಲ್ಲದೆ, ಶ್ರೀಶ್ರೀಗಳವರ ಪೂರ್ವಾಶ್ರಮದಲ್ಲಿ ಅವರ ಅಧ್ಯಾತ್ಮದ ಜೀವನದಲ್ಲಿ ಅತಿ ಮಹತ್ತ್ವದ ಪ್ರಭಾವವನ್ನು ಬೀರಿದ ವ್ಯಕ್ತಿಗಳಾಗಿದ್ದ ದಿವಂಗತ ಕೆ.ಎ. ಕೃಷ್ಣಸ್ವಾಮಿ ಅಯ್ಯರವರ

ಮೊಮ್ಮಕ್ಕಳಾದ ಶ್ರೀ|| ಕೋದಂಡನ್‌ರವರು ಬಂದಿದ್ದರು. ಆ ದಿನ ರಾತ್ರಿ ಒಂಭತ್ತು ಘಂಟೆಗೆ ಸರಿಯಾಗಿ ಮೈಲಾಪುರದ ಶ್ರೀ|| ಎಸ್. ವಿ. ಗಣಪತಿ (ಕೆ.ಎ. ಕೃಷ್ಣಸ್ವಾಮಿ ಅಯ್ಯರವರ ಅಳಿಯಂದಿರು) ಯವರ ಮನೆಗೆ ಹೋದೆವು.

ತಾ|| 3–11–63ನೆಯ ದಿನ ಶ್ರೀ|| ಗುಪ್ತರವರ ಶಿಷ್ಯಮಂಡಳಿಯವರು ಏರ್ಪಡಿಸಿದಂತೆ ಬೆಳಗ್ಗೆ 7 ರಿಂದ 8ರವರೆಗೆ ರಾಧಾಕೃಷ್ಣಮಂದಿರದಲ್ಲಿ **ಶ್ರೀ ವೆಂಕಟೇಶ ಸುಪ್ರಭಾತ ಸಂಘದವರಿಗಾಗಿ** 'ನಾಮಕೀರ್ತನೆ'ಯ ವಿಷಯವಾಗಿ ಶ್ರೀಶ್ರೀಗಳವರ ಉಪನ್ಯಾಸವಾಯಿತು. ಶ್ರೀಗಳವರು ಸಾಯಂಕಾಲ 5 ರಿಂದ 6 ½ ವರೆಗೆ ಮುತ್ತಪ್ಪಯ್ಯರ ಬೀದಿಯಲ್ಲಿರುವ ಒಂದು ಮನೆಯಲ್ಲಿ 'ಭಗವದ್ಗೀತಾಸಾರ' ಎಂಬ ವಿಚಾರವನ್ನು ಕುರಿತು ಉಪದೇಶಿಸಿದರು. ಸಾಯಂಕಾಲ 7 ರಿಂದ 8 ಘಂಟೆಯವರೆಗೆ ನಾವೆಲ್ಲರೂ ಸೇರಿ ಮೈಲಾಪುರದಲ್ಲಿರುವ ಶ್ರೀ ರಾಮಕೃಷ್ಣಾಶ್ರಮವನ್ನು ನೋಡಿಕೊಂಡು ಬಂದೆವು.

ಶ್ರೀ|| ಗಣಪತಿಯವರ ಮನೆಯಲ್ಲಿ ಶ್ರೀಶ್ರೀಗಳವರಿಗೆ ತಂಗಲು ಯೋಗ್ಯವಾದ ವ್ಯವಸ್ಥೆಯನ್ನು ಮಾಡಲಾಗಿತ್ತು. ಶ್ರೀ|| ಗುಪ್ತರು ತಮ್ಮ ಶಿಷ್ಯವೃಂದದಲ್ಲಿಯೇ ಇಳಿದುಕೊಂಡಿದ್ದರು. ತಾ|| 3ನೆಯ ದಿನ ಭಾನುವಾರ ಇದ್ದುದರಿಂದ ಶ್ರೀಶ್ರೀಗಳವರ ದರ್ಶನಕ್ಕಾಗಿ ಅವರ ಅನೇಕ ಹಿಂದಿನ ಪರಿಚಯಸ್ಥರು ಬಂದುಹೋದರು.

ತಾ||4–11–63ನೆಯ ಸೋಮವಾರ ಬೆಳಗ್ಗೆ ಮದ್ರಾಸ್ ಹೌರಾ ಎಕ್ಸ್‌ಪ್ರೆಸ್ಸಿನಿಂದ (8–30 A.M) ನಾವು ಬೆಜವಾಡಕ್ಕೆ ಹೊರಟೆವು. ಶ್ರೀ|| ಗುಪ್ತರವರ ಮದ್ರಾಸಿನ ಶಿಷ್ಯಮಂಡಳಿಯವರೆಲ್ಲರೂ ಶ್ರೀ|| ಗಣಪತಿಯವರ ಕಡೆಯವರೂ ಸಹ ಬೀಳ್ಕೊಡುವದಕ್ಕೆ ಬಂದಿದ್ದರು. ಎಲ್ಲರೂ ಮುಂದಕ್ಕೆ ಶುಭಪ್ರಯಾಣವನ್ನು ಕೋರಿದರು. ಅಂತೂ ಮದ್ರಾಸಿನ ಕಾರ್ಯಕ್ರಮವು ತುಂಬ ಆನಂದವಾಗಿಯೇ ನೆರವೇರಿತು.

ಆ ದಿನ ಸಾಯಂಕಾಲ 6–30 ಘಂಟೆಗೆ ರೈಲು ಬೆಜವಾಡ ಸ್ಟೇಶನ್ ಮುಟ್ಟಿದಾಗ ನಾವು ಈ ಮೊದಲೇ ಪತ್ರ ವ್ಯವಹಾರ ನಡೆಸಿದ್ದದ್ದರಿಂದ ತರ್ಕ ವೇದಾಂತವಿಶಾರದ, ವಿದ್ವಾನ್, ಬ್ರಹ್ಮಶ್ರೀ ಮುದಿಗೊಂಡ ವೆಂಕಟರಾಮಶಾಸ್ತ್ರಿಗಳವರೂ ಕೆಲ ವೈದಿಕಮಂಡಳಿಯೊಡಗೂಡಿ ಬಂದಿದ್ದರಲ್ಲದೆ ಡಾಕ್ಟರ್ ಕೃಷ್ಣಮೂರ್ತಿಯವರೂ ಸಹ ಕೆಲವರು ಸುಪ್ರತಿಷ್ಠಿತ ಸದ್ಗೃಹಸ್ಥರೊಂದಿಗೆ ಪ್ಲಾಟ್‌ಫಾರ್ಮಿನ ಮೇಲೆ (ಶ್ರೀ ಶ್ರೀಗಳವರನ್ನು ಸ್ವಾಗತಿಸಲು ಸಿದ್ಧರಾಗಿ ನಿಂತಿದ್ದರು. ಮೊದಲೇ ಗೊತ್ತುಪಡಿಸಿದ್ದಂತೆ ಕನಕದುರ್ಗಾಪ್ರದೇಶದಲ್ಲಿರುವ ಶ್ರೀಶಂಕರಮಠದಲ್ಲಿ ನಮಗೆ ವಸತಿಯನ್ನು ಏರ್ಪಾಡು

ಮಾಡಿದ್ದರು. ಶ್ರೀ॥ ಗುಪ್ತದಂಪತಿಗಳವರಿಗೆಕೂಡ ಅಲ್ಲಿಯೇ ಇಳಿದುಕೊಳ್ಳಲು ಪ್ರತ್ಯೇಕ ವ್ಯವಸ್ಥೆಮಾಡಲಾಗಿತ್ತು.

ಕೃಷ್ಣಾ ನದಿಯ ದಡದಲ್ಲಿರುವ ಬೆಜವಾಡದಲ್ಲಿ ನಾವು ಇಳಿದುಕೊಂಡಿದ್ದ ಈ ಪ್ರದೇಶವು ಅತ್ಯಂತ ಮನೋಹರವಾಗಿದ್ದಿತು. ಶ್ರೀಶಂಕರಮಠದಲ್ಲಿ ನಡೆಯುತ್ತಿರುವ ವೇದಪಾಠಶಾಲೆಯ ಅಧ್ಯಾಪಕರೂ ವಿದ್ಯಾರ್ಥಿಗಳೂ ನೆಲೆಸಿರುವರಲ್ಲದೆ ಆರುಜನ ಸಂನ್ಯಾಸಿಗಳಿಗೆ ಸ್ಥಿರವಸತಿಗೆ ಅವಕಾಶವನ್ನು ಒದಗಿಸಿಕೊಟ್ಟಿದ್ದು ನಿತ್ಯವೂ ಅವರಿಗೆ ಭಿಕ್ಷೆಗೆ ವ್ಯವಸ್ಥೆ ಮಾಡಲಾಗಿದೆ. ಮಧ್ಯದ ದೊಡ್ಡ ಹಾಲಿನಲ್ಲಿ ಶ್ರೀ ಗಾಯತ್ರಿ, ಶ್ರೀ ದತ್ತಾತ್ರೇಯ, ಶ್ರೀ ಶಂಕರಾಚಾರ್ಯರು, ಶ್ರೀಪಾಂಡುರಂಗ, ತರುವಾಯ ದೇವರುಗಳ ಮಂದಿರಗಳೂ ಇವೆ. ಮುಂಭಾಗದಲ್ಲಿ ಪಾಠಶಾಲೆ ನಡೆಯುತ್ತಿದೆ. ಮಠದ ಪಕ್ಕದಲ್ಲಿಯೇ ಬೆಟ್ಟದಲ್ಲಿ ಶ್ರೀ ಕನಕದುರ್ಗೆಯ ಮಂದಿರವಿದೆ. ಅನತಿದೂರದಲ್ಲಿ ಕೃಷ್ಣಾನದಿಯು ಪ್ರವಹಿಸುತ್ತಿದ್ದು ಸ್ನಾನಮಾಡಲು ಯೋಗ್ಯವಾದ ಮೆಟ್ಟಿಲುಗಳುಳ್ಳ ಘಟ್ಟಗಳಿವೆ. ಕೃಷ್ಣಾನದಿಗೆ ಕಟ್ಟಿದ ಭವ್ಯವಾದ ಅಣೆಕಟ್ಟು ಹಾಗೂ ಸೇತುವೆಗಳ ಹತ್ತಿರವೇ ಈ ಸ್ನಾನಘಟ್ಟವಿರುವದರಿಂದ ಹಗಲೂ ರಾತ್ರಿಯೂ ನೋಡಲು ತುಂಬಾ ಮನೋಹರವಾಗಿರುತ್ತದೆ. ಕೆಲಮೈಲಿಗಳ ಅಂತರದಲ್ಲಿಯೇ ಸಮುದ್ರವನ್ನು, ಸೇರಲಿರುವ ಕೃಷ್ಣೆಯ ಪಾತ್ರವು ಬಹು ವಿಶಾಲವೂ ರಮ್ಯವೂ ಆಗಿದೆ. ಇದೇ ಸ್ಥಳದ ಮುಂದುಗಡೆ ಮೀಟರ್ ಗೇಜ್ ಹಾಗೂ ಬ್ರಾಡ್ ಗೇಜ್–ಎರಡಕ್ಕೂ ಸೇರಿ ಒಂದೇ ಆಗಿರುವ ಭವ್ಯವಾದ ರೈಲು ಸೇತುವೆಯೂ ಈ ನೋಟಕ್ಕೆ ವಿಶೇಷ ಕಳೆಯನ್ನು ತಂದುಕೊಡುತ್ತದೆ. ಜೋಡುಸೇತುವೆಯನ್ನು ಮಾಡುವದಕ್ಕಾಗಿ ಹೊಸದಾಗಿ ನಿರ್ಮಿಸಲ್ಪಟ್ಟ ಸ್ತಂಭಗಳು ಕೂಡ ನದಿಯ ಮಧ್ಯದಲ್ಲಿ ನಿಂತುಕೊಂಡಿದೆ. ಮಹಾನದಿಯು ಮಧ್ಯದಲ್ಲಿ ಪ್ರವಹಿಸುವ ಈ ಊರಿನ ಸೌಂದರ್ಯವು ಅವರ್ಣನೀಯವಾಗಿದೆ. ಇದಕ್ಕೆ ತಕ್ಕಂತೆ ಈ ದೊಡ್ಡ ಪಟ್ಟಣದಲ್ಲಿ ಬಹಳ ವಿದ್ವಾಂಸರುಗಳೂ ಸುಶಿಕ್ಷಿತರೂ ಇರುತ್ತಾರಲ್ಲದೆ ಉದಾರದಾತೃಗಳ ಆಶ್ರಯದಿಂದ ತ್ರಿಲಿಂಗವಿದ್ಯಾಪೀಠ, ಅಮೃತೇಶಲಿಂಗ ವಿದ್ಯಾಪೀಠ–ಮುಂತಾದ ವಿದ್ಯಾಕೇಂದ್ರಗಳಲ್ಲಿ ನಿತ್ಯವೂ ಪಾಠಪ್ರವಚನಗಳು ನಡೆಯುತ್ತಿದ್ದು ಪ್ರಾಚೀನ ವಿದ್ಯೆಗಳಾದ ವೇದ, ವೇದಾಂತ, ವ್ಯಾಕರಣ, ತರ್ಕ–ಮುಂತಾದವುಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಲಾಗಿದೆ. ಆಧುನಿಕ ವಿದ್ಯೆಯೇ ಬಹಳವಾಗಿ ಬೆಳೆಯುತ್ತಿರುವ ಈಗಿನ ಕಾಲದಲ್ಲಿ ಪ್ರಾಚೀನ ವಿದ್ಯಾಭ್ಯಾಸಕ್ಕೆ ಮಹತ್ತ್ವವಿತ್ತಿರುವ ಪಂಡಿತರುಗಳ ನೆಲೆವೀಡಾದ, ವಿದ್ಯಾಭಿಮಾನಿಗಳೂ ದಾತೃಗಳೂ ಆಗಿರುವ ಸದ್ಗೃಹಸ್ಥರಿಗೆ ತೌರೂರಾದ, ಈ ಪಟ್ಟಣವು ಆಂಧ್ರಪ್ರದೇಶದಲ್ಲಿ ಆದರ್ಶಪ್ರಾಯವಾದ ನಗರವಾಗಿದೆ ಎಂದು ಹೇಳಬಹುದು.

# ಶ್ರೀಶ್ರೀಗಳವರ ಆಂಧ್ರಪ್ರದೇಶದ ಪ್ರವಾಸವಾರ್ತೆ–2

## (ಫೆಬ್ರವರಿ 1964)

ನಾವು ವಿಜಯವಾಡದಲ್ಲಿ ರೈಲಿನಿಂದ ಮಠಕ್ಕೆ ಬರುತ್ತಿರವಾಗಲೇ ಮಾರ್ಗದಲ್ಲಿ ಕಾರಿನಲ್ಲಿಯೇ ಬ್ರ॥ಶ್ರೀ॥ ಮುದಿಗೊಂಡ ವೆಂಕಟರಾಮಶಾಸ್ತ್ರಿಗಳವರು ಸಂಸ್ಕೃತದಲ್ಲಿ ಮಾತನಾಡುತ್ತ ಈ ಪಟ್ಟಣದಲ್ಲಿರುವ ವಿದ್ವಾಂಸರುಗಳು ವಿದ್ಯಾಪೀಠಗಳು–ಮುಂತಾದವುಗಳ ಬಗ್ಗೆ ತಿಳಿಸುತ್ತ 'ನಾಳೆ ಬೆಳಿಗ್ಗೆ 8 ಘಂಟೆಗೆ ಶಂಕರಮಠದಲ್ಲಿ ವಿದ್ವದ್ಗೋಷ್ಠಿಯನ್ನಿಟ್ಟಿದೆ' ಎಂದರು. ಅದರಲ್ಲಿ ಮಾಂಡೂಕ್ಯೋಪನಿಷತ್ತಿನಲ್ಲಿ ಕೆಲವು ವಿಚಾರಗಳ ಬಗ್ಗೆ ಶ್ರೀಶ್ರೀಗಳವರಿಂದ ಕೇಳಿ ತಿಳಿದುಕೊಳ್ಳಲು ಅಲ್ಲಿಯ ಎಲ್ಲ ವಿದ್ವಾಂಸರೂ ತವಕ ಪಡುತ್ತಿರುವದಾಗಿಯೂ ತಿಳಿಸಿದ್ದರು. ನಾವು ಮಠಕ್ಕೆ ಬಂದ ಮೇಲೆ ಶ್ರೀ॥ಶಾಸ್ತ್ರಿಗಳು ತಾವು ರಚಿಸಿರುವ ಹಾಗೂ ಪ್ರಕಟಿಸಿರುವ ಕೆಲವು ಪುಸ್ತಕಗಳನ್ನು ಶ್ರೀಶ್ರೀಗಳವರಿಗೆ ಕಾಣಿಕೆಯಾಗಿ ಸಮರ್ಪಿಸಿದರು.

ತಾ॥ 5–11–63ರ ಬೆಳಗ್ಗೆ 8 ಘಂಟೆಗೆ ಶ್ರೀ ಶಂಕರಮಠದಲ್ಲಿ ವಿದ್ವಾಂಸರೂ ಇತರ ಜನರೂ ಸೇರಿದರು. ನಾನು ಶ್ರೀಶ್ರೀಗಳವರಿಂದ ರಚಿತವಾದ ''ಮಾಂಡೂಕ್ಯ ರಹಸ್ಯ ವಿವೃತಿ'', ''ವೇದಾಂತವಿದ್ವದ್ಗೋಷ್ಠಿ'', ''ಮೂಲಾವಿದ್ಯಾನಿರಾಸ'', ''ವಿಜ್ಞಪ್ತಿ''–ಮುಂತಾದ ಸಂಸ್ಕೃತಗ್ರಂಥಗಳನ್ನೆಲ್ಲವನ್ನೂ ಪ್ರದರ್ಶನಕ್ಕಿಟ್ಟು ಕಾರ್ಯಾಲಯ ಹಾಗೂ ಶ್ರೀಶ್ರೀಗಳವರ ಬಗ್ಗೆ ಕೆಲವಿಚಾರಗಳನ್ನು ತಿಳಿಸಿ ಆಂಧ್ರಭಾಷೆಯಲ್ಲಿಯೇ ಮಾತನಾಡಿದೆ. ಎಲ್ಲ ಪುಸ್ತಕಗಳನ್ನೂ ನೋಡಿ ''ಇವುಗಳನ್ನು ನಮಗೆ ಈ ದಿನ ನೋಡಲು ಕೊಡಬೇಕೆಂದು'' ಶ್ರೀ॥ ಶಾಸ್ತ್ರಿಗಳು ಕೇಳಿದರು. ನಾನು ಒಪ್ಪಿ ಕೆಲವು ಮುಖ್ಯ ಪುಸ್ತಕಗಳನ್ನು ಅವರಿಗೆ ಕೊಟ್ಟು ವಿಜ್ಞಪ್ತಿ ಹಾಗೂ ಗೋಷ್ಠಿಗಳ ಬಗ್ಗೆ ಹೇಳತಕ್ಕದ್ದನ್ನೆಲ್ಲ ಹೇಳುತ್ತ ಅಲ್ಲಿರುವ ವಿದ್ವಾಂಸರಿಗೆ ಆ ಪುಸ್ತಕಗಳನ್ನು ಕೊಡಬೇಕೆಂದೂ ನಾವು ಅವರ ಹೆಸರು ವಿಳಾಸಗಳನ್ನೂ ಕೊಡುವೆವಲ್ಲದೆ ಅವರೆಲ್ಲರೂ ಅದರಲ್ಲಿರುವ ಪ್ರಶ್ನೆಗಳಿಗೆ ಉತ್ತರ ಬರೆದು ತಿಳಿಸುವರೆಂದೂ ಶ್ರೀ॥ ಶಾಸ್ತ್ರಿಗಳು ಹೇಳಿದ ಮೇರೆಗೆ ನಾನು ಪುಸ್ತಕಗಳನ್ನು ಅವರು ಹೇಳಿದವರಿಗೆಲ್ಲ ಒಂದೊಂದಾಗಿ ಕೊಟ್ಟೆ.

ಇದಾದ ನಂತರ ಶ್ರೀ॥ ಶಾಸ್ತ್ರಿಗಳು ಎದ್ದು ನಿಂತು ಸಭೆಯನ್ನುದ್ದೇಶಿಸಿ ಹೇಳಿದ್ದೇನೆಂದರೆ:–

ಶ್ರೀಶ್ರೀಗಳವರ ವಿಚಾರವನ್ನು ತಿಳಿಸಲು ಹೊರಡಿಸಿದ ಪತ್ರಿಕೆಯ (ತೆಲುಗು) 5ನೇ ಪ್ರಘಟ್ಟದಲ್ಲಿ ''ಪಂಚಪಾದಿಕೆ, ಭಾಮತಿ, ಇಷ್ಟಸಿದ್ಧಿ, ವಿವರಣ–ಮುಂತಾದ ಅನೇಕ

ಅದ್ವೈತವ್ಯಾಖ್ಯಾನಕಾರರು, ಅನುಭವಪೂರ್ಣವಾದ ವೇದಾಂತವನ್ನು ಜೀರ್ಣಿಸಿಕೊಳ್ಳಲಾರದೆ ಕಾರ್ಯಕಾರಣಭಾವಕ್ಕೇ ಅಂಟಿಕೊಂಡು, ತರ್ಕಕರ್ಕಶವಾದ ಶೈಲಿಯಲ್ಲಿಯೂ ಕೇವಲ ಪರಮತಖಂಡನ ಉದ್ದೇಶದಿಂದಲೂ ವಾದಗ್ರಸ್ತಸರಣಿಯಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಾಗಿ ವಿವರಿಸುತ್ತಾ ಭಾಷ್ಯಕಾರರ ಅಭಿಪ್ರಾಯವನ್ನು ಜನರಿಗೆ ಸರಿಯಾಗಿ ತಿಳಿಯದಂತೆ ಮಾಡಿದ್ದಾರೆಂಬುದನ್ನು ಆಧಾರಸಮೇತವಾಗಿ ಶ್ರೀಶ್ರೀಗಳವರು ಸಿದ್ಧಪಡಿಸಿದ್ದಾರೆ'' ಎಂದಿದ್ದ ಈ ವಾಕ್ಯವನ್ನೋದಿ ಈ ಮಾತು ನಮಗೆ ಪರಮಾಶ್ಚರ್ಯವನ್ನುಂಟುಮಾಡಿದೆ. ಕಾರಣ ಭಾಷ್ಯಕಾರರಿಂದೀಚೆಗೆ ಬಂದ ಮೂಲಾವಿದ್ಯಾವಾದವೇ ಮುಂತಾದವುಗಳು ಭಾಷ್ಯವಿರುದ್ಧವೆಂಬುದು ಹೇಗೆ? ಇವುಗಳಲ್ಲಿರುವ ದೋಷವೇನು? ಇವರೆಲ್ಲರೂ ಸಂಪ್ರದಾಯಸ್ಥರಾದ ಶಿಷ್ಯಪ್ರಶಿಷ್ಯರಲ್ಲವೆ? ಪ್ರತಿಪಾದನೆಯ ಶೈಲಿಯು ಭಿನ್ನವಾಗಿದ್ದರೂ ಸಹ ಎಲ್ಲರೂ ಅದ್ವೈತವನ್ನೇ ಪ್ರತಿಪಾದಿಸುವರಲ್ಲವೆ? ಈ ಬಗ್ಗೆ ನಮಗೆ ಶ್ರೀಶ್ರೀಗಳವರು ಸಮಾಧಾನವನ್ನು ಕೊಡಬೇಕು''ಎಂದು ಶ್ರೀ॥ ಶಾಸ್ತ್ರಿಗಳು ಕೇಳಿದರು.

ಆಗ ಶ್ರೀಶ್ರೀಗಳು ''ಈಗ ನಿಮ್ಮೆದುರಿಗಿರುವ ಪುಸ್ತಕಗಳಲ್ಲೆಲ್ಲ ಈ ವಿಚಾರಕ್ಕೆ ತಕ್ಕ ಉತ್ತರಗಳಿವೆ. ಮುಖ್ಯವಾಗಿ 'ವಿಜ್ಞಪ್ತಿ'ಯನ್ನು ಹಾಗೂ ಗೋಷ್ಠಿಯನ್ನು ನೀವು ಪರಿಶೀಲಿಸಿದರೆ ಇದು ನಿಮಗೆ ತಿಳಿಯುವದು''ಎಂದರು. ಆ ಕೂಡಲೆ ಬ್ರ॥ ಶ್ರೀ॥ ಮಾಣಿಕ್ಯಶಾಸ್ತ್ರಿಗಳು ವಿವರಣಗ್ರಂಥದಲ್ಲಿರುವ ''ವಿವಾದಗೋಚಾರಾಪನ್ನಂ ಪ್ರಮಾಣ ಜ್ಞಾನಂ''ಎಂದು ಮುಂತಾದ ಮೂಲಾವಿದ್ಯೆಗೆ ಅನುಮಾನಪ್ರಮಾಣವನ್ನು ಸೂಚಿಸುವ ವಾಕ್ಯವನ್ನು ಒಪ್ಪಿಸಿ 'ಮೂಲಾವಿದ್ಯೆ ಇರಲೇಬೇಕು, ಅದು ಇದ್ದರೆ ಆಗುವ ಹಾನಿ ಏನು? ಅದು ಇಲ್ಲವೆಂದಾದರೆ ಆಗುವ ಲಾಭವೇನು? ನಾವು ಪರಮಾರ್ಥವಾಗಿ ಯಾವ ಅವಿದ್ಯೆಯೂ ಇಲ್ಲವೇ ಇಲ್ಲವೆನ್ನುತ್ತೇವೆ. ಪ್ರಕ್ರಿಯಾಸಿದ್ಧಿಗಾಗಿ ಮೂಲಾವಿದ್ಯೆಯನ್ನಿಟ್ಟು ಕೊಳ್ಳುವದು ತಪ್ಪು ಹೇಗೆ?' ಎಂದು ಆಕ್ಷೇಪಿಸಿದರು. ಆಗ ವೆಂಕಟರಾಮಶಾಸ್ತ್ರಿಗಳು 'ಅನಾದಿ ಮಾಯಯಾ ಸುಪ್ತಃ' ಎಂಬ ಗೌಡಪಾದರ ಕಾರಿಕೆಯಲ್ಲಿಯೂ ಅದಕ್ಕಿರುವ ಆಚಾರ್ಯರ ಭಾಷ್ಯದಲ್ಲಿಯೂ ಮೂಲಾವಿದ್ಯೆಯು ಸ್ಪಷ್ಟವಾಗಿ ಹೇಳಲ್ಪಟ್ಟಿದೆ, ಎಂದು ಹೇಳಿ ಇದಕ್ಕೆಲ್ಲ ನಿಮ್ಮ ಉತ್ತರವೇನು? ಬೇಗ ಹೇಳಿರಿ, ಸಮಯವಾಗುತ್ತದೆ–ಎಂದು ಗದರಿಸಿದರು. ಅವರೊಂದಿಗೆ ಕೆಲವರು ಧ್ವನಿಗೂಡಿಸಿ ಸ್ವಲ್ಪ ಗಲಾಟೆ ಮಾಡಿದರು. ಈ ಸಮಯದಲ್ಲಿ ಶ್ರೀ॥ ಬಚ್ಚಯ್ಯಶಾಸ್ತ್ರಿಗಳು ಸ್ವಲ್ಪ ಸಮಾಧಾನ ಮಾಡಿಸಿ ಶ್ರೀಶ್ರೀಗಳವರ ಅಭಿಪ್ರಾಯವನ್ನು ಕೇಳಿಕೊಳ್ಳೋಣವೆಂದು ಉದ್ವಿಗ್ನಚಿತ್ತರಾಗಿದ್ದ ಪಂಡಿತರನ್ನು ಸ್ತಿಮಿತಕ್ಕೆ ತಂದರು. ಆಗ ಶ್ರೀಶ್ರೀಗಳವರು ಕನ್ನಡದಲ್ಲಿ ಹೇಳಲಾರಂಭಿಸಿದರು; ನಾನು ಆಂಧ್ರೀಕರಿಸುತ್ತಿದ್ದೆ. ಅದರ ಸಾರಾಂಶವು ಹೀಗಿತ್ತು: 'ಭಾಷ್ಯ ಹಾಗೂ ವ್ಯಾಖ್ಯಾನಗಳು

ಬೇರೆ ಬೇರೆ ಪ್ರಸ್ಥಾನಗಳೆಂಬುದನ್ನು ನನಗೆ ಮೊದಲು ನನ್ನ ಪೂರ್ವಾಶ್ರಮದಲ್ಲಿ ಒಬ್ಬ ಲೌಕಿಕರು ತೋರಿಸಿಕೊಟ್ಟರು. ಅಂದಿನಿಂದ ನಾನು ಅವೆರಡನ್ನೂ ತುಲನಾತ್ಮಕದೃಷ್ಟಿಯಿಂದ ಅಭ್ಯಾಸ ಮಾಡಲು ಆರಂಭಿಸಿದೆ. ನಮ್ಮ ಮೈಸೂರು ದೇಶದಲ್ಲಿ ಈ ಬಗ್ಗೆ ದೊಡ್ಡ ವಿವಾದವೆದ್ದು ಸದ್ಯಕ್ಕೆ ತಣ್ಣಗಾಗಿದೆ. ಈಗ ನಿಮ್ಮ ಕೈಯಲ್ಲಿರುವ 'ವಿಜ್ಞಪ್ತಿ' ಪುಸ್ತಕದಲ್ಲಿ ಪ್ರಶ್ನೆಗಳು ಹಾಗೂ 'ವೇದಾಂತವಿದ್ವದ್ಗೋಷ್ಠಿ' ಎಂಬ ಪುಸ್ತಕದಲ್ಲಿ ಮೈಸೂರು ದೇಶದ ವಿದ್ವಾಂಸರುಗಳು ಬರೆದಿರುವ ಈ ಅಭಿಪ್ರಾಯದ ಪರ ಹಾಗೂ ವಿರುದ್ಧಾಭಿಪ್ರಾಯಗಳಿಂದ ಕೂಡಿರುವ ಉತ್ತರಗಳೂ ಇವೆ. ಈ ಹಿಂದೆ ಶಂಕರಸಪ್ತಾಹವೊಂದರಲ್ಲಿ ಪಂಡಿತರೊಬ್ಬರು ಭಾಷ್ಯಕಾರರು ಬರೆದ 'ಅತ್ರ ಅವಿದ್ಯಾಕಾಮಕರ್ಮಾಣಿ ಉಪಶಾನ್ತಾನಿ ಭವನ್ತಿ' ಎಂಬ ಬೃಹದಾರಣ್ಯಕಭಾಷ್ಯವಾಕ್ಯಕ್ಕೆ ಅರ್ಥವನ್ನು ಹೇಳುವಾಗ 'ಉಪಶಾಂತ' ಎಂಬುದಕ್ಕೆ ಅವಿದ್ಯೆ, ಕಾಮ, ಕರ್ಮ–ಇವೆಲ್ಲವೂ ಅಲ್ಲಿ ಪೂರ್ಣವಾಗಿ ಶಾಂತವಾಗಿರುತ್ತವೆಯೆಂದು ಅಭಿಪ್ರಾಯವಿದ್ದರೂ ಸಹ ಅದನ್ನು ಸ್ವಲ್ಪವೂ ಮನಸ್ಸಿಗೆ ತಂದುಕೊಳ್ಳದೆ 'ಉಪಶಾಂತ' ಎಂದರೆ ಪೂರ್ಣವಾಗಿ ಶಾಂತವಾಗಿರದೆ ಸ್ವಲ್ಪ ಮಟ್ಟಿಗೆ ಅಡಗಿರುತ್ತಿದೆಯೆಂದು ಹೇಳಿದರು. ಆಗ ನಾನು 'ಭಾಷ್ಯಕಾರರು ಹಾಗೆ ಹೇಳಿಲ್ಲ' ಎಂಬುದನ್ನು ಅನುವಾದದಲ್ಲಿ ಸ್ಪಷ್ಟ ಪಡಿಸಿದೆ. ಹೀಗೆಯೇ ವಿಚಾರವು ಅನೇಕ ಕಡೆಗೆ ಅನೇಕ ಸಲ ನಡೆಯುತ್ತಿರುವಾಗ'' ಎಂದು ಹೇಳುತ್ತಿರುವಾಗ ಮಧ್ಯದಲ್ಲಿಯೇ ಶ್ರೀ॥ ವೆಂಕಟರಾಮಶಾಸ್ತ್ರಿಗಳು ಉದ್ವಿಗ್ನರಾಗಿ ''ನಿಮ್ಮ ಚರಿತ್ರೆ ಕೇಳಲು ನಾವಿಲ್ಲಿ ಕುಳಿತಿಲ್ಲ. ನೇರವಾಗಿ ವಿಷಯವನ್ನು ಹೇಳಿರಿ'' ಎಂದು ಕೂಗಿ ಗದ್ದಲವನ್ನೆಬ್ಬಿಸಿದರು. ಎಲ್ಲರೂ ಶಾಂತರಾಗಿ ಶ್ರೀಶ್ರೀಗಳ ಹೇಳಿಕೆ ಕೇಳಬೇಕೆಂದು ನಾನು ಅತಿವಿನಯದಿಂದ ಪ್ರಾರ್ಥಿಸಿಕೊಳ್ಳುತ್ತಿದ್ದೆ. ಕೊನೆಗೆ 10 ಘಂಟೆಯಾದ್ದರಿಂದ ಕೆಲವರು (ಮೇಲ್ಕಾಣಿಸಿದ) ಗ್ರಂಥಗಳನ್ನು ತೆಗೆದುಕೊಂಡ ನಂತರ ನಾಳೆಯ ದಿನ ಮುಂದಿನ ಚರ್ಚೆ ನಡೆಯಬೇಕೆಂದೂ ಅದು ತ್ರಿಲಿಂಗವಿದ್ಯಾಪೀಠದಲ್ಲಿನಡೆಯಬೇಕೆಂದೂ ನಿರ್ಣಯವಾಗಿ ಸಭೆ ಸಮಾಪ್ತವಾಯಿತು. ನಾನು ಆಗಲೇ ಮುಖ್ಯಪಂಡಿತರುಗಳಿಗೆ ಶ್ರೀಶ್ರೀಗಳವರ ಗ್ರಂಥಗಳನ್ನು ಶಾಂತ ರೀತಿಯಿಂದ ನೋಡಬೇಕೆಂದೂ, ಬೇರೆ ಸಮಯದಲ್ಲಿ ಬಂದು ಅವರೊಡನೆ ಪ್ರತ್ಯೇಕವಾಗಿ ಚರ್ಚೆನಡೆಯಿಸಬೇಕೆಂದೂ ಸವಿನಯದಿಂದ ಪ್ರಾರ್ಥಿಸಿಕೊಂಡೆ. ನನ್ನ ಎದುರಿನಲ್ಲಿ ಹಾಗೆಯೇ ಮಾಡುವೆವೆಂದು ಶ್ರೀ॥ ವೆಂಕಟರಾಮಶಾಸ್ತ್ರಿಗಳೇ ಉಳಿದ ಪಂಡಿತರಿಗೆ ಹೇಳಿಯೂ ಹೇಳಿದರು.

**ತಾ॥ 5–11–63 ಸಾಯಂಕಾಲಃ ಡಾಕ್ಟರ್ ಚಲಪತಿರಾಯರ ಮನೆಯ ಮಹಡಿಯಲ್ಲಿ** ಸುಮಾರು 500 ಜನಗಳು ಶ್ರೀಶ್ರೀಗಳವರ ವ್ಯಾಖ್ಯಾನಕ್ಕೆ ಬಂದಿದ್ದರು. 6½ ಯಿಂದ 7½ವರೆಗೆ "The Unique Method of Vedanta" (ವೇದಾಂತದ ಅಸಾಧಾರಣಪ್ರಕ್ರಿಯೆ) ಎಂಬ ವಿಷಯವನ್ನಿಟ್ಟುಕೊಂಡು ಶ್ರೀಗಳವರು ಇಂಗ್ಲಿಷಿನಲ್ಲಿ

ಉಪನ್ಯಾಸಮಾಡಿದರು. ಅದನ್ನು ಅತ್ಯುತ್ತಮ ರೀತಿಯಿಂದ ಪ್ರೊಫೆಸರ್ ಶ್ರೀಶೇಷಾವತಾರಂರವರು ಆಂಧ್ರೀಕರಿಸಿದರು. ವ್ಯಾಖ್ಯಾನವು ಬಹಳ ಉತ್ತಮ ರೀತಿಯಿಂದ ನಡೆಯಿತು. ಕೊನೆಯಲ್ಲಿ ಶ್ರೀ|| ಬಚ್ಚಯ್ಯಶಾಸ್ತ್ರಿಗಳು ಅನುವಾದ ಮಾಡಿ ವೇದಾಂತಗಳಿಗೆಲ್ಲಕ್ಕೂ ಈ ಅಪ್ರತಿಮ ಪ್ರಕ್ರಿಯೆಯಾದ "ಅಧ್ಯಾರೋಪಾಪವಾದ"ವೇ ಗುರಿಯಾಗಿದೆ. ಬ್ರಹ್ಮಸ್ವರೂಪದಲ್ಲಿ ಅವಿದ್ಯೆಯಿಂದ ಕಲ್ಪಿಸಲ್ಪಟ್ಟ ತಪ್ಪುತಿಳಿವನ್ನು ನಿವಾರಿಸುವಮಾತ್ರದಿಂದಲೇ ಸ್ವಯಂಸಿದ್ಧವಾದ ಆತ್ಮವಿಜ್ಞಾನವು ಹೊರತೋರಿ ಕೊಳ್ಳುತ್ತದೆ. ಇದನ್ನುಳಿದು ಇನ್ನಾವದಾದರೊಂದು ಇದ್ದದ್ದನ್ನು ನಾಶಗೊಳಿಸುವದಾಗಲಿ, ಹೊಸದನ್ನು ನಿರ್ಮಾಣ ಮಾಡುವದಾಗಲಿ ಜ್ಞಾನದಿಂದ ಆಗಲಾರದು" ಎಂದು ಶ್ರೀಶ್ರೀಗಳ ಸುಗಮಶೈಲಿಯನ್ನು ಮನಸಾರೆ ಹೊಗಳಿ ಸರ್ವರಿಗೂ ಆನಂದವನ್ನುಂಟುಮಾಡಿದರು. ಆಗ ಈ ಪಟ್ಟಣದ ಪ್ರಸಿದ್ಧ ಶ್ರೀಮಂತರೂ ಉದಾರದಾನಿಗಳೂ ವಿದ್ಯಾಭಿಮಾನಿಗಳೂ ಆದ ಶ್ರೀ|| ಚುಂಡೂರ ವೆಂಕಟರೆಡ್ಡಿಯವರು ಎದ್ದು ನಾಳೆಯಿಂದ ತ್ರಿಲಿಂಗವಿದ್ಯಾಪೀಠದಲ್ಲಿ ಬೆಳಿಗ್ಗೆ 8 ರಿಂದ 10 ರವರೆಗೆ ಗೋಷ್ಠಿ ನಡೆಯಬೇಕೆಂದೂ ಶ್ರೀಶ್ರೀಗಳವರಿಗೆ ಭಿಕ್ಷಾವಂದನೆ ಮಾಡಿಸುವದಾಗಿಯೂ ಹೇಳಿದರಲ್ಲದೆ ಸ್ವಯಂ ಸ್ಫೂರ್ತಿಯಿಂದ ತಮ್ಮ ಬಂಗಲೆಯ ಆವರಣದಲ್ಲಿಯೇ ಸಾಯಂಕಾಲ ಶ್ರೀಶ್ರೀಗಳವರ ಉಪನ್ಯಾಸವು ಜರುಗಬೇಕೆಂದೂ ಕೇಳಿಕೊಂಡರು.

## ತಾ|| 6–11–63 ತ್ರಿಲಿಂಗವಿದ್ಯಾಪೀಠ, ಬೆಜವಾಡ–2

ಈ ದಿನ ಮೊದಲೇ ಗೊತ್ತುಪಡಿಸಿದ್ದಂತೆ 8 ಘಂಟೆಗೆ ನಾವು ವಿದ್ಯಾಪೀಠಕ್ಕೆ ಬಂದೆವು. ಆ ದಿನ ಹೆಣ್ಣುಮಕ್ಕಳು, ಗಂಡಸರು ಎಲ್ಲರೂ ಸೇರಿ 200 ಜನಗಳು ಅಲ್ಲಿ ನೆರೆದಿದ್ದರು. ಶ್ರೀ|| ವೆಂಕಟರಾಮಶಾಸ್ತ್ರಿಗಳವರು ತಾವು ನಿತ್ಯವೂ ಉಪನ್ಯಾಸವನ್ನು ಮಾಡುತ್ತಿದ್ದ ಬೃಹದಾರಣ್ಯಕೋಪನಿಷತ್ತಿನ ಒಂದು ಭಾಗದ ಸಮಾಪ್ತಿಯನ್ನು ಶ್ರೀಗಳವರ ಸನ್ನಿಧಿಯಲ್ಲಿ ನೆರವೇರಿಸಿ ಪ್ರಸಾದ ವಿನಿಯೋಗಾದಿಗಳು ಆದ ಮೇಲೆ ವಿದ್ವದ್ಗೋಷ್ಠಿ ಆರಂಭವಾಯಿತು. ಈ ದಿನ ಹಿಂದಿನ ದಿನಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಪಂಡಿತರು ಸೇರಿದ್ದರು.

(1) ಗೋಷ್ಠಿಗೆ ಶ್ರೀ|| ಬಿಚ್ಚಯ್ಯಶಾಸ್ತ್ರಿಗಳು ಅಧ್ಯಕ್ಷರಾಗಬೇಕೆಂದೂ ಎಲ್ಲರೂ ಸಂಸ್ಕೃತದಲ್ಲಿಯೇ ಮಾತನಾಡಿ ಶ್ರೀಶ್ರೀಗಳು ಕೇಳಿರುವ 'ವಿಜ್ಞಪ್ತಿ' ಯಲ್ಲಿಯ ಪ್ರಶ್ನೆಗಳಿಗೆ ಒಬ್ಬೊಬ್ಬರಾಗಿ ಉತ್ತರ ಹೇಳಬೇಕೆಂದೂ ಕೊನೆಗೆ ಅಧ್ಯಕ್ಷರು ನಿರ್ಣಯಕೊಡುವರೆಂದೂ ಮೊದಲು ಗೊತ್ತುಮಾಡಿಕೊಂಡದ್ದಾಯಿತು.

(2) ಶ್ರೀಗಳವರ ಎದುರಿಗೆ ಒಬ್ಬೊಬ್ಬರಾಗಿ ಕುಳಿತು ಹೇಳಬೇಕೆಂದು ನಿರ್ಣಯಿಸಿದ ಮೇಲೆ ಮೊದಲು ನನಗೆ 'ವಿಜ್ಞಪ್ತಿ'ಯಲ್ಲಿಯ ಪ್ರಶ್ನೆಗಳನ್ನು ಓದಲು ಹೇಳಿದರು. ನಾನು ಎದ್ದು ನಿಂತು ಮೊದಲಿನಿಂದ ಆರಂಭಿಸಿ ಅವಿದ್ಯಾವಿಷಯಕವಾದ ಪ್ರಶ್ನೆಗಳನ್ನೆಲ್ಲ ನಿಧಾನವಾಗಿ ಓದಿ ಮುಗಿಸಿದೆ.

(3) ಮೊದಲು ಶ್ರೀ|| ವೆಂಕಟರಾಮಶಾಸ್ತ್ರಿಗಳು ಹಿಂದಿನ ದಿನವೇ ಹೇಳಿದ್ದಂತೆ 'ಅನಾದಿಮಾಯಯಾ' ಎಂಬ ಮಾಂಡೂಕ್ಯಕಾರಿಕೆ ಹಾಗೂ ಭಾಷ್ಯಗಳಲ್ಲಿ ಕಾರಣಾವಿದ್ಯೆ ಹಾಗೂ ಕಾರ್ಯಾವಿದ್ಯೆಯನ್ನು ಹೇಳಿದೆ. ಆವರಣವಿಕ್ಷೇಪಶಕ್ತಿಗಳುಳ್ಳ ಇದೇ ಮೂಲಾವಿದ್ಯೆ. ಇದನ್ನೇ ವಿದ್ಯಾರಣ್ಯರು ತಮ್ಮ ಗ್ರಂಥಗಳಲ್ಲಿ ವಿಸ್ತರಿಸಿದ್ದಾರೆ–ಎಂದು ವಿದ್ಯಾರಣ್ಯಕೃತಗ್ರಂಥಗಳಲ್ಲಿಯ ಆಧಾರವಚನಗಳನ್ನು ಹೇಳಿ ಮೂಲಾವಿದ್ಯೆ ಸಿದ್ಧವಾಯಿತೆಂದರು. ಆಮೇಲೆ ಶ್ರೀ|| ಮಾಣಿಕ್ಯಂ ಶಾಸ್ತ್ರಿಗಳವರು ಹಿಂದಿನಂತೆ 'ವಿವಾದಗೋಚರಾಪನ್ನಂ ಪ್ರಮಾಣಜ್ಞಾನಂ' ಎಂಬ ವಾಕ್ಯವನ್ನು ಮತ್ತೊಮ್ಮೆ ಹೇಳಿದ್ದಲ್ಲದೆ 'ಮಿಥ್ಯಾಜ್ಞಾನನಿಮಿತ್ತಃ' ಎಂಬ ಭಾಷ್ಯವಾಕ್ಯದಲ್ಲಿ (1) ಮಿಥ್ಯಾ + ಅಜ್ಞಾನ= ಮಿಥ್ಯಾಜ್ಞಾನ ಎಂದೂ (2) ಮಿಥ್ಯಾ+ ಜ್ಞಾನ= ಮಿಥ್ಯಾಜ್ಞಾನ ಎಂದೂ ಎರಡು ಬಗೆಯಲ್ಲೂ ಸಂಧಿ ವಿಗ್ರಹಮಾಡಲು ಬರುವದರಿಂದ ಸಂಶಯಕ್ಕೆ ಎಡೆಯಿದೆ. ಆದ್ದರಿಂದಲೇ ಪಂಚಪಾದಿಕಾಕಾರರು ''ಮಿಥ್ಯಾ ಚ ತದಜ್ಞಾನಂ ಚ ಮಿಥ್ಯಾಜ್ಞಾನಮ್'' ಎಂದೇ ವಿಗ್ರಹ ವನ್ನು ಬಿಡಿಸಿ ಅದು ಅಧ್ಯಾಸಕ್ಕೆ ನಿಮಿತ್ತ ಎಂದರೆ ಉಪಾದಾನವು ಎಂದು ತಿಳಿಸಿರುವದು ಸಮಂಜಸವಾಗಿದೆ. ಜ್ಞಾನನಾಶ್ಯವಾದ ಭಾವರೂಪಾವಿದ್ಯೆ ಇರಲೇಬೇಕಾದ್ದರಿಂದ ಈ ಅರ್ಥವೇ ಯುಕ್ತಿಯುಕ್ತವಾಗಿದೆ–ಎಂದರು.

ಮೂರನೆಯ ಶಾಸ್ತ್ರಿಗಳೊಬ್ಬರು 'ಶ್ರೀಶ್ರೀಗಳವರು ಮೂಲಾವಿದ್ಯಾನಿರಾಸ ಮಾಡಿದ್ದಾರಲ್ಲವೆ? ಇಲ್ಲದೆ ಇದ್ದ ಮೂಲಾವಿದ್ಯೆಯನ್ನು ನಿವಾರಿಸಲಾಗಿದೆಯೊ, ಅಥವಾ ಇರುವ ಮೂಲಾವಿದ್ಯೆಯನ್ನು ನಿರಾಕರಿಸಲಾಗಿದೆಯೊ? ಇದ್ದದ್ದಾದರೆ ನಿರಾಸಮಾಡಲು ಸಾಧ್ಯವಿಲ್ಲ, ಇಲ್ಲದ್ದನ್ನು ನಿರಾಸಮಾಡುವದು ವ್ಯರ್ಥ. ಆದ್ದರಿಂದ ಶ್ರೀಗಳವರ ಈ ಪ್ರಯತ್ನವು ಸರ್ವಥಾ ವ್ಯರ್ಥವಾಗಿದೆ ಎಂದು ಹೇಳಿ ಸಾಂಪ್ರದಾಯಕರಲ್ಲಿ ದೋಷಗಳನ್ನೆಣಿಸುತ್ತ ಗುರುಪರಂಪರೆಯನ್ನು ನಿಂದಿಸುವ ಇವರಲ್ಲಿ ನಾವು ಸೇರಬಾರದು. ಇದು ಶುದ್ಧ ಅಸಾಂಪ್ರದಾಯಿಕಮಾರ್ಗ. ನಾವು ಈ ಶಿಷ್ಯ ಸಂಪ್ರದಾಯದ ನಿಂದೆಯನ್ನು ಸಹಿಸಲಾರೆವು ಎಂದು ಉದ್ಗಾರ ತೆಗೆದು ತಮ್ಮ ಭಾಷಣವನ್ನು ಮುಗಿಸಿದರು.

ನಾಲ್ಕನೆಯವರು ''ಶ್ರೀಗಳಿಗೂ ಇದು ಇಷ್ಟವಿಲ್ಲ, ಸುಮ್ಮನೆ ನಮ್ಮ ಪರೀಕ್ಷೆಗಾಗಿ ಹೀಗೆ ಕೇಳುತ್ತಿದಾರೆಂದೇ ನಾವು ಭಾವಿಸುತ್ತೇವೆ. ಭಾಷ್ಯ, ವ್ಯಾಖ್ಯಾನ, ಪ್ರಸ್ಥಾನಗಳಲ್ಲಿ

ವಿರೋಧವಿಲ್ಲವೆಂದು ತೋರಿಕೆಯ ವಿರೋಧಕ್ಕೆ ಪರಿಹಾರವನ್ನು ಈವರೆಗೂ ಹೇಳಿದೆಯಲ್ಲದೆ ಭಾಷ್ಯದಲ್ಲಿಯೂ ಸಹ ಮೂಲಾವಿದ್ಯಾವಾದವನ್ನು ಅಂಗೀಕರಿಸಿದ ''ಅವಿದ್ಯಾತ್ಮಕಬೀಜಸದ್ಭಾವಕಾರಿತಂ'', ''ಪ್ರಾಜ್ಞಸ್ತುಬೀಜಭಾವೇನೈವ ಬದ್ಧಃ''– ಮುಂತಾದ ನೂರಾರು ವಾಕ್ಯಗಳನ್ನು ತೋರಿಸಿಕೊಡಬಹುದಾದ್ದರಿಂದ ಈ ವಾದವನ್ನು ಇಲ್ಲಿಗೆ ಮುಗಿಸಬೇಕೆಂದು ಹೇಳಿದರು.

ಹೀಗೆಯೇ ಆರೇಳು ಜನ ಪಂಡಿತರುಗಳು ತಮ್ಮ ತಮ್ಮ ಮತವನ್ನು ತಿಳಿಸಿದರು. ಶ್ರೀಗಳು ಶಾಂತಚಿತ್ತದಿಂದ ಅದೆಲ್ಲವನ್ನೂ ಕೇಳುತ್ತಾ ಆನಂದದಿಂದ ನಗುತ್ತ ಕುಳಿತಿದ್ದರು. ಕೊನೆಗೆ ಅಧ್ಯಕ್ಷರಾದ ಶ್ರೀ|| ಬಚ್ಚಯ್ಯಶಾಸ್ತ್ರಿಗಳು ಉಪಸಂಹಾರಮಾಡಿ ಮೂಲಾವಿದ್ಯಾವಾದವು ನಿರ್ದುಷ್ಟವಾದದ್ದು. ಪ್ರಸ್ಥಾನಭೇದಗಳನ್ನು ಕಲ್ಪಿಸುವದು ತಪ್ಪು. ನಾವೆಲ್ಲರೂ ಭಾಷ್ಯವಾಕ್ಯಗಳನ್ನು ತೋರಿಸಿಕೊಟ್ಟಿದ್ದೇವೆ. ಈ ಮೂಲಕ ಶ್ರೀಗಳವರ 'ವಿಜ್ಞಪ್ತಿ'ಗೆ ಉತ್ತರಕೊಟ್ಟಂತಾಗಿದೆ ಎಂದೂ ನಿರ್ಣಯಿಸಿ ನಾಳೆ ಶ್ರೀಗಳವರು ತಮ್ಮ ಉತ್ತರವನ್ನು ಹೇಳಬಹುದು– ಎಂದು ಆ ದಿನದ ಗೋಷ್ಠಿಯನ್ನು ಸಮಾಪ್ತಿಗೊಳಿಸಿದರು. ಶ್ರೀಗಳವರು ''ನಾನು ಉತ್ತರವನ್ನು ಹೇಳತಕ್ಕದ್ದೇನೂ ಇರುವದಿಲ್ಲ. ಭಾಷ್ಯದ ಕೆಲವು ವಾಕ್ಯಗಳಿಗೆ ವಿದ್ವಾಂಸರು ತಮ್ಮ ವ್ಯಾಖ್ಯಾನವನ್ನು ಹೇಳಿದರೇ ಹೊರತು ಮೂಲಾವಿದ್ಯೆಗೆ ಯಾವ ಪ್ರಮಾಣವನ್ನೂ ತೋರಿಸಿಕೊಟ್ಟಿಲ್ಲ'' ಎಂದರು. ನಾನು ಕೊನೆಯಲ್ಲಿ ಶ್ರೀ|| ವೆಂಕಟರಾಮಶಾಸ್ತ್ರಿಗಳಿಗೆ ನಿನ್ನೆಯದಿನ 'ವಿಜ್ಞಪ್ತಿ' ಪುಸ್ತಕಗಳನ್ನು ತೆಗೆದುಕೊಂಡ ಪಂಡಿತರೆಲ್ಲರ ಹೆಸರು ಹಾಗೂ ವಿಳಾಸಗಳನ್ನು ಬರೆದುಕೊಡಿರೆಂದು ಕೇಳಿದೆ. ಅದಕ್ಕವರು ಇದೊ ಈಗಲೇ ಬರೆಯುತ್ತಿದ್ದೇವೆ. ಇನ್ನು ಒಬ್ಬಿಬ್ಬರ ಹೆಸರುಗಳನ್ನು ನಮೂದಿಸಿ ಸಾಯಂಕಾಲ ನಿಮಗೆ ಕೊಡುತ್ತೇವೆಂದರು. ಈ ದಿನ ಮಧ್ಯಾಹ್ನ 4 ಘಂಟೆಗೆ ತಾವು ಪ್ರತ್ಯೇಕವಾಗಿ ಬಂದು ಶ್ರೀಗಳವರೊಂದಿಗೆ ಮಾತನಾಡಿಕೊಂಡು ಹೋಗುವೆನೆಂದು ಶ್ರೀ|| ವೆಂಕಟರಾಮಶಾಸ್ತ್ರಿಗಳವರು ಹೇಳಿದವರು ಅದೇನು ಕಾರಣವೋ ನಾವು ದಾರಿ ಕಾದೆವು, ಅವರು ಬರಲೇ ಇಲ್ಲ.

ಆ ದಿನ ಸಂಜೆ (ತಾ|| 6–11–63) ಮೊದಲೇ ನಿಶ್ಚಯಿಸಿದ್ದಂತೆ ಶ್ರೀ|| ರೆಡ್ಡಿಯವರ ಬಂಗಲೆಯ ಆವರಣದಲ್ಲಿ ಸಾಯಂಕಾಲ (6 ½ – 7 ½) ವರೆಗೆ ಶ್ರೀಶ್ರೀಗಳವರು ''ಭಕ್ತಿಯೋಗ''ವನ್ನು ಕುರಿತು ಭಾಷಣವನ್ನು ಕನ್ನಡದಲ್ಲಿಯೇ ಮಾಡಿದರು. ಶ್ರೀ|| ಗುಪ್ತರು ಚೆನ್ನಾಗಿ ತೆಲುಗಿಗೆ ಭಾಷಾಂತರಿಸಿದರು. ಈ ಸಮಯದಲ್ಲಿ ಶ್ರೀ|| ರೆಡ್ಡಿಯವರು ನನ್ನನ್ನು ''ವಾದದ ವಿಷಯವು ಸಮಾಪ್ತವಾದಂತಾಯಿತೆ? ನಮ್ಮ ಊರಿನ ಪಂಡಿತರು ಭಾಷ್ಯವಾಕ್ಯಗಳನ್ನು ತೋರಿಸಿದರಂತಲ್ಲ; ನಿಮ್ಮ ಗುರುಗಳಿಗೆ ಸಮಾಧಾನವಾಯಿತೆ?'' ಎಂದು ಕೇಳಿದರು. ಆಗ ನಾನು (1) ಪಂಡಿತರುಗಳು ಸರಿಯಾದ

ಭಾಷ್ಯವಾಕ್ಯಗಳನ್ನು ತೋರಿಸಲಿಲ್ಲ. ವಾಕ್ಯಗಳಿಗೆ ಹೀಗೆಯೇ ಅರ್ಥಮಾಡಬೇಕೆಂದು ವ್ಯಾಖ್ಯಾನ ಮಾಡಿದರು. (2) ಪಂಡಿತರುಗಳು ಹೇಳಿದ ಈ ಉತ್ತರಗಳು ನಮಗೆ ಎಂದಿನಿಂದಲೂ ಕೇಳುತ್ತಬಂದಿರುವ ತೀರಹಳೆಯರಾಗಗಳೇ ಹೊರತು ಇವುಗಳಲ್ಲಿ ಹೊಸ ಯುಕ್ತಿಪ್ರಮಾಣಾದಿಗಳೇನೂ ಇಲ್ಲವಾದ್ದರಿಂದಲೂ ನಮ್ಮನ್ನು ಯಾವದಕ್ಕೂ ಕೇಳಲೇ ಇಲ್ಲವಲ್ಲದೆ ತಮ್ಮಷ್ಟಕ್ಕೆ ತಾವು ನಿರ್ಣಯಮಾಡಿಕೊಂಡರಾದ್ದರಿಂದಲೂ ನಾವು ಏನೂ ಮಾತನಾಡದೆ ಸುಮ್ಮನಿದ್ದೇವೆ. ನಿಜವಾಗಿಯೂ ನಮಗೆ ಸಮಾಧಾನವಾಗುವಂತೆ ನಿಮ್ಮಲ್ಲಿಯ ಪಂಡಿತರು ಉತ್ತರಿಸಲಿಲ್ಲ''ಎಂದು ತಿಳಿಸಿದೆ. ಇದು ನನಗೂ ಶ್ರೀ|| ರೆಡ್ಡಿಯವರಿಗೂ ತೆಲುಗಿನಲ್ಲಿ ನಡೆದ ಸಂವಾದದ ಸಾರಾಂಶವು.

ಸಾಯಂಕಾಲದ ಈ ಉಪನ್ಯಾಸಕ್ಕೆ ಸುಮಾರು 300 ಜನ ಸೇರಿದ್ದರು. ಶ್ರೀಗಳು ಬಹಳ ಚೆನ್ನಾಗಿ ವಿಷಯ ನಿರೂಪಣೆ ಮಾಡಿ ''ಭಗವದ್ಗೀತೆಯಲ್ಲಿ ಭಕ್ತಿಯ ಸ್ಥಾನ''ದ ಕಲ್ಪನೆಮಾಡಿಕೊಟ್ಟರು. ಪಂಡಿತರೆಲ್ಲರೂ ಸಾಮಾನ್ಯವಾಗಿ ಬಂದಿದ್ದರು. ಇಂದು ಶ್ರೀ|| ವೆಂಕಟರಾಮಶಾಸ್ತ್ರಿಗಳೇ ಅನುವಾದಮಾಡಿ ಶ್ರೀಗಳ ವ್ಯಾಖ್ಯಾನವನ್ನು ಹೊಗಳಿದರು. ಕೊನೆಗೆ ಅಮೃತಲಿಂಗವಿದ್ಯಾಪೀಠದ ಮುಖ್ಯಾಧ್ಯಾಪಕರಾದ ಶ್ರೀ|| ಆಂಜನೇಯಲು ಶಾಸ್ತ್ರಿಗಳು ನಾಳೆ ಬೆಳಗ್ಗೆ ತಮ್ಮಲ್ಲಿಯೇ ಭಿಕ್ಷೆಗೆ ಬರಬೇಕೆಂದೂ ಗೋಷ್ಠಿ ನಡೆಯಬೇಕೆಂದೂ ಕೇಳಿಕೊಂಡರು. ಶ್ರೀಗಳು ಭಿಕ್ಷೆಗೆ ಒಪ್ಪಿದರು. ಆದರೆ ''ಗೋಷ್ಠಿ ಬೇಡ, ಇಂದಿಗೆ ಎಲ್ಲವೂ ಮುಗಿದಂತಾಗಿದೆ'' ಎಂದರು. ಪಂಡಿತರೆಲ್ಲರೂ ಇದಕ್ಕೊಪ್ಪಿ ನಾಳೆ ಬೆಳಗ್ಗೆ ಶ್ರೀಗಳು ಕೇವಲ ಉಪನ್ಯಾಸ ಮಾಡಬೇಕೆಂತಲೂ ಎಲ್ಲರೂ ಶಾಂತರೀತಿಯಿಂದ ಕೇಳಬೇಕೆಂತಲೂ ಸಭೆಯಲ್ಲಿಯೇ ಸಾರಿ ಹೇಳಲಾಯಿತು. ಹಾಗೂ ಸಾಯಂಕಾಲ ''ಜ್ಞಾನನಿಷ್ಠಾ''ವಿಚಾರವಾಗಿ ಇದೇ ಸಮಯಕ್ಕೆ ರೆಡ್ಡಿಯವರ ಬಂಗಲೆಯಲ್ಲಿಯೇ ನಡೆಯಬೇಕೆಂದೂ ಸಹ ನಿರ್ಣಯಿಸಿ ಅದನ್ನೂ ಸಾರ್ವಜನಿಕರಿಗೆ ತಿಳಿಸಲಾಯಿತು. ಶ್ರೀ|| ರೆಡ್ಡಿಯವರು ಶ್ರೀಗಳವರಿಗೆ ಉದಾರಹಸ್ತದಿಂದ 100 ರೂಪಾಯಿಗಳನ್ನು ಅಂದಿನ ಭಿಕ್ಷಾವಂದನಕ್ಕಾಗಿ ಸಮರ್ಪಿಸಿದರು.

## ಶ್ರೀಶ್ರೀಗಳವರ ಆಂಧ್ರಪ್ರದೇಶದ ಪ್ರವಾಸವಾರ್ತೆ–3

### ವಿಜಯವಾಡ, ತಾ|| 7–11–63

### (ಮಾರ್ಚ್ 1964)

ಈ ದಿನ ಮೊದಲು ಶ್ರೀಶ್ರೀಗಳವರಿಗೆ ಪಾದಪೂಜೆಯಾಯಿತು. ಶ್ರೀ|| ಆಂಜನೇಯಲು ಶಾಸ್ತ್ರಿಗಳೇ ಸ್ವತಃ ಪತ್ನೀಸಮೇತರಾಗಿ ಭಕ್ತಿಪೂರ್ವಕವಾಗಿ ಪೂಜೆ

ಮಾಡಿದರು. ಇದಾದ ಬಳಿಕ ವಿದ್ವಾಂಸರೆಲ್ಲ ಸೇರಿದರು. ಸಾಮಾನ್ಯಜನಗಳೂಸಹ ಸುಮಾರು ಇನ್ನೂರು ಜನಗಳಿರಬಹುದು. ಇನ್ನೇನು, ಹಿಂದಿನ ದಿನವೇ ಹೇಳಿದಂತೆ ಗೋಷ್ಠಿಯ ವಿವಾದವೇನೂ ಇಲ್ಲ, ಶ್ರೀಶ್ರೀಗಳವರ ಉಪನ್ಯಾಸವೇ ಆರಂಭವಾಗಬೇಕು; ಅಷ್ಟರಲ್ಲಿ ಒಬ್ಬ ಪಂಡಿತರು ಎದ್ದು ನಿಂತು ಈ ರೀತಿ ಆರಂಭಿಸಿದರು:

''ಇಲ್ಲಿ ನಾವೆಲ್ಲರು ಸದಸ್ಯರೂಸೇರಿ ಒಂದು ಪರಿಷತ್ ಮಾಡಿಕೊಂಡಿದ್ದೇವೆ, ನಿಮ್ಮ ವಿಜ್ಞಪ್ತಿಯ ಪ್ರಶ್ನೆಗಳಿಗೆ ಒಬ್ಬೊಬ್ಬರಾಗಿ ಉತ್ತರಕೊಡುವದರ ಬದಲು ಪರಿಷತ್ತಿನಿಂದಲೇ ನಿರ್ಣಯಿಸಿ ಈ ಉತ್ತರವನ್ನು ಬರೆದುಕೊಡುತ್ತಿದ್ದೇವಲ್ಲದೆ ಆಂಧ್ರಪ್ರಾಂತದ ಎಲ್ಲ ಪಂಡಿತರುಗಳಿಗೂ ಇದನ್ನು ಕಳಿಹಿಸುತ್ತೇವೆ. ನೀವು ಇದನ್ನು ಮುದ್ರಿಸಿ ಪ್ರಕಟಿಸಿರಿ'' ಎಂದು ಮುಂತಾಗಿ ಹೇಳಿಸಿ ಓದತೊಡಗಿದರು. ಆ ನಿರ್ಣಯಗಳು ಹಿಂದಿನ ದಿನದವುಗಳೇ ಆಗಿದ್ದು ಅದರಲ್ಲಿ ಹೊಸದೇನೂ ಇರಲಿಲ್ಲ. ಆಗ ಶ್ರೀಗಳು 'ಈಗ ಆ ವಿಚಾರ ಬೇಡ. ಈ ದಿನ ಗೋಷ್ಠಿ ಬೇಡವೆಂದು ನಿನ್ನೆಯೇ ನಿರ್ಣಯವಾಗಿದೆ. ಮತ್ತೇಕೆ, ಈ ಪ್ರಸ್ತಾಪ?' ಎಂದು ಕೇಳಿದೊಡನೆಯೇ ಶ್ರೀ|| ವೆಂಕಟರಾಮಶಾಸ್ತ್ರಿಗಳು ಕೋಪಾವಿಷ್ಟರಾಗಿ ದೊಡ್ಡ ಧ್ವನಿಯಲ್ಲಿ ಕೂಗಲಾರಂಭಿಸಿದ್ದೇನೆಂದರೆ–''ನೀವು ಬರೆದಿರುವ ಈ ಬಿರುಸು ಮಾತುಗಳಿಂದ ನಮಗೆ ತೀರಾ ಸಂಕಟವಾಗಿದೆ. ಈ ಬರಹವನ್ನು ನೀವೇ ಬರೆದಿದ್ದೀರಾ? ಸಂನ್ಯಾಸಿಗಳಾಗಿದ್ದರೂ ಸಂಪ್ರದಾಯಪರಂಪರೆಯನ್ನು ಈ ರೀತಿ ದೂಷಿಸಬಹುದೆ? ಪರಮಹಂಸರಿಗೆ ಪಾರಮಹಂಸ್ಯವು ನೆಲೆಸಬೇಕಾದರೆ ಯಾವ ಪಂಚೀಕರಣ (ಗ್ರಂಥವನ್ನು) ನಿತ್ಯವೂ ಪಠನಮಾಡಬೇಕೋ ಅದರಲ್ಲಿರುವಂತೆ ಕಾರಣದಲ್ಲಿ ಲಯವನ್ನು ಗೌರವಿಸದೆ ಇರುವ ನಿಮಗೆ ಪಾರಮಹಂಸ್ಯವು ಹೇಗೆ ಸಿದ್ಧಿಸೀತು? ಈ ಮಾತನ್ನು ಯಾರು ಬರೆದಿದ್ದಾರೆ?'' ಎಂದು ಮೊದಲನೆಯ ದಿನ ತೋರಿಸಿದ ಪತ್ರಿಕೆಯಲ್ಲಿಯ ವಾಕ್ಯವನ್ನೂ ತೋರಿಸಿ ಪ್ರಶ್ನಿಸಿದರು. ಅದಕ್ಕೆ ಶ್ರೀಗಳು ''ಇದನ್ನು ನಾನು ಪ್ರಕಟಿಸಿಲ್ಲ'' ಎಂದು ಶಾಂತವಾಗಿ ಉತ್ತರಿಸಿದರು. ಆಗ ನನ್ನ ಕಡೆಗೆ ತಿರುಗಿ ಶಾಸ್ತ್ರಿಗಳು ಮಾತಿಗಾರಂಭಿಸಿದರು.

ಶಾ:– ನೀವು ಇದನ್ನು ಬರೆದಿದ್ದೀರಾ?

ನಾ:– ಹೌದು, ನಾನೇ ಬರೆದಿದ್ದೇನೆ.

ಶಾ:– ಇದಕ್ಕೆ ಶ್ರೀಗಳ ಒಪ್ಪಿಗೆ ಪಡೆದಿದ್ದೀರಾ?

ನಾ:– ಇಲ್ಲ, ಆದರೆ ಅವರೇ ಪ್ರಸಿದ್ಧಿಸಿದ 'ಪ್ರತ್ಯಭಿಜ್ಞಾ' ಗ್ರಂಥದ ಕೊನೆಯ ಪುಟದಲ್ಲಿರುವ ವಾಕ್ಯಗಳ ಆಧಾರದಿಂದ ಬರೆದಿದ್ದೇನೆ.

ಶಾ:– ಅದೇನೇ ಇರಲಿ, ಈ ಬಿರುಸುಮಾತನ್ನು ಬರೆದದ್ದಕ್ಕಾಗಿ ನೀವು ಈಗಲೇ ಈ ಸಭೆಯಲ್ಲಿ ಕ್ಷಮೆಕೇಳಬೇಕು, ಏನನ್ನುವಿರಿ?

ನಾ:– ಅವಶ್ಯವಾಗಿ ಕ್ಷಮೆಕೇಳುತ್ತೇನೆ. ಬಿರುಸುಮಾತಿನಿಂದ ಬರೆದದ್ದು ತಪ್ಪಾಯಿತು. ದಯವಿಟ್ಟು ಕ್ಷಮಿಸಿ. ಆದರೆ ವಿಷಯವು ಮಾತ್ರ ಸತ್ಯವಿದೆ.

ಆಗ ಶ್ರೀಗಳೂ ಸಹ 'ಜನರ ಮನಸ್ಸು ಉದ್ವಿಗ್ನವಾಗುವಂತೆ ಬರೆದಿದ್ದಕ್ಕೆ ಅದನ್ನು ಯಾರೇ ಬರೆದಿರಲಿ, ಅವರ ಪರವಾಗಿ ಎಲ್ಲರನ್ನೂ ನಾನು ಕ್ಷಮೆಕೇಳುತ್ತೇನೆ' ಎಂದು ಹೇಳಿದಾಗ ಸರ್ವರಿಗೂ ಶಾಂತರಾಗಿರೆಂದು ನಾನೂ ನಮಸ್ಕಾರಹಾಕಿದೆ. ಒಬ್ಬರು "**ಕ್ಷನ್ತವ್ಯೋ ಮೇಽಪರಾಧಃ ಶಿವ ಶಿವ ಭೋ**"ಎಂದು ಕೂಗಿ ಗೆದ್ದೆವು ಎಂಬ ಮನೋಭಾವವನ್ನು ವ್ಯಕ್ತಪಡಿಸಿದರು. ಅನಂತರ "ವಿಷಯ ಮಾತ್ರ ಸತ್ಯ ಎಂದಿರಲ್ಲ ಅದು ಹೇಗೆ?" ಎಂದು ಒಬ್ಬೊಬ್ಬರು ಮನಬಂದಂತೆ ಕೂಗಾಡುವದಕ್ಕಾರಂಭಿಸಿದಾಗ ಶ್ರೀಗಳೂ ನಾನೂ ಬಹಳ ಶಾಂತ ರೀತಿಯಿಂದ ಹೇಳಿಕೊಂಡು "ನಾವು ಹೇಳುವದನ್ನಾದರೂ ಕೇಳಿರಿ"ಎಂದು ಕೂಗಿಕೊಂಡೆವು. ಆಗ ಸ್ವಲ್ಪ ಸ್ತಿಮಿತಕ್ಕೆ ಬಂದಿತ್ತು. ಆಗ ಶ್ರೀಗಳು ಕನ್ನಡದಲ್ಲಿಮಾಡಿದ ಭಾಷಣವನ್ನು ನಾನೇ ಆಂಧ್ರೀಕರಿಸಿ ಹೇಳಿದೆ. ಅದರ ಸಾರಾಂಶ ಕೆಳಗೆ ಇದೆ:

(1) **ಪಂಚಪಾದಿಕಾ ಹಾಗೂ ವಿವರಣ** : ಇವುಗಳು ವ್ಯಾಖ್ಯೇಯ ವ್ಯಾಖ್ಯಾನ ಗ್ರಂಥಗಳಾಗಿದ್ದು ಶ್ರವಣಾದಿಗಳು ವಿಧಿಗಳೇ?–ಎಂಬ ವಿಚಾರವನ್ನು ವಿವರಿಸುವಾಗ ಪರಸ್ಪರ ವಿರುದ್ಧಾಭಿಪ್ರಾಯವುಳ್ಳವುಗಳಾಗಿವೆ. ಇದನ್ನು ಪಂಡಿತರು ಚೆನ್ನಾಗಿ ಗಮನಿಸಬೇಕು. (2) ಇದರಂತೆಯೇ **ಭಾಮತಿ, ಕಲ್ಪತರು, ಪರಿಮಳ**–ಇವುಗಳು ಕೂಡ ವ್ಯಾಖ್ಯೇಯವ್ಯಾಖ್ಯಾನಗ್ರಂಥಗಾಳಾಗಿದ್ದರೂ ಸಹ '**ರೂಪೋಪನ್ಯಾಸಾಚ್ಚ**'ಎಂಬ ಸೂತ್ರವನ್ನು ವಿವರಿಸುವಾಗ ಭಾಷ್ಯಾಭಿಪ್ರಾಯದ ವಿಷಯಕ್ಕೆ ಪರಸ್ಪರ ವಿರುದ್ಧಾಭಿಪ್ರಾಯ ಗಳನ್ನು ಬರೆದುಕೊಂಡಿದ್ದಾರೆ. (3) **ಭಾಮತಿ ಹಾಗೂ ವಿವರಣಪ್ರಸ್ಥಾನಗಳು ಅವಿದ್ಯೆಗೆ ಆಶ್ರಯವು ಯಾವುದು? ಹಾಗೂ ವಿಷಯವು ಯಾವುದು?**–ಎಂಬ ವಿಚಾರದಲ್ಲಿ ಪರಸ್ಪರವಿರುದ್ಧಾಭಿಪ್ರಾಯಗಳನ್ನು ಪ್ರಕಟಿಸಿದ್ದಾರಲ್ಲದೆ ಈ ಎರಡು ಪಂಗಡಗಳವರೂ ಒಬ್ಬರ ಅಭಿಪ್ರಾಯವನ್ನೊಬ್ಬರು ಖಂಡಿಸುವದಕ್ಕೂ ಸಹ ಪ್ರಯತ್ನಿಸಿರುವದು ಪ್ರಸಿದ್ಧವಿದೆ. (4) ಹೀಗೆ ವ್ಯಾಖ್ಯಾನಕಾರರುಗಳು ಅನೇಕ ವಿಷಯಗಳಲ್ಲಿ ಭಿನ್ನಾಭಿಪ್ರಾಯವುಳ್ಳವ ರಾಗಿರುವರಲ್ಲದೆ ಶಂಕರಾಚಾರ್ಯರ ಭಾಷ್ಯಕ್ಕೂ ವಿರೋಧವಾಗಿರುವ ಅನೇಕ ವಿಷಯಗಳನ್ನು ಮಂಡಿಸಿರುವದು ಅತ್ಯಂತಸ್ಫುಟವಾಗಿದೆ. ಇದನ್ನೆಲ್ಲಸಾವಧಾನಚಿತ್ತದಿಂದ ಪರಿಶೀಲಿಸಿ ಆ ಗ್ರಂಥಗಳನ್ನೆಲ್ಲ ಪೂರ್ತಿಯಾಗಿ ಅಭ್ಯಸಿಸಿನೋಡಿ ಒಂದು ನಿರ್ಣಯಕ್ಕೆ ಬರಬೇಕಾದದ್ದು ಈಗಿನ ಕಾಲದ ಪಂಡಿತರುಗಳೆಲ್ಲ ಮಾಡಬೇಕಾದ ಮುಖ್ಯ

ಕಾರ್ಯವಾಗಿದೆ. ತಾವುಗಳೆಲ್ಲ ಈ ಕಾರ್ಯವನ್ನು ನಿರ್ವಹಿಸಿ ನಿರ್ಣಯಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಈ ಮಾತನ್ನು ಹೇಳಿದಾಗ ಶ್ರೀ॥ ವೆಂಕಟರಾಮಶಾಸ್ತ್ರಿಗಳು "ಹೋ! ನೀವು ಪದ್ಮಪಾದರು ಆಚಾರ್ಯರ ಸಾಕ್ಷಾತ್ ಶಿಷ್ಯರಲ್ಲವೆನ್ನುವಿರೋ? ಶಂಕರವಿಜಯಗಳು ಪ್ರಮಾಣವಲ್ಲವೊ? ವಿದ್ಯಾರಣ್ಯರು ತೈತ್ತಿರೀಯಭಾಷ್ಯದಲ್ಲಿ ಅವಿದ್ಯಾಶ್ರಯ ವಿಷಯದಲ್ಲಿ ಮಾಡಿ ತೋರಿಸಿದ ಏಕವಾಕ್ಯತೆ ನಿಮಗೆ ಒಪ್ಪಿಗೆ ಇಲ್ಲವೊ?" ಎಂದು ಕೂಗಾಡಿ ತಮಗೆ ತಿಳಿದಂತೆ ಮಾತಾಡಲು ಆರಂಭಿಸಿ ಸಭಾಗೌರವವನ್ನೇ ಮುರಿದು "ಇನ್ನು ಈ ವಿಚಾರವನ್ನು ನಿಲ್ಲಿಸಿರಿ, ಮುಂದುವರಿಸಬೇಡಿರೆಂದು ಬೇಡುತ್ತೇವೆ" ಎಂದು ಅರಚಿದರು.

ಅದಕ್ಕೆ ಶ್ರೀಗಳು ಸ್ವಲ್ಪವೂ ಉದ್ವಿಗ್ನರಾಗದೆ ಶಾಂತರೀತಿಯಿಂದ ಹೇಳಿದ್ದೇನೆಂದರೆ (1) "ಅಯ್ಯಾ, ನನಗಂತೂ ವಯಸ್ಸಾಯಿತು. ನೀವುಗಳೂ ನಿಮ್ಮ ಮಕ್ಕಳೂ ಇದನ್ನೆಲ್ಲ ಕೂಲಂಕಷವಾಗಿ ಅಭ್ಯಸಿಸಿ ವಿಚಾರಿಸುತ್ತಲೇ ಇರಬೇಕು. ಇದು ನಿಲ್ಲಬಾರದೆಂದೇ ನನ್ನ ಬಯಕೆ.

(2) "ನಾನು ಹೇಳಿರುವದರಲ್ಲಿ ತಪ್ಪು ತೋರಿಸಿಕೊಟ್ಟರೆ ಈಗಲೇ 'ನಾನು ಬರೆದದ್ದೆಲ್ಲ ತಪ್ಪು' ಎಂದು ಒಪ್ಪಿಕೊಳ್ಳುವದಲ್ಲದೆ ಬರೆದೂಕೊಡುತ್ತೇನೆ. ನನಗೆ ಅಭಿಮಾನವಿಲ್ಲ, ಪಕ್ಷಪಾತವಿಲ್ಲ, ತತ್ತ್ವಬೇಕು. ಕಾರಣ, ನೀವೆಲ್ಲ ಶಾಂತಿಯಿಂದ ವಿಚಾರಿಸಿ"ಎಂದರು. ಇನ್ನು ಮುಂದೆ ಮಾತನಾಡಿ ಪ್ರಯೋಜನವಿಲ್ಲವಾದ್ದರಿಂದ ಪೂರ್ತ ಮೌನವಾಗಿಯೇ ಶ್ರೀಗಳು ಕುಳಿತರು. ಶ್ರೀ॥ ವೆಂಕಟರಾಮಶಾಸ್ತ್ರಿಗಳು ಮಾತ್ರ ತಮಗೆ ತಿಳಿದಂತೆ ಮಾತನಾಡಿ ಆಂಧ್ರಪ್ರಾಂತದ ಮೊದಲನೆಯ ಸ್ಥಳದಲ್ಲಿಯೇ ಇವರನ್ನು ಸೋಲಿಸಿ ಇವರಿಂದ ಕ್ಷಮೆಕೇಳಿಸಿಕೊಂಡೆವೆಂಬ ಭಾವದಲ್ಲಿ ಶ್ರೀಗಳವರಿಗೇ ಬುದ್ಧಿಹೇಳುವ ಶೈಲಿಯಲ್ಲಿ ಮನದಣಿಯ ಮಾತನಾಡಿ ಕೊನೆಗೆ ದಣಿದು ಸುಮ್ಮನಾದರು. ನಾವೆಲ್ಲ ಶಾಂತರಾಗಿ ಕುಳಿತಿದ್ದೆವು.

ಅಷ್ಟರಲ್ಲಿ ಗಂಟೆ ಹನ್ನೆರಡಾಯಿತಾದ್ದರಿಂದ ಈ ವಿದ್ಯಾಪೀಠದ ಹೊರ ಆವರಣದ ಕಟ್ಟಡದ ಅಡಿಗಲ್ಲನ್ನು ಶ್ರೀಗಳಿಂದಲೇ ಸ್ಥಾಪಿಸಬೇಕೆಂದು ಮೊದಲೇ ಕೇಳಿಕೊಂಡಿದ್ದ ಶ್ರೀ॥ ಆಂಜನೇಯಲು ಶಾಸ್ತ್ರಿಗಳವರು ಸಭೆಯನ್ನು ಮುಕ್ತಾಯಗೊಳಿಸಿ ಶ್ರೀಗಳನ್ನು ಕರೆದುಕೊಂಡು ಆ ಸ್ಥಳಕ್ಕೆ ಹೋಗಿ ಅವರಿಂದ ಅಡಿಗಲ್ಲಿಡುವಸ್ಥಳದಲ್ಲಿ ತೀರ್ಥ ಪುಂತ್ರಾಕ್ಷತಾದಿಗಳನ್ನು ಹಾಕಿಸಿದ ಬಳಿಕ "ನಮಃ ಪಾರ್ವತೀಪತಯೇ" ಎಂದು ಮುಂತಾಗಿ ಜಯಘೋಷವೇದಮಂತ್ರಘೋಷದೊಂದಿಗೆ ಸಮಾರಂಭ ಜರುಗಿಸಲ್ಪಟ್ಟಿತು. ಅನಂತರ ಅಲ್ಲಿಯೇ ಸ್ನಾನಭಿಕ್ಷಾದಿಗಳಾದವು. ಈ ದಿನವೂ ನಾನು ಶ್ರೀ॥ ವೆಂಕಟರಾಮಶಾಸ್ತ್ರಿಗಳನ್ನು

ಪಂಡಿತರ ಹೆಸರು, ವಿಳಾಸ ಕೊಡಿರೆಂದು ಕೇಳಿದೆನು. ಮಧ್ಯಾಹ್ನ ಕಳಿಸಿಕೊಡುವೆನೆಂದು ಹೇಳಿದರು. ತಿರುಗಿ ಕಳಿಸಿಕೊಡಲೇ ಇಲ್ಲ.

ಈ ದಿನ ಸಾಯಂಕಾಲ 5 ಗಂಟೆಗೆ ಶ್ರೀ|| ಚುಂಡೂರ ವೆಂಕಟರೆಡ್ಡಿಯವರ ಕುದುರೆಯ ಗಾಡಿಯು ನಾವಿದ್ದಲ್ಲಿಗೇ ಕರೆಯಲು ಬಂದಿತು. ಅವರ ಮನೆಗೆ 5 ½ ಗಂಟೆಗೆ ಹೋಗಿ ಅವರ ಮಹಡಿಯಲ್ಲಿಟ್ಟಿರುವ ಅಮೃತಶಿಲೆಗಳಲ್ಲಿ ಕೆತ್ತನೆಯ ಕೆಲಸಗಳಿಂದ ಮಾಡಿದ್ದ ರಾಮಾಯಣ, ಭಗವದ್ಗೀತಾ–ಮೊದಲಾದ ಅತ್ಯಮೌಲ್ಯ ಕಲಾಕೃತಿಗಳನ್ನು ನೋಡಿದೆವು. ಬಹಳ ಉತ್ತಮವಾದ ಕಲೆ ಇದರಲ್ಲಿತ್ತು, ಅವರ ಮನೆಯೇ ಒಂದು ಪ್ರದರ್ಶನ ಶಾಲೆಯಂತಿತ್ತು ಇದು ಶ್ರೀ|| ರೆಡ್ಡಿಯವರ ಕಲಾಪ್ರೇಮದ ಪರಮಾವಧಿಯ ದ್ಯೋತಕವಾಗಿದೆ. ಅನಂತರ ರೆಡ್ಡಿಯವರು ಶ್ರೀಗಳೊಂದಿಗೆ ಇಂಗ್ಲೀಷಿನಲ್ಲಿ ಮಾತನಾಡಿ ಈ ಎರಡು ದಿನದ ಚರ್ಚೆಯ ವಿಚಾರವನ್ನು ಕೇಳಿದರು. ಅದಕ್ಕೆ ಉತ್ತರವಾಗಿ ಶ್ರೀಗಳು ಹೇಳಿದ ಸಾರಾಂಶವು ಇಷ್ಟಿತ್ತು: ''ನಾನೇನು ಪಂಡಿರತನ್ನೆಲ್ಲ ಗೆದ್ದು ಜಯಪತ್ರ ಪಡೆಯಲು ಹೊರಟಿಲ್ಲ. ಸಂನ್ಯಾಸಾಶ್ರಮದ ಧರ್ಮದಂತೆ ನನಗೆ ಅಭಿಮಾನಾದಿಗಳೇನೂ ಇಲ್ಲ''ಎಂದು ಹೇಳುತ್ತಾ ಹಿಂದೆ ಕಾಶಿಯಲ್ಲಿದ್ದ ಒಬ್ಬ ಮಹಾಪಂಡಿತರ ಕಥೆ ಹೇಳಿದರು. ಒಬ್ಬ ವಿದ್ವಾಂಸನು ಎಲ್ಲ ಕಡೆಯಲ್ಲಿಯೂ ವಾದವನ್ನು ಮಾಡಿ ಜಯಪತ್ರಗಳನ್ನು ಪಡೆಯುತ್ತಾ ಒಂಟೆಯ ಮೇಲೆ ನಗಾರಿ ಹೊಡೆಸಿಕೊಂಡು ಸಾರುತ್ತ ಕಾಶಿಗೆ ಬಂದನು. ಅಲ್ಲಿದ್ದ ಒಬ್ಬ ಮಹಾಪಂಡಿತೋತ್ತಮರ ಹತ್ತಿರ ಹೋಗಿ ''ವಾದ ಮಾಡುವಿರೊ, ಇಲ್ಲವೆ ಜಯಪತ್ರಕೊಡುವಿರೊ?''ಎಂದು ಕೇಳಲು ಅವರು ''ನಾನು ನಿನಗೆ ಸೋತಿದ್ದೇನೆ''ಎಂದು ಜಯಪತ್ರವನ್ನು ಬರೆದುಕೊಟ್ಟರು. ಅವನು ಅದನ್ನೇ ಓಣಿಗಳಲ್ಲೆಲ್ಲ ಸಾರಿಸುತ್ತಾ''ಇಂಥ ಪಂಡಿತರು ನನಗೆ ಸೋತು ಜಯಪತ್ರವನ್ನು ಕೊಟ್ಟಿದ್ದಾರೆ. ಇನ್ನಾರಾದರು ಪಂಡಿತರಿದ್ದರೆ ವಾದಕ್ಕೆ ಬನ್ನಿರಿ''ಎಂದು ಹೇಳಿಕೊಳ್ಳುತ್ತ ಹೊರಟಿದ್ದನು. ಆ ಮಹಾಪಂಡಿತರ ಶಿಷ್ಯರು ಇದನ್ನು ಕೇಳಿ ಆಶ್ಚರ್ಯಚಕಿತರಾಗಿ ಗುರುಗಳ ಹತ್ತಿರಕ್ಕೆ ಬಂದು ''ಸ್ವಾಮಿ, ನಾವು ಒಬ್ಬೊಬ್ಬರೇ ಅವನನ್ನು ವಾದದಲ್ಲಿ ಸೋಲಿಸುವ ಸಾಮರ್ಥ್ಯವುಳ್ಳವರಾಗಿದ್ದಾಗ ತಾವು ಏಕೆ ಹೀಗೆ ಜಯಪತ್ರವನ್ನು ಬರೆದುಕೊಟ್ಟಿರಿ?'' ಎಂದು ಕೇಳಿದಾಗ ಆ ಪಂಡಿತೋತ್ತಮವರು ಹೇಳಿದ್ದೇನೆಂದರೆ: ''ಅಯ್ಯಾ, ನಾನು ಸೋತೆನೆಂದು ಬರೆದುಕೊಟ್ಟ ಮಾತ್ರಕ್ಕೇ ಆ ಮನುಷ್ಯನಿಗೆ ಸಂತೋಷವಾಗುವದಾದರೆ ನಾನು ಬರೆದುಕೊಟ್ಟದ್ದು ತಪ್ಪೇಕೆ?''ಎಂದು ಕೇಳಲು ಶಿಷ್ಯರು ಇವರ ವಿನಯ, ನಿರಭಿಮಾನ, ಅಮಾನಿತ್ವಗಳಿಗೆ ಬೆರಗಾದರಂತೆ''ಎಂಬ ಕಥೆಯನ್ನು ಹೇಳಿ ''ಪತ್ರಿಕೆಯಲ್ಲಿ ಬರೆದದ್ದು ತಪ್ಪು, ಬಿರುಸು ಮಾತು ಬರೆಯಬಾರದಿತ್ತು, ಕ್ಷಮಿಸಿರಿ– ಎಂದು ನಾನು ಕ್ಷಮೆಯನ್ನು ಕೇಳುವದರಿಂದ ನಿಮ್ಮ ಪಂಡಿತರ ಕೋಪವು ಶಾಂತವಾಗುತ್ತಿದ್ದರೆ ಆಗಲೆಂದೇ ಕ್ಷಮೆಕೇಳಲಾಯಿತು. ಬರೆದದ್ದು

ಬಿರುಸಾಗಿದ್ದರೂ ಸತ್ಯವಾಗಿದೆ. (Bitter Truth) ಎಂದು ನಾನು ವಿಷಯವನ್ನು ತಿಳಿಸಹೊರಟರೆ ಅವರು ಅದಕ್ಕೆ ಕಿವಿಗೊಡದಿದ್ದದ್ದು ಮಾತ್ರ ದುರ್ದೈವ. ಇನ್ನಾದರೂ ನನ್ನ ಗ್ರಂಥಗಳನ್ನೆಲ್ಲ ಸಾವಧಾನವಾಗಿ ಓದಲಿ, ನೀವೂ ತರಿಸಿ ಓದಿರಿ. ನಿಮ್ಮ ಪಂಡಿತರುಗಳಿಗೂ ತೋರಿಸಿರಿ. ಆಮೇಲೆ ಯೋಗ್ಯಾಯೋಗ್ಯವಿಚಾರ ಮಾಡಿ ಕೇಳಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಲಿ. ಅವರು ಹೇಗೆ ಬರೆದರೂ ನಾನು ಹಾಗೆಯೇ ಪ್ರಸಿದ್ಧಿಸುತ್ತೇನೆ'' ಎಂದು ಅತಿ ಪ್ರೇಮಪೂರ್ವಕವಾಗಿ ರೆಡ್ಡಿಯವರಿಗೆ ತಿಳಿಸಿದರು.

ಇಷ್ಟು ಹೊತ್ತಿಗೆ 6 ½ ಗಂಟೆಯಾಗಿತ್ತು, ಜನಗಳು ಬಂದು ಸೇರಿದರು. ಪಂಡಿತರಲ್ಲಿ ಶ್ರೀ॥ ವೆಂಕಟರಾಮಶಾಸ್ತ್ರಿಗಳೊಬ್ಬರೇ ಬಂದಿದ್ದರು. ಮಿಕ್ಕವರಾರೂ ಬರಲಿಲ್ಲ. ಸಭಾಂಗಣದಲ್ಲಿ ಶ್ರೀ॥ ರೆಡ್ಡಿಯವರು ಆಗ ತಾವೇ ಶ್ರೀಗುರುಗಳು ಹೇಳಿದ್ದನ್ನೆಲ್ಲ ಹೇಳಿ ''ನಾವು ಉದ್ವಿಗ್ನರಾಗದೆ ಅವರ ಅಭಿಪ್ರಾಯವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಅವರಿಗೆ ವಾದದಲ್ಲಿ ಹಠವಿಲ್ಲ. ಆದ್ದರಿಂದ ಶಾಂತಿಯಿಂದ ಅವರ ಮಾತು ತಿಳಿದುಕೊಳ್ಳಿರಿ. ಪತ್ರಿಕೆಯಲ್ಲಿ ಬಿರುಸಾಗಿ ಬರೆದದ್ದಕ್ಕೆ ಕ್ಷಮೆಯನ್ನು ಕೇಳಿಯೇ ಬಿಟ್ಟಿರುತ್ತಾರ್ದ್ದರಿಂದ ಆ ನೆಪವನ್ನು ಹಿಡಿದು ಕಲಹ ಮಾಡುವದು ಯುಕ್ತವಲ್ಲ. ಅವರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕು'' ಎಂದು ಬಿನ್ನವಿಸಿದರು.

ಮುಂದೆ ಶ್ರೀಗಳು 'ಕ್ಷೇತ್ರಕ್ಷೇತ್ರಜ್ಞ ವಿವೇಕ' ಎಂಬ ವಿಷಯವನ್ನು ತೆಗೆದುಕೊಂಡು ಕನ್ನಡದಲ್ಲಿ ಭಾಷಣ ಮಾಡಿದರು. ಶ್ರೀ॥ ಗುಪ್ತರು ತೆಲುಗಿನಲ್ಲಿ ಅನುವಾದ ಮಾಡಿದರು. ವಿಷಯವು ಚೆನ್ನಾಗಿತ್ತು, ಎಂಟು ಗಂಟೆಯವರೆಗೂ ಶಾಂತವಾಗಿ ನಡೆಯಿತು. ಶ್ರೀ॥ ವೆಂಕಟರಾಮಶಾಸ್ತ್ರಿಗಳು ವಿಷಯವನ್ನು ಅನುಮೋದಿಸಿ ಶ್ರೀಗಳವರನ್ನು ಬೀಳ್ಕೊಡುವ ಮಾತುಗಳನ್ನು ಲೌಕಿಕದೃಷ್ಟಿಯಿಂದ ಹೇಳಿದರು. ಎಲ್ಲರೂ ಸಮಾಧಾನದಿಂದ ನಮ್ಮ ಸ್ಥಳಕ್ಕೆ ಹಿಂದಿರುಗಿದೆವು. ಈ ಸಂದರ್ಭದಲ್ಲಿ ಶ್ರೀ॥ ರೆಡ್ಡಿಯವರು ''ಕಾರ್ಯಾಲಯದಲ್ಲಿ ಪ್ರಕಟವಾದ ಎಲ್ಲ ಇಂಗ್ಲಿಷ್ ಸಂಸ್ಕೃತ ಪುಸ್ತಕಗಳನ್ನೂ ರೈಲ್ವೆ ಪಾರ್ಸಲ್ ಮೂಲಕ ಕಳಿಸಲು ಇಂದೇ ಬರೆಯಿರಿ'' ಎಂದು ಹೇಳಿದರು. ಒಟ್ಟು 50 ರೂ. ಆಗಬಹುದೆಂದು ನಾನು ತಿಳಿಸಿದೆ. ''ಆಗಲಿ'' ಎಂದು ಒಪ್ಪಿದರು. ಆ ಮೇರೆಗೆ ಆಗಲೇ ಕಾರ್ಯಾಲಯಕ್ಕೆ ಕಾಗದ ಬರೆದೆ.

ತಾ॥ 9–11–63ನೇ ದಿನ ನಾವು ಗುಂಟೂರಿಗೆ ಮಧ್ಯಾಹ್ನ ಹೊರಟೆವು. ಅನಕಾಪಲ್ಲಿಯಿಂದ ಶ್ರೀ॥ ಚದುವಲ ರಾಮರಾಯರೆಂಬ ಭಕ್ತರು ನಮ್ಮನ್ನು ಬೆಜವಾಡದಲ್ಲಿಯೇ ಕೂಡಿಕೊಂಡು ಶ್ರೀಗಳವರ ಸೇವೆಗೆ ನಿಂತು ಅನಕಾಪಲ್ಲಿಯವರೆಗೂ ಜೊತೆಯಲ್ಲಿಯೇ ಇದ್ದು ಉತ್ತಮವಾದ ಭಕ್ತಿಪೂರ್ವಕವಾದ ಸೇವೆಯನ್ನು ಸಲ್ಲಿಸಿದರು.

ಆ ಪ್ರಾಂತದ ಪ್ರವಾಸದಲ್ಲಿ ಅವರಿಂದ ನಮಗೆ ಬಹಳ ಸಹಾಯವಾಯಿತು. ನಾವು ವಿಜಯವಾಡದಿಂದ ಹೊರಡುವಾಗ ಮಧ್ಯಾಹ್ನ 1 ಗಂಟೆಗೆ ಯಾರೂ ಸ್ಥಳೀಯರು ಶ್ರೀಗಳವರನ್ನು ಬೀಳ್ಕೊಡಲು ಬರಲಿಲ್ಲ. ನಮ್ಮಷ್ಟಕ್ಕೆ ನಾವೇ ರಿಕ್ಷಾಗಳನ್ನು ಮಾಡಿಕೊಂಡು ಸ್ಟೇಷನ್ನಿಗೆ ಹೊರಟು ಹೋದೆವು. ಇಲ್ಲಿಗೆ ವಿಜಯವಾಡದ ಸಮಾಚಾರ ಮುಗಿಯಿತು.

## ಶ್ರೀಶ್ರೀಗಳವರ ಆಂಧ್ರಪ್ರದೇಶದ ಪ್ರವಾಸವಾರ್ತೆ–4

### ಗುಂಟೂರು, ತಾ|| 8–11–63

### (ಏಪ್ರಿಲ್ 1964)

ಬೆಂಗಳೂರಿನ ಶ್ರೀ|| ನಾಯ್ಡುರವರು ಪತ್ರ ಬರೆದ ಪ್ರಕಾರ ಗುಂಟೂರಿನ "ಶ್ರೀರಾಮನಾಮಕ್ಷೇತ್ರದ" ಕಾರ್ಯದರ್ಶಿಗಳಾದ ಶ್ರೀ|| ಆಂಜನೇಯಲು ಎಂಬುವರು ದಿ. 6–11–63 ರಂದು ಬೆಜವಾಡದಲ್ಲಿಯೇ ಶ್ರೀಶ್ರೀಗಳವರನ್ನು ಕಂಡು ಗುಂಟೂರಿಗೆ ಬರಬೇಕೆಂದು ಆಹ್ವಾನಿಸಿ ಹೋಗಿದ್ದರು.

ಅವರ ಆಮಂತ್ರಣದ ಮೇರೆಗೆ ದಿ. 8–11–63ನೆಯ ಶುಕ್ರವಾರದ ದಿನ ಮಧ್ಯಾಹ್ನದ ಒಂದು ಗಂಟೆಯ ಟ್ರೈನಿಗೆ ಹೊರಟೆವು. 2–20ಕ್ಕೆ ಸರಿಯಾಗಿ ಗುಂಟೂರು ಸ್ಟೇಷನ್ ಫ್ಲಾಟ್‌ಫಾರ್ಮಿನಲ್ಲಿ ಶ್ರೀ|| ಆಂಜನೇಯಲುರವರು ನಮ್ಮನ್ನು ಸ್ವಾಗತಿಸಲು ನಿಂತಿದ್ದರು. ಗುಂಟೂರು ಊರಿಂದ 1 ½ ಮೈಲು ದೂರದಲ್ಲಿರುವ ಶ್ರೀರಾಮನಾಮ ಕ್ಷೇತ್ರಕ್ಕೆ ಸುಮಾರು 4 ಗಂಟೆಗೆ ತಲುಪಿದೆವು. ಬೆಜವಾಡದಲ್ಲಿಯ ವಾದಗ್ರಸ್ತ ವಾತಾವರಣದಿಂದ ಕದಡಿದಂತಾಗಿದ್ದ ನಮ್ಮೆಲ್ಲರ ಮನಸ್ಸಿನಲ್ಲಿ ಈ ಪುಣ್ಯಕ್ಷೇತ್ರದಲ್ಲಿ ಕಾಲಿರಿಸಿದೊಡನೆಯೆ ಒಂದುವಿಧವಾದ ಅನಿರ್ವಚನೀಯ ಶಾಂತಿಸುಖಗಳ ಆವಿರ್ಭಾವವೂ ಭಗವದ್ಭಾವನಾಭಿನಿವೇಶವೂ ಒಮ್ಮೆಲೇ ಹೊರಹೊಮ್ಮಿ ಬೇರೊಂದು ಲೋಕವನ್ನೇ ಪ್ರವೇಶಿಸಿದ ಅನುಭವವಾಯಿತು.

ನಮ್ಮ ಭಾರತ ಭೂಮಿಯಲ್ಲಿರುವ ಪವಿತ್ರಕ್ಷೇತ್ರಗಳ ಸರಿಸಮಾನವಾಗಿರುವ ಈ ಕ್ಷೇತ್ರವು ಅತ್ಯಂತ ವಿಶಾಲವಾಗಿದ್ದು ಅನೇಕ ಸೌಕರ್ಯಗಳಿಂದ ಕೂಡಿದೆ. ದೊಡ್ಡ ಗೇಟಿನಲ್ಲಿ ಕಾಲಿಟ್ಟೊಡನೆಯೆ ಬಲಭಾಗಕ್ಕೆ ಕಾರ್ಯಾಲಯವಿದೆ. ಈ ಕಾರ್ಯಾಲಯದಿಂದ 'ಮೋಕ್ಷಸಾಧನೀ' ಎಂಬ ಪತ್ರಿಕೆಯು ಆಂಧ್ರಭಾಷೆಯಲ್ಲಿ ಪ್ರತಿತಿಂಗಳೂ ಹೊರಡುತ್ತದೆ.

ಕೋಟಿಕೋಟಿ ರಾಮನಾಮಗಳನ್ನು (ಭಕ್ತರು ಬರೆದ ಭಗವನ್ನಾಮಗಳನ್ನೂ ಸಹ) ಹಿಂದೂಸ್ಥಾನದ ಬೇರೆಬೇರೆ ಪ್ರದೇಶಗಳ ಜನರಿಂದ ಬರೆಸಿ ತರಿಸಿ ಅದರ ಬಗ್ಗೆ

ಯಜ್ಞಾದಿಗಳನ್ನು ಆಗಾಗ್ಗೆ ಆಚರಿಸುವ ವ್ಯವಸ್ಥೆಯೂ ಈ ಕಾರ್ಯಾಲಯದಿಂದಲೇ ನಡೆಯುತ್ತಿದೆ. ವೇದಾಂತ, ಯೋಗ–ಆಯುರ್ವೇದ–ಮೊದಲಾದ ಶಾಸ್ತ್ರಗಳ ವಿಷಯಕ್ಕೂ ಅಧ್ಯಾತ್ಮಸಾಧನಾದಿಗಳ ಬಗ್ಗೆಯೂ ತೆಲುಗು ಹಾಗೂ ಇಂಗ್ಲೀಷುಗಳಲ್ಲಿ ಚಿಕ್ಕ ಪುಟ್ಟ ಪುಸ್ತಕಗಳನ್ನು ಪ್ರಕಟಿಸುವದನ್ನು ಈ ಕಾರ್ಯಾಲಯವು ಮಾಡುತ್ತಿದೆ, ಇದಲ್ಲದೆ ಅಮೆರಿಕೆಯ ಒಬ್ಬ ಮಹಿಳೆಯ ಸಹಾಯದಿಂದ ಭಾರತದೇಶಗಳ ಉತ್ತರ ದಕ್ಷಿಣ ತೀರ್ಥಯಾತ್ರೆಗಳ ಪೂರ್ಣ ತಿಳಿವಳಿಕೆಯನ್ನು ಕೊಡಬಲ್ಲ ದೊಡ್ಡ ಪುಸ್ತಕಗಳನ್ನು ತೆಲುಗು ಹಾಗೂ ಇಂಗ್ಲೀಷಿನಲ್ಲಿ ಪ್ರಕಟಿಸಿ ಒಂದು ದೊಡ್ಡ ಲೋಕೋಪಕಾರವನ್ನೂ ಈ ಕಾರ್ಯಾಲಯವು ಮಾಡಿದೆ. ಇಷ್ಟೇ ಅಲ್ಲದೆ ಈ ಕಾರ್ಯಾಲಯದ ವತಿಯಿಂದ ಬಡವರಿಗೋಸ್ಕರ ಗಂಡಸರ ಮತ್ತು ಹೆಂಗಸರ ಪ್ರತ್ಯೇಕ ಆಸ್ಪತ್ರೆಗಳು ಪುಕ್ಕಟೆ ಔಷಧಿ ವಿನಿಯೋಗ, ರೋಗತಪಾಸಣೆ ಇದೆಲ್ಲವನ್ನೂ ಶ್ರೀ|| ಆಂಜನೇಯಲು ಇವರ ಅಣ್ಣಂದಿರು ನೋಡಿಕೊಳ್ಳುತ್ತಿದ್ದಾರೆ. ಇಂಥ ಲೋಕೋಪಕಾರಿಕಾರ್ಯಗಳನ್ನು ಭಗವದರ್ಪಣಬುದ್ಧಿಯಿಂದ ಮಾಡುವ ಈ ಸಂಸ್ಥೆಯು ನಿಜವಾಗಿಯೂ ಸ್ತುತ್ಯರ್ಹವಾಗಿದೆ.

ಕಾರ್ಯಾಲಯದಿಂದ ಮುಂದಕ್ಕೆ ಶ್ರೀರಾಮರ ದೇವಸ್ಥಾನವೂ ದೊಡ್ಡ ಸಭಾಮಂಟಪವೂ ಇವೆ. ಅಮೃತಶಿಲೆಯಲ್ಲಿ ನಿರ್ಮಿಸಿದ ಶ್ರೀರಾಮ, ಲಕ್ಷ್ಮಣ, ಭರತ, ಶತ್ರುಘ್ನ, ಸೀತಾಅಮ್ಮನವರ ಮೂರ್ತಿಗಳು ದೇವಸ್ಥಾನದಲ್ಲಿವೆ. ಸಭಾಂಗಣದ ಇನ್ನೊಂದು ದಿಕ್ಕಿನಲ್ಲಿ ದೇವಸ್ಥಾನಕ್ಕೆ ಎದುರಾಗಿ ಶ್ರೀ|| ಆಂಜನೇಯರ ಅಮೃತಶಿಲೆಯ ಮೂರ್ತಿ ಇದೆ.

ದೇವರಿಗೆ ನಿತ್ಯಪೂಜಾದಿಗಳಿಗೆಲ್ಲ ಚೆನ್ನಾಗಿ ವ್ಯವಸ್ಥೆಯಿದೆ. ಇದೇ ಭಾಗದಲ್ಲಿಯೇ ಈಗ 30 ವರ್ಷಗಳಿಂದಲೂ ಅಖಂಡವಾಗಿ ಭಗವನ್ನಾಮಸ್ಮರಣೆಯು ಅಹೋರಾತ್ರಿ ನಡೆಯುತ್ತಾ ಬಂದಿದೆ. ಈ ಭಗವನ್ನಾಮಸ್ಮರಣೆಗೆ ಎರಡು ಗಂಟೆಗೊಮ್ಮೆ ಸರದಿಯ ಮೇಲೆ ಇಬ್ಬಿಬ್ಬರು ಬರುತ್ತಾರೆ. ಈ ಕೆಲಸಕ್ಕಾಗಿ ಹದಿನೈದು ಜನಗಳಿಗೆ ಊಟಹಾಕಿ ಸಂಬಳವನ್ನು ಕೊಟ್ಟು ನಿಯಮಿಸಿಕೊಳ್ಳಲಾಗಿದೆ. ಇದಲ್ಲದೆ ಊರಿನವರು, ಪರಸ್ಥಳದವರು– ಯಾರು ಬೇಕಾದರೂ ತಮಗೆ ಅನುಕೂಲವಾದಷ್ಟು ಸಮಯದವರೆಗೆ ತಮ್ಮತಮ್ಮ ಅಭಿರುಚಿಗೆ ತಕ್ಕಂತೆ ಹಾರ್ಮೋನಿಯಮ್ ಮುಂತಾದ ವಾದ್ಯಗಳೊಡನೆ ಭಗವನ್ನಾಮಗಳನ್ನು ಹೇಳಬಹುದಾಗಿದೆ. ಈ ರೀತಿಯ ಅಖಂಡನಾಮಸ್ಮರಣೆಯು ವ್ಯಾಪಿಸಿರುವ ಈ ಪುಣ್ಯಕ್ಷೇತ್ರದಲ್ಲಿ ಕಾಲಿಟ್ಟ ಪ್ರತಿವ್ಯಕ್ತಿಗೂ ಮನಸ್ಸಿನಲ್ಲಿ ಭಗವದ್ಭಾವನೆಯ ವಿದ್ಯುತ್ಸಂಚಾರವಾಗಿ ಒಂದುವಿಧವಾದ ವಿಲಕ್ಷಣಾನಂದವು ಹೊರಹೊಮ್ಮುವದರಲ್ಲಿ ಸಂಶಯವೇ ಇಲ್ಲ.

ಸಭಾಂಗಣದ ಗೋಡೆಗಳ ಮೇಲ್ಭಾಗದಲ್ಲಿ ಸುತ್ತಲೂ ಗೂಡುಗಳನ್ನು ಮಾಡಿಸಿ ಈಶ್ವರನು ಪಾರ್ವತಿಗೆ ರಾಮಾಯಣವನ್ನು ಹೇಳಿದ್ದರಿಂದ ಮೊದಲುಗೊಂಡು ದಶರಥ ರಾಜನ ಪುತ್ರಕಾಮೇಷ್ಟಿಯಾಗ, ಶ್ರೀರಾಮನ ಜನ್ಮ, ವಿಶ್ವಾಮಿತ್ರರ ಆಗಮನ, ತಾಟಕಾಸಂಹಾರ, ಅಹಲ್ಯೋದ್ಧರಣ, ಸೀತಾಸ್ವಯಂವರ, ಪರುಶುರಾಮಗರ್ವಭಂಗ, ರಾಮನ ವನವಾಸನಿರ್ಗಮನ, ಗುಹನಭಕ್ತಿ, ಸೀತಾಪಹರಣ–ಮುಂತಾದ ರಾಮಾಯಣದ ಎಲ್ಲ ಸಂದರ್ಭಗಳನ್ನೂ ಸುಂದರವಾದ ಬೊಂಬೆಗಳಿಂದ ನಿರ್ಮಿಸಿ ಕಲಾಪೂರ್ಣವಾಗಿ ತೋರಿಸಿದ್ದಾರೆ. ಪಟ್ಟಾಭಿಷೇಕದವರೆಗಿರುವ ಈ ಚಿತ್ರಗಳನ್ನು ಎಷ್ಟು ಸಲ ನೋಡಿದರೂ ಮನಸ್ಸಿಗೆ ತೃಪ್ತಿಯಾಗುವದಿಲ್ಲ.

ರಾಮನಾಮಗರ್ಜನೆ ಹಾಗೂ ರಾಮಾಯಣದರ್ಶನ–ಇವುಗಳ ಸಂಗಮದ ಈ ಪವಿತ್ರ ವಾತಾವರಣದಲ್ಲಿ ನಮಗೆಲ್ಲ ಸರ್ವವೂ ಶ್ರೀರಾಮಮಯವಾಗಿರುವಂತೆ ಭಾಸವಾಯಿತು. ಈ ಸಭಾಂಗಣದ ಬದಿಯಲ್ಲಿರುವ ಒಂದು ಕೋಣೆಯಲ್ಲಿ ಸಕಲ ಸಾಧುಸಂತರ ಚಿತ್ರಪಟಗಳನ್ನೆಲ್ಲ ಹಾಕಿದ್ದಾರೆ. ಇದಕ್ಕೆ ಅನತಿದೂರದಲ್ಲಿಯೇ ಒಂದು ಪುಷ್ಕರಣಿ ಇದ್ದು ಇಲ್ಲಿಂದಲೇ ಆಶ್ರಮಕ್ಕೆಲ್ಲ ಕೊಳಾಯಿಯ ಮೂಲಕ ನೀರನ್ನು ಒದಗಿಸಲಾಗುತ್ತಿದೆ. ಇದಲ್ಲದೆ ಇಡೀ ಕ್ಷೇತ್ರದ ಆವರಣದಲ್ಲಿ ಐದಾರು ಬಾವಿಗಳೂ ಅಲ್ಲಲ್ಲಿ ಇವೆ. ದೇವಸ್ಥಾನದ ಹಿಂಭಾಗದಲ್ಲಿ ಉಗ್ರಾಣ, ಪಾಕಶಾಲೆ–ಮುಂತಾದವುಗಳಿವೆಯಲ್ಲದೆ, ಇಲ್ಲಿಯೇ ಅತಿಥಿಗಳಿಗೆ ಇಳಿದುಕೊಳ್ಳುವದಕ್ಕೂ ಸ್ಥಳಗಳಿವೆ. ಒಟ್ಟಿನಲ್ಲಿ ಇದೊಂದು ಅತ್ಯಂತ ಪ್ರೇಕ್ಷಣೀಯವಾದ ಉತ್ತಮ ಕ್ಷೇತ್ರವೆನ್ನಲು ಅಡ್ಡಿ ಇಲ್ಲ. ಈ ಕ್ಷೇತ್ರದಲ್ಲಿ ಅನೇಕ ಜನ ದಾತೃಗಳು ವಿಧವಿಧರೂಪದಲ್ಲಿ ಧನಸಹಾಯವನ್ನು ಮಾಡಿದ್ದಾರೆ.

ಸಾಯಂಕಾಲ 7 ಗಂಟೆಗೆ ಸಭೆ ಸೇರಿತು. ಸಭೆಗೆ ದಯಮಾಡಿಸಿದ್ದವರಲ್ಲಿ ಮೈಸೂರಿನವರಾದ ಶ್ರೀ|| ಕಾಶೀ ಕೃಷ್ಣಾಚಾರ್ಯರು ವಯೋವೃದ್ಧರೂ ಭಗವದ್ಭಕ್ತರೂ ವಾಗ್ಮಿಗಳೂ ಆಗಿದ್ದರಾದ್ದರಿಂದ ಅವರನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದರು. ಶ್ರೀ|| ಕೃಷ್ಣಾಚಾರ್ಯರು ಸಂಸ್ಕೃತಪ್ರೇಮಿಗಳಾಗಿದ್ದು ಆಂಧ್ರಭಾಷೆಯಲ್ಲಿ ಸುಲಭವಾಗಿ ಸಂಸ್ಕೃತವನ್ನು ಕಲಿಯಲು ಅನುಕೂಲವಾಗುವಂತೆ ಪುಸ್ತಕಗಳನ್ನು ರಚಿಸಿದ್ದಾರೆ. ಆರಂಭದಲ್ಲಿ ನಾನೂ ಗುಪ್ತರೂ ಮಾತನಾಡಿದ ಬಳಿಕ ಶ್ರೀಶ್ರೀಗಳವರು ''ಕಲಿಯುಗದಲ್ಲಿ ಭಗವನ್ನಾಮಕೀರ್ತನೆಯೇ ಸುಲಭವಾದ ಶ್ರೇಷ್ಠಸಾಧನೆ'' ಎಂಬ ವಿಷಯವನ್ನು ಕುರಿತು ಉಪದೇಶಮಾಡಿದರು. ಅದನ್ನು ಶ್ರೀ|| ಗುಪ್ತರು ಆಂಧ್ರೀಕರಿಸಿದರು. ಅಚ್ಚ ಕನ್ನಡಿಗರಾದ

ಶ್ರೀ|| ಕೃಷ್ಣಾಚಾರ್ಯರು ಶ್ರೀಶ್ರೀಗಳವರ ವ್ಯಾಖ್ಯಾನವನ್ನು ಕೇಳಿ ಅತ್ಯಾನಂದಭರಿತರಾಗಿ ಶ್ರೀಶ್ರೀಗಳವರನ್ನು ತುಂಬ ಶ್ಲಾಘಿಸಿ ಸಮಾರೋಪ ಭಾಷಣವನ್ನು ಮಾಡಿದರು. ಕೊನೆಗೆ ಕಾರ್ಯದರ್ಶಿಗಳು ಮಾತನಾಡುವಾಗ ''ಇಲ್ಲಿ ಸೇರಿರುವ ಶ್ರೀಶ್ರೀಗಳವರು ಮತ್ತು ಶ್ರೀ|| ಕಾಶೀ ಕೃಷ್ಣಾಚಾರ್ಯರಿಬ್ಬರಿಗೂ ಒಬ್ಬೊಬ್ಬರಿಗೂ ಒಬ್ಬೊಬ್ಬರನ್ನು ನೋಡಿ ಆಶ್ಚರ್ಯವಾಗಿದೆ. ಶ್ರೀಶ್ರೀಗಳವರು ನೂರಾರು ವೇದಾಂತ ಗ್ರಂಥಗಳ ಕರ್ತರಿದ್ದು ಶುದ್ಧಶಾಂಕರಪ್ರಕ್ರಿಯಾತತ್ತ್ವದ ಪ್ರಸಾರಕರಾಗಿದ್ದು ಭಗವನ್ನಾಮ ಮತ್ತು ಭಕ್ತಿಗಳ ಬಗ್ಗೆ ಅತಿ ಪ್ರೀತಿ ಹೊಂದಿದವರಾಗಿರುವದನ್ನು ಕಂಡು ಶ್ರೀ ಕೃಷ್ಣಾಚಾರ್ಯರಿಗೆ ಆಶ್ಚರ್ಯವಾಗಿದೆ. ಅದರಂತೆ 92 ವಯಸ್ಸಿನವರಾದ ಶ್ರೀ ಕೃಷ್ಣಾಚಾರ್ಯರು ಇಂಥ ಮುಪ್ಪಿನಲ್ಲಾದರೂ ಪೂರ್ಣಾರೋಗ್ಯದಿಂದಿದ್ದು ಪರಾವಲಂಬನೆಯಿಲ್ಲದೆ ಸಂಚರಿಸುತ್ತಾ ಸಿಂಹನಾದದಿಂದ ಉಪನ್ಯಾಸವನ್ನು ಮಾಡಿದ್ದನ್ನು ಕಂಡು ಶ್ರೀಶ್ರೀಗಳವರಿಗೂ ಆಶ್ಚರ್ಯವಾಗಿದೆ'' ಎಂದು ಹೇಳಿ ಎಲ್ಲರನ್ನೂ ನಗೆಗಡಲಲ್ಲಿ ತೇಲಿಸಿದರು. ಕೊನೆಗೆ ಭಗವನ್ನಾಮ ಸಂಕೀರ್ತನೆಯು ನಡೆಯಿತು. ಅದರಲ್ಲಿ ನಾನೂ ಭಾಗವನ್ನು ತೆಗೆದುಕೊಂಡು ನಾಮಭಜನೆಮಾಡಿ ಆ ದಿವ್ಯನಾಮಾಮೃತದ ಸವಿಯನ್ನು ಸವಿದೆನು. ಈ ರೀತಿಯಲ್ಲಿ ಅಂದಿನ ಕಾರ್ಯಕ್ರಮವು ಮುಗಿಯಿತು. ಒಟ್ಟಿನಲ್ಲಿ ಗುಂಟೂರು ಶ್ರೀರಾಮನಾಮಕ್ಷೇತ್ರವು ಒಂದು ಆದರ್ಶಕ್ಷೇತ್ರವಾಗಿದ್ದು ನಮಗೆಲ್ಲ ಎಂದಿಗೂ ಮರೆಯದಂತಹ ಆನಂದವನ್ನು ನಮ್ಮ ಪ್ರವಾಸದಲ್ಲಿ ಕೊಟ್ಟಿತು–ಎಂದು ಹೇಳಬಹುದು.

**ಪೆನುಗೊಂಡಃ** ನಾವು ಬೆಜವಾಡದಲ್ಲಿರುವಾಗಲೇ ನಿಖಿಲಾನಂದಗುಪ್ತರ ಶಿಷ್ಯವರ್ಗದವರಾದ ಪೆನುಗೊಂಡ ಶ್ರೀ|| ರಾಮಯ್ಯ ಶ್ರೇಷ್ಠಿಯವರು ಶ್ರೀಗಳವರು ತಮ್ಮ ಗ್ರಾಮಕ್ಕೆ ದಯಮಾಡಿಸಬೇಕೆಂದೂ ಆರ್ಯವೈಶ್ಯಜನಾಂಗದ ಕುಲದೇವತೆಯಾದ ಶ್ರೀ ವಾಸವೀಕನ್ಯಕಾಪರಮೇಶ್ವರೀದೇವಿಯ ಅವತಾರಸ್ಥಳವೇ ಈ ಗ್ರಾಮವೆಂದೂ ಹೇಳಿ ಆಮಂತ್ರಿಸಿ ಹೋಗಿದ್ದರು. ಆಮೇಲೆ ದಿ. 9–11–63ನೆಯ ರಾತ್ರಿ 7 ½ ಗಂಟೆಗೆ ನಿಡುದವೋಲು ಸ್ಟೇಷನ್ನಿಗೆ ಬರುವ ರೈಲಿಗೆ ಬರುವೆವೆಂದು ಅವರಿಗೆ ಹೇಳಿಕಳಿಸಿದ್ದೆವು. ದಿ. 9ನೇ ದಿನ ಬೆಳಗ್ಗೆ 8 ಗಂಟೆಯೊಳಗೆ ಶ್ರೀರಾಮನಾಮಕ್ಷೇತ್ರದಲ್ಲಿ ಶ್ರೀ ಶ್ರೀಗಳವರ ಭಿಕ್ಷೆ ಹಾಗೂ ನಮ್ಮೆಲ್ಲರ ಊಟೋಪಚಾರಗಳನ್ನು ಮುಗಿಸಿ 10 ಗಂಟೆಗೆ ಗುಂಟೂರಿನಿಂದ ಹೊರಡುವ ರೈಲಿನಲ್ಲಿ ಕುಳಿತು 12 ಗಂಟೆಗೆ ಬೆಜವಾಡಾಕ್ಕೆ ಬಂದೆವು. ಮುಂದೆ ನಿಡುದವೋಲ ಕಡೆಗೆ ಹೊರಡಬೇಕಾಗಿದ್ದ ರೈಲು ಆ ದಿನ 2 ಗಂಟೆ ತಡವಾಗಿ ಬಂದದ್ದರಿಂದ ನಾವು ನಿಡುದವೋಲ ಸ್ಟೇಷನ್ನಿಗೆ ತಲುಪಿದಾಗ ರಾತ್ರಿ 9 ½ಯಾಗಿತ್ತು. ರೈಲಿನಲ್ಲಿ ಶ್ರೀಶ್ರೀಗಳವರು ಎಷ್ಟೋ ಪರಮಾರ್ಥವಿಚಾರಗಳನ್ನು ಚರ್ಚಿಸುತ್ತಲೂ ತಿಳಿಸಿ

ಹೇಳುತ್ತಲೂ ಬಂದರು. ಶ್ರೀಶ್ರೀಗಳು, ಶ್ರೀಮತಿ ಲಕ್ಷ್ಮಮ್ಮನವರು–ಇವರಿಬ್ಬರನ್ನುಳಿದು ನಾವೆಲ್ಲರೂ ಅಲ್ಲಲ್ಲಿ ಪ್ಲಾಟ್‌ಫಾರ್ಮುಗಳ ಮೇಲೆ ಹಣ್ಣು, ಹಂಪಲು, ನೀರು, ಹಾಲು, ಮುಂತಾದದ್ದನ್ನು ತೆಗೆದುಕೊಳ್ಳುತ್ತಿದ್ದೆವು. ಆದರೆ ಅವರಿಬ್ಬರು ತಲುಪಬೇಕಾದ ಸ್ಥಳಕ್ಕೆ ತಲುಪಿ ಸ್ನಾನವಾದ ಬಳಿಕವೇ ಬಾಯಿಯಲ್ಲಿ ನೀರುಹಾಕುವ ನಿಷ್ಠೆಯುಳ್ಳವರಾದ್ದರಿಂದ ಬೆಳಗಿನ 8 ಗಂಟೆಯಿಂದ ಬಿಸಿಲಲ್ಲಿ ಏನೂ ತೆಗೆದುಕೊಳ್ಳದೆ ಹಾಗೇ ಇದ್ದರು. ಅವರನ್ನು ಕಂಡು ನಮಗೆ ಕನಿಕರವೆನಿಸುತ್ತಿತ್ತು, ಆದರೆ ಅವರಿಬ್ಬರೂ ನಮಗಿಂತ ಹೆಚ್ಚು ಸಂತೋಷಚಿತ್ತರಾಗಿದ್ದರು. ನಿಯಮನಿಷ್ಠೆಗಳನ್ನು ಪಾಲಿಸುವ ಅಭ್ಯಾಸವನ್ನು ಜೀವನಕ್ಕಿಳಿಸಿ ಕೊಂಡವರಿಗೆ ಆ ನಿಯಮಗಳನ್ನು ಪಾಲಿಸುವದರಲ್ಲಿಯೇ ಆನಂದವಿರುತ್ತದೆಂಬ ಮಾತು ಆ ದಿನ ಶ್ರೀಗಳವರನ್ನು ಕಣ್ಣಾರೆ ಕಂಡ ನನಗೆ ಸತ್ಯವಾಗಿ ಅನುಭವಕ್ಕೆ ಬಂತು. ನೀರಡಿಕೆ ಹಸಿವೆಗಳ ಅರಿವೇ ಇಲ್ಲದಂತೆ ಪ್ರವಾಸದ ಕೊನೆಯವರೆಗೂ ಒಂದೇ ಸಮನೆ ಉಪದೇಶ ಮಾಡುತ್ತ ಪರಮಾರ್ಥಸಾಧನೆಗಳ ಮರ್ಮ, ತಮ್ಮ ಜೀವನದಲ್ಲಿಯ ಅನೇಕ ಅನುಭವಗಳು, ಅದ್ವೈತಸಿದ್ಧಾಂತದಲ್ಲಿಯ ಅತಿಸೂಕ್ಷ್ಮಗಹನಗಂಭೀರವಾದ ಸಮಸ್ಯೆಗಳು–ಮುಂತಾದ ಅನೇಕ ಉಪಯುಕ್ತವಿಚಾರಗಳನ್ನು ಶ್ರೀಶ್ರೀಗಳು ಹೇಳುತ್ತಲೇ ಆನಂದದಿಂದ ನಗುತ್ತ ಬರುತ್ತಿದ್ದರು. ಶ್ರೀಶಂಕರಾಚಾರ್ಯರು ''**ಕೇಚಿತ್ ಧ್ಯಾನಾಹಾರಾಃ**''ಎಂದು ಭಾಷ್ಯದಲ್ಲೊಂದು ಕಡೆ ಬರೆದಿದ್ದಾರೆ. ಆ ಮಾತು ಆ ದಿನ ನನಗೆ ಶ್ರೀಶ್ರೀಗಳನ್ನು ನೋಡಿದಾಗ ಪ್ರತ್ಯಕ್ಷವಾಯಿತು. ಇಂದ್ರಿಯಾರಾಮರಾಗಿರುವವರಿಗಿಂತ ಇಂದ್ರಿಯನಿಗ್ರಹಿಗಳಾದ ಸಂಯಮಿಗಳಿಗೆ ಆಂತರಿಕತೃಪ್ತಿಯೊಂದು ಇರುವದೆಂಬುದನ್ನು ಅರಿತು ಕ್ರಮಕ್ರಮವಾಗಿ ವಿಷಯಲೋಲುಪತೆಯನ್ನು ಹಿಮ್ಮೆಟ್ಟಿಸಿ ನಿಗ್ರಹಿಗಳಾಗಬೇಕೆಂಬ ದೊಡ್ಡವರ ಮಾತಿನ ಪರಿಣಾಮವು ಆಗ ನನ್ನ ಮೇಲೆ ತುಂಬ ಆಯಿತು.

ಅಂತು 9 ½ ಗಂಟೆಗೆ ನಿಡುದವೋಲಿಗೆ ಹೋದಾಗ ಪೆನುಗೊಂಡದ ಜನಗಳು (ಕೆಲವು ಪ್ರಮುಖರು) ಸ್ಟೇಶನ್ನಿನಲ್ಲಿ ಸ್ವಾಗತಬಯಸಿದರು. ಅವರು ತಂದ ಕಾರಿನಲ್ಲಿ ಕುಳಿತು ಮುಂದೆ 20 ಮೈಲು ಪ್ರಯಾಣ ಮಾಡಿದೆವು. ಅದರಲ್ಲಿಯೂ 7 ಮೈಲು ರಸ್ತೆ ಚೆನ್ನಾಗಿತ್ತು, ಮಿಕ್ಕದ್ದೆಲ್ಲವೂ ಸರಿಯಾಗಿಲ್ಲದ್ದರಿಂದ 20 ಮೈಲು ಹೋಗಲು 2 ಗಂಟೆ ಹಿಡಿಯಿತು. ಸರಿಯಾಗಿ ರಾತ್ರಿ 11 ಗಂಟೆಗೆ ಪೆನುಗೊಂಡವನ್ನು ಸೇರಿದೆವು. ಶ್ರೀ ವಾಸವೀ ಅಮ್ಮನವರ ದೇವಾಲಯಕ್ಕೆ ಹತ್ತಿರದಲ್ಲಿರುವ ಒಂದು ಛತ್ರದಲ್ಲಿ ನಮ್ಮ ನಿವಾಸಕ್ಕೆ ಏರ್ಪಾಡಾಗಿತ್ತು, ಛತ್ರವು ವಿಶಾಲವೂ ಸ್ವಚ್ಛವೂ ಇದ್ದಿತು. ರಾತ್ರಿ ಸ್ನಾನಾನಂತರ ಸ್ವಲ್ಪ ಹಣ್ಣು ಹಾಲು ತೆಗೆದುಕೊಂಡು ಎಲ್ಲರೂ ವಿಶ್ರಮಿಸಿದೆವು.

ದಿ. 10–11–63, ಶ್ರೀ॥ ನಿಖಿಲಾನಂದಗುಪ್ತರೂ ಶ್ರೀಮತಿ ಮಹಿಳಾ ಮಾತೆಯವರೂ ತಮ್ಮ ಗ್ರಾಮಕ್ಕೆ ಬಂದಿರುವದೂ ಮತ್ತು ಶ್ರೀಶ್ರೀಗಳವರನ್ನು ಕರೆದುಕೊಂಡು ಬಂದಿರುವದೂ ಆ ಗ್ರಾಮದ ಜನಗಳಿಗೆ ದೊಡ್ಡದೊಂದು ಹಬ್ಬವೇ ಆಗಿತ್ತೆಂದು ಹೇಳಬಹುದು. ಮಹಿಳಾ ಸಮಾಜದವರು, ಸ್ತ್ರೀಯರು, ಪುರುಷರು, ಎಲ್ಲರೂ ಸೇರಿ, ಶ್ರೀಶ್ರೀಗಳವರ ಉಪದೇಶವನ್ನು ಶ್ರವಣಮಾಡಲು ಬಂದಿದ್ದರು. ಆ ಭಾನುವಾರ ಬೆಳಗ್ಗೆ ಸಾಯಂಕಾಲ– ಎರಡೂ ವೇಳೆ ಶ್ರೀಶ್ರೀಗಳವರಿಂದ ಕರ್ಮಯೋಗ, ಭಕ್ತಿ– ಎಂಬ ವಿಷಯಗಳಮೇಲೆ ಅದ್ಭುತವಾದ ಉಪನ್ಯಾಸಗಳು ಛತ್ರದಲ್ಲಿಯೇ ಜರುಗಿದವು. ಭಗವದ್ಗೀತೆಯ 12ನೆಯ ಮತ್ತು15ನೆಯ ಅಧ್ಯಾಯಗಳನ್ನು ಎಲ್ಲರೂ ಸೇರಿ ಪಠಿಸಿದರು. ರೈಲಿನಿಂದ ಬಂದಿದ್ದ ಶ್ರೀ ಸಮಯಮಂತಲು ನಾಗೇಶ್ವರರಾವ್, ಇತರ ಪ್ರತಿಷ್ಠಿತರು, ಮತ್ತು ಪೆನುಗೊಂಡದಲ್ಲಿನ ಸುಪ್ರತಿಷ್ಠಿತ ಗೃಹಸ್ಥರೆಲ್ಲರೂ ಉಪನ್ಯಾಸಗಳಿಗೆ ಬಂದಿದ್ದರು. ಎರಡು ಸಮಯದಲ್ಲಿಯೂ ಮೂರುನಾಲ್ಕುನೂರು ಜನರು ಸೇರಿದ್ದರಿಂದ ಸಭೆ ಕಿಕ್ಕಿರಿದು ಹೋಗಿತ್ತು

ಆ ದಿನ ಬೆಳಗಿನ ಉಪನ್ಯಾಸವಾದಬಳಿಕ ಭಕ್ತರೆಲ್ಲರೂ ಸೇರಿಕೊಂಡು ಶ್ರೀಶ್ರೀಗಳವರಿಗೆ ಪಾದಪೂಜೆಯನ್ನು ಮಾಡಿದರು. ಕೆಲವು ಗೃಹಸ್ಥರು ಶ್ರೀಶ್ರೀಗಳವರನ್ನು ತಮ್ಮತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಕಾಣಿಕೆಗಳನ್ನರ್ಪಿಸಿದರು. ಮಧ್ಯಾಹ್ನ 11 ಗಂಟೆಗೆ ದೇವಸ್ಥಾನಕ್ಕೆ ಹೋಗಿದ್ದೆವು. ದೇವಸ್ಥಾನವು ಸಾಧಾರಣ ದೊಡ್ಡದಿದೆ. (ಶ್ರೀ ಕನ್ಯಾಕಾಪರಮೇಶ್ವರೀದೇವಿಯವರ) ಮೂಲವಿಗ್ರಹವು ಒಂದು ಕಡೆ ಇದೆ. ಪ್ರಾಚೀನಶಿಲಾಶಾಸನಗಳೂ ಅಲ್ಲಿವೆಯಂತೆ. ಆದರೆ ಅವೆಲ್ಲವೂ ಅಮೃತಶಿಲೆಯ ಕಲ್ಲಿನ ತುಂಡುಗಳಿಂದ ಮುಚ್ಚಲ್ಪಟ್ಟಿವೆ. ಮಧ್ಯದಲ್ಲಿ ಶ್ರೀ ನಗರೇಶ್ವರನ ಭವ್ಯಲಿಂಗವಿದೆ. 'ಈ ಲಿಂಗದ ಮೇಲೆ ಇಟ್ಟ ಗಂಧವು ಒಣಗುವದೇ ಇಲ್ಲ, ಯಾವಾಗಲೂ ಹಸಿಯಾಗಿರುತ್ತದೆ; ಇದೇ ಇಲ್ಲಿಯ ವಿಶೇಷ ಮಹಿಮೆ' – ಎಂದು ಅಲ್ಲಿಯ ಜನಗಳು ನಮಗೆ ಲಿಂಗದ ಮೇಲಿದ್ದ ಗಂಧದ ಮುದ್ದೆಯನ್ನು ತೋರಿಸಿದರು. ಇನ್ನೊಂದು ಬದಿಗೆ ಶ್ರೀ ಜನಾರ್ದನ ಸ್ವಾಮಿ, ಪಕ್ಕದಲ್ಲಿಯೇ ಮಹಿಷಾಸುರಮರ್ದಿನಿ– ಈ ವಿಗ್ರಹಗಳಿವೆ. ವೈಶ್ಯಕುಲದವರ ಗೋತ್ರಾದಿಗಳನ್ನು ತಿಳಿಸುವ ಪುಸ್ತಕವನ್ನೂ ಹಾಗೂ ವಾಸವೀ ಪುರಾಣಾದಿಗಳನ್ನು ಆಂಧ್ರಭಾಷೆಯಲ್ಲಿ ಮುದ್ರಿಸಿರುವದನ್ನೂ ನಮಗೆ ತೋರಿಸಿ ಒಂದೊಂದು ಪ್ರತಿಗಳನ್ನು ಓದಲು ಕೊಟ್ಟರು.

ಶ್ರೀ॥ ಗುಪ್ತರೂ ಮಾತೆಯವರೂ ಭಕ್ತವೃಂದದವರ ಆಗ್ರಹದ ಮೇರೆಗೆ ನಮ್ಮ ಜೊತೆಯಲ್ಲಿರದೆ ಊರಲ್ಲಿಯೇ ಇರುತ್ತಿದ್ದರು. ಆಗಾಗ ಬಂದು ಹೋಗುತ್ತಿದ್ದರು. ನಮಗೆ

ಎಲ್ಲ ಸೌಕರ್ಯಗಳನ್ನೂ ಅಲ್ಲಿಯ ಜನಗಳು ಸರಿಯಾಗಿ ಒದಗಿಸಿದ್ದರು. ಪಶ್ಚಿಮ ಗೋದಾವರೀ ಜಿಲ್ಲೆಯಲ್ಲಿರುವ ಈ ಗ್ರಾಮವು ಗೋದಾವರೀ ನದಿಯ ಎಡದಂಡೆಯ ದೊಡ್ಡ ಕಾಲುವೆಯ ಅಂಚಿನಲ್ಲಿದ್ದು ಈ ಪ್ರದೇಶವೆಲ್ಲವೂ ಬಹಳ ಫಲವತ್ತಾದ ಭೂಮಿಯುಳ್ಳದ್ದಾಗಿದೆ. ನಾವು ಇಳಿದುಕೊಂಡಲ್ಲಿಯೂ ಸಹ ಕಾಲುವೆಯ ಒಂದು ಸಣ್ಣ ಶಾಖೆಯು ಹತ್ತಿರವೇ ಹರಿಯುತ್ತಿತ್ತು. ಇಲ್ಲಿಂದ ನಾವು ಪೀಠಾಪುರಕ್ಕೆ ಹೋಗಿ ತಿರುಗಿ ರೈಲಿಗೆ ಬರಬೇಕೆಂದಿಟ್ಟುಕೊಂಡಿದ್ದೆವು. ಆದರೆ ಅಲ್ಲಿಗೇ ಬಂದಿದ್ದ ರ್‍ಯಾಲಿಯ ಶ್ರೀ|| ನಾಗೇಶ್ವರರಾವ್ ಅವರು ಶ್ರೀಶ್ರೀಗಳನ್ನು ಬೋಟಿನಮೇಲೆ ಕರೆದುಕೊಂಡು ಹೋಗುವದು ಅಸಾಧ್ಯವಾದ್ದರಿಂದ ಈಗ ಬೇಡವೆಂದು ಸೂಚನೆಯಿತ್ತುದಕ್ಕಾಗಿಯೂ ಇಷ್ಟುಹೊತ್ತಿಗೆ ಪ್ರವಾಸದ ಆಯಾಸ, ಅಕಾಲಭೋಜನ, ಬೇರೆಬೇರೆ ನೀರು– ಇವುಗಳಿಂದಾಗಿ ಶ್ರೀಶ್ರೀಗಳವರ ದೇಹಸ್ಥಿತಿಯಲ್ಲಿ ನೆಗಡಿ, ಕೆಮ್ಮು–ಮುಂತಾದದ್ದು ಹೊರತೋರಿಕೊಂಡಿದ್ದರಿಂದಲೂ ರ್‍ಯಾಲಿಯ ಕಾರ್ಯಕ್ರಮವನ್ನು ರಹಿತಗೊಳಿಸಿದೆವು.

**11–11–63ನೇ ಸೋಮವಾರಃ–** ಈ ದಿನ ಬೆಳಗ್ಗೆ ಏಕಾದಶಿಯಾಗಿತ್ತು ನಮ್ಮ ಫಲಾಹಾರಾದಿಗಳನ್ನು 8 ಗಂಟೆಯೊಳಗಾಗಿ ತೀರಿಸಿ ಪ್ರಯಾಣಕ್ಕೆ ಸಿದ್ಧರಾದೆವು. ಶ್ರೀಶ್ರೀಗಳವರನ್ನು ಬೀಳ್ಕೊಡಲು ಜನಸಂದಣಿ ನೆರೆದಿತ್ತು. ಶ್ರೀಲಕ್ಷ್ಮೀನಾರಾಯಣ ಶ್ರೇಷ್ಠಿಯವರು ತಮ್ಮ ಕಾರನ್ನು ಸಿದ್ಧಪಡಿಸಿ ಹೊರಡುವಾಗ ತಮ್ಮ ಮನೆಗೆ ಕರೆದುಕೊಂಡು ಹೋಗಿ, ಶ್ರೀಶ್ರೀಗಳವರಿಗೆ ಭಕ್ತಿಪೂರ್ವಕವಾಗಿ ಕಾಣಿಕೆಗಳನ್ನರ್ಪಿಸಿ, ಆಶೀರ್ವಾದ ವನ್ನು ಪಡೆದರು. ಶ್ರೀಗಳ ಮತ್ತು ವಾಸವಾಂಬಾದೇವಿಯ ಜಯಜಯಕಾರದೊಡನೆ ನಮ್ಮ ಪ್ರಯಾಣವು ಆರಂಭವಾಯಿತು. ಒಟ್ಟಿನಲ್ಲಿ ಶ್ರೀಶ್ರೀಗಳವರ ಆಗಮನ ಮತ್ತು ಉಪದೇಶಗಳಿಂದ ಈ ಗ್ರಾಮದ ಜನಗಳ ಮನಸ್ಸಿಗೆ ಹೆಚ್ಚಿನ ಪರಿಣಾಮವಾಯಿತೆಂಬುದು ಸ್ಪಷ್ಟ ಕಾಣುವಂತಿತ್ತು. ಶ್ರೀ ಗುಪ್ತರು ಈ ಹಿಂದೆ ಕೆಲ ತಿಂಗಳುಗಳವರೆಗೆ ಇದ್ದು ನಿರ್ಮಿಸಿದ್ದ ಅಧ್ಯಾತ್ಮವಿಚಾರದ ಪ್ರಚಾರವೆಂಬ ದೇವಾಲಯಕ್ಕೆ ಈಗ ಶ್ರೀಶ್ರೀಗಳವರ ಆಗಮನದಿಂದ ಕಳಸವಿಟ್ಟಂತಾಗಿತ್ತು–ಎಂದು ಹೇಳಬಹುದು. ನಮ್ಮ ಕಾರು ಹೊರಟು 4 ಮೈಲುಗಳಿಗೆ ರಸ್ತೆಯು ಕಾಲುವೆಯ ರಿಪೇರಿಯ ಮೂಲಕ ಕೆಟ್ಟುಹೋಗಿದ್ದದ್ದರಿಂದ ಹಿಂದಿರುಗಿ ಬಂದು ಬೇರೊಂದು ಸುತ್ತುವರಿದ ದಾರಿಯಿಂದ ಹೋಗಿ ಮಧ್ಯಾಹ್ನ 12 ಘಂಟೆಗೆ ನಿಡದವೋಲು ಸ್ಟೇಷನ್ನಿಗೆ ತಲುಪಿದೆವು. ಅಲ್ಲಿಂದ ಮಧ್ಯಾಹ್ನ 2 ಘಂಟೆಯ ರೈಲಿನಿಂದ ಹೊರಟು ಸಾಯಂಕಾಲ 6 ಘಂಟೆಗೆ ಪೀಠಾಪುರವನ್ನು ಸೇರಿದೆವು.

# ಶ್ರೀಶ್ರೀಗಳವರ ಆಂಧ್ರಪ್ರದೇಶದ ಪ್ರವಾಸವಾರ್ತೆ–5

## ಪೀಠಾಪುರಂ, ತಾ|| 11–11–63

## (ಮೇ 1964)

ಸೋಮವಾರ ಸಾಯಂಕಾಲ 6 ಗಂಟೆಗೆ ಪೀಠಾಪುರವನ್ನು ತಲುಪುವ ರೈಲಿಗೆ ಬರುವದಾಗಿ ಅಲ್ಲಿಯ ಸುಪ್ರಸಿದ್ಧ ವಿದ್ವನ್ಮಣಿಗಳಾದ ತರ್ಕ, ನ್ಯಾಯ, ವ್ಯಾಕರಣ, ವೇದಾಂತಕೇಸರಿ, ಬಾಲವ್ಯಾಸ, ಮಹಾಮಹೋಪಾಧ್ಯಾಯ ಬ್ರ||ಶ್ರೀ|| ವಾರಣಾಸಿ ಸುಬ್ರಹ್ಮಣ್ಯಶಾಸ್ತ್ರಿಗಳವರಿಗೆ ಪತ್ರ ಮುಖದಿಂದ ತಿಳಿಸಿತ್ತಾದ್ದರಿಂದ ಪೀಠಾಪುರಕ್ಕಿಂತ ಹಿಂದೆ ಇರುವ ಸಾಮರ್ಲಿತೋಪ್ ಜಂಕ್ಷನ್ನಿಗೆ ತಮ್ಮವರೊಬ್ಬರನ್ನು ಮೊದಲೇ ಅವರು ಕಳಿಸಿದ್ದರು.

ದಿ. 12–11–63ನೇ ಮಂಗಳವಾರದಿಂದ ಮೂರು ದಿನಗಳವರೆಗೆ ಶ್ರೀ ದತ್ತಾತ್ರೇಯಸ್ವಾಮಿಯ ಪ್ರಥಮಾವತಾರವಾದ ಶ್ರೀಪಾದಶ್ರೀವಲ್ಲಭಸ್ವಾಮಿಗಳ ಜನ್ಮಸ್ಥಳವಾದ ಈ ಪುಣ್ಯಕ್ಷೇತ್ರದಲ್ಲಿ ಆ ಗುರುಗಳ ಆರಾಧನಾಮಹೋತ್ಸವವನ್ನು ಆಚರಿಸಬೇಕೆಂದು ಮೊದಲೇ ಗೊತ್ತುಪಡಿಸಲಾಗಿತ್ತು. ಈ ಆಶ್ವೀಜ ಬಹುಳ ದ್ವಾದಶಿಗೆ **ಗುರುದ್ವಾದಶೀ** ಎಂದು ಹೆಸರು. ಶ್ರೀ ದತ್ತಭಕ್ತರಿಗೆಲ್ಲ ಇದು ಮಹತ್ತ್ವದ ದಿನವು. ಮಹಾರಾಷ್ಟ್ರದಲ್ಲಿಯೂ ಉತ್ತರ ಕರ್ನಾಟಕದಲ್ಲಿಯೂ ದತ್ತಕ್ಷೇತ್ರಗಳಲ್ಲಿ ಈ ದಿನವನ್ನು ದೊಡ್ಡ ಉತ್ಸವದ ದಿನವನ್ನಾಗಿ ಆಚರಿಸುವರು. ಆದರೆ ಅದೇನು ಭಗವಂತನ ಮಾಯೆಯೊ ಏನೊ, ಶ್ರೀ ಪಾದ ಶ್ರೀವಲ್ಲಭರ ಜನ್ಮಭೂಮಿಯಾದ ಈ ಕ್ಷೇತ್ರದಲ್ಲಿ ಮಾತ್ರ ಶ್ರೀದತ್ತಾತ್ರೇಯಸ್ವಾಮಿಯ ದೇವಸ್ಥಾನವೂ ಸ್ಥಳಚರಿತ್ರೆಯೂ ಇದ್ದರೂ ಈ ಪ್ರಾಂತದ ಜನಗಳಿಗೆ ಅದು ತಿಳಿಯದಾಗಿತ್ತು. ನಾನು ಹೋದ ಸಲ ಈ ಪ್ರಾಂತದಲ್ಲಿ ಕಾಲಿರಿಸಿದಾಗ ಪ್ರಪ್ರಥಮವಾಗಿ ಈ ಊರಿಗೆ ಇಳಿದು ಬಹಳ ಪ್ರಯಾಸದಿಂದ ಮಾಘ ಬಹುಳ ಪ್ರತಿಪದೆ (ಗುರುಪ್ರತಿಪದೆ) ಯ ದಿನ ಈ ದೇವಸ್ಥಾನವನ್ನು ಕಂಡುಹಿಡಿಯಬೇಕಾಯಿತು. ಆಗ ನಾನು ಈ ದೇಶದಿಂದ ಮರಳಿ ಬರುವಾಗ ಬ್ರ||ಶ್ರೀ|| ವಾರಣಾಸಿ ಸುಬ್ರಹ್ಮಣ್ಯಶಾಸ್ತ್ರಿಗಳವರ ಸಹಾಯದಿಂದ ಇಲ್ಲಿ ಎರಡು ದಿನವಿದ್ದು ಜನಗಳಿಗೆಲ್ಲ ಇದು ದತ್ತಾತ್ರೇಯ ಭಗವಂತನ ಪ್ರಥಮಾವತಾರವಾದ ಶ್ರೀಪಾದ ಶ್ರೀವಲ್ಲಭರ ಜನ್ಮಸ್ಥಳ–ಎಂಬುದನ್ನು ತಿಳಿಸಿ ಇಲ್ಲಿರುವ ದತ್ತದೇವಸ್ಥಾನವನ್ನು ಅಭಿವೃದ್ಧಿಪಡಿಸಲು ಬಿನ್ನವಿಸಿ ಬಂದಿದ್ದೆನು. ಆ ಮೇರೆಗೆ ಈ ಸಲ ದೇವಸ್ಥಾನವನ್ನು ಅಭಿವೃದ್ಧಿಪಡಿಸಲಾಗಿತ್ತು.

ಈ ಸಲ ಬ್ರ॥ಶ್ರೀ॥ ಸುಬ್ರಹ್ಮಣ್ಯಶಾಸ್ತ್ರಿಗಳವರೇ ಮುಂದಾಳಾಗಿ ನಿಂತು, ಕರಪತ್ರಗಳನ್ನು ಹಂಚಿ ಶ್ರೀಶ್ರೀಗಳವರ ಆಗಮನದ ಹಾಗೂ ಶ್ರೀಪಾದಶ್ರೀವಲ್ಲಭ ಸ್ವಾಮಿಯವರ ಆರಾಧನೋತ್ಸವದ ಕಾರ್ಯಕ್ರಮಗಳನ್ನು ಪ್ರಕಟಿಸಿದ್ದರು. ಸಾಮಲತೋಪಿನಲ್ಲಿ ನಮ್ಮನ್ನು ಕೂಡಿಕೊಂಡ ವೈದಿಕರೊಬ್ಬರು ಅಲ್ಲಿಯೇ ಈ ಕರಪತ್ರಗಳನ್ನು ನಮಗೆ ತೋರಿಸಿದರು. ಸಾಯಂಕಾಲ ರೈಲು ತಡವಾದ್ದರಿಂದ 7 ಘಂಟೆಗೆ ಪೀಠಾಪುರವನ್ನು ತಲುಪಿದೊಡನೆಯೇ ಪೀಠಾಪುರದ ಬ್ರಹ್ಮವೃಂದದ ಇಪ್ಪತ್ತು ಜನಗಳೂ ಕೆಲವು ಪ್ರತಿಷ್ಠಿತಸದ್ಗೃಹಸ್ಥರೂ ಶ್ರೀಶ್ರೀಗಳವರ ಸ್ವಾಗತಕ್ಕಾಗಿ ನಿಂತಿದ್ದರು. ಸ್ಟೇಷನ್ನಿನಿಂದ ಹೊರಟು ಊರಿಗೆ ಅನತಿದೂರದಲ್ಲಿರುವ ಬಾದಂರವರ ಛತ್ರದಲ್ಲಿ ನಮಗೆಲ್ಲ ನಿವಾಸಕ್ಕೆ ಏರ್ಪಾಡು ಮಾಡಲಾಗಿದ್ದಿತು.

ಛತ್ರವು ಪ್ರಶಸ್ತವಾಗಿದ್ದು ಸಕಲಸೌಕರ್ಯಗಳಿಂದಲೂ ಕೂಡಿದೆ. ಈ ಹಿಂದೆ ಶ್ರೀ ಶೃಂಗೇರಿಜಗದ್ಗುರುಗಳು ಬಂದಾಗ ವಸತಿಗಾಗಿ ಏರ್ಪಡಿಸಿದ ನಿವಾಸದಲ್ಲಿಯೇ ಶ್ರೀಶ್ರೀಗಳವರಿಗೆ ಬಿಡಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಬ್ರ॥ಶ್ರೀ॥ ಸುಬ್ರಹ್ಮಣ್ಯ ಶಾಸ್ತ್ರಿಗಳವರು ಅನಿವಾರ್ಯಕಾರಣದ ಮೂಲಕ ಪರಸ್ಥಳಕ್ಕೆ ಹೋದವರು ಆ ದಿನ ಬಂದಿತ್ತಿಲ್ಲವಾದರೂ ಅವರ ಜ್ಯೇಷ್ಠ ಪುತ್ರರೂ, ಅಳಿಯಂದಿರೂ ಅನೇಕ ಬ್ರಾಹ್ಮಣರೊಡನೆ ಬಂದು ಬಹು ವೈಭವದಿಂದ ಶ್ರೀಶ್ರೀಗಳವರ ಸ್ವಾಗತವನ್ನು ಮಾಡಿದರು. ನಮ್ಮ ಜೊತೆಗೆ ಬೆಜವಾಡದಿಂದಲೂ ಬಂದಿದ್ದ ಅನಕಾಪಲ್ಲಿ ಶ್ರೀ॥ ಚದುವಲ ರಾಮರಾಯರು ಒಂದು ದಿನ ಮುಂಗಡವಾಗಿಯೇ ಇಲ್ಲಿಗೆ ಬಂದಿದ್ದು ನಮಗಾಗಿ ಎಲ್ಲ ವ್ಯವಸ್ಥೆಯನ್ನೂ ಸರಿಯಾಗಿ ಇಟ್ಟಿದ್ದರು.

ಪೀಠಾಪುರವು ಒಂದು ಮಹಾಕ್ಷೇತ್ರವು. ಮುಖ್ಯವಾಗಿ ಇಲ್ಲಿ ಶ್ರೀ ಕುಕ್ಕುಟೇಶ್ವರ ದೇವಸ್ಥಾನವು ಪುರಾಣಪ್ರಸಿದ್ಧವಾದದ್ದು. ಈ ದೇವಸ್ಥಾನವು ನಾವು ಇಳಿದುಕೊಂಡ ಸ್ಥಳಕ್ಕೆ ಅತಿ ಹತ್ತಿರದಲ್ಲಿದೆ. ಅಂದರೆ ಊರಿಗೆ 2–3 ಫರ್ಲಾಂಗ ದೂರದಲ್ಲಿದೆ. ಈ ದೇವಸ್ಥಾನದ ಆವರಣದಲ್ಲಿ ಕಾಲಿಟ್ಟೊಡನೆಯೇ ಸ್ನಾನಯೋಗ್ಯವಾದ ಸಿಹಿನೀರಿನಿಂದ ಸಮೃದ್ಧವಾದ ದೊಡ್ಡದೊಂದು ಪುಷ್ಕರಿಣಿಯು ಕಣ್ಣಿಗೆ ಬಿತ್ತು. ಇದಕ್ಕೆ ಪಾದಗಯಾತೀರ್ಥವೆಂದು ಹೆಸರು. ಇಲ್ಲಿ ಸ್ನಾನಮಾಡಿ ಶ್ರಾದ್ಧಾದಿಗಳನ್ನು ಆಚರಿಸಿದರೆ ಗಯಾಶ್ರಾದ್ಧಫಲವೆಂದು ಸ್ಥಳಪುರಾಣಪ್ರಸಿದ್ಧಿಯಿದೆ. ಒಳಗೆ ಮಧ್ಯದಲ್ಲಿ ಶ್ರೀ ಕುಕ್ಕುಟೇಶ್ವರಸ್ವಾಮಿಯ ದೇವಸ್ಥಾನವಿದೆ. ಲಿಂಗವು ಒಂದು ಹುಂಜವು ತನ್ನ ಪುಕ್ಕಗಳನ್ನು ಕೆದರಿನಿಂತಾಗ ಹೇಗಿರಬೇಕೋ, ಅದೇ ಆಕಾರ ಅದೇ ಬಣ್ಣದ ಸ್ವಯಮುದ್ಭವಲಿಂಗವಿದೆ. ಅಗಸ್ತ್ಯಮಹಾಮುನಿಗಳ ತಪಃಪ್ರಭಾವಕ್ಕೆ ಮೆಚ್ಚಿದ ಈಶ್ವರನು ಇಲ್ಲಿ ಕುಕ್ಕುಟರೂಪವನ್ನು

ಧರಿಸಿದನೆಂದು ಸ್ಥಳಪುರಾಣವು ತಿಳಿಸುತ್ತಿದೆ. ಗರ್ಭಗುಡಿಯಲ್ಲಿ ಲಿಂಗದ ಎಡಗಡೆಗೆ ಶ್ರೀ ಓಂಕಾರೇಶ್ವರೀ ಅಮ್ಮನವರ ವಿಗ್ರಹವಿದ್ದು ಬಹುಸುಂದರವಾದ ಕರಿಯ ಶಿಲಾವಿಗ್ರಹವಾಗಿದೆ. ಇನ್ನೊಂದುಕಡೆಗೆ ಉತ್ಸವಮೂರ್ತಿಗಳಿವೆ. ಹೊರಗಿನ ಪ್ರಾಕಾರದಲ್ಲಿ ದೊಡ್ಡ ನಂದೀಶ್ವರನೂ ದ್ವಾರಪಾಲಕರೂ ಇದ್ದಾರೆ. ದೇವಸ್ಥಾನದ ಪೂಜಾವಿಧಾನಾದಿಗಳು ಯಥಾಪ್ರಕಾರವಾಗಿ ನಡೆಯುತ್ತಿವೆ. ಮಹಾಶಿವರಾತ್ರಿಯಲ್ಲಿ ವಾರ್ಷಿಕಜಾತ್ರೆಯು ಬಹುದೊಡ್ಡಪ್ರಮಾಣದಲ್ಲಿ ನಡೆಯುತ್ತಿದೆ. ದೇವಸ್ಥಾನಕ್ಕೆ ಟ್ರಸ್ಟ್ ಕಮಿಟಿ ಇದ್ದು ಅದು ಮುಜರಾಯಿಗೆ ಸೇರಿದೆ. ಪ್ರತಿ ಅಮಾವಾಸ್ಯೆಯಲ್ಲಿ ನೂರಾರು ಜನರು ಪಾದಗಯಾಸ್ನಾನ ಹಾಗೂ ಶ್ರಾದ್ಧಾದಿಗಳನ್ನು ಮಾಡಲು ಬೇರೆಬೇರೆಯ ಕಡೆಗಳಿಂದ ಇಲ್ಲಿಗೆ ಬರುತ್ತಾರೆ. ಊರಿನಲ್ಲಿರುವ ಅನೇಕಜನ ಬ್ರಾಹ್ಮಣರು ಇಲ್ಲಿ ಪಾದಗಯಾಸ್ನಾನ ಅನುಷ್ಠಾನಗಳನ್ನು ಮಾಡಿಕೊಳ್ಳುವರಲ್ಲದೆ ಭಕ್ತಾದಿಗಳು ಮಾಡಿಸುವ ಪೂಜಾಶ್ರಾದ್ಧಾದಿಗಳೆಲ್ಲಕ್ಕೂ ಚೆನ್ನಾಗಿ ನೆರವಾಗುತ್ತಾರೆ. ಮುಖ್ಯದೇವಸ್ಥಾನದ ಸುತ್ತಲೂ ಬೇರೆಬೇರೆಯ ಚಿಕ್ಕಚಿಕ್ಕ ದೇವಾಲಯಗಳಿವೆ. ಅದರಲ್ಲಿ ಮೊದಲು ದಕ್ಷಿಣ ದಿಕ್ಕಿಗೆ ಸುಂದರವಾದ ಗಣಪತಿಯ ದೇವಾಲಯವಿದೆ. ಇಲ್ಲಿ ಮೊದಲು ಪೂಜೆಯನ್ನು ಮುಗಿಸಿಕೊಂಡೇ ಒಳಗಡೆ ಸ್ವಾಮಿಯಪೂಜೆಗೆ ಹೋಗುವ ಪದ್ಧತಿ ಇದೆ. ನೈರುತ್ಯದಿಶೆಯಲ್ಲಿ ಚಿಕ್ಕದಾದ ಶ್ರೀದತ್ತಾತ್ರೇಯಮಂದಿರವಿದೆ. ಮೂರ್ತಿಯು ಕರಿಯ ಶಿಲೆಯಲ್ಲಿದ್ದು ಮೂರುಮುಖ, ಎರಡುಪಾದ ಹಾಗೂ ನಾಲ್ಕು ಕೈಗಳುಳ್ಳದ್ದು. ಸಾಮಾನ್ಯವಾಗಿ ಎಲ್ಲಾ ಕಡೆಗೂ ದತ್ತಾತ್ರೇಯನಿಗೆ ಆರು ಕೈಗಳಿರುತ್ತವೆ; ಇಲ್ಲಿ ಮಾತ್ರ ನಾಲ್ಕು ಕೈಗಳಿವೆ. ಮೂರ್ತಿಯು ಬಹಳ ಹಿಂದಿನ ಕಾಲದ್ದೆಂದು ಗೊತ್ತಾಗುತ್ತದೆ. ಈ ಬಗ್ಗೆ "ಪೀಠಾಪುರಮಹಾತ್ಮ್ಯೆ" ಎಂಬ ಗ್ರಂಥದಲ್ಲಿ ಬರೆದ ಕಥೆಯ ಅತಿ ಸಂಕ್ಷಿಪ್ತಸಾರವು ಇಂತಿದೆ:

ತ್ರಿಮೂರ್ತಿಗಳ ಸ್ವರೂಪನಾದ ಪರಮೇಶ್ವರನು ಕೃತಯುಗದಲ್ಲಿ ಅತ್ರಿಋಷಿ ಪತ್ನಿಯಾದ ಅನಸೂಯಾದೇವಿಯಲ್ಲಿ ದತ್ತಾತ್ರೇಯನೆಂಬ ಹೆಸರಿನಿಂದ ಅವತರಿಸಿದ ಬಳಿಕ ಅವಧೂತವೃತ್ತಿಯಿಂದ ಸಂಚರಿಸುತ್ತ ಪರುಶುರಾಮಸುಬ್ರಹ್ಮಣ್ಯಾದಿಗಳಿಗೆ ಜ್ಞಾನಬೋಧೆಮಾಡುತ್ತ ಸಂಚರಿಸುತ್ತಿರುವಾಗ ಸುಮಾರು ಆರುನೂರು ವರ್ಷಗಳ ಕೆಳಗೆ ಪೂರ್ವಸಮುದ್ರದ ನೆರೆಯಲ್ಲಿರುವ ಈ ಕ್ಷೇತ್ರಕ್ಕೆ ಬಂದನು. ಪ್ರತಿದಿನವೂ ಭಿಕ್ಷಾಟನೆಗಾಗಿ ಗ್ರಾಮದಲ್ಲಿ ಸಂಚರಿಸುತ್ತಿದ್ದನು. ಅಲ್ಲಿದ್ದ ಅಫಲರಾಜ, ಸುಮತಿ–ಎಂಬ ಬ್ರಾಹ್ಮಣ ದಂಪತಿಗಳು ಭಗವದ್ಭಕ್ತರೂ ಸದಾಚಾರಸಂಪನ್ನರೂ ಆಗಿದ್ದರು. ಇವರಲ್ಲಿ ಸ್ವಾಮಿಯು ನಿತ್ಯವೂ ಭಿಕ್ಷೆಗೆಬರುತ್ತಿದ್ದನು. ಒಂದು ದಿನ ಪಿತೃಶ್ರಾದ್ಧವಿದ್ದು ಆ ದಿನವೂ ಭಗವಂತನಾದ ಶ್ರೀ ದತ್ತಾತ್ರೇಯಸ್ವಾಮಿಗೆ ಭಕ್ತಿಯಿಂದ ಸುಮತೀದೇವಿಯು ಭಿಕ್ಷೆಹಾಕಿದ್ದರಿಂದ ಸ್ವಾಮಿಯು

ಪ್ರಸನ್ನನಾಗಿ ''ತಾಯಿ, ನಿನಗೇನು ಬೇಕು? ಕೇಳಿಕೊ''ಎಂದನಂತೆ. ಆಗ ಆಕೆ ''ಸರ್ವಜ್ಞನಾದ ಭಗವಂತನೆ, ನೀನೇ ನನಗೆ ಮಗನಾಗಿ ಹುಟ್ಟಿ ಈಗ 'ತಾಯಿ' ಎಂದು ನನ್ನನ್ನು ಸಂಬೋಧಿಸಿದ ಮಾತು ಸತ್ಯವಾಗುವಂತೆ ಮಾಡು''ಎಂದು ಕೇಳಿದಳು. ಆಗ ಸ್ವಾಮಿಯು ಅದಕ್ಕೊಪ್ಪಿ ''ನಾನು ಜಗದುದ್ಧಾರಕ್ಕೆ 'ಶ್ರೀಪಾದ ಶ್ರೀವಲ್ಲಭ' ಎಂಬ ಹೆಸರಿನಿಂದ ನಿನ್ನ ಗರ್ಭದಲ್ಲಿ ಜನಿಸುತ್ತೇನೆ. ಆದರೆ ಹದಿನಾರನೆಯ ವರುಷವಾದೊಡನೆಯೇ ವೈರಾಗ್ಯದಿಂದ ಹೊರಟು ಸ್ಮಾರ್ತ ಸಂನ್ಯಾಸವನ್ನು ಸ್ವೀಕರಿಸುತ್ತೇನೆ. ಆಗ ತಾಯಿತಂದೆಗಳಾದ ನೀವು ನನ್ನನ್ನು ನಿರ್ಬಂಧಪಡಿಸಬಾರದು ಎಂದು ಹೇಳಿದನು. ಅದರಂತೆಯೇ ಇಲ್ಲಿ ಅವತಾರ ಮಾಡಿ ಹದಿನಾರನೆಯ ವರುಷದಲ್ಲಿ ಮನೆಯಿಂಪ ಹೊರಡುವಾಗ ಎಲ್ಲರೂ ಶೋಕಿಸುತ್ತಿರಲು ಹಿಂದೆ ಭಿಕ್ಷೆಗೆ ಬಂದಾಗಿನ ತ್ರೈಮೂರ್ತಿ ಶ್ರೀ ದತ್ತಾತ್ರೇಯನ ರೂಪದಿಂದ ದರ್ಶನವನ್ನಿತ್ತು, ಸಕಲರಿಗೂ ಆನಂದವನ್ನುಂಟುಮಾಡಿದನು. ಆಗ ಯಾವ ರೂಪದಿಂದ ದರ್ಶನವನ್ನಿತ್ತನೋ ಅದೇ ರೂಪದಿಂದ ಇಲ್ಲಿಯ ಈಗಿನ ಮೂರ್ತಿಗಳನ್ನು ಮಾಡಿಸಿ ಶ್ರೀ ಕುಕ್ಕುಟೇಶ್ವರಸ್ವಾಮಿಯ ದೇವಸ್ಥಾನದ ನೈಋತ್ಯದಿಶೆಯಲ್ಲಿ ಅಫಲರಾಜನೂ ಹಾಗೂ ಸುಮತಿಯೂ ಸ್ಥಾಪಿಸಿದರು.''

ಸಾಮಾನ್ಯವಾಗಿ ಎಲ್ಲ ಗುರುಚರಿತ್ರೆಗಳಲ್ಲಿಯೂ ಸ್ವಲ್ಪ ಹೆಚ್ಚು ಕಡಿಮೆಯಾಗಿ ಇದೇ ರೀತಿಯಿಂದ ಕಥೆಯು ಬಂದಿದೆ. ಅಂತೂ ಇದು ಭಗವಂತನು ಶ್ರೀಪಾದ ಶ್ರೀವಲ್ಲಭಾವತಾರವನ್ನು ಮಾಡಿದ ದತ್ತಕ್ಷೇತ್ರವಾಗಿದೆ.

ಸಾಮಾನ್ಯವಾಗಿ ಕರ್ನಾಟಕದ ಶ್ರೀ ದತ್ತಭಕ್ತರಿಗೆ ಪೀಠಾಪುರದ ವಿಚಾರವು ತಿಳಿಯದು. ಆದ ಕಾರಣ ಆ ಬಗ್ಗೆ ಇಲ್ಲಿ ಒಂದೆರಡು ಮಾತನ್ನು ಉಪಯುಕ್ತವೆಂದು ಬರೆಯುತ್ತೇನೆ. (1) ಪೀಠಾಪುರವು ಬೆಜವಾಡ ವಾಲ್ಟೇರ್ ನಡುವೆ ಇದೆ. (ಮದ್ರಾಸ್ ಕಲಕತ್ತಾ ಮಾರ್ಗ). (2) ಇಲ್ಲಿ ಕನ್ನಡಿಗರಾದ ಬ್ರಾ॥ಶ್ರೀ॥ ಎನ್. ಕಾಶೀಪತಿಶಾಸ್ತ್ರಿಗಳು ಎಂಬವರು ವೇದಪಾಠಶಾಲೋಪಾಧ್ಯಾಯರಿದ್ದು ಶ್ರೀ ದತ್ತಾತ್ರೇಯನ ಆರಾಧಕರೂ ಭಕ್ತರೂ ಆಗಿದ್ದಾರೆ. (ಇವರು ಮೈಸೂರಿನವರು). ಇಲ್ಲಿಯೇ ಕಳೆದ ಇಪ್ಪತ್ತೈದು ವರ್ಷಗಳಿಂದ ಸ್ವಂತಮನೆಯನ್ನು ಮಾಡಿಕೊಂಡು ಇದ್ದಾರೆ. ದತ್ತಭಕ್ತರು ಇವರಿಗೆ ಕನ್ನಡದಲ್ಲಿ ಬರೆದು ಶ್ರೀದತ್ತಪೂಜಾದಿಗಳನ್ನು ಮಾಡಿಸಿ ಪ್ರಸಾದವನ್ನು ಟಪಾಲು ಮೂಲಕವಾಗಿ ಪಡೆಯಬಹುದು. (ವಿಳಾಸ:- ಬ್ರಾ॥ಶ್ರೀ॥ಎನ್. ಕಾಶೀಪತಿಶಾಸ್ತ್ರಿ, ಬಾರುವಾರ ಬೀದಿ, P.O. ಪೀಠಾಪುರಂ, ಈಸ್ಟ್ ಗೋದಾವರಿ ಡಿಸ್ಟ್ರಿಕ್ಟ್ A.P. ಎಂದು ಬರೆಯಬೇಕು).

ತಾ|| 12–11–63ನೆಯ ದ್ವಾದಶೀ (ಗುರುದ್ವಾದಶೀ) ದಿನ ಮೊದಲೇ ನಿಶ್ಚಯಿಸಿದ್ದಂತೆ ಬೆಳಗ್ಗೆ ಶ್ರೀ ಕುಕ್ಕುಟೇಶ್ವರನಿಗೆ ಏಕವಾರ ರುದ್ರಾಭಿಷೇಕ ಶ್ರೀ ರಾಜರಾಜೇಶ್ವರೀ ಅಮ್ಮನವರಿಗೆ ಸಹಸ್ರನಾಮ ಕುಂಕುಮಾರ್ಚನ, ಹಾಗೂ ಶ್ರೀ ದತ್ತಾತ್ರೇಯಸ್ವಾಮಿಗೆ ಮಹಾನ್ಯಾಸಪೂರ್ವಕ ಏಕಾದಶಾವರ್ತನ ರುದ್ರಾಭಿಷೇಕಾದಿಗಳು 11 ಗಂಟೆಯವರೆಗೆ ನಡೆದು ಬಳಿಕ ಶ್ರೀ ದತ್ತಾತ್ರೇಯಸ್ವರೂಪರಾದ ಶ್ರೀಶ್ರೀಗಳವರಿಗೆ ಪಾದಪೂಜೆಯು ಆಯಿತು. ಈ ಪೀಠಾಪುರದ ಕಾರ್ಯಕ್ರಮವನ್ನು ಮೊದಲೇ ತಿಳಿಸಿದ್ದದ್ದರಿಂದ ಅನಕಾಪಲ್ಲಿಯಲ್ಲಿರುವ ಶ್ರೀಶ್ರೀಗಳ ಪರಮಭಕ್ತರಾದ ಡಾಕ್ಟರ್ ಶ್ರೀ|| ಜಿ.ವಿ.ಎಲ್. ನರಸಿಂಹನ್‌ರವರೂ ದತ್ತಭಕ್ತರಾದ ತಮ್ಮನ ಗಂಗರಾಜಶ್ರೇಷ್ಠಿಯವರೂ ಮೊದಲಿನ ದಿನವೇ ಬಂದಿದ್ದರು. ಅವರೂ ಈ ಪಾದಪೂಜೆಯಲ್ಲಿ ಭಾಗವನ್ನು ವಹಿಸಿದರು. ಊರಿನಲ್ಲಿಯ ಅನೇಕರು ಈ ಪೂಜಾಕಾಲಕ್ಕೆ ಬಂದಿದ್ದರು. ಪಾದಪೂಜೆ ಯಾದ ಮೇಲೆ ನಾನು ಆಂಧ್ರದಲ್ಲಿ ಶ್ರೀಪಾದಶ್ರೀವಲ್ಲಭಸ್ವಾಮಿಯ ಚರಿತ್ರೆಯನ್ನು ಸಂಕ್ಷೇಪವಾಗಿ ಹೇಳಿ ಈ ದಿನವು ಆ ಅವತಾರದ ನಿರ್ಯಾಣಮಹೋತ್ಸವವೆಂಬುದನ್ನು ತಿಳಿಸಿದಾಗ ಪೀಠಾಪುರದ ನಾಗರಿಕರೆಲ್ಲರೂ ಹರ್ಷೋದ್ಗಾರಗಳಿಂದ ಭಗವನ್ನಾಮ ಘೋಷಣೆಯನ್ನು ಮಾಡಿದರು.

ಶ್ರೀದತ್ತಮಂದಿರವೇ ಅಲ್ಲದೆ ಶ್ರೀರಾಮಪಂಚಾಯತನ, ಶ್ರೀಶಂಕರಾಚಾರ್ಯರು, ಶ್ರೀ ಕಾಶೀವಿಶ್ವನಾಥ, ಅನ್ನಪೂರ್ಣಾ, ನವಗ್ರಹ, ಸುಬ್ರಹ್ಮಣ್ಯದೇವಸ್ಥಾನಗಳೂ ಪಶ್ಚಿಮ ಭಾಗಕ್ಕೆ ಇವೆ. ಉತ್ತರಕ್ಕೆ ಚಂಡಿಕೇಶ್ವರ, ಕಾಲಭೈರವ, ದುರ್ಗಿ–ಮುಂತಾದ ದೇವಾಲಯಗಳಿವೆ. ಅಂತೂ ಕಾಶೀಕ್ಷೇತ್ರದಲ್ಲಿ ಏನಿರಬೇಕೋ ಅದೆಲ್ಲಾ ಇಲ್ಲಿ ಇದೆ. ಆದ್ದರಿಂದ ಇದು ಪೂರ್ವದೇಶದ ಕಾಶೀ ಪಟ್ಟಣವೆನಿಸಿದೆ. ಈ ರೀತಿಯಾಗಿರುವ ಆ ದೇವಸ್ಥಾನವನ್ನೆಲ್ಲವನ್ನೂ ನೋಡಿಕೊಂಡು ನಮ್ಮ ನಿವಾಸಕ್ಕೆ ಮಧ್ಯಾಹ್ನ 12 ½ ಗಂಟೆಗೆ ತೆರಳಿದೆವು.

ಸಾಯಂಕಾಲ 6 ½ ಯಿಂದ 8 ½ ರವರೆಗೆ ಊರ ಮಧ್ಯದಲ್ಲಿರುವ ಶ್ರೀ ವೇಣುಗೋಪಾಲಸ್ವಾಮಿಯ ದೇವಸ್ಥಾನದಲ್ಲಿ ಉಪನ್ಯಾಸಕ್ಕೆ ಏರ್ಪಾಡಾಗಿದ್ದಿತು. ಸುಮಾರು 300–400 ಜನರು ಸೇರಿದ್ದರು. ಮೊದಲು ನಾನು ಶ್ರೀ ದತ್ತಕಥೆಯನ್ನು ಕನ್ನಡದಲ್ಲಿ ಹೇಳುತ್ತಿದ್ದೆನು. ಆಮೇಲೆ ಶ್ರೀಗಳವರು ವ್ಯಾಖ್ಯಾನ ಮಾಡುತ್ತಿದ್ದರು. ಇವೆರಡನ್ನೂ ಶ್ರೀ ಗುಪ್ತರು ಆಂಧ್ರೀಕರಿಸುತ್ತಿದ್ದರು. ದಿ. 12ನೇ ದಿನ ನಾನು ದತ್ತಾವತಾರ ಚರಿತ್ರೆಯನ್ನು ಹೇಳಿದೆನು. ಶ್ರೀಶ್ರೀಗಳವರು "ಭಗವಂತನ ಅವತಾರದ ರಹಸ್ಯ" ಎಂಬ ಬಗ್ಗೆ ಅತೀವ ಹೃದಯಂಗಮವಾಗುವಂತೆ ಉಪನ್ಯಾಸಮಾಡಿ ಸರ್ವರನ್ನೂ

ಭಗವತ್ಸನ್ನಿಧಾನದ ಭಾವನಾಸಮುದ್ರದಲ್ಲಿ ತೇಲಿಸಿಬಿಟ್ಟರು. ಎರಡನೆಯ ದಿನ ದಿ. 13–11–63ರಲ್ಲಿನಾನು ಶ್ರೀ ಪಾದಶ್ರೀವಲ್ಲಭಾವತಾರವನ್ನು ಹೇಳಿದೆನು, ಶ್ರೀಶ್ರೀಗಳವರು ''ಮಮ ಪರ್ವಾನುಮೋದನಮ್''ಎಂಬ ಭಾಗವತದ ವಚನದ ಆಧಾರದಿಂದ ಭಗವಂತನ ಅವತಾರದ ಲೀಲೆಯನ್ನು ಮನದಂದುಕೊಂಡು ಸ್ತೋತ್ರಾಭಿನಯಾದಿಗಳಿಂದ ಭಗವನ್ಮಹಿಮೆಯನ್ನು ಮನಸ್ಸಿಗೆ ಅಂಟಿಸಿಕೊಳ್ಳುವದೇ ಪರ್ವಾನುಮೋದನವೆಂದು ಕೆಲವು ಸಂತರ ಚರಿತ್ರೆಯೊಂದಿಗೆ ವಿವರಿಸಿ ಭಗವದ್ಭಕ್ತಿಯ ರಸವನ್ನು ಎಲ್ಲರಲ್ಲಿಯೂ ಉಕ್ಕಿಸಿದರು.

ಮೂರನೆಯ ದಿನ (ದಿ. 14–11–63ರಲ್ಲಿ) ನಾನು **ಶ್ರೀ ನರಸಿಂಹಸರಸ್ವತೀ** ಅವತಾರದ ಕಥೆಯನ್ನು ಹೇಳಿದ ಮೇಲೆ ಶ್ರೀಶ್ರೀಗಳವರು ''ಭಗವದ್ಭಕ್ತಿಯಿಂದ ನಮ್ಮ ಅಹಂಕಾರವೆಲ್ಲವೂ ಕರಗಿಹೋಗಿ ನಮ್ಮ ಸ್ವರೂಪನಾದ ಭಗವಂತನಲ್ಲಿಯೇ ನಾವು ನೆಲೆನಿಲ್ಲುವೆವು. ಅನಾತ್ಮಪ್ರತ್ಯಯಗಳನ್ನು ಕಳೆದಾಗ ಸಹಜವಾಗಿ ಆತ್ಮಸ್ವರೂಪದಲ್ಲಿ ಮುಮುಕ್ಷುವು ನೆಲೆನಿಲ್ಲುವನು. ಈ ರೀತಿಯಾದ ಭಗದ್ಭಾವನಾಭಿನಿವೇಶದಿಂದ ಉಂಟಾದ ಆನಂದವು 'ಬ್ರಹ್ಮಸಂಸ್ಪರ್ಶ' ವೆಂದು ಹೇಳಲ್ಪಡುತ್ತದೆ''ಎಂದು ಮುಂತಾಗಿ ವಿಷಯಗಳನ್ನು ವಿವರಿಸುತ್ತ ಸರ್ವರನ್ನೂ ಆನಂದಪರವಶರನ್ನಾಗಿ ಮಾಡಿದರು. ಮೂರನೆಯ ದಿನ ಕೊನೆಯಲ್ಲಿ ಬ್ರ॥ಶ್ರೀ॥ ವಾರಣಾಸಿ ಸುಬ್ರಹ್ಮಣ್ಯಶಾಸ್ತ್ರಿಗಳವರು ತೆಲುಗಿನಲ್ಲಿ ಮಾತನಾಡಿ ಶ್ರೀಶ್ರೀಗಳವರು ಅನುಗ್ರಹಿಸಿದ ಅಧ್ಯಾತ್ಮಜ್ಞಾನದ ಮತ್ತು ಸಾಧನೆಗಳ ನಿರೂಪಣೆಯನ್ನು ಬಹಳವಾಗಿ ಹೊಗಳಿ ವೇದಾಂತಶಾಸ್ತ್ರಕ್ಕೆ ಶ್ರೀಗಳವರು ಮಾಡಿದ ಘನಸೇವೆಯನ್ನೂ ಪರಮಾರ್ಥಸಾಧಕರಿಗೆ ಮಹೋಪಕಾರವನ್ನು ಮಾಡಿ ಮಾರ್ಗದರ್ಶಕರಾಗಿರುವದನ್ನೂ ವಿವರಿಸುತ್ತ''ಇವರ ಮಾತುಗಳು ಅನುಭವಪೂರ್ಣ ವಾದವುಗಳೇ ಹೊರತು ಪುಸ್ತಕದ ಮಾತುಗಳಲ್ಲ. ಈ ಮಾತಿಗೆ ಈ ಮೂರು ದಿನಗಳಿಂದಲೂ ಅವರ ಭಾಷಣವು ನಮ್ಮೆಲ್ಲರ ಮೇಲೆ ಮಾಡಿದ ವಿಲಕ್ಷಣಪರಿಣಾಮವೇ ಸಾಕ್ಷಿ''ಎಂದು ಹೇಳಿದಾಗ ಸರ್ವರೂ ಆನಂದೋದ್ಗಾರದ ಚಿಹ್ನವಾಗಿ ಚಪ್ಪಾಳೆ ತಟ್ಟಿದರು.

ನಾವು ಪೀಠಾಪುರದಲ್ಲಿದ್ದ ಮೂರು ದಿನಗಳಲ್ಲಿ ಪ್ರತಿದಿನವೂ ಬೆಳಗ್ಗೆ 10–12, ಸಾಯಂಕಾಲ 4–6 ರವರೆಗೆ ಅನೇಕ ಜಿಜ್ಞಾಸುಗಳು, ಭಕ್ತರು, ಸದ್ಗೃಹಸ್ಥರು ಶ್ರೀಶ್ರೀಗಳವರ ದರ್ಶನಕ್ಕೆ ಬಂದು ತಮಗೆ ಬೇಕಾದುದೆಲ್ಲವನ್ನೂ ಕೇಳಿಕೊಂಡು ಹೋಗುತ್ತಿದ್ದರು. ಇವರಲ್ಲಿ ಮುಖ್ಯವಾಗಿ ಪೀಠಾಪುರದ ರಾಜಮನೆತರದವರಾದ ''ಶ್ರೀ ದಾಮರಾ ವೆಂಕಟರಮಣ ಅಮ್ಮಯ್ಯಗಾರು''ಎಂಬ ರಾಜಮಾತೆಯರು ತಮ್ಮ ಮಿತಪರಿವಾರದೊಂದಿಗೆ ಬಂದು ದರ್ಶನ ಮಾಡಿದರು. ಕೆಲವು ಪಂಡಿತರೂ ಜಿಜ್ಞಾಸುಗಳೂ ಬರುತ್ತಿದ್ದರು. ಶ್ರೀ ವಾರಣಾಸಿ

ಸುಬ್ರಹ್ಮಣ್ಯಶಾಸ್ತ್ರಿಗಳಂತೂ ದಿನವೂ ಬಂದು ಶ್ರೀಗಳೊಡನೆ ಸಂಸ್ಕೃತದಲ್ಲಿ ಮಾತನಾಡುತ್ತಿದ್ದರು. ಇಂಗ್ಲೀಷು ಬಲ್ಲವರು ಆ ಭಾಷೆಯಲ್ಲಿ ಮಾತನಾಡುತ್ತಿದ್ದರು. ಮಿಕ್ಕವರಿಗೆ ಆಂಧ್ರದಲ್ಲಿ ನಾನೇ ಭಾಷಾಂತರಿಸಿ ಶ್ರೀಶ್ರೀಗಳವರ ಅಭಿಪ್ರಾಯವನ್ನು ವಿವರಿಸುತ್ತಿದ್ದೆನು.

ಈ ಊರಿನಲ್ಲಿರುವವರೆಗೂ ಸದಾಕಾಲವೂ ಶ್ರೀಶ್ರೀಗಳವರ ಜೊತೆಗೆ ಇದ್ದು ಅತ್ಯಂತ ಭಕ್ತಿಯಿಂದ ನಡೆದುಕೊಂಡ ಇಬ್ಬರು ವ್ಯಕ್ತಿಗಳನ್ನು ನಾವೆಂದೂ ಮರೆಯುವಂತಿಲ್ಲ. ಅವರಲ್ಲೊಬ್ಬರು ನಮ್ಮ ಮೈಸೂರಿನವರೂ, ಹುಟ್ಟು ಕನ್ನಡಿಗರೂ, ಕನ್ನಡಭಾಷಾಭಿಜ್ಞರೂ ಆದ ಬ್ರ||ಶ್ರೀ|| **ಎನ್. ಕಾಶೀಪತಿಶಾಸ್ತ್ರಿಗಳವರು.** ಈ ಊರು ಐವತ್ತುಸಾವಿರ ಜನಸಂಖ್ಯೆಯುಳ್ಳ ರೈಲು, ಬಸ್ಸು–ಮುಂತಾದ ಆಧುನಿಕ ಸೌಲಭ್ಯಗಳುಳ್ಳ ತಾಲ್ಲೂಕಿನ ಮುಖ್ಯಸ್ಥಳವೂ ಆಗಿದೆ. ಮತ್ತು ವ್ಯಾಪಾರದ ಪಡಿಮೂಲೆಯ ಸ್ಥಳವೂ ಆಗಿರುವದಲ್ಲದೆ ಪೂರ್ವದಿಂದಲೂ ವಿದ್ಯಾಪೀಠವಾಗಿತ್ತು. ಇಲ್ಲಿ ಅಧ್ಯಯನಮಾಡಿ ಅನೇಕ ಶಾಸ್ತ್ರಗಳಲ್ಲಿ ಪಂಡಿತರಾದವರು ಇಂದಿಗೂ ಆಂಧ್ರಪ್ರಾಂತದಲ್ಲಿ ಬೇಕಾದಷ್ಟು ಜನಗಳಿದ್ದಾರೆ. ಇಂಥ ಊರಿನಲ್ಲಿ ನಮ್ಮ ಶ್ರೀ|| ಕಾಶೀಪತಿಶಾಸ್ತ್ರಿಗಳು ವೇದಪಾಠಶಾಲೆಯ ಉಪಾಧ್ಯಾಯರಾಗಿದ್ದಾರೆ. ನಾವು ಇವರ ಮನೆಗೂ ಒಮ್ಮೆ ಹೋಗಿದ್ದೆವು. ಕನ್ನಡಮಾತನ್ನಾಡುವ ಈ ಕುಟುಂಬವನ್ನು ಕಂಡು ನಮಗೆ ಪರಮಾನಂದವಾಯಿತು. ಇದಲ್ಲದೆ ಶಾಸ್ತ್ರಿಗಳು ಆಂಧ್ರಪ್ರದೇಶದಲ್ಲಿದ್ದರೂ ಸಹ ಕನ್ನಡಕಾವ್ಯಾದಿಗ್ರಂಥಗಳನ್ನು ಅವಲೋಕಿಸುವದನ್ನು ಈಗಲೂ ಬಿಡದೆ ಇಟ್ಟುಕೊಂಡಿರುತ್ತಾರೆ. ಇವರಲ್ಲಿರುವ ಮುಖ್ಯವಾದ ಒಂದು ವಿಚಿತ್ರವಾದ ಕಲೆ ಎಂದರೆ ವೇದಮಂತ್ರದ ಒಂದು ಋಕ್ಕನ್ನು ಕೇಳಿ ಕೊಳಲನ್ನು ಮೂಗಿನಲ್ಲಿಟ್ಟು ಸರಿಯಾಗಿ ಸ್ವರಗಳನ್ನು ನುಡಿಸುತ್ತಾರೆ. ಅದರ ಜೊತೆಗೆ ಧಾರಾಳವಾಗಿ ಮಂತ್ರಗಳನ್ನು ಬಲ್ಲವರು ಹೇಳುತ್ತಾ ಹೋಗಬಹುದು. ಈ ಕಾರ್ಯಕ್ರಮವನ್ನು ಶ್ರೀಶ್ರೀಗಳವರು ಕೇಳಿ ಆನಂದಾಶ್ಚರ್ಯಚಕಿತರಾದರು.

ಇದರಂತೆ ಇನ್ನೊಬ್ಬ ವ್ಯಕ್ತಿಗಳೆಂದರೆ ಇವರ ಸ್ನೇಹಿತರಾದ ವೈದ್ಯರಾದಶ್ರೀ|| **ವೈ.ಎ.ಗೋವಿಂದಾಚಾರ್ಯ**ರು ಎಂಬವರು. ಇವರಿಬ್ಬರೂ ಎರಡು ದೇಹದಲ್ಲಿರುವ ಒಂದು ಜೀವದಂತೆ ಜೀವದ ಗೆಳೆಯರಾಗಿದ್ದಾರೆ. ವೈದ್ಯರು ಶ್ರೀಶ್ರೀಗಳವರಿಗೆ ಕಣ್ಣಿಗೆ ಹಚ್ಚುವ ಔಷಧಿ ಹಾಗೂ ಅನೇಕ ಬೇರೆಬೇರೆ ಔಷಧಿಗಳನ್ನು ಕೊಟ್ಟರು. ಇವರಿಬ್ಬರಿಗೂ ಶ್ರೀ ದತ್ತಭಗವಂತನಲ್ಲಿ ಭಕ್ತಿಯು ತುಂಬಾ ಇದೆ.

ಇದೇ ಊರಿನ ಹತ್ತಿರ ಸಮುದ್ರತೀರದಲ್ಲಿ (ಕೇವಲ 6 ಮೈಲಿಗಳ ಅಂತರದಲ್ಲಿ) ಇರುವ ಉಪ್ಪಾಡ ಎಂಬ ಗ್ರಾಮದಲ್ಲಿರುವ ಶ್ರೀ|| ಗುಪ್ತರ ಭಕ್ತಮಂಡಳಿಯವರೂ

''ಗೊಲ್ಲಪೋಲು''ಎಂಬ ಇನ್ನೊಂದು ಗ್ರಾಮದ ಭಕ್ತರೂ ನಾವಿದ್ದಲ್ಲಿಗೆ ಬಂದು ಶ್ರೀಶ್ರೀಗಳವರ ದರ್ಶನ, ಆಶೀರ್ವಾದ, ಹಾಗೂ ಉಪದೇಶಗಳನ್ನು ಪಡೆದರು.

ದಿ. 13–11–63ನೇ ದಿನ ಕಾಕಿನಾಡಾದಿಂದ ರೇಪಾಕು ಸತ್ಯನಾರಾಯಣ ಶ್ರೇಷ್ಠಿಯವರ ಧರ್ಮಪತ್ನಿಯವರಾದ ಶ್ರೀಮತಿ ರಾಜರತ್ನಮ್ಮನವರು ತಮ್ಮ ಊರಿನಲ್ಲಿರುವ ಧ್ಯಾನನಿಷ್ಠಾಸಮಾಜದ ಕೆಲವು ಮಹಿಳಾ ಸದಸ್ಯರೊಂದಿಗೆ ಬಂದು ದಿ. 16–11–63ಕ್ಕೆ ತಮ್ಮಲ್ಲಿಗೆ ಶ್ರೀಶ್ರೀಗಳವರು ಬರಬೇಕೆಂದೂ ಆಮಂತ್ರಿಸಿಹೋದರು.

# ಶ್ರೀಶ್ರೀಗಳವರ ಆಂಧ್ರಪ್ರದೇಶದ ಪ್ರವಾಸವಾರ್ತೆ–6

## ಆಲವಿಲ್ಲ ಮಲ್ಲವರಂ

## (ಜೂನ್ 1964)

ದಿ. 15ನೇ ದಿನ ಶ್ರೀ॥ ಸುಬ್ರಹ್ಮಣ್ಯಶಾಸ್ತ್ರಿಗಳವರ ಹೇಳಿಕೆಯ ಮೇರೆಗೆ ಇಲ್ಲಿಂದ 11 ಮೈಲು ದೂರದಲ್ಲಿರುವ 'ಆಲವಿಲ್ಲಮಲ್ಲವರಂ' ಎಂಬಲ್ಲಿಗೆ ನಮ್ಮನ್ನೆಲ್ಲ ಕರೆದುಕೊಂಡು ಹೋಗಲು ಕಾಕಿನಾಡದಿಂದ ಶ್ರೀ॥ ವೆಂಕಟರಾವ (ಶ್ರೀಪಾದನರಸಿಂಹ ಅಂಡ್ ಕೋ, ಮಾಲೀಕರು) ಎಂಬುವರು ಪತ್ನೀಸಮೇತರಾಗಿ ತಮ್ಮ ಸ್ವಂತ ಕಾರಿನಲ್ಲಿ ಬಂದಿದ್ದರು. ಶ್ರೀ॥ ಶಾಸ್ತ್ರಿಗಳೂ ಶ್ರೀಶ್ರೀಗಳವರೂ ಮಿಕ್ಕಪರಿವಾರವೂ ಸಹ ಬೆಳಗ್ಗೆ 8 ಘಂಟೆಗೆ ಹೊರಟು 9 ½ ಗೆ ಅಲ್ಲಿಗೆ ಹೋಗಿ ಪುನಃ 12ಕ್ಕೆ ವಾಪಸ್ಸು ಬಂದೆವು.

'ಆಲವಿಲ್ಲಮಲ್ಲವರಂ' ಎಂಬುದೊಂದು ಚಿಕ್ಕಹಳ್ಳಿ. ವಿಜಯವಾಡ–ವಾಲ್ಟೇರ್ ರೈಲ್ವೆ ಮಾರ್ಗದಲ್ಲಿ 'ಮಲ್ಲವರಂ' ಎಂಬ ಚಿಕ್ಕ ಸ್ಟೇಷನ್ನಿಗೆ 3 ಮೈಲಿ ದೂರದಲ್ಲಿದೆ. ಇದು ಈಗ ಶ್ರೀ ಸುಬ್ರಹ್ಮಣ್ಯಕ್ಷೇತ್ರವಾಗಿದೆ. ಇದರ ಸಂಕ್ಷಿಪ್ತ ಇತಿಹಾಸ ಹೀಗಿದೆ:–

ಈಗ ಎರಡು ವರ್ಷಗಳ ಕೆಳಗೆ ಇಲ್ಲಿ ಒಂದು ದೊಡ್ಡಸರ್ಪವು ಊರ ಹೊರಗೆ ಬಂದಿತು. ಅದು ಯಾರಿಗೂ ಅಪಾಯ ಮಾಡದೆ ಒಂದೇ ಸ್ಥಳದಲ್ಲಿ ಕುಳಿತಿತ್ತು, ಜನಗಳಾದರೂ ಅದನ್ನು ಹೊಡೆಯ ಹೋದರೆ ಮಾತ್ರ ಭುಸುಗುಡುತ್ತಿತ್ತು. ಇದು ಬಂದ ಒಂದು ವಾರದೊಳಗಾಗಿ ಕಾಕಿನಾಡಾ ಶಹರದಲ್ಲಿರುವ 'ಶ್ರೀಪಾದನರಸಿಂಹ ಅಂಡ್ ಕೋ'ದ ಮಾಲೀಕರಾದ ಶ್ರೀ॥ ವೆಂಕಟರಾವ್ ಎಂಬುವರಿಗೆ ಸ್ವಪ್ನವಾಗಿ ಆ ಸ್ವಪ್ನದಲ್ಲಿ ಈ ಸರ್ಪವೇ ಬಂದು ''ನಾನು ಇಂಥಲ್ಲಿದ್ದೇನೆ, ನನಗೆ ಆಹಾರಕ್ಕಾಗಿ ಹಾಲಿನ ವ್ಯವಸ್ಥೆ ಮಾಡು''ಎಂದು ಹೇಳಿದಂತಾಯಿತು. ಕೂಡಲೆ ಆ ಶ್ರೀಮಂತರು ಅಲ್ಲಿಗೆ ಬಂದು ನೋಡಿ

ಒಂದು ಹಸುವನ್ನು ಆಗಲೇ ಕೊಂಡುಕೊಂಡು ಅದರ ಹಾಲನ್ನು ಈ ಸರ್ಪಕ್ಕೆ ದಿನವಹಿ ಕುಡಿಸುವ ಏರ್ಪಾಡು ಮಾಡಿದರು. ಹಾಗೂ ಸರ್ಪವು ಇವರ ಹತ್ತಿರ ಬಂದು ಕುಳಿತಿತು. ಯಾವ ಅಂಜಿಕೆಯೂ ಇಲ್ಲದೆ ಅದನ್ನು ಎಲ್ಲರೂ ಮುಟ್ಟುವದಕ್ಕಾರಂಭಿಸಿದರು. 'ಇದೇನೋ ಮಹಿಮೆ' ಎಂದು ಭಕ್ತಿಯಿಂದ ನಡೆದುಕೊಳ್ಳುವದಕ್ಕಾರಂಭಿಸಿದರು. ಕೆಲವು ಕಾಲದ ನಂತರ ಇದೇ ಸಾಹುಕಾರರಿಗೆ ಮತ್ತೆ ಸ್ವಪ್ನವಾಗಿ "ಈ ಸ್ಥಳದಲ್ಲಿ ದೇವಾಲಯವನ್ನು ನಿರ್ಮಿಸಿರಿ. ದೇವಾಲಯದ ಕಾರ್ಯಾರಂಭದಲ್ಲಿಯೇ ನಾನು ದೇಹಬಿಡುತ್ತೇನೆ. ಅಲ್ಲಿ ನನ್ನ ಸಮಾಧಿ ಮಾಡಿ ಅದರ ಮೇಲೆ ಶ್ರೀ ಸುಬ್ರಹ್ಮಣ್ಯದೇವರನ್ನೂ ಪಕ್ಕಕ್ಕೆ ಈಶ್ವರಲಿಂಗ ಹಾಗೂ ಪಾರ್ವತಿಯನ್ನೂ ಸ್ಥಾಪಿಸಿರಿ. ದೇವಸ್ಥಾನವು ಪೂರ್ತಿಯಾದಾಗ ನಾನು ಇನ್ನೊಂದು ಸರ್ಪರೂಪದಲ್ಲಿ ಮತ್ತೆ ಬಂದು ಇಲ್ಲಿ ನೆಲೆಸುವೆನು" ಎಂದು ಹೇಳಿದ ಹಾಗಾಯಿತು. ಅದೇ ಮೇರೆಗೆ ದೇವಸ್ಥಾನದ ಕಟ್ಟಡಕ್ಕಾಗಿ ಸಿದ್ಧತೆ ಮಾಡಿಕೊಂಡು ಕಟ್ಟಡದ ಬುನಾದಿಯನ್ನು ಅಗಿಯುವ ಸಮಯದಲ್ಲಿ ಈ ಸರ್ಪವು ಅದರಲ್ಲಿ ಬಂದು ಅಲ್ಲಿಯೇ ಪ್ರಾಣತ್ಯಾಗ ಮಾಡಿತು. ಕೂಡಲೆ ವಿಜೃಂಭಣೆಯಿಂದ ಸಮಾಧಿಯನ್ನು ಮಾಡಿ ಸುಬ್ರಹ್ಮಣ್ಯಾದಿಸಕಲ ದೇವತಾದಿಗಳ ಪ್ರತಿಷ್ಠೆಮಾಡಿ ಗರ್ಭಗುಡಿ ಹಾಗೂ ಮುಂದಿನ ಸಭಾಂಗಣಾದಿಗಳ ನಿರ್ಮಾಣ ಮುಗಿಯುವ ಸಮಯಕ್ಕೆ ಗುಡಿಯ ಹಿಂದಿನ ಭಾಗದಲ್ಲಿಯೇ ಈಗ ದೇವಸ್ಥಾನದಲ್ಲಿ ವಾಸವಾಗಿರುವ ಸರ್ಪವು ಕಾಣಿಸಿಕೊಂಡಿತು. ಅದನ್ನು ಆನಂದದಿಂದ ಎತ್ತಿತಂದು ಮಂದಿರದಲ್ಲಿಡಲಾಯಿತು. ಅದೇ ಈಗ ಪ್ರತ್ಯಕ್ಷ ಸುಬ್ರಹ್ಮಣ್ಯಸ್ವಾಮಿಯು.

ನಾವು ತಾ|| 15–11–63ರಂದು ಅಲ್ಲಿಗೆ ಹೋದಾಗ ಬೆಳಿಗ್ಗೆ9 ಗಂಟೆಯಾಗಿತ್ತು ಗರ್ಭಗುಡಿಯಲ್ಲಿ ಪಾರ್ವತೀದೇವಿಯ ವಿಗ್ರಹದ ಕೆಳಗೆ ಸರ್ಪವಿತ್ತು. ಅರ್ಚಕರು ಈಶ್ವರನಿಗೆ ಅರ್ಚನೆಮಾಡುತ್ತಿದ್ದರು. ಶ್ರೀ|| ವೆಂಕಟರಾಯರು ಹೇಳಿದ ಕೂಡಲೆ ಅರ್ಚಕರು ಪೀಠದ ಕೆಳಗಿದ್ದ ಸರ್ಪವನ್ನು ಸಹಜವಾಗಿ ಹಿಡಿದು ಪರಾತದಲ್ಲಿ ಹಾಕಿ ನಮ್ಮ ಹತ್ತಿರ ಕೊಟ್ಟರು. ಶ್ರೀ|| ವೆಂಕಟರಾಯರಂತೂ ಭಕ್ತಿಪ್ರೀತಿಗಳಿಂದ ಹಾವಿನ ಮೈಮೇಲೆಲ್ಲಾ ಕೈಯಾಡಿಸಿದರು. ನನಗೆ ಮೊದಲು ಕೊಂಚ ಭಯವೆನಿಸಿದರೂ ಕೊನೆಗೆ ಪರಾತವನ್ನು ಕೈಗೆತೆಗೆದುಕೊಂಡು ಸರ್ಪವನ್ನುಮುಟ್ಟಿ ಕೈಯಾಡಿಸಿದೆ. ಶ್ರೀಶ್ರೀಗಳವರು ಕುತೂಹಲದಿಂದ ನೋಡುತ್ತಾ ನನ್ನ ಪಕ್ಕದಲ್ಲಿಯೇ ನಿಂತಿದ್ದರು. ಸುಮಾರು ಅರ್ಧ ಗಂಟೆಯವರೆಗೆ ನಾವು ಅದರೊಡನೆ ಇದ್ದು ಅನಂತರ ಪರಾತವನ್ನು ಕೆಳಗಿಟ್ಟೆವು. ಆಗ ಹಾವು ತಾನೇ ಹರಿದು ಮುಂದಿನ ಭಾಗದಲ್ಲಿರುವ ಗಣಪತಿಯನ್ನು ಪ್ರದಕ್ಷಿಣೆ ಮಾಡಿಕೊಂಡು ಈಶ್ವರಲಿಂಗ ಹಾಗೂ ಸುಬ್ರಹ್ಮಣ್ಯವಿಗ್ರಹಗಳನ್ನು ಸುತ್ತಿ ಅಮ್ಮನವರ

ಪ್ರದಕ್ಷಿಣೆ ಮಾಡಿ ಕೆಳಗಡೆ ಪೀಠದಲ್ಲಿ ಮೊದಲಿನಂತೆಯೇ ಕುಳಿತಿತು. ಇದರ ವೈಶಿಷ್ಟ್ಯಗಳೆಂದರೆ:

(1) ಈಶ್ವರನಿಗೆ ಮಾಡುವ ನಿತ್ಯದ ಏಕಾದಶವಾರ ರುದ್ರಾಭಿಷೇಕದ ಸಮಯದಲ್ಲಿ ಲಿಂಗದಮೇಲೆ ಬಂದು ಹೆಡೆಯೆತ್ತಿ ಅಲಂಕಾರವಾಗಿ ಕುಳಿತಿರುತ್ತದೆ.

(2) ವೇದಮಂತ್ರಗಳನ್ನು ಹೇಳಿದರೆ ಹೆಡೆಯಾಡಿಸಿ ಕೇಳುವದು.

(3) ಇಲಿ, ಕಪ್ಪೆ–ಮೊದಲಾದದ್ದನ್ನು ಮುಟ್ಟುವದಿಲ್ಲ. ಕೇವಲ ರಾತ್ರಿಯಲ್ಲಿಟ್ಟ ಒಂದು ಪಾವು ಹಾಲುಮಾತ್ರವೇ ಇದರ ಆಹಾರ.

(4) ಪ್ರತಿ ದಿವಸ ಮಧ್ಯಾಹ್ನ 3 ½ ಯಿಂದ 4½ಯೊಳಗೆ ದೇವಸ್ಥಾನದಿಂದ ಹೊರಬಿದ್ದು ಸುಮಾರು ಅರ್ಧಮೈಲುದೂರ ಹೋಗಿ ಮಲವಿಸರ್ಜನಾದಿಗಳನ್ನುಮಾಡಿ ತಿರುಗಿ ಬರುವಾಗ ದೇವಾಲಯದ ಎದುರಿನಲ್ಲಿರುವ ಜಲಾಶಯದಲ್ಲಿ ಸ್ನಾನಮಾಡಿಯೇ ಒಳಕ್ಕೆ ಬರುವದಂತೆ.

(5) ರಾತ್ರಿ ಮಂಗಳಾರತಿಯ ನಂತರ ಗರ್ಭಗುಡಿಯಿಂದ ಹೊರಬಿದ್ದು ಹೊರಗಿನ ಸಭಾಂಗಣದಲ್ಲಿಯೇ ಬೆಳಗಿನವರೆಗೂ ಇರುವದು.

ಹೀಗೆ ವಿಚಿತ್ರವಾಗಿರುವ ಈ ಕ್ಷೇತ್ರಕ್ಕೆ ಹರಕೆಹೊರುವದು, ಪೂಜಾದಿಗಳನ್ನು ಮಾಡಿಸುವದು–ಮುಂತಾದದ್ದು ಬಹಳ ನಡೆಯುತ್ತದೆ. ಮಾರ್ಗಶಿರ ಶುದ್ಧ ಷಷ್ಠಿಯು ವಾರ್ಷಿಕ ಜಾತ್ರೆಯ ದಿನವು. ನಾವು ಅಷ್ಟೋತ್ತರಾದಿಪೂಜೆಯನ್ನು ಮಾಡಿಸಿಕೊಂಡು ಬ್ರ॥ಶ್ರೀ॥ಸುಬ್ರಹ್ಮಣ್ಯಶಾಸ್ತ್ರಿಗಳ ಸಮೇತ ಮಧ್ಯಾಹ್ನ 11 ಗಂಟೆಗೆ ಪೀಠಾಪುರಕ್ಕೆ ಶ್ರೀ॥ ವೆಂಕಟರಾಯರ ಕಾರಿನಲ್ಲಿ ಬಂದು ತಲುಪಿದೆವು. ಅಂತೂ ಈ ಕಾಲದಲ್ಲಿಯೂ ನೋಡುವದಕ್ಕೆ ದೊರಕುವ ಅತ್ಯಾಶ್ಚರ್ಯಕರ ಘಟನೆಗಳಲ್ಲಿ ಇದೂ ಒಂದಾಗಿದೆ. ದೇವಸ್ಥಾನದ ಅಭಿವೃದ್ಧಿಕಾರ್ಯವೂ ಜೋರಾಗಿ ನಡೆಯುತ್ತಲಿದೆ.

## ಕಾಕಿನಾಡ

ಪೀಠಾಪುರದಲ್ಲಿ ಇದ್ದ ನಾಲ್ಕು ದಿನಗಳಲ್ಲಿಯೇ ಉಪ್ಪಾಡ, ಗೊಲ್ಲಪ್ರೋಲು, ಎಂಬ ಊರುಗಳಲ್ಲಿ ಇರುವ ಶ್ರೀ ನಿಖಿಲಾನಂದಗುಪ್ತರ ಶಿಷ್ಯವರ್ಗದ ಹೆಂಗಸರೂ ಗಂಡಸರೂ ಸಹ ಬಂದು ಶ್ರೀಶ್ರೀಗಳವರನ್ನು ಸಂದರ್ಶಿಸಿ ಆಶೀರ್ವಾದವನ್ನು ಪಡೆದರು. ಈ ಮೊದಲೇ ಆಮಂತ್ರಣವನ್ನಿತ್ತು ಹೋಗಿದ್ದ ಕಾಕಿನಾಡದ ಶ್ರೀ॥ ರೇಪಾಕ

ಸತ್ಯನಾರಾಯಣಶ್ರೇಷ್ಠಿಯವರ ಧರ್ಮಪತ್ನಿಯವರಾದ ಶ್ರೀಮತಿ ರಾಜರತ್ನಮ್ಮನವರು ತಮ್ಮೊಂದಿಗೆ ಶ್ರೀಗುಂಡು ರಾಮಮೂರ್ತಿಯವರ ಧರ್ಮಪತ್ನಿ ಶ್ರೀಮತಿ ತಲ್ಲಮ್ಮನವರನ್ನು ಕರೆದುಕೊಂಡು ತಮ್ಮ ಸ್ವಂತ ಕಾರಿನಲ್ಲಿ ತಾ।। 16–11–63ನೆಯ ಬೆಳಗ್ಗೆ 7 ½ ಗಂಟೆಗೆ ನಮ್ಮ ನಿವಾಸಕ್ಕೆ ಬಂದರು. ಪೀಠಾಪುರದ ಮುಖ್ಯರೆಲ್ಲರೂ ಶ್ರೀಗಳವರನ್ನು ಬೀಳ್ಕೊಡಲು ಬಂದಿದ್ದರು. ಸುಮಾರು 8 ½ ಗಂಟೆಗೆ ನಾವು ಪೀಠಾಪುರದಿಂದ ಹೊರಟೆವು.

ಸುಮಾರು 9 ½ ಘಂಟೆಗೆ ಕಾಕಿನಾಡ ತಲುಪಿ ಶ್ರೀ ರೇಪಾಕ ಸತ್ಯನಾರಾಯಣ ಶ್ರೇಷ್ಠಿಯವರ ಮನೆಗೆ ಸೇರಿದೆವು. ಮನೆಯು ಸಾಕಾದಷ್ಟು ವಿಶಾಲ ಹಾಗೂ ಶುಚಿಯಾಗಿದ್ದುದರಿಂದ ಇದರಲ್ಲಿಯ ಒಂದು ಭಾಗದಲ್ಲಿ ಶ್ರೀಶ್ರೀಗಳವರ ನಿವಾಸಕ್ಕೆ ಏರ್ಪಾಡಾಗಿತ್ತು. ಇನ್ನೊಂದು ಭಾಗದಲ್ಲಿಯ ಮಧ್ಯದ ದೊಡ್ಡ ನಡುಮನೆಯಲ್ಲಿ ಬೆಳಗಿನ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಆ ದಿನವೂ ಸಹ (ತಾ।। 16–11–63) ಶ್ರೀಗಳವರ ದರ್ಶನಾಕಾಂಕ್ಷಿಗಳಾಗಿ ಧ್ಯಾನನಿಷ್ಠಾಸಮಾಜದ ಸುಮಾರು 200 ಜನ ಮಹಿಳೆಯರು ಕುಳಿತಿದ್ದರು. ಆ ದಿನ 10 ಗಂಟೆಯಿಂದ 11 ½ ವರೆಗೆ ಶ್ರೀ ಗುಪ್ತರು, ಮಹಿಳಾಮಾತೆಯರು ಶ್ರೀಶ್ರೀಗಳವರ ಬಗ್ಗೆ ಹೇಳಿದ ನಂತರ ಸ್ವಲ್ಪ ಕಾಲ ಶ್ರೀಶ್ರೀಗಳವರು "ಬ್ರಹ್ಮವೊಂದೇ ಸತ್ಯವು, ಅದೇ ನಮ್ಮ ಆತ್ಮನು" ಎಂಬ ವಿಷಯವನ್ನು ಕುರಿತು ಉಪದೇಶ ಮಾಡಿದರು. ಸಾಯಂಕಾಲದ ಉಪನ್ಯಾಸವನ್ನು ಇಲ್ಲಿಯ ದೊಡ್ಡ ಬಜಾರದಲ್ಲಿರುವ ಶ್ರೀ ಕನ್ಯಕಾಪರಮೇಶ್ವರೀ ದೇವಾಲಯದಲ್ಲಿ ಏರ್ಪಡಿಸಲಾಗಿತ್ತು. ಸಾಯಂಕಾಲ 5½ಯಿಂದ ಗುಪ್ತರೂ ಮಹಿಳಾಮಾತೆಯವರೂ ಉಪನ್ಯಾಸಗಳನ್ನು ಮಾಡಿದ ನಂತರ 6½ ಯಿಂದ 7 ½ ರವರೆಗೆ ಶ್ರೀಶ್ರೀಗಳವರು "ನಿಃಸಂಗತ್ವಕ್ಕೆ ಸಾಧನ" ಎಂಬ ವಿಚಾರವನ್ನು ಕುರಿತು ಬಹಳ ಪರಿಣಾಮಕಾರಿಯಾಗಿ ಉಪನ್ಯಾಸವನ್ನು ಮಾಡಿದರು. ಸುಮಾರು 100 ಜನ ಗಂಡಸರೂ 200 ಜನ ಹೆಂಗಸರೂ ಬಂದಿದ್ದರು. ದೇವಸ್ಥಾನದಲ್ಲಿ ಸ್ಥಾಪಿತವಾದ ವಾಸವೀಗೀತಾ ಮಹಿಳಾಸಮಾಜದವರಿಂದ ಅಮೃತಶಿಲೆಯ ದಶಾವತಾರಗಳ ಬೇರೆ ಬೇರೆ ವಿಗ್ರಹಗಳನ್ನು ಸ್ಥಾಪಿಸಿ ಜನರಲ್ಲಿ ಉತ್ಸಾಹವನ್ನು ತುಂಬಿದ ಶ್ರೀ ಗುಪ್ತರ ಅಧ್ಯಾತ್ಮ ಪ್ರಚಾರಕಾರ್ಯವನ್ನು ಕಂಡು ಶ್ರೀಶ್ರೀಗಳು ಸಂತೋಷಪಟ್ಟರು.

ಮರುದಿವಸ ಬೆಳಗ್ಗೆ (ತಾ।। 17–11–63) 10 ಗಂಟೆಯಿಂದ 11ರ ವರೆಗೆ ಶ್ರೀಶ್ರೀಗಳವರು "ಮನಸ್ಸೇ ಬಂಧಮೋಕ್ಷಗಳಿಗೆ ಕಾರಣ" ಎಂಬ ವಿಚಾರದ ವಿಷಯದಲ್ಲಿ ಉಪನ್ಯಾಸಮಾಡಿದರು. ಆ ದಿನ ಕಿಕ್ಕಿರಿದು ಜನಸಂದಣಿ ಸೇರಿತ್ತು. ಸಾಯಂಕಾಲ ದೇವಸ್ಥಾನಕ್ಕೆ ಹೊರಡುವ ಮೊದಲು ಶ್ರೀ।। ರೇಪಾಕರವರ ಮನೆಯ ಹತ್ತಿರವೇ ಇರುವ ಶ್ರೀ।। ಮಾಣಿಕ್ಯಂಸಾಮಿ ಎಂಬುವರ ಮನೆಗೆ ಶ್ರೀಶ್ರೀಗಳವರನ್ನು

ಕರೆದುಕೊಂಡು ಹೋಗಲಾಗಿತ್ತು, ಅಲ್ಲಿ 200–300 ಜನರು ಸೇರಿದ್ದರು. ಇದಲ್ಲದೆ ಸಾಮಲಕೋಟೆಯಲ್ಲಿ ಶ್ರೀ ಗುಪ್ತರು ಸ್ಥಾಪನೆ ಮಾಡಿದ ಭಗವದ್ಗೀತಾ ಸಮಾಜದ ಕೆಲ ಪ್ರಮುಖ ಸ್ತ್ರೀ ಪುರುಷರು ಶ್ರೀಶ್ರೀಗಳವರನ್ನು ಕಾಣಲು ಬಂದಿದ್ದರು. ಅಲ್ಲಿ ಶ್ರೀಗಳು ಸುಮಾರು 45 ನಿಮಿಷಗಳವರೆಗೆ "**ಶಿವಶಕ್ತಿಗಳ ಐಕ್ಯ**"ಎಂಬ ವಿಚಾರವನ್ನು ಕುರಿತು ಬಹಳ ಚೆನ್ನಾಗಿ ಬೋಧಿಸಿ "ಶಿವನಿಗೂ ಶಕ್ತಿಗೂ ಭೇದವೇ ಇಲ್ಲ; ಶಿವನೇ ಶಕ್ತಿಯು, ಶಕ್ತಿಯೇ ಶಿವನು"ಎಂಬುದನ್ನು ಮನಗಾಣಿಸಿ ನೆರೆದಭಕ್ತರನ್ನೆಲ್ಲ ಆನಂದಸಾಗರದಲ್ಲಿ ಮುಳುಗಿಸಿದರು. ಬಳಿಕ ದೇವಾಲಯದಲ್ಲಿ ಶ್ರೀಶ್ರೀಗಳವರು "ಭಗವನ್ನಾಮದ ಮಹಿಮೆ"ಯನ್ನು ಕುರಿತು ಬೋಧೆಮಾಡಿ ಎಲ್ಲರಲ್ಲೂ ಭಗವದ್ಭಕ್ತಿಯು ಉಕ್ಕುವಂತೆ ಮಾಡಿದರು.

ತಾ|| 18–11–63ನೇ ದಿನ ಬೆಳಗಿನ ಉಪನ್ಯಾಸವು 10ರಿಂದ 11ರವರೆಗೆ ಮನೆಯಲ್ಲಿಯೇ ನಡೆಯಿತು. **ಅನಂತವಾದ ಸಮತಾನಂದ** ಎಂಬ ವಿಚಾರವನ್ನು ಶ್ರೀಶ್ರೀಗಳವರು ಹೃದಯಂಗಮವಾಗಿ ಉಪದೇಶಿಸಿದರು. ಆ ದಿನ ಸಾಯಂಕಾಲ 6 ಗಂಟೆಗೆ ಶ್ರೀಗಳು "**ಗೀತೆಯ ಮಹತ್ತ್ವ**"ದ ವಿಚಾರವಾಗಿ ಮಾಡಿದ ಭಾಷಣವನ್ನು ಥಿಯಾಸಫಿಕಲ್ ಸೊಸಾಯಿಟಿಯಲ್ಲಿ ಶ್ರೀಗುಪ್ತರು ಉತ್ತಮ ರೀತಿಯಿಂದ ತೆಲುಗಿನಲ್ಲಿ ಅನುವಾದಿಸಿದರು. ಸಾಮಾನ್ಯವಾಗಿ ಎಲ್ಲಾ ಭಾಷಣಗಳನ್ನೂ ಅವರೇ ಅನುವಾದಿಸುತ್ತಿದ್ದರಾದರೂ ಕಾಕಿನಾಡದಲ್ಲಿದ್ದ ಮೂರು ದಿನವೂ ಶ್ರೀಗುಪ್ತರಿಗೆ ಮೈಯಲ್ಲಿ ಅಸ್ವಸ್ಥತೆ ತೋರಿಕೊಂಡಿದ್ದರಿಂದ ಶ್ರೀಮಹಿಳಾಮಾತೆಯರೂ ನಾನೂ ಬಹಳ ಸಲ ಭಾಷಾಂತರ ಕಾರ್ಯವನ್ನು ನಿರ್ವಹಿಸಬೇಕಾಗುತ್ತಿತ್ತು. ಥಿಯಾಸಫಿಕಲ್ ಸೊಸೈಟಿಯ ಕಾರ್ಯದರ್ಶಿಗಳು, ಶ್ರೀಗುಪ್ತಾದಂಪತಿಗಳು ಕಾಕಿನಾಡದ ಸಮಸ್ತಜನಗಳಿಗೂ ಶ್ರೀಮದ್ಭಗವದ್ಗೀತೆಯ ಅಭ್ಯಾಸದ ರುಚಿಯನ್ನು ಹತ್ತಿಸಿರುವದನ್ನೆಲ್ಲ ತಿಳಿಸಿ ಹೇಳಿ, "ಈಗ ಶ್ರೀಗಳವರನ್ನೂ ಕರೆತಂದು ಈ ದಿವ್ಯವಾದ ಉಪದೇಶವನ್ನು ಹೇಳಿಸಿದ್ದಕ್ಕಾಗಿ ನಾವು ಅವರಿಗೆ ಚಿರಋಣಿಗಳಾಗಿದ್ದೇವೆ"ಎಂದು ಶ್ರೀಗಳವರ ಚರಣಕ್ಕೆ ಸಾಷ್ಟಂಗವೆರಗಿದರು.

ಹೀಗೆ ಸೊಸಾಯಿಟಿಯ ಕಾರ್ಯಕ್ರಮವಾದ ನಂತರ ನಿಷ್ಕಾಸಮಾಜದ ಅಧ್ಯಕ್ಷಣಿಯರಾದ ಶ್ರೀಮತಿ ರಾಜರತ್ನಮ್ಮನವರು ಶ್ರೀಗಳವರನ್ನೂ ನಮ್ಮನ್ನೂ ತಮ್ಮ ಅನೇಕ ಬಂಧುಗಳ ಮನೆಗೂ ಭಕ್ತರುಗಳ ಮನೆಗೂ ಕರೆದುಕೊಂಡು ಹೋಗಿ ಅಲ್ಲಲ್ಲಿ ಶ್ರೀಗಳವರಿಗೆ ಕಾಣಿಕೆಯನ್ನರ್ಪಿಸುವದು, ಅವರಿಂದ ಆಶೀರ್ವಾದವನ್ನು ಪಡೆಯುವಂತೆ ಮಾಡುವದು–ಹೀಗೆಯೇ ಮಾಡುತ್ತಾ ಸುಮಾರು 6–7 ಮನೆಗಳಿಗೆ ಕರೆದೊಯ್ದು ನಂತರ ಕೊನೆಗೆ 8 ಗಂಟೆಗೆ ಇಲ್ಲಿಯ ಜಗನ್ನಾಥಪುರವೆಂಬ ಓಲ್ಡ್ ಟೌನಿನಲ್ಲಿಯ

ಶ್ರೀಕನ್ಯಾಕಾಪರಮೇಶ್ವರೀ ಅಮ್ಮನವರ ಮಂದಿರಕ್ಕೆ ಕರೆದುಕೊಂಡು ಬಂದರು. ಅಲ್ಲಿ ಒಬ್ಬ ಬ್ರಾಹ್ಮಣೋತ್ತಮರು ಶಿವಪುರಾಣವನ್ನು ಶ್ರೋತೃಗಳಿಗೆ ನಿರೂಪಿಸುತ್ತಿದ್ದರು. ಶ್ರೀಗಳವರು ಬಂದೊಡನೆ ನೆರೆದವರೆಲ್ಲ ಎದ್ದುನಿಂತು ಸ್ವಾಗತಿಸಿ ನಮಸ್ಕರಿಸಿ **'ಶಿವಮಹಿಮೆ'**ಯ ಬಗ್ಗೆ ಉಪದೇಶಿಸಬೇಕೆಂದು ಕೇಳಿಕೊಂಡರು. ಆಗ ಶ್ರೀಗಳವರು ಶಿವನಾಮದ ಮಹಿಮೆ, ಅದರಿಂದ ಉಂಟಾಗುವ ಚಿತ್ತಶುದ್ಧಿ, ಏಕಾಗ್ರತೆ, ಕೊನೆಗೆ ಶಿವಸ್ವರೂಪರೇ ಆಗಿ ನಿಲ್ಲುವ ಜ್ಞಾನ–ಇಷ್ಟನ್ನೂ ಬಹಳ ಸರಳಶೈಲಿಯಲ್ಲಿ ಸುಮಾರು ಅರ್ಧಗಂಟೆಯವರೆಗೆ ಉಪದೇಶಿಸಿದರು. ನೆರೆದ ಭಕ್ತರೆಲ್ಲರೂ ಬಹಳ ಸಂತೋಷಪಟ್ಟರು. ಆ ದಿನ ಮನೆಗೆ ಬರಲು ರಾತ್ರಿ 10 ಗಂಟೆಯಾಯಿತು.

ತಾ|| 19–11–63 ಈ ದಿನ ಮೊದಲೇ ನಿಶ್ಚಯಿಸಿದ್ದಂತೆ ಕಾಕಿನಾಡದಿಂದ ವಿಜಯನಗರಕ್ಕೆ ಹೋಗುವ ಸಿದ್ಧತೆ ನಡೆದಿತ್ತು. ಬೆಳಗಿನ 8 ಗಂಟೆಗೆ ಶ್ರೀಗಳವರ ಭಿಕ್ಷೆಯಾದ ನಂತರ ನಿಷ್ಠಾಸಮಾಜದ ಅಲ್ಲಿ ನೆರೆದಿದ್ದ ಸದಸ್ಯರನ್ನು ಕುರಿತು ಶ್ರೀಗಳವರು **"ಅಧ್ಯಾತ್ಮಜ್ಞಾನದಲ್ಲಿ ನಿಷ್ಠೆಯು ಬರಬೇಕಾಗಿದ್ದರೆ ಕರ್ಮಯೋಗ, ಭಗವನ್ನಾಮಸ್ಮರಣ ಮುಂತಾದ ಸಾಧನಗಳನ್ನು ಹೆಚ್ಚು ಲಕ್ಷ್ಯದಲ್ಲಿಡುವದು ಅತ್ಯಗತ್ಯ"**ಎಂಬ ಸಂದೇಶವನ್ನು ನೀಡಿದರು. ಈ ಸಮಯದಲ್ಲಿ ಶ್ರೀರೇಪಾಕ ಸತ್ಯನಾರಾಯಣಶ್ರೇಷ್ಠಿಯವರೇ ಅಲ್ಲದೆ ಇನ್ನೂ ಅನೇಕ ಪುರಪ್ರಮುಖರೂ ಅಲ್ಲಿ ಉಪಸ್ಥಿತರಾಗಿದ್ದು ಸರ್ವರೂ ಶ್ರೀಗಳವರಿಗೆ ಕಾಣಿಕೆಗಳನ್ನರ್ಪಿಸಿ, ಮಹಿಳಾಸಮಾಜದ ವತಿಯಿಂದಲೂ ಕಾಣಿಕೆಗಳನ್ನು ಅರ್ಪಿಸಿ, ಮಂತ್ರಾಕ್ಷತಾಪ್ರಸಾದಗಳನ್ನು ಪಡೆದುಕೊಂಡ ನಂತರ 9 ಗಂಟೆಗೆ ನಿಷ್ಠಾಸಮಾಜದ ಕಾರ್ಯದರ್ಶಿನಿಯರಾದ ಶ್ರೀ|| ತಲ್ಲಮ್ಮನವರ ಮನೆಗೆ ಹೋದೆವು. ಅಲ್ಲಿ ಶ್ರೀಗಳವರು 15 ನಿಮಿಷದವರೆಗೆ ಇದ್ದು ಎಲ್ಲರಿಗೂ ಆಶೀರ್ವದಿಸಿದ ಬಳಿಕ ಕಾಕಿನಾಡ ಪೋರ್ಟ್ ಸ್ಟೇಷನ್ನಿಗೆ ಹೊರಟೆವು. ಮಹಿಳಾ ಸಮಾಜದ ಮುಖ್ಯಸದಸ್ಯರೆಲ್ಲರೂ ಸ್ಟೇಷನ್ನಿಗೆ ಶ್ರೀಗಳವರನ್ನು ಬೀಳ್ಕೊಡಲು ಬಂದಿದ್ದರು.

ರೈಲು ಹೊರಡುವದಕ್ಕೆ ಇನ್ನೂ ಒಂದೂವರೆ ಗಂಟೆ ಅವಕಾಶವಿದ್ದದ್ದರಿಂದ ಎರಡನೆಯ ತರಗತಿಯ ವಿಶ್ರಾಂತಿಗೃಹದಲ್ಲಿ ಶ್ರೀಮತಿ ರಾಜರತ್ನಮ್ಮನವರ ಪ್ರಶ್ನೆಗೆ ಉತ್ತರರೂಪವಾಗಿ ಶ್ರೀಗಳವರು ನಿರೂಪಿಸಿದ ವಿಷಯದ ಸಾರಾಂಶವು ಹೀಗಿತ್ತು: "ಚಿತ್ತಶುದ್ಧಿಗೆ ಸಾಧನಗಾಳಗಿರುವ ಯಜ್ಞ, ದಾನ, ತಪಸ್ಸುಗಳಲ್ಲಿ ಕಲಿಯುಗದಲ್ಲಿ ದಾನವೆಂಬುದೊಂದೇ ಹೆಚ್ಚಿನ ಸ್ಥಾನವನ್ನು ತೆಗೆದುಕೊಂಡಿದೆ. ಮಿಕ್ಕೆರಡು ಸಾಧನಗಳನ್ನು ವಿಧ್ಯುಕ್ತವಾಗಿ ಆಚರಿಸುವದೆಂಬುದು ಸುಲಭಸಾಧ್ಯವಲ್ಲ. ಆದರೂ ಯಥಾಶಕ್ತಿಯಾಗಿ ಅವುಗಳನ್ನೂ ಆಚರಿಸಬೇಕಾದದ್ದು ಅಗತ್ಯ. ದಾನದಿಂದ ತ್ಯಾಗವು ಅಳವಡುತ್ತದೆ, ತ್ಯಾಗವು ಪರಿಪೂರ್ಣವಾಗಬೇಕಾದರೆ ಅಹಂಭಾವವನ್ನೇ ತ್ಯಾಗಮಾಡಬೇಕು. ಆಗಲೇ

ಅಮೃತತ್ವವು ಪ್ರಾಪ್ತವಾಗುತ್ತದೆ.''ಈ ವಿಷಯದಲ್ಲಿ ಸಂನ್ಯಾಸಿಗಳೊಬ್ಬರ ಕಥೆಯನ್ನೂ ನಿರೂಪಿಸಿ ತ್ಯಾಗದ ತತ್ತ್ವವನ್ನು ಚೆನ್ನಾಗಿ ಎಲ್ಲರ ಮನಸ್ಸಿನಲ್ಲೂ ಬಿಂಬಿಸುವಂತೆ ಉಪದೇಶಿಸಿದರು. ಸರಿಯಾಗಿ 11 ಗಂಟೆಗೆ ನಾವು ರೈಲಿನಲ್ಲಿ ಕುಳಿತಾಗ ಸರ್ವರೂ ಸುಖಪ್ರಯಾಣವನ್ನು ಕೋರಿದರು.

ಮಧ್ಯಮಾರ್ಗದಲ್ಲಿ ತುನಿಸ್ಟೇಷನ್ನಿನಲ್ಲಿ ಆ ಊರಿನ ಭಗವದ್ಗೀತಾ ಮಹಿಳಾ ಸಮಾಜದವರೂ ಹಾಗೂ ಕೆಲವು ಸುಪ್ರತಿಷ್ಠಿತಸದ್ಗೃಹಸ್ಥರೂ ತಮ್ಮ ಗುರುಗಳಾದ ಶ್ರೀ॥ ಗುಪ್ತಾದಂಪತಿಗಳನ್ನೂ ಶ್ರೀಗಳವರನ್ನೂ ಸಂದರ್ಶಿಸಲು ಕಾಯ್ದುನಿಂತಿದ್ದರು. ರೈಲು ನಿಂತೊಡನೆಯೆ ಸರ್ವರೂ ನಾವಿದ್ದೆಡೆಗೆ ಧಾವಿಸಿ ಶ್ರೀಗಳವರ ದರ್ಶನಾಶೀರ್ವಾದಗಳನ್ನು ಪಡೆದು ಸಾಧ್ಯವಾದರೆ ಹಿಂತಿರುಗಿ ಬರುವಾಗ ತಮ್ಮೂರಿಗೆ ದಯಮಾಡಿಸಬೇಕೆಂದು ವಿನಂತಿಸಿಕೊಂಡರು. ಅನಕಾಪಲ್ಲಿಯಲ್ಲಂತೂ ಸುಮಾರು ನೂರಾರು ಜನರು ಶ್ರೀಗಳವರ ದರ್ಶನಾಕಾಂಕ್ಷಿಗಳಾಗಿ ನಿಂತಿದ್ದರು. ಈ ಸ್ಥಳಗಳಿಗೆಲ್ಲಾ ನಾವು ಕಾಕಿನಾಡಾದಲ್ಲಿರುವಾಗಲೇ ತಾ॥ 19–11–63ನೇ ದಿನ ಮದ್ರಾಸ್–ಕಲ್ಕತ್ತಾ ಮೇಲಿನಿಂದ (Mail) ಕಾಕಿನಾಡದಿಂದ ನೇರವಾಗಿ ವಿಜಯನಗರಕ್ಕೆ ಹೊರಡುತ್ತೇವೆ ಎಂಬುದನ್ನು ತಂತಿಯ ಮೂಲಕ ತಿಳಿಸಿದ್ದೆವು. ಆದ್ದರಿಂದಲೇ ಆಯಾ ಸ್ಥಳಗಳಲ್ಲಿ ಜನಗಳು ಶ್ರೀಶ್ರೀಗಳವರಿಗಾಗಿ ಕಾದಿದ್ದರು. ಅನಕಾಪಲ್ಲಿಯ ಸುಪ್ರತಿಷ್ಠಿತರೆಲ್ಲರೂ ಶ್ರೀಶ್ರೀಗಳವರ ದರ್ಶನವನ್ನು ಪಡೆದು ಹಿಂದಿರುಗಿ ಬರುವಾಗ ಕನಿಷ್ಠಪಕ್ಷ ಒಂದು ವಾರವಾದರೂ ತಮ್ಮೂರಿನಲ್ಲಿ ಶ್ರೀಶ್ರೀಗಳವರು ಇರಬೇಕೆಂದು ಬೇಡಿಕೊಂಡರು. ಹೀಗೆ ವಾಲ್ಟೇರ್ (ವಿಶಾಖಪಟ್ಟಣ) ಸ್ಟೇಶನ್ನಿನಲ್ಲಿಯೂ ಕೆಲವುಭಕ್ತರು ಶ್ರೀಶ್ರೀಗಳವರ ದರ್ಶನಾಶೀರ್ವಾದಗಳನ್ನು ಪಡೆದರು.

## ಶ್ರೀಶ್ರೀಗಳವರ ಆಂಧ್ರಪ್ರದೇಶದ ಪ್ರವಾಸವಾರ್ತೆ–7

### ವಿಜಯನಗರ, 19–11–63

### (ಜುಲೈ 1964)

**ಸಾಯಂಕಾಲ**–6 ಘಂಟೆಗೆ ವಿಜಯನಗರನಿಲ್ದಾಣವನ್ನು ತಲುಪಿದೆವು. ಅಲ್ಲಿ ಸುಮಾರು 10–12 ಜನರು ನಮ್ಮನ್ನು ಸ್ವಾಗತಿಸುವದಕ್ಕಾಗಿ ನಿಂತಿದ್ದರು. ಶ್ರೀಶ್ರೀಗಳವರು ಕಾರಿನಲ್ಲಿ ಪ್ರಯಾಣ ಬೆಳೆಯಿಸಿದ ತರುವಾಯ ಶ್ರೀಗುಪ್ತದಂಪತಿಗಳು ತಮ್ಮ ಭಕ್ತ ಮಂಡಳಿಯ ಜೊತೆಗೆ ಹೊರಟರು. ನಾನು ಆ ಊರಿನ ಪಂಡಿತರುಗಳಲ್ಲೊಬ್ಬರಾದ

ಬ್ರ॥ಶ್ರೀ॥ ಸೋಮಯಾಜಿಗಳೊಡನೆ ರಿಕ್ಷಾದಲ್ಲಿ ಹೊರಟೆನು. ನಮ್ಮೆಲ್ಲರಿಗೂ ಇಳಿದುಕೊಳ್ಳಲು 'ಉಸುರಿಕಿಲವಾರಿ ಛತ್ರಂ' ಎಂಬಲ್ಲಿ ಏರ್ಪಾಡಾಗಿತ್ತು. ಈ ಛತ್ರವು ನಿಲ್ದಾಣದಿಂದ ಎರಡು ಮೈಲು ದೂರದಲ್ಲಿದ್ದುದರಿಂದ ಅಲ್ಲಿಗೆ ಹೋಗುವವರೆಗೂ ಬ್ರ॥ಶ್ರೀ॥ ಸೋಮಯಾಜಿಗಳೂ ನಾನೂ ತೆಲುಗಿನಲ್ಲಿಯೇ ಮಾತನಾಡುತ್ತಿರುವಾಗ ''ವಿಜಯನಗರದಲ್ಲಿ ತರ್ಕ, ನ್ಯಾಯ, ವ್ಯಾಕರಣ, ಪೂರ್ವಮೀಮಾಂಸೆ, ವೇದಾಂತಾದಿ ಎಲ್ಲ ಶಾಸ್ತ್ರಗಳಲ್ಲಿಯೂ ಪರಿಣತರಾಗಿರುವ ಅನೇಕಾನೇಕ ವಿದ್ವಾಂಸರಿರುವರು. ಆಂಧ್ರದೇಶದಲ್ಲಿ ಇಷ್ಟು ಹೆಚ್ಚಿನ ಸಂಖ್ಯೆಯ ವಿದ್ಯಾವಂತರಿರುವದು ಇದೊಂದೇ ಸ್ಥಳವು. ಇದಲ್ಲದೆ ಲೌಕಿಕರಲ್ಲಿ ಸುಪ್ರತಿಷ್ಠಿತರಾದ ಅನೇಕರೂ ಇಲ್ಲಿಯ ಅರಸುಮನೆತನದವರೂ ಸಹ ವೇದಾಂತಾದಿ ವಿಚಾರಗಳ ಬಗ್ಗೆ ಶ್ರದ್ಧಾದರಗಳುಳ್ಳವರಾಗಿದ್ದಾರೆ. ಇಲ್ಲಿ 'ಉಪನಿಷದ್ವಿಚಾರಪರಿಷತ್ತು' ಎಂಬ ಸಂಸ್ಥೆಯು ಶ್ರೀ ಶಂಕರಮಠದಲ್ಲಿ ಸ್ಥಾಪಿತವಾಗಿದ್ದು ಶ್ರೀ॥ ಕೆ. ಸೂರ್ಯನಾರಾಯಣರಾವುಗಾರು ಎಂಬುವರು ಅದರ ಕಾರ್ಯದರ್ಶಿಗಳಾಗಿದ್ದಾರೆ. ''ಶ್ರೀಶ್ರೀಗಳವರು ಕನಿಷ್ಠ ಒಂದು ದಿನವಾದರೂ ಅಲ್ಲಿ ಉಪನ್ಯಾಸವನ್ನು ಕೊಡಲೇಬೇಕು. ಆ ಬಗ್ಗೆ ನೀವು ಏರ್ಪಾಡು ಮಾಡಿರಿ'' ಎಂದು ಅವರು ಹೇಳಿದರಲ್ಲದೆ ನಾವು ಬೆಂಗಳೂರಿನಲ್ಲಿ ಪ್ರಕಟಿಸಿದ ಕರಪತ್ರದ ವಿಚಾರವನ್ನು ತೆಗೆದು 'ಭಾಷ್ಯಕಾರರಿಗೂ ವ್ಯಾಖ್ಯಾನಕಾರರಿಗೂ ಪ್ರತಿಪಾದನಾಪದ್ಧತಿಯು ಭಿನ್ನವಾಗಿದ್ದರೂ ಕೊನೆಗೆ ಅವರೆಲ್ಲರೂ ಅದ್ವೈತವನ್ನೇ ಪ್ರತಿಪಾದಿಸುತ್ತಿರುವರಲ್ಲವೆ? ಒಂದು ವಿಷಯವನ್ನು ಪ್ರತಿಪಾದಿಸಲು ಅನೇಕ ಮಾರ್ಗಗಳಿರಬಾರದೇಕೆ? ಈ ಬಗ್ಗೆ ನಿಮ್ಮಿಂದಲೂ ನಿಮ್ಮ ಗುರುಗಳಿಂದಲೂ ಕೇಳಿ ತಿಳಿದುಕೊಳ್ಳಬೇಕೆಂಬ ಕುತೂಹಲವು ಇಲ್ಲಿನ ಪಂಡಿತರುಗಳಿಗೂ ಜಿಜ್ಞಾಸುಗಳಿಗೂ ಇದೆ. ಇದಕ್ಕೆ ನೀವೇನೆನ್ನುವಿರಿ?' ಎಂದು ಪ್ರಶ್ನಿಸಿದರು. ನಾನು ನನ್ನ ಅಭಿಪ್ರಾಯವನ್ನು ಹೇಳುವದಕ್ಕಾರಂಭಿಸುವಷ್ಟರಲ್ಲಿಯೇ ಛತ್ರವು ಬಂದಿತಾದ್ದರಿಂದ ಮಾರನೆಯ ದಿವಸ ಬರುವಂತೆ ಅವರಿಗೆ ಹೇಳಿದೆ. ಸಾಯಂಕಾಲದ ಸ್ನಾನಾದಿಗಳಾದ ಬಳಿಕ ಶ್ರೀ॥ ಕೆ. ಸೂರ್ಯನಾರಾಯಣರಾಯರೂ ಸೋಮಯಾಜಿಗಳೂ ಶ್ರೀಗಳವರ ದರ್ಶನವನ್ನು ಪಡೆದು ಬೆಳಗ್ಗೆ ಮತ್ತೆ ಬಂದು ನೋಡುವದಾಗಿ ತಿಳಿಸಿದರು. ಶ್ರೀಗುಪ್ತದಂಪತಿಗಳ ಶಿಷ್ಯವರ್ಗದವರಾದ ಅನೇಕ ವೈಶ್ಯಪ್ರಮುಖರು ಬಂದು ಶ್ರೀಶ್ರೀಗಳವರ ದರ್ಶನವನ್ನು ತೆಗೆದುಕೊಂಡರು.

### ತಾ॥ 20–11–63

ಈ ದಿನ ಬೆಳಗ್ಗೆ 10 ಘಂಟೆಯಿಂದ 11 ಘಂಟೆಯವರೆಗೆ ಶ್ರೀ ಕನ್ನಿಕಾಪರಮೇಶ್ವರಿದೇವಸ್ಥಾನದಲ್ಲಿ ಶ್ರೀಶ್ರೀಗಳವರ ಉಪನ್ಯಾಸವನ್ನೇರ್ಪಡಿಸಲಾಗಿತ್ತು

ಬೆಳಗ್ಗೆ ಆಹ್ನಿಕಾದಿಗಳಾದ ಮೇಲೆ ಬ್ರಾ॥ಶ್ರೀ॥ ಸೋಮಯಾಜಿಗಳು ನನ್ನೊಡನೆ ಮಾತನಾಡಿ ಹಿಂದಿನ ದಿವಸ ಪ್ರಸ್ತಾಪಿಸಿದ ವಿಚಾರವಾಗಿ ಮತ್ತೆ ಕೇಳಿದರು. ಆಗ ನಾನು 'ಎಲ್ಲವೂ ಅದ್ವೈತಸಿದ್ಧಾಂತವೇ ಆಗಿರುವದರಿಂದ ಅಲ್ಲಿ ದೋಷಗಳನ್ನು ಹುಡುಕಬಾರದೆಂಬ ನಿಯಮವೇನೂ ಇಲ್ಲ. ಏಕೆಂದರೆ ಶ್ರೀ ಶಂಕರಾಚಾರ್ಯರೇ ತಮ್ಮ ಕಾಲದಲ್ಲಿ ಪ್ರಚಾರದಲ್ಲಿದ್ದ ಅನೇಕ ಅದ್ವೈತಪ್ರಕ್ರಿಯೆಗಳನ್ನು ಖಂಡಿಸಿರುತ್ತಾರೆ. ಆದ್ದರಿಂದ ಪೂರ್ವಾಪರವಿರುದ್ಧವಾಗಿಯೂ ಪರಸ್ಪರ ವಿರುದ್ಧವಾಗಿಯೂ ಇರುವ ವ್ಯಾಖ್ಯಾನಗಳು ಶ್ರುತಿಯುಕ್ತ್ಯನುಭವಗಳಿಗೆ ಯಾವ ಅಂಶದಲ್ಲಿ ವಿರುದ್ಧವಾಗಿವೆ ಎಂಬುದನ್ನು ತೋರಿಸುವ ದೇನೂ ತಪ್ಪಲ್ಲ'–ಎಂಬುದನ್ನು ವಿವರವಾಗಿ ತಿಳಿಯಹೇಳಿದೆನು. ಶ್ರೀಗಳ ಅಭಿಪ್ರಾಯವನ್ನು ಇಲ್ಲಿರುವ ಪಂಡಿತರುಗಳು ತಿಳಿದುಕೊಂಡು ತಮ್ಮತಮ್ಮ ಮತವನ್ನು ಬರೆದುಕೊಟ್ಟರೆ ಅವಶ್ಯವಾಗಿ ಅದನ್ನು ಕಾರ್ಯಾಲಯದವರು ಪ್ರಕಟಿಸುವರು; ಚರ್ಚೆಗೆ ಆಸ್ಪದವಿಲ್ಲದಂತೆ ಭಾಷಣಕ್ಕೆ ಏರ್ಪಡಿಸುವದಾದರೆ ಶ್ರೀಶ್ರೀಗಳು ಅವಶ್ಯವಾಗಿ ಒಪ್ಪುವರು–ಎಂದು ಮನಗಾಣಿಸಿಕೊಟ್ಟು ಅವರನ್ನು ಶ್ರೀಗಳವರ ಬಳಿಗೆ ಕರೆದುಕೊಂಡು ಹೋದೆನು. ಶ್ರೀಶ್ರೀಗಳವರಿಗೂ ಸೋಮಯಾಜಿಗಳಿಗೂ ಸಂಸ್ಕೃತದಲ್ಲಿ ಸಂಭಾಷಣೆಯಾಗಿ ಶ್ರೀಗಳವರು ಉಪನ್ಯಾಸವನ್ನು ಮಾಡಲು ಒಪ್ಪಿಕೊಂಡರು. ಆದರೆ ಆಂಧ್ರಪ್ರಾಂತದಲ್ಲಿ ಇನ್ನೂ 2–3 ಊರುಗಳಿಗೆ ಹೋಗಲೇಬೇಕಾಗಿದ್ದದ್ದರಿಂದಲೂ ಪ್ರವಾಸಕ್ಕೆ ಹೆಚ್ಚು ಕಾಲಾವಕಾಶವಿಲ್ಲದ್ದರಿಂದಲೂ ನಾವು ವಿಜಯನಗರದಲ್ಲಿ ತಾ॥ 21–11–63ರಂದು ಮಾತ್ರವೇ ನಿಲ್ಲುವದಾಗಿಯೂ ಅಂದು ಸಾಯಂಕಾಲ ಒಂದೇ ಉಪನ್ಯಾಸವನ್ನು ಕೊಡಲು ಸಾಧ್ಯವಿದೆಯೆಂದೂ ತಿಳಿಸಿದೆವು. ಇದೆಲ್ಲಕ್ಕೂ ಬ್ರಾ॥ಶ್ರೀ॥ ಸೋಮಯಾಜಿಗಳು ಒಪ್ಪಿ ಮಧ್ಯಾಹ್ನ ಶ್ರೀ॥ ಕೆ. ಸೂರ್ಯನಾರಾಯಣರೊಡನೆ ತಾವು ಬಂದು ಕಾರ್ಯಕ್ರಮವನ್ನು ನಿರ್ಧರಿಸಿಕೊಂಡು ಹೋಗುವದಾಗಿ ಹೇಳಿ ಹೊರಟುಹೋದರು.

ಅಷ್ಟರಲ್ಲಿ ಬೆಳಗಿನ 9–30 ಘಂಟೆಯಾದ್ದರಿಂದ ಪೇಟೆಯಲ್ಲಿರುವ ಶ್ರೀಕನ್ಯಕಾಪರಮೇಶ್ವರೀ ದೇವಸ್ಥಾನಕ್ಕೆ ಉಪನ್ಯಾಸಕ್ಕೆ ಹೊರಟೆವು. ಸುಮಾರು 3–4 ನೂರು ಜನರು ಇದ್ದಿರಬಹುದು, ಧ್ವನಿವರ್ಧಕಯಂತ್ರದ ವ್ಯವಸ್ಥೆಯೂಚೆನ್ನಾಗಿತ್ತು ಗೀತಾಸಮಾಜದವರು ಭಗವದ್ಗೀತೆಯ ಹದಿನೈದನೆಯ ಅಧ್ಯಾಯವನ್ನು ಪಾರಾಯಣ ಮಾಡಿದನಂತರ ಶ್ರೀ ಗುಪ್ತರು ಶ್ರೀಶ್ರೀಗಳವರ ಹಾಗೂ ಕಾರ್ಯಾಲಯದ ಪರಿಚಯವನ್ನು ಮಾಡಿಕೊಟ್ಟರು. ನಾನೂ ಸಹ ಪ್ರಾಸ್ತಾವಿಕವಾಗಿ ಎರಡು ಮಾತುಗಳನ್ನಾಡಿದೆನು. ಆಮೇಲೆ ಶ್ರೀಶ್ರೀಗಳವರ ಉಪನ್ಯಾಸವು ಆರಂಭವಾಯಿತು. ಅದರ ಸಾರಾಂಶವು ಹೀಗಿದೆ: "ಈಗಿನ ಕಾಲದಲ್ಲಿ ಭೌತಿಕ ವಿಜ್ಞಾನವು ಅತಿಶಯವಾಗಿ ಮುಂದುವರಿದಿರುವದರಿಂದ ಅದರ ಬೆಡಗಿಗೆ ಬೆರಗಾಗಿರುವ ನಮ್ಮ ಇಂದಿನ ಪೀಳಿಗೆಯವರು ಪರಮಾತ್ಮನ

ವಿಚಾರವನ್ನು ಕೇಳಿದೊಡನೆಯೇ 'ಭಗವಂತನು ಎಲ್ಲಿದಾನೆ?' ಎಂದು ಕೈ ಮಾಡಿ ಕೇಳುತ್ತಿದ್ದಾರೆ. ಇದಕ್ಕೆ ಉತ್ತರವಾಗಿ ಭಗವದ್ಗೀತೆಯಲ್ಲಿ ಈಗ ತಾನೆ ನೀವು ಪಾರಾಯಣ ಮಾಡಿರುವ ಹದಿನೈದನೆಯ ಅಧ್ಯಾಯದಲ್ಲಿ ಭಗವಂತನು "ಮಮೈವಾಂಶೋ ಜೀವಲೋಕೇ"(ಈ ಜೀವನು ನನ್ನದೇ ಅಂಶವು) ಎಂದು ಹೇಳಿದ್ದಾನೆ. ಇದರ ಅರ್ಥವೇನೆಂದರೆ: 'ಭಗವಂತನು ಎಲ್ಲಿದ್ದಾನೆ?' ಎಂದು ನೀವು ಕೈಯೆತ್ತಿ ಕೇಳುವಿರಲ್ಲವೆ? ಈ ಕೈಯ್ಯನ್ನೆತ್ತುವದಕ್ಕೆ ಬೇಕಾಗಿರುವ ಶಕ್ತಿ ಹೀಗೆ ಆಲೋಚಿಸಲು ಅವಶ್ಯವಿರುವ ಶಕ್ತಿ ಈ ಶಬ್ದಗಳನ್ನುಚ್ಚರಿಸುವ ಬಾಯಿ–ಇವೆಲ್ಲವೂ ಎಲ್ಲಿಂದ ಬರುತ್ತವೆಯೋ ಅದೇ ಭಗವಂತನು, ಅರ್ಥಾತ್ 'ನಾನು' ಎಂದು ನಾವುಗಳು ಹೇಳಿಕೊಳ್ಳುವಾಗಲೆಲ್ಲ ಭಗವಂತನಲ್ಲಿಯೇ ಇದ್ದು ಹಾಗೆ ಹೇಳಿಕೊಳ್ಳುತ್ತೇವೆ. ಆದ್ದರಿಂದ 'ಭಗವಂತನೆಲ್ಲಿದ್ದಾನೆ?' ಎಂದು ಹೊರಕ್ಕೆ ಹುಡುಕುತ್ತಾ ತಡಕಾಡಬೇಡಿರಿ. ನಿಮ್ಮೊಳಗೇ ಅವನು ಇದಾನೆ–ಎಂಬುದನ್ನು ಕಂಡುಕೊಳ್ಳಿರಿ"ಎಂಬ ಮೊದಲನೆಯ ಪಾಠವನ್ನು ನಮ್ಮ ಇಂದಿನ ಪೀಳಿಗೆಯವರಿಗೆ ಬೋಧಿಸುವದು ಅತ್ಯವಶ್ಯವಾಗಿದೆ."

ಈ ವಾಕ್ಯವನ್ನು ಕೇಳಿ ಶ್ರೀ|| ಗ್ರಂಧಿಶೇಷಯ್ಯ, ಶ್ರೀ|| ಗ್ರಂಧಿ ದುರ್ಗಾರಾವ್, ಹೋಮಿಯೋಪತಿ ಡಾಕ್ಟರ್ ಶ್ರೀ|| ಗ್ರಂಧಿ ಸುಬ್ರಹ್ಮಣ್ಯಂರವರೇ ಮೊದಲಾದ ಸದ್ಭಕ್ತರುಗಳೆಲ್ಲರೂ ರೋಮಾಂಚಪುಳಕಿತರಾಗಿ ಆನಂದಬಾಷ್ಪವನ್ನು ಹರಿಸುತ್ತಾ ಶ್ರೀಶ್ರೀಗಳವರ ಪಾದಕ್ಕೆ ನಮಸ್ಕರಿಸಿದ ದೃಶ್ಯವು ನನ್ನ ಮನಸ್ಸಿನಲ್ಲಿ ಇನ್ನೂ ಅಚ್ಚಳಿಯದೆ ನಿಂತಿದೆ. ಒಟ್ಟಿನಲ್ಲಿ ಸರ್ವಶ್ರೋತೃಗಳೂ ಆನಂದಪರವಶರಾಗಿದ್ದರು. ಈ ಕಾರ್ಯಕ್ರಮವನ್ನು ಮುಗಿಸಿಕೊಂಡು ನಾವೆಲ್ಲರೂ ಮಧ್ಯಾಹ್ನ 12 ಘಂಟೆಗೆ ದೇವಸ್ಥಾನದಿಂದ ನಮ್ಮ ನಿವಾಸಕ್ಕೆ ಹಿಂದಿರುಗಿದೆವು.

ಮಾಧ್ಯಾಹ್ನಿಕ, ಭಿಕ್ಷಾ, ವಿಶ್ರಾಂತಿಗಳಾದ ಮೇಲೆ 3 ಘಂಟೆಯ ಸುಮಾರಿಗೆ ಶ್ರೀ|| ಕೆ. ಸೂರ್ಯನಾರಾಯಣರಾಯರೊಡನೆ ಬ್ರ||ಶ್ರೀ|| ಸೋಮಯಾಜಿಗಳು ಬಂದು ಶ್ರೀಶ್ರೀಗಳವರನ್ನು ಕಂಡು ಮಾತನಾಡಿ ತಾ|| 21ರಂದು ಸಾಯಂಕಾಲ ಅಲ್ಲಿಯ ಶ್ರೀ ಶಂಕರಮಠದಲ್ಲಿ 7 ಘಂಟೆಯಿಂದ ಉಪನಿಷದ್ವಿಚಾರಪರಿಷತ್ತಿನ ಪರವಾಗಿ ಉಪನ್ಯಾಸ ಮಾಡಬೇಕೆಂಬುದನ್ನು ನಿಶ್ಚಯಿಸಿದರು. ಆಮೇಲೆ ಡಾಕ್ಟರ್ ಶ್ರೀ ಗ್ರಂಧಿ ಸುಬ್ಬರಾವ್ ಅವರು ಶ್ರೀಶ್ರೀಗಳವರೊಂದಿಗೆ ಇಂಗ್ಲೀಷಿನಲ್ಲಿ ಮಾತನಾಡಿ ಪ್ರವಾಸದಲ್ಲಿ ಅನಾರೋಗ್ಯವಾಗದಂತೆಯೂ ದೇಹದಲ್ಲಿ ನಿಶ್ಶಕ್ತಿಯಾಗದಂತೆಯೂ ಕೆಲವು ಹೋಮಿಯೋಪತಿ ಔಷಧಿಗಳನ್ನು ಸಮರ್ಪಿಸಿದರು. ಇವು ನಮ್ಮ ಪ್ರವಾಸವು

ಪೂರ್ತಿಯಾಗುವವರೆಗೂ ಶ್ರೀಶ್ರೀಗಳವರ ಆರೋಗ್ಯವು ಕೆಡದಂತೆ ಇರಲು ಸಹಾಯಕವಾದವು.*

ಮೊದಲೇ ಗೊತ್ತುಪಡಿಸಿದ್ದಂತೆ ಸಾಯಂಕಾಲ ಪೇಟೆಯೊಳಗಿನ ಅಮ್ಮನವರ ದೇವಸ್ಥಾನದಲ್ಲಿ ಉಪನ್ಯಾಸಕಾರ್ಯಕ್ರಮವು ಆರಂಭವಾಯಿತು. ಆಗ ನಿರೂಪಿಸಿದ ಉಪದೇಶದ ಸಾರವು ಈ ರೀತಿ ಇತ್ತು: "ಭಗವಂತನು ನಮ್ಮಲ್ಲಿಯೇ ಇರುವದಾದರೆ 'ಅವನನ್ನು ಕಾಣುವದಕ್ಕೆ ಸಾಧನವೇಕೆ?' ಎಂಬ ಪ್ರಶ್ನೆಯು ಸಹಜವಾಗಿ ಉದ್ಭವಿಸುವದು. ಭೌತಿಕವಿಷಯಗಳನ್ನು ನೋಡಲು ನಮ್ಮ ಇಂದ್ರಿಯಗಳೂ ಅನೇಕ ಯಂತ್ರೋಪಕರಣಗಳೂ ಸಹಾಯಕವಾಗಿವೆ. ಆದರೆ ನಮ್ಮೊಳಗಿರುವ ಭಗವಂತನನ್ನು ಕಾಣಲು ಮಾತ್ರ ಇವು ಯಾವವೂ ಸಹಾಯಕವಾಗುವದಿಲ್ಲ. ಇದರಂತೆಯೇ ಆಧಿದೈವಿಕಪ್ರಪಂಚಕ್ಕೆ ಸೇರಿರುವ ಅನೇಕ ದೇವತೆಗಳ ಸಾಕ್ಷಾತ್ಕಾರವನ್ನು ಪಡೆಯಲು ಶ್ರದ್ಧೆ ಎಂಬುದೊಂದೇ ಸಾಧನವಾಗಿದೆ. ನಮ್ಮೊಳಗಿರುವ ಪರಮಾತ್ಮನನ್ನು ಕಾಣಲು ಈ ರೀತಿಯ ಬರಿಯ ಶ್ರದ್ಧಾಮಾತ್ರವೇ ಪ್ರಯೋಜನಕಾರಿಯಾಗಲಾರದು. ಅನುಭವದೃಷ್ಟಿಯೊಂದೇ ಪರಮಾತ್ಮನನ್ನು ಕಾಣಲು ಸಾಧನವು. ಈ ದೃಷ್ಟಿಯು ಸಾರ್ವತ್ರಿಕವೂ ಸಂಪೂರ್ಣವೂ ಆಗಿರುವ ಅನುಭವವನ್ನು ಆಧರಿಸಿದೆಯೇ ಹೊರತು ದೇಶ, ಕಾಲ, ಕಾರ್ಯಕಾರಣ ಭಾವಗಳಿಗೆ ಕಟ್ಟುಬಿದ್ದಿರುವ ಅಲ್ಪಾನುಭವಗಳನ್ನು ಆಧರಿಸಿಲ್ಲ. ಇಂಥ ಅನುಭವವು ನಮ್ಮೊಳಗೇ ಇರುತ್ತಿದ್ದರೂ ನಮಗೆ ಕಾಣದಾಗಿದೆ. ಉಪನಿಷತ್ತುಗಳು ಅದನ್ನು ತೋರಿಸಿಕೊಟ್ಟಾಗ, ನಾವು ಆ ಅನುಭವದೃಷ್ಟಿಯನ್ನು ಪಡೆಯುವೆವು. ಇದೇ ಅಧ್ಯಾತ್ಮಶಾಸ್ತ್ರದ ಪ್ರಯೋಜನ. ಈ ಪ್ರಯೋಜನವು ಬಂದಾಗ ನಾವೆಲ್ಲರೂ ಪರಮಾತ್ಮಸ್ವರೂಪರೇ ಆಗಿರುತ್ತೇವೆ. ಈಗಿನ ಈ ಕ್ಷುದ್ರವಾದ ನಾನು ಎಂಬುದು ಹೊರಟೇ ಹೋಗಿರುತ್ತದೆ.

* ಈ ಡಾಕ್ಟರು ಅಪ್ರಾರ್ಥಿತರಾಗಿ ಕೊಟ್ಟ ಟಾನಿಕ್, ಧ್ವನಿಯು ಕುಗ್ಗಿದಾಗ ಉಪಯೋಗಿಸುವದಕ್ಕೆ ಮಾತ್ರೆಗಳು, ಮತ್ತು ಕ್ಷೀರಶರ್ಕರಾ (Sugar of Milk) ಎಂಬ ಔಷಧಿಗಳು ಬಹಳ ಪ್ರಯೋಜನಕರವೆಂದು ಕಂಡುಬಂದದ್ದರಿಂದ ಶ್ರೀಗಳು ಅವನ್ನು ಮತ್ತೆ ಹೊಳೆನರಸೀಪುರದಿಂದ ಪತ್ರ ಬರೆಯಿಸಿ ತರಿಸಿಕೊಂಡಿರುತ್ತಾರೆ. ಹೋಮಿಯೋಪತಿ ಔಷಧಗಳು ಈಗೀಗ ನಮ್ಮ ದೇಶದಲ್ಲಿ ಜನಪ್ರಿಯವಾಗುತ್ತಿವೆ. ಡಾಕ್ಟರ್ ಸುಬ್ರಹ್ಮಣ್ಯಮ್‌ರವರ ವಿಳಾಸ ಹೀಗಿದೆ: **The Research Homeopethic Society, Dr. Grandhi Subramaniyam, Regd. No. 454, A.P. (Homeo), Vizianagaram (Fort), S.E. Ry.**

ಅನುಭವಸ್ವರೂಪನಾದ ಭಗವಂತನು ಹೀಗೆ ನಮ್ಮಲ್ಲಿಯೇ ಇರುವದಾದರೆ ಆ ಅನುಭವವು ಕಂಡು ಬರದಿರಲು ನಮಗೆ ಅಡ್ಡಿಯಾಗಿರುವ ಪ್ರತಿಬಂಧಕವು ಯಾವದು? ಇಚ್ಛಾದ್ವೇಷಸಮುತ್ಥೇನ ದ್ವನ್ದ್ವಮೋಹೇನ ಭಾರತ। ಸರ್ವಭೂತಾನಿ ಸಂಮೋಹಂ ಸರ್ಗೇಯಾನ್ತಿ ಪರಂತಪ॥ (ಗೀ. 7–27) ಎಂಬ ಶ್ಲೋಕವನ್ನು ಭಗವಂತನು ಹೇಳಿದಾನೆ. ಇದರ ತಾತ್ಪರ್ಯವೇನೆಂದರೆ: ಇಚ್ಛಾದ್ವೇಷಗಳು ಎಲ್ಲಾ ಜೀವರುಗಳಿಗೂ ಹುಟ್ಟುವಾಗಲೇ ಇದ್ದುಕೊಂಡಿರುತ್ತವೆ. ಇವುಗಳಿಂದ ಎದ್ದುಕೊಂಡಿರುವ ದ್ವಂದ್ವಮೋಹವು ಎಲ್ಲಾ ಜೀವರುಗಳನ್ನೂ ಮರುಳುಮಾಡಿ, ಅಂತಃಕರಣವು ತನ್ನ ಹಿಂದಿರುವ ಪರಮಾತ್ಮನ ಕಡೆಗೆ ತಿರುಗದಂತೆ ಅಡ್ಡಿಮಾಡಿರುತ್ತದೆ. ಇದು ಸುಖಸ್ವರೂಪನಾದ ಪರಮಾತ್ಮನನ್ನು ಅರಿಯಲು ಪ್ರತಿಬಂಧಕವಾಗಿದೆ. ಯಾರು ಪುಣ್ಯಕರ್ಮಗಳನ್ನು ಮಾಡಿ ಪಾಪವನ್ನು ತೊಲಗಿಸಿ ಕೊಂಡು ಈ ಅಂತಃಕರಣವನ್ನು ಹಿಂತಿರುಗಿಸಿಕೊಳ್ಳುವರೋ; ಯಾರು ಕರ್ಮಯೋಗ, ಭಗವದ್ಭಕ್ತಿ ಸಂತರಸಂಗ–ಮುಂತಾದ ಸಾಧನಗಳಿಂದ ಇಚ್ಛಾದ್ವೇಷಗಳನ್ನು ಗೆದ್ದುಕೊಳ್ಳುವರೋ ಅವರಿಗೆ ಈ ಮೊಟ್ಟಮೊದಲೇ ಹೇಳಿದ ಅನುಭವದೃಷ್ಟಿಯು ಸುಲಭವಾಗಿ ಸಿಗುತ್ತದೆ. ಈ ಅಭಿಪ್ರಾಯವನ್ನೇ ಪರಮಾತ್ಮನು 'ಯೇಷಾಂ ತ್ವನ್ತಗತಂ ಪಾಪಮ್' (7–28) ಎಂಬ ಶ್ಲೋಕದಲ್ಲಿ ಹೇಳಿದ್ದಾನೆ. ಅಂತೂ ಆತ್ಮನನ್ನರಿಯದಿರಲು ಇಚ್ಛಾದ್ವೇಷಗಳೇ ಪ್ರತಿಬಂಧಕಗಳು. ಸಾಧನೆಗಳಿಂದ ಅವುಗಳನ್ನು ಹಿಮ್ಮೆಟ್ಟಿಸಿದಾಗಲೇ ಪರಮಾತ್ಮಾನುಭವವು ಉಂಟಾಗುವದು'' ಎಂದು ವಿವರಿಸಿ ಸರ್ವರನ್ನೂ ಆನಂದ ಪರವಶರನ್ನಾಗಿ ಮಾಡಿದರು. ನಮ್ಮ ಜೊತೆಯಲ್ಲಿ ಆಂಧ್ರಪ್ರವಾಸಕಾಲದಲ್ಲೆಲ್ಲ ಇದ್ದ ಶ್ರೀ॥ ಚದುವಲ ರಾಮರಾಯರೆಂಬ ಪರಮಾರ್ಥಸಾಧಕರು ಉಪನ್ಯಾಸವು ತಮ್ಮಮೇಲೆ ಬಹಳ ಪರಿಣಾಮವನ್ನುಂಟುಮಾಡಿತೆಂದು ನಮ್ಮ ನಿವಾಸಕ್ಕೆ ತಿರುಗಿ ಬರುವಾಗ ನನ್ನೊಡನೆ ಸಂತೋಷಭರಿತರಾಗಿ ಹೇಳಿದರು.

### ತಾ॥ 21–11–63

ಇಂದು ಪೇಟೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರೀಅಮ್ಮನವರ ದೇವಸ್ಥಾನ ದಲ್ಲಿನಡೆದ ವ್ಯಾಖ್ಯಾನಗಳ ಸಮಾಪ್ತಿದಿನವಾಗಿತ್ತು. ಬೆಳಗ್ಗೆ 7 ½ ಘಂಟೆಗೆ ಕಾರ್ಯಕ್ರಮವು ಆರಂಭವಾಯಿತು. ಕಾರ್ಯಾಲಯದ ಹಾಗೂ ಶ್ರೀಶ್ರೀಗಳವರ ವಿಚಾರವಾಗಿ ನಾವು ಕೆಲವು ಸಂಗತಿಗಳನ್ನು ತಿಳಿಸಿದ ಬಳಿಕ ಶ್ರೀ ಗುಪ್ತರು ಅಲ್ಲಿದ್ದ ಗೀತಾಮಹಿಳಾಸಮಾಜ ಹಾಗೂ ಧ್ಯಾನನಿಷ್ಠಾಸಮಾಜದ ಸದಸ್ಯರನ್ನೆಲ್ಲ ಅಭಿನಂದಿಸಿದರು. ಶ್ರೀಶ್ರೀಗಳವರು ಎರಡು

ಉಪದೇಶಪರವಾದ ಮಾತುಗಳನ್ನು ಹೇಳಿದಮೇಲೆ ಮಂತ್ರಾಕ್ಷತೆ, ಪ್ರಸಾದವಿನಿಯೋಗಗಳಾಗಿ ಕಾರ್ಯಕ್ರಮವು ಮುಕ್ತಾಯವಾಯಿತು. ಇದಾದ ನಂತರ ಶ್ರೀ ವಾಸವೀಗೀತಾಸಮಾಜದವರಿಂದ ಶ್ರೀ|| ಗುಪ್ತರ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟ ಶ್ರೀಕೃಷ್ಣವಿಗ್ರಹ ಹಾಗೂ ಗೀತಾಶ್ಲೋಕಗಳನ್ನು ಬರೆಯಿಸಿದ ಚಿತ್ರಪಟವೇ ಮುಂತಾದವನ್ನು ಶ್ರೀಗಳವರಿಗೆ ತೋರಿಸಲಾಗಿ ಅವರು ನೋಡಿ ಸಂತೋಷಪಟ್ಟರು.

ಮಧ್ಯಾಹ್ನವಾದ ಮೇಲೆ 3 ಘಂಟೆಗೆ ಎಕ್ಸ್‌ಟೆನ್‌ಷನ್ನಿನಲ್ಲಿರುವ ಶ್ರೀರಾಮಕೃಷ್ಣ ಮಂದಿರಕ್ಕೆ ಶ್ರೀಶ್ರೀಗಳವರನ್ನು ಅಲ್ಲಿಯವರು ಕರೆದುಕೊಂಡು ಹೋಗಿದ್ದರು. ಬಹುಜನ ಮಹಿಳೆಯರೇ ನೆರೆದಿದ್ದ ಆ ಸಭೆಯಲ್ಲಿ ಶ್ರೀಶ್ರೀಗಳವರು **'ಆರ್ತಾಃ ವಿಷಣ್ಣಾಃ'** ಎಂಬ ಶ್ಲೋಕದ ಆಧಾರದಿಂದ ''ಭಗವಂತನ ಸ್ಮರಣೆಯಿಂದ ಸಂಕಟದಲ್ಲಿರುವವರೂ ದುಃಖದಾರಿದ್ರ್ಯರೋಗಾದಿಗಳಲ್ಲಿರುವವರೂ ಬಂಧನದಲ್ಲಿರುವವರೂ ಆ ದುಃಖಗಳಿಂದ ಮುಕ್ತರಾಗುತ್ತಾರೆ'' ಎಂದು ಉಪದೇಶಿಸಿ ಭಗವನ್ನಾಮದಮಹಿಮೆಯು ಎಲ್ಲರ ಮನಸ್ಸಿಗೂ ತಟ್ಟುವಂತೆ ಮಾಡಿದರು. ಅಲ್ಲಿಂದ 5 ಘಂಟೆಗೆ ನಮ್ಮ ವಾಸಸ್ಥಳಕ್ಕೆ ತಿರುಗಿಬಂದು ಸಾಯಂಸ್ನಾನಾದಿಗಳನ್ನು ಪೂರೈಸಿಕೊಂಡು ಹಿಂದಿನದಿನವೇ ಗೊತ್ತುಪಡಿಸಿದ್ದಂತೆ ಶ್ರೀಶಂಕರಮಠಕ್ಕೆ ಹೊರಟೆವು.

ಶ್ರೀಶಂಕರಮಠದಲ್ಲಿಯ ಸಭಾಮಂದಿರದಲ್ಲಿ ವಿದ್ವಾಂಸರು, ಸುಶಿಕ್ಷಿತರು, ಪ್ರತಿಷ್ಠಿತರೇ–ಮೊದಲಾದ ಸುಮಾರು 200 ಜನರು ಸೇರಿದ್ದರಲ್ಲದೆ ಅನೇಕ ಮಹಿಳೆಯರೂ ಸಾಮಾನ್ಯಜನರೂ ಸಹ ಕಿಕ್ಕಿರಿದು ತುಂಬಿದ್ದರು. ಮೊದಲು ಬಾಗಿಲಲ್ಲಿ ಶ್ರೀಶ್ರೀಗಳವರನ್ನು ದಂಪತಿಗಳಿಬ್ಬರು ಸ್ವಾಗತಿಸಿ ಪಾದಪ್ರಕ್ಷಾಳನ, ಆರತಿಮಾಡಿದರು. ಮಂತ್ರಘೋಷ ಹಾಗೂ ಜಯಘೋಷದೊಂದಿಗೆ ಸಭಾಭವನವನ್ನು ಪ್ರವೇಶ ಮಾಡಿದ್ದಾಯಿತು. ಶ್ರೀಶ್ರೀಗಳವರು ಉಚಿತಾಸನದಲ್ಲಿ ಆಸೀನರಾದನಂತರ ಉಪನಿಷದ್ವಿಚಾರಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ|| ಕೆ. ಸೂರ್ಯನಾರಾಯಣ ರಾಯರು ಎದ್ದುನಿಂತು ಶ್ರೀಗಳವರ ಬರುವಿಕೆಯ ಬಗ್ಗೆ ನಾಲ್ಕು ಮಾತುಗಳನ್ನು ಹೇಳಿದರು. ಎಂದಿನಂತೆ ಕಾರ್ಯಾಲಯ ಹಾಗೂ ಶ್ರೀಶ್ರೀಗಳವರ ಅದ್ಭುತಕಾರ್ಯದ ಪರಿಚಯ ಮಾಡಿಕೊಟ್ಟ ಬಳಿಕ ಉಪನ್ಯಾಸವು ಆರಂಭವಾಯಿತು. ಆ ವ್ಯಾಖ್ಯಾನವು ಬಹಳ ಮಹತ್ತ್ವದ್ದಿದ್ದುದರಿಂದ ಅದರ ಸಾರವನ್ನು ಯಥಾಶಕ್ತಿಯಾಗಿ ಇಲ್ಲಿ ಕೊಟ್ಟಿದ್ದೇನೆ. (ಉಪನ್ಯಾಸವನ್ನು ಶ್ರೀಗಳವರು ಕನ್ನಡದಲ್ಲಿಯೇ ಅನುಗ್ರಹಿಸಿದರು. ನಾನು ತೆಲುಗಿನಲ್ಲಿ ಅನುವಾದಿಸಿ ಹೇಳಿದೆನು).

''ಶ್ರೀಶಂಕರಭಗವತ್ಪಾದರವರು ಪ್ರಸ್ಥಾನತ್ರಯಕ್ಕೆ ಭಾಷ್ಯಗಳನ್ನು ರಚಿಸಿ ಎಲ್ಲರನ್ನೂ ಅನುಗ್ರಹಿಸಿರುತ್ತಾರೆ. ಅವರ ಅಭಿಪ್ರಾಯದಂತೆ ವೇದಾಂತಸಿದ್ಧಾಂತವೇನೆಂದರೆ: ಬ್ರಹ್ಮವು

ನಮ್ಮೆಲ್ಲರಿಗೂ ಆತ್ಮನೇ ಆಗಿರುತ್ತದೆಯಾದರೂ ಹೀಗೆಂಬುದನ್ನು ಅರಿಯದಿರುವಾಗ ಅದೇ ಜೀವರುಗಳು, ಜಗತ್ತು–ಎಂಬ ರೂಪದಲ್ಲಿ ಕಾಣಿಸುತ್ತಿರುತ್ತದೆ. ಈ ಬ್ರಹ್ಮವನ್ನು ಇದ್ದದ್ದು ಇದ್ದಂತೆ ಅರಿಯದೆ ತಪ್ಪಾಗಿ ತಿಳಿದುಕೊಂಡಿರುವದೆಂಬ ಅವಿದ್ಯೆಯನ್ನು ಮುಂದು ಮಾಡಿಕೊಂಡೇ ಸಕಲಪ್ರಮಾಣಗಳು ವಿಧಿನಿಷೇಧಮೋಕ್ಷಶಾಸ್ತ್ರಗಳು ಹೊರಟಿರುತ್ತವೆ. ಶ್ರುತಿಯು 'ತತ್ತ್ವಮಸಿ' (ಆ ಬ್ರಹ್ಮವೇ ನೀನು), 'ನೇಹ ನಾನಾಸ್ತಿ ಕಿಂಚನ' (ಇದರಲ್ಲಿ ನಾನಾತ್ವವು ಸ್ವಲ್ಪವೂ ಇಲ್ಲ) ಎಂದು ಉಪದೇಶಿಸಿದಾಗ ನಾವೇ ಆ ಪರಬ್ರಹ್ಮವಾಗಿ ನೆಲೆನಿಲ್ಲುವೆವು.

''ಪ್ರಮಾಣಗಳೆಲ್ಲವೂ ಪ್ರಮಾತೃವನ್ನು ಆಶ್ರಯಿಸಿಕೊಂಡೇ ತಮ್ಮತಮ್ಮ ವಿಷಯವನ್ನು ತಿಳಿಸಿಕೊಡುತ್ತವೆ; ಅವು ಪ್ರಮಾತೃವನ್ನು ಕೂಡ ತಿಳಿಸಿಕೊಡಲಾರವು. ಈ ಪ್ರಮಾತೃತ್ವವೇ ದೇಹೇಂದ್ರಿಯಾದಿಗಳನ್ನು ನಾನು ನನ್ನದು ಎಂಬ ಅಭಿಮಾನದಿಂದ ವ್ಯವಹರಿಸುವದಕ್ಕೆ ಕಾರಣ. ಅವಿದ್ಯೆಯಿಂದಾಗಿರುವದರಿಂದ ಪ್ರಮಾತೃವಿನ ಪರಮಾರ್ಥ ರೂಪವಾದ ಬ್ರಹ್ಮವನ್ನು ತಿಳಿಯಿಸುವದು ಯಾವ ಪ್ರಮಾಣದಿಂದಲೂ ಆಗಲಾರದು. ಶ್ರುತಿಯುಕೂಡ ಬ್ರಹ್ಮವು ಇಂಥದ್ದು ಎಂದು ವಿಷಯೀಕರಿಸಿ ತಿಳಿಸಲಾರದು; ಏಕೆಂದರೆ ಎಲ್ಲರಿಗೂ ಆತ್ಮನಾಗಿರುವ ಬ್ರಹ್ಮವು ಮಾತಿಗೂ ಮನಸ್ಸಿಗೂ ನಿಲುಕದ ತತ್ತ್ವವಾಗಿರುತ್ತದೆ. ಆದರೆ ಶ್ರುತಿಯು ಅವಿದ್ಯೆಯಿಂದಾಗಿರುವ ಜ್ಞಾತೃ, ಜ್ಞಾನ, ಜ್ಞೇಯ– ಎಂಬ ಭೇದಗಳನ್ನು ಅಲ್ಲಗಳೆದು ಸಾರ್ವತ್ರಿಕಾನುಭವದಿಂದಮಾತ್ರವೇ ತಿಳಿಯಬರುವ ಸ್ವಯಂಸಿದ್ಧವಾದ ಆತ್ಮನನ್ನು ತೋರಿಸಿಕೊಡುತ್ತದೆ. ಹೀಗೆ ಅವಿದ್ಯೆಯನ್ನು ಕಳೆದುಹಾಕಿ ಪ್ರಮಾಣ ಪ್ರಮೇಯವ್ಯವಹಾರವನ್ನೇ ಇಲ್ಲವಾಗಿಸುವದರಿಂದ ಶ್ರುತಿಯು ಅಂತ್ಯಪ್ರಮಾಣವಾಗಿದೆ– ಎಂದು ಆಚಾರ್ಯರು ಶ್ರುತಿಯುಕ್ತ್ಯನುಭವಗಳಿಂದ ತೋರಿಸಿಕೊಟ್ಟಿರುತ್ತಾರೆ.

''ವ್ಯವಹಾರದಲ್ಲಿ ಪ್ರಮಾಣಗಳಿಗೆ ಬೆಲೆಯಿದೆ ಎಂಬುದನ್ನೇನೂ ಆಚಾರ್ಯರು ಅಲ್ಲಗಳೆದಿರುವದಿಲ್ಲ. ಅವಿದ್ಯೆಯನ್ನು ಕಳೆದುಕೊಂಡಬಳಿಕ ಪ್ರಮಾಣವ್ಯವಹಾರವೇ ನಿಲ್ಲುವಂತಿಲ್ಲವಾದ್ದರಿಂದ ಪರಮಾರ್ಥವನ್ನು ತಿಳಿಯಿಸಿಕೊಡುವದಕ್ಕೆ ಮಾತ್ರ ಅವು ಶಕ್ತವಾಗಿರುವದಿಲ್ಲ. ಕನಸಿನಲ್ಲಿರುವ ಪ್ರಮಾಣವು ಆ ಕಾಲಕ್ಕೆ ಸತ್ಯವೆಂದೇ ಆಗಿರುವಂತೆ ವ್ಯವಹಾರದಲ್ಲಿ ಪ್ರಮಾಣಗಳು ಸತ್ಯವಾಗಿದ್ದು ತಮ್ಮತಮ್ಮ ವಿಷಯವನ್ನು ತಿಳಿಸುತ್ತವೆ; ಎಚ್ಚರವಾಗುತ್ತಲೂ ಕನಸಿನ ಪ್ರಮಾಣಪ್ರಮೇಯವ್ಯವಹಾರವು ಹುಸಿಯಾಗಿ ಬಿಡುವಂತೆ ಪರಮಾರ್ಥದ ಅರಿವೆಂಬ ನಿಜವಾದ ಎಚ್ಚರವಾಗುತ್ತಲೂ ಅವಿದ್ಯಾನಿದ್ರೆಯಲ್ಲಿ ತೋರುತ್ತಿದ್ದ ಪ್ರಮಾಣಪ್ರಮೇಯವ್ಯವಹಾರವೆಲ್ಲವೂ ಹುಸಿಯಾಗಿಬಿಡುವದು. ಈ ಗುಟ್ಟನ್ನು ತಿಳಿಯದೆ ಮಿಕ್ಕ ದರ್ಶನಗಳು ಪರಮಾರ್ಥವನ್ನು ನಿರೂಪಿಸುವದಕ್ಕೆ

ಹೊರಟಿರುವದರಿಂದಲೇ ಅವು ಈ ವಿಷಯದಲ್ಲಿ ವಿಫಲವಾಗಿರುತ್ತವೆ. ಇದನ್ನು ತಿಳಿಸುವದಕ್ಕಾಗಿ ಅಲ್ಲಲ್ಲಿ ವ್ಯವಹಾರದೃಷ್ಟಿಯಿಂದ ಭಾಷ್ಯಕಾರರೂ ಪ್ರತ್ಯಕ್ಷಾದಿ ಪ್ರಮಾಣಗಳನ್ನು ಬಳಸಿರುತ್ತಾರೆ; ಆದರೆ ತಮ್ಮ ಸಿದ್ಧಾಂತವನ್ನು ತಿಳಿಸುವಾಗ ಅನುಭವವನ್ನೇ ಅವರು ಆಧಾರವಾಗಿ ಇಟ್ಟುಕೊಂಡಿರುತ್ತಾರೆ.

''ಶ್ರುತಿಯು ತನ್ನ ಉಪದೇಶಕ್ಕೆ ಬೆಂಬಲವಾಗಿ ಅನುಭವಾನುಸಾರವಾದ ತರ್ಕವನ್ನು ಉಪಯೋಗಿಸಿರುತ್ತದೆ. ಇದಕ್ಕೆ ಅನುಗುಣವಾಗಿ ಲೌಕಿಕತರ್ಕವನ್ನೂ ಉಪಯೋಗಿಸಬಹುದು. ಆದರೆ ಸಾಂಖ್ಯಾದಿಗಳು ಬಳಸುವ ಅನುಮಾನಪ್ರಮಾಣ ರೂಪವಾದ ತರ್ಕದಿಂದಲಾಗಲಿ, ಬೌದ್ಧಾದಿಗಳು ಬಳಸುವ ಕೇವಲ ತರ್ಕದಿಂದಲಾಗಲಿ ಎಂದಿಗೂ ತತ್ತ್ವಾರ್ಥದ ನಿಶ್ಚಯವಾಗಲಾರದು–ಎಂಬುದನ್ನು ಸೂತ್ರಭಾಷ್ಯದಲ್ಲಿ ಆಚಾರ್ಯರು ತಿಳಿಸಿಕೊಟ್ಟಿರುತ್ತಾರೆ. ಆಯಾ ದರ್ಶನಕಾರರ ಮತವನ್ನು ಅವರವರು ಒಪ್ಪಿರುವ ತರ್ಕದಿಂದಲೇ ಖಂಡಿಸಿಯೂ ಇರುತ್ತಾರೆ. ಶ್ರುತ್ಯನುಗುಣವಾದ ತರ್ಕವಲ್ಲದ ಯಾರ ತರ್ಕವನ್ನೂ ಅವರು ತಮ್ಮ ಸಿದ್ಧಾಂತದ ಸ್ಥಾಪನೆಗೆ ಉಪಯೋಗಿಸಿ ಕೊಂಡಿರುವದಿಲ್ಲ.

''ವೇದಾಂತಸಿದ್ಧಾಂತವನ್ನು ಅನುಭವಾನುಸಾರವಾಗಿ ಅರಿಯಬೇಕೆನ್ನುವ ಜಿಜ್ಞಾಸುಗಳು ವ್ಯಾಖ್ಯಾನಕಾರರ ಸಹಾಯವಿಲ್ಲದೆ ನೇರಾಗಿ ಶಾಂಕರಭಾಷ್ಯವನ್ನು ಓದಿ ಅಭ್ಯಾಸಮಾಡಬೇಕು. ಅನಂತರ ಭಾಷ್ಯಾಭಿಪ್ರಾಯಗಳಿಗೆ ವ್ಯಾಖ್ಯಾನಕಾರರುಗಳ ಅಭಿಪ್ರಾಯವನ್ನು ಸರಿದೂಗಿಸಿ ನೋಡಬೇಕು. ಬರಿಯ ತರ್ಕಶಬ್ದಗಳಿಂದ ವಾದ ಮಾಡುತ್ತಿದ್ದರೆ ಶಾಂತಿ ಸಮಾಧಾನಗಳು ಬರುತ್ತವೆಯೆ? ವ್ಯಾಖ್ಯಾನಕಾರರುಗಳು ತಮಗೆ ತೋಚಿದ ಸಿದ್ಧಾಂತವನ್ನೇ ಭಾಷ್ಯಾರ್ಥವೆಂದು ಸ್ಥಿರಪಡಿಸಲು ತರ್ಕಕರ್ಕಶವಾದ ಶೈಲಿಯಲ್ಲಿ ಅನೇಕ ಅನುಭವವಿರುದ್ಧವಾದ ವಿಷಯಗಳನ್ನು ಬರೆದಿರುತ್ತಾರೆ. ಇದನ್ನು ಪರೀಕ್ಷಿಸಿ ಸಾವಧಾನವಾಗಿ ವಿಚಾರಮಾಡಿ ನಿಜವಾದ ಸಿದ್ಧಾಂತವು ಯಾವದು? ಅದು ಹೇಗೆ ಅನುಭವಾನುಸಾರಿಯಾಗಿ ಸರ್ವಸಂಮತವಾಗಿದೆ–ಎಂಬುದನ್ನು ತಾವೆಲ್ಲರೂ ಮನಗಾಣಬೇಕು. ಶ್ರೀಶಂಕರಭಗವತ್ಪಾದರ ಅನುಗ್ರಹದಿಂದ ನಮಗೆಲ್ಲರಿಗೂ ಈ ಸೌಭಾಗ್ಯವು ಲಭಿಸುವಂತಾಗಲಿ!''

ಈ ಅದ್ಭುತವ್ಯಾಖ್ಯಾನವನ್ನು ಕೇಳಿ ನೆರೆದಿದ್ದವರೆಲ್ಲರೂ ಸ್ತಂಭೀಭೂತರಾಗಿ ನಿಂತಿದ್ದಂತೆಯೇ ಶ್ರೀ|| ಕೆ. ಸೂರ್ಯನಾರಾಯಣರಾಯರು ಶ್ರೀಶ್ರೀಗಳವರು ಇನ್ನೂ 3–4

ದಿನಗಳವರೆಗೂ ಇಲ್ಲಿಯೇ ಇದ್ದು ಇದೇ ವಿಚಾರಗಳ ಕುರಿತು ಉಪನ್ಯಾಸಗಳನ್ನನುಗ್ರಹಿಸ ಬೇಕೆಂದು ಕೇಳಿಕೊಂಡು ಇಂಥ ವಿದ್ವತ್‌ಪೂರ್ಣವಾದ ಉಪನ್ಯಾಸವನ್ನು ತಾವೆಂದೂ ಕೇಳಲಿಲ್ಲವೆಂದೂ ಶ್ರೀಶ್ರೀಗಳವರು ಅಪ್ಪಣೆಕೊಡಿಸಿರುವ ವಿಷಯಗಳು ವಿಚಾರಣೀಯವಾದವುಗಳಾಗಿವೆ ಎಂದೂ ಹೇಳಿ ಶ್ರೀಶ್ರೀಗಳವರನ್ನು ಪರಿಷತ್ತಿನ ಪರವಾಗಿ ಅಭಿನಂದಿಸಿದರು. ಇದಾದನಂತರ ಅಲ್ಲಿಯ ಪಂಡಿತರುಗಳಲ್ಲೆಲ್ಲ ಅಗ್ರಗಣ್ಯರಾದ ಬ್ರ॥ಶ್ರೀ॥ ಲಕ್ಷ್ಮೀನಾರಾಯಣಶಾಸ್ತ್ರಿಗಳವರನ್ನು ವಿಶೇಷವಾಗಿ ಪರಿಚಯ ಮಾಡಿಸಿದರು. ಇವರು ಶ್ರೀಶ್ರೀಗಳವರಿಗೆ ತಾವು ರಚಿಸಿದ "ಈಶಾವಾಸ್ಯೋಪನಿಷತ್ತ"ನ್ನು ಕಾಣಿಕೆಯಾಗಿ ಅರ್ಪಿಸಿದರು. ಸಕಲರೂ ಸಂತೋಷಭರಿತರಾಗಿ ಶ್ರೀಶ್ರೀಗಳು ಹೇಳಿದ ವಿಚಾರಗಳನ್ನು ಶ್ಲಾಘಿಸುತ್ತಲೂ ಮೆಲುಕುಹಾಕುತ್ತಲೂ ಶ್ರೀಶ್ರೀಗಳವರ ಪಾಂಡಿತ್ಯ ಅನುಭವಗಳನ್ನು ಪ್ರಶಂಸೆಮಾಡುತ್ತಲೂ ಮಾತನಾಡಿಕೊಳ್ಳುತ್ತಿದ್ದರು. ಈ ಕಾರ್ಯಕ್ರಮವನ್ನು ಮುಗಿಸಿಕೊಂಡು ನಮ್ಮ ನಿವಾಸಕ್ಕೆ ಮರಳಿದಾಗ ರಾತ್ರಿ 9 ಘಂಟೆಯಾಗಿತ್ತು.

## ಶ್ರೀಶ್ರೀಗಳವರ ಆಂಧ್ರಪ್ರದೇಶದ ಪ್ರವಾಸವಾರ್ತೆ–8

### ಪಾರ್ವತೀಪುರಂ, 22–11–63

### (ಆಗಸ್ಟ್ 1964)

ಪಾರ್ವತೀಪುರದಿಂದ ಅಲ್ಲಿಯ ಯೋಗನಿಷ್ಠಾಸಮಾಜದ ಅಧ್ಯಕ್ಷರಾದ ಶ್ರೀ॥ ಪೋಲಸೆಟ್ಟಿ ರಾಮಮೂರ್ತಿಯವರು ನಮಗಾಗಿ ಕಾರುತೆಗೆದುಕೊಂಡು ಬಂದಿದ್ದರು. ಶ್ರೀ॥ ಚದುವಲ ರಾಮರಾಯರನ್ನು ಕೆಲವು ಸಾಮಾನುಗಳೊಂದಿಗೆ ರೈಲಿಗೆ ಕಳುಹಿಸಿ ಗುಪ್ತಾದಂಪತಿಗಳೂ ನಾವು ಮೂವರೂ ಕಾರಿನಲ್ಲಿ ಹೋಗುವದಕ್ಕೆಂದು ವಿಜಯನಗರ ದಿಂದ ಹೊರಟೆವು. ಎಲ್ಲಾ ಭಕ್ತವೃಂದದವರೂ ಕೆಲವು ಪಂಡಿತರೂ ಶ್ರೀಗಳನ್ನು ಬೀಳ್ಕೊಡಲು ನೆರೆದಿದ್ದರು. ಭಗವನ್ನಾಮಘೋಷದೊಂದಿಗೆ ಬೆಳಗಿನ 8 ಘಂಟೆಗೆ ಕಾರು ಹೊರಟಿತು.

ಮಧ್ಯಮಾರ್ಗದಲ್ಲಿ ಶ್ರೀಗಳು ನನಗೆ ಎಷ್ಟೋ ವೇದಾಂತದ ಮಹತ್ತ್ವದ ವಿಷಯಗಳನ್ನು ತಿಳಿಸುತ್ತಾಬಂದರು. ಅವುಗಳಲ್ಲಿ ಮುಖ್ಯವಾದದ್ದೆಂದರೆ ಅವಸ್ಥಾತ್ರಯ ವಿಚಾರವು. ಯಾವಾಗ "ನಾನು ಸ್ವಭಾವದಿಂದ ಪ್ರಮಾತೃವಲ್ಲ, ನಿರ್ವಿಕಾರನಾದ

ಸಾಕ್ಷಿಸ್ವರೂಪನೇ ನಾನು'' –ಎಂಬ ಅರಿವು ಉಂಟಾಗುವದೋ ಆಗ ನನಗೆ ಅವಸ್ಥೆಗಳು ಎಂದಿಗೂ ಇರಲಿಲ್ಲಎಂಬ ನಿಶ್ಚಯವಾಗುವದು. ಸಾಕ್ಷಿಯ ಅರಿವು ಎಂದರೆ 'ಅವಸ್ಥೆಗಳಿವೆ, ಅವುಗಳನ್ನು ಬೆಳಗುವವನು ನಾನು' ಎಂದು ತಿಳಿಯುವದಲ್ಲ; 'ನಿತ್ಯನಿರವಸ್ಥನಾಗಿರುವವನೇ ನಿಜವಾದ ಸಾಕ್ಷಿಯು' ಎಂಬುದನ್ನು ನಿಶ್ಚಯಿಸುವದು. ಆಗ ಮೌನವೊಂದೇ ಉಳಿದಿರುತ್ತದೆ'' ಹೀಗೆಂದು ಅವರು ಬೋಧಿಸಿದಾಗ ಅವರ ಸಾಂನಿಧ್ಯದ ಪ್ರಭಾವದಿಂದಲೊ, ಏನೋ, ಆ ಪರಮಮೌನದಲ್ಲೇ ನಿಂತಿರುವಂತಾಯಿತು. ನಮಗೂ ಗೊತ್ತಿಲ್ಲದಂತೆಯೇ 52 ಮೈಲಿಗಳ ಪ್ರಯಾಣವನ್ನು ಮುಗಿಸಿ ಪಾರ್ವತೀಪುರದ ಹೊರಭಾಗಕ್ಕೆ ಕಾರು ಪ್ರವೇಶಿಸಿದಾಗ, ಅಲ್ಲಿ ಸ್ವಾಗತಕ್ಕಾಗಿ ಬಂದು ನಿಂತಿದ್ದ ಓಲಗ, ಬ್ಯಾಂಡು, ಭಜನಮೇಳ, ನೂರಾರುಮಂದಿಯ ಒಕ್ಕೊರಲಿನ ಜಯಘೋಷ– ಇವುಗಳಿಂದ ಮತ್ತೆ ಎಚ್ಚರಕ್ಕೆ ಬಂದಂತಾಯಿತು.

ಊರ ಹೊರಗಿನ ಶ್ರೀಸತ್ಯನಾರಾಯಣದೇವಸ್ಥಾನದಲ್ಲಿಯೇ ಇಳಿದುಕೊಳ್ಳಲು ವ್ಯವಸ್ಥೆಯಾಯಿತು. ಭಕ್ತರುಗಳೆಲ್ಲರೂ ಬಹಳ ಆಸಕ್ತಿಯಿಂದ ಶ್ರೀಶ್ರೀಗಳವರ ಸೇವೆಯಲ್ಲಿ ತತ್ಪರರಾಗಿದ್ದರು. ಬಹಳ ಪ್ರೇಮಹೃದಯದ ಆ ಜನರು ನಾವಿದ್ದ ಮೂರುದಿನಗಳೂ ತಮ್ಮ ಎಲ್ಲಾ ಕೆಲಸವನ್ನೂ ಕೈಬಿಟ್ಟು ಶ್ರೀಗಳ ಉಪದೇಶಕ್ಕಾಗಿ ಕಾದಿರುತ್ತಿದ್ದರು. ಇಷ್ಟರಮಟ್ಟಿಗೆ ಶ್ರದ್ಧಾಭಕ್ತಿಯ ಜನರನ್ನು ನಮ್ಮ ಇಡಿಯ ಪ್ರವಾಸದಲ್ಲಿಯೇ ನಾವು ನೋಡಲಿಲ್ಲವೆಂದರೂ ಅತಿಶಯೋಕ್ತಿಯಾಗಲಾರದು. ಹಳ್ಳಿಯೂ ಅಲ್ಲದ ದೊಡ್ಡ ಪಟ್ಟಣವೂ ಅಲ್ಲದ ಸಾಧಾರಣವಾದ ಆ ಊರಿನಲ್ಲಿ ಒಬ್ಬಿಬ್ಬರು ಅನುಕೂಲಸ್ಥರಿದ್ದರೂ ಮಧ್ಯಮವರ್ಗದವರೇ ಬಹಳ; ಆದರೂ ಶ್ರದ್ಧಾಭಕ್ತಿಗಳಲ್ಲಿ ಈ ಗ್ರಾಮದವರೇ ಶ್ರೀಮಂತರೆನ್ನಬಹುದು. ಇಲ್ಲಿಂದ 20 ಮೈಲಿಗೆ ಒರಿಸ್ಸಪ್ರಾಂತವು ಆರಂಭವಾಗುತ್ತದೆ.

**ಸಾಯಂಕಾಲ:** ಶ್ರೀಸೀತಾರಾಮಮಂದಿರದಲ್ಲಿ ಶ್ರೀಗಳ ಉಪನ್ಯಾಸ ವನ್ನೇರ್ಪಡಿಸಲಾಗಿತ್ತು. ಎಂದಿನಂತೆ ಶ್ರೀ|| ಗುಪ್ತರೂ ನಾನೂ ಮಾತನಾಡಿದ ಮೇಲೆ ಶ್ರೀಶ್ರೀಗಳವರು **'ಮಹಾಪುರುಷಸಂಶ್ರಯ'** ಎಂಬ ವಿಷಯವನ್ನು ಕುರಿತು ಉಪದೇಶಿಸಿದರು. ಅದರ ಸಾರವೇನೆಂದರೆ: ''ಪರಮಾತ್ಮನಲ್ಲಿ ನೆಲೆನಿಂತಿರುವವರೇ ಮಹಾಪುರಷರು; ಅವರ ದೇಹೇಂದ್ರಿಯಮನಸ್ಸುಗಳು ಪರಮಾತ್ಮಮಯವಾಗಿರುತ್ತವೆ, ವಾಣಿಯು ಭಗವನ್ನಾಮಮಯವಾಗಿರುತ್ತದೆ. ತಮ್ಮ ಹತ್ತಿರಕ್ಕೆ ಬಂದವರೆಲ್ಲರಿಗೂ ಅವರು ಭಗವದ್ಭಾವನೆಯ ಆನಂದವನ್ನು ಉಣಿಸಿತಣಿಸುವ ಸಾಮರ್ಥ್ಯವುಳ್ಳವರಾಗಿರುತ್ತಾರೆ. ಇಂಥವರ ದರ್ಶನ, ಸ್ಪರ್ಶನ, ಸೇವೆ, ಉಪದೇಶಶ್ರವಣ–ಮುಂತಾದದ್ದನ್ನು ಶ್ರದ್ಧಾಭಕ್ತಿ

ಪೂರ್ವಕವಾಗಿ ಮಾಡುವದೇ ಮಹಾಪುರುಷಸಂಶ್ರಯ. ಇಂಥವರ ಸಂನಿಧಿಯಲ್ಲಿ ಕಾಮಕ್ರೋಧಾದಿಗಳು ತಮಗೆ ತಾವೇ ಇಲ್ಲವಾಗುತ್ತವೆ; ಪರಮಾರ್ಥಕ್ಕೆ ಬೇಕಾಗಿರುವ ಅಮಾನಿತ್ವಾದಿಗಳೂ ಹೊರಹೊಮ್ಮುತ್ತವೆ.''

ಮರುದಿನ (23–11–63) **ಬೆಳಗ್ಗೆ:** ಶ್ರೀ|| ಪೋಲಶೆಟ್ಟಿ ರಾಮಮೂರ್ತಿಗಳ ಮನೆಯಲ್ಲಿ ಸ್ಥಾಪಿತವಾಗಿದ್ದ **ಯೋಗನಿಷ್ಠಾಸಮಾಜ**ಕ್ಕೆ ನಾನೂ ಶ್ರೀ|| ಗುಪ್ತರೂ ಹೋಗಿದ್ದೆವು. ಅಲ್ಲಿ ನಾನು ಧ್ಯಾನಯೋಗಕ್ಕೆ ಮೊದಲು ಮಾಡಬೇಕಾದ **ಕರ್ಮಯೋಗ**ವನ್ನು ಕುರಿತು ಯಥಾಶಕ್ತಿ ಉಪನ್ಯಾಸವನ್ನು ಮಾಡಿದೆನು.

**ಸಾಯಂಕಾಲ:** ಮತ್ತೆ ಶ್ರೀ ಸೀತಾರಾಮದೇವಸ್ಥಾನದಲ್ಲಿ ಶ್ರೀಶ್ರೀಗಳವರು **'ಮಹಾಪುರುಷರೇ ಆತ್ಮಜ್ಞಾನಕ್ಕೆ ದ್ವಾರವು'** ಎಂಬ ವಿಷಯವನ್ನು ಉಪದೇಶಿಸಿದರು. ಅದರ ಸಾರಾಂಶವೇನೆಂದರೆ: ''ಪರಮಾತ್ಮನು ನಮ್ಮೆಲ್ಲರಿಗೂ ಆತ್ಮನಾಗಿ ನಮ್ಮೊಳಗೇ ಇರುವನಾದರೂ ನಾವು ಆತನನ್ನು ಗುರುತಿಸಲಾರದೆ ಇರುತ್ತೇವೆ. ಮಹಾಪುರುಷರು ಉಪದೇಶಿಸಿದಾಗ ನಾವುಗಳೂ ದೇಹಾದ್ಯಾತ್ಮಭಾವವನ್ನು ಮೀರಿ ಪರಮಾತ್ಮ ಸ್ವರೂಪದಲ್ಲಿಯೇ ನಿಲ್ಲುವೆವು. ಅದಕ್ಕೆ ಬೇಕಾದ ಸಾಧನಗಳೂ ಮಹಾಪುರುಷರಿಂದಲೇ ನಮಗೆ ದೊರಕುವವು.''

ತಾ|| 24–11–63 **ಬೆಳಗ್ಗೆ:** ಶ್ರೀಶ್ರೀಗಳವರು ಯೋಗನಿಷ್ಠಾಸಮಾಜದ ಸದಸ್ಯರಿಗೆ ಆಸುರೀಸಂಪತ್ತು ದೈವೀಸಂಪತ್ತು–ಇವುಗಳ ವಿವೇಕವನ್ನು ತಿಳಿಸಿ ಹೀಗೆಂದು ಉಪದೇಶವನ್ನು ಮಾಡಿದರು: ''ಸತ್ಯಶೌಚಾಚಾರಾದಿಯಾದ ಆಚರಣೆಗಳನ್ನು ಜೀವನಕ್ಕಿಳಿಸಿಕೊಳ್ಳದೆ ಜ್ಞಾನಕ್ಕೆ ಅಧಿಕಾರವು ಬರಲಾರದು; ಉತ್ತಮಾಧಿಕಾರಿಗಳಿಗೇ ಉಪದಿಷ್ಟವಾಗಿರುವ ಸಾಧನಗಳನ್ನು ಮೊಟ್ಟಮೊದಲೇ ಮಾಡುವದಕ್ಕೆ ಹವಣಿಸಿ ಅವುಗಳಲ್ಲಿ ಯಾವ ನೆಲೆಯನ್ನೂ ಕಾಣದೆಹೋಗುವದಕ್ಕಿಂತ ಸದಾಚಾರಗಳನ್ನೂ ಭಗವದ್ಭಾವನೆ, ಭಜನೆ–ಮುಂತಾದವುಗಳನ್ನೂ ಆರಂಭಿಸಿ, ಭಗವಂತನ ನಾಮವನ್ನು ಪ್ರೇಮದಿಂದ ಹಾಡಿರಿ. ಅಧ್ಯಾತ್ಮವಿಚಾರವು ತಾನಾಗಿಯೇ ನಿಮ್ಮನ್ನು ಹುಡುಕಿಕೊಂಡು ಬರುವದು.''

ಮಧ್ಯಾಹ್ನದ ಮೇಲೆ ಶ್ರೀಶ್ರೀಗಳವರು ಕೆಲವು ಭಕ್ತರ ಮನೆಗಳಿಗೆ ಹೋಗಿ ಬಂದರು. **ಸಾಯಂಕಾಲ: ಬೆಳಗಾಂ** ಎಂಬ ಎಕ್ಸ್‌ಟೆನ್ಷನ್ನಿನಲ್ಲಿರುವ **ರಾಮಕೃಷ್ಣ ಮಂದಿರ**ದಲ್ಲಿ ಅವರ ಉಪನ್ಯಾಸವನ್ನೇರ್ಪಡಿಸಲಾಗಿತ್ತು. ಸುಮಾರು 200 ಜನರು ಸೇರಿದ್ದರು. ಶ್ರೀಗಳು ಹೇಳಿದ್ದೇನೆಂದರೆ: ''ಈಗ್ಗೆ ನವನಾಗರಿಕತೆಯು ಬೆಳೆದಿದೆ, ಜನರಿಗೆ

ನೆಮ್ಮದಿ ಮಾತ್ರ ಸಿಕ್ಕಿಲ್ಲ. ಭಾರತೀಯರಾದ ನಾವು ಸ್ವತಂತ್ರರಾಗಿದ್ದರೂ ನಮಗೆ ಪರಾವಲಂಬನೆಯು ತಪ್ಪಿಲ್ಲ. ಈಗ ನಮಗೆ ದೇಶಾಭಿಮಾನವು ಮೂಡಿದೆ. ಇದೊಂದು ಒಳ್ಳೆಯ ಲಕ್ಷಣವೇ ಸರಿ. ಯಾವದಾದರೊಂದು ರಸ್ತೆಗೆ ಇಂಗ್ಲಿಷಿನವನೊಬ್ಬನ ಹೆಸರಿದ್ದರೆ ಅದಕ್ಕೆ ಬದಲು 'ಯಾಜ್ಞವಲ್ಕ್ಯರೋಡ್' ಎಂದು ಮುಂತಾಗಿ ನಮ್ಮವರ ಹೆಸರನ್ನು ಇಡುತ್ತೇವೆ. ಆದರೆ ನಮ್ಮ ಹುಡುಗರು 'ಈ ಯಾಜ್ಞವಲ್ಕ್ಯನು ಯಾರು? ಅವನ ಉಪದೇಶವೇನು?' ಎಂದು ಕೇಳಿದರೆ ಉತ್ತರವನ್ನು ಕೊಡುವ ಯೋಗ್ಯತೆ ನಮಗೆ ಇಲ್ಲವಾಗಿದೆ. ನಮ್ಮ ಭಾಷೆಗಳಿಗೆಲ್ಲ ಮಾತೃಭಾಷೆಯಾದ ಸಂಸ್ಕೃತವು ನಮ್ಮನ್ನು ಅಗಲಿ ಹೋಗಿದೆ. ಈ ಮಂದಿರಕ್ಕೆ 'ಶ್ರೀರಾಮಕೃಷ್ಣಮಂದಿರ' ಎಂಬ ಹೆಸರಿದೆಯಷ್ಟೆ? ರಾಮನು ರಾಮಾಯಣದ ಜೀವಾಳ, ಕೃಷ್ಣನು ಭಾರತದ ಜೀವಾಳ. **ಮಹಾಭಾರತ, ರಾಮಾಯಣಗಳು** ನಮ್ಮ ಸಂಸ್ಕೃತಿಯ ಜೀವಾಳಗ್ರಂಥಗಳು. ಅವುಗಳ ಶ್ರವಣ ಚಿಂತನಗಳು, ಹೆಚ್ಚಾಗಿ ನಡೆಯುವಂತೆ ನಾವು ಪ್ರಯತ್ನಿಸಬೇಕು. ಸಂಸ್ಕೃತವನ್ನು ಕಲಿಯುವದಕ್ಕೂ ಮಕ್ಕಳಿಗೆ ಕಲಿಸಿಕೊಡುವದಕ್ಕೂ ಸಿದ್ಧರಾಗಬೇಕು. ಉಪನಿಷತ್ತುಗಳಲ್ಲಿ ನಾವು ಅಮರರು–ಎಂಬ ಸಂದೇಶವಿದೆ, ಅದೇ ನಿಜವಾಗಿದ್ದರೆ ನಾವೇಕೆ ಆ ಜ್ಞಾನವನ್ನು ಸಂಪಾದಿಸಿಕೊಳ್ಳಬಾರದು? ಅದನ್ನರಿತುಕೊಂಡಾಗಲೇ ನಮಗೆ ನೆಮ್ಮದಿ, ಸ್ವಾತಂತ್ರ್ಯ, ಶಾಂತಿ, ಸುಖ–ಎಲ್ಲವೂ ಲಭಿಸುತ್ತವೆ.''

ಈ ದಿನ ಶ್ರೀಗುಪ್ತಾದಂಪತಿಗಳು 'ಗಾಲೂರು' ಎಂಬ ಊರಿಗೆ ಹೋಗಿದ್ದದ್ದರಿಂದ ಎಲ್ಲಾ ಉಪನ್ಯಾಸಗಳನ್ನೂ ನಾನೇ ಆಂಧ್ರೀಕರಿಸುತ್ತಿದ್ದೆ.

ತಾ।। 25–11–63 **ಬೆಳಗ್ಗೆ** ಯೋಗನಿಷ್ಠಾಸಮಾಜದಲ್ಲಿ ನಾನು ಆಂಧ್ರದಲ್ಲಿ 'ಆತ್ಮಸ್ವರೂಪ' ಎಂಬ ವಿಷಯದಲ್ಲಿ ಉಪನ್ಯಾಸ ಮಾಡಿದೆನು. ನಿನ್ನೆ ಶ್ರೀಶ್ರೀಗಳವರು ಮಾಡಿದ ಉಪದೇಶವನ್ನು ಅಕ್ಷರಶಃ ಪಾಲಿಸಿದವರಿಗೇ ಈ ವಿಚಾರವು ಅಳವಡುವದೆಂದು ತಿಳಿಸಿದೆನು.

ಮಧ್ಯಾಹ್ನ: ಸುಮಾರು 1 ಘಂಟೆ ಸಮಯಕ್ಕೆ ಭಕ್ತಜನರೆಲ್ಲರೂ ನಾವಿದ್ದಲ್ಲಿಗೆ ಬಂದರು. ಫಲಮಂತ್ರಾಕ್ಷತೆಗಳನ್ನು ಕೊಡುವದಕ್ಕಿಂತ ಮುಂಚೆ ಶ್ರೀಶ್ರೀಗಳವರು ನೆರೆದಿದ್ದ ಜನರಿಗೆ 'ಮೌನ' ಎಂಬ ವಿಷಯವನ್ನು ಕುರಿತು ಪರಿಣಾಮಕಾರಿಯಾದ ಉಪದೇಶವನ್ನು ಮಾಡಿದರು. ''ಆತ್ಮಸ್ವರೂಪವೇ ಮೌನ; ಅದನ್ನರಿಯುವ ಪ್ರಯತ್ನಕ್ಕೂ ಮೌನವೆಂದೇ ಹೆಸರು. ಪರಮಾತ್ಮನ ಭಾವನೆ, ಗುಣಲೀಲೆಗಳ ಚಿಂತೆ ಇವುಗಳೂ 'ಮೌನವೇ.' ಸತ್ಪುರುಷರ ಬೋಧೆಯ ಶ್ರವಣ, ಭಗನ್ನಾಮದ ಸ್ಮರಣೆ–ಇವುಗಳೂ ಮೌನವೇ.

ಏಕೆಂದರೆ ಈ ಸಾಧನೆಗಳೆಲ್ಲವೂ ಕ್ರಮಕ್ರಮವಾಗಿ ನಮ್ಮ ಚಿತ್ತಚಾಂಚಲ್ಯವನ್ನು ತಪ್ಪಿಸುತ್ತಾ ಕೊನೆಗೆ ಪರಮಮೌನಸ್ವರೂಪನಾದ ಭಗವಂತನಲ್ಲಿಯೇ ನೆಲೆನಿಲ್ಲಿಸುತ್ತವೆ'' ಎಂಬುದೇ ಉಪದೇಶದ ಸಾರಾಂಶವು.

ಇದಾದ ಮೇಲೆ ದೇವಸ್ಥಾನಕ್ಕೆ ಹತ್ತಿರವೇ ಇದ್ದ ಟೌನ್‌ಸ್ಟೇಷನ್ನಿಗೆ ಹೊರಟೆವು. ಫ್ಲಾಟ್‌ಫಾರಮ್ಮನ್ನು ಸೇರಿದಾಗ ರೈಲು ಇನ್ನೂ 1 ½ ಘಂಟೆ ತಡವಾಗಿ ಬರುವದೆಂದು ತಿಳಿಯಿತು. ಆಗ ಶ್ರೀಶ್ರೀಗಳ ಸುತ್ತಲೂ ನೆರೆದಿದ್ದ ಊರಿನಪ್ರಮುಖರು 'ಭಗವನ್ನಾಮಸ್ಮರಣವನ್ನು ಸಾಮೂಹಿಕವಾಗಿ ಹೇಗೆ ಮಾಡಬೇಕು?' ಎಂಬುದನ್ನು ತಿಳಿಸಬೇಕೆಂತಲೂ ತಮ್ಮ ಊರಿನಲ್ಲಿ ಒಂದು ಭಜನಮಂದಿರವನ್ನು ನಿರ್ಮಾಣ ಮಾಡುತ್ತಿರುವದರಿಂದ ಈ ವಿಷಯದಲ್ಲಿ ತಮಗೆ ತಿಳಿವಳಿಕೆಕೊಡಬೇಕೆಂತಲೂ ಕೇಳಿಕೊಂಡರು. ಶ್ರೀಶ್ರೀಗಳವರು ದೀರ್ಘವಾಗಿ ಕನ್ನಡದಲ್ಲಿ ಉಪದೇಶ ಮಾಡಿದರು; ನಾನು ಅದನ್ನು ಆಂಧ್ರೀಕರಿಸುತ್ತಿದ್ದೆ.

ಅವರು ಕೊಟ್ಟ ಸಲಹೆಗಳಿವು: (1) ಮಂದಿರದಲ್ಲಿ ಇಷ್ಟದೇವತೆಯ ಒಂದು ವಿಗ್ರಹ, ಅಥವಾ ಪಟ; ಭಗವಂತನ ಲೀಲೆಗಳನ್ನು ತಿಳಿಸುವ ಪಟಗಳು; ಭಗವದ್ಭಕ್ತರ ಪಟಗಳು–ಇವುಗಳನ್ನು ಇಡಬೇಕು. (2) ಅಲ್ಲಿ ಭಗವನ್ನಾಮಕೀರ್ತನ, ಪುರಾಣಶ್ರವಣ–ಮುಂತಾದವುಗಳಲ್ಲದೆ ಮತ್ತೆ ಯಾವ ಲೌಕಿಕಚಟುವಟಿಕೆಗಳಿಗೂ ಅವಕಾಶವನ್ನು ಕೊಡಬಾರದು. (3) ಗೊತ್ತಾದ ಸಮಯದಲ್ಲಿ ಎಲ್ಲರೂ ಭಜನೆಗೆ ಸೇರಬೇಕು. (4) ಯಾವ ಭಗವದ್ಭಕ್ತರೂ ನಿಮಗೆ ದೊರಕದೆ ಇರುವಾಗ ನಿಮ್ಮೊಳಗಿನಿಂದಲೇ ಭಗವನ್ನಾಮಕೀರ್ತನೆಯನ್ನು ಉತ್ತಮರೀತಿಯಿಂದ ಹೇಳಿಕೊಡುವದಕ್ಕೆ ಸಮರ್ಥರಾದವರನ್ನು ಆರಿಸಿಕೊಳ್ಳಬೇಕು. ಹೀಗೆ ಆರಿಸಿಕೊಳ್ಳುವವರಲ್ಲಿ ಸುಸ್ವರದಿಂದ ಲಯಬದ್ಧವಾಗಿ ಭಗವನ್ನಾಮಕೀರ್ತನೆ ಮಾಡುತ್ತಾ ಭಜನೆಯಲ್ಲಿ ತಲ್ಲೀನರಾಗಿರುವದು, ನಾಚಿಕೆ ಮುಂತಾದವುಗಳ ಅಡ್ಡಿಯಿಲ್ಲದೆ ಕುಣಿಯುತ್ತಾ ಭಜನೆಯ ಆನಂದವನ್ನು ತಾವೂ ಹೊಂದಿ ಉಳಿದವರನ್ನೂ ಭಜನೆಯಲ್ಲಿ ತೊಡಗಿಸಬಲ್ಲವರಾಗಿರುವದು–ಇಂಥ ಗುಣಗಳಿರಬೇಕು. (5) ಹೀಗೆ ಎಲ್ಲರನ್ನೂ ಭಜನೆಗೆ ಹತ್ತಿಸಬಲ್ಲವರನ್ನು ನಾರದರೇ ಎಂದು ಭಾವಿಸಿ ಅವರನ್ನು ಗಂಧಮಾಲ್ಯಾದಿಗಳಿಂದ ಅಲಂಕರಿಸಿ ನಮಸ್ಕಾರ ಮಾಡಿ ಅವರ ಸುತ್ತಲೂ ಕುಣಿಯುತ್ತಾ ತಾಳಹಾಕಿಕೊಂಡು ಭಜನೆಯನ್ನು ಮಾಡಬೇಕು. ಇದರಿಂದ ಆ ಮುಂದಾಳುಗಳಲ್ಲಿ ನಾರದರ ಆವೇಶವೇ ಆದ ಭಾವನೆಯುಂಟಾಗಿ ಭಜನೆಯ ಫಲವು ದಕ್ಕುವದು. (6) ಭಗವಂತನ ಸುಗುಣಗಳನ್ನೂ ಲೀಲೆಗಳನ್ನೂ ವರ್ಣಿಸುವ ಹರಿಕಥಾ

ಕಾಲಕ್ಷೇಪಗಳನ್ನು ಏರ್ಪಡಿಸಿಕೊಳ್ಳಬಹುದು (7) ಏಕಾದಶಿಯೇ ಮುಂತಾದ ವಿಶೇಷ ದಿನಗಳಲ್ಲಿ ಭಗವತ್ಸ್ಮರಣಪೂರ್ವಕವಾಗಿ ಜಾಗರಣಾದಿಗಳನ್ನು ಆಚರಿಸಬೇಕು.

ಈ ರೀತಿಯಾಗಿ ಮಾಡಿದರೆ ಭಜನಮಂದಿರದಿಂದ ದೊರಕಬೇಕಾದ ಫಲವು ಪೂರ್ಣವಾಗಿ ದೊರಕೀತು–ಎಂದು ನುಡಿಯುತ್ತಾ **'ಹರೇರಾಮ ಹರೇರಾಮ ರಾಮರಾಮ ಹರೇಹರೇ । ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇಹರೇ'** ಎಂಬ ನಾಮವನ್ನು ಫ್ಲಾಟ್‌ಫಾರಂನ ಮೇಲೆಯೆ ಹೇಳಿಕೊಡಲಾರಂಭಿಸಿದಾಗ ಭಕ್ತರೂ ಇತರ ಪ್ರಯಾಣಿಕರೂ ರೈಲಿನ ಕೆಲಸಗಾರರೂ ಒಟ್ಟಾಗಿ ಸುಮಾರು ಅರ್ಧಘಂಟೆ ಭಜನೆ ಮಾಡಿದರು. ಇಷ್ಟರಲ್ಲಿ ರೈಲು ಸ್ಟೇಷನ್ನಿನ ಒಳಗೆ ಪ್ರವೇಶಿಸಿದ ಘಂಟೆಯ ಸದ್ದಾಯಿತು. ಯಾವದೋ ಸುಖಸ್ವಪ್ನದಿಂದ ಎಬ್ಬಿಸಿದಂತೆ ಎಲ್ಲರೂ ಬಹಿರ್ಮುಖರಾದರು. ನಮಗೆಲ್ಲ ಎರಡನೆಯ ತರಗತಿಯ ಟಿಕೆಟ್ಟನ್ನು ಭಕ್ತರು ಕೊಂಡಿದ್ದರು.

ವೃದ್ಧರಾದ ಶ್ರೀಶ್ರೀಗಳವರನ್ನು ಕುರ್ಚಿಯಲ್ಲಿ ಕೂರಿಸಿಕೊಂಡು ಎಂಜನ್ನಿನ ಹತ್ತಿರ ದೂರದಲ್ಲಿದ್ದ ಬೋಗಿಗೆ ಹೊತ್ತು ತರುವಾಗಲು ಜನರ ನಾಮಸ್ಮರಣೆಯೇ ನಡೆದಿತ್ತು. ಸ್ಟೇಷನ್‌ಮಾಸ್ಟರು, ಗಾರ್ಡ್, ಡ್ರೈವರು–ಎಲ್ಲರೂ ಬೆರಗಾಗಿ ನೋಡುತ್ತಿರಲು **'ಪಾರ್ವತೀಪತೇ ಹರಹರ ಮಹಾದೇವ!'** ಎಂಬ ಜಯಘೋಷದೊಂದಿಗೆ ಭಕ್ತಾದಿಗಳು ಅನಾಮತ್ ಶ್ರೀಗಳನ್ನು ಎತ್ತಿ ಕುತ್ತಿಗೆಯ ಎತ್ತರಕ್ಕಿದ್ದ ರೈಲಿನ ಬೋಗಿಗೆ ಕುರ್ಚಿಯನ್ನು ಏರಿಸಿದಾಗ ಎಲ್ಲರೂ ಚಪ್ಪಾಳೆ ತಟ್ಟಿದರು. 'ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿ ಮಹಾರಾಜಕೀ ಜೈ!' ಎಂದು ಘೋಷಿಸುತ್ತಲೂ ರೈಲು ಹೊರಡುವ ಘಂಟೆ ಬಾರಿಸಿತು.

ರೈಲು ಸಾಗಿ ಸ್ವಲ್ಪಹೊತ್ತಾದಮೇಲೆ ಬೋಗಿಯಲ್ಲಿದ್ದ ಮೂವರು ತಾವು ಸಂಗೀತಗಾರರೆಂದು ತಿಳಿಸಿ ಬಗೆಬಗೆಯ ಕೀರ್ತನೆಗಳನ್ನು ಉತ್ತಮರೀತಿಯಲ್ಲಿ ಗಾನ ಮಾಡಲಾರಂಭಿಸಿದರು. ರೈಲ್ವೆ ನೌಕರರಾದ ಅವರು ಶ್ರೀಶ್ರೀಗಳವರ ಪರಿಚಯವನ್ನು ಮಾಡಿಕೊಂಡರು. ನಾನೂ ಶ್ರೀಮತಿ ಲಕ್ಷ್ಮಮ್ಮನವರೂ ಕೆಲವು ಕೀರ್ತನೆಗಳನ್ನು ಹಾಡಿದೆವು. ಶ್ರೀಶ್ರೀಗಳವರು ಎಲ್ಲವನ್ನೂ ಕೇಳುತ್ತಾ ಆನಂದದಿಂದಿದ್ದರು. ಅಂತೂ 4 ಘಂಟೆಗೆ ಹೊರಟ ರೈಲು 8 ಘಂಟೆಗೆ ವಾಲ್ಟೇರ್ (ವಿಶಾಖಪಟ್ಟಣದ) ಸ್ಟೇಷನ್ನಿಗೆ ತಲುಪಿದ್ದರೂ ಆ ನಾಲ್ಕು ಘಂಟೆಯ ಪ್ರಯಾಣವು ನಾಲ್ಕು ನಿಮಿಷಗಳಲ್ಲಾದಂತೆ ಭಾಸವಾಯಿತು.

# ಶ್ರೀಶ್ರೀಗಳವರ ಆಂಧ್ರಪ್ರದೇಶದ ಪ್ರವಾಸವಾರ್ತೆ–9

## ವಿಶಾಖಪಟ್ಟಣ, 25–11–63

## (ಸೆಪ್ಟೆಂಬರ್ 1964)

ರಾತ್ರೆ 9 ಗಂಟೆಗೆ ವಿಶಾಖಪಟ್ಟಣದ ಮೇನ್‌ರೋಡಿನಲಿರುವ 'ಗರುಡಂವಾರಿ ಛತ್ರಂ' ಎಂಬಲ್ಲಿಗೆ ಬಂದು ತಂಗಿದೆವು. ಛತ್ರವು ವಸತಿಸೌಕರ್ಯಕ್ಕೆ ಉತ್ತಮವಾಗಿದೆ. ಊರಿನ ಸದ್ಭಕ್ತರೂ ಶ್ರೀ॥ ಗುಪ್ತರ ಶಿಷ್ಯರೂ ಆದ ಶ್ರೀ॥ ಮುಮ್ಮಡಿವರಪು ಬಂಗಾರುಶೆಟ್ಟಿಯವರು ನಮಗೋಸ್ಕರ ಅಲ್ಲಿ ಎಲ್ಲಾ ವ್ಯವಸ್ಥೆಯನ್ನೂ ಮಾಡಿದ್ದರು. ಇದಲ್ಲದೆ ಇಲ್ಲಿಯ ಸುಪ್ರಸಿದ್ಧ ಡಾಕ್ಟರರಾದ ಶ್ರೀಮಾನ್ ಬೆಂಡಪೂಡ ಪ್ರಾರರಾಜಗಾರು ಎಂಬ ಸದ್ಗೃಹಸ್ಥರೂ ಅವರ ಸ್ನೇಹಿತರಾದ ಪ್ರೊಫೆಸರ್ ಶ್ರೀ॥ ರಾಮಚಂದ್ರರಾಯರೂ ಶ್ರೀಶ್ರೀಗಳವರಿಗೆ ಶ್ರದ್ಧಾಭಕ್ತಿಗಳಿಂದ ಸೇವೆ ಸಲ್ಲಿಸಿದರು.

### ಸಿಂಹಾಚಲಕ್ಷೇತ್ರ

ಮರುದಿನ ತಾ॥ 26–11–63 ಬೆಳಗ್ಗೆ ಶ್ರೀ॥ ಎಂ. ಬಂಗಾರುಶೆಟ್ಟಿಯವರು ತಾವು ಮಾಡುತ್ತಿರುವ "ಡಂಕನ್ ಅಂಡ್ ಕೋ"ದ ವತಿಯಿಂದ ಒಂದು ಕಾರು ಕಳಿಸಿ ನಮಗೆ ಶ್ರೀಸಿಂಹಾಚಲಕ್ಷೇತ್ರವನ್ನು ತೋರಿಸುವದಕ್ಕಾಗಿ ವ್ಯವಸ್ಥೆ ಮಾಡಿದ್ದರು. ನಾವು 8½ಗೆ ಛತ್ರದಿಂದ ಹೊರಟೆವು.

ವಿಶಾಖಪಟ್ಟಣದಿಂದ 5 ಮೈಲು ಅಂತರದಲ್ಲಿ ಈ ಕ್ಷೇತ್ರವಿದೆ. ತಿರುಪತಿಯಂತೆ ಇದೂ ಬೆಟ್ಟದ ಮೇಲಿದ್ದು ಬಹು ರಮ್ಯವಾಗಿದೆ. ಈ ಬೆಟ್ಟವನ್ನು ಹತ್ತಲು 1000 ಮೆಟ್ಟಿಲುಗಳ ಕಾಲುದಾರಿಯಲ್ಲದೆ ಸಿಂಹಾಚಲದೇವಸ್ಥಾನದ ಕಮಿಟಿಯ ಪರವಾಗಿ ಕೆಳಗಿನಿಂದ ಮೇಲಿನವರೆಗೆ ಬಸ್ಸುಗಳೂ ಸಹ ಹೊರಡುತ್ತವೆ. ರಸ್ತೆ ಚೆನ್ನಾಗಿದ್ದು ಎಲ್ಲಾ ಬಗೆಯ ಅಧುನಿಕ ಸೌಕರ್ಯಗಳನ್ನೂ ಕಮಿಟಿಯವರು ಏರ್ಪಡಿಸಿದ್ದಾರೆ. ನಮ್ಮ ಕಾರು ಬಸ್ಸು ನಿಲ್ಲುವ ಸ್ಥಳಕ್ಕೆ ತಲುಪಿತು. ಅಲ್ಲಿಂದ ಸುಮಾರು 50 ಮೆಟ್ಟಿಲುಗಳನ್ನು ಏರಿದ ನಂತರ ಮುಂದೆ 2–3 ಫರ್ಲಾಂಗ್ ದೂರ ನಡೆಯಬೇಕಾಗಿತ್ತು ಶ್ರೀಶ್ರೀಗಳವರು ಬಹಳ ವೃದ್ಧರಾದ್ದರಿಂದ, ಅವರಿಗಾಗಿ ಒಂದು ಆಂದೋಲಿಕೆ (ಮೇಣೆ) ಯನ್ನು ತರಿಸಲಾಯಿತು. ಈ ಡೋಲಿಯನ್ನು ಕಮಿಟಿಯವರೇ ಅಶಕ್ತರಿಗೋಸ್ಕರ ಆಫೀಸಿನಲ್ಲಿ ಇಡಿಸಿದ್ದಾರೆ. ನಾಲ್ಕು ಜನ ಬೋವಿಗಳು ಅದನ್ನು ಹೊತ್ತು ದೇವಸ್ಥಾನದ ಒಳಭಾಗದಲ್ಲಿಯೇ ಇಳಿಸಿದರು.

ದೇವಾಲಯವು ಗಂಗರಾಜರ ಕಾಲದ್ದೆಂದೂ ಆಂಧ್ರದಲ್ಲಿರುವ ವಿಜಯನಗರದ ಅರಸರು ಕಟ್ಟಿಸಿದ್ದೆಂದೂ ಹೇಳುತ್ತಾರೆ. ದೇವಾಲಯವು ಭವ್ಯವಾಗಿದ್ದು ಆ ಕಾಲದ ಶಿಲ್ಪಕಲೆಯ ಶ್ರೇಷ್ಠಪ್ರತೀಕವಾಗಿದೆ. ಭಾರೀ ಮಹಾದ್ವಾರ, ಒಳಗಿನ ಪ್ರಾಕಾರ ಪ್ರತಿ ಕಲ್ಲಿನಲ್ಲಿಯೂ ಕಂಬಗಳಲ್ಲಿಯೂ ಮೂಡಿದ ಸುಂದರ ಕೆತ್ತನೆಯ ಕೆಲಸಗಳನ್ನು ನೋಡಿದಾಗ ಕರ್ನಾಟಕ ಶಿಲ್ಪಕಲೆಗೆ ಸಮಾನವಾದ ಶಿಲ್ಪಕಲೆ ಇಲ್ಲಿದೆ ಎಂದು ಧಾರಾಳವಾಗಿ ಹೇಳಬಹುದಾಗಿತ್ತು.

ಪ್ರವೇಶಶುಲ್ಕ ಹಾಗೂ ಪೂಜಾದ್ರವ್ಯಾದಿಗಳಿಂದ ನಾವು ಒಳಗೆ ಪ್ರವೇಶಿಸಿದಾಗ ವಿಜಯನಗರದ ರಾಜವಂಶದವರು ಬಂದಿದ್ದರಾದ್ದರಿಂದ ಮಧ್ಯದ ಸಭಾಂಗಣದಲ್ಲಿಯೇ ನಿಂತುಕೊಂಡೆವು. ಅವರು ತೆರಳಿದ ಬಳಿಕ ಅಲ್ಲಿಯ ಕಾರ್ಯಾಲಯದವರೊಬ್ಬರು ಬಹಳ ಶ್ರದ್ಧಾಭಕ್ತಿಗಳಿಂದ ಶ್ರೀಶ್ರೀಗಳವರನ್ನೂ ನಮ್ಮನ್ನೂ ಒಳಗೆ ಕರೆದುಕೊಂಡುಹೋದರು. ನಾವು ಒಳಗೆ ಹೋದಾಗ ಗರ್ಭಗುಡಿಯಲ್ಲೇ ಎದುರಿಗೆ ಇದ್ದ ಒಂದು ದೊಡ್ಡ ಶಿವಲಿಂಗಾಕೃತಿಯನ್ನು ಕಂಡು ಬೆರಗಾದೆವು. ಏಕೆಂದರೆ ಈ ದೇವಸ್ಥಾನವು 'ಶ್ರೀವರಾಹಲಕ್ಷ್ಮೀನರಸಿಂಹ' ದೇವಸ್ಥಾನವು. ಆದರೆ ಅಲ್ಲಿ ನರಸಿಂಹಮೂರ್ತಿಯಾಗಲಿ, ವರಾಹಮೂರ್ತಿಯಾಗಲಿ ಇರಲಿಲ್ಲ, ಶ್ರೀಗಂಧಲೇಪನದಿಂದ ಮುಚ್ಚಿಹೋಗಿರುವ, ಭವ್ಯಗಾತ್ರದ ಈ ಲಿಂಗವನ್ನು ಕುರಿತು ಕೇಳಲಾಗಿ ಅಲ್ಲಿಯ ಶ್ರೀವೈಷ್ಣವರಾದ ಅರ್ಚಕರೊಬ್ಬರು ಹೀಗೆಹೇಳಿದರುಃ ''ಕೃತಯುಗದಲ್ಲಿ ಹಿರಣ್ಯಕಶಿಪು ಇಲ್ಲಿದ್ದನು. ಹರಿಭಕ್ತನಾದ ಪ್ರಹ್ಲಾದನನ್ನು ಇಲ್ಲಿಯೇ ಪರ್ವತದಿಂದ ತಳ್ಳಲಾಯಿತು; ಹಾಗೂ ಸಮುದ್ರದಲ್ಲೆಸೆಯಲಾಯಿತು. ಆ ಭಕ್ತನನ್ನು ಕಾಯುವದಕ್ಕಾಗಿ ಶ್ರೀನೃಸಿಂಹಸ್ವಾಮಿಯು ಇಲ್ಲಿ ಪ್ರತ್ಯಕ್ಷನಾಗಿದ್ದಾನೆ. ಈತನೇ ವರಾಹಲಕ್ಷ್ಮೀನರಸಿಂಹ. ಈತನ ನಿಜರೂಪದರ್ಶನವು ವರ್ಷಕ್ಕೊಮ್ಮೆ ವೈಶಾಖ ಶುದ್ಧ ಚತುರ್ದಶೀ ದಿನ ಮಾತ್ರವೇ ಆಗುವದು. ಮಿಕ್ಕ ದಿನಗಳಲ್ಲೆಲ್ಲ ಉಗ್ರನಾದ ಈ ಸ್ವಾಮಿಯನ್ನು ಶ್ರೀಚಂದನದಿಂದ ಮುಚ್ಚಿರುವದೇ ಪದ್ಧತಿ.''

ಅಷ್ಟೋತ್ತರಪೂಜಾಮಂಗಳಾರತಿಗಳನ್ನು ಮುಗಿಸಿಕೊಂಡು ಪ್ರಸಾದಾದಿಗಳನ್ನು ಸ್ವೀಕರಿಸಿ ಎಡಭಾಗದಲ್ಲಿದ್ದ 'ಆಂಡಾಳ್ ಅಮ್ಮನವರ' (ಲಕ್ಷ್ಮೀದೇವಿಯ) ದರ್ಶನ ತೆಗೆದುಕೊಂಡು ಹೊರಡುವಾಗ ಸ್ವತಃ ನನಗಂತೂ ಬಹಳ ಸಂಶಯಗಳು ತಲೆದೋರಿಕೊಂಡವು. ಏಕೆಂದರೆ ಅಮ್ಮನವರನ್ನು ನೋಡಿದರೆ ಪಾರ್ವತಿಯ ಆಭರಣ, ಆಯುಧ ಆಕಾರಗಳೇ ಕಾಣುತ್ತವೆ. ಸುತ್ತಲಿನ ಕೆತ್ತನೆಯಲ್ಲಿಯೂ ಸಹ ಹಳೆಯ ಕೆಲಸಗಳಲ್ಲಿ ಶೈವಚಿಹ್ನೆಗಳೂ ಹೊಸದಾಗಿ ಮಾಡಿಸಿದ ಕೆಲಸಗಳಲ್ಲಿ ಮಾತ್ರ ವೈಷ್ಣವಾಕೃತಿ, ನೃಸಿಂಹಾಕೃತಿಗಳು ಕಾಣುತ್ತವೆ. ಈ ಕಾರಣಗಳಿಂದ ಇದು ಮೊದಲು ಶೈವ

ದೇವಾಲಯವೇ ಆಗಿದ್ದು ಆಗಿನ ಕಾಲದ ಶೈವ, ವೈಷ್ಣವರ ಬಡಿದಾಟದ ಭರದಲ್ಲಿ ರಾಜಾಶ್ರಯದ ಬಲವಿದ್ದ ವೈಷ್ಣವರು ಇದನ್ನಾಕ್ರಮಿಸಿ ಈ ರೀತಿ ಮಾರ್ಪಡಿಸಿರಬಹುದೆ?– ಎಂಬ ಸಂದೇಹವು ನನಗೆ ಬಾರದಿರಲಿಲ್ಲ. ಮಹಾದ್ವಾರದ ಹೊರಗೆ ಕಾಶೀವಿಶ್ವನಾಥನ ದೇವಾಲಯವಿದೆ. ಅದರ ಬಲಭಾಗದಲ್ಲಿ ಕೆಲವು ಮೆಟ್ಟಿಲುಗಳನ್ನುಹತ್ತಿ ಸ್ವಲ್ಪಮೇಲೆ ಹೋದರೆ ಪರ್ವತದಿಂದ ಹರಿದುಬರುವ ಶುದ್ಧವಾದ ಜಲಧಾರೆಯನ್ನು ಗೋಮುಖಗಳಿಂದ 3–4 ಕಡೆಗೆ ಬೀಳುವಂತೆ ಮಾಡಿದ್ದಾರೆ. ಇದಕ್ಕೆ 'ಗಂಗೆ' ಎಂಬ ಹೆಸರೇ ಇದ್ದು ಇಲ್ಲಿ ಸ್ನಾನಮಾಡಿದರೆ ಮಣಿಕರ್ಣಿಕಾಸ್ನಾನಫಲವೆಂದೂ ಹೇಳಿದರು. ನಮ್ಮ ಜೊತೆಯಲ್ಲಿದ್ದ ಶ್ರೀಮತಿ ಲಕ್ಷ್ಮಮ್ಮನವರು ಮಾತ್ರ ಈ ತೀರ್ಥದಲ್ಲಿ ಮಿಂದು ಬಂದರು. ಇದರ ಪಕ್ಕಕ್ಕೆ ಒಂದು ರಾಮಮಂದಿರವಿದ್ದು ಅಲ್ಲಿ ರಾಮಕೋಟಿಯಜ್ಞ ನಡೆದದ್ದರ ಗುರುತಿಗಾಗಿ ಒಂದು ಸ್ತಂಭವನ್ನು ನಿಲ್ಲಿಸಿರುತ್ತಾರೆ.

ಈ ಕ್ಷೇತ್ರವನ್ನು ನೋಡಿಕೊಂಡು ಮಧ್ಯಾಹ್ನ 12 ಗಂಟೆಯ ಹೊತ್ತಿಗೆ ನಮ್ಮ ನಿವಾಸಕ್ಕೆ ಮರಳಿದೆವು. ಅದೇ ದಿನ ಸಾಯಂಕಾಲ ಈ ಛತ್ರದ ಪಕ್ಕದಲ್ಲಿರುವ **ಶ್ರೀ ಜಗನ್ನಾಥ ದೇವಾಲಯ**ದಲ್ಲಿಯೇ 7 ರಿಂದ 8 ರವರೆಗೆ ಶ್ರೀಶ್ರೀಗಳವರ ಉಪನ್ಯಾಸ ವನ್ನೇರ್ಪಡಿಸಲಾಗಿತ್ತು. ಅಲ್ಲಿ ಮೊದಲು 5 ½ ಯಿಂದ 7ರವರೆಗೆ ಸ್ವಾಮಿಗಳೊಬ್ಬರು ಶ್ರೀಮದ್ಭಗವದ್ಗೀತೆಯ 6ನೆಯ ಅಧ್ಯಾಯವನ್ನು ನಿತ್ಯವೂ ಶ್ರವಣಮಾಡಿಸುತ್ತಿದ್ದರು. ಅದಾದ ಮೇಲೆ **ಶ್ರೀಶ್ರೀಗಳವರ ಉಪನ್ಯಾಸವು** ಆರಂಭವಾಯಿತು. ಉಪನ್ಯಾಸಕ್ಕೆ ಮುನ್ನ ನಾನೇ ಕಾರ್ಯಾಲಯ ಹಾಗೂ ಶ್ರೀಶ್ರೀಗಳವರ ಬಗ್ಗೆ ನಾಲ್ಕು ಮಾತುಗಳನ್ನು ತೆಲುಗಿನಲ್ಲಿ ಹೇಳಿದೆ. ಏಕೆಂದರೆ ಇದುವರೆಗೆ ನಮ್ಮ ಜೊತೆಯಲ್ಲಿಯೇ ಬಂದ ಶ್ರೀ|| ಗುಪ್ತದಂಪತಿಗಳು ತಮ್ಮ ಗೃಹಕೃತ್ಯದ ಒಂದು ಕೆಲಸದ ನಿಮಿತ್ತವಾಗಿ ಬೆಳಿಗ್ಗೆ ವಿಶಾಖಪಟ್ಟಣದಿಂದ ಕಲಕತ್ತಾ–ಮದ್ರಾಸ್ ಮೇಲಿಗೆ ಹೊರಟುಹೋಗಿದ್ದರು. ಅವರು ಬೇಗನೆ ಬೆಂಗಳೂರನ್ನು ತಲುಪಬೇಕಾಗಿತ್ತು.

ಇಂದಿನ ಉಪನ್ಯಾಸದ ವಿಷಯ '**ಉಪಾಸನೆ**' ಎಂಬುದಿತ್ತು. ಶ್ರೀಶ್ರೀಗಳವರು ಇಂಗ್ಲೀಷಿನಲ್ಲಿ ಹೇಳಬೇಕೆಂತಲೂ ಅಲ್ಲಿಯ ಪ್ರೊಫೆಸರಾದ ಶ್ರೀವಾನ್ ರಾಮಚಂದ್ರರಾಯರು ಅದನ್ನು ತೆಲುಗಿಗೆ ಅನುವಾದಮಾಡಬೇಕೆಂತಲೂ ನಿರ್ಣಯಿಸಿದ ಪ್ರಕಾರ ಶ್ರೀಶ್ರೀಗಳವರು ಇಂಗ್ಲೀಷಿನಲ್ಲಿಯೇ ಆರಂಭಿಸಿದರು. ಅದರ ಸಾರಾಂಶ ಹೀಗಿತ್ತು: ''ನಾವು ಜಗತ್ತಿನಲ್ಲಿರುವ ವಿಷಯಗಳನ್ನೆಲ್ಲ ತಿಳಿದುಕೊಳ್ಳಲು ಇಂದ್ರಿಯಗಳನ್ನು ಉಪಯೋಗಿಸುತ್ತೇವೆ. ಆದರೆ ಕೇವಲ ಇಂದ್ರಿಯಗಳಿಂದಲೇ ಅಲ್ಲದೆ ಬರಿಯ ಮನಸ್ಸಿಗೇ ಗೊತ್ತಾಗುವ ಸುಖದುಃಖಾದಿಭಾವಗಳೂ ನಮ್ಮ ಅನುಭವದಲ್ಲಿವೆ. ಹೊರಗಿನ ವಸ್ತುಗಳಿಗೆ

ಇಂದ್ರಿಯಗಳು ಪ್ರಮಾಣವಾದರೆ ಒಳಗಿನ ಭಾವಗಳಿಗೆ ಮನಸ್ಸೇ ಪ್ರಮಾಣವು. ಇನ್ನು ಈ ಎರಡು ಪ್ರಮಾಣಗಳಿಂದಲೂ ಹಿಡಿಯಲಾಗದ, ಅನುಭವಮಾತ್ರಕ್ಕೇ ವೇದ್ಯವಾಗುವ ತತ್ತ್ವವೂ ನಮ್ಮ ಜೀವನಕ್ಕೇ ಸಂಬಂಧಪಟ್ಟದ್ದಾಗಿದೆ. ಅದನ್ನು ಉಪನಿಷತ್ತುಗಳು ಮಾತ್ರವೇ ತಿಳಿಸುತ್ತವೆ. ಆ ತತ್ತ್ವವನ್ನು ಅರಿಯುವ ಯೋಗ್ಯತೆಯು ಈಗಿನ ನಮ್ಮ ಅಂತಃಕರಣಕ್ಕೆ ಬರಬೇಕಾದರೆ–ಇಂದ್ರಿಯವಿಷಯಗಳ ಮತ್ತು ಸುಖದುಃಖಭಾವಗಳ ಗೊಡವೆಯನ್ನು ಕೈಬಿಟ್ಟು ಕೇವಲ ಅನುಭವಸ್ವರೂಪವಾಗಿರುವ ತತ್ತ್ವವನ್ನು ಮುಟ್ಟಲು ಈ ಅಂತಃಕರಣವು ಸಮರ್ಥವಾಗಬೇಕಾದರೆ ಒಂದಾನೊಂದು ಸಾಧನವು ಅವಶ್ಯವಾಗಿದೆ. ಅದೇ ಉಪಾಸನೆ.

ಶಾಸ್ತ್ರದಲ್ಲಿ ಯಜ್ಞ, ದಾನ, ತಪಸ್ಸು–ಎಂಬ ಸಾಧನೆಗಳನ್ನು ವಿಧಿಸಿದೆ. ಈ ಕರ್ಮಗಳು ವೀರ್ಯವತ್ತಾಗುವದಕ್ಕಾಗಿ ಇವುಗಳೊಡನೆ ಸೇರಿಸಿಕೊಂಡು ಮಾಡುವ ಉಪಾಸನೆಯನ್ನೂ ಶಾಸ್ತ್ರವು ಹೇಳಿದೆ. ಅವುಗಳನ್ನು ಯಥಾವತ್ತಾಗಿ ಮಾಡುವದು ಈಗಿನ ಕಾಲಕ್ಕೆ ಕಡುಕಷ್ಟವಾಗಿದೆ. ಈಗ ನಾವುಗಳೆಲ್ಲರೂ ಮಾಡುತ್ತಿರುವ ಲೌಕಿಕ ಕರ್ಮಗಳನ್ನೇ ಭಗವದರ್ಪಣಬುದ್ಧಿಯಿಂದ ಮಾಡಿದರೆ ಅವು ವೀರ್ಯವತ್ತರವಾಗುವವೆಂಬುದು ಅನುಭವಸಿದ್ಧ. ಒಂದು ಕರ್ಮ ಅಥವಾ ದಾನ ಅಥವಾ ವ್ರತ–ಇವೇ ಮುಂತಾದದ್ದನ್ನಾಗಲಿ, ಕೊನೆಗೆ ಉಪಜೀವನಕ್ಕಾಗಿ ಮಾಡಬೇಕಾದ ಕೆಲಸಗಳನ್ನಾಗಲಿ ಭಗವದರ್ಪಣಬುದ್ಧಿಯನ್ನಿಟ್ಟುಕೊಂಡು ಮಾಡಿದರೆ ಅದೂ ಕರ್ಮಯೋಗವೆನಿಸುವದು. ಮಾಡುತ್ತಿರುವ ಕರ್ಮಗಳ ದೃಷ್ಟಿಯಿಂದ ಇದು ಕರ್ಮಯೋಗವಾಗಿದ್ದರೂ ಯಾವ ಭಗವಂತನಿಗೆ ಇದನ್ನು ಅರ್ಪಿಸಬೇಕೋ ಅವನ ಸ್ಮರಣೆಯು ಸಂತತವಾಗಿರುವದರಿಂದ ಈ ಸ್ಮರಣೆಯ ಅಂಶವೇ '**ಉಪಾಸನೆ**' ಎನಿಸಿಕೊಳ್ಳುತ್ತದೆ. ಇಂಥ ಉಪಾಸನೆಯಿಂದಲೇ ಕರ್ಮಗಳು ಫಲವತ್ತರವಾಗುವವಲ್ಲದೆ ಚಿತ್ತಶುದ್ಧಿಯು ಲಭಿಸಿ ಆತ್ಮಜ್ಞಾನಕ್ಕೆ ತಕ್ಕ ಅಧಿಕಾರವು ಪ್ರಾಪ್ತವಾಗುವದು. ಆದ್ದರಿಂದಲೇ ಭಗವಂತನ ನಾಮಸ್ಮರಣೆ, ಭಜನೆ, ಪೂಜೆ, ಅರ್ಚನೆ, ಧ್ಯಾನ–ಮುಂತಾದವುಗಳು ಎಲ್ಲಾ ಸಂತಮಹಾಂತರಿಂದಲೂ ಉಪದಿಷ್ಟವಾಗಿರುತ್ತವೆ. ಇನ್ನು ಇಂಥ ಉಪಾಸನೆಯನ್ನು ಮಾಡುವದರಿಂದ ಉಂಟಾಗುವ 'ಜ್ಞಾನ'ದ ತತ್ತ್ವವೇನು? ಎಂಬ ಬಗ್ಗೆ ನಾಳೆಯ ದಿನ ಹೇಳುತ್ತೇನೆ.''

**ತಾ|| 27–11–63**

ಈ ದಿನ **ಕಾರ್ತಿಕ ಶುದ್ಧ** ಏಕಾದಶಿಯಾದ್ದರಿಂದ ಬೆಳಗ್ಗೆ ಸಮುದ್ರಸ್ನಾನಕ್ಕೆಂದು ಹೊರಟೆವು. ಹಿಂದಿನ ದಿನದಂತೆಯೇ ಡಂಕನ್ ಅಂಡ್ ಕೋ.ದವರ ಕಾರಿನಲ್ಲಿ ಹೊರಟು

ಒಂದು ಅನುಕೂಲವಾದ ಸ್ಥಳದಲ್ಲಿ ಶ್ರೀಶ್ರೀಗಳವರು, ನಾನು, ಶ್ರೀಮತಿ ಲಕ್ಷ್ಮಮ್ಮ ಹಾಗೂ ಶ್ರೀ|| ಚದುವಲ ರಾಮರಾಯರು ಸ್ನಾನಮಾಡಿ ಸಮುದ್ರರಾಜನ ದರ್ಶನವನ್ನು ಮಾಡಿಕೊಂಡು, ಅಲೆಗಳ ಸೊಬಗುಗಳನ್ನು ಕಂಡು ಆನಂದಿತರಾಗಿ ಹಿಂದಿರುಗುವಾಗ ಅಲ್ಲಿಯ ಹಡಗುಕಟ್ಟುವ (Ship-yard) ಸ್ಥಳವನ್ನೂ ನೋಡಿದೆವು. ವಿಶಾಖಪಟ್ಟಣವು ಬಂದರವಾಗಿದೆಯಲ್ಲದೆ ಸ್ವಾಭಾವಿಕವಾಗಿ ಗುಡ್ಡದ ಓರೆಯಲ್ಲಿ ಸಮುದ್ರವು ಒಳನುಗ್ಗಿದ್ದರಿಂದುಂಟಾದ ಕಾಲುವೆಯ ಮೂಲಕ ಹಡಗುಕಟ್ಟುವ ಸ್ಥಳವಾಗುವದಕ್ಕೆ ಉತ್ತಮ ಸೌಕರ್ಯವುಳ್ಳದ್ದಾಗಿದೆ. ಆಂಧ್ರದೇಶದಲ್ಲಿಯೇ ಆಗಲಿ ಅಥವಾ ಸನಿಹದ ಯಾವದೇ ಬಂದರದಲ್ಲಿಯೇ ಆಗಲಿ ಇಷ್ಟು ತಂಪಾದ, ಪರ್ವತಾದಿಗಳಿಂದ ರಮ್ಯವಾದ, ಗಿಡಮರಗಳಿಂದ ದಟ್ಟವಾದ ಉತ್ತಮ ಸ್ಥಳ ಇನ್ನೊಂದಿಲ್ಲವೆನ್ನಬಹುದು. ಇದಕ್ಕೊಪ್ಪುವಂತೆ ಪಟ್ಟಣವೂ ಅಚ್ಚುಕಟ್ಟಾಗಿದೆ. ಸರಕಾರದ ದೊಡ್ಡದೊಡ್ಡ ಉಗ್ರಾಣಗಳಲ್ಲಿ ಆಹಾರಾದಿಗಳನ್ನು ಪರದೇಶದಿಂದ ತರಿಸಿ ತುಂಬಿ ದಾಸ್ತಾನು ಮಾಡಲಾಗಿದೆ. ಸುತ್ತಲೂ ರೈಲುಮಾರ್ಗಗಳನ್ನು ಹಾಕಿ ಹಡಗಿನಿಂದ ನೇರಾಗಿ ಒಳಕ್ಕೆ ಮಾಲನ್ನು ತರಲು ಹಾಗೂ ಹೊರದೇಶಗಳಿಗೆ ಸಾಗಿಸಲು ಬಹು ಚೆನ್ನಾದ ವ್ಯವಸ್ಥೆ ಇಲ್ಲಿದೆ. 1942ರಲ್ಲಿ ಬಾಂಬು ದಾಳಿಯಾದ ಸ್ಥಳವನ್ನೂ ನಮಗೆ ತೋರಿಸಿದರು.

ಈ ದಿನ 11 ಗಂಟೆಗೆ ಶ್ರೀ|| ಎಂ. ಬಂಗಾರುಶೆಟ್ಟಿಯವರ ಮನೆಯಲ್ಲಿ ಶ್ರೀಶ್ರೀಗಳವರಿಗೆ ಪಾದಪೂಜೆಯಾಯಿತು. ದಂಪತಿಗಳು ಅತ್ಯಂತಭಕ್ತಿಯಿಂದ ನಾರಾಯಣಸ್ವರೂಪರಾದ ಶ್ರೀಶ್ರೀಗಳವರಿಗೆ ಈ ಕಾರ್ತಿಕ ಶುದ್ಧ ಏಕಾದಶಿಯ ಹರಿದಿನದಲ್ಲಿ ಪೂಜೆಯನ್ನು ಸಲ್ಲಿಸಿ ಆಶೀರ್ವಾದವನ್ನು ಪಡೆದರು. ಆಮೇಲೆ ಸುಮಾರು 12 ½ ಗಂಟೆಗೆ ನಮ್ಮ ನಿವಾಸಕ್ಕೆ ಮರಳಿದೆವು. ಪಕ್ಕದ ಶ್ರೀಜಗನ್ನಾಥ ದೇವಾಲಯದಲ್ಲಿ ನಡೆಯುತ್ತಿದ್ದ **ಅಖಂಡಭಜನೆಗೆ** ಶ್ರೀಮತಿ ಲಕ್ಷ್ಮಮ್ಮನವರು ಸಾಯಂಕಾಲ 4 ಗಂಟೆಯವರೆಗೂ ಹೋಗಿದ್ದರು.

ಈ ದಿನ ಶ್ರೀಶ್ರೀಗಳವರ ದರ್ಶನವನ್ನು ಪಡೆಯಲು ಅನೇಕ ಜನರು ಬಂದು ಹೋದರು. ಅವರೊಂದಿಗೆ ಮಾತನಾಡುತ್ತಿದ್ದಾಗ ಮಧ್ಯೆ ಯಾರದೋ ಪ್ರಶ್ನೆಗೆ ಉತ್ತರವಾಗಿ ನಾವು ಬೆಳಗ್ಗೆ ತಾನೇ ಹೋಗಿ ಬಂದ ಸಮುದ್ರದ ದೃಷ್ಟಾಂತವನ್ನೇ ಶ್ರೀಗಳು ಕೊಟ್ಟರು. ''ಸಮುದ್ರದ ವೈಶಾಲ್ಯವನ್ನೂ ಗಾಂಭೀರ್ಯವನ್ನೂ ಅನಂತತೆಯನ್ನೂ ಕಂಡು ಆನಂದಿಸುತ್ತಿರುವ ಒಬ್ಬರಿಗೆ ಅದರ ಅಗಾಧತೆಯ ಕಲ್ಪನೆಯಿಂದಾಗಿ ಸಂಕುಚಿತಭಾವನೆಯೇ ತೊಡೆದುಹೋಗುತ್ತದೆ. ಅರ್ಥಾತ್ ಆ ಕ್ಷಣದಲ್ಲಿ ಈ ಕ್ಷುದ್ರವಾದ 'ನಾನು' ಎಂಬುದೇ ಹೊರಟುಹೋಗಿರುತ್ತದೆ. ನನ್ನಂತಹ ಒಬ್ಬ ವೃದ್ಧಮನುಷ್ಯನು ಸಮುದ್ರಸ್ನಾನಕ್ಕೆ ಹೋದರೆ

ಅವನಿಗೆ ಆ ಅಲೆಗಳ ಗರ್ಜನೆಯಿಂದ ಭಯವೇ ಉಂಟಾಗುತ್ತದೆ; ಮತ್ತೊಬ್ಬ ಬೆಸ್ತರವನು ಅಲ್ಲಿ ಮೀನು ಹಿಡಿಯಲು ಅಪೇಕ್ಷಿಸಿದರೆ ಸಮುದ್ರವು ಅವನಿಗೆ ಆಶೆಯನ್ನುಂಟು ಮಾಡುತ್ತದೆ. ಹೀಗೆ ಒಂದೇ ವಸ್ತುವು ಭಿನ್ನಭಿನ್ನದೃಷ್ಟಿಯ ಜನರಿಗೆ ನಾನಾವಿಧವಾಗಿ ತೋರುವದು ಕಂಡಿದೆ''ಎಂಬುದು ಉತ್ತರದ ಸಾರಾಂಶವಾಗಿತ್ತು.

ಸಾಯಂಕಾಲ ಜಗನ್ನಾಥದೇವಾಲಯದಲ್ಲಿಯೇ ಉಪನ್ಯಾಸವು ನಡೆಯಿತು. ಉಪನ್ಯಾಸವನ್ನು ಶ್ರೀಶ್ರೀಗಳವರು ಕನ್ನಡದಲ್ಲಿಯೇ ಅನುಗ್ರಹಿಸಿದರು. ನಾನು ಅದನ್ನು ಆಂಧ್ರಭಾಷೆಗೆ ತರ್ಜುಮೆಮಾಡಿದೆ. ಸುಮಾರು 4–5 ನೂರು ಜನಗಳು ಸೇರಿದ್ದ ಇಂದಿನ ದೊಡ್ಡ ಸಭೆಯಲ್ಲಾದ ಭಾಷಣವು ಅದ್ಭುತವಾಗಿತ್ತು. ಅದರ ಸಂಕ್ಷಿಪ್ತರೂಪವನ್ನಿಲ್ಲಿ ಕೊಟ್ಟಿದೆ:

''ಈ ದಿನ ಜ್ಞಾನದ ವಿಚಾರವಾಗಿ ಹೇಳುವೆನೆಂದು ನಿನ್ನೆಯೇ ಹೇಳಿದ್ದೆ. ಅದಕ್ಕೂ ಮೊದಲು ನಿನ್ನೆ ಹೇಳಿದ ಸಂಗತಿಗಳ ಬಗ್ಗೆ ಒಂದೆರಡು ಮಾತುಗಳನ್ನು ತಿಳಿಸುತ್ತೇನೆ. ವೇದದಲ್ಲಿ ಹೇಳಿದ ಸಾಧನೆಗಳನ್ನು ಮುಖ್ಯವಾಗಿ ಕರ್ಮ, ಉಪಾಸನೆ, ಜ್ಞಾನ–ಎಂದು ಮೂರು ಭಾಗಗಳನ್ನಾಗಿ ಮಾಡಬಹುದು. ಸಾರನ್ನು ಮಾಡಿದ ಮೇಲೆ ಒಗ್ಗರಣೆಯನ್ನು ಕೊಟ್ಟರೆ ಹೇಗೆ ಕಂಪು ಬರುವದೋ ಒಗ್ಗರಣೆ ಇಲ್ಲದಿದ್ದರೆ ಹೇಗೆ ರುಚಿಕರವಾದ ಕಂಪು (ಸುವಾಸನೆ) ಬರುವದೇ ಇಲ್ಲವೋ ಹಾಗೆಯೇ ಈ ಕರ್ಮ, ಉಪಾಸನೆ, ಜ್ಞಾನಗಳಿಗೂ ಕಂಪು ಬರಬೇಕಾಗಿದ್ದರೆ ಒಂದೊಂದು ಬಗೆಯ ಒಗ್ಗರಣೆ ಇದೆ. ಅದಿಲ್ಲದೆ ಅವು ಫಲಕಾರಿಯಾಗಲಾರವು. ಈ ದೃಷ್ಟಿಯಿಂದ ನೋಡಿದಾಗ ಕರ್ಮಕ್ಕೆ ಶ್ರದ್ಧೆಯೇ ಒಗ್ಗರಣೆ. ಶ್ರದ್ಧೆಯಿಲ್ಲದೆ ಬರಿಯ ಬಾಯಿಂದ ಮಂತ್ರಗಳನ್ನು ಉಚ್ಚರಿಸುತ್ತಾ ಕೈಕಾಲುಗಳಿಂದ ಕೆಲವು ಕ್ರಿಯೆಗಳನ್ನು ಮಾಡಿದ ಮಾತ್ರಕ್ಕೆ ಕರ್ಮದ ಫಲವು ದೊರಕಲಾರದು. ಒಂದು ಕೋತಿಯು ಕೆಲವು ಚೇಷ್ಟೆಗಳನ್ನು ಮಾಡಿದರೆ ಅದು ಕರ್ಮವೆನಿಸೀತೆ? 'ಈ ಕರ್ಮವು ಸತ್‌ಕರ್ಮ; ಇದನ್ನು ಭಗವಂತನ ಸನ್ನಿಧಿಯಲ್ಲಿ ಮಾಡುತ್ತಿದ್ದೇನೆ. ಇದನ್ನು ಯಥಾಶಕ್ತಿಯಾಗಿ ಮಾಡಿ ಅವನಿಗರ್ಪಿಸಿ ನಾನು ಕೃತಕೃತ್ಯನಾಗುತ್ತೇನೆ' 'ಈ ಕರ್ಮವು ನನ್ನ ಪಾಪಗಳನ್ನೆಲ್ಲ ಕಳೆಯುವದು' ಎಂಬ ದೃಢವಿಶ್ವಾಸವೇ ಶ್ರದ್ಧೆ. ಶ್ರದ್ಧೆಯಿಂದ ಮಾಡಿದರೆ ಕರ್ಮವು ಮುಗಿದಾಗಲೇ ಒಂದು ವಿಧವಾದ ಅನಿರ್ವಚನೀಯ ಆನಂದವು ಸಾಧಕನ ಮನಸ್ಸಿನಲ್ಲಿ ಮೈದೋರಿಕೊಳ್ಳುತ್ತದೆ. ಆಗ ಪರಲೋಕದಲ್ಲಿಯೂ ಆ ಕರ್ಮಕ್ಕೆ ಉತ್ತಮವಾದ ಹೆಚ್ಚಿನದಾದ ಆನಂದಪ್ರಾಪ್ತಿಯಾಗುವದೆಂಬ ಬಗ್ಗೆ ಸಂಶಯವೇ ಉಳಿಯುವದಿಲ್ಲ.

ಉಪಾಸನೆಗೆ ಭಕ್ತಿಯೇ ಒಗ್ಗರಣೆ. ನಾಮಸ್ಮರಣೆ, ಜಪ, ಧ್ಯಾನ–ಮುಂತದವುಗಳೆಲ್ಲವೂ 'ಉಪಾಸನೆ' ಎನಿಸಿಕೊಳ್ಳುತ್ತವೆ. ಸುಮ್ಮನೆ ಕೂಗಿ ನಾಮಸ್ಮರಣೆ

ಮಾಡುವದು, ಯಾವದಾದರೂ ಒಂದು ಕಟ್ಟಿಗೆ ಸಿಕ್ಕಿಬಿದ್ದು ಕಷ್ಟದಿಂದ ಗೊತ್ತಾದ ಸಂಖ್ಯೆಯ ಜಪವನ್ನು ಮಾಡಿಮುಗಿಸುವದು, ಸಮಯ ನಿರ್ಬಂಧದಿಂದ ಧ್ಯಾನ ಮಾಡುವದು–ಇವೆಲ್ಲವೂ ಭಕ್ತಿರಹಿತವಾದ ಉಪಾಸನೆಗಳು. ಹೀಗೆ ಸಾಧನೆಗಳನ್ನು ಮಾಡಿ ಮುಗಿಸಿದಾಗ ಸಾಧಕನಿಗೆ ಆಯಾಸವೂ ಬೇಸರವೂ ಆಗಿರುತ್ತದೆ. ಸಾಧಕನು ಮತ್ತೆ ಅವುಗಳನ್ನು ಮಾಡುವ ಸಮಯವು ಬಂದಾಗ ಜೈಲಿನಲ್ಲಿಯ ಖೈದಿಗಳು ಕಡ್ಡಾಯಕ್ಕೊಳಗಾಗಿ ಕೆಲಸವನ್ನು ಮಾಡುವಂತೆ ಮಾಡಲು ತೊಡಗುತ್ತಾನೆ. ಆದರೆ ಇವೇ ಸಾಧನಗಳಿಗೆ ಭಕ್ತಿಯು ಸೇರಿದರೆ ಅದರ ಆನಂದವೇ ಬೇರೆ. ಭಕ್ತಿ ಎಂದರೆ ಪ್ರೇಮವು. ಪರಮಾತ್ಮನ ಸಗುಣರೂಪ, ಆತನ ಲೀಲೆಗಳನ್ನು ನೆನಪುಕೊಡುವ ನಾಮ–ಮುಂತಾದವುಗಳಲ್ಲಿ ಪ್ರೀತಿಯು ಹೆಚ್ಚುತ್ತಿರುವದು, ಜಪಧ್ಯಾನಭಜನಾದಿಗಳನ್ನು ಮಾಡುವಾಗ ಭಗವಂತನು ಇಲ್ಲಿಯೇ ನಮ್ಮೆದುರಿಗೇ ಈಗಲೇ ನಿಂತಿದ್ದಾನೆಂಬ ಭಾವವು ಮನದಲ್ಲಿ ಮೂಡಿಕೊಳ್ಳುವದು, ಭಗವಂತನ ಗುಣಕರ್ಮಗಳನ್ನು ನೆನಪಿಸಿಕೊಂಡ ಮಾತ್ರಕ್ಕೇ ಪ್ರೀತಿಯು ಉಕ್ಕೇರುವದು–ಇವೇ ಮುಂತಾದ ಮನಸ್ಸಿನ ಭಾವಗಳು ಭಕ್ತಿಯ ಗುರುತುಗಳು. ಇಂಥ ಭಕ್ತಿಯುಕ್ತವಾದ ಉಪಾಸನೆಯಿಂದಲೇ ಭಗವಂತನ ಪರಮಾನುಗ್ರಹವು ಲಭಿಸುತ್ತದೆ.

ಜ್ಞಾನಕ್ಕೆ ಅನುಭವವೇ ಒಗ್ಗರಣೆ. ಅನುಭವದಲ್ಲಿ ಪರ್ಯವಸಾನವಾಗದ ಜ್ಞಾನವು ವ್ಯರ್ಥಪ್ರಯಾಸಕ್ಕೆ ಕಾರಣವಾದದ್ದು. ಅನೇಕರು ವಿಚಾರ, ಶ್ರವಣ, ಶಾಸ್ತ್ರಾಭ್ಯಾಸಾದಿಗಳನ್ನು ಜ್ಞಾನಕ್ಕೋಸ್ಕರ ಮಾಡುತ್ತಿರುತ್ತಾರೆ. ಆದರೆ ಅವು ಯಾವವೂ ತೃಪ್ತಿಗೆ ಕಾರಣವಾಗಿರುವದಿಲ್ಲ. ಅವರ ಪ್ರಯತ್ನಗಳು ಅನುಭವದಲ್ಲಿ ಪರ್ಯವಸಾನ ವಾಗಿರುವದಿಲ್ಲ. ಬರಿಯ ತರ್ಕ, ಗ್ರಂಥಾಭ್ಯಾಸ, ಉಪನ್ಯಾಸ–ಮುಂತಾದವುಗಳನ್ನು ಮಾಡುವದರಿಂದ ಎಂದಿಗೂ ತೃಪ್ತಿದೊರಕದು. ಆದ್ದರಿಂದಲೇ ಶ್ರುತಿಯು 'ನಾಯಮಾತ್ಮಾಪ್ರವಚನೇನ ಲಭ್ಯಃ' ಎಂದು ಮುಂತಾಗಿ ಹೇಳುತ್ತದೆ. ಅನುಭವಿಯಾದ ಆಚಾರ್ಯನ ಬೋಧವು ಅನುಭವದಲ್ಲಿಯೇ ಪರ್ಯವಸಾನವಾಗುವದಾದ್ದರಿಂದ 'ಅನನ್ಯ ಪ್ರೋಕ್ತೇಗತಿರಸ್ತ ನಾಸ್ತಿ' ಎಂದೂ ಶ್ರುತಿಯಿದೆ.

ಈ ಅನುಭವವೆಂಬುದು ಪ್ರತ್ಯಕ್ಷಾನುಭವ ಅಥವಾ ವೇದನೆಯ ರೂಪವಾದ ಅನುಭವ–ಇವೆರಡನ್ನೂ ಮೀರಿದ್ದು. ಇದು ಇವೆರಡೂ ಇರುವದನ್ನೂ ಇಲ್ಲದಿರುವದನ್ನೂ ಬೆಳಗುವ ಸ್ವಯಂಪ್ರಕಾಶರೂಪನಾದ ಆತ್ಮನ ಸ್ವರೂಪವೇ ಆಗಿದ್ದು ತತ್ತ್ವವಿಚಾರದ ಕೊನೆಗೆ ಅಭಿವ್ಯಕ್ತವಾಗುವದಾಗಿರುತ್ತದೆ. ಇದು ಕಾಲದೇಶಗಳ ಕಟ್ಟಿಲ್ಲದೆ ಸರ್ವರಿಗೂ ಸರ್ವಕಾಲದ ಸರ್ವದೇಶದ ಜನಗಳಿಗೂ ಒಂದೇ ಬಗೆಯಾಗಿರುತ್ತದೆ. ಇದು

ಯಾವದಾದರೊಂದು ಸಾಧನವಿಶೇಷದಿಂದ ಯಾರಾದರೊಬ್ಬರಿಗೆ ಹೊಸದಾಗಿ ಬರುವಂತಹುದೇನೂ ಅಲ್ಲ. ಈ ಅನುಭವದಲ್ಲಿಯೇ ಪರ್ಯವಸಾನವಾಗುವ ಬೋಧದ ದೃಷ್ಟಿಯಿಂದ ನೋಡಿದಾಗ 'ಅನುಭವಸ್ವರೂಪವೇ ನಾನಿದ್ದೇನೆ. ಈಗಿನ 'ನಾನು' ಎಂಬುದು ಅದನ್ನರಿಯದಿರುವಾಗ ತೋರುವ ಹುಸಿತೋರಿಕೆಯು, ಮಾಯಿಕವು' ಎಂದೇ ಗೊತ್ತಾಗಿಬಿಡುವದು. ಇಂಥ ಅನುಭವದಲ್ಲಿ ನಿಲ್ಲಿಸದಿದ್ದರೆ ಜ್ಞಾನಕ್ಕಾಗಿ ಮಾಡುವ ವಿಚಾರವೇ ವ್ಯರ್ಥ.

ಈಗ್ಗೆ ಅನೇಕರು ಸಮಾಧಿಯಿಂದ ತಮಗೆ ಆತ್ಮಾನುಭವವಾಗುತ್ತದೆಯೆಂದೂ ಸುಷುಪ್ತಿಯಂತೆ ಅದು ಅಜ್ಞಾನದ ಅವಸ್ಥೆಯಲ್ಲವೆಂದೂ ಸಮಾಧಿರೂಪವಾದ ಅನುಭವದ ವರ್ಣನೆಯನ್ನು ಮಾಡಿ ಅದರ ಹೆಚ್ಚುಗಾರಿಕೆಯನ್ನು ಹಾಡಿಹೊಗಳುತ್ತಿರುತ್ತಾರೆ. ಆದರೆ ಸಮಾಧಿ ಎಂಬುದು ಸಾರ್ವತ್ರಿಕವಾಗಿ ಎಲ್ಲರಿಗೂ ದೊರಕುವ ಅನುಭವವಲ್ಲ. ಆ ಸ್ಥಿತಿಯಲ್ಲಿ ದ್ವೈತವು ತೋರುವದಿಲ್ಲವೆಂಬುದನ್ನು ಬೇರೆಬೇರೆಯ ಮತಗಳವರು ಹೇಳುತ್ತಿರುವರಾದರೂ ಅದು ಸುಷುಪ್ತಿಯಲ್ಲಿರುವ ದ್ವೈತಾಭಾವದಂತೆಯೇ ಸ್ವಲ್ಪ ಕಾಲದವರೆಗೆ ಇದ್ದು ಮರೆಯಾಗುವದೆಂಬುದಂತೂ ಸರ್ವಸಮ್ಮತ. ಜಾಗ್ರತ್ಸ್ವಪ್ನಸುಷುಪ್ತಿಗಳೆಲ್ಲದರ ಆಗುಹೋಗುಗಳನ್ನೂ ನೋಡುತ್ತಿರುವ ಆತ್ಮನೇ ನಾನೆಂಬ ಅನುಭವವು ನಮ್ಮ ಆತ್ಮನ ಸ್ವರೂಪಕ್ಕೇ ಸೇರಿದ್ದು; ಆದ್ದರಿಂದ ಅದು ಆತ್ಮನಂತೆ ನಿತ್ಯವೇ ಆಗಿರುತ್ತದೆ. ಸೂರ್ಯನನ್ನು ಬೆಳಕು ಯಾವಾಗಲಾದರೂ ಬಿಟ್ಟು ಅಗಲಿದ್ದುಂಟೇನು? ಇಲ್ಲ. ಆತ್ಮನ ಅನುಭವದ ಬೆಳಕಿನಿಂದ ವ್ಯಾಪ್ತವಾಗದ್ದೇ ಇಲ್ಲ– ಎಂಬ ಅನುಭವವನ್ನು ಶಾಸ್ತ್ರದ ಮತ್ತು ಗುರುವಿನ ಅನುಗ್ರಹದಿಂದ ಸಂಪಾದಿಸಿಕೊಳ್ಳಬೇಕು. ಆ ಅನುಭವವೇ ವಿಚಾರಕ್ಕೆ ಒಗ್ಗರಣೆ. ಅದಿಲ್ಲದಿದ್ದರೆ ವಿಚಾರವು ಬರಿಯ ಶುಷ್ಕತರ್ಕವಾಗಿರುತ್ತದೆ. ಭಗವಂತನ ದಯದಿಂದ ಅಂಥ ಅನುಭವಪೂರ್ಣಜ್ಞಾನವು ನಮಗೆಲ್ಲ ಲಭಿಸಲಿ!''

ಈ ಉಪನ್ಯಾಸವು ಎಲ್ಲರ ಮನಸ್ಸಿನ ಮೇಲೂ ಪರಿಣಾಮವನ್ನುಂಟುಮಾಡಿತು. ನೆರೆದ ಶ್ರೋತೃಗಳು ಪರಮಾನಂದಭರಿತರಾಗಿದ್ದರು. ತಿರುಗಿ ನಮ್ಮ ಸ್ಥಳಕ್ಕೆ ಬಂದಾಗ 9 ½ ಗಂಟೆಯಾಗಿತ್ತು, ಆಗಲೂ ಕೆಲವರು ಜಿಜ್ಞಾಸುಗಳು ಶ್ರೀಶ್ರೀಗಳವರೊಂದಿಗೆ ಕುಳಿತು ರಾತ್ರೆ 11 ½ ಘಂಟೆಯವರೆಗೂ ಬೇರೆಬೇರೆಯ ವಿಷಯಗಳನ್ನು ಚರ್ಚಿಸಿದರು.

## ತಾ|| 28–11–63

ನಾವು ವಿಶಾಖಪಟ್ಟಣಕ್ಕೆ ಬಂದ ಮರುದಿನವೇ ಅನಕಾಪಲ್ಲಿಯಿಂದ ಅಲ್ಲಿಯ ಆರ್ಯವೈಶ್ಯಮಂಡಳಿಯ ಮುಖ್ಯಸ್ಥರಾದ ಶ್ರೀ|| ರಮಣಯ್ಯಬಾಬುಗಾರು ಎಂಬುವರು

ಬಂದು ಶ್ರೀಶ್ರೀಗಳವರನ್ನು ದರ್ಶನಮಾಡಿ ಅನಕಾಪಲ್ಲಿಗೆ ಬರುವ ಸಮಯವನ್ನು ಗೊತ್ತುಪಡಿಸಿಕೊಂಡು ಹೋಗಿದ್ದರು. ಆ ಪ್ರಕಾರ ಇಂದು ಮಧ್ಯಾಹ್ನ ಇಲ್ಲಿಂದ 12 ಗಂಟೆಗೆ ಹೊರಡುವ ಪೂರೀ–ಹೈದರಾಬಾದ್ ಎಕ್ಸ್‌ಪ್ರೆಸ್ಸಿಗೆ ನಾವು ಅನಕಾಪಲ್ಲಿಗೆ ಹೋಗ ಬೇಕಾಗಿತ್ತು. ಈ ದಿನ ದ್ವಾದಶೀ ಪ್ರಯುಕ್ತ ಬೆಳಿಗ್ಗೆ 8 ಗಂಟೆಗೆಲ್ಲಾ ಊಟೋಪಚಾರಾದಿ ಗಳನ್ನು ಮುಗಿಸಿ ಸಾಮಾನುಗಳನ್ನೆಲ್ಲಾ ಪ್ಯಾಕ್‌ಮಾಡಿಟ್ಟು ಮೊದಲೇ ಅದರಲ್ಲಿ ಕೆಲವನ್ನು ಶ್ರೀ॥ ಚದುವಲ ರಾಮರಾಯರೊಂದಿಗೆ ಸ್ಟೇಶನ್ನಿಗೆ ಕೊಟ್ಟುಕಳಿಸುವ ಸಿದ್ಧತೆಯನ್ನು ಮಾಡುತ್ತಿದ್ದಾಗ ಅಲ್ಲಿದ್ದ ಭಕ್ತಮಂಡಲಿಯಲ್ಲಿ ಒಬ್ಬ ಪೆಟ್ರೋಲ್ ಕಂಪನಿಯ ಏಜೆಂಟರು "ಸಾಮಾನುಗಳನ್ನು ರೈಲಿನಲ್ಲಿ ಒಯ್ಯಿರಿ. ಆದರೆ ಶ್ರೀಶ್ರೀಗಳವರೂ ಇನ್ನಿಬ್ಬರೂ ಅನಕಾಪಲ್ಲಿಗೆ ಹೋಗಲು ನನ್ನ ಜೀಪ್‌ಕಾರು ಕೊಡುತ್ತೇನೆ. ಸುಖವಾಗಿ ಅರ್ಧಗಂಟೆಯಲ್ಲಿ ತಲುಪಬಹುದು" ಎಂದು ಸೂಚಿಸಿದರು. ಅಲ್ಲಿದ್ದವರೆಲ್ಲರೂ ಅದನ್ನೇ ಅನುಮೋದಿಸಿದ ರಾದ್ದರಿಂದ ನಾನು, ಶ್ರೀಮತಿ ಲಕ್ಷ್ಮಮ್ಮನವರು ಹಾಗೂ ಶ್ರೀಶ್ರೀಗಳವರು ಕೆಲವು ಅವಶ್ಯಕ ಸಾಮಾನುಗಳೊಂದಿಗೆ ಮಧ್ಯಾಹ್ನ 11 ½ ಗಂಟೆಗೆ ವಿಶಾಖಪಟ್ಟಣದಿಂದ ಹೊರಟೆವು. ಅನೇಕ ಜನರು ಬೀಳ್ಕೊಡಲು ಬಂದಿದ್ದರು.

# ಶ್ರೀಶ್ರೀಗಳವರ ಆಂಧ್ರಪ್ರದೇಶದ ಪ್ರವಾಸವಾರ್ತೆ–10

## ಅನಕಾಪಲ್ಲಿ (28–11–1963)

## (ಅಕ್ಟೋಬರ್ 1964)

ನಮ್ಮ ಕಾರು ಅನಕಾಪಲ್ಲಿಯ ಶ್ರೀಕನ್ಯಕಾಪರಮೇಶ್ವರೀ ದೇವಸ್ಥಾನದ ಬಳಿಗೆ ಹೋಗಿ ನಿಂತಾಗ ಸರಿಯಾಗಿ 12 ಘಂಟೆಯಾಗಿತ್ತು. ಶ್ರೀಶ್ರೀಗಳವರ ಸ್ವಾಗತಕ್ಕಾಗಿ ಸ್ಟೇಷನ್ನಿನಲ್ಲಿ ಭವ್ಯವಾದ ವ್ಯವಸ್ಥೆಯನ್ನೇರ್ಪಡಿಸಿದ್ದ ಅಲ್ಲಿಯ ಭಕ್ತಜನರಿಗೆ ಒಂದು ಬಗೆಯಿಂದ ನಿರಾಶೆಯಾದರೂ ಅವರು ಶ್ರೀಗಳವರ ದರ್ಶನದಿಂದ ಆನಂದಿತರಾಗಿ ಸಾಯಂಕಾಲ 4 ರಿಂದ 6ರವರೆಗೆ ಊರಲ್ಲಿ ಮೆರವಣಿಗೆ ಮಾಡುವದನ್ನು ನಿಶ್ಚಯಿಸಿ ನಮಗಾಗಿ ಏರ್ಪಾಡಾಗಿದ್ದ ಸ್ಥಳದಲ್ಲಿ ಇಳಿಸಿದರು.

ಈ ಪಟ್ಟಣವು 70 ಸಾವಿರ ಜನಸಂಖ್ಯೆಯುಳ್ಳ ವ್ಯಾಪಾರಿಗಳ ಪಡಿಮೂಲೆಯ ಸ್ಥಳವಾಗಿದೆ. ಆಂಧ್ರಪ್ರಾಂತದಲ್ಲಿ ಇದು ಉತ್ತಮ ಬೆಲ್ಲದ ಮಾರುಕಟ್ಟೆಗೆ ಸುಪ್ರಸಿದ್ಧವಾದ ಊರು. ಇಲ್ಲಿ ವೈಶ್ಯಜನಾಂಗವು ಸಾಕಷ್ಟಿದೆ. ಶ್ರೀಮಂತರೂ ದಾನಿಗಳೂ ಆಗಿರುವ ಇವರುಗಳು ಸಾಮಾಜಿಕ ಹಾಗೂ ಧಾರ್ಮಿಕಕಾರ್ಯಗಳಲ್ಲಿ ಬಹಳ ಆಸಕ್ತರು.

ಶ್ರೀವಾಸವೀಕನ್ಯಕಾಪರಮೇಶ್ವರೀ ದೇವಸ್ಥಾನದಲ್ಲಿ ಆರ್ಯವೈಶ್ಯಸಮಾಜದ ಮುಖ್ಯ ಕಛೇರಿ ಇದೆ. ಇಲ್ಲಿ ಮಹಿಳೆಯರ ಉನ್ನತಿಗಾಗಿ ಸಂಗೀತ, ಹೊಲಿಗೆ– ಮೊದಲಾದವುಗಳನ್ನೂ ಭಗವದ್ಗೀತಾಪಾರಾಯಣಾದಿಗಳನ್ನೂ ಕಲಿಸಲು ವ್ಯವಸ್ಥೆಯಿದೆ. ಯುವಕರಿಗೆ ವ್ಯಾಯಾಮಶಾಲೆ, ಆಟದಬಯಲು, ಹೂದೋಟ–ಮುಂತಾದವೆಲ್ಲವೂ ಅತಿವಿಸ್ತಾರವಾದ ಈ ದೇವಾಲಯದ ಆವರಣದಲ್ಲಿಯೇ ಇರುತ್ತವೆ. ಈ ಆವರಣದಲ್ಲಿ 4–6 ಬಾವಿಗಳಿದ್ದು ಅಲ್ಲಲ್ಲಿಗೇ ಪರಸ್ಥಳದವರಿಗೆ ಇಳಿದುಕೊಳ್ಳಲು ವಸತಿಗಳೂ ಅರ್ಚಕರ ನಿವಾಸಗಳೂ ಇವೆ. ಈ ಪ್ರಾಕಾರದಲ್ಲಿಯೇ ವಾಸವೀ ಪಾರ್ಥಸಾರಥಿಗೀತಾಮಹಿಳಾ ಸಮಾಜದ ಕಟ್ಟಡವಿದೆ. ಈ ಕಟ್ಟಡವೂ ಈ ಸಂಘವೂ ಶ್ರೀ|| ಗುಪ್ತರ ಮೂಲಕವೇ ಹತ್ತು ವರ್ಷಗಳ ಕೆಳಗೆ ಸ್ಥಾಪಿತವಾಗಿದೆ. ಕಟ್ಟಡದಲ್ಲಿ ಪಾರ್ಥಸಾರಥಿಯ ಅಮೃತಶಿಲೆಯ ವಿಗ್ರಹವೂ ಮರದಿಂದ ಮಾಡಿದ ಒಂದು ಸುಂದರರಥವೂ ಕುದುರೆಗಳಿಂದೊಡಗೂಡಿ ಅತಿಮನೋಹರವಾಗಿ ಕಂಗೊಳಿಸುತ್ತಿದೆ. ಸುತ್ತಲೂ ಗೋಡೆಗಳ ಮೇಲೆ ಗೀತೆಯ ಎಲ್ಲ ಅಧ್ಯಾಯಗಳ ಎಲ್ಲ ಶ್ಲೋಕಗಳ್ಳೂ ಬರೆಯಿಸಿದ ಬೋರ್ಡುಗಳೂ ಅವುಗಳ ಮೇಲೆ ಅಧ್ಯಾಯಗಳಿಗೆ ಸಂಬಂಧಪಟ್ಟ ವಿಷಯಗಳನ್ನು ತಿಳಿಸುವ ಕೈಬರಹದ ತೈಲಚಿತ್ರಪಟಗಳೂ ಇವೆ. ಪ್ರತಿಮಂಗಳವಾರ, ಶುಕ್ರವಾರ ಸದಸ್ಯೆಯರೆಲ್ಲರೂ ಸೇರಿ ಗೀತಾಪಾರಾಯಣಾದಿಗಳನ್ನೂ ಉಪನ್ಯಾಸಾದಿಗಳನ್ನೂ ಏರ್ಪಡಿಸುವರು. ನಿತ್ಯವೂ ಭಜನೆ, ಗೀತಾಪಠನಾದಿಗಳು ಇಲ್ಲಿ ನಡೆಯುವವು. ಇದಕ್ಕಾಗಿ 10 ಸಾವಿರ ರೂಪಾಯಿಯ ಮೂಲಧನವು ಶೇಖರಿಸಲ್ಪಟ್ಟಿದೆ. ಮಹಿಳೆಯರ ಮುನ್ನಡೆಯಲ್ಲಿ ಇದೊಂದು ಆದರ್ಶಸಂಸ್ಥೆಯು.

ಪೇಟೆಯಲ್ಲಿ ಆರ್ಯವೈಶ್ಯರೇ ಸ್ಥಾಪಿಸಿರುವ ಒಂದು ಅನ್ನಛತ್ರವಿದೆ. ಅಲ್ಲಿ ಪರಸ್ಥಳದವರಿಗೆ ಇಳಿದುಕೊಳ್ಳಲು ಜಾಗವಿರುವದಲ್ಲದೆ ಪ್ರತಿನಿತ್ಯ ವಿದ್ಯಾರ್ಥಿಗಳಿಗೂ ಪರಸ್ಥಳದ ಬಡವರಿಗಾಗಿಯೂ–ಒಟ್ಟು 50 ಜನರಿಗೆ–ಊಟದ ಏರ್ಪಾಡು ಇದೆ. ದೇವಸ್ಥಾನದ ಉತ್ಪತ್ತಿಯು ವರ್ಷಕ್ಕೆ ಸುಮಾರು 32 ಸಾವಿರವಿದ್ದು ಅದರಲ್ಲಿಯೇ ಈ ಎಲ್ಲಾ ಕಾರ್ಯಗಳೂ ನಡೆಯುವವಲ್ಲದೆ ಯಾರಾದರೂ ಪ್ರವಕ್ತೃಗಳು, ಸಂನ್ಯಾಸಿಗಳು, ಸಾಧುಗಳು, ಸದ್ಬ್ರಾಹ್ಮಣರು ಬಂದರೆ ಅವರಿಗೆ ಎಲ್ಲ ವಿಧವಾದ ಸೌಕರ್ಯಗಳನ್ನೂ ಈ ಸಂಸ್ಥೆಯವರೂ ನಿರ್ವಹಿಸುವರು. ವೈಶ್ಯರಲ್ಲಿ ಹೆಚ್ಚು ಜನರು ಸುಶಿಕ್ಷಿತರೂ ಸ್ವಧರ್ಮಾನುಷ್ಠಾನಪರರೂ ಪರಮಾರ್ಥಪ್ರಿಯರೂ ಆಗಿದ್ದಾರೆ. ಇದರಂತೆಯೇ ಬ್ರಾಹ್ಮಣಜನಾಂಗವೂ ಹೆಚ್ಚಿನ ಸಂಖ್ಯೆಯಲ್ಲಿದ್ದು ಕೆಲವು ಪಂಡಿತರುಗಳೂ ಸುಶಿಕ್ಷಿತರಾದ ಲೌಕಿಕರೂ ಇದ್ದಾರಲ್ಲದೆ ಬಲುಮಟ್ಟಿಗೆ ಧರ್ಮಾಚರಣಪರಾಯಣರೂ ಪರಮಾರ್ಥ ತತ್ತ್ವಪ್ರೇಮಿಗಳೂ ಆಗಿದ್ದಾರೆ. ಇಂಥ ಈ ಪಟ್ಟಣವನ್ನು ಮೊದಲುಸಲ ಕಂಡಾಗಲೇ

ಇದು ಅನಕಾಪಲ್ಲಿಯಲ್ಲ, 'ಕನಕಾಪಲ್ಲಿ' ಎಂದರೆ ಬಂಗಾರದಂಥ ಊರು ಎಂದು ನನಗೆ ಅನಿಸಿತ್ತು. ಶ್ರೀಶ್ರೀಗಳವರ ಆಗಮನದಿಂದಲಂತೂ ಇಲ್ಲಿನ ಎಲ್ಲ ಜನರಿಗೂ ಎಲ್ಲಿಲ್ಲದ ಉತ್ಸಾಹ, ಭಕ್ತಿ ಶ್ರದ್ಧೆಗಳು ಉದ್ಭವಿಸಿದ್ದವು. ನಾವು ನಮಗೋಸ್ಕರ ಏರ್ಪಡಿಸಿದ್ದ ದೇವಾಲಯದ ಒಂದು ಭಾಗದಲ್ಲಿಯ ನಿವಾಸಕ್ಕೆ ತಲುಪಿ ಶ್ರೀಶ್ರೀಗಳವರ ಸ್ನಾನಾದಿಗಳಾಗಿ ವಿಶ್ರಮಿಸಿದ ಮೇಲೆ 4½ ಗಂಟೆಗೆ ಶ್ರೀಶ್ರೀಗಳವರನ್ನು ಸೈಕಲ್ ರಿಕ್ಷಾದಲ್ಲಿ ಕೂಡಿಸಿಕೊಂಡು ಬ್ಯಾಂಡ್, ಓಲಗ, ವೇದಘೋಷಾದಿಗಳೊಂದಿಗೆ ಊರಲ್ಲಿಯ ಎಲ್ಲ ಮುಖ್ಯಬೀದಿ ಹಾಗೂ ಬಾಜಾರಗಳಲ್ಲಿ ಮೆರವಣಿಗೆಯು ಹೊರಟಿತು. ಪ್ರತಿಮನೆಯವರೂ ಮಂಗಳಾರತಿಯನ್ನು ಮಾಡಿದರು. ಕುಮಾರವ್ಯಾಸನ ಭಾರತದಲ್ಲಿ ಶ್ರೀಕೃಷ್ಣ ಪರಮಾತ್ಮನನ್ನು ಇಂದ್ರಪ್ರಸ್ಥದಲ್ಲಿ ಸ್ವಾಗತಿಸಿದ, ಅಥವಾ ಭಾಗವತದಲ್ಲಿ ಶ್ರೀಶುಕಾಚಾರ್ಯರನ್ನು ಸ್ವಾಗತಿಸಿದ ಸಂದರ್ಭಗಳೇ ನನ್ನ ಸ್ಮರಣೆಗೆ ಬರುತ್ತಿದ್ದವು. ಎಲ್ಲಾ ಮುಗಿದು ದೇವಸ್ಥಾನದಲ್ಲಿಯ ಸಭಾಮಂಟಪದಲ್ಲಿ ಬಂದು ಶ್ರೀಶ್ರೀಗಳವರು ಕುಳಿತಾಗ 6 ½ ಗಂಟೆ ಆಗಿತ್ತು. ಈ ಜನಗಳ ಭಕ್ತಿ ಶ್ರದ್ಧೆ, ಉತ್ಸಾಹಾದಿಗಳನ್ನು ಬರವಣಿಗೆಯಿಂದ ತಿಳಿಸಲು ಸಾಧ್ಯವಿಲ್ಲ. ಕಣ್ಣಾರೆ ಕಂಡ ನನಗಂತೂ ಈಗಲೂ ನೆನೆಸಿಕೊಂಡರೆ ಅತ್ಯಾನಂದವಾಗುತ್ತದೆ. ಆಗ ಶ್ರೀಶ್ರೀಗಳವರು ಒಂದು ಮುಕ್ಕಾಲು ಗಂಟೆಯ ಕಾಲ ಕೆಲವು ಉಪದೇಶದ ಮಾತುಗಳನ್ನು ಹೇಳಿದರು. ನಾನೇ ಅದನ್ನು ಆಂಧ್ರೀಕರಿಸಿದೆ. ಅದರ ಸಾರಾಂಶ ಹೀಗಿತ್ತು:

''ನಮ್ಮ ದೇಶದಲ್ಲಿ ಕರ್ಮಾನುಷ್ಠಾನ, ಸತ್ಪ್ರಜಾಸಂತತಿ, ಧನಸಂಪತ್ತಿ–ಇವುಗಳು ಸಮೃದ್ಧವಾಗಿದ್ದ ಕಾಲದಲ್ಲಿಯೇ **'ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವ ಮಾನಸುಃ'** (ಕರ್ಮ, ಪ್ರಜೆ, ಧನ–ಮುಂತಾದವುಗಳಿಂದ ಅಮೃತತ್ವವು ಸಿಗಲಾರದು. ಕೇವಲ ತ್ಯಾಗದಿಂದಲೇ ಧೀರರು ಅಮೃತತ್ವವನ್ನು ಹೊಂದುವರು) ಎಂಬ ಮಾತು ಋಷಿಗಳಿಂದ ಉಕ್ತವಾಗಿತ್ತು.

ಧರ್ಮಪೂರ್ವಕವಾಗಿ ಗಳಿಸಿದ ಧನ, ಶ್ರದ್ಧೆಯಿಂದ ನಿರ್ವಹಿಸಿದ ಕರ್ಮಗಳಿಂದುಂಟಾದ ಪುಣ್ಯ, ಧರ್ಮಪತ್ನಿಯಲ್ಲಿ ಜನಿಸಿದ ಸತ್ಪ್ರಜೆಗಳು–ಇವುಗಳನ್ನು ಪಡೆಯುವದು ಕರ್ತವ್ಯವೆಂದೇ ವೇದವು ಬೋಧಿಸುತ್ತದೆ. ಈಗಿನ ಕಾಲದಲ್ಲಿ ಧನವನ್ನು ಗಳಿಸಲು ನಾವೆಲ್ಲರೂ ಹಾತುವರಿಯುತ್ತಿದ್ದೇವೆ. ಆದರೆ ಧರ್ಮಸಮ್ಮತವಾದ ಸಂಪಾದನೆಯೇ ಹಿತಕರವಾದದ್ದೆಂಬುದು ಅದೇಕೊ, ನಮ್ಮ ಚಿತ್ತಕ್ಕೆ ನಾಟದಂತಾಗಿದೆ. ಇದರಂತೆ ಪ್ರಜೆಗಳು ಹೆಚ್ಚಾಗುತ್ತಿರುವದರಿಂದ ಕುಟುಂಬನಿಯಂತ್ರಣಾದಿಯೋಜನೆಗಳನ್ನು ಅವಲಂಬಿಸಬೇಕಾಗಿ ಬಂದಿದೆ. ಇದಕ್ಕೂ ಸ್ವೇಚ್ಛಾಚಾರವೇ ಕಾರಣವೆಂಬುದು ಸ್ಪಷ್ಟವೇ ಇದೆ. ಇನ್ನು ವೇದೋಕ್ತಕರ್ಮಗಳಂತು ಲುಪ್ತವೇ ಆಗಿವೆ. ಕೇವಲ ಪಾಶ್ಚಾತ್ಯದೇಶಗಳ

ಅನುಕರಣೆಯಿಂದ ನಾವು ಮುಂದುವರಿಯಲು ಯತ್ನಿಸುತ್ತಿದ್ದೇವೆ. ಆದರೆ ಮುಂದುವರಿದವರೆಂದು ನಾವು ಬಗೆದಿರುವ ಆ ದೇಶದವರಿಗೆ ಅಮೃತತ್ವವಾಗಲಿ, ಶಾಂತಿಸಮಾಧಾನಗಳಾಗಲಿ, ಪೂರ್ತಿಯಾಗಿ ಸಿಕ್ಕಿವೆಯೆ?—ಎಂಬುದು ವಿಚಾರಣೀಯ ವಾಗಿದೆ. ಹೀಗೆಂದ ಮಾತ್ರಕ್ಕೆ ಪ್ರಜೆ, ಕರ್ಮ, ಧನಾದಿಗಳು—ಇವು ಜೀವನಕ್ಕೆ ಅನವಶ್ಯವೆಂದೇನೂ ನನ್ನ ಅಭಿಪ್ರಾಯವಲ್ಲ. ಸದ್ಧರ್ಮಪೂರ್ವಕವಾಗಿ ಇವುಗಳನ್ನು ಮೊದಲು ಸಂಪಾದಿಸಿಕೊಳ್ಳಬೇಕು. ಆದರೆ ಇವಿಷ್ಟೇ ನಮ್ಮ ಉದ್ಧಾರಕ್ಕೆ ಸಾಲವು. ಇಷ್ಟೇ ಅಲ್ಲ, ಪರಮಾರ್ಥದೃಷ್ಟಿಯಿಂದ ಇದೆಲ್ಲವೂ ಮೃತ್ಯುಸಂಸಾರಕ್ಕೇ ಸೇರಿದ್ದು; ಇದರಿಂದ ಅಮೃತತ್ವವಿಲ್ಲ. ಯಾಜ್ಞವಲ್ಕ್ಯಋಷಿಯು ತನ್ನ ಪತ್ನಿಯಾದ ಮೈತ್ರೇಯಿಗೆ **'ಅಮೃತತ್ವಸ್ಯ ನಾ ಶಾಸ್ತಿ ವಿತ್ತೇನ'** ಎಂದು ಹೇಳಿರುವದನ್ನು ಇಲ್ಲಿ ಮನದಂದುಕೊಳ್ಳಬೇಕು. 'ವಿತ್ತದಿಂದ ಅಮೃತತ್ವದ ಆಶೆ ಕೂಡ ಇಲ್ಲ' ಎಂಬುದು ಇದರ ಅರ್ಥ. ಆದ್ದರಿಂದ ಅಮೃತತ್ವವನ್ನು ಬಯಸುವವರು ತ್ಯಾಗವನ್ನೇ ಅವಲಂಬಿಸ ಬೇಕು.

ಹೀಗೆ ತ್ಯಾಗವನ್ನೇ ಜೀವನವನ್ನಾಗಿಸಿಕೊಂಡವರನ್ನೇ ಗೌರವಿಸುವದು ನಮ್ಮ ದೇಶದ ಸಂಪ್ರದಾಯ. ಕರ್ಮ, ಭೋಗಾದಿಗಳನ್ನೆಲ್ಲ ತ್ಯಾಗ ಮಾಡಿ ಪರಮಾತ್ಮಸ್ವರೂಪದ ಅರಿವಿನಲ್ಲಿ 'ನಾನು' ಎಂಬುದನ್ನೂ ತ್ಯಾಗ ಮಾಡಿ ಧರ್ಮಾಧರ್ಮಗಳನ್ನೂ ಮೀರಿ ನಿಂತಿರುವವರೇ ನಿಜವಾದ ತ್ಯಾಗಿಗಳು. **"ತ್ಯಜ ಧರ್ಮಮಧರ್ಮಂ ಚ ಉಭೇ ಸತ್ಯಾನೃತೇ ತ್ಯಜ। ಉಭೇ ಸತ್ಯಾನೃತೇ ತ್ಯಕ್ತ್ವಾ ಯೇನ ತ್ಯಜಸಿ ತತ್ ತ್ಯಜ ॥"** ಎಂಬ ವಾಕ್ಯಕ್ಕೆ ಇದೇ ಅರ್ಥ. ನನ್ನಂಥ ಸಾಮಾನ್ಯ ಭಿಕ್ಷುವೊಬ್ಬನಿಗೆ ನೀವೆಲ್ಲರೂ ತೋರಿದ ಈ ಭವ್ಯ ಸ್ವಾಗತವು ಭಾರತದೇಶದ ಈ ಸತ್ಸಂಪ್ರದಾಯದ ದ್ಯೋತಕವಾಗಿದೆ, ತ್ಯಾಗಕ್ಕೆ ತೋರಿಸಿದ ಗೌರವವಾಗಿದೆ. ಪ್ರಜೆ, ಧನ, ಕರ್ಮಗಳನ್ನು ಸಂಪಾದಿಸಲಾರದ ಹೇಡಿಗಳು ಈ ತ್ಯಾಗವನ್ನಾಚರಿಸಿಲಾರರು. ಇವುಗಳನ್ನು ಸಂಪಾದಿಸಿ ಇವುಗಳಿಂದ ಅಮೃತತ್ವವಿಲ್ಲವೆಂಬ ಸತ್ಯವನ್ನು ಕಂಡ ಧೀರರೇ ಈ ಮಾತನ್ನು ಹೇಳಿದ್ದಾರೆ. ಆದ್ದರಿಂದ ಈಗ ಹೇಳಿದ ಈ ಮಂತ್ರದ (ನ ಕರ್ಮಣಾ) ಅರ್ಥವನ್ನು ನೀವೆಲ್ಲರೂ, ವಿಶೇಷವಾಗಿ ಬ್ರಾಹ್ಮಣರೆಲ್ಲರೂ, ಚೆನ್ನಾಗಿ ಮೆಲುಕು ಹಾಕುತ್ತಿರಬೇಕು. ಭಗವಂತನ ದಯೆಯಿಂದ ನಿಮ್ಮೆಲ್ಲರಿಗೂ ತ್ಯಾಗವೇ ಜೀವನದ ಗುರಿಯೆಂದು ಮನಗಂಡು ಅಮೃತತ್ವವನ್ನು ಪಡೆಯುವ ಯೋಗ್ಯತೆ ಲಭಿಸಲಿ!"

ಈ ವ್ಯಾಖ್ಯಾನವಾದ ನಂತರ ಈ ದಿನವನ್ನು ಪೂರ್ಣವಿಶ್ರಾಂತಿಗಾಗಿ ಕಾದಿರಿಸಿಲಾಗಿತ್ತು, ತಾ॥ 29ರಿಂದ 4 ರವರೆಗೂ (ಒಟ್ಟು 6 ದಿನ) ಇಲ್ಲಿ ಉಪನ್ಯಾಸ ನಡೆಯಬೇಕೆಂದೂ ಗೊತ್ತಾದ ಮೇರೆಗೆ ಮರುದಿನದಿಂದಲೇ ಉಪನ್ಯಾಸಗಳು

ಆರಂಭವಾದವು.

## ತಾ|| 29–11–63 ಶುಕ್ರವಾರ

ಈ ದಿನ ಮೊದಲೇ ಗೊತ್ತಾದಪ್ರಕಾರ ಇಲ್ಲಿಯ ಸುಪ್ರಸಿದ್ಧ ಡಾಕ್ಟರರಾದ **ಜಿ.ವಿ.ಎಲ್. ನರಸಿಂಹನ್**‌ರವರ ಮನೆಯಲ್ಲಿ ಶ್ರೀಶ್ರೀಗಳವರಿಗೆ ಪಾದಪೂಜಾಭಿಕ್ಷೆಗಳ ಏರ್ಪಾಡು ಮಾಡಲಾಗಿತ್ತು. ಶ್ರೀ|| ನರಸಿಂಹನ್‌ರವರು ನಿವೃತ್ತ ಸರ್ಕಾರಿ ವೈದ್ಯರಿದ್ದು ವೈದಿಕಧರ್ಮದಲ್ಲಿ ಶ್ರದ್ಧಾಳುಗಳಾಗಿದ್ದಾರೆ. ಮನೆಯಲ್ಲಿ ನಿತ್ಯವೂ ಏಕಾದಶವಾರ ರುದ್ರಾಭಿಷೇಕವಿಲ್ಲದೆ ಊಟವಿಲ್ಲ, ಅತ್ಯಂತ ನಿಯಮನಿಷ್ಠೆಯುಳ್ಳವರು. ಹಾಗೂ ಇವರ ಮನೆಯವರೂ ಅತಿಶಯಶ್ರದ್ಧಾಭಕ್ತಿಗಳುಳ್ಳವರು. ಇವರ ಮಗಳು ಕಾಲೇಜಿನಲ್ಲಿ ಸಂಸ್ಕೃತವನ್ನು ತೆಗೆದುಕೊಂಡು ಎಂ.ಎ. ಪ್ಯಾಸಾಗಿದ್ದು ವೇದಾಂತ ವಿಚಾರದಲ್ಲಿ ಹೆಚ್ಚಿನ ಆಸಕ್ತಿಯುಳ್ಳವರಾಗಿದ್ದಾರೆ. ಶ್ರೀಗಳವರು ರಚಿಸಿರುವ ಸಂಸ್ಕೃತಗ್ರಂಥಗಳನ್ನೆಲ್ಲ ನಾನು ಹಿಂದಿನ ಸಲ ಇಲ್ಲಿಗೆ ಬಂದಾಗಲೇ ತರಿಸಿಕೊಂಡು ಅವುಗಳನ್ನು ಆಂಧ್ರೀಕರಿಸುವ ಕಾರ್ಯಕ್ಕೆ ತೊಡಗಿದ್ದಾರೆ. ಡಾಕ್ಟರಿಗೆ ಶ್ರೀಗಳವರಲ್ಲಿ ಅಚಲಶ್ರದ್ಧೆ, ಅವರ ತತ್ತ್ವನಿರೂಪಣೆಯ ಶೈಲಿಯಲ್ಲಿ ಇವರಿಗೆ ಬಹಳ ಮೆಚ್ಚಿಕೆ. ಈ ಗ್ರಾಮದಲ್ಲಿಯೇ ಇವರು ಚೆನ್ನಾಗಿ ವೇದಾಂತ ವಿಚಾರವನ್ನು ತಿಳಿದವರಾಗಿರುತ್ತಾರೆಂದರೆ ಅತಿಶಯೋಕ್ತಿಯಾಗ ಲಾರದು. ಇವರು ಪತ್ನೀಸಮೇತರಾಗಿ ಮಡಿಯಿಂದ ಪಾದಪೂಜೆ ಮಾಡಿದರು. ಬಳಿಕ ಶ್ರೀಗಳವರು ಸ್ನಾನಮಾಡಿ ಭಿಕ್ಷೆಯನ್ನು ಸ್ವೀಕರಿಸಿದರು. ಇವರ ಮನೆಯ ಆಚರಣಾದಿಗಳನ್ನು ಕಂಡು ಶ್ರೀಗಳವರಿಗೆ ಬಹಳ ಸಂತೋಷವಾಯಿತು.

**ಸಾಯಂಕಾಲ 6½** ಘಂಟೆಯಿಂದ ಅಮ್ಮನವರ ದೇವಸ್ಥಾನದಲ್ಲಿ ಉಪನ್ಯಾಸವು ಆರಂಭವಾಯಿತು. ಮೊದಲು ಶ್ರೀಗಳಿಗೆ ಸಂಸ್ಕೃತತೆಲುಗು ಭಾಷೆಗಳಲ್ಲಿ ಸ್ವಾಗತ ಪತ್ರವೊಂದನ್ನು ಅರ್ಪಿಸಲಾಯಿತು. ಬಳಿಕ ನಾನು ಶ್ರೀಗಳವರ ಹಾಗೂ ಕಾರ್ಯಾಲಯದ ಬಗ್ಗೆ ನಾಲ್ಕು ಮಾತುಗಳನ್ನು ಹೇಳಿದೆನು. ಅಂದಿನ ವಿಷಯವು **"ಶಾಸ್ತ್ರದೃಷ್ಟಿಯೂ ಲೌಕಿಕ ದೃಷ್ಟಿಯೂ"**[1] ಎಂಬುದಾಗಿತ್ತು. ಅದರ ಸಾರಾಂಶವು ಹೀಗಿತ್ತು:

"ನಮಗೀಗ ಅನೇಕ ಪ್ರಕಾರವಾಗಿ ಕಾಣುವ ಈ ಪ್ರಪಂಚವು ಕ್ರಿಯೆ, ಕಾರಕ, ಫಲ, ದೇಶ, ಕಾಲ, ಕಾರ್ಯಕರಣಾದಿಸಂಬಂಧವುಳ್ಳದ್ದಾಗಿರುವಂತೆಯೂ ಇದರಲ್ಲಿ

---

1. ಈ ಉಪನ್ಯಾಸಗಳೆಲ್ಲವನ್ನೂ ಶ್ರೀಶ್ರೀಗಳವರು ಇಂಗ್ಲೀಷಿನಲ್ಲಿ ಹೇಳಿದರು. ಹಾಗೂ ಡಾಕ್ಟರ್ ಶ್ರೀ|| G.V.L. ನರಸಿಂಹನ್‌ರವರು ಆಂಧ್ರಭಾಷೆಗೆ ತರ್ಜುಮೆ ಮಾಡಿದರು.

ನಾನಾಜೀವರುಗಳಿರುವಂತೆಯೂ ನಾನಾ ಬಗೆಯ ವಸ್ತುಗಳಿರುವಂತೆಯೂ ಗೋಚರವಾಗುತ್ತಿದೆ. ಇದು ಹೀಗೇ ಇದೆಯೆಂದೇ ನಾವೆಲ್ಲರೂ ಬಗೆದಿದ್ದೇವೆ. ಆದರೆ ವಾಸ್ತವವಾಗಿಯೂ ಇದು ಹೀಗಿರದೆ ಯಾವ ಭೇದವೂ ಇಲ್ಲದ ಅದ್ವಯವಾದ ನಿರ್ವಿಶೇಷಬ್ರಹ್ಮವೇ ಇದರ ಸತ್ಯಸ್ವರೂಪವಾಗಿದೆ. ನಿತ್ಯಾನಂದಸ್ವರೂಪವಾಗಿರುವ ಅದೇ ನಮ್ಮೆಲ್ಲರ ಆತ್ಮನಾಗಿದೆ. ಆ ಸತ್ಯವನ್ನರಿಯದಿದ್ದಾಗ ಆ ವಸ್ತುವೇ ನಮ್ಮ ಈಗಿನ ದೃಷ್ಟಿಗೆ ಪ್ರಪಂಚವಾಗಿ ಕಾಣುತ್ತದೆ. 'ಪಚಿ–ವಿಸ್ತಾರೇ' ಎಂಬ ಧಾತುವಿನಿಂದ ಬಂದಿರುವ ಪ್ರಪಂಚಶಬ್ದಕ್ಕೆ 'ನಾನಾಬಗೆಯಾಗಿ ಹರಡಿಕೊಂಡಿರುವದು' ಎಂದರ್ಥ. ಕೇವಲವೂ ಅದ್ವಯವೂ ಆಗಿರುವ ತತ್ತ್ವವು ಹೀಗೆ ವಿಪರೀತವಾಗಿ ಕಾಣುತ್ತಿರುವ ಈ ದೃಷ್ಟಿಯದೋಷವನ್ನೇ **'ಲೌಕಿಕ ದೃಷ್ಟಿ'** ಎಂದು ಕರೆಯುತ್ತಾರೆ. ಲೌಕಿಕದೃಷ್ಟಿರೂಪವಾದ ಅವಿದ್ಯೆಯು ಸರ್ವಾತ್ಮನಾಗಿರುವ ಆತ್ಮನನ್ನು ಪರಿಚ್ಛಿನ್ನನನ್ನಾಗಿ ಮಾಡಿ, ತನಗಿಂತ ಬೇರೊಂದು ವಸ್ತುವಿದೆ ಎಂಬ ಭಾವನೆಯನ್ನುಂಟು ಮಾಡುವದು. ಅದರಿಂದ ತನಗಿಂತ ಭಿನ್ನವಾಗಿರುವ ಆ ವಸ್ತುವಿನಲ್ಲಿ ಕಾಮವುಂಟಾಗಿ, ಕಾಮಾನುಗುಣವಾಗಿ ಕಂಡುದ್ದನ್ನು ಮಾಡಿ ಫಲವನ್ನು ಅನುಭವಿಸುತ್ತಾನೆ. ದೇಹ, ಇಂದ್ರಿಯ, ಮನಸ್ಸು, ವಿಷಯಗಳು–ಎಂಬ ರೂಪದಲ್ಲಿ ಅವಿದ್ಯಾಕಲ್ಪಿತವಾದ ಪ್ರಕೃತಿಯು ತೋರಿಕೊಳ್ಳುತ್ತಿರುವದು. ದೇಹೇಂದ್ರಿಯಮನಗಳಲ್ಲಿ ತಾದಾತ್ಮ್ಯವನ್ನು ಹೊಂದಿರುವದರಿಂದಲೇ ಜೀವನಿಗೆ ಹೀಗೆ ವಿಪರೀತ ದೃಷ್ಟಿಯುಂಟಾಗಿರುತ್ತದೆ. ಇದರಿಂದಾಗಿ ಸಂಸಾರವೇ 'ಮೃತ್ಯು'ವೆನಿಸುತ್ತದೆ. ಈ ದೃಷ್ಟಿಯನ್ನವಲಂಬಿಸಿದವರು ಆತ್ಮನನ್ನು ಅರಿಯದೆ ಆತ್ಮಹತ್ಯಾದೋಷಕ್ಕೆ ಒಳಗಾಗಿ ಮತ್ತೆ ಮತ್ತೆ ಅಂಧಂತಮಸ್ಸನ್ನು ಹೊಕ್ಕು ದುಃಖಿಸುತ್ತಿರುವರು.

ಈ ದೃಷ್ಟಿಯ ವ್ಯವಹಾರವೆಲ್ಲವೂ **ಶಾಸ್ತ್ರದೃಷ್ಟಿ**ಯಿಂದ ನೋಡಿದಾಗ ನಿಶಾಸ್ವಪ್ನವಾಗಿರುತ್ತದೆ. ಹಾಗಾದರೆ ಇದೆಲ್ಲವೂ ಅದ್ವಯವಾದ ತತ್ತ್ವವೇ ಎಂಬುದು ನಮಗೆ ನಿಶ್ಚಯವಾಗುವದು ಹೇಗೆ?–ಎಂಬ ಪ್ರಶ್ನೆಗೆ ಉತ್ತರವೇ 'ಶಾಸ್ತ್ರದೃಷ್ಟಿ' ಎಂಬುದು. ಯಾವಾಗ ನಾವು ಈಗಿನ ನಮ್ಮ ಈ ಕ್ಷುದ್ರದೃಷ್ಟಿಯನ್ನು ಕೈಬಿಟ್ಟು ಶಾಸ್ತ್ರ ದೃಷ್ಟಿಯನ್ನವಲಂಬಿಸುವೆವೋ ಆಗಲೇ ಪರಮಾರ್ಥಜ್ಞಾನರೂಪವಾದ ಎಚ್ಚರವಾಗಿ 'ಇದೆಲ್ಲವೂ ಅದ್ವಯವಾದ ಬ್ರಹ್ಮವು' ಎಂಬುದು ಅನುಭವಕ್ಕೆ ಬರುತ್ತದೆ. ಆದ್ದರಿಂದ ನಾವು ಮೊಟ್ಟಮೊದಲು ಶಾಸ್ತ್ರದೃಷ್ಟಿಯನ್ನವಲಂಬಿಸಲು ಅಭ್ಯಾಸ ಮಾಡಬೇಕು. ಈ ಅಭ್ಯಾಸದ ಹಂತಗಳಾವವು? ಎಂಬುದನ್ನು ನಾಳೆಯಿಂದ ವಿವರಿಸುವೆನು.

## ತಾ|| 30–11–63 ಶನಿವಾರ

ಈ ದಿನ ಪೌರ್ಣಿಮೆಯಾದ್ದರಿಂದ ಇಲ್ಲಿ ಶಾರದಾನದಿಯ ದಡದಲ್ಲಿ ಶ್ರೀಶ್ರೀಗಳವರ ದೀಕ್ಷಾವಿಸರ್ಜನೆಗೆ ಏರ್ಪಾಡು ಮಾಡಲಾಗಿತ್ತು. ಸ್ನಾನಾದಿಗಳಾದ ನಂತರ ಇಲ್ಲಿಯ ಗಾಂಧೀನಗರ ಬಡಾವಣೆಯಲ್ಲಿರುವ ಶ್ರೀ|| ಓಡ್ಲಮನಿ ಶ್ರೀರಾಮುಲು ಎಂಬುವರು ಸ್ಥಾಪಿಸಿದ ಶ್ರೀರಾಮಮಂದಿರಕ್ಕೆ ತೆರಳಿದೆವು. ಅಲ್ಲಿ ಶ್ರೀ ಸೀತಾರಾಮರ ವಿಗ್ರಹಗಳಿರುವವಲ್ಲದೆ ಶ್ರೀ ದತ್ತಾತ್ರೇಯನ ವಿಗ್ರಹವೂ ಇದೆ. ದೇವಸ್ಥಾನವು ಪ್ರಶಸ್ತವಿದ್ದು ನೀರು, ಗಿಡಬಳ್ಳಿಹೂಗಳಿಂದ ಸಮೃದ್ಧವಾದ ಒಂದು ಆಶ್ರಮವೇ ಆಗಿದೆ. ಅಲ್ಲಿ ಶ್ರೀಶ್ರೀಗಳವರಿಗೆ ಪಾದಪೂಜೆಯಾಯಿತು. ಮಧ್ಯಾಹ್ನ 12 ಗಂಟೆಗೆ ನಮ್ಮ ನಿವಾಸಕ್ಕೆ ಬಂದೆವು.

ಡಾಕ್ಟರ್ ನರಸಿಂಹನ್‌ರವರ ಸ್ನೇಹಿತರಾದ ಶ್ರೀ|| ಮುದ್ದುಲ ಶ್ರೀರಾಮಮೂರ್ತಿಗಳು ವೇದ, ಉಪನಿಷತ್ತುಗಳನ್ನು ಅಧ್ಯಯನ ಮಾಡಿರುವರಲ್ಲದೆ ಕಳೆದ ಮೂವತ್ತು ವರ್ಷಗಳಿಂದಲೂ ತಮ್ಮ ಬಾಲ್ಯಸ್ನೇಹಿತರಾದ ಡಾಕ್ಟರರೊಂದಿಗೆ ವೇದಾಂತ ವಿಚಾರದಲ್ಲಿಯೂ ಪರಿಶ್ರಮವಹಿಸಿದ್ದಾರೆ. ಶ್ರೀಶ್ರೀಗಳವರ ಬೋಧವನ್ನು ಮೆಚ್ಚಿಕೊಂಡವರಲ್ಲಿ ಇವರೂ ಒಬ್ಬರಾಗಿದ್ದಾರೆ. ಶ್ರೀಮಂತರೂ ಉದಾರಿಗಳೂ ಆದ ಇವರು ಶ್ರೀಶ್ರೀಗಳವರ ಯೋಗಕ್ಷೇಮದ ಬಗ್ಗೆ ಅಲ್ಲಿರುವಷ್ಟು ದಿನವೂ ಹೆಚ್ಚಿನ ಆಸ್ಥೆಯನ್ನು ವಹಿಸಿದರು.

**ಸಾಯಂಕಾಲ :** ಉಪನ್ಯಾಸದಲ್ಲಿ ಶಾಸ್ತ್ರದೃಷ್ಟಿಯ ಮೊದಲನೆಯ ಹಂತವಾದ **''ದೈವೀಸಂಪತ್ತಿನ ಆವಶ್ಯಕತೆ''**ಯನ್ನು ಶ್ರೀಶ್ರೀಗಳವರು ವಿವರಿಸುತ್ತಾ ಗೀತೆಯ ಹದಿನಾರನೆಯ ಅಧ್ಯಾಯದ ಸಾರಾಂಶವನ್ನು ತಿಳಿಸಿ ''ಶಾಸ್ತ್ರದೃಷ್ಟಿಯು ಅಳವಡಬೇಕಿದ್ದರೆ ಎಲ್ಲಕ್ಕಿಂತ ಮೊದಲು ಆಸುರೀಗುಣಗಳನ್ನು ಬಿಟ್ಟು ದೈವೀಗುಣಗಳನ್ನು ಅವಲಂಬಿಸಬೇಕು. ಈ ದೈವೀಗುಣಗಳನ್ನಳವಡಿಸಿಕೊಳ್ಳದೇ ಇದ್ದರೆ ಬ್ರಹ್ಮಾತ್ಮಾನುಭವವು ಎಂದಿಗೂ ದಕ್ಕಲಾರದು. ಆದ್ದರಿಂದ ಸಾಧಕರು ಮೊದಲು ಇದರ ಕಡೆಗೆ ಲಕ್ಷ್ಯಕೊಡಬೇಕು'' ಎಂದು ಅಪ್ಪಣೆ ಕೊಡಿಸಿದರು.

## ತಾ|| 1–12–63 ರವಿವಾರ

ಮಧ್ಯಾಹ್ನ 3ರಿಂದ 4ರವರೆಗೆ ಇಲ್ಲಿಯ ಥಿಯಸಾಫಿಕಲ್ ಲಾಡ್ಜ್‌ನಲ್ಲಿ ಒಂದು ನೂತನಭವನದ ಅನಾವರಣಸಮಾರಂಭದ ನಿಮಿತ್ತವಾಗಿ ಮೊದಲನೆಯ

ಉಪನ್ಯಾಸವನ್ನು ಶ್ರೀಶ್ರೀಗಳವರೇ ಮಾಡಬೇಕೆಂದು ಮೊದಲೇ ಗೊತ್ತಾಗಿದ್ದಂತೆ ಅಲ್ಲಿಗೆ ತೆರಳಿದೆವು. "The Wisdom of Ancient Rshis" (ಪುರಾತನಋಷಿಗಳ ವಿಜ್ಞಾನ) ಎಂಬ ವಿಚಾರವಾಗಿ ಶ್ರೀಗಳವರು ಇಂಗ್ಲೀಷಿನಲ್ಲಿ ಉಪನ್ಯಾಸಮಾಡುತ್ತಾ ''ನಮ್ಮ ಕರ್ಣಾಟಕದೇಶದ ಗಂಡುಮೆಟ್ಟಿನ ಸ್ಥಳವಾದ ಧಾರವಾಡದಲ್ಲಿ 1962ನೇ ಇಸವಿಯಲ್ಲಿ ಥಿಯಾಸಫಿ ಲಾಡ್ಜಿನ (ತತ್ತ್ವಾನ್ವೇಷಣ ಮಂದಿರದ) ಪರಿಚಯವನ್ನು ಮಾಡಿಕೊಳ್ಳುವ ಸಂದರ್ಭವು ಒದಗಿತ್ತು. ಅದಕ್ಕೂ ಹಿಂದಿನಿಂದಲೂ ಸಹ ಎಂದರೆ 50 ವರ್ಷಗಳಿಂದಲೂ ನನಗೆ ಈ ಸಂಸ್ಥೆಯ ಪರಿಚಯವಿದೆ. ಆದ್ದರಿಂದ ಇಂದು ಈ ಗ್ರಾಮದಲ್ಲಿಯ ಈ ಸಂಸ್ಥೆಗೆ ಬಂದಿರುವದು ಒಂದು ಸಂತೋಷದ ಸಂಗತಿಯಾಗಿದೆ. ನಮ್ಮ ದೇಶದಲ್ಲಿ ಥಿಯಾಸಾಫಿಕಲ್ ಸೊಸೈಟಿ ಹಾಗೂ ಶ್ರೀರಾಮಕೃಷ್ಣ ಮಿಷನ್–ಈ ಎರಡು ಸಂಸ್ಥೆಗಳೂ ಕೇವಲ ಲೌಕಿಕದೃಷ್ಟಿಯಿಂದ ಜನರನ್ನು ಹಿಂದಿರುಗಿಸುವದರಲ್ಲಿ ಮಹಾಜನರಿಗೆ ಉಪಕಾರಕವಾಗಿರುತ್ತವೆ.

ಈ ಚಳುವಳಿಗಳು ಭೂಮಂಡಲದಲ್ಲೆಲ್ಲ ಈಗ್ಗೆ ವ್ಯಾಪಿಸಿರುತ್ತವೆ. ರಾಮಕೃಷ್ಣ ಮಿಷನ್ನಿನವರು ಬಹಳಮಟ್ಟಿಗೆ 'ಸಮಾಧಿಯ ಅನುಭವ' ದಿಂದ ಅತೀಂದ್ರಿಯ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದೆಂಬುದನ್ನು ಒತ್ತಿಹೇಳುತ್ತಿದಾರೆ; ಥಿಯಸಾಫಿಕಲ್ ಸಮಾಜದವರು ಕೆಲವರು 'ಮಹಾತ್ಮರಾದ ಋಷಿಗಳು' ಕಾಲಕಾಲಕ್ಕೆ ಭೂಲೋಕದಲ್ಲಿ ಯೋಗ್ಯರಾದ ಜನರಿಗೆ ದರ್ಶನವನ್ನುಕೊಟ್ಟು ಅಧ್ಯಾತ್ಮಸಾಧನೆಗೆ ತಕ್ಕ ಸೂಚನೆಗಳನ್ನು ಕೊಡುತ್ತಾರೆಂದು ನಂಬಿರುತ್ತಾರೆ. ಸಮಾಧಿಯಲ್ಲಾಗಲಿ, ಮಹಾತ್ಮರುಗಳಲ್ಲಾಗಲಿ ನನಗೇನೂ ಅವಿಶ್ವಾಸ ವಿಲ್ಲವಾದರೂ ಈ ಎರಡು ದ್ವಾರಗಳೂ ಸಾಧಕರಿಗೆಲ್ಲ ದೊರಕುವಹಾಗಿಲ್ಲವೆಂದು ಮಾತ್ರ ನಿಶ್ಚಯಿಸಿಕೊಂಡಿರುತ್ತೇನೆ.

ಈ ದಿನ ನಾನು ಹೇಳಹೊರಟಿರುವ ಋಷಿಗಳ ಜ್ಞಾನವು ಈ ಎರಡು ಬಗೆಗಳಿಗಿಂತ ವಿಲಕ್ಷಣವಾದ ಬೇರೊಂದು ದ್ವಾರದಿಂದ ದೊರಕತಕ್ಕದ್ದೂ ಸಾರ್ವತ್ರಿಕವೂ ಆಗಿರುತ್ತದೆ. ಉದಾಹರಣಗೆ ಒಬ್ಬ ಋಷಿಯು ಹೀಗೆಂದು ಹೇಳಿದ್ದಾನೆ:

**'ವೇದಾಹಮೇತಂ ಪುರುಷಂ ಮಹಾಂತಂ ಆದಿತ್ಯವರ್ಣಂ ತಮಸಃ ಪರಸ್ತಾತ್।**
**ತಮೇವ ವಿದಿತ್ವಾತಿಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇऽಯನಾಯ॥' ಶ್ವೇ. 3–4**

ಸ್ವಯಂಪ್ರಕಾಶನೂ ತಮಸ್ಸಿನ ಸೋಂಕಿಲ್ಲದವನೂ ಎಲ್ಲಕ್ಕೂ ದೊಡ್ಡವನೂ ಆದ ಪುರುಷನನ್ನು ನಾನು ಅರಿತಿದ್ದೇನೆ. ನನ್ನಂತೆಯೇ ಇವನನ್ನರಿತವರು ಮೃತ್ಯುವನ್ನು ದಾಟುತ್ತಾರೆ. ಪುರುಷಾರ್ಥವನ್ನು ಪಡೆದುಕೊಳ್ಳುವದಕ್ಕೆ ಮತ್ತೊಂದು ದಾರಿಯಿಲ್ಲ–ಎಂದು

ಸಾರಿದ್ದಾನೆ. ಎಲ್ಲಾ ಕಾಲದ, ಎಲ್ಲಾ ದೇಶದ ಜನಗಳೂ ಈ ಸತ್ಯವನ್ನು ಮನಗಾಣಲು ಸಾಧ್ಯವಿದೆ. ಅದನ್ನು ಮನಗಂಡಾಗ ಮೃತ್ಯುವಿನಿಂದ ಈಗಲೇ ಬಿಡುಗಡೆಯಾಗುತ್ತಾನೆ– ಎಂಬ ಮಾತುಗಳು ಇಲ್ಲಿವೆ. ಹಾಗಾದರೆ ನಮ್ಮೆಲ್ಲರಲ್ಲಿ ಅಂಥ ಪುರುಷನಿದ್ದಾನೆಯೇ? ಅವನನ್ನರಿಯಲು ಈಗಲೂ ಎಲ್ಲರಿಗೂ ಸಾಧ್ಯವೆ?–ಎಂದು ಯಾರಾದರೂ ಕೇಳಬಹುದು. ಇದಕ್ಕೆ ಒಂದು ದೃಷ್ಟಾಂತದಮೂಲಕ ಉತ್ತರವನ್ನು ಕೊಡಲು ಪ್ರಯತ್ನಿಸುತ್ತೇನೆ. ಗಾಢನಿದ್ರೆಯಲ್ಲಿ ನಮ್ಮೆಲ್ಲರಿಗೂ ಯಾವದೇ ವಿಧವಾದ ದೇಹ, ಇಂದ್ರಿಯ, ಮನಸ್ಸು, ಬುದ್ಧಿ ಅಹಂಕಾರಾದಿಗಳಾಗಲಿ, ದೇಶಕಾಲಾದಿಗಳಾಗಲಿ ಇಲ್ಲದಿರುವದು ಸರ್ವಾನುಭವಸಮ್ಮತವಾಗಿದೆ. ಆಗ್ಗೆ ಇರುವ ನಮ್ಮ ಸ್ವರೂಪವೇ ಈ ಮಹಾಪುರುಷನು. ಈಗ ತೋರುವ ಪ್ರಪಂಚದ ನಿಜಸ್ವರೂಪವೇ ಆ ತತ್ತ್ವವು. ಈಗಲೂ ನಾನು ನಿದ್ರೆಯಲ್ಲಿರುವಂತೆಯೇ ಇದೇನೆ–ಎಂಬುದನ್ನರಿತಾಗ ನಾವು ಜನ್ಮಮರಣಗಳ ಸೋಂಕಿಲ್ಲದವರು ಎಂಬುದು ಅನುಭವಕ್ಕೆ ಬರುತ್ತದೆ. ಇಂಥ ದಿವ್ಯಸಂದೇಶಗಳನ್ನು ಸಾರಿರುವ ನಮ್ಮ ಋಷಿಗಳ ವಚನಗಳನ್ನು ನಾವು ಸದಾ ಪರಿಶೀಲಿಸುತ್ತಿರಬೇಕು. ಈ ಭವನವು ಇಂಥ ಪ್ರಾಚೀನಋಷಿಗಳ ಸಂದೇಶಗಳನ್ನು ಪರಿಶೀಲಿಸುವ ಅಧ್ಯಾತ್ಮ ಮಂದಿರವಾಗಲಿ!''ಎಂದು ಉಪದೇಶಿಸಿದರು.

ಈ ದಿನ ಶ್ರೀಗಳವರ ಪುನರ್ದರ್ಶನಕ್ಕಾಗಿ ವಿಜಯನಗರದಿಂದ ಉಪನಿಷದ್ವಿಚಾರಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ|| ಕೆ. ಸೂರ್ಯನಾರಾಯಣ ರಾವ್‌ರವರೂ, ವಿಶಾಖಪಟ್ಟಣದಿಂದ ಡಾಕ್ಟರ್ ಶ್ರೀ|| ಪ್ಯಾರರಾಜ್, ಪ್ರೊಫೆಸರ್ ಶ್ರೀ|| ವೈ. ರಾಮಚಂದ್ರನ್ ಹಾಗೂ ಇವರ ಸ್ನೇಹಿತರೊಬ್ಬರೂ ಸಹ ಅನಕಾಪಲ್ಲಿಗೆ ಬಂದಿದ್ದರು. ಲಾಡ್ಜಿನಿಂದ ಹಿಂತಿರುಗಿ ನಿವಾಸಕ್ಕೆ ಬಂದಮೇಲೆ 1 ½ ಘಂಟೆ ಕಾಲ ಇವರೆಲ್ಲರೂ ಶ್ರೀಶ್ರೀಗಳೊಡನೆ ಮಾತನಾಡಿ ಆಶೀರ್ವಾದಪಡೆದುಕೊಂಡು ಮರಳಿಹೋದರು.

## ಶ್ರೀಶ್ರೀಗಳವರ ಆಂಧ್ರಪ್ರದೇಶದ ಪ್ರವಾಸವಾರ್ತೆ–11

### ಅನಕಾಪಲ್ಲಿ

### (ನವೆಂಬರ್ 1964)

ಸಾಯಂಕಾಲ 6 ½ ಗಂಟೆಗೆ ಎಂದಿನಂತೆ 'ಕರ್ಮಯೋಗ' ಎಂಬ ಬಗ್ಗೆ ಶ್ರೀಶ್ರೀಗಳವರು ಉಪನ್ಯಾಸ ಮಾಡಿದರು. ಅದರ ಸಾರಾಂಶವು ಹೀಗಿತ್ತು: ''ದೈವೀಸಂಪತ್ತು ನಮ್ಮಲ್ಲಿ ಅಳವಡಬೇಕಾದರೆ ಶಾಸ್ತ್ರವಿಹಿತವಾದ ಕರ್ಮಗಳನ್ನೇ

ಮಾಡುವ ಅಭ್ಯಾಸವನ್ನಿಟ್ಟುಕೊಳ್ಳಬೇಕು. ಈ ಕಾಲದಲ್ಲಿ ಶಾಸ್ತ್ರೀಯಕರ್ಮಗಳೆಲ್ಲಾ ಲುಪ್ತಪ್ರಾಯವಾಗಿದ್ದರೂ ಅವುಗಳನ್ನು ಶಕ್ಯವಿದ್ದಷ್ಟುಮಾಡಿ ಲೌಕಿಕಕರ್ಮಗಳನ್ನೇ ನೀತಿಧರ್ಮಗಳಿಗನುಸರಿಸಿ ಮಾಡುವದಕ್ಕೆ ಬರುತ್ತದೆ. ಆ ಕರ್ಮಗಳನ್ನು 'ನಾನು ಮಾಡುವವನು' ಎಂಬ ಸಂಗವನ್ನೂ ಅವುಗಳ ಫಲಾಶೆಯನ್ನೂ ಬಿಟ್ಟು ಈಶ್ವರಾರ್ಪಣಬುದ್ಧಿಯಿಂದ ಸಿದ್ಧಿಯಾಗಲಿ, ಆಗದಿರಲಿ ಸಮತ್ವಬುದ್ಧಿಯನ್ನಿಟ್ಟುಕೊಂಡೇ ಮಾಡಿದರೆ ಅದಕ್ಕೆ ಕರ್ಮಯೋಗದ ಗುಣವು ಬರುತ್ತದೆ. ಇದರಲ್ಲಿ 'ಮಾಡುವ ಕರ್ಮವು ಯಾವದು?' ಎಂಬುದು ಮುಖ್ಯವಲ್ಲ 'ಸ್ವಾಭಾವಿಕವಾಗಿ ನಮಗೆ ಪ್ರಾಪ್ತವಾದ ಕರ್ಮವನ್ನು ಹೇಗೆ ಮಾಡುವದು?' ಎಂಬುದೇ ಮುಖ್ಯವಾದದ್ದೆಂಬುದನ್ನು ನೆನಪಿನಲ್ಲಿಡಬೇಕು. ಹೇಗೆ ಮಾಡಿದರೆ ಕರ್ಮವು ಬಂಧಕಾರಣವಾಗದೆ ಚಿತ್ತಶುದ್ಧಿಗೆ ಕಾರಣವಾಗುವದೋ ಹಾಗೆ ಮಾಡುವದನ್ನೇ ಕರ್ಮಯೋಗವೆಂದು ಕರೆದು **'ಯೋಗಃ ಕರ್ಮಸು ಕೌಶಲಂ'** ಎಂಬ ಮಾತಿನಿಂದ ಇದೊಂದು ಕುಶಲಕಲೆ ಎಂದೂ ಭಗವಂತನು ಗೀತೆಯಲ್ಲಿ ಹೇಳಿದ್ದಾನೆ. ಇಂಥ ಕರ್ಮಯೋಗವು ಅಳವಟ್ಟರೆ ನಮಗೆ ಶಾಸ್ತ್ರೀಯದೃಷ್ಟಿಯು ಸುಲಭವಾಗಿ ಬರುವದು. ಆದ್ದರಿಂದ ಶಾಸ್ತ್ರದೃಷ್ಟಿಯ ಮೊದಲ ಹಂತವು ದೈವೀಸಂಪತ್ತು ಎರಡನೆಯ ಹಂತವು ಕರ್ಮಯೋಗವು–ಎಂಬುದನ್ನು ಜ್ಞಾಪಕದಲ್ಲಿಡಬೇಕು. ಇದರ ಮುಂದಿನ ಹಂತವನ್ನು ನಾಳೆ ಹೇಳುತ್ತೇನೆ.''

## ತಾ|| 2–12–63 ಸೋಮವಾರ

ಈ ದಿನ ನಾವಿಳಿದಿರುವ ದೇವಸ್ಥಾನಕ್ಕೆ ಅನತಿದೂರದಲ್ಲಿರುವ **ಶ್ರೀಶಾರದಾ ಲೈಬ್ರರಿಗೆ** ಶ್ರೀಶ್ರೀಗಳವರನ್ನು ಮಧ್ಯಾಹ್ನದಮೇಲೆ 4–5 ಗಂಟೆಗೆ ಕರೆದುಕೊಂಡು ಹೋಗಲಾಗಿತ್ತು. ಈ ಗ್ರಾಮದಲ್ಲಿ ಇದೊಂದು ಅತ್ಯಂತ ವ್ಯವಸ್ಥಿತ ಹಾಗೂ ಬಲು ದೊಡ್ಡ ಗ್ರಂಥಾಲಯವಾಗಿದೆ. ನಾವು ಇಳಿದುಕೊಂಡ ಶ್ರೀ ಕನ್ಯಕಾಪರಮೇಶ್ವರೀ ದೇವಸ್ಥಾನದ ಅರ್ಚಕರಾದ ಬ್ರ|| ಶ್ರೀ|| ರಮಣಯ್ಯಪಂತಲುಗಾರರ ಮಕ್ಕಳಲ್ಲಿ ಒಬ್ಬರು ಈ ಲೈಬ್ರರಿಯ ಕಾರ್ಯದರ್ಶಿಗಳಿದ್ದದ್ದರಿಂದ ಅವರೇ ಸ್ವತಃ ಎಲ್ಲವನ್ನೂ ವಿವರವಾಗಿ ತೋರಿಸಿದರು. ಅಲ್ಲಿ ಸಂಸ್ಕೃತ, ಹಿಂದಿ, ತೆಲುಗು–ಭಾಷೆಗಳಲ್ಲಿ ಇತಿಹಾಸ, ಕಥೆ, ಕಾದಂಬರಿ, ವಿಜ್ಞಾನ, ವೇದಾಂತ–ಮೊದಲಾದ ಅನೇಕ ಶಾಸ್ತ್ರಗಳ ಮೇಲಿನ ವಿವಿಧ ಪ್ರಾಚೀನ ಹಾಗೂ ಅರ್ವಾಚೀನ ಗ್ರಂಥಗಳ ದೊಡ್ಡ ಸಂಗ್ರಹವಿದೆ. ಅನೇಕ ಬೆಲೆಯುಳ್ಳ ಚಿತ್ರಪುಸ್ತಕಗಳೂ ಇವೆ. ಎಲ್ಲವನ್ನೂ ಬಹಳ ಅಚ್ಚುಕಟ್ಟಾಗಿ ಆಯಾ ವಿಭಾಗಕ್ಕನುಗುಣವಾಗಿ ವಿಂಗಡಿಸಿ ಇಟ್ಟಿದ್ದಾರೆ. ಜನಗಳೂ ಇಲ್ಲಿಗೆ ಓದಲು ಹೆಚ್ಚಾಗಿ ಬರುತ್ತಾರೆ. ಇದಲ್ಲದೆ ಈ ಕಟ್ಟಡದ

ಮೇಲುಪ್ಪರಿಗೆಯಲ್ಲಿರುವ ಭವ್ಯವಾದ ಹಾಲಿನಲ್ಲಿ ಪ್ರತಿ ಭಾನುವಾರವೂ ಒಂದೊಂದು ಬಗೆಯ ಸಾಂಸ್ಕೃತಿಕ ಕಾರ್ಯಕ್ರಮವು (Cultural Programme) ಜರುಗುವಂತೆ ವ್ಯವಸ್ಥೆ ಮಾಡಿದ್ದಾರೆ. ಸುಪ್ರಸಿದ್ಧ ಸಂಗೀತಗಾರರು, ವ್ಯಾಖ್ಯಾತೃಗಳು, ಪಂಡಿತರು–ಇಂಥವರಿಂದಲೇ ಕಾರ್ಯಕ್ರಮಗಳು ನೆರವೇರುವಂತೆ ಏರ್ಪಾಡು ಮಾಡಲಾಗಿದೆ. ಈ ಕಾರ್ಯಕ್ರಮಗಳಲ್ಲಿ ಜನಗಳೂ ಆಸ್ಥೆಯಿಂದ ಭಾಗವನ್ನು ವಹಿಸುತ್ತಾರೆ. ಈ ಕಾರ್ಯಗಳಿಗೂ ಲೈಬ್ರರಿಗೂ ಅನೇಕ ಶ್ರೀಮಂತರು ಉದಾರಹಸ್ತದಿಂದ ಬಗೆಬಗೆಯ ಸಹಾಯವನ್ನುಮಾಡಿದ್ದಾರೆ. ಈ ಗ್ರಂಥಾಲಯವನ್ನು ಕಂಡು ಶ್ರೀಶ್ರೀಗಳವರು ಬಹಳ ಸಂತೋಷಪಟ್ಟರು.

ಸಾಯಂಕಾಲ: ಉಪನ್ಯಾಸದಲ್ಲಿ ಶ್ರೀಶ್ರೀಗಳವರು 'ಧ್ಯಾನಯೋಗ'ವನ್ನು ಕುರಿತು ಉಪದೇಶಿಸಿದ್ದೇನೆಂದರೆ: ''ಶಾಸ್ತ್ರದೃಷ್ಟಿಯಲ್ಲಿ ಒಂದನೆಯ ಹಂತವು ದೈವೀಸಂಪತ್ತು ಎರಡನೆಯದು ಕರ್ಮಯೋಗವೆಂದು ಹೇಳಿದ್ದಾಗಿದೆ. ಮೂರನೆಯ ಹಂತವೇ ಧ್ಯಾನಯೋಗವು. ಗೀತೆಯ ಆರನೆಯ ಅಧ್ಯಾಯದಲ್ಲಿ ಇದನ್ನು ಹೇಳಿದೆ. ಯಾರು ಕರ್ಮಯೋಗವನ್ನು ಚೆನ್ನಾಗಿ ಆಚರಿಸುವರೋ ಅವರೇ ಧ್ಯಾನಯೋಗಕ್ಕೆ ಅಧಿಕಾರಿಗಳಾಗುವರು. ಧ್ಯಾನಯೋಗದಲ್ಲಿ ಮುಖ್ಯವಾಗಿ ಇಂದ್ರಿಯಗಳಿಂದ ಹೊರಗಿನ ವಿಷಯಗಳನ್ನು ಹಿಡಿಯುವದನ್ನೂ ಮನಸ್ಸಿನಿಂದ ವಿಷಯಭೋಗದ ಬಗ್ಗೆ ಸಂಕಲ್ಪಗಳನ್ನು ಮಾಡುವದನ್ನೂ ನಿಲ್ಲಿಸಬೇಕಾದದ್ದು ಅವಶ್ಯ. ಮನಸನ್ನು ಏಕಾಗ್ರತೆಯಿಂದ ಆತ್ಮನಲ್ಲಿಟ್ಟು ಸರ್ವಸಾಕ್ಷಿಯಾದ ಆತನಲ್ಲಿ ಅದನ್ನು ಅಡಗಿಸಿ 'ಇದೆಲ್ಲವೂ ಈ ಆತ್ಮನೇ ಹೊರತು ಇನ್ನೊಂದೆಂಬುದಿಲ್ಲ'–ಎಂಬ ನಿಶ್ಚಯದಲ್ಲಿ ನಿಂತಾಗ ಜಿಜ್ಞಾಸುವು ಕೇವಲಾತ್ಮಸ್ವರೂಪನೇ ಆಗಿರುತ್ತಾನೆ. ಈ ಕ್ರಮವನ್ನನುಸರಿಸಲು ಸತತಪ್ರಯತ್ನ, ಏಕಾಂತವಾಸ–ಮುಂತಾದವುಗಳು ಅತ್ಯವಶ್ಯ. ಏಕಾಗ್ರತೆಗಾಗಿ ಆಸನ, ಪ್ರಾಣಾಯಾಮಾದಿಗಳು ಅಗತ್ಯವಾದರೂ ಪಾತಂಜಲ ಯೋಗದ ಧಾರಣ, ಧ್ಯಾನ, ಸಮಾಧಿಗಳೇನೂ ಇಲ್ಲಿ ಉಕ್ತವಾಗಿಲ್ಲ. ಈ ಧ್ಯಾನಯೋಗವು ಒಂದು ವಿಧವಾದ ಮಾನಸಕ್ರಿಯೆಯಾದರೂ ಇದು ವಸ್ತುತಂತ್ರವಾಗಿರುವ ಸೂಕ್ಷ್ಮವಸ್ತುನಿರೀಕ್ಷಣೆಯ ಮಾರ್ಗವೇ ಹೊರತು ಕೇವಲ ಕರ್ತೃತಂತ್ರವಾಗಿರುವ ಭಾವನಾಪ್ರಧಾನವಾದ ಉಪಾಸನೆಯಲ್ಲ. ಯಾವಾಗ ಮನಸ್ಸು ಈ ನಿರೀಕ್ಷಣೆಯಿಂದ ಅನಾತ್ಮಗಳೆಲ್ಲವನ್ನೂ ಕೈಬಿಟ್ಟು ಕೇವಲಾತ್ಮಸ್ವರೂಪವೇ ಆಗಿ ನಿಲ್ಲುವದೋ ಆಗಲೇ ಅದು ಅಮನಸ್ಕಾಗುವದು. ಇದೇ ಈ ಯೋಗದ ಪ್ರಯೋಜನವು. ಆಗ ಪರಮಾರ್ಥವಾದ ಶಾಸ್ತ್ರದೃಷ್ಟಿ ಎಂಬುದು ನಮಗೆ ಅಳವಟ್ಟು 'ಇವನೇ ಎಲ್ಲರ ಆತ್ಮನು, ಈ ಆತ್ಮನೇ ನಾನು'–ಎಂಬ ನಿಶ್ಚಯವು ಬರುತ್ತದೆ.''

## ತಾ|| 3–12–63 ಮಂಗಳವಾರ

ಈ ದಿನ ಈ ಊರಿನ ಬಡಾವಣೆಯಲ್ಲಿರುವ **ಗೌರೀ ದೇವಸ್ಥಾನವನ್ನು ನೋಡಲು ಮಧ್ಯಾಹ್ನ** 3 ಗಂಟೆಗೆ ಶ್ರೀಶ್ರೀಗಳವರನ್ನು ಕರೆದುಕೊಡು ಹೋಗಿದ್ದೆವು. ಇಲ್ಲಿ 'ಗೌರರು' ಎಂಬ ಒಂದು ವರ್ಗದ ಜನರಿದ್ದು ಇವರಲ್ಲಿ ಶ್ರೀಮಂತರೂ ಉದಾರದಾನಿಗಳು ಇದ್ದಾರೆ. ಶ್ರೀ ಗೌರಿಯೇ ಇವರ ಉಪಾಸ್ಯದೇವತೆ. ಅದಕ್ಕಾಗಿ ಈ ಜನಗಳು ಈ ನಗರದ ಬಡಾವಣೆಯಲ್ಲಿ ತಮ್ಮ ಮನೆಗಳನ್ನು ಕಟ್ಟಿಸಿಕೊಂಡಿರುವರಲ್ಲದೆ ಒಂದು ಭವ್ಯವಾದ ಗೌರೀದೇವಸ್ಥಾನ, ಗೌರೀವಾಚನಾಲಯ, ಗೌರೀ ಪಾರ್ಕ್–ಇವುಗಳನ್ನೂ ನಿರ್ಮಿಸಿದ್ದಾರೆ. ಇವೆಲ್ಲವೂ ಪ್ರೇಕ್ಷಣೆಯವಾಗಿವೆ. ಗೌರೀ ದೇವಸ್ಥಾನದಲ್ಲಿ ಗೌರೀಪಂಚಾಯತನ ಪದ್ಧತಿಯ ಮೇರೆಗೆ ಗಣಪತಿ, ಸೂರ್ಯ, ಶಿವ, ಗೌರಿ, ನಾರಾಯಣ–ಈ ಐದೂ ದೇವತೆಗಳನ್ನು ಸ್ಥಾಪಿಸಿದ್ದಾರೆ. ದೊಡ್ಡ ಸಭಾಮಂಟಪ, ಉತ್ತಮವ್ಯವಸ್ಥೆಗಳಿದ್ದು ಬಹಳ ಆಕರ್ಷಣೀಯ ವಾಗಿದೆ. ಈ ಸ್ಥಳಗಳನ್ನೆಲ್ಲ ನೋಡಿ ಶ್ರೀಶ್ರೀಗಳವರು ಬಹಳ ಆನಂದಪಟ್ಟರು.

**ಸಾಯಂಕಾಲಃ** ಭಕ್ತಿಯೋಗದ ವಿಚಾರವಾಗಿ ಶ್ರೀಶ್ರೀಗಳವರು ಅಪ್ಪಣೆ ಕೊಡಿಸಿದ ವಿಷಯದ ಸಾರಾಂಶವು ಹೀಗಿತ್ತು: "ಆತ್ಮಸ್ವರೂಪದಲ್ಲಿ ನೆಲೆನಿಲ್ಲುವದಕ್ಕೆ ಬೇಕಾಗಿರುವ ಧ್ಯಾನಯೋಗದ ಕೊನೆಯಲ್ಲಿ 'ಯೋಗಿನಾಮಪಿ ಸರ್ವೇಷಾಂ ಮದ್ಗತೇನಾನ್ತರಾತ್ಮನಾ। ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ॥' (ಯೋಗಿಗಳಲ್ಲೆಲ್ಲ ನನ್ನಲ್ಲಿರುವ ಅಂತರಾತ್ಮದಿಂದೊಡಗೂಡಿ ಯಾವನು ಶ್ರದ್ಧಾವಂತನಾಗಿ ಭಜಿಸುವನೋ ಅವನು–ಯುಕ್ತತಮನೆಂದು ನನ್ನ ಮತವು) ಎಂದು ಹೇಳಿದ್ದಾನೆ. ಇಲ್ಲಿ ತಿಳಿದುಕೊಳ್ಳಬೇಕಾದದ್ದೇನೆಂದರೆ ಸರ್ವಾತ್ಮನಾದ ಭಗವಂತನನ್ನು ಕಾಣುವದಕ್ಕಾಗಿ ಹೇಳಲ್ಪಟ್ಟ ಈ ಧ್ಯಾನಯೋಗದಲ್ಲಿ ಎಲ್ಲಕ್ಕೂ ಪ್ರಾಧಾನ್ಯವಾದದ್ದೆಂದರೆ ಅಂತರಾತ್ಮವನ್ನು ಎಂದರೆ ಅಂತಃಕರಣವನ್ನು ಅತಿಶ್ರದ್ಧೆಯಿಂದ ಸರ್ವಾತ್ಮನಾದ ವಾಸುದೇವಪರಮಾತ್ಮನಲ್ಲಿಯೇ ನಿಲ್ಲಿಸುವದು. ಹೀಗೆ ಶ್ರದ್ಧೆಯಿಂದ ಮನಸ್ಸನ್ನು ಇಟ್ಟಿರುವದರಲ್ಲಿ ನಿರತನಾದವನೇ ಯೋಗಿಗಳಲ್ಲೆಲ್ಲ ಶ್ರೇಷ್ಠನೆಂದು ಭಗವಂತನು ಹೇಳಿದ್ದಾನೆ. ಇಲ್ಲಿ ಹೇಳಿರುವದೇ ಭಕ್ತಿಯೋಗವು. ಕೆಲವರು ಧ್ಯಾನಾದಿಗಳನ್ನು ಮಾಡುವ ರೂಢಿಯನ್ನಿಟ್ಟಿರುತ್ತಾರೆ. ಆದರೆ ಅಲ್ಲಿ ಈ ಭಕ್ತಿಯೋಗವಿಲ್ಲದಿದ್ದರೆ ಅದರಿಂದ ಆನಂದವಾಗುವದರ ಬದಲು ಆಯಾಸವಾದಂತೆ ಭಾಸವಾಗುತ್ತದೆ. ಆದ್ದರಿಂದ ಪರಮಾತ್ಮನಲ್ಲಿ ಪರಮಪ್ರೀತಿಯನ್ನು ಸಂಪಾದಿಸಿಕೊಂಡು ಆ ಪರಮಾತ್ಮನೇ ತನ್ನ ಆತ್ಮನೆಂಬುದನ್ನು ಕಾಣಲು ಹೊರಡುವವನೇ ಸರಿಯಾದ ಧ್ಯಾನಯೋಗಿಯು. ಈ ಮಾತನ್ನೇ "ಮಯ್ಯಾಸಕ್ತಮನಾಃಪಾರ್ಥಯೋಗಂ ಯುಞ್ಜನ್ಮದಾಶ್ರಯಃ" ಎಂಬಲ್ಲಿ

ನನ್ನಲ್ಲಿಯೇ ಆಸಕ್ತಿಯುಳ್ಳವನಾಗಿಯೂ ನಾನೇ ಆಶ್ರಯವುಳ್ಳವನಾಗಿಯೂ ಯೋಗವನ್ನಾಚರಿಸಬೇಕೆಂದು ಭಗವಂತನು ಹೇಳಿದ್ದಾನೆ. ಪರಮಾತ್ಮನ ಆಶ್ರಯದಿಂದ ಮತ್ತೇನನ್ನಾದರೂ ಪಡೆಯಲೆಳಸುವದು ಅನಾಸಕ್ತಿಯು. ಆದರೆ ಪರಮಾತ್ಮನನ್ನೇ ಪಡೆಯಲೆಳಸುವದೇ ಭಕ್ತಿಯು. ಹೀಗೆ ಸಾಧನೆಯೂ ಭಗವಂತನೇ ಸಾಧ್ಯವೂ ಭಗವಂತನೇ ಆಗಿರುವದೇ ಭಕ್ತಿಯೋಗವು. ಈ ಭಕ್ತಿಯೋಗದಿಂದಲೇ ಸಾಧಕನು ಅನಾತ್ಮವೆಲ್ಲವನ್ನೂ ಕೈಬಿಟ್ಟು ಆತ್ಮಸ್ವರೂಪದಲ್ಲಿ ನೆಲೆನಿಲ್ಲುತ್ತಾನೆ. ಆದ್ದರಿಂದ ಭಗವಂತನಲ್ಲಿ ಪರಮಪ್ರೇಮವನ್ನು ಸಂಪಾದಿಸಿಕೊಳ್ಳುವ ಆತನೇ ಆಶ್ರಯನಾಗಿದ್ದು ಆತನಲ್ಲಿಯೇ ಆಸಕ್ತಿಯನ್ನಿಟ್ಟು ಆತನಲ್ಲಿಯೇ ನೆಲೆನಿಲ್ಲುವ ವಿಧಾನವಿದು. ಈ ಭಕ್ತಿ ಇಲ್ಲದ ಧ್ಯಾನಯೋಗವು ಫಲಕಾರಿಯಾಗಲಾರದು. ಹಾಗೂ ಭಗವಂತನಲ್ಲಿ ಪರಮ ಪ್ರೇಮವುಂಟಾದಾಗ ಮಿಕ್ಕ ವಿಷಯಗಳಲ್ಲಿ ವಿರಕ್ತಿಯು ಸಹಜವಾಗಿಯೇ ಬರುವದಲ್ಲದೆ ಆತ್ಮಸ್ವರೂಪದಲ್ಲಿ ಅನುರಕ್ತಿಯೂ ಬರುತ್ತದೆ. ಆಗಲೇ ತನ್ನೊಳಗೇ ತಾನು ಪರಮಾತ್ಮ ಸ್ವರೂಪವನ್ನು ಕಂಡು ನೆಲೆನಿಂತಿರುತ್ತಾನೆ. ಆಗ ಎಲ್ಲವೂ ಪರಮಾತ್ಮನೇ ಎಂಬ ಜ್ಞಾನವು ತಾನಾಗಿಯೇ ಬಂದುಬಿಟ್ಟಿರುತ್ತದೆ.''

## ತಾ|| 4–12–63 ಬುಧವಾರ

ಈ ದಿನ ಸಾಯಂಕಾಲದ ಕೊನೆಯ ವ್ಯಾಖ್ಯಾನದಲ್ಲಿ ಶ್ರೀಗಳು ''ಶಾಸ್ತ್ರದೃಷ್ಟಿಯ ಕೊನೆಯ ಹಂತವಾದ ಜ್ಞಾನಯೋಗದ ವಿಚಾರವನ್ನು ಕುರಿತು ಈ ದಿನ ಹೇಳಬೇಕಾಗಿದೆ. ದೈವೀಸಂಪದ್ಯುಕ್ತನಾಗಿ ಕರ್ಮಯೋಗದಿಂದ ಚಿತ್ತಶುದ್ಧಿಯನ್ನು ಹೊಂದಿ ಆತ್ಮವಿಚಾರದ ಶ್ರವಣಾದಿಗಳನ್ನು ಮಾಡಿಕೊಂಡು ನಿದಿಧ್ಯಾಸನರೂಪವಾದ ಧ್ಯಾನಯೋಗದಲ್ಲಿ ತೊಡಗಿ ಆತ್ಮನಲ್ಲಿಯೇ ಅತ್ಯಂತ ಪ್ರೇಮವನ್ನಿಟ್ಟಿರುವ ಭಕ್ತಿಯೋಗದಿಂದ ಆತ್ಮಜ್ಞಾನನಿಷ್ಠೆಗೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಂಡ ಸಾಧಕನಿಗೆ ಈ ಜ್ಞಾನಯೋಗದ ಪ್ರಯೋಜನವು ಆಗುತ್ತದೆ. ಆತ್ಮಜ್ಞಾನನಿಷ್ಠೆಯೇ ಆ ಪ್ರಯೋಜನವು. ಭಕ್ತಿಯೋಗದ ಕೊನೆಯೇ ಈ ಜ್ಞಾನನಿಷ್ಠೆಯು. ಇದನ್ನು ಪರಾಭಕ್ತಿ ಚತುರ್ಥೀ ಭಕ್ತಿ–ಎಂದು ಗೀತೆಯಲ್ಲಿ ಕರೆದಿರುತ್ತದೆ. '**ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ । ತತೋ ಮಾಮ್ ತತ್ತ್ವತೋ ಜ್ಞಾತ್ವಾ ವಿಶತೇ ತದನನ್ತರಮ್॥**' ಎಂಬ ಶ್ಲೋಕದಲ್ಲಿ ಹೇಳಿದ ಪರಾಭಕ್ತಿಯೇ ಜ್ಞಾನನಿಷ್ಠೆಯು.

ಪ್ರಕೃತ ಜ್ಞಾನಯೋಗದಲ್ಲಿ 'ಪ್ರಪಂಚವೆಂಬುದಿಲ್ಲವೇ ಇಲ್ಲ, ಇದೆಲ್ಲವೂ ನಿತ್ಯ ಮುಕ್ತಸ್ವರೂಪವಾದ ಬ್ರಹ್ಮವೇ'–ಎಂಬುದು ಈಗಲೇ ಇಲ್ಲಿಯೇ ಸಾಧಕನಿಗೆ ಅನುಭವಕ್ಕೆ

ಬರುತ್ತದೆ. ಆ ಅನುಭವವು ಬಂದಾಗ ಸಹಜವಾಗಿಯೇ ಅನಾತ್ಮಪ್ರತ್ಯಯನಿರಾಕರಣೆಯಾಗಿ ಆತ್ಮಸ್ವರೂಪದಲ್ಲಿಯೇ ನೆಲೆನಿಲ್ಲುವದೆಂಬ ನಿಷ್ಠೆಯು ತಾನೇ ಬಂದುಬಿಡುತ್ತದೆ. ಇದೇ ಜ್ಞಾನನಿಷ್ಠೆ.

ಮೋಕ್ಷ, ಮುಕ್ತಿ–ಎಂಬುದು ಉಪಾಸನೆಗಳಲ್ಲಿ ಹೇಳಿದಂತೆ ಒಂದೇಸಮನೆ ಭಾವನೆಮಾಡಿ ಸಾಕ್ಷಾತ್ಕಾರವನ್ನು ಪಡೆದುಕೊಂಡಬಳಿಕ ಲೋಕಾಂತರದಲ್ಲಿ ಆಗುವ ಕ್ರಮಮುಕ್ತಿಯೇ ಹೊರತು ಈಗಲೇ ಆಗುವ ಮೋಕ್ಷವೆಂಬುದಿಲ್ಲವೇ ಇಲ್ಲವೆಂದು ಮಿಕ್ಕ ಆಚಾರ್ಯರುಗಳು ಭಾವಿಸಿದ್ದಾರೆ. ಶ್ರೀಶಂಕರಾಚಾರ್ಯರು ಈ ಕ್ರಮಮುಕ್ತಿಯನ್ನೇನೂ ಅಲ್ಲಗಳೆದಿಲ್ಲವಾದರೂ ಈಗಲೇ ಮೋಕ್ಷವೆಂಬುದು ಅನುಭವಕ್ಕೆ ಬರುತ್ತದೆಯಾದ್ದರಿಂದ ಅದರ ಆಧಾರದಿಂದಲೇ ಕ್ರಮಮುಕ್ತಿಯನ್ನು ನಂಬಬೇಕಾಗಿದೆ ಎಂದು ಸೂತ್ರಭಾಷ್ಯದಲ್ಲಿ ಬರೆದಿದ್ದಾರೆ. ಮೋಕ್ಷವೆಂದರೆ ಆತ್ಮಸ್ವರೂಪವೇ ಆಗಿರುವದರಿಂದ ಅದು ಹೊಸದಾಗಿ ಉಂಟಾಗುವಂಥದ್ದೇನೂ ಅಲ್ಲ. ಕೇವಲ ಅವಿದ್ಯಾಮಾತ್ರವೇ ಮೋಕ್ಷಕ್ಕೆ ಅಡ್ಡಿಯಾಗಿರುವದರಿಂದ ವಿದ್ಯೆಯಿಂದ ಅವಿದ್ಯೆಯು ಹೋಗಲಾಗಿ ನಿತ್ಯಮುಕ್ತಸ್ವರೂಪವಾದ ಆತ್ಮತತ್ತ್ವದಲ್ಲಿಯೇ ಪ್ರಜ್ಞೆಯು ನಿಲುಗಡೆಯನ್ನು ಹೊಂದುತ್ತದೆ. 'ತತ್ತ್ವಮಸಿ' ಎಂದು ಬೋಧಿಸಿದಾಗ ಅನಾತ್ಮವೆಲ್ಲವನ್ನೂ ಲಯಗೊಳಿಸಿ ಕೇವಲಾತ್ಮಸ್ವರೂಪವಾಗಿ ನಿಲ್ಲಿಸಿ ಶಾಸ್ತ್ರವು ತಾನೂ ಆತ್ಮಸ್ವರೂಪದಲ್ಲಿ ಲಯವಾಗುತ್ತದೆ. (ಅತ್ರ) ವೇದಾ ಅವೇದಾಃ' ಎಂಬ ಮಂತ್ರವು ಇದನ್ನೇ ಹೇಳುತ್ತದೆ. ಈ ಮಾತನ್ನೇ **'ಶಾಸ್ತ್ರಂ ತು ಅನ್ತ್ಯಂ ಪ್ರಮಾಣಂ'** ಎಂದು ಆಚಾರ್ಯರು ಬರೆದಿದ್ದಾರೆ. ಹೀಗೆ ಶಾಸ್ತ್ರಾಚಾರ್ಯರ ಉಪದೇಶದಿಂದಲೂ ಶಮಾದಿಗಳಿಂದಲೂ ಅಮಾನಿತ್ವಾದಿಸಾಧನಗಳಿಂದಲೂ ಕೂಡಿರುವ ಮುಮುಕ್ಷುವಿಗೆ ಈ ಜ್ಞಾನನಿಷ್ಠೆಯು ಸಹಜವಾಗಿ ಬರುವದು. ಗೀತಾಭಾಷ್ಯದಲ್ಲಿ ಜ್ಞಾನನಿಷ್ಠೆಗೆ ಏನೇನು ಬೇಕೆಂಬುದನ್ನು ಆಚಾರ್ಯರು ಬರೆದಿರುವದನ್ನು ಇಲ್ಲಿ ಪರಿಶೀಲಿಸಿ ಈ ವಿಚಾರವನ್ನು ಮುಗಿಸುತ್ತೇನೆ: **ಶಾಸ್ತ್ರಾಚಾರ್ಯೋಪದೇಶೇನ ಜ್ಞಾನೋತ್ಪತ್ತಿ ಪರಿಪಾಕಹೇತು ಸಹಕಾರಿಕಾರಣಂ ಬುದ್ಧಿವಿಶುದ್ಧ್ಯಾದಿ ಅಮಾನಿತ್ವಾದಿ ಚ ಅಪೇಕ್ಷ್ಯ ಜನಿತಸ್ಯ ಕ್ಷೇತ್ರಜ್ಞಪರಮಾತ್ಮೈಕತ್ವ ಜ್ಞಾನಸ್ಯ ಕರ್ತೃತ್ವಾದಿಕಾರಕಭೇದಬುದ್ಧಿ ನಿಬನ್ಧನಸರ್ವಕರ್ಮಸಂನ್ಯಾಸಸಹಿತಸ್ಯ ಸ್ವಾತ್ಮಾನುಭವನಿಶ್ಚಯರೂಪೇಣ ಯತ್ ಅವಸ್ಥಾನಂ ಸಾ ಪರಾ ಜ್ಞಾನನಿಷ್ಠಾ ಇತ್ಯುಚ್ಯತೇ॥** (18–55) (ಶಾಸ್ತ್ರದ ಮತ್ತು ಆಚಾರ್ಯರ ಉಪದೇಶದಿಂದ ಜ್ಞಾನವುಂಟಾಗಿ ಪರಿಪಕ್ವವಾಗುವದಕ್ಕೆ ಬೇಕಾಗುವ ಸಹಕಾರಿ ಕಾರಣವಾದ ಚಿತ್ತಶುದ್ಧಿಯೇ ಮುಂತಾದದ್ದನ್ನೂ ಅಮಾನಿತ್ವವೇ ಮುಂತಾದದ್ದನ್ನೂ ಒಡಗೂಡಿ ಉಂಟಾಗುವ ಕ್ಷೇತ್ರಜ್ಞಪರಮಾತ್ಮೈಕ್ಯಜ್ಞಾನವು ಕರ್ತೃತ್ವವೇ ಮುಂತಾದ

ಕಾರಣಗಳು ಬೇರೆಬೇರೆ ಎಂಬ ಭೇದಬುದ್ಧಿಯಿಂದಾಗುವ ಸರ್ವಕರ್ಮಗಳನ್ನೂ ಸಂನ್ಯಾಸ ಮಾಡುವದನ್ನೊಡಗೂಡಿ ಸ್ವಾತ್ಮಾನುಭವನಿಶ್ಚಯರೂಪದಿಂದ ಕೊನೆಗಾಣುವದಿದೆಯಲ್ಲ, ಅದನ್ನು ಹೆಚ್ಚಿನ ಜ್ಞಾನನಿಷ್ಠೆ ಎಂದು ಕರೆದಿರುತ್ತದೆ.) ಇಲ್ಲಿ ಜ್ಞಾನನಿಷ್ಠೆಗೆ ಏನೇನು ಬೇಕೆಂಬುದನ್ನೆಲ್ಲ ಶ್ರೀಶಂಕರಾಚಾರ್ಯರು ಹೇಳಿದ್ದಾರೆ. ಇದನ್ನೆಲ್ಲ ಮನಸ್ಸಿಗೆ ತಂದುಕೊಂಡು ಪ್ರಯತ್ನಮಾಡಬೇಕಾದದ್ದು ಮುಮುಕ್ಷುಗಳ ಕರ್ತವ್ಯ. ಭಗವಂತನ ಅನುಗ್ರಹದಿಂದ ನಿಮಗೆಲ್ಲರಿಗೂ ಆ ಮಾರ್ಗವು ಲಭಿಸಲಿ!'' ಎಂದು ಉಪನ್ಯಾಸ ಮಾಡಿ ಕಾರ್ಯಕ್ರಮವನ್ನು ಮುಗಿಸಿದರು.

ಇದಾದನಂತರ ಸಮಾರೋಪಭಾಷಣಗಳನ್ನು ಡಾಕ್ಟರು, ವೈಶ್ಯಸಂಘದ ಅಧ್ಯಕ್ಷ ಶ್ರೀ|| ಉತ್ಪಲ ಶ್ರೀರಾಮಮೂರ್ತಿಯವರು, ಶ್ರೀ|| ರಮಣಯ್ಯಬಾಬುಗಳು ಹಾಗೂ ಇನ್ನೂ ಅನೇಕರು ಮಾಡಿ ಶ್ರೀಶ್ರೀಗಳವರನ್ನು ಕೊಂಡಾಡಿದರು. ಅವರ ಭಾವಚಿತ್ರವನ್ನೂ ತೆಗೆಯಿಸಿ ಅನೇಕ ಸನ್ಮಾನಪತ್ರಗಳನ್ನೂ ಅವರಿಗೆ ಅರ್ಪಿಸಲಾಯಿತು. ರಾತ್ರಿ 9 ½ ಗಂಟೆಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ಅನಕಾಪಲ್ಲಿಯಲ್ಲಿದ್ದ ಆರು ದಿನವೂ ಜನರ ಉತ್ಸಾಹವು ಹೇಳತೀರದು. ಉಪನ್ಯಾಸಕ್ಕೆ ಶ್ರೀಕನ್ಯಕಾಪರಮೇಶ್ವರೀ ಅಮ್ಮನವರ ದೇವಸ್ಥಾನದ ವಿಶಾಲವಾದ ಸಭಾಂಗಣದಲ್ಲಿ ಪ್ರತಿನಿತ್ಯ ಸುಮಾರು 500ರಿಂದ 600ವರೆಗೂ ಜನರು ಸೇರುತ್ತಿದ್ದರು. ಧ್ವನಿವರ್ಧಕಯಂತ್ರದ ವ್ಯವಸ್ಥೆಯನ್ನು ಚೆನ್ನಾಗಿ ಮಾಡಲಾಗಿದ್ದಿತು. ಶ್ರೀ|| ಡಾಕ್ಟರು ಉತ್ತಮರೀತಿಯಿಂದ ಆಂಧ್ರೀಕರಿಸುತ್ತಿದ್ದರು. ಶ್ರೀಗಳವರ ಇಂಗ್ಲೀಷ್ ಭಾಷಣವನ್ನು ಕೇಳಿ ಅನೇಕರು ಆನಂದಪಡುತ್ತಿದ್ದರು. ಸಾಯಂಕಾಲದ ಉಪನ್ಯಾಸವಾದಮೇಲೆಯೂ ರಾತ್ರಿ 10 ½ ವರೆಗೂ ಅನೇಕ ಜನ ಮುಮುಕ್ಷುಗಳು ಶ್ರೀಗಳೊಡನೆ ಸಂಭಾಷಣೆ ನಡೆಸುತ್ತಿದ್ದರು. ಮಧ್ಯಾಹ್ನವೂ 3–5ರವರೆಗೆ ಜನಗಳು ಬಂದು ತಮ್ಮ ಸಂಶಯಗಳನ್ನೆಲ್ಲ ನಿವಾರಿಸಿಕೊಳ್ಳುತ್ತಿದ್ದರು. ಈ ಆರು ದಿನಗಳಲ್ಲಿ ಅನೇಕರು ಪಾದಪೂಜಾದಿಗಳನ್ನು ಮಾಡಿ ಕಾಣಿಕೆಗಳನ್ನರ್ಪಿಸಿದರು. ಆಂಧ್ರಪ್ರವಾಸದಲ್ಲಿಯೇ ಶ್ರೀಗಳವರಿಂದ ಅತಿ ಹೆಚ್ಚಿನ ಲಾಭಹೊಂದಿದವರೆಂದರೆ ಈ ಅನಕಾಪಲ್ಲಿಯ ಜನರೇ ಎಂದು ಧಾರಾಳವಾಗಿ ಹೇಳಬಹುದು. ಸರ್ವಶ್ರೀ ತಮ್ಮನ ಸೋಮರಾಜು, ಏಲೂರ ಸರಯ್ಯ, ಆಂಧ್ರಾಬ್ಯಾಂಕ್ ಡೈರೆಕ್ಟರರು, ಇನ್‌ಕಮ್ ಟ್ಯಾಕ್ಸ್ ಆಫೀಸರ್ ಶ್ರೀ ದತ್ತಭಕ್ತ ಸೂರ್ಯನಾರಾಯಣ ರಾಯರೇ–ಮೊದಲಾದ ಪ್ರಮುಖ ಭಕ್ತರುಗಳು ಶ್ರೀಗಳವರಿಂದ ಅನುಗೃಹೀತರಾದರು. ಡಾಕ್ಟರ್ ಜಿ.ವಿ.ಎಲ್.ನರಸಿಂಹನ್, ಶ್ರೀ|| ಮದ್ದುಲ ಶ್ರೀರಾಮಮೂರ್ತಿ, ಶ್ರೀ|| ರಮಣಯ್ಯ ಬಾಬು–ಇವರುಗಳು ಯಾವಾಗಲೂ ಹತ್ತಿರವೇ ಇದ್ದು ಶ್ರೀಗಳವರ ಎಲ್ಲ

ಯೋಗಕ್ಷೇಮಗಳನ್ನೂ ವಿಚಾರಿಸಿಕೊಳ್ಳುತ್ತಿದ್ದರು. ವಿಜಯವಾಡದಿಂದಲೂ ಶ್ರೀಗಳವರ ಸೇವೆಗೆ ದಾಸಾನುದಾಸರಾಗಿ ನಿಂತಿದ್ದ ಇದೇ ಊರಿನವರಾದ ಶ್ರೀ|| ಚದುವಲ ರಾಮರಾಯರಂತೂ ತಮ್ಮ ಕುಟುಂಬಸಪರಿವಾರಸಮೇತರಾಗಿ ಶ್ರೀಗಳವರ ಸೇವೆಗೆ ಸೊಂಟಕಟ್ಟಿ ನಿಂತಿದ್ದರು. ಒಟ್ಟಿನಲ್ಲಿ ಅನಕಾಪಲ್ಲಿಯ ನಾಗರಿಕರ ಭಕ್ತಿ ಶ್ರದ್ಧಾಮುಮುಕ್ಷುತ್ವಾದಿಗಳು ಚಿತ್ತಾಕರ್ಷಕವಾಗಿದ್ದವು. ನನ್ನ ಮನಸ್ಸಿನಲ್ಲಿ ಇಲ್ಲಿಯ ದೃಶ್ಯಗಳು ಅಚ್ಚಳಿಯದಂತೆ ನಿಂತಿವೆ.

# ಶ್ರೀಶ್ರೀಗಳವರ ಆಂಧ್ರಪ್ರದೇಶದ ಪ್ರವಾಸವಾರ್ತೆ–12

## ಬೆಂಗಳೂರಿಗೆ ಪ್ರಯಾಣ ತಾ|| 5–12–63 ಗುರುವಾರ

## (ಡಿಸೆಂಬರ್ 1964)

ನಾನು ಬೆಳಗ್ಗೆ 5 ಗಂಟೆಗೆ ಮದ್ರಾಸ್–ಕಲಕತ್ತಾ ಎಕ್ಸ್‌ಪ್ರೆಸ್ಸಿಗೆ ವಾಲ್ಟೇರಿಗೆ ಹೋದೆ. ಹೋಗುವಾಗ ಶ್ರೀಶ್ರೀಗಳವರ ಪ್ರಯಾಣ ಹಾಗೂ ಆ ದಿನದ ಪಾದಪೂಜಾದಿ ಎಲ್ಲಾ ಕೆಲಸಗಳನ್ನೂ ಶ್ರೀ|| ಚದುವಲ ರಾಮರಾಯರಿಗೇ ಒಪ್ಪಿಸಿದ್ದೆನು. ಬೆಳಗಿನ 6 ½ ಗಂಟೆಗೆ ನಾನು ವಿಶಾಖಪಟ್ಟಣದಲ್ಲಿ ಶ್ರೀ|| M. ಬಂಗಾರುಶೆಟ್ಟರಲ್ಲಿ ಹೋಗಿ ಸ್ನಾನಾಹ್ನಿಕ, ಉಪಹಾರಾದಿಗಳನ್ನು ಮುಗಿಸಿಕೊಂಡು 10 ಗಂಟೆಗೆ ವಾಲ್ಟೇರ್ ಸ್ಟೇಶನ್ನಿಗೆ ಬಂದೆ. ಹಾಗೂ ಮೊದಲೇ ರಿಜರ್ವ್ ಮಾಡಿಸಿದ ಮೇರೆಗೆ ಕಲಕತ್ತಾ–ಮದ್ರಾಸ್ ಮೇಲ್‌ನಲ್ಲಿ ನಮ್ಮ ಮೂರು ಸೀಟುಗಳನ್ನು (Sleeping car ) ಹಿಡಿದುಕೊಂಡು 11½ ಗಂಟೆಗೆ ಅನಕಾಪಲ್ಲಿ ಸ್ಟೇಶನ್ ಮೇಲೆ ಬಂದಾಗ ಸುಮಾರು 300ಕ್ಕೂ ಹೆಚ್ಚು ಜನರು ಶ್ರೀಶ್ರೀಗಳವರನ್ನು ಬೀಳ್ಕೊಡಲು ಬಂದಿದ್ದರು. ಪ್ರಚಂಡ ಜಯಘೋಷ, ಮಂತ್ರಘೋಷ, ವಾದ್ಯಘೋಷ, ಬೆಳ್ಳೀಚತ್ತ ಮೊದಲಾದ ಸಕಲ ರಾಜಮರ್ಯಾದೆಯೊಂದಿಗೆ ಊರಲ್ಲಿ ಮೆರವಣಿಗೆಯಿಂದ ಕರೆದುಕೊಂಡು ಬಂದ ಭಕ್ತರೆಲ್ಲರೂ ಫ್ಲಾಟ್‌ಫಾರ್ಮಿನಲ್ಲಿ ನಿಂತು "ಶ್ರೀ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿ ಮಹಾರಾಜಕೀ ಜೈ" ಎಂದು ಏಕಕಂಠದಿಂದ ಕೂಗಿದಾಗಿನ ಆ ದೃಶ್ಯವನ್ನೂ ಆ ಆನಂದವನ್ನೂ ಈ ಲೆಕ್ಕಣಿಕೆಯಿಂದ ಬರೆದುತೋರಿಸಲು ಸಾಧ್ಯವಿಲ್ಲ. ಅಂತೂ ಮಧ್ಯಾಹ್ನ 12 ಗಂಟೆಗೆ ನಾವು ಅನಕಾಪಲ್ಲಿಯಿಂದ ಹೊರಟೆವು. ಇಲ್ಲಿಗೆ ಆಂಧ್ರಪ್ರದೇಶದ ನಮ್ಮ ಕಾರ್ಯಕ್ರಮವು ಮುಗಿದಂತಾಗಿತ್ತು.

ನಾವು ಮೂವರಿಗೂ ವಾಲ್ಟೇರಿನಿಂದ ಬೆಂಗಳೂರಿಗೇ ನೇರಾಗಿ ಟಿಕೆಟ್ಟನ್ನು ರಿಝರ್ವ್ ಮಾಡಿಸಲಾಗಿತ್ತಾದ್ದರಿಂದ ನಡುವೆ ಎಲ್ಲಿಯೂ ಇಳಿಯದೆ ಶುಕ್ರವಾರ ಬೆಳಗ್ಗೆ 5 ಗಂಟೆಗೆ (ಆ ದಿನ ರೈಲು 2 ಗಂಟೆ ತಡವಾಗಿತ್ತು) ಮದ್ರಾಸಿಗೆ ಬಂದು ಸೇರಿದೆವು. ಆದರೆ ಅನಕಾಪಲ್ಲಿಯಲ್ಲಿರುವಾಗಲೇ ನಾನು ಪೀಠಾಪುರಕ್ಕೆ ಪತ್ರ ಬರೆದು ಗುರುವಾರ ದಿವಸ ಈ ಟ್ರೈನಿಗೆ ಹೊರಡುವದು ನಿಶ್ಚಿತವಾಗಿದೆಯೆಂದೂ ಪೀಠಾಪುರದಲ್ಲಿ ಇದು ನಿಲ್ಲುವದಿಲ್ಲವಾದ್ದರಿಂದ ಸಾಮರ್ಲ್‌ಕೋಟೆ ಸ್ಟೇಶನ್ನಿನಲ್ಲಿ ಶ್ರೀಶ್ರೀಗಳವರ ದರ್ಶನವನ್ನು ಪಡೆಯಬಹುದೆಂದೂ ಆ ದಿನ ಶ್ರೀ ದತ್ತಾತ್ರೇಯ ಸ್ವಾಮಿಗೆ ಅಭಿಷೇಕ, ಪೂಜಾದಿಗಳನ್ನು ಮಾಡಿಕೊಂಡು, ತೀರ್ಥಪ್ರಸಾದಾದಿಗಳನ್ನು ತೆಗೆದುಕೊಂಡು ಬರಬೇಕೆಂದೂ ವೇ॥ ಬ್ರಾ॥ಶ್ರೀ॥ ಕಾಶೀಪತಿಶಾಸ್ತ್ರಿಗಳಿಗೆ ತಿಳಿಸಿದ್ದೆನಲ್ಲದೆ 5 ರೂಪಾಯಿ ಮನಿಯಾರ್ಡರ್ ಮಾಡಿದ್ದೆನಾದ್ದರಿಂದ ನಮ್ಮ ರೈಲು ಅನಕಾಪಲ್ಲಿಯಿಂದ ಹೊರಟು ಮಧ್ಯಾಹ್ನ 2 ಗಂಟೆಗೆ ಸಾಮರ್ಲ್‌ಕೋಟೆ ಸ್ಟೇಶನ್ನಿಗೆ ಬಂದಾಗ ಬ್ರಾ॥ ಶ್ರೀ॥ ಕಾಶೀಪತಿಶಾಸ್ತ್ರಿಗಳೂ ಅವರ ಸ್ನೇಹಿತರಾದ ವೈದ್ಯ ಶ್ರೀ॥ ವೈ.ಎ. ಗೋವಿಂದಾಚಾರ್ಯಲು–ಅವರೂ ಕಾಯ್ದುಕೊಂಡು ನಿಂತಿದ್ದರು. ರೈಲು ನಿಂತೊಡನೆಯೇ ನಮ್ಮ ಬೋಗಿಯ ಕಡೆ ಧಾವಿಸಿಬಂದು ಶ್ರೀಶ್ರೀಗಳವರ ದರ್ಶನವನ್ನು ಮಾಡಿಕೊಂಡು ನನಗೆ ಶ್ರೀ॥ ದತ್ತಾತ್ರೇಯನ ತೀರ್ಥಪ್ರಸಾದಾದಿಗಳನ್ನು ಕೊಟ್ಟು ರೈಲುಬಿಡುವವರೆಗೂ ಆನಂದದಿಂದ ಮಾತನಾಡಿ ಶ್ರೀಗಳವರ ಆಶೀರ್ವಾದವನ್ನು ಪಡೆದು ಪೀಠಾಪುರಕ್ಕೆ ಹೊರಟು ಹೋದರು. ದಾರಿಯುದ್ದಕ್ಕೂ ಆಂಧ್ರಪ್ರದೇಶದ ಪ್ರವಾಸದ ನೆನಪೇ ನೆನಪು, ಆ ಮಾತೇ ಮಾತುಗಳು ನಡೆಯುತ್ತಿದ್ದವು.

### ತಾ॥ 6–12–63 ಶುಕ್ರವಾರ

ಈ ಹಿಂದೆಯೇ ಬೆಂಗಳೂರಿನ ಪರಮಾರ್ಥವಿಚಾರಸಂಘದ ಅಧ್ಯಕ್ಷರಾದ ಶ್ರೀ॥ ದೇವತಾ ಶ್ರೀರಾಮಯ್ಯನವರಿಗೆ ಪತ್ರ ಬರೆದು ನಾವು ತಾ॥ 6–12–63ನೇ ದಿನ ಬೆಳಗ್ಗೆ ಮದ್ರಾಸಿಗೆ ಬಂದು ಅಂದೇ ಮಧ್ಯಾಹ್ನ 1 ಗಂಟೆಗೆ, ಹೊರಟು ರಾತ್ರಿ 8 ½ ಗಂಟೆಗೆ ಬೆಂಗಳೂರು ತಲುಪುವುದಾಗಿ ತಿಳಿಸಿದ್ದೆನು. ಹಾಗೂ ಮದ್ರಾಸಿನಲ್ಲಿ ಶ್ರೀಗಳವರ ಸ್ನಾನಭಿಕ್ಷಾದಿಗಳಿಗೆ ವ್ಯವಸ್ಥೆಮಾಡಲೂ ತಿಳಿಸಿದ್ದೆನು. ಆ ಮೇರೆಗೆ ಬೆಂಗಳೂರಿನ ಸುಪ್ರಸಿದ್ಧ ವಣಿಕ್‌ಶ್ರೇಷ್ಠರೂ ಶ್ರೀ ವಿಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂಪನಿಯ ಮಾಲೀಕರೂ ಆದ ಶ್ರೀ॥ ಐತಾ ಮಾದಪ್ಪಶ್ರೇಷ್ಠಿಯವರು ಮದ್ರಾಸಿನಲ್ಲಿ ಉತ್ತಮ ವ್ಯವಸ್ಥೆ ಮಾಡಿಸಿದ್ದರು. ನಾವು ರೈಲಿನಿಂದಿಳಿದಾಗ ಮಾದಪ್ಪಶೆಟ್ಟರ ಕಡೆಯವರು ನಿಂತಿದ್ದು ನಮ್ಮ ಹೆಚ್ಚಿನ

ಸಾಮಾನುಗಳನ್ನು ಫ್ಲಾಟ್‌ಫಾರ್ಮಿನಲ್ಲಿಯೇ ಇಡಿಸಿ, ಕಾಯಲು ಒಂದು ಆಳನ್ನೂ ನಿಯಮಿಸಿ ಟ್ಯಾಕ್ಸಿಯಲ್ಲಿ ನಮ್ಮನ್ನು ಒಂದು ಛತ್ರಕ್ಕೆ ಕರೆದೊಯ್ದರು. ಆ ದಿನ ಮದ್ರಾಸಿನಲ್ಲಿ ಬಹಳ ಮಳೆಹುಯ್ಯುತ್ತಿತ್ತು. ಅದರಲ್ಲಿಯೇ ನಮಗೆ ಎಲ್ಲಾ ಸೌಕರ್ಯಗಳನ್ನೊದಗಿಸಿ ಚೆನ್ನಾಗಿ ನೋಡಿಕೊಂಡರು.

ಶ್ರೀಗಳಿಗೆ ಸ್ನಾನ, ಆಹ್ನಿಕ, ಭಿಕ್ಷೆ, ನಮ್ಮ ಊಟಗಳೂ–ಎಲ್ಲವೂ ಆಗಿ ಸರಿಯಾಗಿ 12 ಗಂಟೆಗೆ ಛತ್ರದಿಂದ ಹೊರಟು ರೈಲಿಗೆ ಬಂದೆವು. ಮಧ್ಯಾಹ್ನ 1 ½ ಗಂಟೆಗೆ ರೈಲು ಮದ್ರಾಸಿನಿಂದ ಹೊರಟಿತು. ಅದೇ ರಾತ್ರಿ 8½ ಗಂಟೆಗೆ ಬೆಂಗಳೂರು ಕಂಟೋನ್‌ಮೆಂಟ್ ಸ್ಟೇಷನ್ನಿನಲ್ಲಿ ಇಳಿದಾಗ ಶ್ರೀ|| ದೇವತಾ ಶ್ರೀರಾಮಯ್ಯನವರು ಶ್ರೀ|| ಮೆಂಟಾ ರಂಗಯ್ಯನವರೇ ಮೊದಲಾದವರು ಶ್ರೀಗಳ ಸ್ವಾಗತಕ್ಕೆ ಸಿದ್ಧರಾಗಿ ನಿಂತಿದ್ದರು. ಕೂಡಲೆ ಕಾರಿನಿಂದ ವಿಶ್ವೇಶ್ವರಪುರದ ಸರ್ಕಲ್‌ನಲ್ಲಿರುವ ಶ್ರೀಕನ್ಯಕಾ ಪರಮೇಶ್ವರೀ ದೇವಸ್ಥಾನದಲ್ಲಿ ಶ್ರೀಗಳವರನ್ನು ಇಳಿಸಿ ರಾತ್ರಿಯ ಸ್ನಾನಾದಿಗಳಿಗೆ ಏರ್ಪಾಡುಮಾಡಿ ನಾನು ನಮ್ಮ ಮನೆಗೆ ಮರಳಿ ಬಂದೆನು. ಆಗ "**ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶನ್ತಿ**" ಎಂಬ ಮಾತು ನನಗರಿವಿಲ್ಲದೆಯೇ ನನ್ನ ಬಾಯಿಂದ ಬಂದು ವಿಷಾದಭಾವವೊಂದು ಮನದಲ್ಲಿ ಮಿಂಚಿ ಮಾಯವಾಯಿತು.

## ಶ್ರೀ ಚಿದಂಬರಾಶ್ರಮ, ಗುಬ್ಬಿ,

## ತಾ|| 7–12–63 ಶನಿವಾರ

ಈ ದಿನ ಬೆಳಗ್ಗೆ ಶ್ರೀಗಳವರ ಭಿಕ್ಷಾವಂದನಾದಿಗಳಾದ ಮೇಲೆ ಶ್ರೀ|| ಐತಾಮಾದಪ್ಪಶೆಟ್ಟರು ತಮ್ಮ ಕಾರನ್ನು ಕೊಡಲೊಪ್ಪಿದ್ದರಿಂದ ಮಧ್ಯಾಹ್ನ 1½ ಘಂಟೆಗೆ ಹೊರಟು ಗುಬ್ಬಿಯಲ್ಲಿರುವ ಶ್ರೀಚಿದಂಬರಾಶ್ರಮಕ್ಕೆ ಹೋಗಬೇಕೆಂದು ನಿರ್ಧಾರವಾಯಿತು. ಆ ಪ್ರಕಾರ 1½ ಗೆ ಕಾರು ಬಂತು. ಶ್ರೀಗಳು, ಶ್ರೀಮತಿ ಲಕ್ಷ್ಮಮ್ಮ ನಾನು ಹಾಗೂ ಶ್ರೀಶ್ರೀಗಳ ಪೂರ್ವಾಶ್ರಮದ ಅಳಿಯಂದಿರಾದ ಶ್ರೀ|| ಜೆ. ಸೀತಾರಾಮಯ್ಯನವರೂ ಸೇರಿ ಮೊದಲು ಮಲ್ಲೇಶ್ವರಂದಲ್ಲಿಯ ಶ್ರೀಮತಿ ಲಕ್ಷ್ಮಮ್ಮನವರ ಮನೆಗೆ ಹೋದೆವು. ಅವರ ತಂದೆಯವರಾದ ಶ್ರೀ|| ಚೆನ್ನಕೇಶವ ಶಾಸ್ತ್ರಿಗಳವರು ಭಕ್ತಿಯಿಂದ ಶ್ರೀಗಳನ್ನೂ ನಮ್ಮನ್ನೂ ಮನೆಯಲ್ಲಿ ಕರೆದುಕೂಡಿಸಿದರು. ಅಲ್ಲಿ ಅರ್ಧಗಂಟೆ ಇದ್ದು 2½ಗೆ ಅಲ್ಲಿಂದ ಹೊರಟು 4 ಗಂಟೆಗೆ ಸರಿಯಾಗಿ ಗುಬ್ಬಿಯಲ್ಲಿರುವ ಚಿದಂಬರಾಶ್ರಮಕ್ಕೆ ಬಂದೆವು.

ಶ್ರೀಶ್ರೀಚಿದಂಬರಮಹಾಸ್ವಾಮಿಗಳು ಆಗ ಆಶ್ರಮಕ್ಕೆ ಸೇರಿದ ಜಮೀನೊಂದರಲ್ಲಿದ್ದರು. ಅಲ್ಲಿಯ ಮುಖ್ಯಕಾರ್ಯದರ್ಶಿಗಳಾದ ಬ್ರಾ॥ಶ್ರೀ॥ಪಂಡಿತ್ ರಾಮಶರ್ಮರವರಿಗೆ ಶ್ರೀಗಳ ಅನಿರೀಕ್ಷಿತ ಆಗಮನದಿಂದ ಆಶ್ಚರ್ಯವೂ ಆನಂದವೂ ಏಕಕಾಲಕ್ಕೇ ಉಂಟಾದವು. ಶ್ರೀಗಳ ಸ್ನಾನಾದಿಗಳಿಗೆ ವ್ಯವಸ್ಥೆ ಆಯಿತು. ಸಾಯಂಕಾಲ ಶ್ರೀಚಿದಂಬರ ಸ್ವಾಮಿಗಳೂ ಬಂದರು. ಸುಮಾರು 7 ಗಂಟೆಗೆ ಆಶ್ರಮದ ಶ್ರೀ ದತ್ತಮಂದಿರದಲ್ಲಿ ಸೇರಿದ ಅಂದಿನ ಸಭೆ ಎಂದಿಗೂ ಮರೆಯದಂತಿತ್ತು ಸಾಕ್ಷಾತ್ ತ್ರಿಮೂರ್ತಿ ದತ್ತಾತ್ರೇಯನು ಗರ್ಭಗುಡಿಯೊಳಗಿದ್ದರೆ, ಆತನ ಮೊದಲನೆಯ ಅವತಾರವಾದ ಶ್ರೀಪಾದಶ್ರೀವಲ್ಲಭರ ಪ್ರತಿರೂಪರಾಗಿ ಸ್ಮಾರ್ತಸಂನ್ಯಾಸಧರ್ಮಾಚರಣೆಯಲ್ಲಿರುವ ಶ್ರೀಚಿದಂಬರಸ್ವಾಮಿಗಳೂ ಎರಡನೆಯ ಅವತಾರವಾದ ಶ್ರೀ ನರಸಿಂಹಸರಸ್ವತಿ ಸ್ವರೂಪರಾಗಿ ಶ್ರೌತಸಂನ್ಯಾಸ ಧರ್ಮಾಚರಣೆಯಲ್ಲಿರುವ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರೂ ಹೊರಗೆ ಒಂದೊಂದಾಸನಗಳಲ್ಲಿ ಆಸೀನರಾಗಿದ್ದ ಆ ಸನ್ನಿವೇಶವು ಭಗವಂತನ ಮೂರೂ ಅವತಾರಗಳ ಸಾಕ್ಷಾತ್ಕಾರ ರೂಪಪ್ರತ್ಯಕ್ಷದರ್ಶನವೇ ಆಗಿತ್ತೆಂದು ನನ್ನ ಅನುಭವಕ್ಕೆ ಬಂದಿತು. ಈ ಮಾತನ್ನು ಅಂದಿನ ಸಭೆಯ ಆರಂಭದಲ್ಲಿ ನಾನು ಹೇಳಿದಾಗ ಪಂಡಿತರುಗಳೂ ಉಪಾಧ್ಯಾಯರುಗಳೂ ವಿದ್ಯಾರ್ಥಿಗಳೂ ಆಶ್ರಮದ ಕಾರ್ಯಕರ್ತರೂ ಚಪ್ಪಾಳೆತಟ್ಟಿ ಪರಮಾನಂದವನ್ನು ವ್ಯಕ್ತಪಡಿಸಿದರು. ಉಭಯ ಶ್ರೀಶ್ರೀಗಳವರ ಸಮಾಗಮವು ನೋಡುವಂತಹದಿತ್ತು, ನಾನು ಮೊದಲು ಶ್ರೀ ದತ್ತನಾಮಾಮೃತದ ಕೆಲವು ಕೀರ್ತನೆಗಳನ್ನು ಹಾಡಿದೆ ಬಳಿಕ ಭಜನೆಯಾಗಿ ಸಭೆ ಆರಂಭವಾಯಿತು.

ಆರಂಭದಲ್ಲಿ ಬ್ರಾ।ಶ್ರೀ॥ ರಾಮಶರ್ಮರವರು ಶ್ರೀ ಚಿದಂಬರ ಮಹಾಸ್ವಾಮಿಗಳು ಇಲ್ಲಿ ಆಶ್ರಮ ಸ್ಥಾಪಿಸಿದ ಬಗೆ, ಅದರ ಬೆಳವಣಿಗೆ ಮುಂತಾದವುಗಳ ಬಗ್ಗೆ ಹೇಳಿದ ಮೇಲೆ ಶ್ರೀ ಚಿದಂಬರಸ್ವಾಮಿಗಳು ತಮ್ಮ ಆಶ್ರಮಕ್ಕೆ ಅನಿರೀಕ್ಷಿತವಾಗಿ ಆಗಮಿಸಿದ್ದ ಶ್ರೀಶ್ರೀಗಳವರನ್ನು ಹೃತ್ಪೂರ್ವಕ ಅಭಿನಂದಿಸಿ, "ಶ್ರೀಶಂಕರಭಗವತ್ಪಾದರವರ ಹೃದಯವನ್ನರಿತು ಜನಗಳಿಗೆಲ್ಲ ತಿಳಿವಳಿಕೆ ಮಾಡಿಕೊಡುವದಕ್ಕಾಗಿಯೇ ಅವತಾರ ಮಾಡಿದ ಮಹಾವಿಭೂತಿಗಳಾದ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಕನ್ನಡದಲ್ಲಿ ಪ್ರಸ್ಥಾನತ್ರಯಭಾಷ್ಯ ಹಾಗೂ ಅನೇಕ ಗ್ರಂಥಗಳನ್ನು ರಚಿಸಿ ಮಹೋಪಕಾರವನ್ನು ಮಾಡಿದ್ದಾರೆ. ಇಂಥವರ ದರ್ಶನವೇ ಒಂದು ಪುಣ್ಯಯೋಗ" ಎಂದು ಹೇಳಿ ವಿದ್ಯಾರ್ಥಿಗಳಿಗೆ ಉಪದೇಶಮಾಡಬೇಕೆಂದು ಶ್ರೀಶ್ರೀಗಳವರನ್ನು ಬಿನ್ನವಿಸಿಕೊಂಡರು. ಆಗ ಶ್ರೀಶ್ರೀಗಳವರು "ವೇದಧರ್ಮಗಳನ್ನು ಕಾಪಾಡಿಕೊಳ್ಳುತ್ತಾ ಆಧುನಿಕ ಜಗತ್ತಿನಲ್ಲಿ ಬಾಳಲು ಬೇಕಾಗಿರುವ ಲೌಕಿಕವಿದ್ಯೆಗಳನ್ನೂ ಕಲಿಸಿ ವಿದ್ಯಾರ್ಥಿಗಳನ್ನು ತಯಾರುಮಾಡುತ್ತಿರುವ ಈ ಸಂಸ್ಥೆಯು ನಮ್ಮ ಕರ್ನಾಟಕದಲ್ಲಿ ಅತ್ಯಂತ

ಸ್ತುತ್ಯರ್ಹವಾಗಿದೆ'' ಎಂದು ಹೇಳಿ ''ಬ್ರಾಹ್ಮಣ ಬಡವಿದ್ಯಾರ್ಥಿಗಳಿಗೆ ಊಟವಸತಿಗಳನ್ನಿತ್ತು ವಿದ್ಯೆ ನೀಡುತ್ತಿರುವ ಈ ಸಂಸ್ಥೆಯವರು ಸಾಧಾರಣವಾಗಿ ಪ್ರತಿಯೊಬ್ಬ ಬ್ರಾಹ್ಮಣವಿದ್ಯಾರ್ಥಿಯೂ ಅವಶ್ಯವಾಗಿ ಕಲಿಯಲೇಬೇಕಾದ ವೇದಮಂತ್ರಭಾಗಗಳೆಲ್ಲ ವನ್ನೂ, ಉದಾಹರಣೆಗೆ ಸಂಧ್ಯಾವಂದನೆ, ರುದ್ರ, ದೇವಪೂಜಾ, ಶ್ರಾದ್ಧ–ಮೊದಲಾದ ಮಂತ್ರಭಾಗಗಳನ್ನೊಳಗೊಂಡ ಒಂದಾನೊಂದು ಪಠ್ಯಪುಸ್ತಕವನ್ನು (Vedic Reader) ನಿರ್ಮಿಸಿ ಅದರ ಮೂಲಕ ಧರ್ಮಪ್ರಸಾರವನ್ನೂ ಪ್ರಾಚೀನಪರಂಪರೆಯನ್ನೂ ಪ್ರಚಾರ ಮಾಡಬೇಕು''ಎಂಬ ಸಲಹೆಯನ್ನು ಕೊಟ್ಟರು. ನಿತ್ಯದ ಪದ್ಧತಿಯ ಭಜನಾದಿಗಳಾದ ನಂತರ ಕಾರ್ಯಕ್ರಮವು ಸಮಾಪ್ತವಾಯಿತು.

ಶ್ರೀ ಗುಬ್ಬಿ ಚಿದಂಬರಾಶ್ರಮವು 'ಸೇವಾಸದನ' ಎಂಬ ಹೆಸರಿನಿಂದ ಬೆಂಗಳೂರು, ಅರಸೀಕೆರೆ ಮಾರ್ಗದಲ್ಲಿ ಗುಬ್ಬಿ ರೈಲ್ವೆ ನಿಲ್ದಾಣಕ್ಕೆ ಕೇವಲ ಎರಡು ಫರ್ಲಾಂಗ್ ದೂರದಲ್ಲಿದೆ. ಶ್ರೀ ಚಿದಂಬರಸ್ವಾಮಿಗಳಿಂದ ಸ್ಥಾಪಿತವಾದ ಈ ಆಶ್ರಮದಲ್ಲಿ 50 ಜನ ಬ್ರಾಹ್ಮಣ ಬಡವಿದ್ಯಾರ್ಥಿಗಳಿಗೆ ಊಟವಸತಿಗಳನ್ನು ಕೊಟ್ಟು ವಿದ್ಯೆ ಹೇಳಿಕೊಡುವ ವ್ಯವಸ್ಥೆಯಿದೆ. ಅತಿಥಿಗೃಹ, ವೇದಪಾಠಶಾಲೆ, ಪಂಡಿತರ ಮನೆಗಳು, ಅಡಿಗೆಮನೆ, ಭೋಜನಶಾಲೆ, ಎರಡು ಸ್ನಾನದ ಮನೆಗಳು, ಶ್ರೀ ದತ್ತಾತ್ರೇಯನ ಸುಂದರಮೂರ್ತಿಯುಳ್ಳ ಶ್ರೀ ದತ್ತಾಂಜನೇಯಸ್ವಾಮಿಯ ದೇವಸ್ಥಾನ, ಸೇವಾಸದನ ಪ್ರಿಂಟಿಂಗ್ ಪ್ರೆಸ್, ಶ್ರೀ ಚಿದಂಬರಸ್ವಾಮಿಗಳವರ ಪ್ರವಾಸದಮನೆ ಹಾಗೂ ಏಕಾಂತವಾಸಕ್ಕಾಗಿಯೇ ನಿರ್ಮಿಸಿದ 'ಶಾಂತಿನಿವಾಸ' ಮುಂತಾದ ಕಟ್ಟಡಗಳು ಒಂದೇ ಕಡೆಗೆ ಕಂಗೊಳಿಸುವವಲ್ಲದೆ 200 ವಿದ್ಯಾರ್ಥಿಗಳಿಗೋಸುಗ ನಡೆಸಲ್ಪಡುವ ಹೈಸ್ಕೂಲು ಕಟ್ಟಡವೂ ಭವ್ಯವಾಗಿ ಕಂಗೊಳಿಸುತ್ತಿದೆ. ಗುಬ್ಬಿಯಿಂದ ಬೆಂಗಳೂರಿಗೆ ಹೋಗುವ ಪ್ರಯಾಣಿಕರು ರೈಲಿನಲ್ಲಿಯೇ ಇದನ್ನೆಲ್ಲ ಕಾಣಬಹುದು. ಆಶ್ರಮದಲ್ಲಿ ದೊಡ್ಡ ಭಾವಿಯಿದ್ದು ಅದಕ್ಕೆ ಎಲೆಕ್ಟ್ರಿಕ್ ಪಂಪಿನ ಸೌಲಭ್ಯವೂ ಇದೆ. ತೋಟ, ತೆಂಗಿನ ಮರಗಳಿಂದ ಅಲಂಕೃತವಾದ ಈ ಆಶ್ರಮವು ಪೂರ್ವದ ಋಷ್ಯಾಶ್ರಮವನ್ನು ನೆನಪಿಗೆ ತರುತ್ತದೆ. ಈ ಆಶ್ರಮದಿಂದ ಉತ್ತರಕ್ಕೆ ಸುಮಾರು ಮುಕ್ಕಾಲುಮೈಲಿ ದೂರದಲ್ಲಿ ಆಶ್ರಮ್ಮಕೆ ಸೇರಿದ ದೊಡ್ಡ ಜಮೀನಿದ್ದು ಅಲ್ಲಿ ಒಕ್ಕಲುತನವು ನಡೆಯುತ್ತಿದೆ. ಅಲ್ಲೂ ದೊಡ್ಡ ಭಾವಿ, ಪಂಪುಗಳಿದ್ದು ವಸತಿಗೆ ಯೋಗ್ಯಸ್ಥಳವೂ ಇದೆ. ದ್ರಾಕ್ಷಿತೋಟ, ಬತ್ತದಗದ್ದೆಗಳಿದ್ದು ಇನ್ನಿತರ ಬೆಳೆಗಳೂ ಅಲ್ಲಿ ಬೆಳೆಯುತ್ತವೆ. ಶ್ರೀ ಸ್ವಾಮಿಗಳು ಹೆಚ್ಚಾಗಿ ಇಲ್ಲಿಯೇ ಇರುತ್ತಾರೆ.

ಬೆಳಗ್ಗೆ 4 ಗಂಟೆಗೆ ಎದ್ದ ವಿದ್ಯಾರ್ಥಿಗಳು ನಿತ್ಯದ ಪ್ರಾರ್ಥನೆಯಾದ ಮೇಲೆ ಸ್ನಾನ ಸಂಧ್ಯಾದಿಗಳನ್ನು ತೀರಿಸಿ ವೇದಪಾಠಶಾಲೆಯಲ್ಲಿ ಸಾಲಾಗಿ ಅಗ್ನಿಕಾರ್ಯಕ್ಕೆ ಕುಳಿತಿರುವ

ದೃಶ್ಯವು ಹಿಂದಿನ ಋಷಿಗಳಕಾಲದ ನೆನಪನ್ನೇ ಕೊಡುತ್ತದೆ. 7 ರಿಂದ 8ರವರೆಗೆ ವೇದಮಂತ್ರ ಕಲಿಯುವದು, 8–9 ಸಂಸ್ಕೃತ ಕಲಿಯುವದು, ಮತ್ತೆ 11 ಗಂಟೆಗೆ ಹೈಸ್ಕೂಲಿಗೆ ಹೋಗುವದು. ಸಾಯಂಕಾಲ ವಿದ್ಯಾರ್ಥಿಯ ಅಭಿರುಚಿಗೆ ತಕ್ಕಂತೆ ಒಕ್ಕಲುತನ, ಪ್ರಿಂಟಿಂಗ್–ಮುಂತಾದವುಗಳನ್ನು ಕಲಿಯುವದು, ಹೀಗೆ ನಿತ್ಯಪದ್ಧತಿ. ಶ್ರೀ ದತ್ತಾತ್ರೇಯನ ದೇವಸ್ಥಾನದಲ್ಲಿ ನಿತ್ಯ ಎರಡೂ ವೇಳೆ ಅಭಿಷೇಕ, ಪೂಜೆ, ರಾತ್ರಿ ಭಜನೆ, ಮಹಾಮಂಗಳಾರತಿಯೊಂದಿಗೆ ಕಾರ್ಯಕ್ರಮವು ಮುಗಿಯುತ್ತದೆ.

ಕರ್ನಾಟಕದಲ್ಲಿ ಅದರಲ್ಲೂ ಬ್ರಾಹ್ಮಣಸಮಾಜಕ್ಕೆ ಇಂಥ ಆಶ್ರಮ ಇನ್ನೊಂದಿಲ್ಲ. 'ಸೇವಾಸದನ' ಎಂಬ ಮಾಸಪತ್ರಿಕೆಯೂ ಹೊರಡುತ್ತದೆ. ಅನೇಕ ಗ್ರಂಥಗಳನ್ನು ಸಹ ಪ್ರಕಟಿಸಿದ್ದಾರೆ. ಅತಿಥಿಗಳಿಗೆ ಸೇವೆಸಲ್ಲಿಸುವಲ್ಲಿ ಹಾಗೂ ಊಟೋಪಚಾರಗಳಲ್ಲಿ ಇದಕ್ಕೆ ಸಮಾನವಾದ ಇನ್ನೊಂದು ಸಂಸ್ಥೆ ಇಲ್ಲವೆಂದೇ ಹೇಳಬೇಕು. ಇದೇ ಆಶ್ರಮದ ಶಾಖೆಯಾದ ತುಮಕೂರು ಡಿಸ್ಟ್ರಿಕ್ಟ್, ಮಧುಗಿರಿ ತಾಲ್ಲೂಕ್, ಮಿಡಿಗೇಶೀ ಹೋಬಳಿಗೆ ಸೇರಿದ ನಮ್ಮ ಮೈಸೂರು ಸ್ಟೇಟಿನ ಕೊನೆಯ ಹಳ್ಳಿಯಾದ ಚಂದ್ರಭಾವಿಯಲ್ಲಿಯೂ ದತ್ತ ಮಂದಿರವಿದೆ. ಹಾಗೂ ಅಲ್ಲಿ ಬಹಳ ಒಕ್ಕಲುತನಗಳು ನಡೆಯುತ್ತವೆ. ಅಲ್ಲಿಯ ದತ್ತಮಂದಿರದ ಸಭಾಂಗಣ ಕಟ್ಟಡವು ಈಗ ಆರಂಭವಾಗಿದೆ. ಇಂಥ ಪವಿತ್ರಸಂಸ್ಥೆಗೆ ಉದಾರದಾನಿಗಳು ಸಹಾಯಮಾಡಬೇಕಲ್ಲದೆ ಸನಾತನ ಧರ್ಮದ ಯಾವ ಪೀಠಸ್ಥರೂ ಮಾಡದಿರುವ ಕಾರ್ಯವನ್ನು ಮಾಡಿ ನಿರ್ವಹಿಸುತ್ತಿರುವ ಈ ಆಶ್ರಮದೊಳಗೆ ಸನಾತನಧರ್ಮಾಭಿಮಾನಿಗಳು ಸಹಕರಿಸಿ ನಮ್ಮ ಕರ್ನಾಟಕ ದೇಶದಲ್ಲಿರುವ ಈ ಏಕೈಕ ಸಂಸ್ಥೆಯನ್ನು ಬಲಪಡಿಸಬೇಕಾದದ್ದು ಅವಶ್ಯ.

ಧಾರವಾಡ ಜಿಲ್ಲಾ ಹಾವೇರಿಯ ಹತ್ತಿರವಿರುವ ಅಗಡಿ ಆನಂದವನದ ಸಾಧುಗಳಾದ ಶ್ರೀಶೇಷಾಚಲಭಗವಾನರ ಶಿಷ್ಯಪರಂಪರೆಗೆ ಸೇರಿದ ಶ್ರೀಚಿದಂಬರಸ್ವಾಮಿಗಳವರ ಈ ಲೋಕಸೇವೆಯನ್ನು ಎಷ್ಟು ಹೊಗಳಿದರೂ ಸಾಲದು. ಸರ್ವರೂ ಒಂದುಸಲ ಅವಶ್ಯವಾಗಿ ನೋಡಬೇಕಾದ ಸಂಸ್ಥೆಯಿದು. ಆಶ್ರಮದಲ್ಲಿ ಇಬ್ಬರು ಪಂಡಿತರುಗಳಿಗೂ ಐದುಜನ ಉಪಾಧ್ಯಾಯರಿಗೂ ವಸತಿಸೌಕರ್ಯ ಕಲ್ಪಿಸಿಕೊಟ್ಟಿದೆ. ಶ್ರೀಚಿದಂಬರಸ್ವಾಮಿಗಳು ಶ್ರೇಷ್ಠಸಾಧುಗಳೂ ಜ್ಞಾನಿಗಳೂ ಆಗಿದ್ದಾರೆ. ಇಂಥ ಈ ಪುಣ್ಯಾಶ್ರಮವನ್ನು ನೋಡಿಕೊಂಡು ನಾವು ತಾ|| 8–12–63ರ ಭಾನುವಾರ ಮಧ್ಯಾಹ್ನ ಶ್ರೀಶ್ರೀಗಳವರ ಭಿಕ್ಷಾವಂದನಾದಿಗಳಾದ ನಂತರ ಪೂನಾ ಎಕ್ಸ್‌ಪ್ರೆಸ್ಸಿಗೆ ಹೊರಟೆವು.

ಹೊರಡುವ ಮುನ್ನ ಹೊಳೆನರಸೀಪುರಕ್ಕೆ ಟೆಲಿಗ್ರಾಂ ಮೂಲಕ ಶ್ರೀಗಳವರ ಬರುವಿಕೆಯನ್ನು ತಿಳಿಸಲಾಗಿತ್ತು. ನಾವು ಸಾಯಂಕಾಲ 6 ಗಂಟೆಗೆ ಹೊಳೆನರಸೀಪುರ

ಸ್ಟೇಶನ್ ತಲುಪಿದಾಗ ಬ್ರ॥ಶ್ರೀ॥ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳೂ ಕಾರ್ಯಾಲಯದ ಇತರ ಜನಗಳೂ ಫ್ಲಾಟ್‌ಫಾರಂನಲ್ಲಿ ನಿಂತಿದ್ದರು. ಶ್ರೀಶ್ರೀಗಳವರನ್ನು ಕರೆದೊಯ್ಯಲು ಕಾರು ಬಂದಿತ್ತು; ಸಾಮಾನುಗಳಿಗಾಗಿ ಗಾಡಿಯನ್ನೂ ತಂದಿದ್ದರು. 6 ¼ ಗಂಟೆಗೆ ಆಶ್ರಮವನ್ನು ತಲುಪಿ ಸ್ನಾನಾದಿಗಳಾದ ನಂತರ ಶ್ರೀಶ್ರೀಗಳವರ ಆಶೀರ್ವಾದವನ್ನು ಪಡೆದುಕೊಂಡು ನಾನು ಅತಿ ಅವಸರದ ಕೆಲಸವಿದ್ದುದರಿಂದ ಅದೇ ರಾತ್ರಿ 9 ಗಂಟೆಗೆ ಆಶ್ರಮದಿಂದ ಹೊರಟು ತಾ॥ 9–12–63 ಬೆಳಗ್ಗೆ ಬೆಂಗಳೂರು ತಲುಪಿದೆನು. ಅಂತೂ ಈ 40 ದಿನಗಳ ಪ್ರವಾಸ ಕಾರ್ಯಕ್ರಮವು ನನ್ನ ಜೀವನದಲ್ಲಿಯೇ ಒಂದು ಮಹಾಪರ್ವಕಾಲವೆನ್ನಬಹುದು. ಈ ಪ್ರವಾಸದಿಂದ ನನ್ನಲ್ಲಿ ಉಂಟಾದ ಪರಿಣಾಮವನ್ನೂ ಪರಿವರ್ತನೆಗಳನ್ನೂ ಸ್ವಲ್ಪವಾದರೂ ಹೇಳಿಕೊಳ್ಳದೆ ಈ ಲೇಖನಮಾಲೆಯನ್ನು ಮುಗಿಸುವಂತಿಲ್ಲವಾದ್ದರಿಂದ ಇಲ್ಲಿ ಈ ಬಗ್ಗೆ ಒಂದೆರಡು ಮಾತುಗಳನ್ನು ಬರೆಯುತ್ತೇನೆ.

## ಕೊನೆಯ ಮಾತು

ಉಪನಿಷತ್ತುಗಳಲ್ಲಿ ಶಿಷ್ಯರು ಗುರುವಿನ ಬಳಿಗೆ ಹೋಗಿ ಬ್ರಹ್ಮವಿದ್ಯೆಯನ್ನರುಹ ಬೇಕೆಂದು ಕೇಳಿದಾಗ ಮೊದಲು ಕೆಲವು ದಿನ ಬ್ರಹ್ಮಚರ್ಯವನ್ನು ಪಾಲಿಸಲು ವಿಧಿಸಿ ಆಮೇಲೆ ತತ್ತ್ವವನ್ನುಪದೇಶಿಸುತ್ತಿದ್ದರೆಂಬುದಾಗಿ ಕಥೆಗಳಿವೆ. ಭಗವದ್ಗೀತೆಯಲ್ಲಿಯೂ **'ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ'** ಎಂದೇ ಭಗವಂತನು ಅಪ್ಪಣೆ ಕೊಡಿಸಿದ್ದಾನೆ. ಜ್ಞಾನವೈರಾಗ್ಯನಿಷ್ಠರೂ ನಿರಹಂಕಾರಿಗಳೂ ಅಮಾನಿತ್ವಾದಿಗುಣ ಪರಿಪೂರ್ಣರೂ ಶ್ರೋತ್ರಿಯಬ್ರಹ್ಮನಿಷ್ಠರೂ ಆಗಿರುವಂಥ ಗುರುಗಳಸೇವೆ, ಸಂಗ, ಉಪದೇಶಗಳು ಕೇವಲ ಭಗವಂತನ ಕೃಪೆಯಿಂದಲ್ಲದೆ ಇನ್ನೇತರಿಂದಲೂ ದೊರಕಲಾರವು. ತಾವೇ ಗುರುಗಳೆಂದು ಜಂಭಕೊಚ್ಚುತ್ತಾ ಶ್ರೋತ್ರಿಯಬ್ರಹ್ಮನಿಷ್ಠರೆಂದು ಹೇಳಿಸಿಕೊಳ್ಳುತ್ತಾ ಅಹಂಕಾರಾದಿಗಳಿಂದ ಯುಕ್ತರಾಗಿ, ಬರಿಯ ವೇದಾಂತದ ಬಾಯಿ ಮಾತುಗಳನ್ನಾಡುತ್ತಾ ಕಾಮಕ್ರೋಧಗಳಿಗೆ ವಶರಾಗಿ ಶಿಷ್ಯರನ್ನೂ ರಾಗದ್ವೇಷಗಳಿಗೆ ತಳ್ಳುತ್ತಿರುವ ಗುರುಗಳಿಗೆ ಈ ಕಾಲದಲ್ಲಿ ಕೊರತೆಯೇನೂ ಇಲ್ಲ. ಆದರೆ ನಿಜವಾದ ಗುರುಗಳು ಸಿಕ್ಕುವದು ಮಾತ್ರ ದುರ್ಲಭವಾಗಿದೆ. ಅಂಥ ನಿಜವಾದ ಗುರುಸೇವೆಯು ಅತ್ಯಲ್ಪಕಾಲವಾದರೂ ನನಗೆ ದೊರಕಿದ್ದು ನನ್ನ ಜನ್ಮಾಂತರ ಸುಕೃತದ ಫಲವೆಂದೇ ಬರೆಯುತ್ತೇನೆ. ಶ್ರೀಶ್ರೀಗಳವರು ಈ ಕಾಲದಲ್ಲಿಯೇ ಶ್ರೇಷ್ಠಜ್ಞಾನವೈರಾಗ್ಯನಿಷ್ಠರೂ ನಿವೃತ್ತಿಧರ್ಮಪರಾಯಣರೂ ಆದ ಸಾಕ್ಷಾತ್ ಶಂಕರಾವತಾರಾಂಶರೆಂಬುದು ನನಗೆ

ಪ್ರತ್ಯಕ್ಷ ನಿದರ್ಶನಕ್ಕೆ ಬಂದಿತ್ತು. ಈ ಪ್ರವಾಸಕಾಲದಲ್ಲಂತೂ ಅದು ಇನ್ನೂ ದೃಢವಾಯಿತು. ವಿಷ್ಣುಪುರಾಣದ ಒಂದು ವಚನದಲ್ಲಿ ಕೃತಯುಗದಲ್ಲಿ ಒಂದು ಸಾಧನೆಯ ಸಿದ್ಧಿಗೆ ಸಾವಿರವರ್ಷಗಳೂ ತ್ರೇತಾಯುಗದಲ್ಲಿ ನೂರುವರ್ಷಗಳೂ ದ್ವಾಪರಯುಗದಲ್ಲಿ ಹತ್ತು ವರ್ಷಗಳೂ ತಗುಲಿದರೆ ಕಲಿಯುಗದಲ್ಲಿ ಕೇವಲ ಹತ್ತುದಿನಗಳಲ್ಲಿಯೇ ಸಿದ್ಧಿಯಾಗುವದೆಂದು ಹೇಳಿದೆ. ನನಗೆ ಲಭಿಸಿದ ಕಾಲದ ಈ ಮಹಾತ್ಮರ ಸಂಗದಲ್ಲಿಯ ಅನುಭವವಿಶೇಷಗಳನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸುತ್ತೇನೆ. ಇದು ಅಧ್ಯಾತ್ಮಸಾಧಕರಿಗೆ ಕಿಂಚಿತ್ತಾದರೂ ಉಪಯುಕ್ತವಾಗಬಹುದೆಂದು ನಾನು ಭಾವಿಸಿದ್ದೇನೆ.

1. ಶ್ರೀಶ್ರೀಗಳವರ ಜೊತೆಯಲ್ಲಿ ಅತ್ಯಂತ ಸಾತ್ತ್ವಿಕಾಹಾರ, ನಿತ್ಯವೂ ಎರಡು ವೇಳೆ (ಕೆಲವುಸಲ ಮೂರುವೇಳೆ) ಸ್ನಾನಾದಿಗಳು, ಎರಡೂವೇಳೆ ನನ್ನ ಆಹ್ನಿಕವಾದ ಮೇಲೆ ಶ್ರೀಗಳವರಿಗೆ ತಪ್ಪದೆ ಸಲ್ಲಿಸುತ್ತಿದ್ದ ಪಾದಾಭಿವಂದನೆ–ಇವುಗಳಿಂದ ನನ್ನ ಶರೀರ, ಇಂದ್ರಿಯ, ಮನಸ್ಸುಗಳು ಹೆಚ್ಚಾಗಿ ಬದಲಾವಣೆ ಹೊಂದಿದ್ದವು.

2. ಶ್ರೀಗಳವರ ಸನ್ನಿಧಿಯಲ್ಲಿದ್ದಮಾತ್ರದಿಂದಲೇ ಸಂತತವೂ ಭಗವನ್ನಾಮಸ್ಮರಣೆ, ಭಗವತ್ತತ್ತ್ವವಿಚಾರ, ಭಗವದ್ಭಾವನೆಗಳೇ ಸುಳಿಯುತ್ತಿದ್ದವೇ ಹೊರತು 'ನಾನೊಬ್ಬ ಗೃಹಸ್ಥ, ನನಗೊಂದು ಕುಟುಂಬವಿದೆ'–ಎಂಬುದೇ ಮರೆತುಹೋಗಿತ್ತು.

3. ಶ್ರೀಗಳವರಿಗೆ ಸೇವೆಸಲ್ಲಿಸುವಾಗ, ರೈಲು, ರಿಕ್ಷಾ, ಕಾರುಗಳಲ್ಲಿ ಅವರ ಕೈಮುಟ್ಟಿ ಇಳಿಸುವಾಗ, ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸುವಾಗ, ನನಗರಿಯದಂತೆಯೇ ಶ್ರೀದತ್ತಾತ್ರೇಯಸ್ವಾಮಿಯ ಎರಡನೆಯ ಅವತಾರವಾದ ಶ್ರೀನರಸಿಂಹಸರಸ್ವತಿಯತಿವರ್ಯರ ನಾಮವೂ ಅವರೇ ಇವರೆಂಬ ಭಾವನೆಯೂ ಅವರ ಸೇವೆಯನ್ನೇ ಮಾಡುವೆನೆಂಬ ದೃಢಭಕ್ತಿಯೂ ನನ್ನ ಮನಸ್ಸಿನಲ್ಲಿ ತಾನಾಗಿಯೇ ಉಕ್ಕಿ ಬರುತ್ತಿದ್ದವು. ಇಂಥ ಸಂದರ್ಭಗಳಲ್ಲಿ ರೋಮಾಂಚನವೂ ಉಂಟಾಗಿ ಆನಂದ ಬಾಷ್ಪಗಳೂ ಸುರಿದು ಒಂದುಬಗೆಯ ವಿದ್ಯುತ್‌ಸಂಚಾರವಾಗಿ ನನ್ನ ಜನ್ಮಾಂತರದ ಪಾಪಗಳೆಲ್ಲ ಸುಟ್ಟುಹೋಗಲು ಸಾಕ್ಷಾತ್ ದತ್ತಾತ್ರೇಯನೇ ನನಗಾಗಿ ಈ ಅನುಗ್ರಹ ಮಾಡಿರುವನೆಂದೂ ಭಾಸವಾಗುತ್ತಿತ್ತೆಂಬುದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ.

4. ಎಂಭತ್ತೈದುವರ್ಷದ ಈ ವಯಸ್ಸಿನಲ್ಲಿಯೂ ಶ್ರೀಗಳವರಲ್ಲಿದ್ದ ಯಾರಿಂದಲೂ ಸಾಧ್ಯವಿಲ್ಲದ ಸಂಯಮ, ಧರ್ಮಪಾಲನೆ, ಜ್ಞಾಪಕಶಕ್ತಿ, ವ್ಯಾಖ್ಯಾನಶಕ್ತಿ, ಅಗಾಧವಾದ ಶಾಸ್ತ್ರಪಾಂಡಿತ್ಯ, ಆಳವಾದ ಆಧ್ಯಾತ್ಮಿಕ ಅನುಭವ–ಮುಂತಾದವುಗಳನ್ನು ಕಂಡು ಬೆಕ್ಕಸಬೆರಗಾಗುತ್ತಿದ್ದೆನಲ್ಲದೆ ನನ್ನಲ್ಲಿರುವ ಲೋಪದೋಷಗಳಿಗಾಗಿ ನಾಚಿಕೆಯೂ ಆಗುತ್ತಿತ್ತು.

5. ವಿರೋಧವಾತಾವರಣದಲ್ಲಿ ಶ್ರೀಗಳವರ ಶಾಂತಹಸನ್ಮುಖತೆ, ಸುಖದುಃಖಗಳಲ್ಲಿ ಸಮಾನತೆ, ನಿರಹಂತೆ, ಯಾವಕಾರಣದಿಂದಲೂ ಯಾವಾಗಲೂ ಯಾರನ್ನೂ ಅನವಶ್ಯಕವಾಗಿ ಸ್ತುತಿಸದ, ನಿಂದಿಸದ ನಿಸ್ಪೃಹತೆ, ಮತ್ತು ಅಧರ್ಮ ಮಾರ್ಗವನ್ನೂ ತತ್ತ್ವವಿಚಾರದಲ್ಲಿಯ ತಪ್ಪುದಾರಿಗಳನ್ನೂ ಖಂಡಿಸುವದರಲ್ಲಿರುವ ಮನೋನಿಶ್ಚಯ–ಇವನ್ನು ಕಣ್ಣಾರೆಕಂಡ ನಾನೊಬ್ಬನೇ ಅಲ್ಲದೆ ನಮ್ಮ ಜೊತೆಯಲ್ಲಿದ್ದ ಶ್ರೀ ನಿಖಿಲಾನಂದಗುಪ್ತರೂ ಶ್ರೀಮತಿ ಮಹಿಳಾಮಾತೆಯರೂ ಇಂದಿಗೂ ಸ್ಮರಿಸಿಸ್ಮರಿಸಿ ಆನಂದಾಶ್ಚರ್ಯವನ್ನನುಭವಿಸುತ್ತಿದ್ದೇವೆ.

6. ಶ್ರೀಗಳ ಸೇವೆಯೇ ಜೀವನವೆಂದುಕೊಂಡು ಈ ಮುಪ್ಪಿನಲ್ಲಿ ಅವರನ್ನು ಹೂವಿನಂತೆ ಜೋಪಾನಮಾಡುತ್ತಿರುವ ಶ್ರೀಮತಿ ಲಕ್ಷ್ಮಮ್ಮನವರ ತಾಳ್ಮೆ ಸೇವಾವೃತ್ತಿಗಳನ್ನೂ ನನ್ನೊಡನೆ ಅವರು ಒಡಹುಟ್ಟಿದ ಸಹೋದರನಂತೆ ನಡೆದುಕೊಂಡ ಪರಿಯನ್ನೂ ನಾನೆಂದಿಗೂ ಮರೆಯುವಂತಿಲ್ಲ.

ಒಟ್ಟಿನಲ್ಲಿ ಹೂವಿನೊಡನೆ ನಾರು ಸ್ವರ್ಗಕ್ಕೇರಿದಂತೆ ಶ್ರೀಗಳವರ ಜೊತೆಯಲ್ಲಿ ನನಗೆ ಅನೇಕ ವಿದ್ವಾಂಸರ, ಸದ್ಗುಣಿಗಳ, ಜಿಜ್ಞಾಸುಗಳ, ಕ್ಷೇತ್ರತೀರ್ಥಗಳ ದರ್ಶನವೂ ಲಭಿಸಿ ನಿರಂತರವೂ ಅವರ ಉಪದೇಶ, ಶ್ರವಣ, ಸೇವಾದಿಗಳೂ ಸಿಕ್ಕಿದ್ದರಿಂದ ಇಡಿಯ ಆಯುಷ್ಯದಲ್ಲಿಯೇ ಈ ಒಂದು ತಿಂಗಳು ಚಿರಸ್ಮರಣೀಯವಾಗಿ ಉಳಿದಿದೆ.

ಇಂಥ ಮಹಾಪುರುಷರನ್ನು ಪಡೆದ ಕನ್ನಡನಾಡು, ಭಾರತದೇಶವೇ ಧನ್ಯ! ಇಂಥ ಮಹಾವ್ಯಕ್ತಿಯ ದರ್ಶನ, ಉಪದೇಶ, ಶ್ರವಣಗಳಿಂದ ಸರ್ವರೂ ಧನ್ಯರಾಗುವ ಸದ್ಬುದ್ಧಿಯನ್ನು ಸರ್ವಾತ್ಮನಾದ ಶ್ರೀ ದತ್ತಾತ್ರೇಯಸದ್ಗುರುವು ಅನುಗ್ರಹಿಸಲೆಂದು ಪ್ರಾರ್ಥಿಸಿ ಲೆಕ್ಕಣಿಕೆಯನ್ನು ಕೆಳಗಿಡುತ್ತೇನೆ.

ಓಂ ತತ್ ಸತ್

ಶ್ರೀ ಗುರುದೇವದತ್ತ!

# 13. ಪರಮಾರ್ಥದ ಪಥದಲ್ಲಿ –1

## (ಏಪ್ರಿಲ್ 1972)

1943ನೆಯ ಇಸವಿಯ ಮಾತು. ಒಂದು ದಿನ ಗದಗ್ ರೈಲ್ವೆಸ್ಟೇಷನ್ನಿನ ಬುಕ್‌ಸ್ಟಾಲಿನಲ್ಲಿ 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯನ್ನು ಮೊದಲನೆಯ ಸಲ ಕಂಡಾಗ ನನಗಾದ ಆನಂದಕ್ಕೆ ಪಾರವೇ ಇಲ್ಲ. ಏಕೆಂದರೆ 1941ನೆಯ ಡಿಸೆಂಬರ್ ತಿಂಗಳಿನಿಂದಲೇ ನನ್ನ ಸ್ವಂತ ಊರಾದ ಹೊಂಬಳ (ಧಾರವಾಡ ಜಿಲ್ಲೆಯ ಗದಗ್ ತಾಲ್ಲೂಕಿನ ಒಂದು ಗ್ರಾಮ)ದಲ್ಲಿ ಸದ್ಗುರು ಬ್ರಾ।।ಶ್ರೀ।। ಅಗ್ನಿಹೋತ್ರಿ ಶಂಕರಭಟ್ಟ ಮಾಸ್ತರರಿಂದ 'ವೇದಾಂತಪಂಚದಶಿ'ಯನ್ನು ಶ್ರವಣಮಾಡುತ್ತಿದ್ದೆನಾದ್ದರಿಂದ ಆ ಸಮಯದಲ್ಲಿ ಇಂಥ ವಿಷಯವನ್ನೇ ತಿಳಿಸುವ ಒಂದು ಪತ್ರಿಕೆಯೂ ಇದೆ ಎಂಬುದನ್ನರಿತಾಗ ಮನಸ್ಸಿಗೆ ಹಿಡಿಸಲಾರದಷ್ಟು ಸಂತೋಷವಾಗಿತ್ತು. ಕೂಡಲೆ ನಾಲ್ಕು ಆಣೆಗೆ ಒಂದು ಬಿಡಿಸಂಚಿಕೆ ಕೊಂಡು ಓದಿದಾಗ ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಾಧಾರಣಪರಿಚಯವುಂಟಾಯಿತು.

ಮುಂದೆ ಚಂದಾದಾರನಾಗಿ ಕಾರ್ಯಾಲಯದಿಂದ ಕೆಲವು ಪುಸ್ತಕಗಳನ್ನೂ ಸಹ ನಮ್ಮೂರಿಗೆ ತರಿಸಿ ಒಂದು 'ವೇದಾಂತವಾಚನಾಲಯ'ವನ್ನು ಏರ್ಪಡಿಸಿದ್ದೂ ಆಯಿತು. 1948ರಲ್ಲಿ ಪ್ರಪ್ರಥಮವಾಗಿ ನಾನೇ ಕಾರ್ಯಾಲಯಕ್ಕೆ ಬಂದು ಶ್ರೀಗಳನ್ನು ಕಂಡು ಹೊಳೆನರಸೀಪುರದ ಶ್ರೀ ಚತುರ್ಭುಜಪಟ್ಟಾಭಿರಾಮದೇವಸ್ಥಾನದಲ್ಲಿ 'ನಚಿಕೇತೋಪಾಖ್ಯಾನ' ಎಂಬ ಹರಿಕಥೆಯನ್ನೂ ಸಹ ಶ್ರೀಗಳ ಸನ್ನಿಧಿಯಲ್ಲಿ ಹೇಳಿತೋರಿಸಿದೆ.

ಹೀಗೆಯೇ ಮುಂದೆ 1952ರವರೆಗೂ ಕಾರ್ಯಾಲಯದ ಪರಿಚಯ ಬೆಳೆಯುತ್ತಲೇ ಹೋಯಿತು. ಆಗ ನಾನು ಪಂಚದಶಿಯನ್ನು ಚೆನ್ನಾಗಿ ಅಭ್ಯಸಿಸಿ 1571 ಶ್ಲೋಕಗಳನ್ನು ಕಂಠಪಾಠಮಾಡಿದ್ದೆನಲ್ಲದೆ ಜೊತೆಗೆ ಗೀತೆ, ವಿವೇಕ ಚೂಡಾಮಣಿ–ಮುಂತಾದ ಕೆಲವು ಗ್ರಂಥಗಳನ್ನೂ ಲಘುಯೋಗವಾಸಿಷ್ಠಾದಿಗಳನ್ನೂ ಚೆನ್ನಾಗಿ ಪರಿಶೀಲಿಸಿದ್ದೆನು. ಅಲ್ಪಸ್ವಲ್ಪ ಶಾಂಕರಭಾಷ್ಯವನ್ನೂ ನೋಡಿದ್ದೆ. ಈ ಸಂಗ್ರಹದಿಂದ ಉಪನ್ಯಾಸ ಮಾಡುತ್ತಿದ್ದೆನಲ್ಲದೆ ನನ್ನ ಸ್ವಂತಬುದ್ಧಿಯನ್ನುಪಯೋಗಿಸಿ ನಚಿಕೇತ, ಚೂಡಾಲಾ, ಯಾಜ್ಞವಲ್ಕ್ಯ ಮೈತ್ರೇಯಿ–ಮುಂತಾದ ಹರಿಕಥಾರೂಪದ ವೇದಾಂತಕೀರ್ತನೆಗಳನ್ನೂ ಅದ್ಭುತವಾಗಿ ನಡೆಸಿ ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ

ಒಳ್ಳೆಯ ಹೆಸರನ್ನು ಗಳಿಸಿದ್ದೆ. ಇದೆಲ್ಲಕ್ಕೂ ಮೂಲ ಪ್ರೇರಕಶಕ್ತಿಯೆಂದರೆ ನಮ್ಮ ಪರಮಪೂಜ್ಯಗುರುಗಳಾದ ಶ್ರೀ|| ಅಗ್ನಿಹೋತ್ರಿಮಾಸ್ತರರೇ ಆಗಿದ್ದರು.

1953ರ ಡಿಸೆಂಬರ್ ತಿಂಗಳಿನ ಸಮಯಕ್ಕೆ ನನ್ನ ಜೀವನವೇ ವೇದಾಂತೋಪನ್ಯಾಸದಿಂದ ನಡೆಯಬೇಕೆಂಬಂತೆ ದೈವಗತಿಯು ನನ್ನ ಪರಿಸ್ಥಿತಿಯನ್ನು ನಿರ್ಮಿಸಿತು. ಆಗ ದಾವಣಗೆರೆಯ ಶ್ರೀಶಿವಾನಂದತೀರ್ಥಗುರು ಅಧ್ಯಾತ್ಮಮಂದಿರದಲ್ಲಿ ವಾಸಮಾಡಿ ನಿತ್ಯವೂ ಬೆಳಿಗ್ಗೆ ಪಂಚದಶಿ, ಸಾಯಂಕಾಲ ಭಾಗವತ ಏಕಾದಶಸ್ಕಂಧದ ಹರಿಕಥೆಗಳನ್ನು ನಡೆಸುತ್ತಾ ಕಾಲಹಾಕುತ್ತಿದ್ದೆ.

ಈ ಮಧ್ಯೆ 1951ರಲ್ಲಿ ಶ್ರೀಗಳು ಬಾಗಲಕೋಟೆಯ ಹತ್ತಿರ ಇಲಕಲ್ಲಿಗೆ ಹೋಗುವಾಗ ದಾವಣಗೆರೆಯಿಂದ ನಾನೇ ಗದುಗಿನಲ್ಲಿಯ ನಮ್ಮ ಮನೆಗೆ ಕರೆದುಕೊಂಡು ಹೋಗಿದ್ದೆ. ಶ್ರೀಗಳು ಇಲಕಲ್ಲದಿಂದ ಬಂದ ಮೇಲೆ ಹೊಸಪೇಟೆಗೂ ಹೋಗಿ ಬಂದಿದ್ದರು. ಅವರು 1953ರಲ್ಲಿ ಹುಬ್ಬಳ್ಳಿಯಲ್ಲಿ ಚಾತುರ್ಮಾಸ್ಯ ನಡೆಸಿದಾಗ ನಾನು ಬಹುಮಟ್ಟಿಗೆ ಆ ಉಪನ್ಯಾಸಗಳಿಗೆ ಹಾಜರಾಗುತ್ತಿದ್ದೆನು. ನಮ್ಮ ಗುರುಗಳಾದ ಶ್ರೀ|| ಅಗ್ನಿಹೋತ್ರಿಮಾಸ್ತರರೂ ಸಹ ಆಗ ನಿತ್ಯವೂ ಶ್ರೀಗಳ ಉಪನ್ಯಾಸಕ್ಕೆ ಹೋಗುತ್ತಿದ್ದರು. ಹೀಗಿದ್ದರೂ ಶ್ರೀಗಳ ಬೋಧೆಯ ವೈಶಿಷ್ಟ್ಯವೇನೆಂಬುದು ಸ್ಪಷ್ಟವಾಗಿ ನಮಗಾರಿಗೂ ಗೊತ್ತಾಗಲೇ ಇಲ್ಲ.

ಹುಬ್ಬಳ್ಳಿಯ ಚಾತುರ್ಮಾಸ್ಯಸಂಕಲ್ಪವು ಮುಗಿದಾಗ ಶ್ರೀಗಳು ಹೊಳೆನರಸೀಪುರಕ್ಕೆ ಹೋಗುವ ದಾರಿಯಲ್ಲಿ ರಾಣೇಬೆನ್ನೂರಿಗೆ ಒಪ್ಪತ್ತು ಇಳಿಯಲು ನಾನೇ ಯೋಚಿಸಿ ಹುಬ್ಬಳ್ಳಿಯಿಂದ ಸೆಕೆಂಡ್‌ಕ್ಲಾಸಿನಲ್ಲಿ ನಾನೂ ಶ್ರೀಗಳ ಜೊತೆಯಲ್ಲೇ ಪ್ರವಾಸ ಮಾಡಿದೆ. ಆಗ ಶ್ರೀಗಳು 'ಪಂಚದಶಿಯಲ್ಲಿ ಆತ್ಮಜ್ಞಾನಕ್ಕೆ ನಿರ್ವಿಕಲ್ಪ ಸಮಾಧಿಯು ಅವಶ್ಯವೆಂದು ಹೇಳಿದೆಯೆ?' ಎಂದು ನನ್ನನ್ನು ಕುರಿತು ಕೇಳಿದರು. ನಾನು ತೃಪ್ತಿದೀಪಪ್ರಕರಣದಲ್ಲಿಯ ಈ ವಿಚಾರವನ್ನು ಕುರಿತು 'ಯತ್ರ ತ್ವಸ್ಯ' ಎಂಬ ಶ್ರುತಿಯೊಂದಿಗೆ ವಿವರಿಸಿ ಹೇಳಿ, ಆತ್ಮಜ್ಞಾನಕ್ಕೂ ನಿರ್ವಿಕಲ್ಪ ಸಮಾಧಿಗೂ ಸಂಬಂಧವಿಲ್ಲ ಎಂದು ಹೇಳಿದೆ. ಅಷ್ಟರಲ್ಲಿ ರೈಲು ರಾಣೇಬೆನ್ನೂರು ನಿಲ್ದಾಣಕ್ಕೆ ಬಂದಿತು. ಅದೇ ಸಂಜೆ ರಾಣೇಬೆನ್ನೂರಿನ ಶ್ರೀ||ಗುಡ್ಡೇರಾವ್ ಸಾಡಿಗೇರರ ಮನೆಯಲ್ಲಿ ಶ್ರೀಗಳು ಉಪನ್ಯಾಸ ಮಾಡುವಾಗ 'ಯತ್ರ ತ್ವಸ್ಯ' ಎಂಬ ಮಂತ್ರವನ್ನೇ ಭಾಷ್ಯಾಭಿಪ್ರಾಯದೊಂದಿಗೆ ವಿವೇಚಿಸಿದರು. ನಾನು ಹೇಳಿದ್ದಕ್ಕೂ ಶ್ರೀಗಳು ವಿವೇಚಿಸಿದ್ದಕ್ಕೂ ಮಹದಂತರವಾಯಿತು. ಈ ಶ್ರುತಿಯು ಸುಷುಪ್ತಿ"ವಿದೇಹಕೈವಲ್ಯವನ್ನು ಕುರಿತು ಹೇಳುತ್ತದೆ"–ಎಂದು ನಾನು ಹೇಳಿದ್ದೆ. ಆದರೆ ಶ್ರೀಗಳು ತಮ್ಮ ಉಪನ್ಯಾಸದಲ್ಲಿ ಇದು ಜ್ಞಾನನಿಷ್ಠೆಯನ್ನೇ ಹೇಳುವದಕ್ಕೆ ಬಂದಿದೆ–ಎಂಬುದನ್ನು ಸಕ್ಕರೆಯ ಅಚ್ಚಿನ ದೃಷ್ಟಾಂತವನ್ನು ಕೊಟ್ಟು ತಿಳಿಸಿದ್ದರು. ನಾನು

ಶ್ರೀಗಳಿಗೆ ಆಗಲೇ 'ನನ್ನ ಸಂತೋಷವನ್ನು ವ್ಯಕ್ತಪಡಿಸಿ ತಾವು ನಿರೂಪಿಸಿದ್ದು ನಾನು ತಿಳಿಸಿದ್ದಕ್ಕಿಂತಲೂ ಹೆಚ್ಚಿನ ತರಗತಿಯದಾಗಿದೆ. ಈ ಶ್ರುತಿಯ ಬಗ್ಗೆ ನನಗೊಂದು ಹೊಸ ಬೆಳಕು ಸಿಕ್ಕಂತಾಯಿತು'–ಎಂದು ಹೇಳಿಯೇಬಿಟ್ಟೆ.

ಶ್ರೀಗಳ ಹುಬ್ಬಳ್ಳಿಯ ಚಾತುರ್ಮಾಸ್ಯದ ಉಪನ್ಯಾಸಗಳು ಪತ್ರಿಕೆಯಲ್ಲಿ ಬರಲು ಆರಂಭವಾಗಿದ್ದವು. ಅವುಗಳಲ್ಲಿಯ 1954ನೆಯ ಜೂನ್ ಸಂಚಿಕೆಯಲ್ಲಿ ಈಗ ವೇದಾಂತವನ್ನು ಹೇಳುವ ಪದ್ಧತಿಯು ಹೀಗಿದೆ ಎಂಬು ಮೊದಲಾಗಿ ಸಾಧಾರಣ ಪಂಚದಶಿಯ ಒಂದನೆಯ ಅಧ್ಯಾಯ 1 ರಿಂದ 30 ಶ್ಲೋಕಗಳವರೆಗಿನ ಅಭಿಪ್ರಾಯವನ್ನು ಭಾಷಾಂತರಿಸಿದಂತಿದ್ದ ವಾಕ್ಯಗಳನ್ನು ಉದಾಹರಿಸಿ 'ಈ ಅಭಿಪ್ರಾಯಗಳು ಶ್ರುತಿ, ಯುಕ್ತಿ ಅನುಭವ, ಭಾಷ್ಯಗಳಿಗೆ ವಿರೋಧವಾಗಿವೆ' ಎಂದು ಬರೆದಿತ್ತು, ಇದನ್ನು ನಮ್ಮ ಗುರುಗಳಾದ ಶ್ರೀ|| ಅಗ್ನಿಹೋತ್ರಿ ಮಾಸ್ತರರು (ಆಗ ಅವರು ಹೊಂಬಳದಲ್ಲಿದ್ದರು) ನೋಡಿ ನನಗೊಂದು ಪತ್ರ ಬರೆದು 'ಶ್ರೀಗಳು ಪಂಚದಶಿಯನ್ನು ಖಂಡಿಸಿದ್ದಾರೆ, ಇದು ಯೋಗ್ಯವಲ್ಲ' ಎಂದು ತಿಳಿಸಿದ್ದರು. ನಾನೂ ಅದನ್ನು ನೋಡಿ ಬೆರಗಾದೆ. ಅಷ್ಟರಲ್ಲಿ ಶ್ರೀ|| ಅಗ್ನಿಹೋತ್ರಿ ಮಾಸ್ತರರು ರಾಣೇಬೆನ್ನೂರಿಗೆ ಬಂದಿದ್ದರು. ನಾನು ಅಲ್ಲಿಗೆ ಹೋಗುವದರೊಳಗಾಗಿ ಶ್ರೀ ನಾರಾಯಣಗಿರಿ ದೀಕ್ಷಿತರ ಮನೆಯಲ್ಲಿ ಸಾಧಾರಣ ಸಭೆ ಸೇರಿ 'ಪಂಚದಶಿಯನ್ನು ಖಂಡಿಸಿದ್ದು ತಪ್ಪು' ಎಂದು ನಿರ್ಣಯಿಸಿ ಶ್ರೀಗಳಿಗೊಂದು ಮನವಿಯನ್ನು ಸಿದ್ಧಗೊಳಿಸಲಾಗಿತ್ತು. ಅನೇಕರ ರುಜುಗಳನ್ನು ಪಡೆದು ಅದನ್ನು ಕಾರ್ಯಾಲಯಕ್ಕೆ ದಾವಣಗೆರೆಯಿಂದ ಕಳುಹಿಸಲಾಯಿತು.

ಶ್ರೀಗಳಿಂದ ಅದಕ್ಕೆ ಒಂದು ವಿಸ್ತೃತ ಉತ್ತರ ಬಂದಿತು. ಆ ಉತ್ತರದಲ್ಲಿ "ನಾವು ಬರೆದ ಅಭಿಪ್ರಾಯಗಳು ಪಂಚದಶಿಯ ಭಾಷಾಂತರವಲ್ಲ, ಪಂಚದಶಿಗೆ ವಿವರಣವ್ಯಾಖ್ಯಾನವೂ ಅದಕ್ಕೆ ಪಂಚಪಾದಿಕಾವ್ಯಾಖ್ಯಾನವೂ ಮೂಲವಾಗಿವೆ. ನಾವೂ ಪಂಚಪಾದಿಕೆಯನ್ನೇ ಹಿಡಿದು ಖಂಡಿಸಿದ್ದೇವೆ" ಎಂದು ತಿಳಿಸಲಾಗಿತ್ತು, ಆದರೂ ನನಗಾಗಲಿ ನಮ್ಮ ಗುರುಗಳಿಗಾಗಲಿ ಆ ಉತ್ತರವು ಚೆನ್ನಾಗಿ ಅರ್ಥವಾಗಲಿಲ್ಲ; ಅದರಿಂದ ಸಮಾಧಾನವೂ ಆಗಲಿಲ್ಲ. ಹಾಗೆಂದು ಪುನಃ ಶ್ರೀಗಳಿಗೆ ನಾವೇ ಬರೆದು ತಿಳಿಸಿದೆವು. ಇಷ್ಟರಲ್ಲಿ ಮೊದಲನೆಯ ಮನವಿಯಲ್ಲಿ ರುಜುಹಾಕಿದವರ ಪೈಕಿ ಕೆಲವರಿಗೆ ಕಾರ್ಯಾಲಯದಿಂದ ಪತ್ರ ಬರೆದು 'ಈ ಕಾಗದಕ್ಕೆ ನೀವು ರುಜು ಹಾಕಿರುವಿರಲ್ಲವೆ? ಇದರಲ್ಲಿ ನಿಮಗೆ ಯಾವ ವಿಷಯದಲ್ಲಿ ಸಂದೇಹಬಂದಿದೆ?' ಎಂದು ವೈಯಕ್ತಿಕವಾಗಿ ಕಾರ್ಯಾಲಯದವರು ಕೇಳಿದ್ದರು. ಆ ಕಾಗದವನ್ನು ಕಂಡು ಕೆಲವರಿಗೆ 'ನಮಗೆ ಈ ಬಗ್ಗೆ ಏನೂ ತಿಳಿಯದು. ರುಜು ಹಾಕಿದ್ದಕ್ಕಾಗಿ ಕ್ಷಮಿಸಿ' ಎಂದು ಕಾರ್ಯಾಲಯಕ್ಕೆ

ಬರೆದುಕೊಂಡರು. ಈ ಸಮಾಚಾರ ಸಮೇತ ನಮಗೆ ಕಾರ್ಯಾಲಯದಿಂದ ಕಾಗದವು ಬಂದಾಗ ನಾನು ಹಾಗೂ ಶ್ರೀದೇಶಪಾಂಡೆ ನಾರಾಯಣರಾಯರು ಪ್ರತ್ಯೇಕ ಪತ್ರಗಳನ್ನು ಬರೆದು 'ಈ ಬಗ್ಗೆ ಪತ್ರವ್ಯವಹಾರ ನಿಲ್ಲಲಿ. ನಾವು ಶ್ರೀಗಳವರೊಂದಿಗೆ ಮಾತನಾಡಿ ನಿರ್ಣಯಿಸಿಕೊಳ್ಳುವೆವು. ನಮಗೆ ನಿಮ್ಮ ಉತ್ತರಗಳಿಂದ ಸಮಾಧಾನವಾಗಿಲ್ಲ. ಮಿಕ್ಕವರ ಬಗ್ಗೆ ನಾವು ಹೊಣೆಗಾರರಲ್ಲ' ಎಂದು ತಿಳಿಸಿ ಈ ಪತ್ರವ್ಯವಹಾರವನ್ನು ಪತ್ರಿಕೆಯಲ್ಲಿ ಹಾಕಬಾರದೆಂದು ಕೇಳಿಕೊಂಡೆವು. ನಮ್ಮಲ್ಲಿ ಕೆಲವರು ಕಾರ್ಯಾಲಯಕ್ಕೆ ಈ ಬಗ್ಗೆ ಯಾವ ಉತ್ತರವನ್ನೂ ಕೊಡಲೇ ಇಲ್ಲ. ಅಂತೂ ಈ ಗೊಂದಲವು ಅಷ್ಟಕ್ಕೇ ತಣ್ಣಗಾಯಿತು.

1954ನೆಯ ಡಿಸೆಂಬರ್ ತಿಂಗಳಲ್ಲಿ ಶ್ರೀಗಳು ದಿಗಂಬರ ಸಪ್ತಾಹಕ್ಕೆ ಹಾವೇರಿಗೆ ಹೋಗಲು ಮಧ್ಯೆ ದಾವಣಗೆರೆಯಲ್ಲಿ ಕ್ಯಾಂಪ್ ಮಾಡಿದರು. ಆಗ ನಾನೂ ಹಾಗೂ ನಮ್ಮ ಗುರುಗಳ ಪುತ್ರರಾದ ಶ್ರೀ||ಜಿ.ಎಸ್. ಅಗ್ನಿಹೋತ್ರಿಗಳೂ ಸೇರಿ ಶ್ರೀಗಳೊಂದಿಗೆ ಚರ್ಚಿಸಲು ಆರಂಭಮಾಡಿದೆವು. ಪಂಚದಶಿಯ ಒಂದನೆಯ ಪ್ರಕರಣದ ಮೊದಲಿನ 10 ಶ್ಲೋಕಗಳಿಗೆ ಅರ್ಥ, ತಾತ್ಪರ್ಯವನ್ನು ವಿವರಿಸುವಾಗಲೇ ಸಾರ್ವತ್ರಿಕಾನುಭವ, ಶ್ರುತಿ, ಅನುಭವಾನುಸಾರಿಯಾದ ಯುಕ್ತಿ, ಭಾಷ್ಯಾಭಿಪ್ರಾಯಗಳಿಗೆಲ್ಲ ವಿರೋಧವಿರುವದನ್ನು ಶ್ರೀಗಳು ಚೆನ್ನಾಗಿ ತೋರಿಸಿಕೊಟ್ಟರು. ಕೂಡಲೆ ನನಗಂತೂ ಹೊಸ ಕಣ್ಣು ಹೊಸ ಬೆಳಕು ದೊರಕಿದಂತಾಗಿ ಆತ್ಯಾಶ್ಚರ್ಯಭಾವವು ಮನದಲ್ಲಿ ಮೂಡಿ ನಾವು ತಿಳಿದುದಕ್ಕಿಂತಲೂ ಸತ್ಯವು ಬೇರೆಯಾಗಿಯೇ ಇದೆ, ನಾವು ತಪ್ಪು ದಾರಿಯನ್ನು ಹಿಡಿದಿದ್ದೇವೆ–ಎಂದು ಹೃದಯವೇ ಹೇಳಿದಂತಾಯಿತು. ಹೀಗೆಯೇ ಶ್ರೀಗಳು ತಿರುಗಿಬರುವಾಗಲೂ ನನಗೆ ಉಪದೇಶಿಸಿ ಮತ್ತೆಮತ್ತೆ ಕಣ್ತೆರೆಯಿಸಿದರು. ದೈವಯೋಗದಿಂದ ಬೇರೆಬೇರೆ ನಿಮಿತ್ತದಿಂದ ಎರಡುಮೂರುಸಲ ಅವರು ದಾವಣಗೆರೆಗೆ ಬಂದಾಗಲೂ ಕೇವಲ ನನಗಾಗಿಯೇ ಹೆಚ್ಚು ಕಾಲ ವಿನಿಯೋಗಿಸಿ ಪಂಚದಶಿಯ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಲೂ ಭಾಷ್ಯಾಭಿಪ್ರಾಯಗಳನ್ನು ವಿವರಿಸುತ್ತಲೂ ಬೋಧಿಸತೊಡಗಿದರು. ಕೊನೆಗೆ 1955ರಲ್ಲಿ ಚಾತುರ್ಮಾಸ್ಯವನ್ನು ದಾವಣಗೆರೆಯ ಶ್ರೀಶಿವಾನಂದತೀರ್ಥಗುರು ಅಧ್ಯಾತ್ಮ ಮಂದಿರದಲ್ಲಿಯೇ ಶ್ರೀಗಳು ನೆರವೇರಿಸಿದಾಗ ಮಾತ್ರ 'ನಾವು ಅನುಸರಿಸಿದ ವೇದಾಂತಮಾರ್ಗದಲ್ಲಿ ಸಿದ್ಧಾಂತವನ್ನು ವಿವರಿಸುವ ಪ್ರಕ್ರಿಯೆ ಹಾಗೂ ಸಾಧನೆಗಳ ಬಗೆಗಿದ್ದ ಭಾವನೆಗಳೆರಡೂ ಸಂಪೂರ್ಣ ತಪ್ಪಾಗಿದ್ದು ಬರಿಯ ಉತ್ತರಕ್ಕೆ ಮೇಲುಗೊಳಿಸುವ ಬಾಯಿಮಾತಿನ ವಿದ್ಯೆಯಾಗಿದೆ' ಎಂಬುದು ಚೆನ್ನಾಗಿ ಮನವರಿಕೆಯಾಯಿತು. ಆಗ ಶ್ರೀಗಳವರ ಚರಣಗಳಲ್ಲಿ ಶರಣಾಗತನಾಗಿ ನಿಲ್ಲಬೇಕಾಯಿತು.

# 14. ಪರಮಾರ್ಥದ ಪಥದಲ್ಲಿ –2

## (ಮೇ 1972)

"ಹಿಂದಿನ ಮನೆಯ ಭಿಕ್ಷೆ ಹೋಯಿತು; ಮುಂದಿನ ಮನೆಯ ಕೋರಾನ್ನ ಹೋಯಿತು'' ಎಂಬ ಗಾದೆಯಂತೆ ಹಿಂದೆ ಅಭ್ಯಾಸ ಮಾಡಿದ್ದು ತಪ್ಪೆಂದಾಯಿತು. ಮುಂದೆ ಶಾಂಕರಭಾಷ್ಯದ ಪ್ರಕ್ರಿಯೆ ಗೊತ್ತಿಲ್ಲ. ಈ ಸಂದಿಗ್ಧಸ್ಥಿತಿಯಲ್ಲಿ ಜೀವನೋಪಾಯಕ್ಕೆ ಬೇರೆ ಮಾರ್ಗವೇ ತೋಚದೆ ಕೆಲದಿನ ಹಾಗೆಯೇ ನೂಕಿದೆ. ಆದರೂ 1950ರಿಂದಲೇ ನನ್ನಲ್ಲಿ ಸುಪ್ತವಾಗಿ ಬೆಳೆಯುತ್ತಾಬಂದಿದ್ದ ಶ್ರೀದತ್ತಾತ್ರೇಯ ಸದ್ಗುರುವಿನ ಉಪಾಸನೆಯ ಆಧಾರ ಮಾತ್ರದಿಂದಲೇ ಧೈರ್ಯ ತಂದುಕೊಂಡು "ಶ್ರೀದತ್ತಭಗವಂತಾ! ಈಗ ನೀನೇ ಗತಿ. ಏನೇ ಕಷ್ಟ ಬರಲಿ, ಸತ್ಯಮಾತ್ರ ಸಿಕ್ಕಲಿ'' ಎಂದು ಅನನ್ಯ ಶರಣನಾಗಿ ಉಪಾಸ್ಯನನ್ನು ಪ್ರಾರ್ಥಿಸಿಕೊಂಡೆ.

1956ರಲ್ಲಿ ದಾವಣಗೆರೆಯ ಅಧ್ಯಾತ್ಮಮಂದಿರದ ಬಡಾವಣೆಯ ಕಾರ್ಯ ಆರಂಭವಾಗಿ ಮಂದಿರವನ್ನು ಬಿಡಬೇಕಾಯಿತು. ಅದೇ ಸಮಯಕ್ಕೆ ಬೆಂಗಳೂರಿನಿಂದ ಕರೆ ಬರಲು ಕುಟುಂಬ ಸಮೇತನಾಗಿ ತಾ|| 30–9–56ಕ್ಕೆ ಬೆಂಗಳೂರಿಗೆ ಹೋದೆ. ಅಲ್ಲಿ ವಿಶ್ವೇಶ್ವರಪುರದ 'ಪರಮಾರ್ಥವಿಚಾರಸಂಘ'ದ ಆಶ್ರಯದಲ್ಲಿ ಏಕಾದಶಸ್ಕಂಧ ಭಾಗವತವನ್ನು 9 ತಿಂಗಳಕಾಲ ನಡೆಸಿದೆ.

1957ನೆಯ ಮೇ ತಿಂಗಳಲ್ಲಿ ಬೆಂಗಳೂರು ಅಲಸೂರು ಪೇಟೆಯ ಶ್ರೀರಾಮಮಂದಿರದಲ್ಲಿ ಶಂಕರಸಪ್ತಾಹಕ್ಕಾಗಿ ಬಂದಿದ್ದ ಶ್ರೀಗಳನ್ನು ಕಂಡು "ನನಗೆ ಮುಂದೆ ಏನು ಗತಿ?'' ಎಂದು ಪ್ರಶ್ನಿಸಿದೆ. 'ನೀವು ಶಾಂಕರಭಾಷ್ಯವನ್ನೋದಿರಿ' ಎಂದರು. ತರ್ಕ, ವ್ಯಾಕರಣ, ಮೀಮಾಂಸೆಗಳ ಗಂಧವಿಲ್ಲದ, ಹೆಚ್ಚಿನ ಸಂಸ್ಕೃತಭಾಷಾಜ್ಞಾನವಿಲ್ಲದ ನಾನು ಭಾಷ್ಯವನ್ನು ಹೇಗೆ ಜೀರ್ಣಿಸಿಕೊಂಡೇನು? ಎಂಬ ಸಂಶಯವನ್ನು ವ್ಯಕ್ತಪಡಿಸಿದಾಗ ಶ್ರೀಗಳು ಈ ಮುಂದಿನ ರತ್ನದಂಥ ಮಾತುಗಳನ್ನು ಹೇಳಿದರು: "ಭಾಷ್ಯಾಭ್ಯಾಸಕ್ಕೆ ವ್ಯಾಕರಣಮೀಮಾಂಸಾದಿಗಳ ಜ್ಞಾನವು ಬೇಕೆಂಬುದೇನೋ ನಿಜವೇ. ಆದರೆ ಭಾಷ್ಯದಲ್ಲಿರುವ ಶ್ರೀಶಂಕರರ ವೇದಾಂತಪ್ರಕ್ರಿಯೆಯನ್ನರಿಯಲು ಮಾತ್ರ ಕೇವಲ ತರ್ಕಾದಿಶಾಸ್ತ್ರಗಳ ಆವಶ್ಯಕತೆ ಏನೂ ಇಲ್ಲ. ತತ್ತ್ವವು ಅನುಭವಗೋಚರವಾಗಿದೆ. ತತ್ತ್ವಕ್ಕೆ ಅನುಭವಾಂಗವಾದ ಶ್ರೌತತರ್ಕವೇ ಬೇಕಾಗಿದೆಯೇ ಹೊರತು ತರ್ಕಶಾಸ್ತ್ರ ವೆಂದು ಪ್ರಸಿದ್ಧವಾದ ಪ್ರಮಾಣತರ್ಕದ ಕೆಲಸವೇನೂ ಅಲ್ಲಿಲ್ಲ. ಮುಖ್ಯವಾಗಿ ಭಾಷ್ಯವು ಕೇವಲ ಪಂಡಿತರ ಸ್ವತ್ತಲ್ಲ. ನಿಜವಾದ ಮುಮುಕ್ಷುಗಳ ಸ್ವತ್ತಾಗಿದೆ. ಸಂಸ್ಕೃತದ ಜ್ಞಾನವು ಸಾಕಷ್ಟಿಲ್ಲದವರಿಗಾಗಿಯೇ ಕನ್ನಡದಲ್ಲಿ ನಾನು ಬರೆದಿಟ್ಟಿದ್ದೇನಲ್ಲದೆ ಇತರ ಗ್ರಂಥಗಳನ್ನೂ

ಸಹ ಭಾಷ್ಯದ ಅಭಿಪ್ರಾಯವನ್ನು ವಿವರಿಸಲು ಬರೆದಿದ್ದೇನೆ. ಅದೆಲ್ಲವನ್ನೂ ಇಟ್ಟುಕೊಂಡು ಅಭ್ಯಾಸ ಮಾಡಿರಿ. ಹಾಗೂ ಸಾಧ್ಯವಿದ್ದ ಮಟ್ಟಿಗೂ ಸಂಧ್ಯಾದಿಸತ್ಕರ್ಮಗಳನ್ನು ಮಾಡುವದು, ಭಗವನ್ನಾಮಸ್ಮರಣೆ, ಸರ್ವಾರ್ಪಣೆ–ಮುಂತಾದವುಗಳಿಂದ ಭಗವದ್ಭಾವನೆಯನ್ನು ಬೆಳೆಸಿಕೊಳ್ಳುವದು, ಆ ಭಗವಂತನೇ ನಮ್ಮ ಆತ್ಮನಾಗಿರುವದರಿಂದ ಆತ್ಮವಿಚಾರವಿವೇಕಾದಿಗಳನ್ನೂ ಮಾಡುತ್ತಿರುವದು–ಹೀಗೆ ಸಾಧನೆಗಳನ್ನೂ ಸಿದ್ಧಾಂತವನ್ನೂ ಸಮರಸಗೊಳಿಸಿ ಜೀವನಕ್ಕಿಳಿಸಿಕೊಳ್ಳಲು ಯತ್ನಿಸಬೇಕು.''

ಕರ್ಮ–ಉಪಾಸನೆಗಳನ್ನು ತೆಗಳುವದೇ ವೇದಾಂತವೆಂದುಕೊಂಡು, ಕರ್ಮಗಳು ಬೇಡವೆನ್ನುವದಕ್ಕೆ ಭಾಷ್ಯವಾಕ್ಯಗಳ ಆಧಾರವನ್ನು ಬಳಸಿಕೊಂಡು 'ಅಹಂ ಬ್ರಹ್ಮಾಸ್ಮಿ' ಎಂದು ಹೇಳುತ್ತಾ ಈವರೆಗೆ ನಾನು ಜ್ಞಾನಿ ಎಂಬ ಅಹಂಕಾರದಿಂದ ಮನಬಂದಂತೆ ವರ್ತಿಸುತ್ತಿದ್ದ ನನಗೆ ಇವರ ಉಪದೇಶದಂತೆ ನಡೆಯಲು ಕಷ್ಟವೆನಿಸಿತಾದರೂ ತತ್ತ್ವವಿಚಾರದಲ್ಲಿಯೇ ನನ್ನನ್ನು ಪೂರ್ಣವಾಗಿ ಜಯಿಸಿದ್ದರಿಂದ ಮನಸ್ಸು ತುಟಿಪಿಟಕ್ಕೆನ್ನದೆ ಅವರ ಉಪದೇಶವನ್ನು ಹೃದಯದಲ್ಲಿಟ್ಟು ಸಾಧನೆಗೆ ತೊಡಗಲು ಒಪ್ಪಿಕೊಂಡಿತು. ಅಂದಿನಿಂದ ಕ್ರಮೇಣ ಜೀವನಕ್ರಮವನ್ನು ಮಾರ್ಪಡಿಸಿ ಕೊಳ್ಳಲು ಯತ್ನಿಸತೊಡಗಿದೆ. ಶ್ರೀಗಳವರಿಂದ ರಚಿತವಾದ ಎಲ್ಲಾ ಗ್ರಂಥಗಳನ್ನೂ ಪರಮಾರ್ಥಸಂಘದ ಅಧ್ಯಕ್ಷರಾದ ಶ್ರೀ॥ದೇವತಾ ಶ್ರೀರಾಮಯ್ಯನವರು ಕೂಡಲೇ ನನಗಾಗಿ ಕೊಡಿಸಿದರು. ಮುಂದೆ ಭಗವದ್ಗೀತಾಭಾಷ್ಯವನ್ನೇ ನಿತ್ಯವೂ ಶ್ರವಣಕ್ಕೆ ಇಟ್ಟುಕೊಂಡು ಭಾಷ್ಯಾಭ್ಯಾಸಕ್ಕೆ ಮೊದಲು ಮಾಡಿದೆ. ಮುಂದೆ ಒಂದು ಶಂಕರ ಸಪ್ತಾಹದ ಸಮಯಕ್ಕೆ ಹೊಳೆನರಸೀಪುರಕ್ಕೆ ಹೋದಾಗ ಶ್ರೀಗಳೇ ಶಾಂತಿಪಾಠ ಹಾಕಿ ಸೂತ್ರಭಾಷ್ಯವನ್ನು ಆರಂಭಿಸಿ ಭಾಷ್ಯವೆಲ್ಲವೂ ತಿಳಿಯುವಂತೆ ಅನುಗ್ರಹಿಸಿದರು.

ಏಕಲವ್ಯನ ಕಥೆಯನ್ನು ಆದರ್ಶವಾಗಿಟ್ಟುಕೊಂಡು ನಾನು ಭಾಷ್ಯಾಭ್ಯಾಸಕ್ಕೆ ತೊಡಗಿದಾಗ, ಶ್ರೀಗಳ ಬರಹವನ್ನೋದುವಾಗ ಆ ಅಕ್ಷರಗಳ ಜೊತೆಗೆ ಅವರ ಧ್ವನಿಯೂ ಸಹ ನನ್ನ ಕಿವಿಗೆ ಕೇಳಿಸಿದಂತಾಗಿ ಅದು ಪುಸ್ತಕಾಭ್ಯಾಸವೆನಿಸದೆ ಪ್ರತ್ಯಕ್ಷಬೋಧೆ ಎಂದೇ ಅನಿಸುತ್ತಿತ್ತು. ಶ್ರೀಗಳವರ ಬರಹವು ಬರಿಯ ಪುಸ್ತಕವಲ್ಲ. ಅದರಲ್ಲಿ ಅವರ ಶಕ್ತಿ ಸರ್ವಸ್ವವೂ ಸೇರಿ, ಅದು ಜೀವಂತಸಾಹಿತ್ಯವೆನಿಸಿರುವದನ್ನು ನಾನು ಸ್ವತಃ ಮನಗಂಡಿರುವೆ.

1961ರಲ್ಲಿ ಭಾಷ್ಯಪ್ರಕ್ರಿಯೆಯ ಬಗ್ಗೆ ಒಂದು ನಿಶ್ಚಿತ ಅಭಿಪ್ರಾಯವು ನನ್ನಲ್ಲಿ ಮೂಡಿತು. ಅದರ ಗುರುತಾಗಿ 'ಭಗವದ್ಗೀತಾಲಾವಣಿ ಹಾಗೂ ಸಮೀಕ್ಷಣೆ' ಎಂಬ ಗ್ರಂಥವನ್ನು ಶ್ರೀಗಳಿಗೆ ಅರ್ಪಿಸಿ ಹೊರತಂದೆ. ಅನಂತರ 'ಅಧ್ಯಾತ್ಮಯೋಗ', ಶ್ರೀದತ್ತನಾಮಾಮೃತ ಹಾಗೂ ಉಪಾಸನೆ' ಮುಂತಾದ ಗ್ರಂಥಗಳನ್ನು ಬರೆದು ನನಗುಂಟಾದ ತಿಳಿವಳಿಕೆಯನ್ನು ವ್ಯಕ್ತಪಡಿಸಿದೆ.

1963ರಲ್ಲಿ (ತಾ|| 31–10–63ರಿಂದ ತಾ|| 8–12–63ರವರೆಗೆ) ಶ್ರೀಶ್ರೀಗಳೊಡನೆ ಆಂಧ್ರಪ್ರದೇಶದ ಪ್ರವಾಸಮಾಡಿದ್ದರ ಫಲವಾಗಿ ಶ್ರೀಗಳು ಸಾಕ್ಷಾತ್ ಶ್ರೀದತ್ತಾತ್ರೇಯಸ್ವರೂಪರೇ ಎಂಬ ಶ್ರದ್ಧೆ ದೃಢವಾಗಿ ಬೆಳೆದು ಅವರ ಬಗ್ಗೆ ಗುರುಭಾವನೆ, ಭಕ್ತಿಶ್ರದ್ಧೆಗಳು ಇನ್ನೂ ಹೆಚ್ಚಾದವು.*

ಶ್ರೀಗಳಿಂದ ಮತ್ತು ಅವರ ಗ್ರಂಥಗಳಿಂದ ತಿಳಿದ ವಿಷಯಗಳನ್ನೆಲ್ಲಾ ಒಕ್ಕಡೆ ಸೇರಿಸಿ ಗ್ರಂಥವೊಂದನ್ನು ಬರೆಯುವ ಯೋಚನೆಯು 1966ರಲ್ಲಿ ಕೈಗೂಡಿ 'ಶಂಕರದರ್ಶನ' (ಬ್ರಹ್ಮಜ್ಞ ವಚನಗಳು) ಎಂಬ 2136 ಶ್ಲೋಕಗಳನ್ನೊಳಗೊಂಡ ಗ್ರಂಥವನ್ನು ಕಾರ್ಯಾಲಯಕ್ಕರ್ಪಿಸಿದಾಗ ಒಂದು ವಿಧವಾದ ತೃಪ್ತಿಯ ಭಾವವುಂಟಾಯಿತು. ಅದು ಪತ್ರಿಕೆಯಲ್ಲಿ ಕ್ರಮವಾಗಿ ಪ್ರಕಟವಾಗಿದೆ. ಇಲ್ಲಿಗೆ ನಾನು ಶ್ರೀಗಳವರ ಹಾಗೂ ಕಾರ್ಯಾಲಯದ ಸೇವಕವರ್ಗದಲ್ಲಿ ಸೇರಿಕೊಂಡಂತಾಯಿತು.

ಭಗವಂತನು ಸ್ವತಃ ನಿರ್ಗುಣನಿರಾಕಾರನಾಗಿದ್ದರೂ ಭಕ್ತರನ್ನು ಉದ್ಧರಿಸಲು ಸಗುಣಸಾಕಾರವಾಗಿ ತೋರಬಲ್ಲ ಮಹಿಮೆಯುಳ್ಳವನಾಗಿದ್ದಾನೆ. ಆತನ ಸಗುಣ ರೂಪವನ್ನು ಭಜಿಸುವವರಿಗೆ ಆ ರೂಪದಿಂದಲೇ ದರ್ಶನವೀಯುವನಲ್ಲದೆ ತನ್ನ ನಿಜ ಸ್ವರೂಪವಾದ ನಿರ್ಗುಣಸ್ವರೂಪದಲ್ಲಿ ಸೇರಿ ಒಂದಾಗುವ ಬ್ರಹ್ಮವಿದ್ಯೆಯನ್ನೂ ಭಕ್ತರಿಗೆ ಅನುಗ್ರಹಿಸುವನೆಂಬುದು ಜ್ಞಾನಿಗಳ ಅಭಿಪ್ರಾಯ. ಸತ್ಪುರುಷರೂ ಭಗವಂತನೂ ಬೇರೆಯಲ್ಲವಾದ್ದರಿಂದ ಅವರಲ್ಲಿಯೂ ಈ ಅನುಗ್ರಹಸಾಮರ್ಥ್ಯ ಉಂಟೆಂಬುದನ್ನು ಶ್ರೀಗಳ ವಿಷಯದಲ್ಲಿ ನನಗುಂಟಾದ ಎರಡು ವೈಯಕ್ತಿಕಾನುಭವಗಳಿಂದ ಕಂಡುಕೊಂಡೆ. ಅವುಗಳನ್ನು ಸಾಧ್ಯವಿದ್ದಷ್ಟು ಸಂಕ್ಷಿಪ್ತವಾಗಿ ಇಲ್ಲಿ ಹೇಳಲು ಪ್ರಯತ್ನಿಸುತ್ತೇನೆ.

# 15. ಪರಮಾರ್ಥದ ಪಥದಲ್ಲಿ –3

## (ಜೂನ್ 1972)

29–9–66ರಿಂದ 20–1–67 ರವೆಗೆ ನಡೆದ ವಿಶ್ವಭಾರತ ಪ್ರವಾಸದಲ್ಲಿ 27–10–66ರಿಂದ 20–11–66ರವರೆಗೆ ಮಾತ್ರ–ಅಂದರೆ ಹುಬ್ಬಳ್ಳಿಯಿಂದ ಬೊಂಬಾಯಿ ತನಕ–ನಾನು ಶ್ರೀಗಳವರೊಂದಿಗಿದ್ದೆ. 5–11–66ಕ್ಕೆ ಶ್ರೀ ಕ್ಷೇತ್ರ ಗಾಣಗಾಪುರದಲ್ಲಿ ಸಂಗಮಸ್ನಾನಕ್ಕೆ ಹೋಗಿದ್ದೆವು. ಅಲ್ಲಿ ಶ್ರೀದತ್ತಾತ್ರೇಯ ಸದ್ಗುರುವು ಶ್ರೀ ನರಸಿಂಹಸರಸ್ವತಿಯತಿರೂಪದಿಂದ ಈಗಲೂ ಭಕ್ತರಿಗೆ ದರ್ಶನವನ್ನು

---

* 'ಅಧ್ಯಾತ್ಮ ಪ್ರಕಾಶ' ಮಾಸಪತ್ರಿಕೆಯ 1964ನೆಯ ಜನವರಿಯಿಂದ ಡಿಸೆಂಬರ್‌ವರೆಗಿನ ಸಂಚಿಕೆಗಳಲ್ಲಿ ಆಂಧ್ರಪ್ರವಾಸದ ಸವಿಸ್ತಾರವಾದ ವರದಿಯನ್ನು ನೋಡಬಹುದು.

ನೀಡುತ್ತಾನೆಂದು ಶ್ರೀಗುರುಚರಿತ್ರೆಯು ತಿಳಿಸುತ್ತದೆ. ಅನೇಕ ಭಕ್ತರಿಗೆ ಇದರ ಅನುಭವವೂ ಬಂದಿದೆ. ನನಗೆ ಮಾತ್ರ ಈವರೆಗೂ ಅಂಥ ಅನುಭವವು ಬಂದಿರಲಿಲ್ಲ. ಅಂದು ಸಂಗಮದಲ್ಲಿ ಪೂಜೆಯ ಅನಂತರ ನಾನು ಪ್ರದಕ್ಷಿಣೆ ಹಾಕುತ್ತಿದ್ದೆ. ಬ್ರ॥ಶ್ರೀ॥ ಎಸ್.ವಿಠಲಶಾಸ್ತ್ರಿಗಳು ಗರ್ಭಗುಡಿಯಲ್ಲಿ ಶ್ರೀಪಾದಗಳನ್ನು ಪೂಜಿಸುತ್ತಿರುವಾಗ ಶ್ರೀಗಳೂ ಒಳಗೇ ಇದ್ದರು. ಮಂಗಳಾರತಿಯಾಗುತ್ತಿದ್ದಾಗ ನಾನು ಪ್ರದಕ್ಷಿಣೆಯನ್ನು ಮುಗಿಸಿ ಶ್ರೀದತ್ತನನ್ನೇ ಧ್ಯಾನಿಸುತ್ತಾ ಭಾವಪೂರಿತನಾಗಿ ನಿಂತಿದ್ದೆ. ಗರ್ಭಗುಡಿಯಿಂದ ಶ್ರೀಗಳು ಹೊರಬಂದಾಗ ಸಾಷ್ಟಾಂಗ ನಮಸ್ಕಾರ ಹಾಕಿ ಎದ್ದು ನಿಂತಿರಲು ಶ್ರೀಗಳ ಬದಲು ಸಾಕ್ಷಾತ್ ನರಸಿಂಹಸರಸ್ವತಿಗಳೇ ಎದುರಿನಲ್ಲಿದ್ದುದನ್ನು ಕಣ್ಣಾರೆ ಕಂಡು ಪುನಃ ಸಾಷ್ಟಾಂಗ ನಮಸ್ಕಾರ ಮಾಡಿ ಆನಂದದಿಂದ ಕಣ್ಣೀರು ಸುರಿಸಿ ''ಭಗವಂತಾ, ಈ ಪಾಮರನಿಗೆ ಸಗುಣದರ್ಶನವಿತ್ತೆಯಲ್ಲ!'' ಎಂದು ಗದ್ಗದಿತಕಂಠನಾಗಿ ನುಡಿಯುತ್ತಿರಲು ಆ ನರಹರಿರೂಪವು ಅದೃಶ್ಯವಾಗಿ ಪುನಃ ಶ್ರೀಗಳೇ ಕಾಣಿಸಿಕೊಂಡರು. ಆಗ ಶ್ರೀಗಳು 'ಇನ್ನು ಕೆಳಗಿಳಿಯಬಹುದೆ?' ಎಂದು ಕೇಳಿದರು. ನನಗಂತೂ ರೋಮಾಂಚನದಿಂದ ಮಾತೇ ಬಾರದಾಯಿತು. ಶಾಸ್ತ್ರಿಗಳು, ಶ್ರೀಮತಿ ಲಕ್ಷ್ಮಮ್ಮ ಗುಪ್ತಾದಂಪತಿಗಳು ಈ ವಿಚಿತ್ರವನ್ನ ಎವೆಯಿಕ್ಕದೆ ನೋಡುತ್ತಿದ್ದರು. ಅಂತೂ ಶ್ರೀಗಳು ಶ್ರೀದತ್ತಸ್ವರೂಪರೇ ಎಂದು ನಂಬಿದ್ದಕ್ಕೆ ಶ್ರೀದತ್ತಕ್ಷೇತ್ರದಲ್ಲಿ ಈ ಸಗುಣಸಾಕ್ಷಾತ್ಕಾರವನ್ನನುಗ್ರಹಿಸಿದ್ದರಿಂದ ಅವರಲ್ಲಿಯ ಭಕ್ತಿಯು ಇಮ್ಮಡಿಸುವ ಭಾಗ್ಯ ನನಗೆ ದೊರಕಿತು. ಇದು ಸಗುಣರೂಪದರ್ಶನವಾದರೆ ನಿರ್ಗುಣದಲ್ಲಿ ಸೇರಿ ಹೋದ ಅನುಭವವೊಂದನ್ನು ಈಗ ತಿಳಿಸಿ ಶ್ರೀಗಳ ಮಹಿಮಾವರ್ಣನೆಯನ್ನು ಮುಗಿಸುತ್ತೇನೆ.

ತಾ॥ 20–11–66ನೆಯ ದಿನ ಬೊಂಬಾಯಿಯಲ್ಲಿ ಶ್ರೀಗಳಿಂದ ಅಪ್ಪಣೆ ಪಡೆದು ಬೆಂಗಳೂರಿಗೆ ಹಿಂದಿರುಗುವದನ್ನು ನಿಶ್ಚಯಿಸಿದೆ. ಬೊಂಬಾಯಿಯ ಭಕ್ತಮಂಡಳಿಯವರ ಒತ್ತಾಯದ ಮೇರೆಗೆ ತಾ॥ 21ಕ್ಕೆ ವರಳಿಯಲ್ಲಿ ರಾತ್ರಿ ಉಪನ್ಯಾಸ ಮಾಡಿ ತಾ॥ 22ಕ್ಕೆ ಬೊಂಬಾಯಿಯಿಂದ ಬೆಳಿಗ್ಗೆ 7–30ಕ್ಕೆ ಹೊರಟೆ. ಪೂನಾದಲ್ಲಿ ರೈಲು ಬದಲಾಯಿಸಿ ಬೆಂಗಳೂರು ಎಕ್ಸ್‌ಪ್ರೆಸ್ಸಿನಲ್ಲಿ ಕುಳಿತೆ. ಪ್ರವಾಸಕಾಲದಲ್ಲಿ ಬರಿಯ ಹರಟೆ ವೃತ್ತ ಪತ್ರಾದಿಗಳಿಂದ ಕಾಲ ಕಳೆಯುವ ಬದಲು ನಾಮಸ್ಮರಣೆ, ಮಾನಸಪೂಜೆ, ಗ್ರಂಥಾವಲೋಕನ–ಇವುಗಳಲ್ಲಿ ಕಾಲ ಕಳೆದರೆ ಅಧ್ಯಾತ್ಮಸಾಧನೆಯೂ ಆಯಿತು, ಪ್ರವಾಸವೂ ಬೇಜಾರಾಗದು–ಎಂದು ಒಂದು ಸಲ ಶ್ರೀಗಳು ಅಪ್ಪಣೆ ಕೊಡಿಸಿದ್ದನ್ನು ಸಾಮಾನ್ಯವಾಗಿ ಪ್ರವಾಸ ಮಾಡುವಾಗಲೆಲ್ಲಾ ಅನುಸರಿಸಲು ಯತ್ನಿಸುತ್ತಿದ್ದೇನೆ. ಆ ದಿನವೂ ಪೂನಾದಿಂದ ಹೊರಟಾಗ ಸ್ವಲ್ಪ ವೇಳೆ ಮಲಗಿ ನಿದ್ರಿಸಿ ಮಧ್ಯಾಹ್ನ 4 ಘಂಟೆಗೆ ಎದ್ದು ಮುಖ ತೊಳೆದು ನಾಮಸ್ಮರಣೆಗೆ ಮೊದಲು ಮಾಡಿದೆ. ಅನಂತರ ಶ್ರೀಕ್ಷೇತ್ರ

ನರಸೋಬವಾಡಿಯ ಪಾದುಕೆಗಳಿಗೆ ಮಾನಸಪೂಜೆ ಆರಂಭಿಸಿದೆ. ಶ್ರೀಗಳು ಗಾಣಗಾಪುರದಲ್ಲಿ ಶ್ರೀನರಸಿಂಹಸರಸ್ವತಿಗಳ ರೂಪದಿಂದ ದರ್ಶನವಿತ್ತುದನ್ನು ನೆನೆನೆನೆದು ಹರ್ಷಪುಲಕಿತನಾಗುತ್ತಾ ಶ್ರೀಪಾದಗಳನ್ನು ಅನನ್ಯಭಕ್ತಿಭಾವದಿಂದ ಮನದಲ್ಲಿಯೇ ಪೂಜಿಸುತ್ತಿರುವಾಗ ಒಂದು ಯೋಚನೆಯು ಬಂದಿತು. ಅದೇನೆಂದರೆ: "ಸದ್ಗುರುದತ್ತ ಭಗವಂತ! ನನ್ನಲ್ಲಿರುವ ಈ ನಾನೆಂಬುದೇ ಒಂದು ತುಳಸಿ, ಬಿಲ್ವ ಅಥವಾ ಪುಷ್ಪವಾಗಿದೆ, ಇದನ್ನೀಗ ನಿನ್ನ ಚರಣಕ್ಕರ್ಪಿಸಿದ್ದೇನೆ ಸ್ವೀಕರಿಸು." ಹೀಗೆಂದುಕೊಂಡಿದ್ದೊಂದೇ ಗೊತ್ತು ಮುಂದಿನ ಕ್ಷಣದಲ್ಲಿಯೇ ಈ ಹೃದಯದಲ್ಲಿಂದ ನಾನೆಂಬುದನ್ನು ಎತ್ತಿಟ್ಟಂತಾಗಿ ದೇಹವೆಲ್ಲಾ ತೆರವಾಯಿತು. ತತ್‌ಕ್ಷಣ ಎಚ್ಚರವೂ ಹೋಯಿತು. ನಾನೆಂಬುದಾಗಲಿ, ನಿದ್ರೆ–ಸ್ವಪ್ನ–ಎಚ್ಚರವಾಗಲಿ ಏನೂ ಇಲ್ಲದ ಬರೀ....ತಾನಾಗಿತ್ತು. ಈ ಅನುಭವ ರೂಪದಲ್ಲಿ ಒಂದಾಗಿರಲು ಕೊನೆಗೊಮ್ಮೆ ಮತ್ತೆ ಎಚ್ಚರಬಂದಿತು. ಆಗ ರೈಲು ಮಿರಜ್‌ಸ್ಟೇಷನ್ನಿನ ಸಮೀಪದಲ್ಲಿತ್ತು. ಈ ಮಧುರಸ್ಮೃತಿಯಲ್ಲಿಯೇ ಪ್ರಯಾಣ ಮುಂದುವರಿಯುತ್ತಿರುವಾಗ "ಅಪಿ ಚ ಸಂರಾಧನೇ ಪ್ರತ್ಯಕ್ಷಾನುಮಾನಾಭ್ಯಾಮ್" (3–2–24) ಎಂಬ ಬ್ರಹ್ಮಸೂತ್ರದ ಅಭಿಪ್ರಾಯವನ್ನೊಮ್ಮೆ ಶ್ರೀಗಳು ವಿವರಿಸಿದ್ದು ಜ್ಞಾಪಕಕ್ಕೆ ಬಂದಿತು. ಭಗವಂತನನ್ನು ಅನನ್ಯವಾಗಿ ಆರಾಧಿಸಿ ಧ್ಯಾನಿಸಿದಾಗ ಭಕ್ತರು ಆತನ ನಿರ್ಗುಣಸ್ವರೂಪದಲ್ಲಿಯೇ ಸೇರಿ ಹೋದ ಅನುಭವವು ಪರಮಾತ್ಮನು ನಿರ್ವಿಶೇಷನೆಂಬುದಕ್ಕೆ ಪ್ರಮಾಣವಾಗಿದೆ ಎಂಬುದು ಆ ಸೂತ್ರದ ಅಭಿಪ್ರಾಯ. ಅಂತೂ ಶ್ರೀಗಳ ಸೇವೆಯಿಂದ ಲಭಿಸಿದ ಅವರ ಕೃಪಾವಿಶೇಷವೇ ನನಗೆ ಈ ನಿರ್ಗುಣಸ್ವರೂಪಾವಸ್ಥಾನದ ರುಚಿಯನ್ನು ತೋರಿಸಿಕೊಟ್ಟಿತೆಂದು ನನ್ನ ನಂಬಿಕೆ.[1]

ಹೀಗೆ ಶ್ರೀಗಳಿಂದ ಹಾಗೂ ಕಾರ್ಯಾಲಯದಿಂದ ಉಪಕೃತರಾದವರಲ್ಲಿ ನಾನೂ ಒಂದು ಬಿಂದುವಾಗಿದ್ದೇನೆ. ಸರ್ವಾತ್ಮನಾದ ಸದ್ಗುರುವು ಸರ್ವರಿಗೂ ಸದ್ಬುದ್ಧಿಯನ್ನು ದಯಪಾಲಿಸಲಿ!

> ಯದಾ ಕಿಞ್ಚಿಜ್ಞೋಽಹಂ ಗಜ ಇವ ಮದಾನ್ಧಃ ಸಮಭವಮ್
> ತದಾ ಸರ್ವಜ್ಞೋಽಸ್ಮೀತ್ಯಭವದವಲಿಪ್ತಂ ಮಮ ಮನಃ ||
> ಯದಾ ಕಿಂಚಿತ್ ಕಿಂಚಿತ್ ಬುಧಜನಸಕಾಶಾದವಗತಮ್
> ತದಾ ಮೂರ್ಖೋಽಸ್ಮೀತಿ ಜ್ವರ ಇವ ಮದೋ ಮೇ ವ್ಯಪಗತಃ ||

1. ನನ್ನ ಅನುಭವಗಳನ್ನೋದಿ ಕೆಲವರಿಗೆ ಹಲವು ವಿಧವಾದ ಅಭಿಪ್ರಾಯಗಳು ಮೂಡಬಹುದಾಗಿವೆ. ಆದರೆ ನಡೆದಿದ್ದನ್ನು ನಡೆದಂತೆ ಕಂಡದ್ದನ್ನು ಕಂಡಂತೆ ನಾನಿಲ್ಲಿ ಹೇಳಿದ್ದೇನೆಂಬ ಬಗ್ಗೆ ನನಗೆ ಪೂರ್ಣತೃಪ್ತಿಯಿದೆ.

## ಮನಸ್ಸಿನೊಡನೆ ಸಂಭಾಷಣೆ

### (ಜೂನ್ 1972)

ಎಲೆ ಮನಸ್ಸೆ, ನಿನ್ನ ನಿಜವಾದ ಭಾವನೆಗಳಿಗೆ ಅನುಗುಣವಾಗಿಯೇ ಮಾತನಾಡುವಂತೆ ನಾಲಗೆಗೆ ಪ್ರೇರಣೆಮಾಡುವದನ್ನು ಅಭ್ಯಾಸಮಾಡಿಕೊ. ಹಾಗಿಲ್ಲದಿದ್ದರೆ, ಹೊರಗೆ ಒಬ್ಬರೊಡನೆ ಮಾತನಾಡುತ್ತಿರುವಾಗ ನೀನು ಎಷ್ಟೇ ಪ್ರಯತ್ನದಿಂದ ಬೇರೊಂದು ರೀತಿಯಲ್ಲಿ ತೋರ್ಪಡಿಸಿಕೊಳ್ಳುತ್ತಿದ್ದರೂ ನಿನಗೂ ಅರಿವಿಲ್ಲದೆ, ತಟ್ಟನೆ ನಿಜವು ನುಸುಳಿಕೊಂಡು ಬಂದುಬಿಡುವದು ನಿಶ್ಚಯ. ಒಂದು ವೇಳೆ ನಿನ್ನ ಪ್ರೇರಣೆಯ ಮಾತಿನಿಂದ ಜನರಿಗೆ ನಿನ್ನ ಸ್ವಭಾವವು ಗೊತ್ತಾಗದೆ ಇದ್ದರೂ ಮಾತಿಗೂ ನಡೆವಳಿಕೆಗೂ ಇರುವ ವೈಲಕ್ಷಣ್ಯದಿಂದಲೇ ನಿನ್ನ ಗುಟ್ಟು ರಟ್ಟಾಗಿಬಿಡುವದು ಖಂಡಿತ. ತಿಳಿಯಿತೆ?

**(ಮನಸ್ಸು):– ಇದ್ದದ್ದನ್ನು ಇದ್ದಂತೆ ಹೇಳಿದರೆ ವ್ಯವಹಾರವು ಸಾಗೀತೆ? ಜನರು ಬಹಳಮಟ್ಟಿಗೆ ಮೋಸಗಾರರೇ ಆಗಿರುತ್ತಾರೆ. ಮೋಸಕ್ಕೆ ಮೋಸವನ್ನು ಎದುರು ಮಾಡಲೇಬೇಕಲ್ಲ!**

ಹಾಗೆ ಮಾಡುತ್ತಾ ಹೋದರೆ, ನಿನಗೆ ಅದೇ ಹವ್ಯಾಸವಾಗಿಬಿಡುತ್ತದೆ. ಇಷ್ಟೇ ಅಲ್ಲ; ನಿನಗೂ ನಿನ್ನ ನಿಜವು ತಿಳಿಯದೆ ಹೋಗುವ ಸಂಭವವೂ ಇದೆ. ಎಚ್ಚರಿಕೆಯಿಂದಿರು.

**(ಮನಸ್ಸು):– ನಾನು ದಿನದಿನವೂ ಮಾಡುತ್ತಿರುವ ಆಹ್ನಿಕದಲ್ಲಿ ದೇವರನ್ನು ಪ್ರಾರ್ಥನೆ ಮಾಡುವದನ್ನು ಇಟ್ಟುಕೊಂಡಿದೇನೆ. ಆಗ 'ದೇವ, ನನ್ನನ್ನು ಕೃಪೆಯಿಂದ ಕ್ಷಮಿಸು; ನೀನು ಶರಣಾಗತವತ್ಸಲನಲ್ಲವೆ?' ಎಂದು ಬೇಡಿಕೊಳ್ಳುತ್ತಿರುತ್ತೇನಲ್ಲ!**

ಅಯ್ಯೋ ಬೆಪ್ಪೆ! ನೀನು ದಿನದಿನವೂ ತಿಳಿದು ತಿಳಿದೂ ಮಾಡುತ್ತಿರುವ ತಪ್ಪನ್ನು ದೇವರು ಕಾಣನೆ? ತಪ್ಪು ಮಾಡುತ್ತಲೇ ಇದ್ದು ಕ್ಷಮಿಸೆಂದು ಬೇಡಿಕೊಳ್ಳುವದೂ ಒಂದು ಆತ್ಮವಂಚನೆ; ದೈವದ್ರೋಹವೂ ಆಗುವದು. 'ಋಜುಮಾರ್ಗದಿಂದ ನಡೆದುಕೊಳ್ಳುವದಕ್ಕೆ ಪ್ರಯತ್ನಿಸುವೆನು, ನನಗೆ ಅದು ವಶವಾಗುವಂತೆ ಅನುಗ್ರಹಿಸು!' ಎಂದಾದರೂ ಬೇಡಿಕೊ.

**(ಮನಸ್ಸು):– ಹಾಗಾದರೆ ವ್ಯವಹಾರದಲ್ಲಿ ಜನರು ಮೋಸ ಮಾಡುವದು ಖಂಡಿತ. ಅದಕ್ಕೇನು ಮಾಡಲಿ?**

ಯೋಚನೆ ಮಾಡಬೇಡ, ನೀನು ಋಜುಮಾರ್ಗದಲ್ಲಿನಡೆಯುತ್ತಿದ್ದರೆ, ನಿನ್ನೊಡನೆ ವ್ಯವಹಾರ ಮಾಡುವವರೂ ಋಜುಮಾರ್ಗದಿಂದಲೇ ನಡೆದುಕೊಳ್ಳುವಂತೆ ಆ ಭಗವಂತನು ಅವಶ್ಯವಾಗಿ ಅನುಗ್ರಹಿಸುತ್ತಾನೆ.

**(ಮನಸ್ಸು):– ಒಂದು ವೇಳೆ ಆಗ ಕಷ್ಟಕ್ಕೆ ಸಿಕ್ಕಿಕೊಂಡರೊ?**

ಅಂಜಬೇಡ, ಭಗವಂತನು ಶರಣಾಗತರನ್ನು ಎಂದಿಗೂ ಕೈಬಿಡುವದಿಲ್ಲ. ಇದನ್ನು ನಂಬು!

## 16. ಆತ್ಮನನ್ನರಿಯುವದೆಂದರೆ ಏನು?

**(ಅಕ್ಟೋಬರ್ 1972)**

ಒಂದು ಸಲ ಮೈಸೂರಿನಲ್ಲಿ ನಡೆದ ಶಂಕರಸಪ್ತಾಹದ ಸಮಯದಲ್ಲಿ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ತಮ್ಮ ಉಪನ್ಯಾಸದಲ್ಲಿ ಹೇಳಿದ ಒಂದು ವಿಷಯವು ಅಂದಿನಿಂದ ಇಂದಿನವರೆಗೂ ನನ್ನ ಮನಸ್ಸಿನಲ್ಲಿ ಬೇರೂರಿ ನಿತ್ಯಾನುಸಂಧಾನಕ್ಕೆ ಕಾರಣವಾಗಿಬಿಟ್ಟಿದೆ. ಅದೇನೆಂದರೆ:

"ಆತ್ಮಸ್ವರೂಪವನ್ನರಿತುಕೊಂಡರೆ ಸಂಸಾರಬಂಧನದಿಂದ ಈಗಲೇ ಇಲ್ಲಿಯೇ ಬಿಡುಗಡೆ ಹೊಂದುವಿರಿ"– ಎಂದು ಶಾಸ್ತ್ರಗಳೂ ಗುರುಗಳೂ ಪದೇಪದೇ ಹೇಳುತ್ತಿರುತ್ತಾರೆ. ಇವರ ಮಾತಿನಂತೆ ನಾವು ಆತ್ಮಸ್ವರೂಪವನ್ನು ಅರಿತುಕೊಳ್ಳೋಣ ವೆಂದು ಗುರುಗಳ ಬಳಿಗೆ ಹೋದರೆ "ಈ ಆತ್ಮಸ್ವರೂಪವನ್ನು ಇಂದ್ರಿಯಗಳಿಂದ ಅಥವಾ ಮನಸ್ಸಿನಿಂದ, ಬುದ್ಧಿಯಿಂದ, ತರ್ಕದಿಂದ ಭಾವನೆಗೆ ಒಳಪಡಿಸಿಕೊಂಡು ಚಿಂತಿಸುವ ಮೂಲಕ ಅರಿಯಲಾಗುವದಿಲ್ಲ" ಎಂದು ಹೇಳುತ್ತಾರೆ. ಇಲ್ಲಿ ಜಿಜ್ಞಾಸುಗಳಿಗೆ ಬರುವ ಮುಖ್ಯ ಸಂಶಯವೇನೆಂದರೆ: ನಾವು ಏನನ್ನಾದರೂ ಅರಿಯಬೇಕಾದರೆ ನಮ್ಮ ಇಂದ್ರಿಯ, ಮನಸ್ಸು, ಬುದ್ಧಿ, ಯುಕ್ತಿ, ಅನುಮಾನ ಅಥವಾ ಸುಖದುಃಖಾದಿವೇದನೆಗಳನ್ನು ಆಯಾ ಭಾವನೆಯ ಮೂಲಕ–ಅಥವಾ ಸ್ವರ್ಗಾದಿಲೋಕವೇ ಮುಂತಾದವುಗಳನ್ನು ಶ್ರದ್ಧೆಯ ಮೂಲಕ–ತಿಳಿದುಕೊಳ್ಳುತ್ತೇವೆ. ಆದರೆ ಈ ಆತ್ಮಸ್ವರೂಪವು ಯಾವುದಕ್ಕೂ ವಿಷಯವಲ್ಲವೆಂದೂ ಮಾತು ಮನಸ್ಸುಗಳಿಗೆ ಅತೀತವಾಗಿರುವದೆಂದೂ ಹೇಳಿದ್ದರಿಂದ ಇದನ್ನರಿಯಲಾಗುವದೇ ಇಲ್ಲ ಎಂದಾಗುತ್ತದೆ. ಹೀಗಿದ್ದರೂ 'ಆತ್ಮನನ್ನರಿಯಿರಿ' ಎಂಬ ಮಾತಿಗೆ ಏನರ್ಥ?' ಎಂದು ಪ್ರಶ್ನೆ ಮಾಡಿಕೊಂಡು ಶ್ರೀಶ್ರೀಗಳವರು ಉತ್ತರಕೊಟ್ಟಿದ್ದೇನೆಂದರೆ:

"ನಿಜ, ನಾವು ಏನನ್ನಾದರೂ ಅರಿಯಬೇಕಾದರೆ ಇಂದ್ರಿಯ, ಮನಸ್ಸು, ಬುದ್ಧಿ-ಮುಂತಾದ್ದೆಲ್ಲವೂ ಬೇಕು-ಎಂಬಲ್ಲಿ ಸಂಶಯವಿಲ್ಲ. ಇದರಂತೆಯೇ ಈ ಸಾಧನಗಳಿಲ್ಲದಿದ್ದರೆ ನಾವು ಏನನ್ನೂ ಅರಿಯಲಾರೆವು-ಎಂಬುದೂ ಖಂಡಿತವೇ ಆಗಿದೆ. ಉದಾಹರಣೆಗೆ ನಮಗೆ ಎಚ್ಚರದ ಅವಸ್ಥೆ ಇರುವಾಗ ಇಂದ್ರಿಯಾದಿಸಕಲಕರಣಗಳೂ ಇರುವದರಿಂದ ನಾವು ಯಾವದನ್ನು ಬೇಕಾದರೂ ಅರಿತುಕೊಳ್ಳುವೆವು. ನಮಗೆ ಗಾಢ ನಿದ್ರೆ ಬಂದುಬಿಟ್ಟರೆ ನಾವು ಅಲ್ಲಿ ಏನನ್ನೂ ಹೀಗೆ ಅರಿಯುವದೇ ಇಲ್ಲ ಎಂಬುದು ಸಾರ್ವತ್ರಿಕವಾದ ಲೋಕಾನುಭವವಾಗಿದೆ. ಇದರಲ್ಲಿ ಏನೂ ಸಂಶಯವೇ ಇಲ್ಲ. ಆದರೆ ಇಲ್ಲಿ ಒಂದು ಮುಖ್ಯ ಪ್ರಶ್ನೆ ಏನೆಂದರೆ: ಇಂದ್ರಿಯಮನಸ್ಸುಬುದ್ಧಿಗಳಿದ್ದಾಗ ಅರಿಯುತ್ತೇವೆ. ಅವಿಲ್ಲದಾಗ 'ಅರಿಯುವದಿಲ್ಲ' ಎಂಬುದನ್ನು ನಾವು ಏತರಿಂದ ಅರಿಯುತ್ತೇವೆ? ಎಂದರೆ-'ನಿದ್ರೆಯಲ್ಲಿ ಏನೂ ಗೊತ್ತಾಗುವದಿಲ್ಲ, ಜಾಗ್ರತ್ತಿನಲ್ಲಿ ಗೊತ್ತಾಗುತ್ತದೆ. ಹಾಗೂ ಈಗ ಇಂದ್ರಿಯಾದಿಗಳಿವೆ, ಆಗ ಇರಲಿಲ್ಲ'-ಎಂಬುದು ಹೇಗೆ ಗೊತ್ತಾಗುತ್ತದೆ? ಎಂಬುದೀಗ ಪ್ರಶ್ನೆ. ಇದಕ್ಕೆ ಉತ್ತರವೇನೆಂದರೆ: ಇದು ಅನುಭವದಿಂದ ಗೊತ್ತಾಗುತ್ತದೆ ಎಂದೇ ಹೇಳಬೇಕಾಗುತ್ತದೆ. ಹಾಗಾದರೆ ಯಾವ ಅನುಭವಸ್ವರೂಪದಿಂದ ಬುದ್ಧಿಯೇ ಮುಂತಾದದ್ದಿರುವದೂ ಇಲ್ಲದಿರುವದೂ, ವಿಷಯಗಳ ಅರಿವಾಗುವದೂ ಆಗದಿರುವದೂ ನೇರಾಗಿ ಗೊತ್ತಾಗುತ್ತದೆಯೋ ಆ ಸಾಕ್ಷಾತ್ ಅಪರೋಕ್ಷವಾದ ಕೇವಲಾನುಭವವನ್ನೇ 'ಆತ್ಮ' ಎಂದು ಉಪನಿಷತ್ತಿನಲ್ಲಿ ಕರೆದಿರುತ್ತದೆ. ಹೀಗೆ ಅನುಭವದ ಕಡೆಗೆ ಹಿಂದಿರುಗಿ ಅನುಭವಸ್ವರೂಪವೇ ನಿಜವಾದ ತಾನು ಎಂಬುದನ್ನು ಗೊತ್ತುಮಾಡಿಕೊಳ್ಳುವದನ್ನೇ ನಾವು ಆತ್ಮಸ್ವರೂಪವನ್ನರಿಯುವದು ಎಂದು ವ್ಯವಹರಿಸುತ್ತೇವೆ. ಆತ್ಮನನ್ನರಿಯುವದೆಂದರೆ ಹೊರಗಿನ ವಿಷಯಗಳನ್ನರಿತಂತೆ ಅರಿಯತಕ್ಕದ್ದಲ್ಲ. ಅರಿತೆನು, ಅರಿಯಲಿಲ್ಲ-ಎಂಬ ಎರಡನ್ನೂ ದಾಟಿ ಕೇವಲ ತಾನೇ ತಾನಾಗಿರುವ ಸಾಕ್ಷಿಸ್ವರೂಪದಲ್ಲಿಯೇ ನಿಂತು ಬಿಡುವದನ್ನೇ 'ಆತ್ಮಜ್ಞಾನ' ಎನ್ನುತ್ತಾರೆ. ಆಗ ಮೊದಲು ನಾವು ತಿಳಿದುಕೊಂಡಿದ್ದ ಬುದ್ಧಿ, ಮನಸ್ಸು, 'ನಾನು' ಎಂಬ ಅನಿಸುವಿಕೆ-ಮುಂತಾದದ್ದೆಲ್ಲವೂ ಆತ್ಮಸ್ವರೂಪಾನುಭವ ದಿಂದಲೇ ವ್ಯಾಪಿಸಿರುವದು ಗೋಚರವಾಗಿ ಒಳಗೂ ಹೊರಗೂ ಕೇವಲ ತಾನೇ ತಾನಾಗಿರುವದನ್ನು ಕಂಡುಕೊಳ್ಳುತ್ತೇವೆ. ಹೀಗೆ ಇಂದ್ರಿಯ, ಮನಸ್ಸು, ಬುದ್ಧಿ-ಮುಂತಾದ ಯಾವ ಕರಣವೂ ಇಲ್ಲದೆ ನೇರಾಗಿ ತನ್ನ ಅರಿವಿನಿಂದಲೇ ತಾನೇ ತಾನಾಗಿರುವದನ್ನು ಗೊತ್ತುಪಡಿಸುವದನ್ನೇ 'ವಿಜ್ಞಾನ' ಎನ್ನುತ್ತಾರೆ. ಬುದ್ಧಿಯೇ ಮುಂತಾದ ಸಾಧನಗಳಿಂದ ಅರಿತರೆ ಅದು ಬರೀ 'ಜ್ಞಾನ' ಎನಿಸುತ್ತದೆ. ನೇರಾಗಿ ಅನುಭವಸ್ವರೂಪವೇ ತಾನಾಗಿ ನಿಂತು ಅರಿತರೆ ಅದೇ 'ವಿಜ್ಞಾನ' ಎನಿಸುತ್ತದೆ"

ಈ ಉಪದೇಶವು ನನಗೆ ಮನಸ್ಸಿನಲ್ಲಿ ಬೇರೂರಿ ಯಾವಾಗಲೂ ಅದನ್ನೇ ಕಚ್ಚಿಕೊಂಡಿರುವಷ್ಟು ಪರಿಣಾಮವನ್ನುಂಟು ಮಾಡಿದೆ. ಜಿಜ್ಞಾಸುಗಳಿಗೆ ಕೆಲವರಿಗಾದರೂ ನನ್ನಂತೆಯೇ ಈ ಅನುಸಂಧಾನವು ಮನಸ್ಸಿಗೆ ಹಿಡಿಯಬಹುದೆಂದು ಈ ಅನುಭವವನ್ನಿಲ್ಲಿ ವಿವರಿಸಿದ್ದೇನೆ.

## 17. ಗೀತಾಭಾಷ್ಯವಾಕ್ಯಾನುಸಂಧಾನ–1

### (ಡಿಸೆಂಬರ್ 1972)

'ತೇಷಾಂ ಸತತಯುಕ್ತಾನಾಂ.....' 'ತೇಷಾಮೇವಾನುಕಂಪಾರ್ಥಂ......' (ಗೀ. 10–10,11) ಎಂಬ ಶ್ಲೋಕಗಳಿಗೆ ಶ್ರೀಶಂಕರಭಗವತ್ಪಾದಾಚಾರ್ಯರು ಬರೆದಿರುವ ಭಾಷ್ಯವಾಕ್ಯಗಳನ್ನು ಅನುಸಂಧಾನಮಾಡಿದಾಗ ಹೊಳೆದ ಅಂಶಗಳನ್ನು ಇಲ್ಲಿ ಸಂಕ್ಷೇಪವಾಗಿ ಬರೆಯುತ್ತೇನೆ. ನನ್ನ ಮನಸ್ಸಿನಲ್ಲಿ ಈ ವಾಕ್ಯಗಳು ತುಂಬ ಪರಿಣಾಮವನ್ನುಂಟು ಮಾಡಿರುತ್ತವೆ. ಜಿಜ್ಞಾಸುಗಳಿಗೂ ಹಾಗೇ ಪರಿಣಾಮವಾಗಬಹುದೆಂದು ಭಾವಿಸಿದ್ದೇನೆ. ಈ ಶ್ಲೋಕಗಳ ತಾತ್ಪರ್ಯವಿಷ್ಟು:

"ಯಾರು ನನ್ನನ್ನು ಪ್ರೀತಿಪೂರ್ವಕವಾಗಿ ಭಜಿಸುವರೋ ನಿತ್ಯಯುಕ್ತರಾಗಿರುವರೋ ಅಂಥ ಭಕ್ತರ ಮೇಲೆ–'ಹೇಗಾದರೆ ಇವರಿಗೆ ಶ್ರೇಯಸ್ಸಾದೀತು?' ಎಂದು ದಯೆಯಿಂದ ಆ ಭಕ್ತರಿಗೆ ಬುದ್ಧಿಯೋಗವನ್ನು ಕೊಟ್ಟು ಅವರ ಹೃದಯದಲ್ಲಿ ಜ್ಞಾನದೀಪವನ್ನು ಬೆಳಗಿಸಿ ಅಜ್ಞಾನಕತ್ತಲೆಯನ್ನು ಕಳೆಯುವೆನು" ಎಂಬುದು ಸಾರಾಂಶ.

ಇಲ್ಲಿ ಎರಡನೆಯ ಶ್ಲೋಕದಲ್ಲಿಯ (ಗೀ. 10–11) ಭಾಷ್ಯವಾಕ್ಯಗಳು ಹೀಗಿವೆ: "ಅವಿವೇಕತೋ ಜಾತಂ ಮಿಥ್ಯಾಪ್ರತ್ಯಯಲಕ್ಷಣಂ ಮೋಹಾಂಧಕಾರಂ ತಮೋ ನಾಶಯಾಮಿ, ಆತ್ಮಭಾವಸ್ಥೋ ಆತ್ಮನೋ ಭಾವೋ ಅಂತಃಕರಣಾಶಯಃ ತಸ್ಮಿನ್ನೇವ ಸ್ಥಿತಃ ಸನ್, ಜ್ಞಾನದೀಪೇನ ವಿವೇಕಪ್ರತ್ಯಯರೂಪೇಣ....." ಎಂದು ಮುಂತಾಗಿ ಬರೆದಿದ್ದಾರೆ. ಈ ಪೂರ್ತಿವಾಕ್ಯದಲ್ಲಿ ಸದ್ಯಕ್ಕೆ ಮೇಲೆ ಬರೆದಷ್ಟು ವಾಕ್ಯದ ಅಂಶವನ್ನುಮಾತ್ರ ಈ ಲೇಖನದಲ್ಲಿ ಅನುಸಂಧಾನಕ್ಕಿಟ್ಟುಕೊಳ್ಳೋಣ. ಈ ವಾಕ್ಯದ ಮುಂದಿನ ಭಾಗವನ್ನು ಇನ್ನೊಂದು ಲೇಖನದಲ್ಲಿ ಅನುಸಂಧಾನಮಾಡೋಣ.

ಮೊದಲು ಅವಿದ್ಯೆಯ ಸ್ವರೂಪವನ್ನು 'ಮಿಥ್ಯಾಪ್ರತ್ಯಯಲಕ್ಷಣಂ' ಎಂದಿದ್ದಾರೆ. ಅವಿದ್ಯೆಯು ತಪ್ಪುತಿಳಿವಳಿಕೆಯ ರೂಪದ್ದು ಎಂದು ಇದರ ಅರ್ಥ. ಸೂತ್ರಭಾಷ್ಯದಲ್ಲಿ "ಮಿಥ್ಯಾಜ್ಞಾನನಿಮಿತ್ತಃ, ತಮೇತಮೇವಂಲಕ್ಷಣಮಧ್ಯಾಸಂ ಪಣ್ಡಿತಾ ಅವಿದ್ಯೇತಿ

ಮನ್ಯನ್ತೇ, ಏವಮಯಮನಾದಿರನನ್ತೋ ನೈಸರ್ಗಿಕೋ ಅಧ್ಯಾಸೋ ಮಿಥ್ಯಾಪ್ರತ್ಯಯರೂಪಃ'' (ಅ.ಭಾ.) ಎಂಬ ವಾಕ್ಯಗಳಿಗೂ 'ಕ್ಷೇತ್ರಕ್ಷೇತ್ರಜ್ಞಯೋಃ ವಿಷಯವಿಷಯಿಣೋಃ ಭಿನ್ನಸ್ವಭಾವಯೋಃ ಇತರೇತರತದ್ಧರ್ಮಾಧ್ಯಾಸಲಕ್ಷಣಃ ಸಂಯೋಗಃ'' (ಗೀ. 13–27) ಎಂಬ ವಾಕ್ಯಕ್ಕೂ ಹೊಂದಿಕೆಯಾಗಿಯೇ ಈ ವಿವರಣೆಯು ಇದೆ. ಒಟ್ಟಿನಲ್ಲಿ ಆತ್ಮಾನಾತ್ಮರ ಕಲಬೆರಕೆಯ ತಪ್ಪುತಿಳಿವಳಿಕೆಯೇ ಅವಿದ್ಯೆಯ ಸ್ವರೂಪ ಎಂಬುದು ಆಚಾರ್ಯರ ಅಭಿಪ್ರಾಯವೆಂಬುದು ಸ್ಪಷ್ಟವಾಗಿದೆ. ಈಗ ಅವಿದ್ಯೆಗೆ ಆಶ್ರಯವು ಯಾವದು?–ಎಂಬುದಕ್ಕೆ **'ಆತ್ಮಭಾವಸ್ಥೋ ಆತ್ಮನೋ ಭಾವೋ ಅನ್ತಃಕರಣಾಶಯಃ ತಸ್ಮಿನ್ನೇವ ಸ್ಥಿತಃ ಸನ್' ಎಂದರೆ–ಆತ್ಮಭಾವವೆಂದರೆ ಅಂತಃಕರಣಾಶಯವು–ಅರ್ಥಾತ್ ಅಂತಃಕರಣವು.** ಅಲ್ಲಿಯೇ ಈ ಅಜ್ಞಾನವು ಇರತಕ್ಕದ್ದು–ಎಂದು ತಾತ್ಪರ್ಯ. ಇಲ್ಲಿ ವ್ಯಾವಹಾರಿಕ ದೃಷ್ಟಿಯಿಂದ ಅವಿದ್ಯೆಯು ಅಂತಃಕರಣಕ್ಕೇ ಸೇರಿದ್ದು ಎಂದು ಸ್ಪಷ್ಟವಾಗಿ ಹೇಳಿದಂತಾಗಿರುತ್ತದೆ. ಇದನ್ನೇ ಹದಿಮೂರನೆಯ ಅಧ್ಯಾಯದ ಎರಡನೆಯ ಶ್ಲೋಕದ ಭಾಷ್ಯದಲ್ಲಿ ''ಅತ್ರಾಹ–ಏವಂ ತರ್ಹಿ ಜ್ಞಾತೃಧರ್ಮೋ ಅವಿದ್ಯಾ, ಕರಣೇ ಚಕ್ಷುಷಿ.....ಸರ್ವತ್ರೈವ ಅಗ್ರಹಣವಿಪರೀತ ಸಂಶಯಪ್ರತ್ಯಯಾಃ ತನ್ನಿಮಿತ್ತಾಃ ಕರಣಸ್ಯೈವ ಕಸ್ಯಚಿತ್ ಭವಿತುಮರ್ಹನ್ತಿ ನ ಜ್ಞಾತುಃ ಕ್ಷೇತ್ರಜ್ಞಸ್ಯ'' (ಗೀ. ಭಾ. 13–2) ಎಂಬ ವಾಕ್ಯದಲ್ಲಿ ಅವಿದ್ಯೆಯು ಅಂತಃಕರಣಕ್ಕೇ ಸೇರಿದ್ದೇ ಹೊರತು ಆತ್ಮನಿಗೆ ಸೇರಿದ್ದಲ್ಲ–ಎಂದು ಸ್ಪಷ್ಟವಾಗಿ ಹೇಳಿದಂತೆಯೇ ಇಲ್ಲಿಯೂ ಹೇಳಿದ್ದಾರೆ.

ಇನ್ನು ಈ ತಪ್ಪುತಿಳಿವಳಿಕೆಗೆ (ಮಿಥ್ಯಾಪ್ರತ್ಯಯರೂಪದ ಅವಿದ್ಯೆಗೆ) ಕಾರಣವೇನು?–ಎಂಬುದಕ್ಕೆ ಈ ವಾಕ್ಯದಲ್ಲಿ 'ಅವಿವೇಕತೋ ಜಾತಂ' ಎಂದು ಉತ್ತರವನ್ನು ಕೊಟ್ಟಿದ್ದಾರೆ. ಸೂತ್ರಭಾಷ್ಯದ ಆರಂಭದ ವಾಕ್ಯಗಳಲ್ಲಿ 'ಇತರೇತರಾಽವಿವೇಕೇನ' (ಅ.ಭಾ.) ಎಂದೂ ಗೀತೆಯಲ್ಲಿಯೇ 'ಕ್ಷೇತ್ರಕ್ಷೇತ್ರಜ್ಞವಿವೇಕಾಭಾವ ನಿಬಂಧನೋ ರಜ್ಜುಶುಕ್ತಿಕಾದೀನಾಂ ತದ್ವಿವೇಕಜ್ಞಾನಾಭಾವಾತ್ ಅಧ್ಯಾರೋಪಿತಸರ್ಪ ರಜತಾದಿ ಸಂಯೋಗವತ್' ಎಂದೂ ಸೂತ್ರಭಾಷ್ಯದಲ್ಲಿ ಹೇಳಿದ ಅಭಿಪ್ರಾಯವನ್ನೇ ಇಲ್ಲಿ ವಿವರಿಸಿದ್ದಾರೆ. ಒಟ್ಟಿನಲ್ಲಿ ವಿಂಗಡಿಸಿ ತಿಳಿಯದಿರುವದೇ ತಪ್ಪು ತಿಳಿವಿಕೆಗೆ ಕಾರಣವು ಎಂದು ಹೇಳಿದಂತಾಗಿದೆ. ವಿವೇಕಪ್ರತ್ಯಯರೂಪದ ಎಂದರೆ ಆತ್ಮಾನಾತ್ಮರನ್ನು ಬಿಡಿಸಿ ತಿಳಿದುಕೊಳ್ಳುವ ಜ್ಞಾನವು ಬಂದರೆ ಈ ತಪ್ಪು ತಿಳಿವಳಿಕೆಯು ತೊಲಗುತ್ತದೆ. 'ಅನಾತ್ಮವೆಂಬುದು ಇಲ್ಲವೇ ಇಲ್ಲ. ಸ್ವಪ್ನ, ಮಾಯಾನಿರ್ಮಿತವಸ್ತು , ಗಂಧರ್ವ ನಗರಗಳಂತೆ ಇಲ್ಲದ್ದು ಇದ್ದಂತೆ ತೋರುವದೇ ಅನಾತ್ಮವೆಂದೂ ಆತ್ಮಸ್ವರೂಪಮಾತ್ರವೇ

ಇರತಕ್ಕದ್ದೆಂದೂ ಆತ್ಮದೃಷ್ಟಿಯಿಂದ ಎಂದಿಗೂ ಅನಾತ್ಮವಿಲ್ಲವೇ ಇಲ್ಲವೆಂದೂ ಕಂಡುಕೊಳ್ಳುವದನ್ನೇ ವಿವೇಕಪ್ರತ್ಯಯವೆಂದಿದ್ದಾರೆ. ಗೀ. 13–26ರ ಭಾಷ್ಯದಲ್ಲಿ ಇದು ಸ್ಪಷ್ಟವಾಗಿದೆ. ಸಮಗ್ರಪ್ರಸ್ಥಾನತ್ರಯಭಾಷ್ಯದಲ್ಲೆಲ್ಲೆಡೆಗೂ ಹೀಗೆಯೇ ಒಂದೇ ರೀತಿಯಾಗಿ ವಿದ್ಯಾವಿದ್ಯೆಗಳ ಸ್ವರೂಪವನ್ನು ಭಾಷ್ಯಕಾರರು ವರ್ಣಿಸಿರುತ್ತಾರೆ. ಆದರೆ ಈಗ್ಗೆ ವ್ಯಾಖ್ಯಾನಕಾರರ ಪ್ರಭಾವಕ್ಕೊಳಗಾಗಿ ಅದ್ವೈತವೇದಾಂತದಲ್ಲಿ ಪ್ರಚಾರಕ್ಕೆ ಬಂದಿರುವ (1) ಆತ್ಮನ ಅನಿರ್ವಚನೀಯಶಕ್ತಿ(ಮಾಯೆ)ಯೇ ಅವಿದ್ಯೆ. (2) ಇದು ಆತ್ಮನನ್ನಾಶ್ರಯಿಸಿ ಆತ್ಮನನ್ನಾವರಿಸಿಕೊಂಡಿದೆ. (3) ಅಗ್ರಹಣ (ಅವಿವೇಕ), ವಿಪರೀತಜ್ಞಾನ (ಅಧ್ಯಾಸ) ಹಾಗೂ ಸಂಶಯಗಳಿಗೆ ಉಪಾದಾನಕರಣವಾಗಿದೆ. (4) ತ್ರಿಗುಣಸಾಮ್ಯ ಪ್ರಕೃತಿಯಾದ ಈ ಅವಿದ್ಯೆಯು ಜಗತ್ತಿಗೆ ಉಪಾದಾನಕಾರಣವಾಗಿದೆ. ಇದು ಮೂಲಾವಿದ್ಯೆಯು. (5) ಇದು ಜಡವಸ್ತುಗಳನ್ನು ಆವರಿಸಿದೆ. ರಜ್ಜುಸರ್ಪಾದಿಭ್ರಾಂತಿಗಳಲ್ಲಿ ಅನಿರ್ವಚನೀಯ ವಸ್ತುವಿಶೇಷವನ್ನು ಇದು ಹುಟ್ಟಿಸುತ್ತದೆ–ಮುಂತಾದ ಪ್ರತಿಪಾದನೆಗಳು ಭಾಷ್ಯಗಳಲ್ಲಿ ಎಲ್ಲಿಯೂ ಇರುವದೇ ಇಲ್ಲ. ಇಂಥ ವಾದಗ್ರಸ್ತವಿಷಯಗಳನ್ನು ಮುಂದಿನ ಲೇಖನದಲ್ಲಿ ಚರ್ಚಿಸೋಣ.

## 18. ಗೀತಾಭಾಷ್ಯವಾಕ್ಯಾನುಸಂಧಾನ–2

### (ಜನವರಿ 1973)

ಹಿಂದಿನ ಲೇಖನದಲ್ಲಿ 10–11ರ ಗೀತಾಭಾಷ್ಯವಾಕ್ಯದ ಕೆಲವು ಅಂಶಗಳನ್ನು ಮನನಮಾಡಿದ್ದಾಗಿತ್ತು. ಆಚಾರ್ಯರು ವಿದ್ಯಾವಿದ್ಯೆಗಳ ಸ್ವರೂಪವನ್ನು ಅನುಭವಕ್ಕೆ ಬರುವಂತೆಯೇ ನಿರೂಪಿಸಿರುತ್ತಾರೆ. ಜ್ಞಾನಬೋಧನೆಯನ್ನು ಕೇಳುವವನಿಗೆ ನಿರೂಪಿಸುವ ಸಂಗತಿಗಳು ಶ್ರವಣಸಮಕಾಲದಲ್ಲಿಯೇ ಅನುಭವದಲ್ಲಿ ಗೋಚರವಾಗಬೇಕು. ಇದೇ ಅಧ್ಯಾತ್ಮಜ್ಞಾನಬೋಧನೆಯ ಕ್ರಮವು. ಹೀಗಲ್ಲದೆ ಬರೀ ನಂಬಿಕೆಯ ಬಲದಿಂದಲೋ ಶಾಸ್ತ್ರವಾಕ್ಯಗಳ ಆಧಾರದಿಂದಲೋ ತರ್ಕದ ಬಲದಿಂದಲೋ ಪ್ರಮೇಯಗಳನ್ನು ಬೋಧಿಸುವದು ತತ್ಕಾಲದಲ್ಲಿಯೇ ಅನುಭವಕ್ಕೆ ಬರಲೇ ಆರದು. ಉದಾಹರಣೆಗೆ '(1) ಆತ್ಮನನ್ನಾಶ್ರಯಿಸಿ ಆವರಿಸಿರುವ ಆತ್ಮನ ಶಕ್ತಿಯಾದ ಅವಿದ್ಯೆಯನ್ನು ಒಪ್ಪಲೇಬೇಕು. ಇಲ್ಲವಾದರೆ ಅದ್ವೈತವೇ ನಿಲ್ಲಲಾರದು. (2) ಇಂಥ ಅವಿದ್ಯೆಯ ಅಸ್ತಿತ್ವವನ್ನು ಸಾಧಿಸಲು ಇಂತಿಷ್ಟು ಪ್ರಮಾಣಗಳಿವೆ' ಎಂದು ಅವಿದ್ಯೆಯ ಸಿದ್ಧಿಗೆ ಪ್ರಮಾಣಗಳನ್ನು ಹೇಳುವದು. (3) 'ಆತ್ಮನು ಚೈತನ್ಯನಾದ್ದರಿಂದ ಆತ್ಮನಿಗೆ ಅವಿದ್ಯೆಯಿಲ್ಲ. ಅಂತಃಕರಣವು

ಜಡವಾದ್ದರಿಂದ ಅದಕ್ಕೂ ಇಲ್ಲ. ಜೀವನು ಪ್ರತಿಬಿಂಬನಾದ್ದರಿಂದ ಅವನಿಗೂ ಇಲ್ಲ. ಹಾಗಾದರೆ ಅವಿದ್ಯೆ ಯಾರಿಗೆ?' ಎಂದು ತರ್ಕ ಮಾಡಿ ಅವಿದ್ಯೆಯು ಬ್ರಹ್ಮದಲ್ಲಿಯೇ ಇದೆ. ವಿದ್ಯೆಯು ಅವಿದ್ಯೆಗೆ ವಿರೋಧಿಯೇ ಹೊರತು ಬ್ರಹ್ಮವು ಅವಿದ್ಯೆಗೆ ವಿರೋಧಿಯಲ್ಲದ್ದರಿಂದ ಬ್ರಹ್ಮದ ಶಕ್ತಿಯಾದ ಅವಿದ್ಯೆಯನ್ನು ಒಪ್ಪಬೇಕು–ಎಂದು ಮುಂತಾಗಿ ತರ್ಕಿಸುವ ಹಾಗೂ ಅವಿದ್ಯೆಯ ಅಸ್ತಿತ್ವವನ್ನು ಒಪ್ಪಲು ಆಗ್ರಹಪಡಿಸುವದೇ ಮೊದಲಾದ ಸರಣಿಗಳು ಭಾಷ್ಯದಲ್ಲಿ ಎಲ್ಲಿಯೂ ಕಾಣುವದಿಲ್ಲ. ಇದಕ್ಕೆ ವಿಪರೀತವಾಗಿ ಆಚಾರ್ಯರು ಈ ವಿದ್ಯೆ ಅವಿದ್ಯೆ ಎಂಬ ಪ್ರಮೇಯಗಳನ್ನು ಅನುಭವಪೂರ್ವಕವಾಗಿಯೇ ನಿರೂಪಿಸುತ್ತಾರೆ. ಆ ಅನುಭವಪೂರ್ಣ ನಿರೂಪಣೆಯ ಒಂದೆರಡು ಮಾದರಿಗಳನ್ನು ಇಲ್ಲಿ ನೋಡೋಣ.

ಅವಿದ್ಯೆಯನ್ನು ಆಚಾರ್ಯರು ಸರ್ವರ ಅನುಭವದಲ್ಲಿಯೇ ತೋರಿಸಿರುವ ಈ ತೈತ್ತಿರೀಯಭಾಷ್ಯವಾಕ್ಯವನ್ನು ನೋಡಿರಿ: **"ಅವಿದ್ಯಾ ಚ ಸ್ವಾನುಭವೇನ ರೂಪ್ಯತೇ 'ಮೂಢೋಽಹಂ ಅವಿವಿಕ್ತಂ ಮಮ ವಿಜ್ಞಾನಮ್' ಇತಿ। ತಥಾ ವಿದ್ಯಾವಿವೇಕೋ ಅನುಭೂಯತೇ"** (ತೈ. 2–8 ಪು. 310) "ನಾನು ಅರಿಯೆನು; ನಾನು ಅರಿತೆನು–ಎಂದು ಪ್ರತಿಯೊಬ್ಬರೂ ಅನುಭವದಿಂದಲೇ ಹೇಳುತ್ತಿರುತ್ತಾರೆ." ಈ ವಾಕ್ಯದಿಂದ. (1) ಅವಿದ್ಯೆ ಇದ್ದುದಕ್ಕೆ ಅನುಭವವೇ ಪ್ರಮಾಣ. (2) ಬುದ್ಧಿಗೆ ಅವಿದ್ಯೆ ಇದ್ದುದು ಅನುಭವವೇದ್ಯ. (3) ಅದರಂತೆ ಬುದ್ಧಿಗೆ ಆ ವಿಷಯದ ಬಗ್ಗೆ ತಿಳಿವಳಿಕೆ ಬಂದದ್ದು ಸಹ (ವಿದ್ಯೆಯೂ ಸಹ) ಅನುಭವಗೋಚರವಾಗಿದೆ. (4) ಯಾವ ಅನುಭವಕ್ಕೆ ಈ ವಿದ್ಯಾವಿದ್ಯೆಗಳು ಗೋಚರವಾಗಿವೆಯೋ ಆ ಅನುಭವಸ್ವರೂಪಕ್ಕೆ ವಿದ್ಯಾವಿದ್ಯೆಗಳ ಸೋಂಕು ಎಳ್ಳಷ್ಟೂ ಇಲ್ಲ–ಎಂಬ ನಾಲ್ಕು ಅಂಶಗಳು ಇಲ್ಲಿ ಹೊರಬರುತ್ತವೆ. ಇದರಂತೆಯೇ ಸೂತ್ರಭಾಷ್ಯದಲ್ಲಿ (ಸೂ.ಭಾ. 4–1–3) **"ಕಸ್ಯ ಪುನರಪ್ರತಿಬೋಧಃ ಇತಿ ಚೇತ್, ಯಸ್ತ್ವಂ ಪೃಚ್ಛಸಿ ತಸ್ಯ ತ ಇತಿ ವದಾಮಃ। ನನು ಅಹಮ್ ಈಶ್ವರ ಏವ ಉಕ್ತಃ ಶ್ರುತ್ಯಾ। ಯದ್ಯೇವಂ ಪ್ರತಿಬುದ್ಧೋಽಸಿ, ನಾಸ್ತಿ ಕಸ್ಯಚಿದಪ್ರತಿಬೋಧಃ॥"** "ಈ ಅವಿದ್ಯೆ ಯಾರಿಗೆ? ಎಂದರೆ ಕೇಳುತ್ತಿರುವ ನಿನಗೇ–ಎನ್ನುತ್ತೇವೆ. 'ನಾನು ಶ್ರುತಿಯ ವಚನದಂತೆ ಬ್ರಹ್ಮವೇ ಅಲ್ಲವೆ?' ಹೀಗೆ ತಿಳಿದಿರುವಿಯಾದರೆ ಆಗ ಯಾರಿಗೂ ಅವಿದ್ಯೆ ಇಲ್ಲವೇ ಇಲ್ಲ." ಈ ವಾಕ್ಯದಲ್ಲಿ ವ್ಯಾವಹಾರಿಕವಾದ ಅಧ್ಯಾರೋಪದೃಷ್ಟಿಯಿಂದ ಬುದ್ಧಿಗೆ ಅವಿದ್ಯೆ ಇದ್ದದ್ದೂ ಅನುಭವ ವೇದ್ಯ. ಹಾಗೆಯೇ ಪರಮಾರ್ಥದೃಷ್ಟಿಯಿಂದ ಕೇವಲಾನುಭವರೂಪವಾದ ಆತ್ಮಸ್ವರೂಪದಲ್ಲಿ ವಿದ್ಯೆ, ಅವಿದ್ಯೆ–ಮುಂತಾದ ಯಾವ ವ್ಯವಹಾರವೂ ಇಲ್ಲ–ಎಂಬುದೂ ಅನುಭವವೇದ್ಯ. ಇದನ್ನು ತಿಳಿಸುವದಕ್ಕಾಗಿಯೇ ಲೋಕಾನುಭವದಲ್ಲಿ ಆತ್ಮಸ್ವರೂಪದ ಬಗ್ಗೆ ಸಹಜ (ಸ್ವಾಭಾವಿಕ) ವಾಗಿರುವ ಅವಿದ್ಯೆಯನ್ನೂ ವಿದ್ಯೆಯಿಂದ

ಅವಿದ್ಯೆಯು ತೊಲಗುವದೆಂಬುದನ್ನೂ ಅಧ್ಯಾರೋಪದಿಂದ ಒಪ್ಪಿ ಸ್ವರೂಪದಲ್ಲಿ ನೆಲೆನಿಂತಾಗ ವಿದ್ಯಾವಿದ್ಯೆಗಳೆರಡೂ ಇಲ್ಲದ ಕೇವಲಾನುಭವದಲ್ಲಿಯೇ ಜಿಜ್ಞಾಸುವು ನೆಲೆನಿಲ್ಲುವನೆಂಬುದನ್ನು ಹೃದಯಂಗಮವಾಗಿ ನಿರೂಪಿಸಿದ್ದಾರೆ. ಪ್ರಮಾಣವ್ಯವಹಾರವೇ ಅವಿದ್ಯೆಯ ಮೂಲಕ ನಡೆಯತಕ್ಕದ್ದಾದ್ದರಿಂದ ಅವಿದ್ಯೆಗೆ ಪ್ರಮಾಣವನ್ನು ಹೇಳುವದು ಹುಚ್ಚುತನವಾಗಿರುತ್ತದೆ. ಭಾಷ್ಯಕಾರರು ಜ್ಞಾನಬೋಧನೆಯಲ್ಲಿ ಎಲ್ಲಿಯೂ ಶುಷ್ಕತರ್ಕಕ್ಕೆ ಅವಕಾಶವನ್ನೇ ಕೊಡುವದಿಲ್ಲ, ಆಗ್ರಹವನ್ನೂ ಮಾಡುವದಿಲ್ಲ, ಅನುಭವದಲ್ಲಿಯೇ ಎಲ್ಲವನ್ನೂ ತೋರಿಸುತ್ತಾರೆ.

## 19. ಗೀತಾಭಾಷ್ಯವಾಕ್ಯಾನುಸಂಧಾನ–3

### (ಫೆಬ್ರವರಿ 1973)

ಹಿಂದಿನ ಲೇಖನಗಳಲ್ಲಿ "ಆತ್ಮಾನಾತ್ಮರ ವಿವೇಕವಿಲ್ಲದ್ದರಿಂದ ಹುಟ್ಟಿರುವ ತಪ್ಪುತಿಳಿವಿನ ರೂಪದ ಈ ಅವಿದ್ಯೆಯು (ಅಜ್ಞಾನವು) ಅಂತಃಕರಣಕ್ಕೇ ಸೇರಿದ್ದಾಗಿದೆ. ಇಂಥ ಅಜ್ಞಾನದ ಕತ್ತಲೆಯನ್ನು ಅದೇ ಅಂತಃಕರಣದಲ್ಲಿ ಭಕ್ತರ ಹೃದಯದಲ್ಲಿ ಹೊತ್ತಿಸುವ ಜ್ಞಾನದೀಪದಿಂದ ನಾಶಗೊಳಿಸುವೆನು" ಎಂದು ಭಗವಂತನು ಹೇಳಿರುವನೆಂಬುದರ ತಾತ್ಪರ್ಯವನ್ನು ಶ್ರೀಶಂಕರಾಚಾರ್ಯರ ಭಾಷ್ಯಾನುಸಾರವಾಗಿ ತಿಳಿಸಲಾಗಿತ್ತು. ಜ್ಞಾನದಿಂದ ತೊಲಗುವ ಈ ಅಜ್ಞಾನದ ಸ್ವರೂಪದ ವರ್ಣನೆಯ ಬಗ್ಗೆ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಅಲ್ಲಲ್ಲಿ ಆಚಾರ್ಯರು ಯುಕ್ತ್ಯನುಭವಗಳಿಗೆ ಹೊಂದಿಕೆಯಾಗುವಂತೆ ಬರೆದಿರುವ ಸಂಗತಿಯನ್ನೂ ಇದಕ್ಕೆ ವಿರುದ್ಧವಾಗಿ ಅವಿದ್ಯೆಯ ಸ್ವರೂಪವನ್ನು ವರ್ಣಿಸುತ್ತಿರುವವರ ಅಭಿಪ್ರಾಯಗಳು ಅನುಭವಕ್ಕೂ ಭಾಷ್ಯಕ್ಕೂ ವಿರುದ್ಧವಾಗಿರುವದನ್ನೂ ಸ್ಪಷ್ಟವಾಗಿ ತೋರಿಸಿಕೊಡಲಾಗಿದೆ.

ಈಗ ಜ್ಞಾನದೀಪವೆನಿಸುವ ಆತ್ಮವಿಜ್ಞಾನದ ಸ್ವರೂಪವೇನು?–ಎಂಬುದನ್ನು ಕುರಿತು ವಿಚಾರಿಸಬೇಕಾಗಿದೆ. ಈ ವಿಜ್ಞಾನವನ್ನು ಇಲ್ಲಿ '**ವಿವೇಕ ಪ್ರತ್ಯಯರೂಪೇಣ**' ಎಂದು ಭಾಷ್ಯಕಾರರು ವರ್ಣಿಸಿದ್ದಾರೆ. ಪ್ರತ್ಯಯ ಎಂದರೆ ವೃತ್ತಿ (ನಿಶ್ಚಿತಜ್ಞಾನ) ಎಂಬರ್ಥವಿದೆ. ಆದ್ದರಿಂದ ಈ ಆತ್ಮವಿಜ್ಞಾನವು ಒಂದು ಬಗೆಯ ವೃತ್ತಿಯೇ ಆಗಿದ್ದು ಅಂತಃಕರಣಕ್ಕೇ ಸೇರಿದ್ದಾಗಿದೆ. ಹೀಗೆಂದು ಆಚಾರ್ಯರು ಗೀ. 2–21ನೇ ಶ್ಲೋಕದ ಭಾಷ್ಯದಲ್ಲಿಯೂ ತೈತ್ತಿರೀಯಭಾಷ್ಯದಲ್ಲಿ **"ತಸ್ಮಾತ್ ನಾಮರೂಪಪಕ್ಷಸ್ಯೈವ ವಿದ್ಯಾವಿದ್ಯೇ । ನಾಮರೂಪೇ ಚ ನಾತ್ಮಧರ್ಮೌ"** ಎಂದೂ ಸ್ಪಷ್ಟಪಡಿಸಿದ್ದಾರೆ.

ಆದ್ದರಿಂದ ಇದು ಒಂದು ಬಗೆಯ ವೃತ್ತಿಯೇ ಎನ್ನಬಹುದು. ಆದರೂ ಇಲ್ಲಿ ಒಂದು ವಿಶೇಷವಿದೆ. ಹೊರಗಿನ ವಸ್ತುಗಳ ಬಗೆಗೆ ಹುಟ್ಟುವ ಜ್ಞಾನದ ವೃತ್ತಿಗೂ ಈ ವಿವೇಕಪ್ರತ್ಯಯರೂಪವಾದ ಆತ್ಮವಿಜ್ಞಾನಕ್ಕೂ ಒಂದು ಮುಖ್ಯ ಭೇದವಿರುತ್ತದೆ. ಅದೇನೆಂದರೆ: ಹೊರಗಿನ ವಸ್ತುಜ್ಞಾನದ ವೃತ್ತಿಯು ಹುಟ್ಟಿದಾಗ ಆ ಜ್ಞಾನವೂ ಹೊರಗಿನ ಜ್ಞೇಯವೂ ಒಳಗಿರುವ ಜ್ಞಾತೃ ಎಂದರೆ ತಿಳಿಯುವವನಾದ 'ನಾನು' ಎಂಬುವನೂ ಉಳಿದಿರುತ್ತಾರೆ. ಆದರೆ ಈ ಆತ್ಮವಿಜ್ಞಾನವು ಬಂದಾಗ 'ನಾನು ತಿಳಿಯುವವನು' ಎಂಬ ಜ್ಞಾತೃತ್ವವನ್ನೇ ಈ ವಿಜ್ಞಾನವು ಬಾಧಿಸಿಬಿಡುತ್ತದೆ, ಎಂದರೆ ಹುಸಿಗೈದುಬಿಡುತ್ತದೆ. ಆಗ ಆತ್ಮಸ್ವರೂಪವು ಜ್ಞೇಯವಲ್ಲ, ಆ ಆತ್ಮನೇ ತಾನಾಗಿ ನಿಂತಿರುತ್ತಾನೆ. ಹೀಗೆ ನಿಂತಿರುವ ಸ್ಥಿತಿಯನ್ನೇ ಈ ಬುದ್ಧಿವೃತ್ತಿಯೂ ಅನುಸರಿಸುವದರಿಂದ ಇದು ಸಹ ಬಾಧಿತವಾಗಿಯೇ ತೋರುತ್ತಿರುತ್ತದೆ– ಎಂದರೆ ಇದು ತೋರಿಕೆಗೆ ವೃತ್ತಿಯಂತೆ ಕಂಡರೂ ಸಂಪೂರ್ಣವಾಗಿ ಆತ್ಮವ್ಯಾಪ್ತವಾಗಿರುವದರಿಂದ ಇದರ ವೃತ್ತಿತ್ವವು ಹುಸಿಯಾಗಿಬಿಟ್ಟಿರುತ್ತದೆ. ಕೆಂಡದಲ್ಲಿ ಹಾಕಿದ ಕಟ್ಟಿಗೆಯು ಸುಟ್ಟು ಹೋದಾಗ ಕಟ್ಟಿಗೆಯ ಆಕಾರದಂತೆ ಕಂಡರೂ ಅದು ಬೆಂಕಿಯಿಂದ ವ್ಯಾಪ್ತವಾಗಿರುವದರಿಂದ ಅದರ ಕಾಷ್ಠತ್ವವು ಹೇಗೆ ಹುಸಿಯಾಗಿರುವದೋ ಹಾಗೆಯೇ ಇಲ್ಲಿ ಬುದ್ಧಿಯ ಬುದ್ಧಿತ್ವವು ಹೊರಟುಹೋಗಿ ಬರಿಯ ಆತ್ಮನಾಗಿರುತ್ತದೆ. ಹೀಗೆ ಚಿದ್ರೂಪನಾದ ಆತ್ಮನೊಬ್ಬನೇ ಆಗಿ ನಿಂತಿರುವ ಅಂತಃಕರಣದ ಸ್ಥಿತಿಯನ್ನು ಇಲ್ಲಿ 'ವಿವೇಕಪ್ರತ್ಯಯ' ಎಂದು ಕರೆದಿದೆ. ಆತ್ಮಸ್ವರೂಪವೇ ತಾನಾಗಿ ನಿಂತದ್ದನ್ನು ಕಂಡು ಕೊಂಡಿರುವದರಿಂದ ಉಂಟಾದ ಈ ಜ್ಞಾನವನ್ನೇ ವಿಜ್ಞಾನಸಹಿತವಾದ ಜ್ಞಾನವೆನ್ನುತ್ತಾರೆ. ಆದ್ದರಿಂದ ಇದು ಬರಿಯ ಬುದ್ಧಿಯಿಂದ ವಿಚಾರಿಸಿ ನಿಶ್ಚಯಿಸಿದ ಇತರ ಜ್ಞಾನಗಳಂತೆ ಅಲ್ಲ, ಅಥವಾ ಇಂದ್ರಿಯಕ್ಕೂ ಹೊರಗಿನ ವಿಷಯಗಳಿಗೂ ಸಂಬಂಧಿಸಿದಾಗ ಆಗುವ ಪ್ರತ್ಯಯದಂತೆಯೂ ಅಲ್ಲ, ಅಥವಾ ಮನಸ್ಸಿನಲ್ಲಿಯೇ ಉಂಟಾಗುವ ಸುಖ, ಮತ್ಸರ, ದುಃಖಾದಿಗಳಂತೆ ವೇದನಾನುಭವವೂ ಅಲ್ಲ. ಅರಿಯಹೊರಟ 'ನಾನು' ಸಾಧನವಾದ ಬುದ್ಧಿ, ಈ ಭೇದವೆಲ್ಲವೂ ಬಾಧಿತವಾಗಿ ಎಲ್ಲವೂ ಕೇವಲಾತ್ಮವ್ಯಾಪ್ತವಾಗಿ ಗೋಚರಿಸುವ ಈ ವಿವೇಕಪ್ರತ್ಯಯವನ್ನೇ 'ಜ್ಞಾನಚಕ್ಷುಸ್ಸು' ಎಂದು ಗೀ. 13–34ರಲ್ಲಿ ಆಚಾರ್ಯರು ವರ್ಣಿಸಿದ್ದಾರೆ. ಮಾಂಡೂಕ್ಯದ ಏಳನೇ ಮಂತ್ರದಲ್ಲಿ 'ಏಕಾತ್ಮಪ್ರತ್ಯಯ' ಎಂದು ಇದನ್ನೇ ಕರೆದಿದೆ. 'ಆತ್ಮಸತ್ಯಾನುಬೋಧ' ಎಂದು (ಗೌ.ಕಾ.3–32) ರಲ್ಲಿ ಗೌಡಪಾದರು ಇದನ್ನು ಕರೆದಿದ್ದಾರೆ. ಇದು ಶಾಸ್ತ್ರಾಚಾರ್ಯರ ಉಪದೇಶದಿಂದಲೂ ಭಗವಂತನ ಅನುಗ್ರಹದಿಂದಲೂ ಜಿಜ್ಞಾಸುವಿನ ಅಂತಃಕರಣದಲ್ಲಿ ಹುಟ್ಟುವದೇ ಹೊರತು ಬರೀ ಚುರುಕುಬುದ್ಧಿಯಿಂದ ಮಾಡಿದ ತರ್ಕಾದಿಗಳಿಂದ ಹುಟ್ಟಲಾರದು. ಆದ್ದರಿಂದ ವಿವೇಕಪ್ರತ್ಯಯವೆಂದರೆ ಸಾಮಾನ್ಯಬುದ್ಧಿವೃತ್ತಿಯಂತೆ ಅಲ್ಲ– ಎಂಬುದನ್ನು ನೆನಪಿಡಬೇಕು.

# 20. ಗೀತಾಭಾಷ್ಯವಾಕ್ಯಾನುಸಂಧಾನ–4

## (ಮಾರ್ಚಿ 1973)

ವಿವೇಕಪ್ರತ್ಯಯರೂಪವಾದದ್ದೇ ಜ್ಞಾನದೀಪವು–ಎಂದು ಭಗವಂತನು ಗೀತೆಯ 10–11ರಲ್ಲಿ ಹೇಳಿರುವದಾಗಿ ಶ್ರೀಶಂಕರರು ಬರೆದಿರುವದನ್ನೂ ಈ ವಿವೇಕ ಪ್ರತ್ಯಯವೆಂಬುದು ಬರಿಯ ಬುದ್ಧಿಯಿಂದ ಉಂಟಾಗುವ ಹೊರಗಿನ ವಸ್ತುಜ್ಞಾನಗಳ ವೃತ್ತಿಯಂತೆ ಅಲ್ಲವೆಂಬುದನ್ನೂ ಹಿಂದಿನ ಲೇಖನದಲ್ಲಿ ವಿವರಿಸಿದ್ದಾಗಿದೆ.

ಈ ವಿವೇಕಪ್ರತ್ಯಯವು ಅನುಭವಸ್ವರೂಪವೇ ಆದ ಆತ್ಮನನ್ನು ಕಂಡು ಕೊಂಡದ್ದರಿಂದ–ಎಂದರೆ, ವಿವೇಕದಿಂದ ಹಿಂದಿರುಗಿ ತಾನೇ ತಾನಾಗಿ ನಿಂತು ಈ ಬುದ್ಧಿಯನ್ನೂ ವಿಷಯೀಕರಿಸಿ ವ್ಯಾಪಿಸಿಕೊಂಡು ನೋಡಿದ್ದರಿಂದ ಬುದ್ಧಿಯ ಬುದ್ಧಿತ್ವವು ಬಾಧಿತವಾಗಿ ಒಳಗೂ ಹೊರಗೂ ತಾನೇ ಹೊರತು ಇನ್ನೊಂದೆಂಬುದಿಲ್ಲದ ಅನುಭವದಲ್ಲಿ ನಿಂತಿರುವ ರೂಪದ್ದೆಂದೂ ಹಿಂದೆ ವಿವರಿಸಿದೆ.

ಈಗ 'ಅನುಭವಸ್ವರೂಪ', ಹಾಗೂ 'ಅನುಭವದಲ್ಲಿ ನಿಂತಿರುವದು' ಎಂಬ ಮಾತುಗಳಿಗೆ ಅರ್ಥವೇನೆಂಬುದು ಜ್ಞಾನಸಾಧಕರಿಗೆ ಚೆನ್ನಾಗಿ ಗೊತ್ತಾಗಬೇಕಲ್ಲದೆ ಆ ಬಗೆಗೆ ಯಾವ ತಪ್ಪುಗ್ರಹಿಕೆಗಳೂ ಉಳಿಯಬಾರದೆಂಬ ಉದ್ದೇಶದಿಂದ ಇಲ್ಲಿ ಕೆಲವು ಮುಖ್ಯಸಂಗತಿಗಳನ್ನು ಕುರಿತು ವಿಚಾರಿಸಲಾಗಿದೆ.

ಮೊದಲು 'ಅನುಭವಸ್ವರೂಪ' ಎಂಬ ಮಾತಿಗೆ ಅರ್ಥವೇನೆಂದರೆ–ಈಗ ನಮಗೆಲ್ಲರಿಗೂ ಸ್ವಾಭಾವಿಕವಾಗಿ 'ನಾನು ಇಂಥವನು' ಎಂಬುದು ಇದ್ದುಬಿಟ್ಟಿದ್ದು ಈ ನನಗೆ ಇಂಥಿಂಥ ಅನುಭವಗಳು–ಉದಾಹರಣೆಗೆ, ಇಂದ್ರಿಯಗಳಿಂದ ಹೊರಗಿನ ಶಬ್ದ ಸ್ಪರ್ಶಾದ್ಯನುಭವಗಳೂ–ಅಂತಃಕರಣದಲ್ಲಿ ಕಾಮ, ಕ್ರೋಧ, ಭಕ್ತಿ ಭಯ ಮುಂತಾದ ಅನುಭವಗಳೂ ಆಯಾ ಸಂದರ್ಭಕ್ಕನುಸರಿಸಿ ಬರುವವು–ಎಂಬುದು ಎಲ್ಲರಿಗೂ ಗೊತ್ತಿದೆ. ಹಠಯೋಗ, ರಾಜಯೋಗ ಅಥವಾ ಪಾತಂಜಲಯೋಗಶಾಸ್ತ್ರಾದಿಗಳಲ್ಲಿ ಹೇಳಿರುವಂತೆ ಸಾಧನಗಳನ್ನು ಮಾಡಿದರೆ ಪ್ರಕಾಶದರ್ಶನ, ನಾದಶ್ರವಣ, ವಿಚಿತ್ರ ದಿವ್ಯಭವ್ಯ ಅನುಭವಗಳು–ಕೊನೆಗೆ ನಿರ್ವಿಕಲ್ಪ (ಅಸಂಪ್ರಜ್ಞಾತ) ಸಮಾಧಿಯವರೆಗೂ ಬರತಕ್ಕ ಅನುಭವಗಳೂ ಇಲ್ಲದೆ ಇಲ್ಲ. ಅಥವಾ ಯಾವುದಾದರೊಂದು ದೇವತೆಯನ್ನು ಉಪಾಸನೆ ಮಾಡಿದರೆ ಆ ದೇವತೆಯ ಸಗುಣಸಾಕ್ಷಾತ್ಕಾರ, ಅದರಿಂದ ನಡೆಯುವ ಮಹಿಮೆಗಳು, ಅಣಿಮಾದಿ ಅಷ್ಟಮಹಾಸಿದ್ಧಿಗಳನ್ನು ಪಡೆದು ದೂರದರ್ಶನ,

ದೂರಶ್ರವಣಾದಿ ಅದ್ಭುತಾನುಭವಗಳೂ ಈ ಜಗತ್ತಿನಲ್ಲಿ ಆಗದೆ ಇಲ್ಲ. ಇವು ಸಂಭವನೀಯವಾಗಿರುವವೆಂಬ ಮಾತನ್ನು ಶ್ರೀಶಂಕರಾಚಾರ್ಯರು ತಮ್ಮ ಭಾಷ್ಯಗಳಲ್ಲಿ (ಸೂ.ಭಾ.1–1–33) ಒಪ್ಪಿಕೊಂಡಿದ್ದಾರೆ. ಆದರೆ ಇಲ್ಲಿ 'ಅನುಭವಸ್ವರೂಪ' ಎಂಬ ಮಾತಿಗೆ ಈವರೆಗೆ ಹೇಳಿದ ಯಾವ ಅರ್ಥವೂ ಇರುವದಿಲ್ಲ. ಈಗ ವರ್ಣಿಸಿರುವ ಅನುಭವಗಳೆಲ್ಲವೂ 'ನಾನು ಇಂಥವನು' ಎಂಬುದನ್ನು ಇಟ್ಟುಕೊಂಡೇ ಹೊಸದಾಗಿ ಹುಟ್ಟತಕ್ಕವುಗಳಾಗಿವೆ. ಇಲ್ಲಿ ವೇದಾಂತಶಾಸ್ತ್ರದಲ್ಲಿ ಹೇಳಿದ ಅನುಭವಸ್ವರೂಪ ಎಂಬುದು ಈ 'ನಾನು ಇಂಥವನು' ಎಂಬುದಕ್ಕೂ ಹಿಂತಡಿಕೆಯಾಗಿದ್ದು ಈ ನಾನೆಂಬ ಅನಿಸುವಿಕೆಯು ಇದ್ದದ್ದನ್ನೂ ಎಂದರೆ ತೋರಿದ್ದನ್ನೂ ಅಡಗಿದ್ದನ್ನೂ ಬೆಳಗುತ್ತಾ ಈ 'ನಾನು' ಹಾಗೂ ಇದರ ಪರಿವಾರವೆಲ್ಲವನ್ನೂ ವ್ಯಾಪಿಸಿಕೊಂಡಿರುವ ನಿಜವಾದ 'ನಾನು' ಅಂದರೆ 'ತಾನು' ಎಂಬ ಸ್ವರೂಪವನ್ನೇ ಅನುಭವಸ್ವರೂಪ ಎಂದಿದೆ. ಇದು ಹೊಸದಾಗಿ ಬರತಕ್ಕದ್ದಲ್ಲ, ಮೊದಲೇ ಇದ್ದದ್ದು. ಶ್ರೀಶಂಕರರು ತಮ್ಮ ಸೂತ್ರಭಾಷ್ಯದಲ್ಲಿ (1–1–4) **"ಅಹಂಪ್ರತ್ಯಯವಿಷಯಕರ್ತೃವ್ಯತಿರೇಕೇಣ ತತ್ಸಾಕ್ಷೀ, ಸಮಃ ಏಕಃ ಕೂಟಸ್ಥನಿತ್ಯಃ ......ಸರ್ವಸ್ಯ ಆತ್ಮಾ"** ಎಂಬ ಮಾತುಗಳಿಂದ ಈ ಅನುಭವಸ್ವರೂಪವನ್ನು ತಿಳಿಸಿ ಇದು ಭೂತ, ಪರಿನಿಷ್ಠಿತ, ಪರಿನಿಷ್ಪನ್ನ–ವಸ್ತುವೆಂದು ವರ್ಣಿಸಿದ್ದಾರೆ.

ಈಗಿನ 'ನಾನು ಇಂಥವನು' ಎಂಬ ಅನಿಸುವಿಕೆಗೆ ಗೋಚರವಾಗಿ ಕರ್ತೃಭೋಕ್ತೃವಾಗಿರುವ, ಎಲ್ಲರೂ ತಿಳಿದಿರುವಸ್ವರೂಪಕ್ಕಿಂತ ಬೇರೆಯಾಗಿ ಇದು ತೋರಿದ್ದನ್ನೂ ಅಡಗಿದ್ದನ್ನೂ ಬೆಳಗಿ ತೋರಿಸುವ ಕೇವಲ ಅನುಭವಸ್ವರೂಪವಾದ **'ಸಾಕ್ಷಿ'** ಯನ್ನೇ ವೇದಾಂತದಲ್ಲಿ 'ಆತ್ಮ' ಎಂದಿದೆ. ಇದು ಮೊದಲೇ ಇದ್ದುಬಿಟ್ಟಿರುವ ಸ್ವರೂಪವು ಎಂಬುದು ಮೇಲಿನ ವಾಕ್ಯಗಳ ತಾತ್ಪರ್ಯವು.

ಆದ್ದರಿಂದ ಜಿಜ್ಞಾಸುಗಳು ಯಾವುದೋ ಗುಪ್ತಸಾಧನವನ್ನು ಮಾಡಿದ ಮೇಲೆ ಹೊಸದಾಗಿ ಬರುವ ಭವ್ಯದಿವ್ಯಅದ್ಭುತವಾದ ಅನುಭವವು ಬಂದರೇ ಆತ್ಮ ವಿಜ್ಞಾನವಾಗುವದೆಂಬ ತಪ್ಪುಗ್ರಹಿಕೆಗೆ ಒಳಗಾಗಬಾರದು. ಮತ್ತೇನೆಂದರೆ ಭಗವಂತನೇ ಹೇಳಿದಂತೆ **"ಸಮೋಽಹಂ ಸರ್ವಭೂತೇಷು"** (ಗೀ. 9–29) ಎಲ್ಲರಿಗೂ ಸಮಾನವಾಗಿದ್ದ (ಕಾಲ, ದೇಶ, ಲಿಂಗ, ವಯ, ಜಾತಿ–ಇವುಗಳ ಭೇದವಿಲ್ಲದೆ) ಸಾರ್ವತ್ರಿಕವಾಗಿದ್ದ ಸಾಕ್ಷ್ಯನುಭವವನ್ನೇ ಇಲ್ಲಿ 'ಅನುಭವಸ್ವರೂಪನಾದ ಆತ್ಮ' ಎಂದಿದೆ–ಎಂಬುದನ್ನು ಲಕ್ಷ್ಯದಲ್ಲಿಡಬೇಕು. ಇನ್ನು "ಈ ಅನುಭವಸ್ವರೂಪವನ್ನು ಕಂಡು ಅಲ್ಲಿಯೇ ನೆಲೆನಿಂತ ಅನುಭವ" ಎಂದರೆ ಏನರ್ಥ?–ಎಂಬುದನ್ನು ಮುಂದಿನ ಸಲಕ್ಕೆ ವಿವರಿಸೋಣ.

# 21. ಗೀತಾಭಾಷ್ಯವಾಕ್ಯಾನುಸಂಧಾನ–5

## (ಏಪ್ರಿಲ್ 1973)

ಭಗವಂತನ ಅನುಗ್ರಹದಿಂದ ಪ್ರಾಪ್ತವಾಗುವ ವಿವೇಕಪ್ರತ್ಯಯರೂಪವಾದ ಜ್ಞಾನದೀಪದ ವರ್ಣನೆಯಲ್ಲಿ 'ವಿವೇಕಪ್ರತ್ಯಯ' ಎಂದರೇನೆಂಬುದನ್ನು ಹಿಂದಿನ ಎರಡು ಲೇಖನಗಳಲ್ಲಿ ವಿವರಿಸುತ್ತಾ ಬಂದಿದೆ. ಶಾಸ್ತ್ರ ಹಾಗೂ ಆಚಾರ್ಯರ ಉಪದೇಶವನ್ನನುಸರಿಸಿ ಜಿಜ್ಞಾಸುವಿನ ಶುದ್ಧವಾದ ಅಂತಃಕರಣವು ಈಗಿನ 'ನಾನು' ಎಂಬುದಕ್ಕೂ ಹಿಂದೆ ಇರುವ ಕೇವಲ ತಾನೇ ತಾನಾದ ಆತ್ಮಸ್ವರೂಪದೆಡೆಗೆ ತಿರುಗಿದಾಗ ಆತ್ಮಸ್ವರೂಪದಂತೆಯೇ ಅಂತಃಕರಣವು ಸಹ ನಿರ್ವಿಷಯವಾಗಿ ಭಾಸವಾಗ ತೊಡಗುತ್ತದೆ. ಆಗ ''ಇದೆಲ್ಲವೂ ಬರೀ ತಾನು, ಇನ್ನೊಂದೆಂಬುದಿಲ್ಲವೇ ಇಲ್ಲ'' ಎಂಬ ಅನುಭವದಲ್ಲಿಯೇ ನಿಂತಿರುವದು ಗೊತ್ತಾಗುತ್ತದೆ. ಇದು ಬರಿಯ ಬುದ್ಧಿಯಿಂದ ಅಥವಾ ತರ್ಕದಿಂದ ಊಹೆ ಮಾಡಿ ತಿಳಿದಿರುವ ಸಂಗತಿಯಲ್ಲ, ಅಥವಾ ಪಾತಂಜಲ ಯೋಗ, ರಾಜಯೋಗದಲ್ಲಿ ಹೇಳಿದಂತೆ ಸಾಧನೆಮಾಡಿ ಹೊಸದಾಗಿ ಪಡೆದಿರುವ ಭವ್ಯಾನುಭವ, ದಿವ್ಯಾನುಭವಗಳಂತೆ ಯಾವುದೋ ಒಂದು ಅದ್ಭುತ ಘಟನೆಯಲ್ಲ. ಸಕಲವಿಶೇಷಗಳನ್ನೂ ಬಾಧಿಸಿ ಕೇವಲ ನಿರ್ವಿಶೇಷಚಿನ್ಮಾತ್ರಸ್ವರೂಪದಲ್ಲಿಯೇ ನಿಂತಿರುವ ಅನುಭವಮಾತ್ರವೇ ಇದಾಗಿದೆ. ''ವಾಸುದೇವಃ ಸರ್ವಮ್ ಇತಿ'' (ಗೀ. 7–19) ಎಂಬ ಅನುಭವವೇ ಇದು. ಇದು ವಿವೇಕದಿಂದ ಮಾತ್ರವೇ ಪ್ರಾಪ್ತವಾಗುತ್ತದೆ– ಎಂಬ ವಿಷಯಗಳನ್ನು ಹಿಂದೆ ಹೇಳಿತ್ತು.

ಈಗ ಈ ವಿವೇಕಪ್ರತ್ಯಯದ ಬಗ್ಗೆ ಪ್ರಚಾರದಲ್ಲಿರುವ ಇನ್ನೂ ಕೆಲವು ತಪ್ಪು ಗ್ರಹಿಕೆಗಳನ್ನು ಈ ಲೇಖನದಲ್ಲಿ ಸ್ವಲ್ಪ ಮಟ್ಟಿಗೆ ವಿವರಿಸಬೇಕಾಗಿರುತ್ತದೆ. ಈಗ್ಗೆ ವೇದಾಂತಿಗಳು ''ನಾನೇ ಆತ್ಮನೆಂದು ತಿಳಿಯಿರಿ, ಹಾಗೂ ಅದನ್ನೇ ಮತ್ತೆ ಗಟ್ಟಿಗೊಳಿಸಿರಿ'' ಎಂದು ತಮ್ಮ ಶಿಷ್ಯರಿಗೆ ಬೋಧಿಸುತ್ತಿರುತ್ತಾರೆ. ಆ ಶಿಷ್ಯರು ಸಹ ''ಆತ್ಮಸ್ವರೂಪವೇ ನಾನು ಎಂದು ತಿಳಿದಿದ್ದೇವೆ'' ಎಂದುಕೊಳ್ಳುತ್ತಾರೆ. ಆಗ ''ಈಗ ನಿಮಗೆ ಜ್ಞಾನವಾಗಿದೆ, ಇನ್ನು ಇದನ್ನು ಯಾವಾಗಲೂ ಅಳೆದು ಸುರಿಯುತ್ತಾ ಗಟ್ಟಿಗೊಳಿಸಿರಿ, ಅಖಂಡಾಕಾರವೃತ್ತಿ ಬರುವವರೆಗೂ ಸಾಧಿಸಿರಿ'' ಎಂದು ಮತ್ತೆ ಗುರುಗಳಾದವರು ಬೋಧಿಸುತ್ತಿರುತ್ತಾರೆ. ಈ ಪದ್ಧತಿಯಲ್ಲಿ ''ನಾನು ಆತ್ಮನನ್ನರಿತಿರುವೆನು. ಇನ್ನು ಮುಂದೆ ಇದನ್ನು ಗಟ್ಟಿಗೊಳಿಸಿಕೊಳ್ಳಬೇಕು'' ಎಂಬುದು ಸಾಧಕರಿಗೆ ಉಳಿದೇ ಬಿಡುತ್ತದೆ. ಇಲ್ಲಿ ನಿರ್ವಿಶೇಷನಾದ ಆತ್ಮನೇ ನಾನು ಎಂಬುದನ್ನು ಕೆಲವು ಯುಕ್ತಿಗಳಿಂದಲೂ ಅದ್ವೈತದಲ್ಲಿರುವ ಶ್ರದ್ಧೆಯ ಬಲದಿಂದಲೂ ಈ ಜನಗಳು ಗ್ರಹಿಸಿಕೊಂಡಿರುತ್ತಾರೆ. ಇವರಿಗೆ

'ನಾನು ತಿಳಿದವನು' ಎಂಬ ಜ್ಞಾತೃತ್ವವೂ, 'ನಾನು ಗಟ್ಟಿ ಮಾಡುವವನು' ಎಂಬ ಕರ್ತೃತ್ವವೂ ಉಳಿದುಕೊಂಡೇಬಿಟ್ಟಿರುತ್ತದೆ. ಇದು ನಿಜವಾದ ವಿವೇಕಪ್ರತ್ಯಯವಲ್ಲ.

ಛಾಂದೋಗ್ಯದಲ್ಲಿದಹರವಿದ್ಯೆ (8–1–1 ರಿಂದ 8–6–6–), ಶಾಂಡಿಲ್ಯವಿದ್ಯೆ (3–14–1 ರಿಂದ 4) ಗಳಲ್ಲಿ ನಾನೇ ಬ್ರಹ್ಮವೆಂದು ಸಾಯುವವರೆಗೂ ಉಪಾಸನೆ ಮಾಡುವ ರೂಪದ ಅಹಂಗ್ರಹೋಪಾಸನೆಯನ್ನು ಹೇಳಿದೆ. ಇದಕ್ಕೆ ಸಂನ್ಯಾಸಾದಿಗಳನ್ನು ಸ್ವೀಕರಿಸಿ ಇನ್ನೊಂದು ಪ್ರತ್ಯಯವು ಅಡ್ಡಬಾರದ ಪರಿಸ್ಥಿತಿಯನ್ನಿಟ್ಟುಕೊಂಡು ತೈಲಧಾರೆಯಂತೆ ಸತತವಾಗಿ ಕೊನೆಯವರೆಗೂ ಉಪಾಸನೆಮಾಡುವ ರೂಪದ ಅಧಿಕಾರಸಂಪತ್ತಿಯು ಅವಶ್ಯವಾಗಿ ಬೇಕಾಗಿರುತ್ತದೆ. ಇದರ ಫಲವು ಬ್ರಹ್ಮಲೋಕಪ್ರಾಪ್ತಿಯ ಮೂಲಕ ಕ್ರಮಮುಕ್ತಿಯೇ ಆಗಿದೆ. ಆದರೆ ಕರ್ತೃತಂತ್ರವಾದ ಈ ಉಪಾಸನೆಗಿಂತಲೂ ಈಗ ಪ್ರಕೃತವಾಗಿರುವ ವಸ್ತುತಂತ್ರಪ್ರಧಾನವಾದ ವಿವೇಕಪ್ರತ್ಯಯವು ತೀರಾ ವಿಲಕ್ಷಣವಾಗಿದ್ದು ಇಲ್ಲಿಯೇ ಫಲಕೊಡತಕ್ಕದ್ದಾಗಿದೆ. ಜ್ಞಾತೃತ್ವ ಕರ್ತೃತ್ವಾದಿ ಸಮಗ್ರದ್ವೈತ ಪ್ರಪಂಚವನ್ನೇ ಬಾಧಿಸಿ–ಹುಸಿಗೈದು ಈಗಲೇ ನಿಷ್ಪ್ರಪಂಚವಾದ ಸ್ವರೂಪದಲ್ಲಿ ನಿಂತಿರುವ ಅನುಭವವನ್ನು ತಂದುಕೊಡುವದೇ ಈ ವಿವೇಕ ಪ್ರತ್ಯಯದ ಕೆಲಸವು. ಈ ದೃಷ್ಟಿಯಲ್ಲಿ ಆಗ ಈ ಪ್ರತ್ಯಯವು ಸಹ ಬಾಧಿತವಾಗಿರುತ್ತದೆ. ಎಲ್ಲವೂ ಬರಿಯ ಆತ್ಮಮಾತ್ರವಾಗಿರುತ್ತದೆ. ಈ ರಹಸ್ಯವನ್ನು ಸರಿಯಾದ ಅನುಭಾವಿಗಳಾದ ಸಾಂಪ್ರದಾಯಿಕರ ಬೋಧದ ನೆರವಿನಿಂದಲೇ ತಿಳಿದುಕೊಳ್ಳಬೇಕಲ್ಲದೆ ಬೇರೆ ಗತಿ ಇಲ್ಲ. ಇದು ತಿಳಿಯದ್ದರಿಂದಲೇ ''ನಾನು ಆತ್ಮನನ್ನರಿತವನು, ಗಟ್ಟಿ ಮಾಡುವವನು'' ಎಂಬ ಜ್ಞಾತೃತ್ವಕರ್ತೃತ್ವಾಭಿಮಾನವನ್ನೇ ಇಟ್ಟುಕೊಂಡಿರುವರು; ಭಗವಂತನ ದಯದಿಂದ ಹುಟ್ಟುವದೆಂದು ಆಚಾರ್ಯರು ಹೇಳುವ ವಿವೇಕಪ್ರತ್ಯಯದ ಸರಿಯಾದ ಸ್ವರೂಪವನ್ನರಿಯರು. ಅಲ್ಲದೆ ಅಹಂಗ್ರಹೋಪಾಸನೆಗೆ ಯೋಗ್ಯತೆಯೂ ಇಲ್ಲದೆ ವಿವೇಕಪ್ರತ್ಯಯದಲ್ಲಿ ನಿಲುಗಡೆಯನ್ನೂ ಹೊಂದದೆ ಕೇವಲ ಬುದ್ಧಿಯುಕ್ತಿಶ್ರದ್ಧೆಗಳ ಬಲದಿಂದ ತಿಳಿದ ತಪ್ಪುತಿಳಿವಳಿಕೆಯನ್ನೇ ಜ್ಞಾನವೆಂದು ಭ್ರಮಿಸಿದವರಾಗಿರುತ್ತಾರೆ. ಆದ್ದರಿಂದ ವಿವೇಕಸಮಕಾಲದಲ್ಲಿಯೇ ಆತ್ಮಸ್ವರೂಪದಲ್ಲಿ ನಿಂತುಬಿಡುವ ಅನುಭವಪರ್ಯವಸಾಯಿಯಾದ ವಿವೇಕಪ್ರತ್ಯಯವು ಹುಟ್ಟಬೇಕಾದರೆ ಭಗವಂತನ ಅನುಗ್ರಹವೇ ಆಗಬೇಕು. ಸರಿಯಾದ ಅನುಭಾವಿಗಳ ಬೋಧವು ಆತನ ಅನುಗ್ರಹದಿಂದಲೇ ದೊರೆಯುತ್ತದೆ. ಇದಕ್ಕಾಗಿ ಸಾಧಕರು ಮೊದಲು 'ಇಂಥ ಬೋಧವನ್ನೇ ಕರುಣಿಸು' ಎಂದು ಭಗವಂತನಿಗೆ ಶರಣಾಗತರಾಗಬೇಕು. ಅದಕ್ಕಾಗಿಯೇ ಮುಂದಿನ 'ಭಕ್ತಿಪ್ರಸಾದಸ್ನೇಹಾಭಿಷಿಕ್ತೇನ' ಎಂಬ ವಾಕ್ಯವು ಬಂದಿದೆ. ಅದರ ಬಗ್ಗೆ ಮುಂದಿನ ಲೇಖನದಲ್ಲಿ ನೋಡೋಣ.

# 22. ಗೀತಾಭಾಷ್ಯವಾಕ್ಯಾನುಸಂಧಾನ–6

## (ಮೇ 1973)

ಹಿಂದಿನ ಲೇಖನದಲ್ಲಿ ವಿವೇಕಪ್ರತ್ಯಯದ ಬಗ್ಗೆ ಕೆಲವು ತಪ್ಪುಗ್ರಹಿಕೆಗಳನ್ನು ವಿವರಿಸಿ, ಇನ್ನು ಮುಂದೆ ಈ ಬಗೆಗೆ ಬೇಕಾಗುವ ಸಾಧನೆಯ ಬಗ್ಗೆ ವಿವರಿಸುವ ಮಾತನ್ನು ಹೇಳಿತ್ತು. ಆ ಮೇರೆಗೆ ಈಗ ಸಾಧನೆಗಳನ್ನೇ ವಿವರಿಸಬೇಕಾದದ್ದು ಕ್ರಮಪ್ರಾಪ್ತವಾಗಿದ್ದರೂ ಈ ವಿವೇಕಪ್ರತ್ಯಯರೂಪದ ಆತ್ಮವಿಜ್ಞಾನದ ಬಗೆಗೆ ಶ್ರೀಶಂಕರಾಚಾರ್ಯರು ತಮ್ಮ ಭಾಷ್ಯಗಳಲ್ಲಿ ತಿಳಿಸಿರುವ ಕೆಲವು ಮಹತ್ತ್ವದ ವಿಚಾರಗಳನ್ನು ವಿವರಿಸದಿದ್ದರೆ ಈ ವಿಚಾರವು ಅಪೂರ್ಣವಾಗುವದೆಂದು ಕಾಣುವದರಿಂದ ಈ ಸಲವೂ ಸಹ ಈ ಆತ್ಮವಿಜ್ಞಾನದ ಸ್ವರೂಪವನ್ನೇ ಕುರಿತು ಕೊನೆಯದಾಗಿ ಕೆಲ ಮಾತುಗಳನ್ನು ಅನುಸಂಧಾನಮಾಡಬೇಕಾಗಿದೆ.

ಗೀತೆಯ 18ನೆಯ ಅಧ್ಯಾಯದ 50ನೆಯ ಶ್ಲೋಕದಲ್ಲಿ ಆತ್ಮವಿಜ್ಞಾನದ ಸ್ವರೂಪವನ್ನು ತಿಳಿಸುವಾಗ ಶ್ರೀಶಂಕರರು ''ಅತಶ್ಚ ಆತ್ಮವಿಷಯಂ ಜ್ಞಾನಂ ನ ವಿಧಾತವ್ಯಮ್। ಕಿಂ ತರ್ಹಿ ನಾಮರೂಪಾದ್ಯನಾತ್ಮಾಧ್ಯಾರೋಪಣನಿವೃತ್ತಿರೇವ ಕಾರ್ಯಾ ನ ಆತ್ಮ ಚೈತನ್ಯವಿಜ್ಞಾನಂ ಕಾರ್ಯಮ್॥ ........ತಸ್ಮಾತ್ ಅವಿದ್ಯಾಧ್ಯಾರೋಪಿತ ನಿರಾಕರಣಮಾತ್ರಂ ಬ್ರಹ್ಮಣಿ ಕರ್ತವ್ಯಂ ನ ತು ಬ್ರಹ್ಮಜ್ಞಾನೇ ಯತ್ನಃ'' ಎಂದಿದ್ದಾರೆ. ಇದರಂತೆಯೇ ಬೃಹದಾರಣ್ಯಕದ 4–4–20ರಲ್ಲಿ ''ಜ್ಞಾನಂ ಚ ತಸ್ಮಿನ್ ಪರಾತ್ಮಭಾವ ನಿವೃತ್ತಿರೇವ। ನ ತಸ್ಮಿನ್ ಸಾಕ್ಷಾದಾತ್ಮಭಾವಃ ಕರ್ತವ್ಯೋ........ ಅನ್ಯಾತ್ಮಭಾವನಿವೃತ್ತೌ ಆತ್ಮಭಾವಃ ಸ್ವಾತ್ಮನಿ ಸ್ವಾಭಾವಿಕೋ ಯಃ ಸಃ ಕೇವಲೋ ಭವತಿ ಇತಿ ಆತ್ಮಾಜ್ಞಾನಂ ಇತ್ಯುಚ್ಯತೇ। ಸ್ವತಃ ಅಪ್ರಮೇಯಃ ಪ್ರಮಾಣಾನ್ತರೇಣ ನ ವಿಷಯೀಕ್ರಿಯತೇ...........'' ಎಂದಿದ್ದಾರೆ.

ಈ ಎರಡೂ ವಾಕ್ಯಗಳನ್ನು ಅನುಸಂಧಾನಮಾಡಿದರೆ ವಿವೇಕಪ್ರತ್ಯಯರೂಪದ ಆತ್ಮವಿಜ್ಞಾನವೆಂದರೇನೆಂಬುದು ಸ್ಪಷ್ಟವಾಗುತ್ತದೆ. ''ತಾನು ಸ್ವತಃಸಿದ್ಧನಾಗಿದ್ದೇ ಇದ್ದಾನೆ. ಈ ತನ್ನ ಸ್ವರೂಪವನ್ನರಿಯದಾಗ ತನ್ನಲ್ಲಿರುವಂತೆ ಕಾಣುವ (ಕಲ್ಪಿತವಾದ) ದೇಹ, ಇಂದ್ರಿಯ, ಮನಸ್ಸು, ಬುದ್ಧಿ–ಮುಂತಾದವುಗಳಲ್ಲೆಲ್ಲ ಈ ತಾನು ವ್ಯಾಪಿಸಿಕೊಂಡಿದ್ದೇ ಬಿಟ್ಟಿದ್ದಾನೆ. ಆದ್ದರಿಂದ ತಾನೆಂಬ ಸ್ವರೂಪವನ್ನು ತಿಳಿಸಬೇಕಾದ್ದಿಲ್ಲ, ತಿಳಿಯಬೇಕಾದದ್ದೂ ಇಲ್ಲ. ತನ್ನಲ್ಲಿ ಕಲ್ಪಿತಗಳಾದ ದೇಹ, ಇಂದ್ರಿಯ, ಮನಸ್ಸು, ಬುದ್ಧಿ ಅಹಂಕಾರದವರೆಗಿನ ತೋರಿಕೆಗಳಲ್ಲಿರುವ ಆತ್ಮಭಾವವನ್ನು ಬಿಟ್ಟರಾಯಿತು. ಕೇವಲನಾಗಿರುವ ತಾನೇ ತಾನು

ಅದ್ವಿತೀಯನಾಗಿ ಉಳಿದುಕೊಳ್ಳುತ್ತಾನೆ. ಇಂಥ ತನ್ನ ಬಗ್ಗೆ ಮತ್ತೆ ತಿಳಿಯಬೇಕಾದ್ದಾಗಲಿ, 'ಇದೇ ನಾನು' ಎಂದು ಹೊಸದಾಗಿ ಆತ್ಮಭಾವವನ್ನು ಮಾಡಿಕೊಳ್ಳಬೇಕಾದದ್ದಾಗಲಿ ಇರುವದೇ ಇಲ್ಲ''–ಎಂಬುದು ಮೇಲಿನ ಎರಡೂ ವಾಕ್ಯಗಳ ಅತಿ ಸಂಕ್ಷಿಪ್ತ ಸಾರಾಂಶವಾಗಿದೆ.

ಭಗವಂತನ ಅನುಗ್ರಹದಿಂದ ಸರಿಯಾದ ಶಾಸ್ತ್ರವೂ ಅನುಭಾವಿಗಳಾದ ಗುರುಗಳ ಬೋಧವೂ ದೊರಕಿದಾಗ ಜಿಜ್ಞಾಸುವಿನ ಅಂತಃಕರಣವು ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಕೊನೆಗೆ ನಾನೆಂಬ ಅನಿಸುವಿಕೆಯವರೆಗಿನ ಎಲ್ಲದರಿಂದಲೂ ಹಿಂದಿರುಗಿ ಕೇವಲ ಅದ್ವಿತೀಯನಾದ–ತಾನೇತಾನಾದ ಸಾಕ್ಷಿಸ್ವರೂಪದಲ್ಲಿ ಒಂದಾಗಿ ಬಿಡುತ್ತದೆ. ಆಗ ವಿವೇಕಪ್ರತ್ಯಯವು ಬಂದಿತು ಎಂಬ ವ್ಯವಹಾರವಾಗುವದೇ ಹೊರತು 'ಈ ಪ್ರತ್ಯಯದಿಂದ ಆತ್ಮನನ್ನರಿತೆನು' ಎಂದೇನೂ ಆಗುವದಿಲ್ಲ. ಆದ್ದರಿಂದ ಆತ್ಮನನ್ನರಿಯುವ ದೆಂದರೆ ಕೇವಲಾತ್ಮನಾಗಿ ಉಳಿಯುವದು; ಅಥವಾ ಅನಾತ್ಮದಲ್ಲಿ ಇದ್ದ ಆತ್ಮಬುದ್ಧಿಯನ್ನು ವಿವೇಕದಿಂದ ತೆಗೆದುಹಾಕಿದಾಗ ಅರಿಯಲು ತನಗಿಂತ ಬೇರಾದ ಅನಾತ್ಮವೆಂಬುದಿಲ್ಲವೇ ಇಲ್ಲವೆಂದಾಗಿ ನಿಲ್ಲುವದು. ಅರ್ಥಾತ್ ಅನಾತ್ಮವನ್ನರಿಯುವದನ್ನು ಬಿಡುವದೇ ಅಥವಾ ನಿಲ್ಲಿಸುವದೇ ಆತ್ಮನನ್ನರಿಯುವದು ಎಂದು ಉಪಚಾರಕ್ಕೆ ಹೇಳಲಾಗುತ್ತದೆ. ಮೇಲೆ ಕೊಟ್ಟಿರುವ ಎರಡೂ ಭಾಷ್ಯವಾಕ್ಯಗಳ ಭಾಗಗಳನ್ನು (ಆಯಾ ಗ್ರಂಥಗಳಲ್ಲಿಯೇ ಬರೆದಿರುವ ಭಾಗವನ್ನು ನೋಡಿ) ಚೆನ್ನಾಗಿ ಮನನ ಮಾಡಬೇಕು. ಹಾಗೂ ಅನುಭಾವಿಗಳಾದವರಿಂದ ಈ ಸೂಕ್ಷ್ಮಗಳನ್ನರಿತುಕೊಳ್ಳಬೇಕು. ಆಗ **'ಆತ್ಮನೇ ನಾನೆಂದು ಅರಿತೆ', 'ಈಗ ಗಟ್ಟಿಮಾಡುತ್ತಿದ್ದೇನೆ' ಎಂಬ ಜ್ಞಾತೃತ್ವಕರ್ತೃತ್ವಗಳನ್ನುಳಿಸಿ ಕೊಂಡಿರುವ ಭಾವನೆಯು ಸರಿಯಾದ ಆತ್ಮವಿಜ್ಞಾನವಲ್ಲ ಎಂಬುದು ಗೊತ್ತಾಗುತ್ತದೆ. ವಿವೇಕಪರ್ಯವಸಾನದ ಸಮಕಾಲದಲ್ಲಿಯೇ (ವಿವೇಕಪ್ರತ್ಯಯವು ಬಂದೊಡನೆಯೇ) ಜ್ಞಾತೃತ್ವಕರ್ತೃತ್ವಗಳು ಬಾಧಿತವಾಗಿ ಅದ್ವಿತೀಯಕೇವಲನಾಗಿ ನೆಲೆನಿಂತಿರುವ ಅನುಭವವೇ ಸರಿಯಾದ ಆತ್ಮವಿಜ್ಞಾನವೆನಿಸುತ್ತದೆ.** ಇಂಥ ಸಮ್ಯಗ್‌ಜ್ಞಾನವು ಉಂಟಾಗಲು, ಸರಿಯಾದ ಶಾಸ್ತ್ರಾಚಾರ್ಯರ ಉಪದೇಶವು ಲಭಿಸಲು ಭಗವಂತನ ಅನುಗ್ರಹದ ಹೊರತು ಸಾಧ್ಯವೇ ಇಲ್ಲ. ''......ತದನುಗ್ರಹಹೇತುಕೇನೈವ ಚ ವಿಜ್ಞಾನೇನ ಮೋಕ್ಷಸಿದ್ಧಿಃ ಭವಿತುಮರ್ಹತಿ'' (ಸೂ. ಭಾ. 2–3–41) ಎಂಬ ಆಚಾರ್ಯರ ಮಾತಿನ ತಾತ್ಪರ್ಯವೇ ಇದಾಗಿದೆ. ಆದ್ದರಿಂದ ಈ ಆತ್ಮವಿಜ್ಞಾನಕ್ಕೆ ಬೇಕಾಗುವ ಭಕ್ತಿಯೇ ಮುಂತಾದ ಸಾಧನೆಗಳ ಬಗೆಗೆ ಈ ವಾಕ್ಯದಲ್ಲಿಯ ಮುಂದಿನ ಭಾಗಗಳನ್ನು ಇನ್ನು ಮುಂದಿನ ಲೇಖನಗಳಲ್ಲಿ ಕ್ರಮಕ್ರಮವಾಗಿ ವಿವರಿಸಲು ಯತ್ನಿಸೋಣ.

# 23. ಗೀತಾಭಾಷ್ಯವಾಕ್ಯಾನುಸಂಧಾನ–7

## ಭಕ್ತಿಪ್ರಸಾದಸ್ನೇಹ

### (ಜೂನ್ 1973)

ಹಿಂದಿನ ಲೇಖನಗಳಲ್ಲಿ ವಿವೇಕಪ್ರತ್ಯಯದ ಸ್ವರೂಪವನ್ನೂ ಆ ಬಗ್ಗೆ ಇರುವ ತಪ್ಪುತಿಳಿವಿಕೆಗಳನ್ನೂ ವಿಮರ್ಶಿಸಿದ್ದಾಗಿದೆ. ಈಗ ವಿವೇಕಪ್ರತ್ಯಯಕ್ಕೆ ಬೇಕಾಗಿರುವ–ಎಂದರೆ ಅದು ಅಂತಃಕರಣದಲ್ಲಿ ಹುಟ್ಟಲು ಬೇಕಾಗಿರುವ–ಸಾಧನಸಾಮಗ್ರಿಗಳನ್ನು ಕುರಿತು ವಿಚಾರಿಸಬೇಕಾಗಿದೆ.

ಇಲ್ಲಿ ಮೊದಲು 'ಭಕ್ತಿಪ್ರಸಾದಸ್ನೇಹಾಭಿಷಿಕ್ತೇನ' ಎಂದು ಆಚಾರ್ಯರು ಬರೆದಿದ್ದಾರೆ. ಭಕ್ತಿಯಿಂದ ಪ್ರಸನ್ನತೆಯನ್ನು ಪಡೆದಿರುವದೆಂಬ ಅಂತಃಕರಣದ ಸ್ವಭಾವವೇ ಈ ಜ್ಞಾನದೀಪಕ್ಕೆ ಎಣ್ಣೆಯಾಗಿದೆ ಎಂಬುದು ಇದರ ತಾತ್ಪರ್ಯವು. ಇಂಥ ತಿಳಿಯಾದ ಎಣ್ಣೆಯನ್ನು ಸುರಿಯದಿದ್ದರೆ ಈ ಜ್ಞಾನದೀಪವು ಎಂದಿಗೂ ಉರಿಯಲಾರದು. ಇಲ್ಲಿ ಎಣ್ಣೆಗೆ 'ಸ್ನೇಹ' ಎಂಬ ಶಬ್ದವನ್ನು ಉಪಯೋಗಿಸಿದೆ. 'ಸ್ನೇಹ' ಎಂಬುದು ಪ್ರೇಮ ಎಂಬರ್ಥವನ್ನೂ ಕೊಡತಕ್ಕ ಶಬ್ದವಾಗಿದೆ. ಭಗವತ್ತತ್ತ್ವವನ್ನೇ ಪಡೆಯಬೇಕೆಂಬ ಹಂಬಲದ ರೂಪದ ಪ್ರೇಮವನ್ನೇ–ಎಂದರೆ ಜಿಜ್ಞಾಸಾಭಕ್ತಿಯನ್ನೇ ಇಲ್ಲಿ ಸ್ನೇಹ ಎಂದು ಬಣ್ಣಿಸಿರುತ್ತದೆ. ಹೀಗೆ ಭಗವತ್ಪ್ರಾಪ್ತಿಯೊಂದನ್ನುಳಿದು ಇನ್ನೇತರಲ್ಲಿಯೂ ಪ್ರೇಮವಿರುವದಿಲ್ಲವಾದ್ದರಿಂದ ಜಿಜ್ಞಾಸುವಿನ ಅಂತಃಕರಣದಲ್ಲಿ ಈ ಲೋಕದ ಅಥವಾ ಪರಲೋಕದ (ಬ್ರಹ್ಮಲೋಕದವರೆಗಿನ) ಯಾವ ಭೋಗಗಳನ್ನೂ ಪಡೆಯುವ ಆಕಾಂಕ್ಷೆಯು ಸ್ವಲ್ಪವೂ ಇರುವದೇ ಇಲ್ಲ. ಆದ್ದರಿಂದಲೇ ಈ ಜಿಜ್ಞಾಸುವಿನ ಅಂತಃಕರಣದಲ್ಲಿ ಕಾಮ, ಹಾಗೂ ಸಂಕಲ್ಪಗಳಿರುವದಿಲ್ಲ. ಹೀಗೆ ಕಾಮ, ಸಂಕಲ್ಪಗಳ ಅಲೆಗಳಿಲ್ಲದ ಸ್ಥಿತಿಯನ್ನೇ 'ಪ್ರಸಾದ' ಎಂದಿದೆ. ಭೋಗಗಳನ್ನು ಭೋಗಿಸಿದ್ದರಿಂದಾದ ಕ್ಷಣಿಕಪ್ರಸನ್ನತೆಗೂ ಇದಕ್ಕೂ ಬಹಳ ಅಂತರವಿದೆ. ಕಾಮಸಂಕಲ್ಪಗಳ ಹೊಡೆತವೇ ಇಲ್ಲದ ಪ್ರಸನ್ನತೆಯೇ ಇದಾಗಿದೆ. ಬೇಕೆಂಬುದಿರದ ಮನಸ್ಸಿನ ಸ್ಥಿತಿಯೇ ಈ ಪ್ರಸನ್ನತೆಯು. ಹೀಗೆ ಭೋಗಗಳ ಬಯಕೆಗಳಿಲ್ಲದಿರುವದೇ ಅಲ್ಲದೆ ಆತ್ಮಸ್ವರೂಪವಿವೇಕದ ಶ್ರವಣಮನನನಿದಿಧ್ಯಾಸನಗಳಲ್ಲಿಯೇ ಗತಿರತಿಗಳು ಪ್ರಾಪ್ತವಾಗುತ್ತವೆ. ಈ ರತಿಯನ್ನೇ ಇಲ್ಲಿ 'ಭಕ್ತಿ' ಎಂದಿದೆ. ಇದು ಆರ್ತ, ಅರ್ಥಾರ್ಥ (ಸಂಕಟದಿಂದ ಪಾರಾಗುವ ಅಥವಾ ಯಾವದಾದರೊಂದು ವಸ್ತುವನ್ನು ಪಡೆಯುವ ಬಯಕೆಯಿಂದ ಕೂಡಿದ ಭಗವಂತನಲ್ಲಿಯ ಭಕ್ತಿಗಳಿಗೆ ಆರ್ತ, ಅರ್ಥಾರ್ಥಿ, ಭಕ್ತಿಗಳೆನ್ನುತ್ತಾರೆ.) ರೂಪದ ಭಕ್ತಿಯಲ್ಲ. ಪರಭಕ್ತಿಯಾದ ಆತ್ಮಜ್ಞಾನನಿಷ್ಠೆಗಾಗಿ ಪ್ರಯತ್ನಿಸುವ ಜಿಜ್ಞಾಸಾಭಕ್ತಿಯಾಗಿದೆ. (ಗೀ. 7–17).

ಭಗವಂತನು ತನ್ನ ಆತ್ಮನೇ–ಎಂದರೆ ಈಗಿನ 'ನಾನು' ಎಂಬುವದಕ್ಕೂ ಹಿಂದೆ ಇದಕ್ಕೆ ಆಧಾರವಾಗಿ ಈ 'ನಾನು' ಎಂಬ ಅನಿಸುವಿಕೆಯು ತೋರಿದ್ದಕ್ಕೂ ಅಡಗಿದ್ದಕ್ಕೂ ಸಾಕ್ಷಿಯಾಗಿರುವ ಸ್ವರೂಪನೇ ಆಗಿದ್ದಾನೆ. ಇಷ್ಟೇ ಅಲ್ಲದೆ ಈ ಸಮಗ್ರವಾದ ನಾಮರೂಪಕ್ರಿಯಾತ್ಮಕವಾಗಿರುವ ಇಡೀ ವಿಶ್ವದ ರೂಪದಿಂದಲೂ ಅದೇ ಭಗವಂತನು ತೋರುತ್ತಿದ್ದಾನೆ ಎಂಬುದನ್ನು ದೊಡ್ಡವರಿಂದ ಕೇಳಿದಾಗ ಈ ಭಕ್ತರಿಗೆ ಭಗವನ್ನಾಮ, ಭಗವದ್ರೂಪ, ಭಗವಂತನ ಲೀಲೆ, ಗುಣಕರ್ಮಗಳು ಇವುಗಳ ಬಗ್ಗೆ ಪ್ರೇಮವು ಹುಟ್ಟಿರುವದಲ್ಲದೆ ಯಾವ ನಾಮರೂಪಗಳ ಸೋಂಕೂ ಇಲ್ಲದೆ ನಿರ್ವಿಶೇಷ ಪರಮಾರ್ಥಸ್ವರೂಪದ ಬಗೆಗೂ ಪರಮಪ್ರೇಮವಿರುತ್ತದೆ. ಆ ಸ್ವರೂಪಜ್ಞಾನಕ್ಕಾಗಿಯೇ ಜೀವನವನ್ನೆಲ್ಲವನ್ನೂ ಮುಡುಪಿಟ್ಟಿರುವಷ್ಟರಮಟ್ಟಿಗೆ ಇವನಿಗೆ ಪ್ರೇಮವಿರುತ್ತದೆ. ಮಾಡಿ ಪಡೆಯುವ ಸಮಗ್ರಸಾಧನಸಾಧ್ಯಗಳೂ ಅನಿತ್ಯವೆಂಬುದನ್ನು ಮನಗಂಡ ಈ ಜಿಜ್ಞಾಸುವಿಗೆ ಭಗವತ್ತತ್ತ್ವದಲ್ಲಿರುವ ಪ್ರೇಮವು ಅಪಾರವಾಗಿರುತ್ತದೆ. ಭಗವಂತನ ಭಕ್ತಿಯಿಂದ ಇಹಲೋಕದ ಸುಖಗಳನ್ನೋ ಸಗುಣಸಾಕ್ಷಾತ್ಕಾರ, ಮಹಿಮೆಗಳು, ಸಾಲೋಕ್ಯಾದಿ ಲೋಕಾಂತರಗತಿಗಳನ್ನೋ ಪಡೆಯುವ ಹಂಬಲದಿಂದ ಅಥವಾ ಯಾವದಾದರೊಂದು ಸಂಕಟ ನೀಗುವ ಉದ್ದೇಶದಿಂದ ಭಗವಂತನನ್ನು ಭಜಿಸುವ ಭಕ್ತರೂ ಭಗವಂತನಿಗೆ ಪ್ರಿಯರೇ ಆಗಿರುತ್ತಾರೆ. ಅವರೂ ಭಕ್ತರೇ ಅಹುದು. ಆದರೆ ಈ ಮೇಲೆ ಹೇಳಿದ ಜಿಜ್ಞಾಸಾಭಕ್ತಿಯು ಈ ಎರಡೂ ವಿಧದ ಭಕ್ತಿಗಿಂತಲೂ ಹೆಚ್ಚಿನದಾಗಿರುತ್ತದೆ. ಈ ಭಕ್ತನು ಭಗವಂತನನ್ನು ಭಜಿಸುವದು ಭಗವಂತನಿಗಾಗಿಯೇ, ಅವನಲ್ಲಿ ಸೇರಿಹೋಗುವದಕ್ಕಾಗಿಯೇ, ಅವನ ಜ್ಞಾನಕ್ಕಾಗಿಯೇ ಹೊರತು ಇನ್ನೇತಕ್ಕಾಗಿಯೂ ಅಲ್ಲ. ಇದನ್ನೇ ಆಚಾರ್ಯರು 'ಜಿಜ್ಞಾಸುಃ ಭಗವತ್ತತ್ತ್ವಂ ಜ್ಞಾತುಂ ಇಚ್ಛತಿ ಯಃ'– ಭಗವತ್ತತ್ತ್ವವನ್ನು ತಿಳಿಯಲೆಳಸುವವನೇ ಜಿಜ್ಞಾಸುವು–ಎಂದು ಗೀ. 7–17ರಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಕಠೋಪನಿಷತ್ತಿನಲ್ಲಿ ಬ್ರಹ್ಮಲೋಕದವರೆಗಿನ ಸಮಗ್ರ ಭೋಗಗಳನ್ನೂ ಯಮಧರ್ಮನು ನಚಿಕೇತನಿಗೆ ಕೊಡಲು ಸಿದ್ಧನಾಗಿದ್ದರೂ ಸಹ ಅದೆಲ್ಲವನ್ನೂ ತುಚ್ಛೀಕರಿಸಿ 'ಅನ್ಯತ್ರ ಧರ್ಮಾತ್, ಅನ್ಯತ್ರ ಅಧರ್ಮಾತ್' (ಕ. 2–14) ಮುಂತಾದ ಮಾತಿನಿಂದ ಕಾಲದೇಶ, ಕಾರ್ಯಕಾರಣಭಾವ, ಧರ್ಮಾಧರ್ಮಾದಿಗಳನ್ನೂ ಸಹ ಮೀರಿದ ಪರಮಾರ್ಥತತ್ತ್ವವನ್ನೇ ನಚಿಕೇತನು ಕೇಳಿದ್ದಾನೆ. ಇದೇ ನಿಜವಾದ ಜಿಜ್ಞಾಸಾಭಕ್ತಿಯು. ಈ ಭಕ್ತಿಯಿಂದ ಕೂಡಿದ ಹೃದಯದಿಂದಲೇ ಈಗಿನ 'ನಾನು' ಎಂಬುದನ್ನು ಮೀರಿದ ತಾನೇ ತಾನಾದ ಭಗವತ್‌ಸ್ವರೂಪದಲ್ಲಿ ವಿವೇಕಪ್ರತ್ಯಯದ ಮೂಲಕ ನೆಲೆನಿಲ್ಲಲು ಸಾಧ್ಯವೇ ಹೊರತು ಬರೀ ಬುದ್ಧಿಯಿಂದ ಕಲ್ಪಿಸುವ ತರ್ಕಜಾಲಗಳಿಂದ ಎಂದಿಗೂ ಸಾಧ್ಯವಿಲ್ಲ. ಆದ್ದರಿಂದ 'ಭಕ್ತಿಪ್ರಸಾದಸ್ನೇಹ'ವು ಎಂದರೆ

ಭಗವತ್ತತ್ತ್ವವನ್ನರಿಯಬೇಕೆಂಬ ಪ್ರೇಮದಿಂದ ಕೂಡಿದ ಕಾಮನೆಗಳು ಸಂಕಲ್ಪಗಳ ಅಲೆಗಳಿಲ್ಲದೆ ಶಾಂತವಾಗಿರುವ-ಪ್ರಸನ್ನವಾಗಿರುವ ಅಂತಃಕರಣಸ್ಥಿತಿಯು ವಿವೇಕ ಪ್ರತ್ಯಯವನ್ನು ಪಡೆಯಲು ಅತ್ಯವಶ್ಯ.

# 24. ಗೀತಾಭಾಷ್ಯವಾಕ್ಯಾನುಸಂಧಾನ –8

## ಭಗವದ್ಭಾವನಾಭಿನಿವೇಶ

### (ಜುಲೈ 1973)

ವಿವೇಕಪ್ರತ್ಯಯರೂಪದ ಜ್ಞಾನದೀಪಕ್ಕೆ ಜಿಜ್ಞಾಸಾಭಕ್ತಿಯೇ ಎಣ್ಣೆ ಎಂಬುದನ್ನು ಹಿಂದೆ ವರ್ಣಿಸಿದೆ. ಈಗ ಈ ದೀಪವು ಉರಿಯಲು ಬೇಕಾಗುವ ಗಾಳಿ (ಆಕ್ಸಿಜನ್) ಯಾವುದೆಂದರೆ 'ಮದ್ಭಾವನಾಭಿನಿವೇಶಿತವಾತೇರಿತೇನ' ನನ್ನಲ್ಲಿಯೇ (ಭಗವಂತನಲ್ಲಿಯೇ) ಅಭಿನಿವೇಶವನ್ನು ಹೊಂದಿರುವ ಮನಃಸ್ಥಿತಿಯ ರೂಪದ ಗಾಳಿಯಿಂದ-ಎಂದು ಆಚಾರ್ಯರು ಬರೆದಿದ್ದಾರೆ. ಈಗ ಈ ವಾಕ್ಯವನ್ನು ಸ್ವಲ್ಪ ಬಿಡಿಸೋಣ:

ಇಲ್ಲಿ ಅಭಿನಿವೇಶ ಎಂದರೆ ಅದೇ ತಾನಾಗುವಿಕೆ ಎಂದರ್ಥ. ಹೊಲ, ಮನೆ, ಹೆಂಡತಿ, ಮಕ್ಕಳು, ಕೀರ್ತಿ, ಧನ, ಸಂಪತ್ತು ವಿದ್ಯೆ-ಮುಂತಾದವುಗಳಲ್ಲಿ ಅವು ಕೆಟ್ಟರೆ ನಾನೇ ಕೆಟ್ಟೆ, ಅವು ಬೆಳೆದರೆ ನಾನೇ ಬೆಳೆದೆ-ಎಂಬ ಹಿಗ್ಗುಕುಗ್ಗುಗಳನ್ನು ಪಡೆಯುವ ಸಾಮಾನ್ಯ ಜನರ ಮನಃಸ್ಥಿತಿಯನ್ನು ವಿಷಯಗಳಲ್ಲಿರುವ ಅಭಿನಿವೇಶ ಎನ್ನುತ್ತಾರೆ. ಇದರಂತೆಯೇ ದೇಹ, ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿಗಳಲ್ಲೂ ಮನುಷ್ಯನಿಗೆ ಅಭಿನಿವೇಶವು-ಅದೇ ನಾನಾಗುವಿಕೆಯು-ಸ್ವಾಭಾವಿಕವಾಗಿದ್ದೇ ಬಿಟ್ಟಿದೆ. ಒಬ್ಬನಿಗೆ ಒಂದು ಪಿಶಾಚಿಯು ಹಿಡಿದರೆ ಆ ಪಿಶಾಚಿಯು ಯಾವನನ್ನು ಹಿಡಿದಿದೆಯೋ ಆ ಶರೀರದಲ್ಲಿಯೇ ಅಭಿನಿವೇಶವನ್ನು (ತಾದಾತ್ಮ್ಯವನ್ನು) ಪಡೆದು ಹೇಗೆ ಮಾತನಾಡುವದೋ ಹಾಗೆ ನಾವು ಬುದ್ಧಿಯಿಂದ ದೇಹದವರೆಗಿನ, ಹಾಗೂ ನಮಗೆ ಸಂಬಂಧಪಟ್ಟ ವಸ್ತುಗಳ ಬಗ್ಗೆಯೂ ತಾದಾತ್ಮ್ಯವನ್ನು ಪಡೆಯುತ್ತೇವೆ. ಇದಕ್ಕೆ 'ಅಭಿನಿವೇಶ' ಎನ್ನುತ್ತಾರೆ. ಒಟ್ಟಿನಲ್ಲಿ ನಾಮರೂಪಕರ್ಮಾತ್ಮಕವಾದ ಒಳಹೊರಗಿನ ಪ್ರಪಂಚದಲ್ಲಿ ನಮಗೆ ಅಭಿನಿವೇಶವು ಬಂದುಬಿಟ್ಟಿದೆ. ಇದೇ ಸಂಸಾರಬಂಧನ. ಈ ಅಭಿನಿವೇಶವನ್ನು ಉಪಾಯವಾಗಿ ಬಿಡಿಸಿಕೊಳ್ಳಲು ಭಗವಂತನ ನಾಮ, ಭಗವಂತನ

ರೂಪ, ಭಗವಂತನ ಗುಣಕರ್ಮಲೀಲೆಗಳನ್ನು ಭಕ್ತಿಪೂರ್ವಕವಾಗಿ ಮನಸ್ಸಿನಲ್ಲಿ ಹೊರಳಾಡಿಸುವದು, ಅಂಥ ಭಗವದ್ಭಕ್ತರ ಸಂಗದಿಂದ ಅದನ್ನು ಸಂಪಾದಿಸುವದು–ಇವು ಆರಂಭದ ಸಾಧನೆಗಳಾಗಿವೆ. ಈ ಸಾಧನೆಗಳನ್ನು ಮಾಡಿದವರಿಗೆ ಹಿಂದೆ ಹೇಳಿದಂತೆ ಜಿಜ್ಞಾಸಾಭಕ್ತಿಯು ಎಂದರೆ ಭಗವತ್ತತ್ತ್ವವನ್ನೇ ಅರಿಯಬೇಕೆಂಬ ಹಸಿವು ಬರುತ್ತದೆ.

ಆಗ ಭಗವಂತನ ಅನುಗ್ರಹದಿಂದ ಈ ಜಿಜ್ಞಾಸುವಿಗೆ ಅನುಭವಿಗಳ ಶ್ರವಣವು ಲಭಿಸುವದರ ಜೊತೆಗೆ ಅವನು ಶ್ರವಣಸಮಕಾಲದಲ್ಲಿಯೇ ಭಗವಂತನು ತನ್ನ ಆತ್ಮನಾಗಿರುವನೆಂಬುದನ್ನು ಗುರುತಿಸುತ್ತಾನೆ. ಹೀಗೆ ಸ್ವರೂಪವನ್ನು ಗುರುತಿಸಲು ಈತನಿಗೆ ಈಗಿನ 'ನಾನು ಇಂಥವನು' ಎಂಬುದರಲ್ಲಿಯ ಹಾಗೂ ಇದಕ್ಕೆ ಸಂಬಂಧಿಸಿದ ಇತರ ಎಲ್ಲ ವಿಷಯಗಳಲ್ಲಿಯ ಅಭಿನಿವೇಶವು ತೊಲಗುತ್ತಹೋಗಿ ಈ 'ನಾನು' ಎಂಬ ಅನಿಸುವಿಕೆಗೂ ಹಿಂದಿರುವ ನಿಜವಾದ ಸ್ವರೂಪನಾದ ಭಗವಂತನಲ್ಲಿಯೇ ಅಭಿನಿವೇಶವು ಬರಹತ್ತುತ್ತದೆ. ಭಗವತ್ತತ್ತ್ವಶ್ರವಣಮನನಾದಿಗಳಲ್ಲಿಯೇ ಇವನಿಗೆ ರತಿಗತಿಗಳು ಪ್ರಾಪ್ತವಾಗುತ್ತವೆ. ಇದನ್ನೇ ಇಲ್ಲಿ 'ಮದ್ಭಾವನಾಭಿನಿವೇಶ' ಎಂದು ಕರೆದಿದೆ. ಇದೇ ಜ್ಞಾನದೀಪಕ್ಕೆ ಗಾಳಿಯಾಗಿದೆ. ಬರೀ ಭಾವನೆಯಿಂದ ಭಗವಂತನನ್ನು ಭಜಿಸುವವರಿಗೆ ಆ ಭಗವನ್ಮೂರ್ತಿಯ ಸಾಕ್ಷಾತ್ಕಾರ, ಪರಲೋಕದಲ್ಲಿ ಸಾಲೋಕ್ಯಾದಿಗತಿಗಳು ಉಂಟಾಗಿ ಕ್ರಮಮುಕ್ತಿಗೆ ಕಾರಣವಾಗಬಹುದಾದರೂ ಇಲ್ಲಿ ಮಾತ್ರ ತತ್ತ್ವಜಿಜ್ಞಾಸುವಿಗೆ ತನ್ನ ಸ್ವರೂಪನೇ ಆದ ಭಗವಂತನಲ್ಲಿರುವ ವಸ್ತುತಂತ್ರಜ್ಞಾನಕ್ಕೆ ಸೇರಿದ ಶ್ರದ್ಧಾಭಕ್ತಿಪೂರ್ವಕವಾದ ಅಭಿನಿವೇಶವನ್ನೇ ಹೇಳಿರುತ್ತದೆ.

ಈ ಜ್ಞಾನದೀಪಕ್ಕೆ ಬತ್ತಿ ಯಾವುದೆಂದರೆ: **'ಬ್ರಹ್ಮಚರ್ಯಾದಿಸಾಧನವತ್ ಪ್ರಜ್ಞಾವರ್ತಿನಾ'** ಬ್ರಹ್ಮಚರ್ಯವೇ ಮುಂತಾದ ಸಾಧನೆಗಳಿಂದ ಕೂಡಿದ ಮನಃಸ್ಥಿತಿ ಎಂಬ ಬತ್ತಿಯಿಂದ–ಎಂದು ಆಚಾರ್ಯರು ಹೇಳಿರುತ್ತಾರೆ. ಬ್ರಹ್ಮಚರ್ಯವು ಎರಡು ಪ್ರಕಾರವಾಗಿರುತ್ತದೆ. ವೇದಾಧ್ಯಯನಕ್ಕೆ ಗುರುಕುಲಕ್ಕಾಗಿ ಹೋದವನು ಆಯುಸ್ಸು ಮುಗಿಯುವವರೆಗೂ ಗುರುವಿನ ಬಳಿಯಲ್ಲಿಯೇ ಅವನ ನೆರಳಾಗಿದ್ದು ಬಿಡುವ ರೀತಿಗೆ **'ನೈಷ್ಠಿಕಬ್ರಹ್ಮಚರ್ಯ'** ಎನ್ನುತ್ತಾರೆ. ವೇದಾಧ್ಯಯನವು ಮುಗಿದ ಬಳಿಕ ಧರ್ಮಪೂರ್ವಕ ಗೃಹಿಣಿಯನ್ನು ಸ್ವೀಕರಿಸಿ ಗಾರ್ಹಸ್ಥ್ಯಧರ್ಮದಂತೆ ನಡೆಯುವ ಕ್ರಮವನ್ನು **'ಉಪಕುರ್ವಾಣಬ್ರಹ್ಮಚರ್ಯ'** ಎನ್ನುತ್ತಾರೆ. ಇವೆರಡು ಧರ್ಮಗಳೂ ವೇದವೇದ್ಯವಾದ ಭಗವಂತನ ಪ್ರಾಪ್ತಿಗಾಗಿಯೇ ಹೇಳಲ್ಪಟ್ಟಿವೆ. ಭೀಷ್ಮಾಚಾರ್ಯರೇ ಮುಂತಾದವರಂತೆ ನೈಷ್ಠಿಕಬ್ರಹ್ಮಚರ್ಯೆಯನ್ನನುಸರಿಸುವ ಯೋಗ್ಯತೆಯುಳ್ಳವರು ತುಂಬಾ ದೊಡ್ಡ ಮಹನೀಯರೇ ಸರಿ. ಅದಿಲ್ಲದಿದ್ದರೆ ಧರ್ಮದಂತೆ ಗಾರ್ಹಸ್ಥ್ಯದಲ್ಲಿ

ನಡೆಯುವದನ್ನೂ ಸಹ 'ಬ್ರಹ್ಮಚರ್ಯಮೇವ ತತ್' (ಪ್ರಶ್ನೋಪನಿಷತ್ 1–13) ಎಂದು ಶ್ರುತಿಯಲ್ಲಿ ವರ್ಣಿಸಿರುತ್ತದೆ. ಇಲ್ಲಿ ಬ್ರಹ್ಮಚರ್ಯವೇ ಮುಂತಾದ ಎಂಬ ಮಾತಿಗೆ ಬ್ರಹ್ಮಚರ್ಯ, ಅಮಾನಿತ್ವಾದಿಸಾಧನೆಗಳು, ಶಮದಮಾದಿಗಳು–ಇವೆಲ್ಲವೂ ಸೇರಿಕೊಂಡಿವೆ. ಒಟ್ಟಿನಲ್ಲಿ ವಿಷಯಭೋಗಗಳಲ್ಲಿಯ ಚಿತ್ತವನ್ನು ಕಿತ್ತು ಆತ್ಮಸ್ವರೂಪನಾದ ಭಗವಂತನ ತತ್ತ್ವವನ್ನು ಕಂಡುಕೊಳ್ಳುವದರಲ್ಲಿ ನಿಲ್ಲಿಸುವ–ಬ್ರಹ್ಮದಲ್ಲಿಯೇ ಚಿತ್ತವು ಚರಿಸುವಂತೆ ಮಾಡಿಕೊಳ್ಳುವ–ಪ್ರಕಾರವನ್ನೇ ಬ್ರಹ್ಮಚರ್ಯ ಮುಂತಾದ ಸಾಧನೆಗಳೆಂದೂ ಇದೇ ಜ್ಞಾನದೀಪಕ್ಕೆ ಬೇಕಾಗಿರುವ ಬತ್ತಿಯಾಗಿರುವದೆಂದೂ ಆಚಾರ್ಯರು ಇಲ್ಲಿ ತಿಳಿಸಿರುತ್ತಾರೆ. ಹೀಗೆ ಮನಸ್ಸು ವಿಷಯಚಿಂತನೆ ಹಾಗೂ ಸಂಕಲ್ಪಗಳನ್ನು ತ್ಯಜಿಸಿ ಆತ್ಮಸ್ವರೂಪನಾದ ಭಗವಂತನೆಡೆಗೆ ಹಿಂದಿರುಗಿರುವ ಅರಿವಿನ ಸ್ಥಿತಿಯನ್ನೇ 'ಬ್ರಹ್ಮಚರ್ಯಾದಿಸಾಧನವತ್ ಪ್ರಜ್ಞಾವರ್ತಿನಾ' ಎಂಬಲ್ಲಿ 'ಪ್ರಜ್ಞಾವರ್ತಿ' ಎಂದರೆ ಅರಿವಿನ ಬತ್ತಿ ಎಂದು ಕರೆದಿರುತ್ತದೆ.

# 25. ಗೀತಾಭಾಷ್ಯವಾಕ್ಯಾನುಸಂಧಾನ–9

## ವಿರತಿ ಎಂಬ ಹಣತೆ

### (ಆಗಸ್ಟ್ 1973)

ಇದರಂತೆಯೇ 'ವಿರಕ್ತಾನ್ತಃಕರಣಾಧಾರೇಣ' ಎಂಬಲ್ಲಿ ವಿರಕ್ತಿಎಂಬ ಅಂತಃಕರಣದ ಸ್ಥಿತಿಯೇ ಹಣತೆಯು. ಈ ಹಣತೆಯ ಆಧಾರದಲ್ಲಿ ಜ್ಞಾನದೀಪವು ಬೆಳಗುವದು ಎಂದು ಆಚಾರ್ಯರು ಹೇಳಿದ್ದಾರೆ. ಹಿಂದೆ 'ಭಕ್ತಿಪ್ರಸಾದಸ್ನೇಹಾಭಿಷಿಕ್ತೇನ' ಎಂಬುದನ್ನು ವಿವರಿಸುವಾಗ ತಿಳಿಸಿರುವಂತೆ ಈ ಲೋಕದ ಧನ, ವಿದ್ಯೆ, ಕೀರ್ತಿ, ಭೋಗ, ಸಂಪತ್ತು ಮುಂತಾದ್ದರಲ್ಲಿಯೂ ಅಣಿಮಾದಿಸಿದ್ಧಿಪ್ರಾಪ್ತಿ ದೇವತಾಸಾಕ್ಷಾತ್ಕಾರ, ಮಹಿಮೆ–ಮುಂತಾದ್ದರಲ್ಲಿಯೂ ಬ್ರಹ್ಮಲೋಕದವರೆಗಿನ ಪರಲೋಕಗಳ ಭೋಗಗಳಲ್ಲಿಯೂ ಅನಿತ್ಯತೆಯನ್ನು ಕಂಡುಕೊಂಡದ್ದರಿಂದ ಉಂಟಾದ ವಿವೇಕಪೂರ್ವಕವಾದ ಮನಃಸ್ಥಿತಿಯನ್ನೇ ಇಲ್ಲಿ ''ವಿರಕ್ತಾನ್ತಃಕರಣ'' ಎಂಬ ಮಾತಿನಿಂದ ಕರೆದಿರುತ್ತದೆ ಇದೇ ಜ್ಞಾನದೀಪಕ್ಕೆ ಹಣತೆಯಾಗಿರುತ್ತದೆ. ಭಗವಂತನ ತತ್ತ್ವವನ್ನರಿಯುವದರಲ್ಲಿನ ಪ್ರೇಮದ ದೃಷ್ಟಿಯಿಂದ 'ಭಕ್ತಿಪ್ರಸಾದಸ್ನೇಹ' ಎಂದು ಹೇಳಿತ್ತು, ಇಲ್ಲಿ ವಿಷಯಭೋಗಗಳ ಬಗೆಗಿನ ಆಕಾಂಕ್ಷೆ ಇಲ್ಲದಿರುವದೆಂಬ ದೃಷ್ಟಿಯಿಂದ ''ವಿರಕ್ತಾನ್ತಃಕರಣಾಧಾರೇಣ'' ಎಂದಿದೆ. ಇದೇ ಹಣತೆಯು.

ಹೀಗೆ ವಿಷಯಗಳ ಚಿಂತನೆಯಿಂದ ಹಿಮ್ಮೆಟ್ಟಿ ಭಗವತ್ತತ್ತ್ವಪ್ರೇಮದಿಂದ ಒಡಗೂಡಿ ಆ ತತ್ತ್ವದಲ್ಲಿಯೇ ಅಭಿನಿವೇಶವನ್ನು ಪಡೆಯುವ ಸ್ಥಿತಿಯನ್ನು ಹೊಂದಿದ ಅಂತಃಕರಣವನ್ನೇ ಮುಂದಿನ ವಾಕ್ಯದಲ್ಲಿ ''ವಿಷಯವ್ಯಾವೃತ್ತಚಿತ್ತರಾಗದ್ವೇಷಾಕಲುಷಿತ ನಿವಾತಅಪವರಕಸ್ಥೇನ'' ಎಂದಿದ್ದಾರೆ. ರಾಗ, ದ್ವೇಷ (ಬೇಕು, ಬೇಡ) ಎಂಬ ಬಿರುಗಾಳಿಯಿಂದ ಹೊರಗಿನ ವಿಷಯಗಳೆಡೆಗೆ ಮನಸ್ಸು ಕೊಚ್ಚಿಕೊಂಡು ಹೋಗುತ್ತಿರುತ್ತದೆ. ಇದು ಸಾಮಾನ್ಯ ಮಾನವನ ಸ್ಥಿತಿಯು. ಆದರೆ ಈ ಜ್ಞಾನಸಾಧಕನ ಮನಸ್ಸಿನಲ್ಲಿ ಈ ರೀತಿಯ ಬಿರುಗಾಳಿಯ ಹೊಡೆತದಿಂದ ಕಲುಷಿತವಾಗದ ಶಾಂತಸ್ವಭಾವವು ಸಹಜವಾಗಿ ಬಂದಿರುತ್ತದೆ. ಹೀಗೆ ''ಶಾನ್ತೋ ದಾನ್ತ ಉಪರತಸ್ತಿತಿಕ್ಷುಃ'' (ಬೃ. 4–4–23) ಎಂಬಂತೆ ಏರುಪೇರುಗಳಿಗೊಳಗಾಗದ ಮನಃಸ್ಥಿತಿಯನ್ನೇ ಇಲ್ಲಿ ಬಿರುಗಾಳಿಯ ಹೊಡೆತವಿಲ್ಲದ ಕೋಣೆ–ಎಂದು ವರ್ಣಿಸಿದೆ. ಹಣತೆಯ ದೀಪವು ಬಿರುಗಾಳಿಯ ಹೊಡೆತವಿಲ್ಲದ ಸ್ಥಳದಲ್ಲಿಯೇ ಅಲ್ಲವೆ, ಒಂದೇ ಸಮವಾಗಿ ಬೆಳಗುವದು? ಇಂಥ ಕೋಣೆಯಲ್ಲಿ ಈ ಜ್ಞಾನದೀಪವು ಬೆಳಗುತ್ತದೆ–ಎಂದು ಆಚಾರ್ಯರು ತಿಳಿಸಿದ್ದಾರೆ. ಒಟ್ಟಿನಲ್ಲಿ ಅಂತಃಕರಣವನ್ನು ಒಳಗಿನಿಂದ ಹೊರಕ್ಕೆ ತಳ್ಳುವ ಬಿರುಗಾಳಿಯಂತೆ ಅಲೆಯನ್ನೆಬ್ಬಿಸುವ ರಾಗದ್ವೇಷಗಳಿಗೊಳಗಾಗದೆ ಇರುವ ಮನಃಸ್ಥಿತಿಯುಳ್ಳವನಾಗಬೇಕು. ಅಂತೂ ಸಾಧನಚತುಷ್ಟಯಸಂಪತ್ತು (ಸೂ. ಭಾ. 1–1–1) ಗಳೆಲ್ಲವನ್ನೂ ಇಲ್ಲಿ ಆಚಾರ್ಯರು ವಿವರಿಸಿದಂತಾಗಿರುತ್ತದೆ.

# 26. ಗೀತಾಭಾಷ್ಯವಾಕ್ಯಾನುಸಂಧಾನ–10

## ಸಮ್ಯಗ್ದರ್ಶನರೂಪದ ಜ್ಞಾನದೀಪ

### (ಸೆಪ್ಟೆಂಬರ್ 1973)

ಜ್ಞಾನದೀಪದ ವರ್ಣನೆಯಲ್ಲಿ ಈಗ ಕೊನೆಯ ವಾಕ್ಯವನ್ನು ನೋಡೋಣ. ''ನಿತ್ಯಪ್ರವೃತ್ತಏಕಾಗ್ರಧ್ಯಾನಜನಿತಸಮ್ಯಗ್ದರ್ಶನಭಾಸ್ವತಾ ಜ್ಞಾನದೀಪೇನ'' ಎಡೆಬಿಡದೆ ಏಕಾಗ್ರಚಿತ್ತದಿಂದ ಧ್ಯಾನಮಾಡುವದರಿಂದ ಹುಟ್ಟುವ ಸಮ್ಯಗ್ದರ್ಶನವೆಂಬ ಬೆಳಕಿನ ಜ್ಞಾನದೀಪದಿಂದ–ಎಂಬುದು ಈ ವಾಕ್ಯದ ಅರ್ಥವು. ಇಲ್ಲಿ ಆತ್ಮವಿಜ್ಞಾನದಲ್ಲಿ ನೆಲೆನಿಲ್ಲುವ ರೂಪದ ಜ್ಞಾನನಿಷ್ಠೆಯನ್ನೇ ಸಮ್ಯಗ್ದರ್ಶನವೆಂಬ ಬೆಳಕು–ಎಂದಿದೆ. (ಈ ಬಗ್ಗೆ ಗೀತೆ 18–55ರ ಭಾಷ್ಯವನ್ನು ನೋಡಿರಿ). ಈ ಜ್ಞಾನನಿಷ್ಠಾರೂಪದ ಸಮ್ಯಗ್ದರ್ಶನವು

ಬರಬೇಕಾದರೆ ಜ್ಞಾನಸಾಧಕನಾದ ಜಿಜ್ಞಾಸುವು ಮಾಡಬೇಕಾದ ಸಾಧನೆ ಏನೆಂದರೆ:

ಎಡೆಬಿಡದೆ ಏಕಾಗ್ರಚಿತ್ತದಿಂದ ಶಾಸ್ತ್ರದ ಹಾಗೂ ಆಚಾರ್ಯರ ಉಪದೇಶಕ್ಕನುಸರಿಸಿ ಇಂದ್ರಿಯಗಳು, ಮನಸ್ಸು, ಬುದ್ಧಿ ಅಹಂಕಾರ–(ನಾನೆಂಬ ಅನಿಸುವಿಕೆ) ಇವೆಲ್ಲಕ್ಕೂ ಒಳಗಿರುವ ಆತ್ಮಸ್ವರೂಪವನ್ನೇ ನಿರೀಕ್ಷಿಸುವ ರೂಪದ ಧ್ಯಾನವು ಅತ್ಯವಶ್ಯ. ಇಷ್ಟೇ ಅಲ್ಲದೆ ಈ ಕೇವಲಾತ್ಮಸ್ವರೂಪವು ಅಹಂಕಾರದಿಂದ ದೇಹದವರೆಗಿನ ಎಲ್ಲವನ್ನೂ ವ್ಯಾಪಿಸಿರುವದನ್ನೂ ಹೊರಗಿನ ಜಗತ್ತನ್ನೆಲ್ಲವನ್ನೂ ವ್ಯಾಪಿಸಿರುವದನ್ನೂ ಅನುಭವದಿಂದ ಕಂಡುಕೊಂಡು ಒಳಹೊರಗಿಲ್ಲದ ಕೇವಲಾತ್ಮಮಾತ್ರವೇ ಇರುವ ಅನುಭವದಲ್ಲಿ ನೆಲೆನಿಲ್ಲುವ ವಿವೇಕಪೂರ್ವಕಪ್ರಯತ್ನವೇ ಇಲ್ಲಿ 'ಧ್ಯಾನ' ಶಬ್ದಕ್ಕೆ ಅರ್ಥವು.

ಬೃಹದಾರಣ್ಯಕದಲ್ಲಿ (4–4–23) ''ತಸ್ಮಾತ್ ಏವಂವಿತ್ ಶಾನ್ತೋ ದಾನ್ತ ಉಪರತಃ ತಿತಿಕ್ಷುಃ ಸಮಾಹಿತೋ ಭೂತ್ವಾ ಆತ್ಮನ್ಯೇವ ಆತ್ಮಾನಾಂ ಪಶ್ಯತಿ। ಸರ್ವ ಮಾತ್ಮಾನಂ ಪಶ್ಯತಿ'' ಎಂಬಲ್ಲಿ ಹೇಳಿರುವಂತೆ (1) ಇಂದ್ರಿಯಗಳಿಂದ ಹೊರಗಿನ ವಿಷಯಗಳನ್ನು ನೋಡುವದನ್ನು ನಿಲ್ಲಿಸಿ, (2) ಮನಸ್ಸಿನಲ್ಲಿ ವಿಷಯಗಳನ್ನು ಚಿಂತಿಸುವದನ್ನು ನಿಲ್ಲಿಸಿ, (3) ''ನಾನು ಇಂಥವನು ಹೀಗೆ ಹೀಗೆ ಸುಖದುಃಖಗಳ ನ್ನನುಭವಿಸುವೆನು'' ಎಂದು ಯೋಚಿಸುವದನ್ನು ಬಿಟ್ಟು (ಸುಖದುಃಖಗಳೊಂದಿಗೆ ತಾದಾತ್ಮ್ಯವನ್ನು ಪಡೆಯದೆ), (4) ಅನುಕೂಲಪ್ರತಿಕೂಲಸುಖದುಃಖಾದಿಗಳ ಪರಿಸ್ಥಿತಿಯ ಕಡೆಗೆ ಗಮನಕೊಡದೆ, (5) ಶಾಸ್ತ್ರಾಚಾರ್ಯರ ಉಪದೇಶದಿಂದ ಕಂಡುಕೊಂಡು ಸಾಕ್ಷ್ಯಾನುಭವರೂಪನಾದ ಆತ್ಮನೆಡೆಗೆ–ಅರ್ಥಾತ್ ಭಗವಂತನೆಡೆಗೆ–ಆತ್ಮಪ್ರತ್ಯಯದ ಮೂಲಕ ಲಕ್ಷ್ಯವನ್ನು ತಿರುಗಿಸಿ, ಕೇವಲ ತಾನೇ ತಾನಾದ ಸ್ವರೂಪದಲ್ಲಿ ನಿಲ್ಲಬೇಕು. ಆಮೇಲೆ ಆತ್ಮಸ್ವರೂಪದಲ್ಲಿ ನಿಂತು ಅನಾತ್ಮಗಳನ್ನೆಲ್ಲವನ್ನೂ ಈ ಆತ್ಮನೇ ವ್ಯಾಪಿಸಿರುವದನ್ನು ಕಂಡು ಎಲ್ಲೆಲ್ಲೂ ಆತ್ಮಮಾತ್ರವಾಗಿರುವ ಅನುಭವದಲ್ಲಿ ನೆಲೆನಿಲ್ಲುವ ಕ್ರಮವೇ ಅಲ್ಲಿ 'ಧ್ಯಾನ'ವೆಂಬ ಶಬ್ದಕ್ಕೆ ಅರ್ಥವು. ಇದು ಪೂರ್ತಿಯಾದಾಗ ಭಗವಂತನ ಹೊರತು (ಕೇವಲ ತಾನೇ ತಾನಾದ ಆತ್ಮನನ್ನು ಬಿಟ್ಟು) ಇನ್ನೇನೂ ಯಾವಾಗಲೂ ಇರಲಿಲ್ಲವೆಂಬ ಅನುಭವವನ್ನೇ ಇಲ್ಲಿ 'ಸಮ್ಯಗ್ದರ್ಶನ' ಎಂದಿದೆ. ಈ ಸಮ್ಯಗ್ದರ್ಶನ ದೊರಕುವದಕ್ಕೆ ಮೇಲೆ ವರ್ಣಿಸಿದ ಧ್ಯಾನಪ್ರಕಾರವೇ ಬೇಕು. ಈ ಧ್ಯಾನದಿಂದ ಭಕ್ತಿ (ಪ್ರೇಮ) ಶ್ರದ್ಧೆ ಏಕಾಗ್ರತೆ–ಮುಂತಾದವುಗಳು ಬೇಕೇಬೇಕಾಗಿರುವದಾದರೂ ಇದು ಕರ್ತೃತಂತ್ರವಾಗಿ ಭಾವನಾಮಾತ್ರದಿಂದ ಮಾಡುವ ಧ್ಯಾನಗಳ ಸಾಲಿಗೆ ಸೇರಿದ್ದಲ್ಲ. ಮತ್ತೇನೆಂದರೆ ವಸ್ತುತಂತ್ರವಾಗಿ ಎಂದರೆ ಆತ್ಮವಸ್ತುವನ್ನೇ ಒಳನೋಟದಿಂದ ಲಕ್ಷಿಸಿ ಸಕಲ ಅನಾತ್ಮಗಳನ್ನೂ ವಿವೇಕದಿಂದ ತಳ್ಳಿಹಾಕಿ ಅಂತಃಕರಣವನ್ನು ಆತ್ಮನಲ್ಲಿ ಕರಗಿಸುವ

ವಿವೇಕಪ್ರತ್ಯಯದ ಸಾಧನೆಯೇ ಈ ಧ್ಯಾನವಾಗಿದೆ. ಇದರಿಂದಲೇ ಮೇಲೆ ಹೇಳಿದ ಸಮ್ಯಗ್ದರ್ಶನರೂಪದ ಬೆಳಕು, ಅಥವಾ ಮೊದಲು ವರ್ಣಿಸಿದ ವಿವೇಕಪ್ರತ್ಯಯರೂಪದ ಜ್ಞಾನದೀಪವು ಬೆಳಗುತ್ತದೆ. ಈ ರೀತಿಯ ವಿವೇಕಪೂರ್ವಕಧ್ಯಾನವನ್ನು ಈವರೆಗೆ ವರ್ಣಿಸಿದ ಅಂತಃಕರಣದ ಸ್ಥಿತಿಯುಳ್ಳವನೇ ಅಥವಾ ಜನ್ಮಾಂತರದಲ್ಲಿ ಆ ಸಾಧನೆಗಳನ್ನು ಮಾಡಿಕೊಂಡಿರುವ ಸಂಸ್ಕಾರವುಳ್ಳವನೇ ಮಾಡಬಲ್ಲನು. ಇತರರಿಗೆ ಹೇಳಿದರೂ ಇದರ ರಹಸ್ಯವು ಗೊತ್ತಾಗಲಾರದು (ಗೀ. 6–25; 13–24; 16–1) ಮುಂತಾದೆಡೆಗಳಲ್ಲಿಯ ಧ್ಯಾನಶಬ್ದಕ್ಕೆ ಇದೇ ಅರ್ಥವಾಗಿರುತ್ತದೆ. ಹೀಗೆ ಈ ವಿವೇಕಪೂರ್ವಕವಾದ ಧ್ಯಾನಸಾಧನೆಯಲ್ಲಿ ತತ್ಪರನಾದವನಿಗೆ ಸಹಜ ಸ್ವಾಭಾವಿಕವಾಗಿ ಆತ್ಮಸ್ವರೂಪನಾದ ಭಗವಂತನಲ್ಲಿ ನಿಲುಗಡೆಯು ಬರುತ್ತದೆ. ಆಗ ನಿರಾಕರಿಸಬೇಕಾದ ಅನಾತ್ಮವೆಂಬುದು ಇರುವದೇ ಇಲ್ಲ, ಹಾಗೂ ಆತ್ಮನಲ್ಲಿ ನಿಲ್ಲುವದಕ್ಕಾಗಿ ಮಾಡಬೇಕಾದ ಯಾವ ಪ್ರಯತ್ನವೂ ಇವನಿಗೆ ಉಳಿದಿರುವದಿಲ್ಲ. "ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ ಕೇನ ಕಂ ಪಶ್ಯೇತ್" (ಬೃ.2–4–14) ಎಂಬಂತೆ ಕೃತಕೃತ್ಯನಾಗಿ ಈಗಲೇ ನಿತ್ಯಮುಕ್ತ ಸ್ವರೂಪನಾಗಿರುತ್ತಾನೆ. ಇದೇ ಮಾತನ್ನೇ (ಗೀ. 18–55ರಲ್ಲಿ) "ಪರಿಪಕ್ವವೂ ಪ್ರತಿಪಕ್ಷವಿಹೀನವೂ ಆದ ಆತ್ಮಾನುಭವದಲ್ಲಿ ನೆಲೆನಿಲ್ಲುವದೆಂಬ ಜ್ಞಾನನಿಷ್ಠೆಯನ್ನು ಪಡೆಯುವನು ಎಂದು ಆಚಾರ್ಯರು ಹೇಳಿದ್ದಾರೆ. ಇದೇ ಜ್ಞಾನದೀಪವು. ಯಾರು ಭಗವದ್ಭಕ್ತರೋ ಯಾರು ಭಗವತ್ತತ್ತ್ವವಿಜ್ಞಾನ ಪ್ರಾಪ್ತಿಗಾಗಿ ಭಗವಂತನನ್ನು ಭಜಿಸತಕ್ಕವರೋ ಅಂಥ ಜಿಜ್ಞಾಸುಭಕ್ತರಿಗೆ ಭಗವಂತನು ಅವರ ಹೃದಯದಲ್ಲಿ ಇಂಥ ಜ್ಞಾನದೀಪವು ಬೆಳಗುವಂತೆ ಅನುಗ್ರಹಿಸುತ್ತಾನೆ–ಎಂಬುದು ಒಟ್ಟು ಅರ್ಥವು. ಈಗ್ಗೆ ಕೆಲವು ತಿಂಗಳುಗಳಿಂದ ಈ ಲೇಖನಮಾಲೆಯಲ್ಲಿ ಗೀತಾಭಾಷ್ಯವಾಕ್ಯಾನುಸಂಧಾನದ ನೆಪದಿಂದ (ಗೀ. 10–11) ಆತ್ಮವಿಜ್ಞಾನದ ಸ್ವರೂಪ, ಅದಕ್ಕೆ ಬೇಕಾದ ಸಾಧನೆಗಳು ಆ ಬಗ್ಗೆ ಜನಗಳಿಗಿರುವ ತಪ್ಪುಗ್ರಹಿಕೆಗಳು, ಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯದಂತೆ ಅವರ ಉಪದೇಶದ ಸಾರಗಳನ್ನು ವಿವರಿಸಿದ್ದಾಗಿದೆ. ಆಚಾರ್ಯರ ಭಾಷ್ಯವು ಆತ್ಮಾನುಭವವನ್ನು ಬಯಸುವ ಜಿಜ್ಞಾಸುಗಳಿಗೆ ಅನುಭವದ ಮರ್ಮವನ್ನೂ ಅದರಲ್ಲಿ ನೆಲೆನಿಲ್ಲಲು ಬೇಕಾಗಿರುವ ಸಾಧನೆಗಳ ಮರ್ಮವನ್ನೂ ತಿಳಿಸುವ ಬರಹವಾಗಿರುವದರಿಂದ ಭಾಷ್ಯವು ನಿಜವಾಗಲೂ ಜಿಜ್ಞಾಸುಗಳ ಸ್ವತ್ತಾಗಿದೆ. ಇದರ ಆಧಾರದಿಂದ ಸಾಮಾನ್ಯಭಾವುಕಜನರಿಗೆ ಭಕ್ತಿ ಶ್ರದ್ಧೆ ಧರ್ಮ, ಪ್ರೇಮ, ನೀತಿ, ಸದಾಚಾರಗಳೂ ಲಭಿಸುತ್ತವೆ. ಅಂತೂ ಸಂಸಾರತಾಪಗ್ರಸ್ತರಿಗೆ ತುಷ್ಟಿಯನ್ನು ಕೊಡುವ ಸಂಜೀವಿನಿಯಾಗಿದೆ ಈ ಭಾಷ್ಯ.

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರ ಉಪದೇಶದಿಂದಲೂ ಉಪಾಸ್ಯದೇವನಾದ ಶ್ರೀದತ್ತಾತ್ರೇಯಸದ್ಗುರುವಿನ ಅನುಗ್ರಹದಿಂದಲೂ ನನ್ನ ಅಲ್ಪಮತಿಗೆ ನಿಲುಕಿದಷ್ಟು ಮಟ್ಟಿಗೆ ಒಂದು ಭಾಷ್ಯಭಾಗವನ್ನು ಈ ಲೇಖನಮಾಲೆಯಲ್ಲಿ ವಿವರಿಸುತ್ತಾಬಂದಿದ್ದೇನೆ. ಪರಮಾರ್ಥಪಥಿಕರಿಗೆ ಇದು ರುಚಿಸಿ ಶ್ರೀಶಂಕರಾಚಾರ್ಯರ ಮೂಲಭಾಷ್ಯಗಳ ಕಡೆಗೆ ಚಿತ್ತವು ಹೊರಳುವಂತೆ ಪ್ರೇರಣೆಯಾಗಲೆಂದು ಶ್ರೀಶಂಕರಭಗವತ್ಪಾದರ ಅಡಿದಾವರೆಗಳಲ್ಲಿ ಪ್ರಾರ್ಥಿಸಿ, ಈ ಲೇಖನಮಾಲೆಯನ್ನು ಮುಗಿಸುವೆನು.

## ಶ್ರೀ ಕೃಷ್ಣಸ್ತುತಿ

(ಭಾಗವತ)

ಶೃಣ್ವನ್ ಗೃಣನ್ ಸಂಸ್ಮರಯಂಶ್ಚ ಚಿನ್ತಯನ್ ।
ನಾಮಾನಿ ರೂಪಾಣಿ ಚ ಮಙ್ಗಲಾನಿ ತೇ ॥
ಕ್ರಿಯಾಸು ಯಸ್ತ್ವಚ್ಚರಣಾರವಿನ್ದಯೋಃ ।
ಆವಿಷ್ಟಚೇತಾ ನ ಭವಾಯ ಕಲ್ಪತೇ ॥

ಎಲೈ ಭಗವಂತನೆ, ನಿನ್ನ ಮಂಗಲಕರವಾದ ನಾಮರೂಪಗಳನ್ನು ಕೇಳುತ್ತಾ ಹಾಡುತ್ತಾ ಸ್ಮರಿಸುತ್ತಾ ಧ್ಯಾನಿಸುತ್ತಾ ಮತ್ತು ನಿನ್ನ ಪಾದಾರವಿಂದಗಳ ಪೂಜೆಯೇ ಮುಂತಾದ ಕರ್ಮಗಳಲ್ಲಿ ನೆಟ್ಟ ಮನಸ್ಸುಳ್ಳವನು ಸಂಸಾರಕ್ಕೆ ಎಂದಿಗೂ ಸಿಕ್ಕುವದಿಲ್ಲ

## 27. ಸುಲಭ ಸಾಧನೆ –ಯದಶ್ನಾಸಿ

(ಅಕ್ಟೋಬರ್ 1973)

ವದನೀ ಕವಳ ದೇತಾ । ನಾಮ ಧ್ಯಾ ಶ್ರೀಹರೀಚೆ ।
ಸಹಜ ಹವನ ಹೋತೆ । ನಾಮ ಘೇತಾ ಫಾಕಚೆ ॥
ಜೀದನ ಕರಿ ಜಿವಿತ್ವಾ । ಅಂತಹೇ ಪೂರ್ಣಬ್ರಹ್ಮ ।
ಉದರಭರಣ ನೋಹೆ । ಜಾಣಿಜೆ ಯಜ್ಞಕರ್ಮ॥

'ಬಾಯಲ್ಲಿ ತುತ್ತು ಹಾಕುವಾಗ ಶ್ರೀಹರಿಯ ನಾಮಸ್ಮರಣೆ ಮಾಡಿರಿ. ಇದರಿಂದ ಜಠರಾಗ್ನಿಯ ರೂಪದಿಂದ ಒಳಗಿರುವ ಪರಮಾತ್ಮನಿಗೆ ಅರ್ಪಿಸಿದ ಈ ಊಟವೆಂಬ ಕ್ರಿಯೆಯು ಸಹಜವಾಗಿ ಒಂದು ಹವನಕರ್ಮವಾಗುತ್ತದೆ. ಜೀವನಕ್ಕಾಗಿ ಊಟಮಾಡಿರಿ (ಊಟಮಾಡುವದಕ್ಕೆಂದೇ ಜೀವಿಸಬೇಡಿ). ಅನ್ನರೂಪದಿಂದ ತೋರುವವನು ಪರಮಾರ್ಥವಾಗಿ ಪೂರ್ಣಬ್ರಹ್ಮನಾದ ಪರಮಾತ್ಮನೇ ಆಗಿದ್ದಾನೆ. ಆದ್ದರಿಂದ ಊಟವೆಂಬುದನ್ನು ಬರಿಯ ಹೊಟ್ಟೆಗೆ ಭರ್ತಿಹಾಕುವದು–ಅಥವಾ ತುಂಬುವದು–ಎಂದು ಮಾತ್ರ ಬಗೆಯಬೇಡಿರಿ. ನಿಜವಾಗಿಯೂ ಇದೊಂದು ಪವಿತ್ರವಾದ ಯಜ್ಞಕರ್ಮವೆಂದು ತಿಳಿಯಿರಿ' ಎಂಬುದು ಈ ಮರಾಠಿಭಾಷೆಯ ಪದ್ಯದ ಅರ್ಥವು. ಶ್ರೀಸಮರ್ಥರಾಮದಾಸರ ಪಂಥದಲ್ಲಿ ಇದನ್ನು ಊಟಕ್ಕೆ ಮುಂಚೆ ಹೇಳಿಕೊಳ್ಳುವ ರೂಢಿಯಿದ್ದರೆ ಗೀತೆಯಲ್ಲಿ ಪರಮಾತ್ಮನು ಹೆಚ್ಚಿನ ತರಗತಿಯ ಸಾಧನೆಗಳನ್ನು ಮಾಡಲಾಗದಿದ್ದರೆ 'ಸರ್ವಕರ್ಮಫಲತ್ಯಾಗಂ ತತಃ ಕುರು ಯತಾತ್ಮವಾನ್' ನೀನು ಮಾಡುವ ಎಲ್ಲ ಕೆಲಸಗಳನ್ನೂ ಅವುಗಳಲ್ಲಿಯ ಫಲಾಸಕ್ತಿಯನ್ನು ಬಿಟ್ಟು ಭಗವದರ್ಪಣಬುದ್ಧಿಯಿಂದ ಮಾಡು. ಇದಕ್ಕಾಗಿ ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡವನಾಗು–ಎಂದು (ಗೀ.9–12–11) ಹೇಳಿದ್ದಾನೆ. ಇದರಂತೆಯೇ 'ಯತ್ಕರೋಷಿ ಯದಶ್ನಾಸಿ' (ಗೀ. 9-27) ಎಂದು ಏನೇನು ಮಾಡುವಿಯೋ, ಏನೇನು ತಿನ್ನುವಿಯೋ ಅದನ್ನೆಲ್ಲ ನನಗರ್ಪಿಸು– ಎಂದು ಹೇಳಿದ್ದಾನೆ.

ಈಗಿನ ಕಾಲದಲ್ಲಿ ಜನಗಳಿಗೆ ಜೀವನೋಪಾಯಕ್ಕಾಗಿ ದುಡಿಯುವ ಭರದಲ್ಲಿ ಇಪ್ಪತ್ತುನಾಲ್ಕು ಘಂಟೆಗಳೂ ಸಾಲದೆಂಬ ಪರಿಸ್ಥಿತಿಯು ಬರಹತ್ತಿದೆ. ಹೀಗಿರುವಾಗ ನಮಗೆ ಅಧ್ಯಾತ್ಮಸಾಧನೆಗಳನ್ನು ಮಾಡಲು ಕಾಲಾವಕಾಶವೆಲ್ಲಿ? ಎಂಬುದು ಕೆಲವರ ಪ್ರಶ್ನೆ. ಇಂಥವರಿಗೂ ಅಧ್ಯಾತ್ಮಸಾಧನೆಯ ಪ್ರಥಮಪಾಠವನ್ನು ಮೇಲೆ ಹೇಳಿದ ಪದ್ಯದಲ್ಲಿ ಸಮರ್ಥರಾಮದಾಸರು ಉಪದೇಶಿಸಿದ್ದಾರೆ. ಪ್ರತಿಯೊಬ್ಬನೂ ಎಷ್ಟೇ ಕೆಲಸ

ಕಾರ್ಯಗಳಲ್ಲಿದ್ದರೂ ಊಟವನ್ನಂತೂ ದಿನಕ್ಕೆರಡು ಸಲ ಮಾಡಿಯೇ ಮಾಡುವನಲ್ಲವೆ? ಅಥವಾ ಒಂದು ಸಲ ಉಪಹಾರ ಎರಡು ಊಟ ಹೀಗೆ ಮಾಡುವವರು ಇದ್ದಾರೆ. ಒಂದೇ ಊಟ, ಒಂದು ಉಪಹಾರದವರೂ ಇದ್ದಾರೆ. ಹೇಗೇ ಇರಲಿ ಯಾರೇ ಇರಲಿ, ಅವರು ಎಲ್ಲಿಯೇ ಊಟಮಾಡುತ್ತಿರಲಿ, ಯಾವ ಹೊತ್ತಿಗಾದರೂ ತಮ್ಮ ಅನುಕೂಲದಂತೆ ಮಾಡುತ್ತಿರಲಿ, ಊಟಕ್ಕೆ ಮುನ್ನ ಲೌಕಿಕ ಮಾತುಕತೆಗಳನ್ನು ನಿಲ್ಲಿಸಿ, ಭಗವಂತನನ್ನು ಸ್ಮರಿಸಿ ಈ ಪದ್ಯವನ್ನೋ ಗೀತೆಯ ಶ್ಲೋಕಗಳನ್ನೋ ಹೇಳಿಕೊಂಡು ಪರಮಾತ್ಮನ ನಾಮಸ್ಮರಣೆಯೊಂದಿಗೆ ಊಟಮಾಡುವ ಪದ್ಧತಿಯನ್ನಳವಡಿಸಿಕೊಂಡರೆ ಅಧ್ಯಾತ್ಮಸಾಧನೆಯ ಮೊದಲನೆಯ ಹೆಜ್ಜೆಯನ್ನಿಟ್ಟಂತೆ ಆಗುತ್ತದೆ. ರಾಜಕಾರಣದ ಮಾತುಗಳು, ಇನ್ನೊಬ್ಬರ ನಿಂದೆ, ವಿಮರ್ಶೆ–ಮುಂತಾದವುಗಳು, ಹಾಸ್ಯ, ಕೊಂಕುಮಾತು, ಕಾಡುಹರಟೆಗಳನ್ನೆಲ್ಲ ನಿಲ್ಲಿಸಿ ಕೂಡಲೇ ಅನ್ನರೂಪದಿಂದಿರುವವನೂ ಒಳಗೆ ಜಠರಾಗ್ನಿಯ ರೂಪದಿಂದಿರುವವನೂ ಪರಮಾತ್ಮನೇ ಆಗಿರುವನೆಂದು ಭಾವಿಸಿ ಭಗವನ್ನಾಮಸ್ಮರಣೆಯಿಂದ ಆರಂಭಿಸಿ ಭಗವದ್ಭಾವನೆಯ ಆನಂದದಲ್ಲಿಯೇ ಊಟವನ್ನು ಮುಗಿಸುವ ಅಭ್ಯಾಸ ಮಾಡಲು ಎಲ್ಲರಿಗೂ ಸಾಧ್ಯವಿದೆ. ಹೀಗೆ ಒಂದೊಂದೇ ಕರ್ಮಗಳಲ್ಲಿ ಭಗವದ್ಭಾವನೆಯನ್ನು ಬೆರಸುತ್ತಾ ಹೋಗುವವರಿಗೆ ಅಧ್ಯಾತ್ಮಸಾಧನೆಗಳು ಅಳವಡುವವಲ್ಲದೆ ಭಗವಂತನ ಅನುಗ್ರಹದಿಂದ ಅವರು ಹೆಚ್ಚಿನ ಸ್ಥಿತಿಗೂ ಏರುವದರಲ್ಲಿ ಸಂಶಯವಿಲ್ಲ. ವಾಚಕರೆ, ಇಂದಿನಿಂದಲೇ ಈ ನಾಮಸ್ಮರಣೆಯ ಅಭ್ಯಾಸವನ್ನಾರಂಭಿಸಿ ಊಟ ಮಾಡಲು ಮೊದಲು ಮಾಡಿರಿ.

# 28. ದೃಷ್ಟಿಯ ದ್ರಷ್ಟೃ

## ನೋಟವನ್ನೇ ನೋಡುವವ

### (ಫೆಬ್ರವರಿ 1974)

ಈಗಿನ ಭೌತಿಕ ವಿಜ್ಞಾನಯುಗದಲ್ಲಿ ಮನುಷ್ಯನು ಸತ್ತ ಬಳಿಕ ಕೆಲವು ಅವಧಿಯ ಒಳಗಾಗಿಯೇ ಈ ದೇಹದಲ್ಲಿಯ ಕಣ್ಣುಗಳನ್ನು ಕಿತ್ತು ಇಟ್ಟುಕೊಳ್ಳುತ್ತಾರೆ. ಕಣ್ಣುಗಳಿಲ್ಲದ ಕುರುಡನೊಬ್ಬನಿಗೆ ಆ ಅಳತೆಗೆ ಈ ಕಣ್ಣುಗಳು ಹೊಂದುವದಾದಲ್ಲಿ ಆ ಜೀವಂತನಾಗಿರುವ ಮನುಷ್ಯನಿಗೆ ಈ ಕಾದಿಟ್ಟ ಕಣ್ಣುಗಳನ್ನು ಜೋಡಿಸುತ್ತಾರೆ. ಆಗ ಕುರುಡನು ಈ ಕಣ್ಣುಗಳ ಮೂಲಕ ದೃಷ್ಟಿಯನ್ನು ಪಡೆದು ನೋಡತೊಡಗುವನೆಂಬುದು ಪ್ರಯೋಗ

ಸಿದ್ಧವಾಗಿರುತ್ತದೆ. ಇದರಿಂದ ಏನು ಸಿದ್ಧವಾಗುವದೆಂದರೆ–ಮೊದಲಿನ ಮೃತದೇಹದಲ್ಲಿ ಕಣ್ಣುಗಳು ಸರಿಯಾಗಿದ್ದರೂ ನೋಡುವವನು ಆ ದೇಹದಲ್ಲಿ ಇರಲಿಲ್ಲವಾದ್ದರಿಂದ ಅಲ್ಲಿ ನೋಡುವ ಕೆಲಸ ನಡೆಯಲಿಲ್ಲ. ಇಲ್ಲಿ ಜೀವಂತವಾಗಿರುವ ಕುರುಡನ ಶರೀರದಲ್ಲಿ ನೋಡುವವನು ಸಿದ್ಧನಾಗಿದ್ದರೂ ಕಣ್ಣುಗಳಿಲ್ಲದ್ದರಿಂದ ನೋಡಲು ಸಾಧ್ಯವಾಗಲಿಲ್ಲ. ಈ ಕುರುಡನಿಗೆ ಆ ಕಣ್ಣುಗಳನ್ನು ಜೋಡಿಸಿದೊಡನೆಯೇ ನೋಡಲಾರಂಭಿಸಿದನಾದ್ದರಿಂದ ಇಲ್ಲಿ **''ಕಣ್ಣುಗಳಿಗಿಂತ ಬೇರೆಯಾಗಿ ಅವುಗಳ ಮೂಲಕ ನೋಡತಕ್ಕವನು ಒಬ್ಬನಿದ್ದಾನೆ''** ಎಂಬ ಮಾತಿಗೆ ಭೌತಿಕ ವಿಜ್ಞಾನವು ಒಪ್ಪಿಗೆ ಕೊಟ್ಟಂತಾಯಿತು.

ಕಣ್ಣಿಗೆ ಪೊರೆ ಮುಂತಾದ ದೋಷಗಳು ಬಂದಾಗ 'ಈಗ ನನ್ನ ಕಣ್ಣು ಸರಿಯಾಗಿ ಕಾಣುವದಿಲ್ಲ' ಎಂದು ಹೇಳುವಾಗ ಕಣ್ಣಿನ ದೃಷ್ಟಿಯನ್ನೇ ನೋಡುವ ತಾನು ಇದ್ದೇ ಇರುತ್ತಾನೆ. ಶಸ್ತ್ರಚಿಕಿತ್ಸೆಯಿಂದ ಪೊರೆಯನ್ನು ತೆಗೆದಾಗ 'ಈಗ ಸರಿಯಾಗಿ ಕಾಣುತ್ತದೆ' ಎಂದು ಹೇಳುತ್ತಾನಾದ್ದರಿಂದ ದೃಷ್ಟಿಯನ್ನೇ ವಿಷಯೀಕರಿಸುವವನು–ನೋಟವನ್ನೇ ನೋಡುವವನು–ಈ ಕಣ್ಣುಗಳಿಗಿಂತ ಬೇರೆಯಾಗಿ ಇರಲೇಬೇಕಾಗಿದೆ. ಹೀಗೆ ಕಣ್ಣು ಕಾಣುವದನ್ನೂ, ಕಾಣುವದಿಲ್ಲ–ಎಂಬುದನ್ನೂ ಕಾಣುತ್ತಿರುವಾತನು ಇರುವನೆಂಬ ಬಗ್ಗೆ ಯಾರಿಗೂ ಸಂಶಯವು ಬರುವ ಸಂಭವವೇ ಇಲ್ಲ.

ಶಸ್ತ್ರ ಚಿಕಿತ್ಸೆ ಮುಂತಾದದ್ದು ಕಣ್ಣಿಗೇ ಹೊರತು ತನಗಲ್ಲ. ಕಣ್ಣು ಕಾಣಲಿ, ಕಾಣದಿರಲಿ, ಸರಿಯಾಗಿ ಕಾಣಲಿ, ವ್ಯತ್ಯಾಸವಾಗಿ ಕಾಣಲಿ ಇದೆಲ್ಲವನ್ನೂ ನೋಡುತ್ತಾ ತಾನಿದ್ದೇ ಇದ್ದಾನೆ. ಇಂಥ ದೃಷ್ಟಿಯ ದ್ರಷ್ಟನನ್ನು–ಎಂದರೆ ಕಣ್ಣನ್ನೇ ನೋಡುವವನನ್ನು ಈ ಕಣ್ಣುಗಳಿಂದ ನೋಡುವದು ಹೇಗೆ ಸಾಧ್ಯ? ಎಂದಿಗೂ ಶಕ್ಯವಿಲ್ಲ. **'ನ ದೃಷ್ಟೇರ್ದ್ರಷ್ಟಾರಂ ಪಶ್ಯೇಃ' (ಬೃ. 3–4–2)** ದೃಷ್ಟಿಯ ದ್ರಷ್ಟನನ್ನು ಈ ಕಣ್ಣಿನಿಂದ ನೋಡಲಾರೆ–ಎಂದು ಯಾಜ್ಞವಲ್ಕ್ಯರು ಉಷಸ್ತಚಾಕ್ರಾಯಣನೆಂಬವವನಿಗೆ ಹೇಳಿದ್ದಾರೆ. ಇದರಿಂದ–

(1) 'ನಮ್ಮ ಕಣ್ಣಿಗೆ ಕಾಣದಿರುವದನ್ನು ನಾವು ನಂಬುವದಿಲ್ಲ' ಎನ್ನುವವರು ಹೊರಗಿನ ವಸ್ತುಗಳನ್ನು ಮಾತ್ರ ಕಣ್ಣಿನಿಂದ ನೋಡಬಹುದೇ ಹೊರತು ಕಣ್ಣಿನ ದೃಷ್ಟಿಯನ್ನೇ ನೋಡುವ ತನ್ನನ್ನು ಎಂದಿಗೂ ಕಣ್ಣಿನಿಂದ ನೋಡಲು ಶಕ್ಯವಿಲ್ಲವಾದ್ದರಿಂದ–ಕಣ್ಣಿನ ವ್ಯತ್ಯಾಸಗಳನ್ನು ಗುರುತಿಸುವ ತಮ್ಮ ಅಸ್ತಿತ್ವವನ್ನೇ ಅಲ್ಲಗಳೆದುಕೊಂಡವರಾಗುತ್ತಾರೆ. ಇದು ಸಾರ್ವತ್ರಿಕವಾಗಿರುವ ಅನುಭವಕ್ಕೇ ವಿರೋಧವಾಗುತ್ತದೆ. ಆದ್ದರಿಂದ ಇಂದ್ರಿಯಗಳನ್ನೇ ಬೆಳಗುವ ತಾನು (ಆತ್ಮ) ಇಂದ್ರಿಯಗಳ ಹಂಗೇ ಇಲ್ಲದೆ ಸ್ವತಂತ್ರನಾಗಿದ್ದಾನೆ ಎಂಬುದನ್ನು ಅನುಭವದಲ್ಲಿ ಕಂಡುಕೊಳ್ಳಲು ಬರುವದು.

(2) ಕಣ್ಣಿನಿಂದ ಕಾಣುವ ವಸ್ತುಗಳಿಗೆ ಆಕಾರ, ಗುಣ, ಕರ್ಮ, ವಿಶೇಷ ಸಾಮಾನ್ಯ–ಮುಂತಾದವುಗಳೂ ಕಾಲದೇಶಕಾರ್ಯಕಾರಣಭಾವಗಳಿಗೆ ಒಳಪಡುವಿಕೆಯೂ ಅನೇಕತ್ವವೂ ಇರುತ್ತವೆ. ಆದರೆ ಈ ದೃಷ್ಟಿಯ ದ್ರಷ್ಟನಿಗೆ ಆಕಾರ, ಗುಣ, ಕ್ರಿಯೆ, ಸಾಮಾನ್ಯವಿಶೇಷಾದಿಗಳಾಗಲಿ ಕಾಲದೇಶಕಾರ್ಯಕಾರಣಾದಿಗಳ ಕಟ್ಟಾಗಲಿ ಎಂದಿಗೂ ಇಲ್ಲ. ಹಾಗೂ ಕಣ್ಣಿನ ದೃಷ್ಟಿಯ ಲೋಪದೋಷಗಳನ್ನು ಈ ಆತ್ಮನು ನೇರಾಗಿ ತನ್ನ ಚಿನ್ಮಾತ್ರಸ್ವರೂಪದಿಂದಲೇ ಬೆಳಗುವವನಾಗಿದ್ದಾನೆ. ಅದರಿಂದ ಇವನನ್ನು 'ಕಣ್ಣಿಗೆ ಕಣ್ಣು' ಎಂದು ಕರೆದಿದ್ದಾರೆ. (ಕೇ.1–2) ಈ ಚಿನ್ಮಾತ್ರನಾದ ಆತ್ಮನು (ತಾನು) ಕಣ್ಣಿನಲ್ಲಿ ವ್ಯಾಪಿಸದಿದ್ದರೆ ಈ ಕಣ್ಣಿಗೆ ನೋಡುವ ಯೋಗ್ಯತೆಯೇ ಬರಲಾರದು.

(3) ಈ ಸಂಗತಿಯನ್ನು ತಿಳಿಸುವ ಉಪನಿಷತ್ತು ಎಲ್ಲರಿಗೂ ಗೊತ್ತಿರುವ 'ಕಣ್ಣು' ಎಂಬುದನ್ನು ನೆಪಮಾಡಿಕೊಂಡು (ಅಧ್ಯಾಪರೋಪದಿಂದ ಒಪ್ಪಿ) ಕಣ್ಣಿಗೆ ಕಣ್ಣಾಗಿರುವ ನಮ್ಮ ಸ್ವರೂಪದೆಡೆಗೆ ನಮ್ಮ ಲಕ್ಷ್ಯವನ್ನು ತಿರುಗಿಸಿದೆ. ಈ ಬೋಧವನ್ನನುಸರಿಸಿ ನಾವು ಕಣ್ಣಿನಿಂದ ಹೊರಕ್ಕೆ ನೋಡುವದನ್ನು ಬಿಟ್ಟು ಹಿಂದಿರುಗಿದರೆ ಉಪನಿಷತ್ತು ಬೋಧಿಸುವ ದೃಷ್ಟಿಯ ದ್ರಷ್ಟೃವಾಗಿಯೇ ಇರುವದನ್ನು ಅನುಭವದಲ್ಲಿ ಕಂಡುಕೊಳ್ಳುತ್ತೇವೆ.

(4) ಯಾರಿಗೆ ಹೀಗೆ ಚಿನ್ಮಾತ್ರವಾದ ಅನುಭವಸ್ವರೂಪವೇ ತಾನೆಂಬುದು ಅನುಭವಕ್ಕೆ ಬಂದಿದೆಯೋ–ಎಂದರೆ ತಾನಾಗಿಯೇ ನೆಲೆನಿಂತಿರುವದೋ ಅವರಿಗೆ ಕಣ್ಣೇ ಮುಂತಾದ ಭೇದವಾಗಿ ತೋರುವದೆಲ್ಲವೂ ನಿಜವಾಗಿ ಈ ಬರಿಯ ತಾನೇ ಆಗಿರುವದೆಂಬುದೂ ಅನುಭವಕ್ಕೆ ಬರುತ್ತದೆ. ಒಂದು ಕನಸಿನಲ್ಲಿ ತತ್ಕಾಲಕ್ಕೆ ಇರುವಂತೆ ತೋರಿದ ಕಣ್ಣು, ವಸ್ತುಗಳು, ಬೆಳಕು, ಮನಸ್ಸು, ಬುದ್ಧಿ, ಅನೇಕ ಜೀವರು, ಕಾಲ, ದೇಶಾದಿಭಾವಗಳು –ಎಲ್ಲವೂ ನಿಜವಾಗಿ ಹೇಗೆ ಬರಿಯ ತಾನೇ ಆಗಿದೆಯೋ ಹಾಗೆಯೇ ಇದೂ ಸಹ ಆಗಿರುವದೆಂಬುದು ಅನುಭವಕ್ಕೆ ಬಂದೊಡನೆಯೇ ಒಳಗೂ ಹೊರಗೂ ಬರಿಯ ತಾನೇ ತಾನಾಗಿರುತ್ತಾನೆ. ಆಗ ಮೊದಲಿನಂತೆ 'ಅಯ್ಯೋ ನನ್ನ ಕಣ್ಣೇ ಹೋಯಿತು ಕುರುಡನಾದೆ' ಎಂದು ಕಣ್ಣಿನಲ್ಲಿ ತಾದಾತ್ಮ್ಯವನ್ನು ಹೊಂದಿ ಗೋಳಾಡುವದಿಲ್ಲ. ಕಣ್ಣು ಹೋದದ್ದನ್ನೂ ನೋಡುತ್ತಿರುವ ನನಗೆಲ್ಲಿ ಕುರುಡು? ಗಾಢನಿದ್ರೆಯಲ್ಲಿ ಕಣ್ಣೇ ಮುಂತಾದ ಯಾವ ದ್ವೈತವೂ ಇಲ್ಲದಿರುವದರಿಂದ ಅನುಭವದಿಂದ ಬೆಳಗುವ ತಾನು ನಿತ್ಯಚಿನ್ಮಾತ್ರನಾಗಿರುವೆನೆಂಬುದೇ ಅವನ ಅನುಭವವಾಗಿರುತ್ತದೆ.

(5) ಹೀಗೆಯೇ ಎಲ್ಲ ಇಂದ್ರಿಯಗಳು, ಮನಸ್ಸು, ಬುದ್ಧಿ–ಮುಂತಾದವುಗಳಿಗೂ ಈ ರೀತಿಯನ್ನು ಅನ್ವಯಿಸಿದರೆ ಕಿವಿಗೆ ಕಿವಿಯಾಗಿ, ಮನಸ್ಸಿಗೆ ಮನಸ್ಸಾಗಿ, ಬುದ್ಧಿಗೆ ಬುದ್ಧಿಯಾಗಿ, ಕೇವಲ ಚಿನ್ಮಾತ್ರನಾಗಿ 'ಚಿಚ್ಛಕ್ತಿಮಾತ್ರಸ್ವರೂಪಃ' (ಕೇ. ಭಾ. 3–4) ಎಂದು

ಆಚಾರ್ಯರು ಹೇಳಿದಂತೆ ನೇರಾಗಿ ಈ ಆತ್ಮನನ್ನು ಅನುಭವದಲ್ಲಿ ಕಂಡು ಕೃತಕೃತ್ಯನಾಗುತ್ತಾನೆ. "ಯೋ ಅಕ್ಷಿಣಿ ಪುರುಷೋ ದೃಶ್ಯತೇ ನಿವೃತ್ತ ಚಕ್ಷುರ್ಭಿಃ ಬ್ರಹ್ಮಚರ್ಯಾದಿಸಾಧನಸಂಪನ್ನೈಃ ಶಾನ್ತೈಃ ವಿವೇಕಿಭಿಃ ದೃಷ್ಟೇ ದ್ರಷ್ಟಾ" (ಛಾಂ. 4–15–1) ಎಂದು ಬ್ರಹ್ಮಚರ್ಯಾದಿಸಾಧನೆಗಳಿಂದ ಅಂತಃಕರಣವನ್ನು ಹಿಂದಿರುಗಿಸಿಕೊಂಡು (ಹೊರಗಿನ ವಿಷಯ ಹಾಗೂ ಇಂದ್ರಿಯಗಳಿಂದ ಹಿಂಜಗ್ಗಿಕೊಂಡು) ಶಾಂತರಾಗಿರುವವರು (ವಿಷಯಗಳ ಚಿಂತನೆ, ಕಾಮಾದಿಗಳ ಹೊಡೆತವಿಲ್ಲದವರಾದ) ಅಂಥವರಿಂದ ಈ ದೃಷ್ಟಿಯ ದ್ರಷ್ಟನಾದ ಆತ್ಮನು ಅರಿಯಲ್ಪಡುತ್ತಾನೆ– ಎಂಬುದು ಇದರ ಅರ್ಥ.

ವಾಚಕರೆ, ಭೌತಿಕ ವಿಜ್ಞಾನದ ಹೊರನೋಟಕ್ಕೂ ವೇದಾಂತವಿಜ್ಞಾನದ ಒಳನೋಟಕ್ಕೂ ಇರುವ ಅಂತರವು ಈಗ ಗೊತ್ತಾಯಿತಲ್ಲವೆ? ಆದ್ದರಿಂದ ಈ ಭೌತಿಕ ವಿಜ್ಞಾನದ ಶೋಧನೆಗಳಿಂದ ಇಡೀ ವಿಶ್ವಕ್ಕೇ ಆಧಾರವಾಗಿರುವ ಪರಮಾರ್ಥತತ್ತ್ವದ ಅನುಭವವು ಎಂದಿಗೂ ಬರಲಾರದು. ಹೊರಗಿನ ಜಗತ್ತಿನಲ್ಲಿ ಇದರ ಆಟವೇ ಹೊರತು ಒಳಗಿರುವ ಅನುಭವಸ್ವರೂಪನಾದ ಆತ್ಮನ ಸುಳಿವೂ ಸಹ ಇದರಿಂದ ಸಿಕ್ಕಲಾರದು. ಆದ್ದರಿಂದ ಇಡೀ ವಿಶ್ವದ ತಿರುಳನ್ನೇ ಅನುಭವದಲ್ಲಿ ಈಗಲೇ ಕಂಡು ಕೃತಕೃತ್ಯನಾಗಬೇಕೆಂದು ಬಯಸುವವರು ಈ ವೇದಾಂತವಿಜ್ಞಾನಕ್ಕೇ ಶರಣುಹೋಗಬೇಕು. ಆ ಸಾಧನೆಗಳನ್ನೇ ಮಾಡಬೇಕು. ಆಗ ನಿಶ್ಚಿತವಿಜ್ಞಾನವು ಪ್ರಾಪ್ತವಾಗುವದು. ಇಂಥ ಪರಮಶಾಂತಿಯನ್ನೀಯುವ ವೇದಾಂತವಿಜ್ಞಾನದ ವಿಷಯದಲ್ಲಿ ಪ್ರೇಮಾದರಗಳು ಎಲ್ಲರಿಗೂ ಬರಲಿ!

## 29. ಸತ್ಸಂಗತ್ವೇ ನಿಃಸಂಗತ್ವಮ್–1

### (ಏಪ್ರಿಲ್ 1974)

ಒಂದು ಸಲ ಒಬ್ಬ ಮಹಾವಿಜ್ಞಾನಿಗಳೂ ಅಮಾನಿತ್ವಾದಿಸಾಧುಗುಣಪೂರ್ಣರೂ ಆದ ದೊಡ್ಡವರೊಡನೆ ಕುಳಿತಿದ್ದೆ. ಅಧ್ಯಾತ್ಮವಿದ್ಯೆಯಲ್ಲಿ ಅಭಿರುಚಿಯುಳ್ಳ ತಾಯಿ ಹಾಗೂ ಮಗಳು– ಹೀಗೆ ಇಬ್ಬರೂ ನಮ್ಮೊಡನೆ ಇದ್ದರು. ನಮ್ಮಿಬ್ಬರಿಗೂ ಸಂಬಂಧಪಟ್ಟಂತೆ ಯಾವದೋ ಒಂದು ಕೆಲಸ. ಬಹುಶಃ ಒಂದು ಲೇಖನವನ್ನು ಬರೆದಿದ್ದು ಅದರ ನಕಲನ್ನು ತಯಾರಿಸುವ ಕೆಲಸವಿತ್ತೆಂದು ನೆನಪಿಗೆ ಬರುತ್ತದೆ. ಆ ಕೆಲಸವನ್ನು ಆ ಮಗಳಿಗೆ ನಾನು ವಹಿಸಿಕೊಟ್ಟು "ನೋಡು, ಇದನ್ನು ನೀನು ತಪ್ಪದೇ ಮಾಡಬೇಕು. ಯಾವ ಕಾರಣದಿಂದಲೂ ಅಲಕ್ಷ್ಯಮಾಡಬೇಡ" ಎಂದು ಹೇಳಿದೆ. ಆಗ ಅವರ ತಾಯಿಯು

'ನೀವು ಅವಳಲ್ಲಿ ವಿಶ್ವಾಸವಿಡಿ; ಅವಳು ಮಾಡಿಯೇ ಮಾಡುತ್ತಾಳೆ' ಎಂದಳು. ಆಗ ನಾನು 'ಓಹೊ? ನನ್ನ ಮಗಳ ಮೇಲೆ ನನಗೆ ಅಷ್ಟು ವಿಶ್ವಾಸವಿಲ್ಲವೆ?' ಎಂದು ವಾತ್ಸಲ್ಯಭಾವದಿಂದ ಹೇಳಿದೆ. ಕೂಡಲೆ ನನ್ನೊಡನಿದ್ದ ಆ ದೊಡ್ಡವರು 'ನಮ್ಮ ತಾಯಿಯ ಮೇಲೆ ನಮಗೆಂದೂ ಅವಿಶ್ವಾಸವಿಲ್ಲ' ಎಂದುಬಿಟ್ಟರು. ಆ ಮಾತನ್ನು ಕೇಳಿದೊಡನೆಯೇ ನನಗೆ ನಾಚಿಕೆಯಾಯಿತು. ಏಕೆಂದರೆ ನಾನು 'ನನ್ನ ಮಗಳೆಂದು' ಭಾವಿಸಿ ಅವಳನ್ನು ಸಂಬೋಧಿಸಿದ್ದುದರಲ್ಲಿ ನಾನು ಹೆಚ್ಚು, ಅವಳು ಕಡಿಮೆ ಎಂಬ ಅಹಂಭಾವವು ಸೇರಿದಂತಾಗಿತ್ತು. ಆ ಸಾಧುಗಳು 'ನಮ್ಮ ತಾಯಿ' ಎಂದು ಕೂಡಲೇ ಹೇಳಿದ್ದರಿಂದ ತಮ್ಮ ಸಹಜಗುಣವಾದ ಅಮಾನಿತ್ವವನ್ನು ಸೂಚಿಸಿದಂತಾಗಿತ್ತಲ್ಲವೆ. 'ನಮ್ಮ' ಎಂಬ ಬಹುವಚನಪ್ರಯೋಗದಿಂದ ಸಾಕ್ಷಾತ್ ಜಗನ್ಮಾತೆಯೇ ಅವಳ ರೂಪದಿಂದಿರುವಳೆಂಬ ಭಾವವೂ ಅದರಲ್ಲಿ ಧ್ವನಿತವಾಗಿತ್ತು. 'ಅಯ್ಯೋ ನನಗೆ ಇಂಥ ದಿವ್ಯಭಾವನೆ ಬಾರದೆ ಹೋಯಿತಲ್ಲ!' ಎಂದು ಆ ಕೂಡಲೆ ನಾನು ವ್ಯಥೆಪಟ್ಟುಕೊಂಡೆ. ದೊಡ್ಡವರು ತಮ್ಮ ಮಾತು, ಆಚರಣೆಗಳಿಂದ ಬೋಧಮಾಡುವ ಈ ಸಂದರ್ಭವು ನನಗೆ ತುಂಬಾ ಮಾರ್ಗದರ್ಶಕವಾಗಿತ್ತು. ಆಮೇಲೆ ನನಗೆ (1) ಶ್ರೀರಾಮಕೃಷ್ಣಪರಮಹಂಸರನ್ನು ಮಥುರಾಲಾಲನು ವೇಶ್ಯೆಯರ ಮಧ್ಯದಲ್ಲಿಬಿಟ್ಟಾಗ 'ಆಹಾ ಜಗನ್ಮಾತೆ, ಮಹಾಕಾಲಿ–ಈ ರೀತಿ ವೇಷಹಾಕಿಕೊಂಡು ಬಂದಿರುವೆಯಾ? ನಿನಗೆ ಸಾಷ್ಟಾಂಗ ಪ್ರಣಾಮಗಳು' ಎಂದು ಹೇಳಿ ಆಕೆಯಲ್ಲಿ ಕಾಲಿಯನ್ನೇ ಕಂಡು ನಮಸ್ಕಾರಾದಿಗಳನ್ನು ಮಾಡಹತ್ತಿದರಂತೆ. (2) ಶ್ರೀರಮಣಮರ್ಷಿಗಳಿಗೆ 'ನಿಮಗೆ ಸ್ತ್ರೀಯರು ಎದುರಿಗೆ ಬಂದರೆ ಸ್ತ್ರೀಯರಂತೆ ಕಾಣುವದಿಲ್ಲವೇನು?' ಎಂದು ಪ್ರಶ್ನಿಸಲು 'ಸ್ತ್ರೀಯರಂತೆಯೇ ಕಾಣುತ್ತಾರೆ' ಎಂದರಂತೆ. 'ಹಾಗಾದರೆ ಸ್ತ್ರೀಯರನ್ನು ಪುರುಷರು ನೋಡಿದರೆ ಆಗುವ ಮನಸ್ಸಿನ ವಿಕಾರಗಳೂ ನಿಮಗಾಗುವದೇನು?' ಎಂದು ಕೇಳಿದರಂತೆ. (ಆಗ ರಮಣರಿನ್ನೂ 28 ವರ್ಷದ ಹರೆಯದವರು). ಅದಕ್ಕವರು 'ಇಲ್ಲ, ನನಗೇನೂ ಮನಸ್ಸಿನಲ್ಲಿ ವಿಕಾರಗಳಾಗುವದಿಲ್ಲ, ಏಕೆಂದರೆ ಆತ್ಮನೇ ಸ್ತ್ರೀರೂಪದಿಂದ ಕಾಣುತ್ತಿದ್ದಾನೆಯೇ ಹೊರತು ನಿಜವಾಗಿಯೂ ಸ್ತ್ರೀ ನೋಡುವದು, ನೋಡಿಸಿಕೊಳ್ಳುವದು, ಮನಸ್ಸು–ಮುಂತಾದದ್ದಿಲ್ಲವೇ ಇಲ್ಲ. ಇದೆಲ್ಲವೂ ಬರಿಯ ತಾನೇ ತಾನಾದ ಆತ್ಮನು. ಭೇದವಾಗಿ ಕಾಣುವದೆಲ್ಲವೂ ಬರೀ ಹುಸಿ ತೋರಿಕೆ–ಎಂದೇ ನಮಗೆ ಅನಿಸುತ್ತದೆ' ಎಂದು ಉತ್ತರಕೊಟ್ಟರಂತೆ. ಇವುಗಳನ್ನು ನಾನು ಒಬ್ಬರ ಬಾಯಿಂದ ಕೇಳಿದ್ದೆ. ಈ ಎರಡೂ ಸಂಗತಿಗಳು ಥಟ್ಟನೆ ನೆನಪಾದವು. ಮೊದಲನೆಯದಾಗಿ ಎಲ್ಲವೂ ಭಗವಂತನೇ ಅಥವಾ ಭಗವತೀಜಗಜ್ಜನನಿಯೇ ಆಗಿದೆ–ಎಂಬ ಭಾವನೆ ಮನಸ್ಸಿನಲ್ಲಿಬರಬೇಕು. ಎರಡನೆಯದಾಗಿ ವಿವೇಕಪ್ರಜ್ಞೆಯಿಂದ ದ್ರಷ್ಟಾ (ನೋಡುವವನು), ದೃಶ್ಯ (ಕಾಣುವ ವಸ್ತು) ಮತ್ತು ಕಣ್ಣು ಮನಸ್ಸು

ಇದೆಲ್ಲದರಲ್ಲೂ ಚಿದ್ರೂಪನಾದ ತಾನೇ ತಾನಾದ ಆತ್ಮನೇ ವ್ಯಾಪಿಸಿದ್ದನ್ನು ಕಂಡು ಭೇದವನ್ನೆಲ್ಲವನ್ನೂ ಬಾಧಿಸಿ ಸಹಜವಾಗಿ ಆತ್ಮನಾಗಿ ನಿಲ್ಲುವದು. ಈ ಎರಡರಲ್ಲಿ ನಾನು ಯಾವದನ್ನೂ ಮಾಡಲಿಲ್ಲವಲ್ಲ? ಇದಕ್ಕೆ ವಿರುದ್ಧವಾಗಿ 'ನಾನು ತಂದೆಯಂತೆ ಇರುವೆನೆಂಬ' ಅಹಂಭಾವವು ತಿಳಿಯದೇ ನನ್ನಲ್ಲಿ ಬಂದಿತಲ್ಲ!– ಎಂದು ಪಶ್ಚಾತ್ತಾಪಪಟ್ಟು 'ಶ್ರೀದತ್ತಭಗವಂತಾ, ನನಗೆ ಇಂಥ ಭಾವನೆ, ಇಂಥ ವಿವೇಕವನ್ನೇ ಕರುಣಿಸು' ಎಂದು ಪ್ರಾರ್ಥಿಸಿದೆ. ವಾಚಕರೆ, ನೋಡಿರಿ; ದೊಡ್ಡವರ ಸಹವಾಸದ ಫಲವನ್ನು! ನನ್ನಂಥ ಸಾಮಾನ್ಯನಿಗೇ ಹೀಗಾದರೆ ಇನ್ನು ದೊಡ್ಡದೊಡ್ಡ ಮಹಾಪುರುಷರ ಜೀವನದಲ್ಲಿ ಏನೇನಾಗಿರಲಿಕ್ಕಿಲ್ಲ? ಆದ್ದರಿಂದಲೇ ಆಚಾರ್ಯರು 'ಸತ್‌ಸಂಗತ್ವೇ ನಿಸ್ಸಂಗತ್ವಮ್' ಎಂದಿದ್ದಾರೆ.

## 30. ಸತ್ಸಂಗತ್ವೇ ನಿಃಸಂಗತ್ವಮ್–2

### (ಮೇ 1974)

1956ರಲ್ಲಿ ನಾನು ಸಕುಟುಂಬ ಬೆಂಗಳೂರಿಗೆ ಬಂದು ನೆಲೆಸಿದೆ. ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳ ದಿಗ್ದರ್ಶನದಲ್ಲಿ ನನ್ನ ಯೋಗ್ಯತೆಗನುಸರಿಸಿ ಪರಮಾರ್ಥಸಾಧನೆಗಳನ್ನೂ ಭಾಷ್ಯಾಭ್ಯಾಸದ ಮೂಲಕ ವೇದಾಂತಚಿಂತನೆಯನ್ನೂ ಮಾಡುತ್ತಿದ್ದೆ. ನನ್ನ ಸ್ವಂತ ಊರಾದ ಹೊಂಬಳ ಹಾಗೂ ಸುತ್ತಮುತ್ತಲಿನ ಧಾರವಾಡಜಿಲ್ಲೆಯ ಪ್ರದೇಶಗಳಲ್ಲಿ (ದಾವಣಗೆರೆಯವರೆಗೂ) ನನ್ನ ಬಗ್ಗೆ ಸಲ್ಲದ ಅಪಪ್ರಚಾರಗಳು ಹಬ್ಬಿದ್ದವು. ಉದಾಹರಣೆಗೆ–ಮೈಸೂರು ದೇಶದ ಸಾಮಾನ್ಯ ಪದ್ಧತಿಯಂತೆ ಭಸ್ಮದ ಜೊತೆಗೆ ಭ್ರೂಮಧ್ಯಕ್ಕೆ ಕುಂಕುಮ ಇಟ್ಟುಕೊಂಡಿದ್ದಕ್ಕೆ 'ದೇವೀ ಉಪಾಸಕನಾಗಿ ಮದ್ಯಾದಿಗಳನ್ನು ಕುಡಿಯುತ್ತಾನೆ' ಎಂದು ಕೆಲವರು. 'ಉಪಾಸನೆ ಮಾಡಿ ಏನೋ ಸಿದ್ಧಿ ಪಡೆಯಲು ಹವಣಿಸುತ್ತಾನೆ. ಶಾಸ್ತ್ರಜ್ಞಾನದ ವ್ಯಾಮೋಹಕ್ಕೆ ಬಿದ್ದಿದ್ದಾನೆ'– ಎಂದು ಕೆಲವರು. 'ಹಿಂದೆ ಇದ್ದ ಆಸ್ತಿ ಗೌರವ ಮುಂತಾದದ್ದನ್ನೆಲ್ಲವನ್ನೂ ಹಾಳು ಮಾಡಿಕೊಂಡಿದ್ದಾನೆ' ಎಂದು ಇನ್ನೂ ಏನೇನೋ ಪ್ರಕಾರದ ಸುದ್ದಿಗಳನ್ನು ಕೆಲವರು ಹಬ್ಬಿಸಿದ್ದರು. ಇದು ನನಗೆ ಗೊತ್ತಾಗಲು ತುಂಬ ವ್ಯಥೆಯಾಯಿತು. ಆದರೆ ಭಗವಂತನ ದಯದಿಂದ ನಾನು ಅದನ್ನು ಎದುರಿಸಿ ಪ್ರಚಾರ ಮಾಡಲು ಹೋಗಲಿಲ್ಲ, ಸುಮ್ಮನೆ ಒಳಗೇ ಕುದಿಯುತ್ತಿದ್ದೆ. ಆಗ 'ಭಗವಚ್ಚೈತನ್ಯರೆಂಬ ಮಹಾಸಾಧುಗಳು (ಶ್ರೀಶ್ರೀಗಳವರ ಪ್ರೀತಿಯ ಶಿಷ್ಯರಾದ ಶ್ರೀ|| ನಂಜಪ್ಪ ಭಾಗವತರು) ಬೆಂಗಳೂರಿನ ಮಲ್ಲೇಶ್ವರದಲ್ಲಿದ್ದರು. ನಾನು

ಅವರಲ್ಲಿಗೆ ಹೋಗಿ ಇದನ್ನೆಲ್ಲ ಹೇಳಿ 'ಸ್ವಾಮಿ, ಇದರಿಂದ ನನ್ನ ಮನಸ್ಸು ತಳಮಳಗೊಂಡು ಪರಮಾರ್ಥ ಸಾಧನೆಗೆ ವಿಘ್ನವಾಗಿದೆ, ಇದಕ್ಕೇನುಪಾಯ?' ಎಂದು ಪ್ರಶ್ನೆ ಮಾಡಿದೆ. ಅದಕ್ಕವರು 'ನೋಡಿ, ಅವರು ನಿಮ್ಮ ಬಗ್ಗೆ ಮಾಡಿರುವ ಅಥವಾ ಮಾಡುತ್ತಿರುವ ಅಪಪ್ರಚಾರಗಳನ್ನೆಲ್ಲ ಸಾವಧಾನದಿಂದ ಕೇಳಿರಿ: ಅದರಲ್ಲಿ ಸತ್ಯಾಂಶವಿದ್ದರೆ–ಓಹೋ, ಈ ದೋಷ ನನ್ನಲ್ಲಿದೆ, ನನಗೆ ಕಂಡಿದ್ದಿಲ್ಲ ಇವರು ತೋರಿಸಿಕೊಟ್ಟರು–ಎಂದು ಅದನ್ನು ತಿದ್ದಿಕೊಳ್ಳಲು ಪ್ರಯತ್ನಿಸಿರಿ. ಆ ಬಗ್ಗೆ ಭಗವಂತನನ್ನು ಮೊರೆಹೊಕ್ಕು ಬೇಡಿರಿ. ಒಂದು ವೇಳೆ ಅವು ಸುಳ್ಳಾಗಿದ್ದರೆ ಅವು ನಿಮಗೆ ಸಂಬಂಧಿಸಿದವುಗಳಲ್ಲವೇ ಅಲ್ಲ. ಏಕೆಂದರೆ ನೀವು ಹಾಗೆ ಮಾಡಿಯೇ ಇಲ್ಲವಾದ್ದರಿಂದ ಅವುಗಳ ಬಗ್ಗೆ ತುಟಿಪಿಟಕ್ಕೆನ್ನದೆ ಸುಮ್ಮನಿದ್ದುಬಿಡಿ. ಕಾಲಕ್ರಮದಲ್ಲಿ ಜನಗಳಿಗೆ ಅದು ತಿಳಿದುಹೋಗುತ್ತದೆ. ತಿಳಿಯದಿದ್ದರೂ ಆಯಿತು. ಒಟ್ಟಿನಲ್ಲಿ ಇದು ನನಗೆ ಸಂಬಂಧಿಸಿದ್ದಲ್ಲವೆಂದು ಸುಮ್ಮನಿರಿ'–ಎಂದು ಉಪದೇಶಿಸಿದರು. ಆಗ ಅವರ ಬೋಧೆಯಿಂದ ನನ್ನ ಮನಸ್ಸಿನ ದುಗುಡವೇ ಹೊರಟುಹೋಯಿತು. ಅಂದಿನಿಂದ ಇಂದಿನವರೆಗೂ ಎಷ್ಟೋ ಇಂಥವುಗಳು ನನ್ನ ದುರದೃಷ್ಟದಿಂದ ಬರುತ್ತಲೇ ಇವೆ. ಬಂದಾಗಲೆಲ್ಲ ಈ ಸಾಧುಗಳ ಉಪದೇಶವಾಕ್ಯಗಳು ನನ್ನ ಹೃದಯದಲ್ಲಿ ಮೂಡಿದ್ದರಿಂದ ಆ ಬಗ್ಗೆ ನಾನು ಉದ್ವಿಗ್ನನಾಗದೆ ಇರಲು ಸಾಧ್ಯವಾಗಿದೆ. 'ತುಲ್ಯನಿಂದಾಸ್ತುತಿಃ ಮೌನೀ' ಎಂದು ಗೀತೆ (12–19) ಯಲ್ಲಿ ಭಗವಂತನು ಪರಭಕ್ತರಾದ ಜ್ಞಾನಿಗಳ ಸಹಜಸ್ವಭಾವವನ್ನು ವರ್ಣಿಸಿದ್ದು ನನಗೆ ನೆನಪಾಯಿತು. ಅಂದಿನಿಂದ ನನ್ನ ಯೋಗ್ಯತೆಯಿದ್ದಷ್ಟು ಇದನ್ನು ಸಾಧಿಸುತ್ತಾ ಬಂದಿದ್ದೇನೆ. 'ನಿಂದಕರಿರಬೇಕೋ' ಎಂಬ ದಾಸರ ಪದವೂ ನನಗೆ ಸಹಾಯಮಾಡಿತು. ಅನೇಕ ಸಂತ ಮಹಾಸಂತರ ಸಾಧುಗಳ ಚರಿತ್ರೆಯ ಘಟನೆಗಳ ಆದರ್ಶವು ಮತ್ತೆಮತ್ತೆ ನನ್ನ ಮನಸ್ಸಿನಲ್ಲಿ ಹೊರಹೊಮ್ಮಲು ಈ ಸಾಧುವರ್ಯರ ಬೋಧವು ಕಾರಣವಾಯಿತು. ಜೀವನ ಪರ್ಯಂತವೂ ಎಂದಿಗೂ ಮರೆಯದಂತೆ ಅವರ ಉಪದೇಶವಾಕ್ಯಗಳು ನನ್ನ ಹೃದಯದಲ್ಲಿ ಪ್ರವೇಶ ಮಾಡಿರುತ್ತವೆ. ಇಂಥವರೇ ನಿಜವಾದ ಸಾಧುಗಳು. ಹೀಗೆ ನಮ್ಮಂಥ ಪಾಮರರಿಗೆ ಪರಿಣಾಮವನ್ನು ಬೀರಿ ಶಾಂತಿ ಸನ್ಮಾರ್ಗಗಳಿಗೆ ಹಚ್ಚುವ ವಚನಗಳೇ ನಿಜವಾದ ಬೋಧೆ. ವಾಚಕರೆ, ನೋಡಿದಿರಾ, ಸಾಧುಗಳ ಬೋಧೆಯ ಪರಿಣಾಮವನ್ನು? ಆದ್ದರಿಂದಲೇ ಆಚಾರ್ಯರು 'ಸತ್ಸಂಗತ್ವೇ ನಿಃಸಂಗತ್ವಮ್' ಎಂದಿದ್ದಾರೆ.

# 31. "ಯತ್ಕರೋಷಿ"

## (ಜೂನ್ 1974)

ಸಾವಿರದ ಒಂಭೈನೂರ ಅರವತ್ತುಮೂರನೇ ಇಸ್ವಿಯ ಮಾತು. ನನ್ನ ಕೊನೆಯ ಗಂಡು ಮಗ–ಇವನ ಹೆಸರು ದತ್ತಾತ್ರೇಯ–ಈತನು ಆಗ 3 ವರ್ಷದ ಹುಡುಗ. ಹುಟ್ಟಿದ ಇಪ್ಪತ್ತು ದಿನಗಳಿಂದಲೂ ವಾಂತಿಯ ರೋಗ ಆರಂಭವಾಗಿ ಒಂದೂವರೆ ವರ್ಷದವರೆಗೂ ಮಗುವಿಗೆ ಸ್ವಲ್ಪವೂ ಹಾಲೇ ಮುಂತಾದ ಯಾವ ಆಹಾರವೂ ದಕ್ಕದೆ ಭಯಂಕರವಾದ ಕಷ್ಟಕ್ಕೆ ತಂದೆತಾಯಿಗಳಾದ ನಾವಿಬ್ಬರೂ ಗುರಿಯಾಗಿದ್ದೆವು. ಕೊನೆಗೆ ಶ್ರೀಕ್ಷೇತ್ರಗಾಣಗಾಪುರಕ್ಕೆ ಹೋದಾಗ ಶ್ರೀ ದತ್ತಭಗವಂತನ ಅನುಗ್ರಹದಿಂದ ಮಗುವು ರೋಗಮುಕ್ತವಾಗಲು ಆರಂಭವಾಯಿತು. ಎರಡನೆಯ ವರ್ಷ (1962 ರಲ್ಲಿ)ದಲ್ಲಿ ಸಂಪೂರ್ಣ ಆರೋಗ್ಯವನ್ನು ಪಡೆದ ಇವನಿಗೆ ತುಂಬಾ ಪುಷ್ಟವಾದ ದೇಹವಿತ್ತು. ಆರು ತಿಂಗಳಲ್ಲಿಯೇ ಇಷ್ಟೊಂದು ಸುಧಾರಣೆಯಾಗಿತ್ತು. ಆದರೆ ಎರಡೂ ಕಾಲುಗಳಲ್ಲಿ ಮಳಕಾಲಿನ ಕೆಳಗಿರುವ ಎಲಬುಗಳು ದೇಹದ ಭಾರ ತಡೆಯಲಾರದೆ ಮಣಿದು ಬಿಟ್ಟಿದ್ದರಿಂದ ಮಗುವು ಓಡಾಡಲು ತೊಡಗಿದೊಡನೆಯೇ ಕಾಲ್ದೊಡಕಾಗಿ ಬಿದ್ದು ಬಿಡುತ್ತಿತ್ತು. ಇದಕ್ಕಾಗಿ ಎಲುಬಿನ ತಜ್ಞರಾದ ಡಾಕ್ಟರರಿಗೆ ತೋರಿಸಲು ಬಾಲ್ಯದಲ್ಲಿ ಹಾಲು ದಕ್ಕದಿದ್ದುದಕ್ಕೆ ಶರೀರದಲ್ಲಿ ಕ್ಯಾಲ್ಸಿಯಂ ಇಲ್ಲದಂತಾಗಿ ಎಲುಬುಗಳೆಲ್ಲವೂ ಬಲಹೀನವಾಗಿವೆ. ಈ ಎಲಬುಗಳಿಗೆ ದೇಹದ ಭಾರವನ್ನು ಹೊರುವ ಶಕ್ತಿಯಿಲ್ಲ. ಇದಕ್ಕಾಗಿ ಎರಡೂ ಕಾಲುಗಳನ್ನು ಒಂದು ವಿಶಿಷ್ಟ ಪದ್ಧತಿಯಿಂದ ನೀಯಬೇಕು (ಮಾಲೀಶ್ ಮಾಡಬೇಕು) ಹಾಗೂ ವಿಶೇಷ ಭಾರವಾದ ಬೂಟ್ಸ್ ಹಾಕುವದು, 'ಕ್ಯಾಲ್ಸಿನಿಯಂ ಔಷಧಿ, ಹಾಲುಹಣ್ಣುಗಳನ್ನು ಕೊಡುವದು ಮುಂತಾದ ಉಪಾಯಗಳನ್ನು ಆರು ತಿಂಗಳು ಮಾಡಬೇಕು' ಎಂದು ಸಲಹೆ ಕೊಟ್ಟರು.

ಮನೆಯಲ್ಲಿ ಮಕ್ಕಳೆಲ್ಲರೂ ಚಿಕ್ಕವರಾದ್ದರಿಂದ ನಾನೇ ಬೆಳಿಗ್ಗೆ 5 ರಿಂದ 6 ಹಾಗೂ ಸಾಯಂಕಾಲ 7 ರಿಂದ 8 ಈ ಎರಡೂ ಹೊತ್ತು ಆ ವೈದ್ಯರು ಹೇಳಿದ ಪದ್ಧತಿಯಂತೆ ಈ ಮಗುವಿನ ಕಾಲುಗಳನ್ನು ನೀಯುವ ಕೆಲಸ ಮಾಡಬೇಕಾಗಿ ಬಂದಿತು. ಆಗ ನಾನು ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳವರ ಆದೇಶದ ಮೇರೆಗೆ ನನ್ನ ಜೀವನ ಕ್ರಮ ಹಾಗೂ ಅಧ್ಯಾತ್ಮಸಾಧನೆಗಳನ್ನು ಇಟ್ಟುಕೊಳ್ಳಲು ಪ್ರಯತ್ನಿಸುವ ದಿಶೆಯಲ್ಲಿ ಬೆಳಿಗ್ಗೆ 5 ಗಂಟೆಗೆ ಸ್ನಾನವನ್ನು ಮಾಡಿ ಸಂಧ್ಯಾವಂದನೆ, ದೇವತಾರ್ಚನೆ ಜಪಾದಿಗಳಾಗಿ ತೀರ್ಥತಕ್ಕೊಂಡ ಬಳಿಕ ಹಾಲು ಕುಡಿದು 7 ಗಂಟೆಗೆ ಉಪನ್ಯಾಸಕ್ಕೆ ಹೋಗುತ್ತಿದ್ದೆ. ಇದು ನಿತ್ಯದ ಕ್ರಮವಾಗಿತ್ತು. ಆದರೆ ಆ ಹುಡುಗನ ಕಾಲುನೀಯುವ ಕೆಲಸದಿಂದ ಇದೆಲ್ಲವೂ

ನಿಂತುಬಿಡಬೇಕಾಯಿತು. ಬೆಳಿಗ್ಗೆ 5 ರಿಂದ 6 ರವರೆಗೆ ಕಾಲು ನೀಯುವ ಕೆಲಸವಾದ ಬಳಿಕ ಸ್ನಾನ ಸಂಧ್ಯಾವಂದನೆ ಮಾತ್ರ ಮಾಡಿಕೊಂಡು ಉಪನ್ಯಾಸಕ್ಕೆ ಓಡಬೇಕಾಗಿತ್ತು. ದೇವತಾರ್ಚನೆ ಮಾಡುವ ಅವಕಾಶವು ತಪ್ಪಿದ್ದಕ್ಕಾಗಿ ನನಗೆ ಬಹಳ ಕೋಪ ಬಂದಿತ್ತು. ಮೊದಲಿನ 4–5 ದಿನಗಳಂತೂ ಮನಸ್ಸಿನಲ್ಲಿ ಕೋಪಗೊಂಡೇ ಕಾಲುನೀಯುವ ಕೆಲಸ ಮಾಡುತ್ತಿದ್ದೆನಾದ್ದರಿಂದ ಆ ಮಗುವಿಗೆ ಹೆಚ್ಚು ನೋವಾಗುವದು, ನಾನು ಅವನನ್ನು ಗದರಿಸುವದು, ಒಂದೆರಡು ಸಲ ಹೊಡೆಯುವದು, ಅವನು ಅಳುವದು–ಹೀಗೆ ಬೆಳಗ್ಗೆದ್ದೊಡನೆಯೇ ದೊಡ್ಡದೊಂದು ರಂಪವೇ ಆರಂಭವಾಗುತ್ತಿತ್ತು. ಇದು ನನಗೆ ತೀವ್ರ ಅಸಮಾಧಾನವನ್ನು ತಂದಿತು. ''ಅಯ್ಯೋ, ಭಗವಂತನ ಅರ್ಚನೆಗೂ ಅವಕಾಶ ಸಿಕ್ಕದೆ ಹೋಯಿತಲ್ಲ! ಈ ಪೀಡೆ ಮಗು ಎಲ್ಲಿಂದ ಬಂದಿತೋ!'' ಎಂದು ನನಗೆ ಅಳುವು ಕೂಡ ಬಾರದಿರಲಿಲ್ಲ.

ಹೀಗೆ ನಾಲ್ಕು ದಿನಗಳಾದ ಬಳಿಕ ಒಂದು ದಿನ ಮಧ್ಯಾಹ್ನ ನಾನೇ ನನ್ನಲ್ಲಿ ವಿಚಾರಿಸತೊಡಗಿದ್ದೇನೆಂದರೆ: –ಬೆಳಗ್ಗೆ ಎದ್ದೊಡನೆಯೇ ಈ ರಂಪಕ್ಕೆ ಕಾರಣನಾದವನು ನನ್ನ ಈ ಮಗನು ಎಂದು ವ್ಯಾವಹಾರಿಕವಾಗಿ ಕಂಡರೂ ಇದರಲ್ಲಿ ನನ್ನದೇ ಏನೋ ಲೋಪ ಅಥವಾ ದೋಷವಿರಬೇಕು. ನಾನೇ ಎಲ್ಲೋ ತಪ್ಪುತ್ತಿರುವೆನಾದ್ದರಿಂದಲೇ ನನಗೆ ಈ ಅಸಮಾಧಾನವಾಗುತ್ತಿರಬೇಕು–'ಹೇ ದತ್ತಭಗವಂತಾ, ನಾನೆಲ್ಲಿ ತಪ್ಪುತ್ತಿದ್ದೇನೆ? ದಯವಿಟ್ಟು ತಿಳಿಸಿ ನನ್ನನ್ನು ಕಾಪಾಡು' ಎಂದು ಆ ದಿನ ಮಲಗುವವರೆಗೂ ಭಗವಂತನನ್ನು ಮನಸಾ ಪ್ರಾರ್ಥಿಸಿಕೊಂಡೆ.

'ಧಿಯೋ ಯೋ ನಃ ಪ್ರಚೋದಯಾತ್' ನಮ್ಮ ಬುದ್ಧಿಯನ್ನು ಪ್ರಚೋದನಗೊಳಿಸುವ–ಪ್ರೇರೇಪಿಸುವ–ನಮ್ಮ ಆತ್ಮನೇ ಭಗವಂತನಲ್ಲವೆ? ಹೀಗೆ ಮೊರೆಯಿಟ್ಟದ್ದೊಂದೇ ತಡ, ಮರುದಿನ ಬೆಳಗಿನ ಜಾವದಲ್ಲಿ 4–30ಕ್ಕೆ ಎಚ್ಚರಾದಾಗ ನನ್ನ ವಿಚಾರ ಸರಣಿಯೇ ಬದಲಾಯಿಸಿತ್ತು. ''ಈ ಹುಡುಗನನ್ನು ನನ್ನ ಮಗ ಎಂದೇಕೆ ಭಾವಿಸಬೇಕು? ಸರ್ವಭೂತಗಳ ರೂಪದಿಂದಲೂ ಭಗವಂತನೇ ತೋರಿಕೊಳ್ಳುವ ನೆಂದಲ್ಲವೆ, ಶಾಸ್ತ್ರಗಳು ಹೇಳುತ್ತವೆ? ಅದರಲ್ಲೂ ಈತನ ಹೆಸರು 'ದತ್ತಾತ್ರೇಯ' ನಾದ್ದರಿಂದ ಶ್ರೀ ದತ್ತನೇ ಈ ಮಗುವಿನ ರೂಪದಿಂದ ಇಲ್ಲಿ ಇದ್ದುಬಿಟ್ಟದ್ದಾನೆ. ದೇವತಾರ್ಚನೆಯಲ್ಲಿ ಶ್ರೀ ದತ್ತಾತ್ರೇಯನ ಶ್ರೀ ಕ್ಷೇತ್ರ ನರಸೋಬವಾಡಿಯ ಪಾದುಕೆಗಳನ್ನು ಅರ್ಚನೆ ಮಾಡುತ್ತಿದ್ದೆ. ಅದರ ಬದಲು ಸಾಕ್ಷಾತ್ ತನ್ನ ಸ್ವಂತಪಾದಗಳನ್ನೇ ಸೇವೆಗಾಗಿ ಕೊಡುತ್ತಿದ್ದಾನೆ. ಈ ಕಾರ್ಯವು ಮಗನ ಚಾಕರಿಯಲ್ಲ; ಭಗವಂತನ ಪಾದಸೇವೆ–ಎಂದೇಕೆ ಭಾವಿಸಬಾರದು?'' ಎಂಬ ಯೋಚನೆಯು ತಲೆಯಲ್ಲಿ ಹೊಳೆಯಿತು. ಕೂಡಲೆ

ಹುಡುಗನನ್ನು ಎಬ್ಬಿಸಿ ಶ್ರೀ ದತ್ತನನ್ನು ಸ್ಮರಿಸಿ ''ದಿಗಂಬರಾ ದಿಗಂಬರಾ ಶ್ರೀ ಪಾದವಲ್ಲಭ ದಿಗಂಬರಾ'' ಎಂದು ಶ್ರೀ ದತ್ತಭಜನೆ ಮಾಡುತ್ತಾ ಕಾಲುಗಳನ್ನು ನೀಯುವದಕ್ಕಾರಂಭಿಸಿದೆ. ಈಗ ನನಗೆ ಭಕ್ತಿಪ್ರೇಮಗಳು ಉಕ್ಕಿ ಬರುತ್ತಿದ್ದವು. ಇಷ್ಟೇ ಅಲ್ಲದೆ ವಿಚಿತ್ರವೆಂದರೆ ನೀಯುವಾಗ, ಕಾಲುಗಳನ್ನು ವೈದ್ಯರು ಹೇಳಿದಂತೆ ಎರಡು ನಿಮಿಷದವರೆಗೆ ವಿರುದ್ಧ ದಿಕ್ಕಿಗೆ ಬಿಗಿದು ಹಿಡಿಯುವಾಗ– ಆ ಹುಡುಗನು ಅಳುವದರ ಬದಲು ನಗುತ್ತಿದ್ದನಲ್ಲದೆ ನನ್ನೊಡನೆಯೇ ಅವನೂ ಭಜನೆ ಮಾಡುತ್ತಿದ್ದನು. ಅಂದಿನಿಂದ ದೇವತಾರ್ಚನೆಯಲ್ಲಿ ಪಡೆಯುವ ಆನಂದವನ್ನೇ ಈ ಕೆಲಸದಲ್ಲಿಯೂ ನಾನು ಪಡೆಯುತ್ತಿದ್ದೆ. ವಾಚಕರೇ, ಭಗವದ್ಗೀತೆಯಲ್ಲಿ(9–27ಯಲ್ಲಿ) 'ಯತ್ಕರೋಷಿ' ಎಂಬುದಕ್ಕೆ ಶ್ರೀ ಶಂಕರಾಚಾರ್ಯರು 'ಸ್ವತಃ ಪ್ರಾಪ್ತಂ' (ತಾನಾಗಿ ಬಂದೊದಗಿದ ಕರ್ಮವನ್ನು) ಎಂದು ಬರೆದುಬಿಟ್ಟಿದ್ದಾರೆ. ಈ ಸಂದರ್ಭದಲ್ಲಿ ಹೀಗೆ ತಾನಾಗಿಯೇ ಒದಗಿಬಂದ ಈ ಲೌಕಿಕ ಕರ್ಮವನ್ನೂ ಭಗವಂತನ ಸೇವೆ, ಭಗವದ್ಭಾವನೆ, ಭಗವದರ್ಚನ–ಬುದ್ಧಿಯಿಂದ ಮಾಡುವ ಪ್ರೇರಣೆಯನ್ನು ಶ್ರೀ ದತ್ತಭಗವಂತನು ನನಗೆ ಕರುಣಿಸಿ ಮನಸ್ಸಿನ ಅಸಮಾಧಾನಸ್ಥಿತಿಯನ್ನು ನಿವಾರಿಸಿದನೆಂದೇ ನಾನು ನಿಶ್ಚಯಿಸಿಕೊಂಡೆ. ಒಟ್ಟಿನಲ್ಲಿ ಯಾರು ಯಾವುದೇ ಕೆಲಸ ಮಾಡುತ್ತಿರಲಿ, ಅದರಲ್ಲಿ ಭಗವಂತನ ಸೇವೆ–ಎಂಬ ಭಾವನೆ, ಭಗವಂತನಿಗೆ ಅರ್ಪಿಸುವ ಬುದ್ಧಿ, 'ನಾನು ನನ್ನದು' ಹಾಗೂ 'ಈ ಕರ್ಮಕ್ಕೆ ಈ ಫಲ'–ಮುಂತಾದ ಸಂಗವಿಲ್ಲದಿರುವಿಕೆಗಳು ಸೇರಿದರೆ ಪ್ರತಿಯೊಂದು ಕರ್ಮವೂ ಯೋಗವಾಗುವದರಲ್ಲಿ ಸಂಶಯವೇ ಇಲ್ಲ.

## 32. ನಿಜಜೀವನ

### (ಜುಲೈ 1974)

ವೈಶಾಖ ಶುದ್ಧ ಪ್ರತಿಪದೆಯಿಂದ ಪೌರ್ಣಿಮೆಯವರೆಗೆ ತಮ್ಮ ಆಚಾರ ಪದ್ಧತಿ (ಸಂಪ್ರದಾಯ) ಯಂತೆ ಶ್ರೀಶಂಕರಾಚಾರ್ಯರ ಜಯಂತ್ಯುತ್ಸವವನ್ನು ಅನೇಕ ಕಡೆಗಳಲ್ಲಿ ಆಚರಿಸುತ್ತಿರುತ್ತಾರೆ. ನಾನೂ ಸಹ ಅಂಥ ಒಂದೆರಡು ಉತ್ಸವಗಳಲ್ಲಿ ಭಾಗವಹಿಸಿ ಬೆಂಗಳೂರಿಗೆ ಹಿಂದಿರುಗಿದ್ದೆ. ಒಂದು ದಿನ ಮಧ್ಯಾಹ್ನದ ಶೆಕೆ ಬಹಳವಿತ್ತು, ಊಟ ಮಾಡಿ ವಿಶ್ರಾಂತಿಗಾಗಿ (ವಾಮಕುಕ್ಷಿಯಾಗಿ) ಮನೆಯಲ್ಲಿಯೇ ಸ್ವಲ್ಪ ಗಾಳಿ ಹೆಚ್ಚಾಗಿ ಬರುವ ಸ್ಥಳದಲ್ಲಿ ಮಲಗಿದ್ದೆ. ಯಾವದೋ ಒಂದು ಪುಸ್ತಕದಲ್ಲಿ ಬರೆದಿದ್ದ ಶ್ರೀಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯದಲ್ಲಿಯ ಕೆಲವು ವಾಕ್ಯಗಳನ್ನು ಓದುತ್ತಿರುವಂತೆಯೇ ನಿದ್ರೆ ಹತ್ತಿಬಿಟ್ಟಿತು.

ಸ್ವಲ್ಪ ಸಮಯದ ಬಳಿಕ ಒಂದು ಕಡೆಗೆ ಶ್ರೀಶಂಕರಜಯಂತ್ಯುತ್ಸವದ ಕಮಿಟಿಯ ಜನಗಳು ಒಂದೆಡೆ ಸೇರಿದ್ದು ಜರುಗಬೇಕಾಗಿರುವ ಉತ್ಸವಕಾರ್ಯಗಳನ್ನು ನಿಶ್ಚಿತಗೊಳಿಸುವ ಬಗ್ಗೆ ಒಳ್ಳೆ ಆಸ್ಥೆಯಿಂದ ಚರ್ಚಿಸುತ್ತಿದ್ದರು. ನಾನೂ ಒಂದು ಕಡೆ ಸುಮ್ಮನೆ ಎಲ್ಲವನ್ನೂ ನೋಡುತ್ತಾ ಕುಳಿತಿದ್ದೆ. ಪ್ರತಿನಿತ್ಯವೂ ದೇವರಿಗೆ ನಡೆಯುವ ಅಭಿಷೇಕ, ದಿಗ್ವಿಜಯಪುರಾಣ, ಸಾಯಂಕಾಲದ ಭಾರತವಾಚನ, ಉಪನ್ಯಾಸಕ್ಕಾಗಿ ಕರೆಸಬೇಕಾದ ಜನಗಳ ಪಟ್ಟಿ, ರಾತ್ರಿ ನಡೆಯಬೇಕಾದ ಹರಿಕಥೆ, ಇತ್ಯಾದಿಗಳೇ ಅಲ್ಲದೆ ಬ್ರಾಹ್ಮಣ ಸುವಾಸನಿಯರ ಭೋಜನಸಮಾರಂಭಾದಿಗಳೆಲ್ಲದರ ಬಗ್ಗೆಯೂ ನಿರ್ಣಯಗಳಾದ ಮೇಲೆ ಆ ಸಭೆಯಲ್ಲಿ ಒಬ್ಬರು 'ಭಾಷ್ಯ ಪ್ರವಚನಕ್ಕೆ ಏನು ಏರ್ಪಾಡು ಮಾಡಬೇಕು'? ಎಂದರು. ಇನ್ನೊಬ್ಬರು "ಮಾಮೂಲಿನಂತೆ ಒಬ್ಬ ಪಂಡಿತರನ್ನು ಕರೆಸಿ ಹೇಳಿಸಿದರಾಯಿತು" ಎಂದರು. ಆಗ ಹೊಸ ಪೀಳಿಗೆಯವರಾದ ತರುಣರೊಬ್ಬರು "ಅಭಿಷೇಕ, ಪುರಾಣ, ಭಾರತವಾಚನ, ಹರಿಕಥಾದಿಕಾರ್ಯಕ್ರಮಗಳು ಜನಗಳಲ್ಲಿ ಭಕ್ತಿಶ್ರದ್ಧೆಯನ್ನು ಹುಟ್ಟಿಸಲು ಹಾಗೂ ಮನರಂಜನೆಯನ್ನೊದಗಿಸುವ ಮೂಲಕ ಜೀವನಕ್ಕೆ ಆಹ್ಲಾದವನ್ನು ಕೊಡುವ ಕಾರ್ಯಕ್ರಮಗಳಾಗಿವೆ. ಆದರೆ ಪಂಡಿತರೊಬ್ಬರು ಬಹಳ ದೂರದಿಂದ ಬಂದು ನಾವು ಕೊಟ್ಟ ಅಲ್ಪ ಸಮಯದಲ್ಲಿ ಏನೇನೋ ವಿಷಯಗಳನ್ನು ಭಾಷ್ಯಪಂಕ್ತಿಗಳನ್ನುದಾಹರಿಸುವದರ ಮೂಲಕ ಹೇಳಿ ಹೊರಟುಹೋಗುವ ಈ ಕಾರ್ಯಕ್ರಮದಿಂದ ಸಾಮಾನ್ಯ ಜನತೆಗೆ ಹಾಗೂ ನಮ್ಮ ನಿತ್ಯ ಜೀವನದ ಸಮಸ್ಯೆಗಳಿಗೆ ಏನು ಸಹಾಯಕವಾಗಿದೆ? ಇದಕ್ಕೆ ಉತ್ಸವಕಮಿಟಿಯಿಂದ ಹಣವೂ ಬಹಳ ವೆಚ್ಚವಾಗುತ್ತದಾದ್ದರಿಂದ ಇದೊಂದು ಕಾರ್ಯಕ್ರಮವನ್ನು ತೆಗೆದು ಹಾಕಿಬಿಡ ಬಾರದೇಕೆ?" ಎಂದು ಆಕ್ಷೇಪಿಸಿದರು.

ಆಗ ಸಭಿಕರಲ್ಲಿ ಒಂದು ಬಗೆಯ ಕಳವಳವೇ ಉಂಟಾಗಿ ಅನೇಕರು ಅನೇಕ ಬಗೆಯಲ್ಲಿ ಈ ವಾದದ ಪರ–ಹಾಗೂ ವಿರೋಧವಾಗಿ ವಾದಿಸತೊಡಗಿದ್ದರಿಂದ ದೊಡ್ಡ ಗೊಂದಲವೇ ಏಳುವ ಸ್ಥಿತಿಗೆ ಬಂದಿತು. ಆಗ ವಯೋವೃದ್ಧರಾದ ಶಾಸ್ತ್ರಿಗಳೊಬ್ಬರು ಎದ್ದುನಿಂತು "ಎಲ್ಲರೂ ಸ್ವಲ್ಪ ಶಾಂತವಾಗಿರಿ. ನನ್ನ ಮಾತಿನ ಕಡೆಗೆ ಸ್ವಲ್ಪ ಗಮನ ಕೊಡಿರಿ" ಎಂದು ಕೂಗಿದರು. ಆಗ ಸಭೆಯೆಲ್ಲವೂ ಶಾಂತವಾಗಿ ಸಕಲರೂ ಅವರನ್ನೇ ಲಕ್ಷ್ಯಗೊಟ್ಟು ನೋಡತೊಡಗಿದರು. ಆಗ ಆ ವೃದ್ಧರು "ಅಯ್ಯಾ, ಶ್ರೀಶಂಕರಾಚಾರ್ಯರು ನಮಗೆ ಜೀವಂತರಾಗಿ ದರ್ಶನಕೊಡುತ್ತಿರುವದು ಈ ಪ್ರಸ್ಥಾನತ್ರಯಭಾಷ್ಯದ ಮೂಲಕವೇ ಹೊರತು ಇನ್ನೇತರಿಂದಲೂ ಅಲ್ಲ. ಶ್ರೀಶಂಕರರ ಭಾಷ್ಯದಲ್ಲಿ ಅತಿ ಮುಖ್ಯವಾದ ಸೂತ್ರಭಾಷ್ಯದ ತಮ್ಮ ಅವತರಣಿಕೆಯಲ್ಲಿ ಅವರು ಸಕಲರೂ ಸಹಜವಾಗಿ ತಿಳಿದುಕೊಂಡಿರುವ 'ನಾನು, ನನ್ನದು' ಎಂಬ ಎರಡು ಮುಖ್ಯ ವಿಷಯಗಳನ್ನು ಕುರಿತು

ಇವುಗಳ ನಿಜವೇನು?—ಎಂಬುದನ್ನೇ ವಿಚಾರಿಸಿದ್ದಾರೆ. ನಾವೆಲ್ಲರೂ ಜೀವನ ಎಂದರೆ ನಾನು ಇಂಥಿಂಥವನು ಎಂದಿಟ್ಟುಕೊಂಡು ನಾನು ಸುಖಪಡಬೇಕೆಂಬ ಭಾವನೆಯಿಂದ ಹೊಡೆದಾಡುತ್ತಿರುವದೇ ಜೀವನ ಎಂದು ಹೊರಟಿರುವದನ್ನು ತೋರಿಸಿ ಈ ಜೀವನಕ್ಕೆ ಹಿಂತಡಿಕೆಯಾಗಿ ಇರುವ ನಮ್ಮ ನಿಜಜೀವನವನ್ನು ತಿಳಿಸಿ ಅದರ ಅನುಭವವನ್ನು ಈಗಲೆ ತಂದುಕೊಟ್ಟು ನಮಗೀಗ ಆಗಿರುವ ಅನರ್ಥವನ್ನು ಕಳೆಯುವದಕ್ಕಾಗಿಯೇ ವೇದಾಂತಶಾಸ್ತ್ರವು ಹೊರಟಿದೆ—ಎಂಬೀ ಸಂಗತಿಯನ್ನೇ ತಿಳಿಸಿರುತ್ತಾರೆ. ಇದಲ್ಲದೆ ಇಂಥ ನಿಜಜೀವನದಲ್ಲಿ ನೆಲೆನಿಲ್ಲುವಿಕೆಯನ್ನು ಪಡೆಯಲು ಮಾಡಬೇಕಾದ ಸಾಧನ ವಿಶೇಷಗಳನ್ನೂ ಸಹ ನಮ್ಮೆಲ್ಲರ ಜನಸಾಮಾನ್ಯರ ಕೈಗೆ ಎಟುಕುವ ರೀತಿಯಲ್ಲಿ ಅಲ್ಲಲ್ಲಿ ತೋರಿಸಿಕೊಟ್ಟಿದ್ದಾರೆ. ಈಗ ನೀವು ಆಚರಿಸುವ ಶ್ರದ್ಧಾಭಕ್ತಿಯುತಗಳಾಗಿರುವ ಇತರ ಕಾರ್ಯಕ್ರಮಗಳಿಗೆಲ್ಲಕ್ಕೂ ಆಧಾರವನ್ನೊದಗಿಸಿಕೊಟ್ಟಿರುವದನ್ನು ನಾವು ಆ ಮಹಾಮಹಿಮರಿಂದ ರಚಿತವಾದ ಭಾಷ್ಯಗಳಲ್ಲಿಯೇ ಕಾಣಬಹುದಾಗಿದೆ. ಹೀಗೆ ನಿಜಜೀವನವನ್ನು ತಿಳಿಸಿಕೊಟ್ಟು ಈಗಿನ ಜೀವನವನ್ನು ಪಾವನಗೊಳಿಸಿರುವ ಶ್ರೀ ಶಂಕರರ ಭಾಷ್ಯಗಳ ಪ್ರವಚನವು ಜೀವನಕ್ಕೆ ಸಂಬಂಧಪಡದ ಕೇವಲ ವಿದ್ವತ್ಪ್ರದರ್ಶನದ ಸಾಮಾನ್ಯರಿಗೆ ಉಪಯೋಗವಿಲ್ಲದ ಕಾರ್ಯಕ್ರಮವೆಂದು ಆಕ್ಷೇಪಿಸಬಾರದು. ಭಾಷ್ಯದ ಅಧ್ಯಯನ ಮನನಗಳು ನಮ್ಮಿಂದ ದೂರವಾದದ್ದೇ ಈ ರೀತಿಯ ತಪ್ಪುಗ್ರಹಿಕೆಗೆ ಕಾರಣವಾಗಿರುತ್ತದೆ. ಭಾಷ್ಯಾಭಿಪ್ರಾಯಗಳು ಸಾಧನೆಗಳನ್ನೂ ಸಿದ್ಧಾಂತದ ರಹಸ್ಯವನ್ನೂ ಜೀವನಕ್ಕಿಳಿಸಿಕೊಡುವದರಿಂದ ಅವನ್ನು ನೀವು ಶ್ರವಣ ಮಾಡಿದರೆ ನಾನು ಹೇಳುವ ಮಾತಿನ ಸತ್ಯತೆಯು ತಿಳಿದೀತು. ಭಾಷ್ಯವು ನಿಜಜೀವನವನ್ನು ತೋರಿಸಿಕೊಡುವ ಪರಮಾರ್ಥಚಿಂತಾಮಣಿಯಾಗಿದೆ'' ಎಂದು ಮುಂತಾಗಿ ಹೇಳತೊಡಗಿದರು. ''ಹಾಗಾದರೆ ತಾವೇ ಈ ಸಲ ಭಾಷ್ಯಪ್ರವಚನ ಮಾಡಿ ನಮ್ಮ ಜೀವನಕ್ಕೆ ಅದು ಹೇಗೆ ಸಹಾಯಕವಾಗಿರುವದೆಂಬುದನ್ನು ತೋರಿಸಿಕೊಡಿರಿ'' ಎಂದು ಹಿಂದೆ ಆಕ್ಷೇಪಿಸಿದ ತರುಣರು ಶಾಸ್ತ್ರಿಗಳಿಗೆ ಮರುಸವಾಲು ಹಾಕಿದರು. ಅದಕ್ಕೆ ಶಾಸ್ತ್ರಿಗಳು ''ಆಗಲಿ, ನನಗೆ ತಿಳಿದ ಮಟ್ಟಿಗೆ ಭಾಷ್ಯಾಭಿಪ್ರಾಯಗಳನ್ನು ನಿರೂಪಿಸಲು ಈ ಸಲ ಆರಂಭಿಸುತ್ತೇನೆ. ಆದರೆ ನಾನೂ ನೀವೂ ಮುಖ್ಯವಾಗಿ ಮಾಡಬೇಕಾದ ಕಾರ್ಯ ಒಂದಿದೆ. ಅದೇನೆಂದರೆ: ಸಾಕ್ಷಾತ್ ಪರಮೇಶ್ವರ ಸ್ವರೂಪರಾಗಿರುವ ಶ್ರೀಶಂಕರಭಗವತ್ಪಾದರನ್ನು ಸ್ಮರಿಸಿಕೊಂಡು ತಮ್ಮ ಭಾಷ್ಯಗಳ ಮರ್ಮವನ್ನರಿತು ನಿಜಜೀವನದ ಅನುಭವವನ್ನು ಪಡೆಯುವಂತೆ ನಮ್ಮೆಲ್ಲರನ್ನೂ ಅನುಗ್ರಹಿಸಿರಿ. 'ನಾವು ನಿಮಗೆ ಹೃತ್ಪೂರ್ವಕ ಶರಣು ಬಂದಿದ್ದೇವೆ' ಎಂದು ಮನಸಾರೆ ಪ್ರಾರ್ಥಿಸಿ ಈ ಸಲದ ಉತ್ಸವವನ್ನಾರಂಭಿಸಿರಿ. ಎಲ್ಲಿ? ಎಲ್ಲರೂ ಏಕಕಂಠದಿಂದ ಜಯಜಯಕಾರ ಮಾಡಿರಿ, ನೋಡೋಣ. 'ಶ್ರೀಮದಾದ್ಯ

ಶಂಕರಾಚಾರ್ಯಸ್ವಾಮಿ ಮಹಾರಾಜ ಕೀ ಜೈ!'' ಎಂದು ಆ ವೃದ್ಧರು ಕೂಗಿದ ಕೂಡಲೇ ಸಕಲರೂ ಉಚ್ಚಸ್ವರದಿಂದ ಜಯಘೋಷಮಾಡಿದರು. ನನಗಂತೂ ಜಯಘೋಷದೊಂದಿಗೆ ಕಂಠವು ಗದ್ಗದಿತವಾಗಿ ರೋಮಾಂಚನವೂ ಆನಂದಬಾಷ್ಪಗಳೂ ಬಂದಂತಾಗಿ ಆನಂದತುಂದಿಲನಾಗಿದ್ದಾಗಲೇ ಧಿಡೀರೆಂದು ಎಚ್ಚರವಾಯಿತು. ವಾಚಕರೆ, ಇಂಥ ಒಂದು ಉತ್ತಮ ಕನಸಾದರೂ ಆಗುವಷ್ಟು ಆಚಾರ್ಯರು ನನ್ನ ಮೇಲೆ ಅನುಗ್ರಹಿಸಿದರಲ್ಲವೆ? ಕನಸಿನಲ್ಲಿದ್ದಾಗ ಅದೇ ನಿಜ ಜೀವನವಾಗಿತ್ತು ಆದರೆ ಆಚಾರ್ಯರು ಭಾಷ್ಯದಲ್ಲಿ ಹೇಳಿರುವ 'ಅದ್ವಿತೀಯಾತ್ಮಾನುಭವ' ವೆಂಬ ನಿಜ ಜೀವನದಲ್ಲಿ ನೆಲೆನಿಲ್ಲುವವರೆಗೆ ತೋರಿಹಾರುವದನ್ನೇ ತತ್ಕಾಲಕ್ಕೆ ನಿಜಜೀವನವೆಂದುಕೊಳ್ಳುತ್ತಿರುವದೇ ನಮ್ಮಂಥ ಅಜ್ಞರಿಗೆ ಸಹಜವಾಗಿರುವದಲ್ಲವೆ?

## 33. 'ಯತ್ಕರೋಷಿ'

### (ಆಗಸ್ಟ್ 1974)

ಗೋಂದಾವಳಿಕ್ಷೇತ್ರದಲ್ಲಿ ವಾಸವಾಗಿದ್ದ ಶ್ರೀಬ್ರಹ್ಮಚೈತನ್ಯಮಹಾರಾಜರು ಇರುವಾಗ ಒಂದು ದಿನ ಸಾಂಸಾರಿಕರಾದ ಭಕ್ತಜನರು ಒಂದು ಪ್ರಶ್ನೆಯನ್ನು ಶ್ರೀ ಮಹಾರಾಜರಿಗೆ ಕೇಳಿದರಂತೆ. ''ನಾವು ಸಂಸಾರಿಕರು, ನಮಗೆ ಹೆಂಡತಿ ಮಕ್ಕಳು ಹೊಲಮನೆ ದನಗಳು–ಮುಂತಾಗಿ ಅನೇಕ ಉಪಾಧಿಗಳಿವೆ. ತಾವು ಹೇಳುವಂತೆ ಶ್ರೀರಾಮನಾಮ ಸ್ಮರಣೆಯನ್ನು ಸತತವಾಗಿ ಮಾಡುವದಾಗಲಿ ಶ್ರೀರಾಮನನ್ನು ಏಕಾಗ್ರತೆಯಿಂದ ಧ್ಯಾನಿಸುವುದಾಗಲಿ ಕೊನೆಗೆ ಸ್ವಲ್ಪ ಕಾಲ ಒಂದೇ ಚಿತ್ತದಿಂದ ಜಪ ಮಾಡುವದಾಗಲಿ ಸಹ ಸಾಧ್ಯವಿಲ್ಲದಾಗಿರುತ್ತದೆ. ಇಂಥ ಸ್ಥಿತಿಯಲ್ಲಿ ನಾವು ಭಗವಂತನ ಸಾಕ್ಷಾತ್ಕಾರವನ್ನು ಪಡೆಯುವದು ಹೇಗೆ? ನಮ್ಮಂಥವರಿಗೆ ಪರಮಾರ್ಥಪ್ರಾಪ್ತಿಗೆ ಮಾರ್ಗವಾವುದು? ದಯವಿಟ್ಟು ತಿಳಿಸೋಣವಾಗಲಿ'' ಇದೇ ಅವರ ಪ್ರಶ್ನೆ.

ಅದಕ್ಕೆ ಶ್ರೀಮಹಾರಾಜರು ಉತ್ತರ ಹೇಳಿದ್ದೇನೆಂದರೆ: ''ನೀವು ಹೆಂಡತಿ ಮಕ್ಕಳನ್ನು ಕಂಡಾಗ ಶ್ರೀ ರಾಮನು ಈ ಹೆಂಡತಿ ಮಕ್ಕಳನ್ನು ನನಗೆ ಪಾಲನೆ ಮಾಡುವದಕ್ಕಾಗಿ ಕೊಟ್ಟಿದ್ದಾನೆ. ನಾನು ಅವರ ಬಗ್ಗೆ ಏನೇನು ಮಾಡಬೇಕಾದ ಕರ್ತವ್ಯವಿದೆಯೋ ಅದನ್ನೆಲ್ಲವನ್ನೂ ಮಾಡಿ ಶ್ರೀರಾಮನಿಗೆ ಒಪ್ಪಿಸಬೇಕು. 'ಈ ಬಗ್ಗೆ ಏನು ಮಾಡಿದಿರಿ?' ಎಂದು ಪರಮಾತ್ಮನು ಕೇಳುತ್ತಾನೆ. ನಾನವನಿಗೆ ಉತ್ತರ ಹೇಳಬೇಕು–ಎಂಬುದನ್ನು ಮತ್ತೆ

ಮತ್ತೆಮನಸ್ಸಿಗೆ ತಂದುಕೊಳ್ಳಿರಿ. ಹೀಗೆಯೇ ಮನೆಹೊಲದನಗಳೇ-ಮುಂತಾದ ಎಲ್ಲದರ ಬಗ್ಗೆಯೂ ನಾನು ಶ್ರೀರಾಮನಿಗೆ ಉತ್ತರ ಹೇಳಬೇಕು-ಎಂದು ಮತ್ತೆಮತ್ತೆ ನೆನಪಿಟ್ಟುಕೊಳ್ಳಿರಿ. ಇದರಿಂದ ನಿಮಗೆ ನಿಮ್ಮ ಸಂಸಾರದ ಯಾವುದೇ ವಸ್ತುವನ್ನು ನೋಡಿದಾಗ 'ಇದು ಶ್ರೀರಾಮನದು, ನನಗೆ ಅವನು ಇದನ್ನು ನೋಡಿಕೊಳ್ಳಲು ಕೊಟ್ಟಿದ್ದಾನೆ. ನಾನು ನನ್ನ ಕರ್ತವ್ಯವನ್ನು ಆ ಬಗ್ಗೆ ಮಾಡಿ ಅವನಿಗೆ ಒಪ್ಪಿಸಬೇಕು' ಎಂಬ ಭಾವವು ಹುಟ್ಟುವದು. ಕೆಲವು ದಿನ ಪ್ರಯತ್ನಪೂರ್ವಕವಾಗಿ ಈ ಭಾವನೆಯನ್ನು ರೂಢಿಸಿಕೊಂಡರೆ ಕಾಲಾಂತರದಲ್ಲಿ ಅದು ರೂಢಿಯಾಗಿಬಿಟ್ಟು ಮುಂದೆ ಸಹಜವಾಗಿಯೇ ಆ ಭಾವನೆಯು ನಿಮ್ಮ ಅಂತಃಕರಣದಲ್ಲಿ ಹುಟ್ಟತೊಡಗುವದು. ಇದರಿಂದ ಮುಂದೆ 'ನನ್ನದು' ಎಂಬ ಅಭಿಮಾನವು ಹೊರಟು ಹೋಗಿ ಒಳಗೂ ಹೊರಗೂ ರಾಮಭಾವನೆಯು ವ್ಯಾಪಿಸಿಬಿಡುವದು. ಈ ಸಾಧನೆಯನ್ನು ಬಿಡದೆ ಆರು ತಿಂಗಳ ಕಾಲ ಮಾಡಿ ನೋಡಿರಿ. ಶ್ರೀರಾಮನ ಸಾಕ್ಷಾತ್ಕಾರವಾಗದಿದ್ದರೆ ಆಗ ನನ್ನಲ್ಲಿ ಬಂದು ಕೇಳಿರಿ'' ಎಂದರಂತೆ.

ಈ ಸಂಗತಿಯನ್ನು ಶ್ರೀ ಬ್ರಹ್ಮಚೈತನ್ಯರನ್ನು ನೇರಾಗಿ ಕಂಡಿರುವ ಸತ್ಪುರುಷರೊಬ್ಬರು ನನಗೆ ಹೇಳಿದರು. ಈ ಮಹಾತ್ಮರ ಉಪದೇಶವನ್ನು ನಾವು ಮನಮುಟ್ಟಿ ವಿಚಾರಿಸಿದರೆ ಭಗವದ್ಗೀತೆಯಲ್ಲಿ ಭಗವಂತನು ''ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ'' (ಗೀ. 18-46) ಎಂದೂ **''ಸರ್ವಕರ್ಮಾಣ್ಯಪಿ ಸದಾ ಕುರ್ವಾಣೋ ಮದ್ವ್ಯಪಾಶ್ರಯಃ। ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಮ್''** (ಗೀ. 18-56) ಎಂದು ಹೇಳಿದ ಉಪದೇಶವೇ ಈ ಮಹಾತ್ಮರ ಅನುಭವವಾಣಿಯಿಂದ ಹೊರಬಿದ್ದಿದೆ ಎಂದು ಗೊತ್ತಾಗುತ್ತದೆ. ಸ್ವಾಭಾವಿಕವಾಗಿ ನಮ್ಮ ತಲೆಯಲ್ಲಿ ಹೆಂಡತಿ, ಮಕ್ಕಳು, ಹಣ, ಹೊಲಮನೆ, ಅಧಿಕಾರ, ಕೀರ್ತಿ, ಸಂಪತ್ತು ಧನ, ವಿದ್ಯೆ, ಸ್ನೇಹಿತರು, ಆಪ್ತೇಷ್ಟರು-ಮುಂತಾದವರ ಬಗೆಗಿನ ವಿಚಾರಗಳು ಒಂದು ತಪ್ಪಿದರೆ ಇನ್ನೊಂದು ಯಾವಾಗಲೂ ಸುತ್ತಾಡುತ್ತಲೇ ಇರುತ್ತವೆ. ಇದನ್ನೇ ವಿಷಯಚಿಂತನೆ ಎನ್ನುತ್ತಾರೆ. ಈ ವಿಷಯಚಿಂತನೆಯಿಂದ ಕಾಮವೂ ಕಾಮದಿಂದ ಕರ್ಮವೂ ಕರ್ಮದಿಂದ ವಿಷಯಚಿಂತನೆಯೂ ಒಂದು ವಿಷಚಕ್ರದ ರೀತಿಯಲ್ಲಿ ತಿರುಗುತ್ತಾ ನಮ್ಮಂಥ ಸಾಮಾನ್ಯರ ಅಂತಃಕರಣವನ್ನು ಹಿಡಿದುಕೊಂಡು ಬಿಟ್ಟಿರುತ್ತದೆ. ಈ ವಿಷಚಕ್ರದಿಂದ ಪಾರಾಗಬೇಕಾದರೆ ನಮ್ಮಲ್ಲಿರುವ 'ನಾನು, ನನ್ನದು' ಎಂಬ ಅಭಿನಿವೇಶವು ತೊಲಗಬೇಕು. ಈ ಅಭಿನಿವೇಶವು ತೊಲಗಬೇಕಾಗಿದ್ದರೆ ಭಗವಂತನಿಂದಲೇ ಸರ್ವವಿಶ್ವದ ಪ್ರವೃತ್ತಿಯೂ ನಡೆದಿರುತ್ತದೆ-ಎಂಬ ಜ್ಞಾನಿಗಳ ಅನುಭವದ ನುಡಿಯಲ್ಲಿ ವಿಶ್ವಾಸವಿಟ್ಟು ಭಗವದ್ಭಾವನೆಯನ್ನು ಮನಸ್ಸಿನಲ್ಲಿ ತಂದು 'ಭಗವಂತ, ಇದೆಲ್ಲ ನಿನ್ನದು, ನಾನು ನಿನ್ನ

ಸೇವಕನಾಗಿ ನನಗೆ ಕೊಟ್ಟ ಕರ್ತವ್ಯವನ್ನು ನೆರವೇರಿಸಿ ನಿನಗೆ ಅರ್ಪಿಸುವೆನು' ಎಂದು ಭಾವಿಸುವದರಿಂದ ವಿಷಯಚಿಂತನೆಯು ಹೊರಟು ಹೋಗಿ ಭಗವಂತನ ಚಿಂತನೆಯು ನಮ್ಮ ಅಂತಃಕರಣದಲ್ಲಿ ಪ್ರವೇಶವಾಗುತ್ತದೆ. ಈ ಭಗವಚ್ಚಿಂತನೆ ಬಲಿತಂತೆ ವಿಷಯಚಿಂತನೆ ಕಡಿಮೆಯಾಗುತ್ತದೆ. ಹೀಗೆ ಭಗವಂತನ ಚಿಂತನೆಯು ಮನಸ್ಸಿನಲ್ಲಿ ಬೇರೂರಲು ಮಾಡುವ ಕೆಲಸಗಳನ್ನೆಲ್ಲವನ್ನೂ ಪರಮಾತ್ಮನಿಗೆ ಅರ್ಪಿಸುವದು ಹಾಗೂ ನಮ್ಮದಾಗಿರುವ ಎಲ್ಲವನ್ನೂ 'ಭಗವಂತಾ ಇದು ನಿನ್ನದು, ನೀನು ಕೊಟ್ಟದ್ದು' ಎಂದು ಭಾವಿಸುವದು–ಸಂಸಾರದಲ್ಲಿರುವ ಸಾಮಾನ್ಯರಿಗೆ ಅತ್ಯುತ್ತಮವಾದ ಸಾಧನೆಗಳಾಗಿವೆ. ಶ್ರೀಶಂಕರಾಚಾರ್ಯರು ಗೀತೆಯಲ್ಲಿ ಮೂರನೆಯ ಅಧ್ಯಾಯ ಮೂವತ್ತನೆಯ ಶ್ಲೋಕದಲ್ಲಿ''–ಈಶ್ವರನ ದಾಸನು ನಾನು. ಸೇವಕನು ಸ್ವಾಮಿಗಾಗಿ ಹೇಗೆ ಕರ್ಮಗಳನ್ನು ಮಾಡಿ ಒಪ್ಪಿಸುವನೋ ಹಾಗೆಯೇ ನಾನು ನನ್ನ ಕರ್ತವ್ಯಗಳನ್ನು ಮಾಡಿ ನಿನಗೆ ಒಪ್ಪಿಸುವೆನು–ಎಂದು ವಿವೇಕಬುದ್ಧಿಯಿಂದ ಕರ್ಮಯೋಗವನ್ನು ಮಾಡಬೇಕು'' ಎಂಬರ್ಥದ ವಾಕ್ಯವನ್ನು ಬರೆದಿದ್ದಾರೆ. ನಾವೆಲ್ಲರೂ ಇಂದಿನಿಂದಲೇ ಈ ಅತ್ಯಂತ ಸುಲಭವಾದ ಸರ್ವಕರ್ಮಗಳನ್ನೂ ಎಂದರೆ ನಾವು ಮಾಡುವದನ್ನೆಲ್ಲವನ್ನೂ ಭಗವಂತನಿಗೆ ಅರ್ಪಿಸುವ ನಿರ್ಧಾರ ಮಾಡಿ ದೊಡ್ಡವರ ಉಪದೇಶವನ್ನು ಆಚರಣೆಯಲ್ಲಿ ತರೋಣ.

## 34. ಮನೋವಿಜ್ಞಾನದ ಮಹಿಮೆ

### (ಸೆಪ್ಟೆಂಬರ್ 1974)

ಮನಶ್ಶಾಸ್ತ್ರಪ್ರಾಧ್ಯಾಪಕರಾದ ಮನೋಹರರಾಯರಿಗೆ ಭಾರತಶಿಕ್ಷಣಶಾಖೆಯವರಿಂದ ಒಂದು ದಿನ ಒಂದು ಪತ್ರವು ಬಂದಿತು. ಅದರಲ್ಲಿ ಮನುಷ್ಯನಿಗಾಗುವ ಅವಸ್ಥೆಗಳು ಎಷ್ಟು? ಅವುಗಳ ಪರಿಣಾಮಗಳೇನು? ಮುಂತಾದ ವಿಷಯಗಳನ್ನು ಪರಿಶೀಲಿಸಿ ಒಂದು ಮಹಾಪ್ರಬಂಧವನ್ನು ಬರೆಯಬೇಕೆಂದೂ ಅದನ್ನು ಸರ್ಕಾರದ ಕಡೆಯಿಂದಲೇ ಪ್ರಕಟಿಸಿ ಲೇಖಕರಿಗೆ ಗೌರವಧನ, ಪದ್ಮವಿಭೂಷಣ ಪ್ರಶಸ್ತಿಗಳನ್ನು ನೀಡುವದಾಗಿಯೂ ತಿಳಿಸಿದ್ದರು.

ಈ ಸದಾವಕಾಶವನ್ನುಪಯೋಗಿಸಿಕೊಂಡು ರಾಯರು ಅನೇಕ ಮನಶ್ಶಾಸ್ತ್ರ ಗ್ರಂಥಗಳನ್ನೂ ಈ ವಿಷಯದಲ್ಲಿ ಪೌರ್ವಾತ್ಯಪಾಶ್ಚಾತ್ಯ ವಿದ್ವಾಂಸರುಗಳ ಅಭಿಪ್ರಾಯಗಳನ್ನೂ ಪರಿಶೀಲಿಸಿ 'ಮನುಷ್ಯನೂ ಅವನಿಗೆ ಆಗುವ ಅವಸ್ಥೆಗಳೂ' ಎಂಬ ಹೆಸರಿನ

ಉದ್ಗ್ರಂಥವೊಂದನ್ನು ಬರೆದರು. ಅದು ಸರ್ಕಾರದ ಮಾನ್ಯತೆಯನ್ನು ಪಡೆದು ಪ್ರಕಟವಾಗಿ ಎಲ್ಲಾ ಪತ್ರಿಕೆಗಳಲ್ಲಿಯೂ ವಿದ್ವಾಂಸರುಗಳಿಂದ ಹೊಗಳಲ್ಪಟ್ಟು ರಾಯರಿಗೆ ಗೌರವಧನವನ್ನೂ ಪ್ರಶಸ್ತಿಯನ್ನೂ ತಂದೊದಗಿಸಿತು.

ಹೀಗಿರುವಲ್ಲಿ ಒಂದು ದಿನ ರಾಯರು ತಮ್ಮ ಮನೆಯಲ್ಲಿ ಆರಾಮಕುರ್ಚಿಯ ಮೇಲೆ ಕುಳಿತಿದ್ದಾಗ ಒಬ್ಬ ವೃದ್ಧಯತಿಗಳು ಬಂದು 'ಮನೋಹರರಾಯರು ತಾವೇನೊ?' ಎಂದು ಕೇಳಿದರು. ರಾಯರಿಗೆ ಆಶ್ಚರ್ಯವಾಗಿ 'ಹೌದು ನಾನೇ, ಏನಾಗಬೇಕಿತ್ತು?' ಎನ್ನಲಾಗಿ 'ನಿಮ್ಮ ಮನಶ್ಶಾಸ್ತ್ರಗ್ರಂಥದ ಕೀರ್ತಿಯನ್ನು ಕೇಳಿ ನಾನು ಇಲ್ಲಿಗೆ ಬಂದೆನು. ನಮ್ಮ ಪ್ರಾಚೀನ ಋಷಿಗಳು ಈ ಮೊದಲೇ ಮನಶ್ಶಾಸ್ತ್ರವನ್ನು ಪರಿಶೀಲಿಸಿ ಎಚ್ಚರದಲ್ಲಿ ತೋರುವ ನಾನಾಜೀವರುಗಳು, ನಾನಾ ಮನಸ್ಸುಗಳು, ಅವುಗಳ ವ್ಯಾಪಾರಗಳು–ಇವೆಲ್ಲಕ್ಕೂ ಆಧಾರವಾದ ತತ್ತ್ವವೊಂದಿದೆ. ಅದು ಮನಸ್ಸಿಗೆ ಮನಸ್ಸಾಗಿದೆ. ಆ ಪರಮತತ್ತ್ವದಲ್ಲೇ ಈ ಎಲ್ಲಾ ದೃಶ್ಯಗಳೂ ಕಲ್ಪಿತವಾಗಿ ತೋರುತ್ತಿವೆ–ಎಂದು ಉಪನಿಷತ್ತುಗಳಲ್ಲಿ ಸಾರಿರುತ್ತಾರೆ. ನೀವು ಮನಶ್ಶಾಸ್ತ್ರವನ್ನು ವಿಮರ್ಶಿಸುವಾಗ ವಿಷಯವಾದ ಮನಸ್ಸನ್ನು ವಿಚಾರಿಸಿರುವದು ಸರಿ. ಆದರೆ ಎಂದೆಂದೂ ವಿಷಯಿಯಾಗಿ ಯಾವ ವೃತ್ತಿ ವ್ಯಾಪಾರಗಳಿಲ್ಲದೆ, ತೋರುವ ಎಲ್ಲ ಮನಸ್ಸುಗಳನ್ನೂ ವಿಷಯೀಕರಿಸಿಕೊಂಡು ಎಂದೆಂದೂ ಸಾಕ್ಷಿಯಾಗಿ ನೋಡುತ್ತಿರುವ 'ಆತ್ಮ'ನೆಂಬ ನಿಜವಾದ ಮನಸ್ಸನ್ನು ಕುರಿತು ಏಕೆ ವಿಚಾರಿಸಲಿಲ್ಲ?' ಎಂದು ಹೇಳುತ್ತಿದ್ದಂತೆಯೇ ಆಕಾಶಕ್ಕೇರಿಬಿಟ್ಟರು.

ರಾಯರಿಗೆ ಕೂಡಲೆ ಎಚ್ಚರವಾಯಿತು. ಓಹೋ, ಈವರೆಗೆ ನಾನು ಕಂಡದ್ದೆಲ್ಲ ನನ್ನ ಕನಸೇ. ನಾನೊಬ್ಬನೇ ಅಲ್ಲಿದ್ದು ಇಷ್ಟೊಂದು ಜೀವರುಗಳನ್ನು ವೈಚಿತ್ರ್ಯಗಳನ್ನೂ ನೋಡಿದೆನಲ್ಲ! ಈ ನನ್ನ ಸ್ವರೂಪವು ಯಾವದಿರಬಹುದು? ಇದನ್ನು ಕಂಡುಹಿಡಿಯಲೇಬೇಕೆಂದು ಹೊರಟುಬಿಟ್ಟಿದ್ದಾರೆ. ಅವರಿಗೆ ಯಾರಾದರೂ ನಮ್ಮ ಶ್ರೀಗಳವರ ವಿಳಾಸವನ್ನು ಕೊಡಬಹುದೇನೊ!

## 35. ಜೀವನ ಅಸ್ತಿತ್ವ

### (ಅಕ್ಟೋಬರ್ 1974)

ಸಾಯಂಕಾಲದ ಐದು ಘಂಟೆಯ ಸಮಯ. ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನ ಒಂದು ಪಾರ್ಕಿನ ರಮ್ಯವಾದ ಭಾಗವೊಂದರಲ್ಲಿ ಕೆಲವು ವಯಸ್ಸಾದ

(ರಿಟೈರ್ಡ್) ಜನಗಳು ಕುಳಿತು ಲೋಕಾಭಿರಾಮವಾಗಿ ಹರಟೆಹೊಡೆಯುತ್ತಿದ್ದರು. ಆ ದಿನ ಯಾರೋ ಈ ಗುಂಪಿನೊಳಗಿನ ಒಬ್ಬರು ಹೃದಯಾಘಾತದಿಂದ ಸತ್ತು ಹೋದ ಬಗ್ಗೆ ಮಾತು ಹೊರಟಿತು. ಆಗ ಒಬ್ಬೊಬ್ಬರೂ ಒಂದೊಂದು ಬಗೆಯಿಂದ ವಾದಿಸಹತ್ತಿದರು. ಮೊದಲನೆಯದಾಗಿ ಎಸ್.ಹೆಚ್. ದಶರಥರಾಮರಾಯರು ನೋಡಿ, ಇರುವವರೆಗೂ ದುಡ್ಡು ಮಗ, ಬಂಗಾರ, ಮನೆ–ಎಂದು ಒಂದೇ ಸಮನೆ ಬಡುಕೊಂಡ ಆ ಮನುಷ್ಯ. ಹೋಗುವಾಗ ಅದನ್ನೇನೂ ಹೊತ್ತುಕೊಂಡು ಹೋದನೆ? ಎಲ್ಲವೂ ಇಲ್ಲಿಯೇ ಉಳಿಯಿತು' ಎಂದರು. ಆಗ ವಿಜಾಪುರದ ದೇಸಾಯಿ ಎಂಬುವರು 'ಇರೋ ತನಕ ಸಂಪಖಾನಾ ಪೀನಾ ಮಜಾಕರನಾ ಮಾಡಿದನಲ್ಲ! ಸತ್ತ ಮ್ಯಾಲೆ ಏನರೇ ಯಾತುಕ್ಕೊ ವಲ್ಲದು', ಎಂದರು. ಕೂಡಲೆ ಮಂಗಳೂರಿನ ಪರಶುರಾಮಪ್ಪೈ ಅವರು 'ಎಂಥದು ಮಹಾರಾಯರೇ, ಸತ್ತಮೇಲೆ ಮನುಷ್ಯನು ಉಂಟು ಎಂಬುದನ್ನು ಯಾರು ನಂಬಬೇಕು, ಗೊತ್ತಾಯಿತಲ್ಲವೋ?' ಎಂದರು. 'ಅಂದರೂ ಈ ದೇಹಾ ಬಿಟ್ಟು ಜೀವಾ ಅಂಬೋವಾ ಇಲ್ಲ ಇಲ್ಲಾ ಅಂತ ನಿಮ್ಮ ಅಂಬೋಣದಯೇನು?' ಎಂದು ಧಾರವಾಡದ ಪಾಟೀಲ ಕುಲಕರ್ಣಿಯವರು ಸವಾಲು ಹಾಕಿದರು. 'ಮರಣೋತ್ತರದಲ್ಲಿಯೂ ಜೀವನು ಇರುವನೆಂಬ ಬಗ್ಗೆ ಈಗ್ಗೆ ವೈಜ್ಞಾನಿಕ ಸಂಶೋಧನೆಗಳಾಗಿ ಮೃತರ ಭಾವಚಿತ್ರಗಳನ್ನು (ಫೋಟೋ) ತೆಗೆಯುವದು, ಅವರೊಡನೆ ಸಂಭಾಷಣೆ ನಡೆಸುವ ವಿಧಾನ–ಮುಂತಾದ ಪ್ರಯೋಗಗಳು ಯಶಸ್ವಿಯಾಗಿವೆ. ಅಲ್ಲದೆ ಪುನರ್ಜನ್ಮವುಂಟು ಎಂಬ ಬಗ್ಗೆ ಅದ್ಭುತ ಸಂಶೋಧನೆ ನಡೆಸಿ ಒಂದು ಪುಸ್ತಕವನ್ನೇ ಇಂಗ್ಲಿಷಿನಲ್ಲಿ ಸಾಧಾರವಾಗಿ ಪ್ರಕಟಿಸಿದ್ದಾರೆ. ಇದೆಲ್ಲದರ ಮೇಲಿಂದ ದೇಹಕ್ಕಿಂತ ಜೀವನು ಬೇರೆಯಾಗಿರಲೇಬೇಕೆಂಬುದನ್ನೂ ಅವನು ಕರ್ಮಕ್ಕೆ ತಕ್ಕಂತೆ ಫಲವನ್ನನುಭವಿಸಲು ಇನ್ನೊಂದು ಜನ್ಮವನ್ನು ಪಡೆಯುವನೆಂಬುದನ್ನೂ ಒಪ್ಪಲೇಬೇಕಾಗಿರುತ್ತೆ' ಎಂದರು– ಮೈಸೂರಿನ ಎ. ಶ್ಯಾಮರಾಯರು. ಅಲ್ಲಿಯೇ ಡಾಕ್ಟರ್ ಎನ್. ನರಸಿಂಗರಾಯರು 'ಇದೆಲ್ಲವೂ ಭ್ರಾಂತಿಮಾತ್ರ. ಹಿಂದಿನ ಜನ್ಮ ಸಮಾಚಾರ ಹೇಳುವದು ಮುಂತಾದದ್ದು ಡಬಲ್ ಪರ್ಸನಾಲಿಟಿ (ಇಬ್ಬಗೆಯ ವ್ಯಕ್ತಿ) ಎಂಬ ಮಾನಸಿಕ ದೋಷವಾಗಿರಬಹುದು. ಭೂತ, ಪ್ರೇತ, ಪಿಶಾಚ ಅಥವಾ ದೆವ್ವಗಳೆಂಬ ಭಾವನೆಗಳೆಲ್ಲ ಈ ಬಗೆಗೇ ಸೇರಿದವುಗಳೆನ್ನಬಹುದು. ಮರಣೋತ್ತರದವರ ಫೋಟೋ ಹಿಡಿಯುವದು ಹಾಗೂ ಸಂಭಾಷಣೆಗಳೂ ಸಹ ಸಂಶೋಧಕನ ಮಾನಸಿಕ ದೋಷದಿಂದ ಕಾಣಬಹುದಾಗಿದೆ. ಅನಾಟಮಿ ಫಿಜಿಯಾಲಜಿ ಪ್ರಕಾರ ಈ ದೇಹದಲ್ಲಿ ರಕ್ತಚಲನ, ಶ್ವಾಸೋಚ್ಛ್ವಾಸ, ಮೆದುಳಿನ ಕೇಂದ್ರಗಳ ಹಾಗೂ ಜ್ಞಾನತಂತ್ರಗಳ ಸಂಬಂಧ, ಹೃದಯದಕ್ರಿಯೆ ಮುಂತಾದದ್ದೆಲ್ಲವೂ ಸರಿಯಾಗಿ ನಡೆದರೆ ದೇಹದ 'ಚೈತನ್ಯ' ಎಂಬುದು ಹುಟ್ಟುತ್ತದೆ. ಒಂದು ಯಂತ್ರದ ಭಾಗಗಳೆಲ್ಲವೂ ಸರಿಯಾಗಿದ್ದು ಅದಕ್ಕೆ ಪೆಟ್ರೋಲ್

ಅಥವಾ ವಿದ್ಯುಚ್ಛಕ್ತಿಯ ಸಂಬಂಧ ಬಂದರೆ ಅದರಲ್ಲಿ ಹೇಗೆ ಚಲನೆ ಬರುವದೋ ಈ ಚೈತನ್ಯವೂ ಹಾಗೆಯೇ ಹುಟ್ಟುತ್ತದೆ' ಎಂದರು. 'ಹಾಂಗಾರ ಪಾಪ, ಪುಣ್ಯ ಸ್ವರ್ಗ, ನರಕಾ–ಎಲ್ಲಾ ಸುಳ್ಳ? ಏನ್ರಿ?' ಎಂದರು ಪಾಟೀಲ ಕುಲಕರ್ಣಿ. 'ಹೌದು, ಅವೆಲ್ಲವೂ ಜುಜುಬಿ ವಿಷಯಗಳು. ಹೊತ್ತುಹೋಗಲಾರದ ಮನುಷ್ಯರು ನಂಬಿಕೊಂಡಿರುವ ಕೆಲವು ಅನಾವಶ್ಯಕವಾದ ವಿಷಯಗಳು' ಎಂದು ನರಸಿಂಗರಾಯರು ಉತ್ತರವಿತ್ತರು. 'ಅಲ್ಲ ಸ್ವಾಮಿ, ಪರದೇಶೀಯರು, ವಿಜ್ಞಾನಿಗಳು ಸಂಶೋಧನೆಯಿಂದ ಸಿದ್ಧಪಡಿಸಿದ್ದನ್ನೂ ಸಕಲಧರ್ಮದವರೂ ಜೀವನೆಂಬುವನು ದೇಹಕ್ಕಿಂತ ಬೇರೆ ಇದ್ದು ಈಗ ಮಾಡಿದ ಪುಣ್ಯಪಾಪಕ್ಕನುಸರಿಸಿ ಸ್ವರ್ಗನರಕಪುನರ್ಜನ್ಮಗಳನ್ನು ಹೊಂದುವನೆಂದು ಹೇಳುತ್ತಿರುವದನ್ನೂ ನೀವು ಅಲ್ಲಗಳೆಯುವಿರಲ್ಲ?' ಎಂದರು ಎಸ್.ಹೆಚ್. ದಶರಥರಾಮರಾಯರು. ಹೀಗೆಯೇ ಚರ್ಚೆ ತುಂಬಾ ಬಿಸಿ ಏರುತ್ತನಡೆದು ಕೊನೆಯಲ್ಲಿ 'ಈಗಿನ ನಮ್ಮ ಸ್ಥೂಲಶರೀರಕ್ಕಿಂತ ಭಿನ್ನವಾಗಿ ನಾವು ಇದ್ದದ್ದನ್ನು ಈಗಲೇ ನಮ್ಮೆಲ್ಲರ ಅನುಭವದಲ್ಲಿ ತೋರಿಸಿಕೊಡದೆ 'ಜೀವ' ಎಂಬವನ ಅಸ್ತಿತ್ವವನ್ನೇ ನಾವು ಒಪ್ಪಲು ಸಾಧ್ಯವಿಲ್ಲ–ಎಂಬುದು ನನ್ನ ನಿಶ್ಚಯವಾದ ನಿಲುವು' ಎಂದು ಡಾಕ್ಟರ್ ನರಸಿಂಗರಾಯರು ಖಡಾಖಂಡಿತವಾಗಿ ಹೇಳಿದಾಗ ಯಾರೂ ಅವರನ್ನೆದುರಿಸಲಾರದೆ ಸುಮ್ಮನೆಯೇ ಕುಳಿತರು.

ಈ ವೇಳೆಗೆ ಸರಿಯಾಗಿ ಸಾಧುಗಳೊಬ್ಬರು ಆ ಕಡೆಯಿಂದ ಹೋಗುತ್ತಿದ್ದರು. ದಶರಥರಾಮರಾಯರು ಕೂಡಲೆ ಎದ್ದು ಹೋಗಿ ಆ ಸಾಧುಗಳನ್ನು ತಮ್ಮ ಗುಂಪು ಇದ್ದಲ್ಲಿಗೆ ಬರಬೇಕೆಂದು ಪ್ರಾರ್ಥಿಸಿ ಕರೆದುಕೊಂಡೇ ಬಂದರು. ಕೂಡಲೇ ಪರಶುರಾಮಪ್ಪ ಅವರು 'ಸಾಧುಗಳೇ, ನಿಮ್ಮಿಂದ ಒಂದು ವಿಷಯ ತಿಳಿಯುವಾ ಎಂದಿದೇವೆ, ಗೊತ್ತಾಯಿತಲ್ಲವೋ? ಇಲ್ಲಿ ಈಗಿನ ಜಡವಾದ ದೇಹಕ್ಕಿಂತ ಬೇರೆಯಾಗಿ 'ಜೀವ' ಉಂಟೋ ಇಲ್ಲವೋ ಎಂಬ ಚರ್ಚೆ ನಡೆದಿದೆ. ಈ ಬಗ್ಗೆ ತಾವು ತಿಳಿಸುತ್ತೀರೊ? ಎಂದರು. 'ನೋಡ್ರಿ ಬರೇ ಗ್ರಂಥದಾಗ ಹೇಳಿದ್ದನ್ನು ಆಧಾರಾಕೊಟ್ಟರ? ನಡಿಯೂದುಲ್ಲಾ ಈಗ? ನಾವು ಶರೀರಕ್ಕಿಂತ ಬ್ಯಾರೇ ಇದ್ದದ್ದನ್ನು ಎಲ್ಲಾರ ಅನುಭವದಾಗೂ ಬರೋ ಹಾಂಗ ತೋರಿಸಿಕೊಟ್ರ, ಒಪ್ಪತೀವಿ. ಇಲ್ಲದಿದ್ರ ಇಲ್ಲ ಅಂಬೋ ಸ್ಥಿತಿಗೆ ಬಂದದೆ ನಮ್ಮ ವಾದ. ಆ ಪ್ರಕಾರ ನೀವೇನಾದರೂ ತೋರಿಸಿ ಕೊಡತೀರೇನು?' ಎಂದು ಪಾಟೀಲ ಕುಲಕರ್ಣಿ ಪರಿಸ್ಥಿತಿ ವಿವರಿಸಿದರು. ಆಗ ಸಾಧುಗಳುಃ 'ಅಯ್ಯಾ, ಈ ಒಂದು ಸಣ್ಣ ಮಾತಿಗೆ ಇಷ್ಟೊಂದು ಚರ್ಚೆ ಘರ್ಷಣೆ ವಾದವಿವಾದಗಳೇಕೆ? ನಮ್ಮೆಲ್ಲರಿಗೂ ಕನಸುಗಳಾಗುವದು ಅನುಭವದಲ್ಲಿದೆಯಷ್ಟೆ?, 'ಹೌದು, ಇದೆ' ಎಂದು ಎಲ್ಲರೂ

ಒಪ್ಪಿದರು. ಆ ಬಳಿಕ ಸಾಧುಗಳು ಮುಂದುವರಿದು "ನೋಡಿ ಕನಸಿನಲ್ಲಿ 'ನಾನು' ಇರುತ್ತೇನೆ. ಅಷ್ಟೇ ಅಲ್ಲದೆ ನೋಡುವ ಹೇಳುವ ಮುಂತಾದ ವ್ಯವಹಾರಗಳನ್ನೂ, ಭಯ, ಆನಂದ, ಶೋಕ–ಮುಂತಾದವುಗಳನ್ನನುಭವಿಸುವದನ್ನೂ ಯಾರೂ ಅಲ್ಲಗಳೆಯಲಾರರು. ಅಂತೂ ಕನಸಿನಲ್ಲಿ ನನ್ನ ಅಸ್ತಿತ್ವವಿದ್ದದ್ದು ಖಂಡಿತ–ಎಂಬುದನ್ನು ಎಲ್ಲರೂ ಒಪ್ಪಲೇಬೇಕಲ್ಲವೆ? ಆದರೆ ಒಂದು ಸಂಗತಿಯನ್ನು ಇಲ್ಲಿ ಲಕ್ಷಿಸಬೇಕು. ಅದೇನೆಂದರೆ: ಕನಸಿನಲ್ಲಿ ಎಲ್ಲ ವ್ಯವಹಾರವನ್ನೂ ಮಾಡುವೆವಾದರೂ ಈಗಿನ ಈ ಸ್ಥೂಲದೇಹವು ಮಾತ್ರ ಅಲ್ಲಿಗೆ ಬರುವ ಹಾಗೆಯೇ ಇಲ್ಲ. ಇದರಿಂದ ನಾವೆಲ್ಲರೂ ಈಗಿನ ಸ್ಥೂಲಶರೀರದಿಂದ 'ನಾನು' ಎಂಬ ಜೀವನು ಪೂರ್ತಿ ಬೇರಾಗಿಯೇ ಇರುವೆವೆಂಬುದು ಎಲ್ಲರಿಗೂ ಆಗಲೇ ಅನುಭವಕ್ಕೆ ಬಂದಂತಾಯಿತಲ್ಲ! ಇದನ್ನು ವಿಚಾರಿಸಿರುವಿರಾ?"

ಸಾಧುಗಳ ಈ ಮಾತುಗಳನ್ನು ಕೇಳುತ್ತಿದ್ದಂತೆಯೇ ಡಾಕ್ಟರರೇ ಮೊದಲಾಗಿ ಸರ್ವರೂ ಆಶ್ಚರ್ಯದಿಂದ "ಆಹಾ, ಸ್ವಾಮೀ, ಈ ರೀತಿಯಾದ ಸಾರ್ವತ್ರಿಕವಾದ ಅನುಭವದ ಆಧಾರದಿಂದ ಈವರೆವಿಗೂ ಯಾರೂ ತಿಳಿಸಿದ್ದಿಲ್ಲ. ತಮ್ಮ ಉಪದೇಶದ ಪ್ರಾಕಾರವು ಇತರರಿಗಿಂತ ತೀರಾ ವಿಲಕ್ಷಣವಾಗಿದೆ" ಎಂದರು. "ನೋಡ್ರೆಪ್ಪಾ ಈಗಾರ ಗೊತ್ತಾತ" ಅಂತ ಧ್ವನಿ ಎಳೆದರು ಪಾಟೀಲ ಕುಲಕರ್ಣಿ. "ಅಲ್ಲವೋ ಮತ್ತೆ? ಎಲ್ಲರೂ ಒಪ್ಪುವ ರೀತಿಯಲ್ಲವೋ ಇದು?" ಎಂದು ಧ್ವನಿಗೂಡಿಸಿದರು 'ಪೈ'ಯವರು. ಹೀಗೆ ಸಕಲರಿಗೂ ಸಾಧುಗಳ ಬಗ್ಗೆ ಗೌರವಾದರಗಳು ಮೂಡುತ್ತಿರುವಾಗಲೇ ಸಾಧುಗಳು 'ಈ ಒಂದೇ ಕನಸಿನ ಅನುಭವದ ಆಧಾರದಿಂದ ಪಾಪ, ಪುಣ್ಯಗಳ ಅಸ್ತಿತ್ವ, ನೀತಿಧರ್ಮಗಳ ನಡವಳಿಕೆಗೆ ಆಧಾರ, ಪುನರ್ಜನ್ಮ, ಸ್ವರ್ಗನರಕಾದಿಗಳ ಅಸ್ತಿತ್ವಗಳನ್ನು ಸಿದ್ಧಪಡಿಸಬಹುದಾಗಿದೆ. ಇದಲ್ಲದೆ ನಮ್ಮೆಲ್ಲರ ನಿಜಸ್ವರೂಪವನ್ನೂ ಸಹ ಇದೇ ಕನಸಿನ ಆಧಾರದಿಂದ ತಿಳಿದುಕೊಳ್ಳಬಹುದಾಗಿದೆ." ಎಂದರು. "ಹಾಗಾದರೆ ನಮಗೆ ಇದನ್ನೆಲ್ಲವನ್ನೂ ಕ್ರಮವಾಗಿ ಉಪದೇಶಿಸಿರಿ" ಎಂದು ಸಾಧುಗಳನ್ನು ಸಕಲರೂ ಪ್ರಾರ್ಥಿಸಿಕೊಂಡರು. ಅದಕ್ಕೆ ಸಾಧುಗಳು "ಅಯ್ಯಾ, ನಾವು ನಿತ್ಯಸಂಚಾರಿಗಳು. ಅಕಸ್ಮಾತ್ತಾಗಿ ಈ ದಿನ ಇತ್ತ ಕಡೆಗೆ ಹೊರಟಿದ್ದೆವು. ಪರಮಾತ್ಮನ ದಯದಿಂದ ಇನ್ನೊಮ್ಮೆ ತಮ್ಮನ್ನೆಲ್ಲರನ್ನೂ ನೋಡುವ ಯೋಗ ಬಂದಾಗ ಮತ್ತೆ ಹೇಳೋಣ" ಎಂದು ಹೇಳುತ್ತಾ ಹೊರಟೇ ಹೋದರು. ಅಷ್ಟರಲ್ಲಿ ಕತ್ತಲಾಗಿ ಮಳೆ ಬರುವ ಹಾಗೆ ಮೋಡ ಕವಿದದ್ದರಿಂದ ಎಲ್ಲರೂ ಸಾಧುಗಳ ಮಾತುಗಳನ್ನೇ ಮೆಲುಕು ಹಾಕುತ್ತಾ ಮನೆಯ ಕಡೆಗೆ ನಡೆದರು.

# 36. ವೇದಾಂತದ ಒಳಗುಟ್ಟು–1

## (ನವಂಬರ್ 1974)

ನ್ಯಾಯಶಾಸ್ತ್ರ ವೈಶೇಷಿಕಶಾಸ್ತ್ರಗಳಲ್ಲೂ ಪ್ರಾಚೀನ ಹಾಗೂ ನವೀನ ನ್ಯಾಯಗಳ ಅದ್ಭುತತರ್ಕಸರಣಿಯಲ್ಲೂ ಪಾರಂಗತರಾಗಿ ಪ್ರಕಾಂಡಪಂಡಿತರೆನಿಸಿದ ತರ್ಕ ಮಾರ್ತಾಂಡೇತ್ಯಾದಿ ಬಿರುದಾಂಕಿತರಾದ ಬ್ರಹ್ಮಶ್ರೀ ಸಾಂಬಶಾಸ್ತ್ರಿಗಳವರು ಬೆಳಗಿನ ನಿತ್ಯಾನುಷ್ಠಾನಗಳನ್ನು ತೀರಿಸಿಕೊಂಡು ಪದ್ಧತಿಯಂತೆ ಕೆಲವು ಕ್ರೋಡಪತ್ರಗಳನ್ನೂ ಮಾಮೂಲಾಗಿ ನೋಡುತ್ತಿರುವ ಮುಖ್ಯ ಗ್ರಂಥಗಳನ್ನೂ ಅವಲೋಕಿಸುತ್ತ ಕುಳಿತಿರುವಾಗ 'ಜೈ ಶಂಕರ ಭಗವಾನ್' ಎಂದು ಉಚ್ಚಸ್ವರದಿಂದ ಯಾರೋ ಹೊರಗೆ ಶಾಸ್ತ್ರಿಗಳ ಮನೆಯ ಬಾಗಿಲಲ್ಲಿ ಕೂಗುತ್ತಿರುವದು ಕೇಳಿ ಬಂತು. ಶಾಸ್ತ್ರಿಗಳು ಕೂಡಲೆ ಎದ್ದು ಬಾಗಿಲ ಬಳಿಗೆ ಬಂದಾಗ ತೇಜಃಪುಂಜರಾದ ಸಂನ್ಯಾಸಿಗಳೊಬ್ಬರು ಕಮಂಡಲುಧಾರಿಗಳಾಗಿ ಕಾಷಾಯಾಂಬರಭೂಷಿತರಾಗಿ ನಿಂತಿದ್ದರು. ಮಧ್ಯವಯಸ್ಸಿನ ಯತಿಗಳನ್ನು ನೋಡಿದೊಡನೆಯೇ ಶಾಸ್ತ್ರಿಗಳು 'ಒಳಗೆ ದಯಮಾಡಿಸಬೇಕು' ಎಂದು ಪ್ರಾರ್ಥಿಸಿ ಸ್ವಾಗತಿಸಿದರು. ಆ ಯತಿಗಳು ಒಳಗೆ ಬರುತ್ತಲೇ ಅವರಿಗೆ ಯಥೋಚಿತ ಆಸನಾದಿಗಳನ್ನಿತ್ತು 'ಈ ದಿನ ತಮ್ಮ ಭಿಕ್ಷೆ ನಮ್ಮಲ್ಲಿಯೇ ಆಗಲಿ' ಎಂದು ಶಾಸ್ತ್ರಿಗಳು ಭಿಕ್ಷಾವಂದನೆಗೆ 'ನ ಕರ್ಮಣಾ....' ಎಂದು ಮುಂತಾಗಿ ಮಂತ್ರಗಳನ್ನು ಹೇಳಿ ಸಾಷ್ಟಾಂಗ ಹಾಕಿದರು. ಮನೆಯ ಜನಗಳೆಲ್ಲರೂ ದಂಡಪ್ರಣಾಮಗೈದರು. ಯತಿಗಳ ಸ್ನಾನಾಹ್ನಿಕಭಿಕ್ಷಾದಿಗಳೆಲ್ಲವೂ ಸಾಂಗವಾಗಿ ನೆರವೇರಿದ ಬಳಿಕ ಶಾಸ್ತ್ರಿಗಳೂ ಭೋಜನ ತೀರಿಸಿ ವಿಶ್ರಾಂತಿ ಪಡೆದು ಯತಿಗಳಿದ್ದ ಕೋಣೆಗೆ ಆಗಮಿಸಿ ಅವರಿಗೆ ನಮಸ್ಕರಿಸಿ ಅವರೆದುರಿಗೆ ಕುಳಿತುಕೊಂಡರು.

ಕುಶಲ ಪ್ರಶ್ನೆಗಳ ಮೂಲಕ ಯತಿಗಳ ಹೆಸರು ಭಾಷ್ಯಾನಂದಭಾರತಿಗಳೆಂದೂ ಯಾವಾಗಲೂ ಅವರು ಶ್ರೀಶಂಕರಭಗವತ್ಪಾದಕೃತಭಾಷ್ಯಗಳನ್ನೇ ಮನನ ಮಾಡುತ್ತಿರುವರೆಂದೂ ಅವರೊಡನೆ ನಡೆಯಿಸಿದ ಸಂಭಾಷಣೆಯಿಂದ ಶಾಸ್ತ್ರಿಗಳಿಗೆ ತಿಳಿಯಿತು.

ಶಾಸ್ತ್ರಿಗಳು ತಮ್ಮ ಪರಿಚಯವನ್ನು ಯತಿಗಳಿಗೆ ನಿವೇದಿಸಿಕೊಂಡು 'ನಾನು ಕೆಲವು ಪ್ರಶ್ನೆಗಳನ್ನು ಕೇಳಬೇಕೆಂದಿದ್ದೇನೆ. ತಾವು ಅಪ್ಪಣೆಕೊಡಿಸಿದರೆ ಮಹದುಪಕಾರವಾದೀತು' ಎಂದರು. ಅದಕ್ಕೆ ಯತಿಗಳು 'ಅವಶ್ಯವಾಗಿ ಕೇಳಿ. ತಮ್ಮಂಥ ವಿದ್ವಾಂಸರೊಂದಿಗೆ ಮಾತನಾಡುವದೇ ಒಂದು ಸುಸಂದರ್ಭ' ಎಂದರು. ಆಗ ಶಾಸ್ತ್ರಿಗಳು 'ನಾನು ಪ್ರಾಯ ಬರುವದರೊಳಗೇ ಸಂಸ್ಕೃತದಲ್ಲಿ ಸಾಧಾರಣಜ್ಞಾನ ಸಂಪಾದಿಸಿದ್ದೆ. ಆ ಬಳಿಕ

ನ್ಯಾಯತರ್ಕಾದಿಗಳನ್ನು ಕಾಶಿ, ಬಂಗಾಳ, ಕಾಶ್ಮೀರ, ಗುಜರಾಥಿನಲ್ಲಿಯ ಮಹಾಮಹೋಪಾಧ್ಯಾಯರುಗಳಲ್ಲಿ ವ್ಯಾಸಂಗಮಾಡಿದೆ. ಸಂಸಾರವು ಆರಂಭವಾಗಿ ಮಕ್ಕಳು ಮರಿ ಆದ ಬಳಿಕ ಕುಟುಂಬ ಪೋಷಣೆಗೆ ಸಾಕಷ್ಟು ಜಮೀನು ಮುಂತಾದವುಗಳ ಉತ್ಪತ್ತಿಯೂ ಇದ್ದುದರಿಂದ ಯಾವ ಹೆಚ್ಚಿನ ತೊಂದರೆಯೂ ಇಲ್ಲದೆಯೇ ಜೀವನ ನಡೆಸುತ್ತಾ ಬಂದೆ. ಈಗ ಐವತ್ತು ದಾಟಿರುವ ಈ ಇಳಿವಯಸ್ಸಿಗೆ ವೇದಾಂತಶಾಸ್ತ್ರವನ್ನಧ್ಯಯನ ಮಾಡುವ ಅಪೇಕ್ಷೆಯು ಬಂದು ಭಾಷ್ಯಾದಿ ಗ್ರಂಥಗಳನ್ನೂ ರಾಮಾನುಜ, ಮಧ್ವಪ್ರಣೀತಭಾಷ್ಯಗಳನ್ನೂ ವ್ಯಾಖ್ಯಾನಪ್ರಸ್ಥಾನಗಳಾದ ಪಂಚಪಾದಿಕಾದಿ ನ್ಯಾಯಮಕರಂದಪರ್ಯಂತಗ್ರಂಥಗಳನ್ನೂ ಓದಲು ಮೊದಲು ಮಾಡಿದ್ದೇನೆ. ಈಗ ನನಗೆ ಬಂದಿರುವ ಮುಖ್ಯ ಸಂಶಯವೇನೆಂದರೆ–

''ಅದ್ವೈತಸಿದ್ಧಾಂತಾನುಯಾಯಿಗಳಾದ ವ್ಯಾಖ್ಯಾನಕಾರರುಗಳು ಕೆಲವು ಅಭ್ಯುಪಗಮಗಳನ್ನಿಟ್ಟುಕೊಂಡು ತರ್ಕಶುದ್ಧವಾಗಿಯೇ ಸಿದ್ಧಾಂತದ ಪ್ರಮೇಯಗಳನ್ನು ಪ್ರಮಾಣಬದ್ಧವಾಗಿ ತಿಳಿಸಲು ಹೊರಟಿರುವದೇನೋ ನಿಜವೇ ಆಗಿದೆ. ಉದಾಹರಣೆಗೆ ಬ್ರಹ್ಮದ ಅಸ್ತಿತ್ವಕ್ಕೂ ಅವಿದ್ಯಾಸದ್ಭಾವಕ್ಕೂ ಪ್ರಮಾಣಗಳನ್ನು ಹೇಳಿ, ಅನಾದಿಬಂಧನಿವೃತ್ತಿ ಆದಿಯಾದ ಮೋಕ್ಷದ ಅನಂತತ್ವಾದಿಗಳನ್ನು ತರ್ಕಬದ್ಧವಾಗಿ ಹೇಳಿ, ಇನ್ನೂ ಎಷ್ಟೋ ಪ್ರಕಾರಗಳಿಂದ ವಿವರಿಸುತ್ತಿರುವದು ನನ್ನ ಗಮನಕ್ಕೆ ಬಂದಿದೆ. ಆದರೆ ರಾಮಾನುಜಾಚಾರ್ಯರೇ ಮೊದಲಾದವರು 'ನಿರ್ಗುಣನಿರಾಕಾರವಾದ, ನಿರ್ವಿಶೇಷನಿರ್ಧರ್ಮಕವಾದ ಬ್ರಹ್ಮದ ಅಸ್ತಿತ್ವಕ್ಕೇ ಪ್ರಮಾಣಗಳಿಲ್ಲ, ಯಾವ ಪ್ರಮಾಣಗಳಿಂದಲೂ ಇದು ಸಿದ್ಧವಾಗುವದಿಲ್ಲ' ಎಂದು ವಾದಿಸುವಾಗ 'ಲಕ್ಷಣ ಪ್ರಮಾಣಾಭ್ಯಾಂ ವಸ್ತುಸಿದ್ಧಿಃ' ಎಂಬ ನ್ಯಾಯಶಾಸ್ತ್ರವನ್ನೇ ಚೆನ್ನಾಗಿ ಅಭ್ಯಸಿಸಿದ ನನಗೆ ಶಂಕರಾಚಾರ್ಯರ ಸಿದ್ಧಾಂತದ ಬಗೆಗೇ ಸಂಶಯವು ಬರತೊಡಗುತ್ತದೆ. ಭಾಷ್ಯಾನಂದಭಾರತಿಗಳಾದ ತಾವು ಭಾಷ್ಯದಲ್ಲಿ ಹೇಳಿರುವ ಸಿದ್ಧಾಂತವನ್ನರಿಯಲು ಏನಾದರೂ ಒಳಗುಟ್ಟಿದ್ದರೆ ನನಗೆ ಹೇಳಿ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ'' ಎಂದರು.

ಆಗ ಯತಿಗಳಾದ ಶ್ರೀಶ್ರೀ ಭಾ.ಭಾ.ರವರು ಸ್ವಲ್ಪ ಹೊತ್ತು ಮೌನದಿಂದಿದ್ದು ಬಳಿಕ ಮುಗುಳುನಗೆ ನಕ್ಕು ಶಾಸ್ತ್ರಿಗಳಿಗೆ ಈ ರೀತಿಯಾಗಿ ಉತ್ತರ ಹೇಳಲಾರಂಭಿಸಿದರು:

ಶಾಸ್ತ್ರಿಗಳೆ! ಪ್ರಮಾಣಗಳೆಂದರೇನು?

ಶಾಃ ಪ್ರತ್ಯಕ್ಷ ಅನುಮಾನಾದಿಗಳು.

ಭಾ.ಭಾಃ ಸರಿ. ಅನುಮಾನಾದಿಗಳೆಲ್ಲಕ್ಕೂ ಪ್ರತ್ಯಕ್ಷವೇ ಆಧಾರ, ಅಲ್ಲವೆ?

ಶಾ: ಹೌದು.

ಭಾ.ಭಾ: ಕಣ್ಣೇ ಮುಂತಾದ ಇಂದ್ರಿಯಗಳಿಂದ ತಿಳಿದುಬರುವದೇ ಪ್ರತ್ಯಕ್ಷ. 'ಅಕ್ಷಮ್ ಪ್ರತಿ ಪ್ರತ್ಯಕ್ಷಂ' ಅಲ್ಲವೆ?

ಶಾ: ಹೌದು.

ಭಾ.ಭಾ.: ಈಗ ಕಣ್ಣೇ ಮುಂತಾದ ಇಂದ್ರಿಯಗಳಿವೆ. ಅವು ರೂಪವೇ ಮುಂತಾದ ಹೊರಗಿನ ವಸ್ತುಗಳ ಅಸ್ತಿತ್ವಕ್ಕೆ ಆಧಾರವಾಗಿವೆ–ಎಂಬುದಕ್ಕೆ ಏನು ಪ್ರಮಾಣ?

ಈಗ ಶಾಸ್ತ್ರಿಗಳು ಸ್ವಲ್ಪ ಹೊತ್ತು ಆಲೋಚಿಸಿ 'ಸ್ವಾಮಿ ಅದು ನಮ್ಮ ಅನುಭವದಿಂದ ತಿಳಿಯುತ್ತದೆ'

ಭಾ.ಭಾ: ಹಾ! ಪ್ರಮಾಣಕ್ಕೆ ಪ್ರಮಾಣವೇನು? ಎಂದರೆ ಪ್ರಮಾಣವಿಲ್ಲ, ಅನುಭವವೇ ಪ್ರಮಾಣ–ಎಂದಂತಾಯಿತು ಅಲ್ಲವೆ?

ಶಾ: ಹೌದು.

## 37. ವೇದಾಂತದ ಒಳಗುಟ್ಟು–2

### (ಮುಂದುವರಿದಿದೆ)

### (ಡಿಸೆಂಬರ್ 1974)

ಭಾ.ಭಾ: ಇಂದ್ರಿಯಾದಿಗಳು ತಮ್ಮ ವ್ಯಾಪಾರಗಳನ್ನು ಯಾವ ಆಧಾರದಲ್ಲಿ ಅಥವಾ ಆಶ್ರಯದಲ್ಲಿ ಮಾಡುತ್ತವೆ?

ಶಾ: ಅವು ದೇಹದ ಆಶ್ರಯದಲ್ಲಿ ಆಯಾ ಗೋಳಕಗಳಲ್ಲಿದ್ದು ತಮ್ಮ ತಮ್ಮ ವ್ಯಾಪಾರವನ್ನು ಮಾಡುತ್ತವೆ.

ಭಾ.ಭಾ: ಸರಿಯಾಗಿ ಹೇಳಿದಿರಿ. ಇಂದ್ರಿಯಗಳಿಗೆ ದೇಹವೇ ಅಧಿಷ್ಠಾನ; ದೇಹವಿಲ್ಲದಿದ್ದಲ್ಲಿ ಇಂದ್ರಿಯಗಳ ವ್ಯಾಪಾರ ನಡೆಯದು. ಅಲ್ಲವೆ?

ಶಾ: ಹೌದು.

ಭಾ. ಭಾ: ಹಾಗಾದರೆ ದೇಹವಿದೆ ಎಂಬುದೂ ಸಹ ಅನುಭವಸಿದ್ಧವೇ ಹೊರತು ಪ್ರಮಾಣಸಿದ್ಧವಲ್ಲ. ಅರ್ಥಾತ್ ಹೊರಗಿನ ವಸ್ತುಗಳನ್ನು ಹೇಗೆ ಇಂದ್ರಿಯಗಳಿಂದ

ನಮಗಿಂತ ಬೇರಾಗಿ ಅರಿಯುವೆವೋ ಹಾಗೆ ಈ ದೇಹವನ್ನರಿಯಲಾರೆವು. ಮತ್ತೇನೆಂದರೆ ಅನುಭವದಿಂದ ದೇಹವನ್ನೆಲ್ಲವನ್ನೂ ಪೂರ್ಣವಾಗಿ ವ್ಯಾಪಿಸಿ ಅರಿಯುತ್ತಿದ್ದೇವೆ. ಆದ್ದರಿಂದಲೇ ಅನುಭವಸ್ವರೂಪವೇ ನಾವಾಗಿದ್ದರೂ ದೇಹವೇ ನಾನು ಎಂದಿಟ್ಟುಕೊಂಡೇ (ನಾನು ಬಾಲಕ, ಯುವಕ, ವೃದ್ಧ–ಮುಂತಾಗಿ) ನಾವು ವ್ಯವಹರಿಸುತ್ತೇವೆ. ಅಲ್ಲವೆ?

**ಶಾ:** ಹೌದು.

**ಭಾ.ಭಾ:** ಹೀಗೆ ದೇಹವನ್ನು ನಾನೆಂದಿಟ್ಟುಕೊಂಡ ಬಳಿಕ ಇಂದ್ರಿಯಗಳನ್ನು 'ನನ್ನವು' ಎಂದಿಟ್ಟುಕೊಳ್ಳುತ್ತೇವೆ. ಉದಾ: ನನ್ನ ಕಣ್ಣು ನನ್ನ ಮನಸ್ಸು, ನನ್ನ ಬುದ್ಧಿ ಮುಂತಾಗಿ, ಅಲ್ಲವೆ?

**ಶಾ:** ಹೌದು.

**ಭಾ.ಭಾ:** ಇಷ್ಟಾದ ಬಳಿಕವೇ ನಾವು ಪ್ರಮಾತೃಗಳಾಗುತ್ತೇವೆ. ಆಮೇಲೆಯೇ ಪ್ರತ್ಯಕ್ಷಾದಿ ವ್ಯವಹಾರವು ಆರಂಭವಾಗುತ್ತದೆ. ಇಲ್ಲಿ 'ನಾನು' ಎಂದಿಟ್ಟುಕೊಂಡ ದೇಹಾದಿಗಳು ಮತ್ತು ನನ್ನವೆಂದಿಟ್ಟುಕೊಂಡ ಇಂದ್ರಿಯಾದಿಗಳು ಇವು ಯಾವ ಪ್ರಮಾಣದಿಂದ ಸಿದ್ಧವಾಗಿವೆ?

**ಶಾ:** ಇಲ್ಲಿ ಇವು ಯಾವ ಪ್ರಮಾಣದಿಂದಲೂ ಸಿದ್ಧವಾಗಿಲ್ಲ.

**ಭಾ.ಭಾ:** ಹಾಗಾದರೆ ಶ್ರೀಶಂಕರರು ಹೇಳುವಂತೆ ನಿಜವಾಗಿಲ್ಲದ ದೇಹಾದಿಗಳನ್ನೂ ಸತ್ಯನಾಗಿರುವ ಆತ್ಮನ ಸ್ವರೂಪವನ್ನೂ ಒಂದನ್ನು ಮತ್ತೊಂದಾಗಿಯೂ ಒಂದರ ಧರ್ಮವನ್ನು ಮತ್ತೊಂದರ ಧರ್ಮವಾಗಿಯೂ ತಿಳಿದುಕೊಂಡೇ 'ನಾನು' 'ನನ್ನದು' ಎಂದು ವ್ಯವಹರಿಸುತ್ತಾರೆಂಬುದೇ ಅನುಭವಸಮ್ಮತ ಎಂದಾಯಿತು.

**ಶಾ:** ನಿಜವಾಗಿಲ್ಲದ ದೇಹಾದಿಗಳನ್ನು ನಾನೆಂದು ತಪ್ಪಾಗಿ ತಿಳಿಯುವೆಂಬುದಕ್ಕೆ ಅನುಭವವೆಲ್ಲಿದೆ ಸ್ವಾಮಿ?

**ಭಾ.ಭಾ:** ಕನಸನ್ನು ಕಾಣುವಾಗ 'ನಾನು ಇಂಥವನು' ಎಂದುಕೊಂಡು ದೇಹವಾಗಲಿ 'ನನ್ನ ಕಣ್ಣು' ಎಂದು ಮುಂತಾಗಿ ಗ್ರಹಿಸಿದ್ದ ಇಂದ್ರಿಯ, ಮನಸ್ಸು ಬುದ್ಧಿಗಳಾಗಲಿ ನಿಜವಾಗಿಯೂ ಇದ್ದ ವಸ್ತುಗಳೇನು?

**ಶಾ:** ಅಲ್ಲ, ಅವೆಲ್ಲವೂ ನಮ್ಮ ಸ್ವರೂಪಕ್ಕೆ ಸೇರದಿರುವ ಕೇವಲ ಕಲ್ಪಿತವಾದವುಗಳೇ ಆಗಿವೆ.

ಭಾ.ಭಾಃ ಹೀಗೆಯೇ ಜಾಗ್ರತ್ತಿನ ದೇಹಾದಿಗಳೂ ಕಲ್ಪಿತಗಳೇ ಆಗಿವೆ.

ಶಾಃ ಅಂತೂ ಪ್ರಮಾತೃತ್ವವು ಕಲ್ಪಿತ. ಪ್ರಮಾಣವ್ಯವಹಾರವೆಲ್ಲವೂ ಕಲ್ಪಿತವಾದ ದೇಹಾದಿಗಳ ಆಧಾರದಲ್ಲಿಯೇ ನಡೆದಿದೆ ಎಂದಾಯಿತಲ್ಲವೆ, ಸ್ವಾಮಿ!

ಭಾ.ಭಾಃ ಅಹುದು. ಆದ್ದರಿಂದಲೇ ಆಚಾರ್ಯರು ''ತಮೇತಮ್ ಆತ್ಮಾನಾತ್ಮನೋಃ ಇತರೇತರಾಧ್ಯಾಸಂ ಪುರಸ್ಕೃತ್ಯ ಸರ್ವೇ ಪ್ರಮಾಣಪ್ರಮೇಯ ವ್ಯವಹಾರಾಃ ಲೌಕಿಕಾಃ ವೈದಿಕಾಶ್ಚ ಪ್ರವೃತ್ತಾಃ'' (ಅ.ಭಾ.) ಎಂದು ಮುಂತಾಗಿ ಹೇಳಿರುವದನ್ನು ನೀವು ಓದಿರಬಹುದು ಅಲ್ಲವೆ?

ಶಾಃ ಹೌದು. ವಾಕ್ಯವನ್ನೇನೋ ಓದಿದ್ದೆ. ಆದರೆ ಅದರ ಅರ್ಥವು ಹೀಗೆಂದೂ ಮನಸ್ಸಿಗೆ ಹತ್ತಿರಲಿಲ್ಲ. ತಾವು ಹೇಳಿದ ಮೇಲೆ ಈಗ ಚೆನ್ನಾಗಿ ಅರ್ಥವಾಗುತ್ತಿದೆ.

ಭಾ.ಭಾಃ ಬರಿಯ ತರ್ಕ–ನ್ಯಾಯಗಳನ್ನೇ ಅಧ್ಯಯನ ಮಾಡಿದವರಿಂದ ಪ್ರಮಾತೃತ್ವವೇ ನಮ್ಮ ಸ್ವಭಾವವೆಂಬ ಭ್ರಾಂತಿಯು ಬಿಟ್ಟಿರುವದಿಲ್ಲ. ಅನುಭವ ಆಧಾರದಿಂದಲೇ ಸರ್ವವೂ ನಡೆಯುವದೆಂಬ ಸತ್ಯದ ಕಡೆಗೆ ಲಕ್ಷ್ಯವೇ ಹೋಗುವದಿಲ್ಲ. ''ಸರ್ವಾನುಭೂಃ'' (ಬೃ. 2–5–19) ಎಂದು ವರ್ಣಿತವಾಗಿರುವ ನಮ್ಮ ಸ್ವರೂಪವೇ ಬ್ರಹ್ಮವು. ಆದ್ದರಿಂದಲೇ ''ನೈಷಾ ತರ್ಕೇಣ ಮತಿರಾಪನೇಯಾ'' (ಕ.1–2.16) ತರ್ಕದಿಂದ ತಿಳಿಯತಕ್ಕ ತತ್ತ್ವವಿದಲ್ಲ–ಎಂದು ಶ್ರುತಿಯು ತಿಳಿಸುತ್ತದೆ. ಬ್ರಹ್ಮದ ಅಸ್ತಿತ್ವಕ್ಕೆ ಪ್ರಮಾಣವಿಲ್ಲವೆಂಬುದು ದೂಷಣವಲ್ಲ, ಭೂಷಣವಾಗಿದೆ. ಬ್ರಹ್ಮವು ಪ್ರಮಾಣಗಳಿಂದ ಸಿದ್ಧವಾಗತಕ್ಕ ಪ್ರಮೇಯವಲ್ಲ (4–4–20) ಎಂಬ ಶ್ರುತಿಯೂ ''ಅನಾಶಿನೋಽಪ್ರಮೇಯಸ್ಯ'' ಎಂಬ ಸ್ಮೃತಿಯೂ ಗೀ. 2–18 ಹೇಳುವ ಅಭಿಪ್ರಾಯವನ್ನೇ ಶ್ರೀಶಂಕರರು ''ನ ಹಿ ಆಗನ್ತುಕಃ.....'' (ಸೂ.ಭಾ.2–3–7) ಮುಂತಾದ ಸೂತ್ರಭಾಷ್ಯದ ವಾಕ್ಯಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಶ್ರೀಶಂಕರರ ಹೃದಯವನ್ನರಿಯದವರು ನಿರ್ವಿಶೇಷಾತ್ಮಸ್ವರೂಪಕ್ಕೆ ಪ್ರಮಾಣವಿಲ್ಲ ಎಂದೂ ಬ್ರಹ್ಮಕ್ಕೆ ಅಷ್ಟು ಪ್ರಮಾಣಗಳಿವೆ ಎಂದೂ ತರ್ಕಪ್ರಧಾನರಾಗಿ ವಾದಿಸುತ್ತಿರುತ್ತಾರೆ. ಇದರಂತೆಯೇ ಅಂತಃಕರಣದಲ್ಲಿರುವ ಅವಿದ್ಯೆ, ವಿದ್ಯೆಗಳನ್ನು ಅನುಭವಸ್ವರೂಪವೇ ಬೆಳಗಿ ತೋರಿಸುವದೆಂಬುದನ್ನು ಆಚಾರ್ಯರು ''ಅವಿದ್ಯಾ ಚ ಸ್ವಾನುಭವೇನ ರೂಪ್ಯತೇ, ಮೂಢೋಽಹಂ ಅವಿವಿಕ್ತಂ ಮಮ ವಿಜ್ಞಾನಮ್..... ತಥಾ ವಿದ್ಯಾವಿವೇಕೋಽಪಿ'' (ತೈ.ಭಾ. 2–8) ಎಂದು ಮುಂತಾಗಿ ಹೇಳಿದ್ದರೂ ಈ ಸಾಕ್ಷ್ಯನುಭವದೆಡೆಗೆ ಹಿಂದಿರುಗಿ ನೋಡದ ತರ್ಕಗ್ರಸ್ತಬುದ್ಧಿಯಿಂದ ಕೂಡಿದ ಕೆಲವರು ಅವಿದ್ಯಾಸಿದ್ಧಿಗೆ ಪ್ರಮಾಣಗಳನ್ನು ಕೊಡುವ ಹುಚ್ಚುತನಕ್ಕೆ ಹೊರಡುತ್ತಾರೆ. ಪ್ರಮಾಣಪ್ರಮೇಯವ್ಯವಹಾರವೇ ಅವಿದ್ಯಾಕಲ್ಪಿತ ಎಂಬ

ಮಾತನ್ನು ಮರೆತು ಅವಿದ್ಯೆಗೆ ಪ್ರಮಾಣವೇನು? ಎಂದು ಹುಡುಕಲು ಆರಂಭಿಸುವವರಿಗೆ ಶಾಂಕರಭಾಷ್ಯದ ಅನುಭವರಸಾಯನದ ಆನಂದವು ಹೇಗೆ ಸಿಕ್ಕೀತು? ಆದ್ದರಿಂದ ನೀವು 'ನಾನು' ಎಂಬುದನ್ನಿಟ್ಟುಕೊಂಡು ಮುಂದಕ್ಕೆ ಹೊರಡುವದರ ಬದಲು ಈ 'ನಾನು ಇಂಥವನು' ಎಂಬ ಅಹಂಕಾರವೂ ಸಹ ಯಾವ ಅನುಭವಕ್ಕೆ ನೇರಾಗಿ ಗೋಚರವಾಗುತ್ತಿರುವದೋ ಆ ಅನುಭವಸ್ವರೂಪದೆಡೆಗೆ ಲಕ್ಷ್ಯವನ್ನು ತಿರುಗಿಸಿರಿ. ಆ ಸಾಕ್ಷ್ಯನುಭವದ ಕಣ್ಣಿನಿಂದ ಶ್ರೀಶಂಕರರ ಭಾಷ್ಯಗಳನ್ನು ಓದಿ ನೋಡಿರಿ. ಆಗ ನಿಮಗೆ ನಿಜವಾದ ಭಾಷ್ಯಾಭ್ಯಾಸದ ಆನಂದವು ದಕ್ಕುವದು. ಇದೇ ವೇದಾಂತದ ಒಳಗುಟ್ಟು.

ಶಾ: ''ಸ್ವಾಮಿ, ಧನ್ಯನಾದೆ. ಶ್ರೀಶಂಕರರೇ ಸಾಕ್ಷಾತ್ತಾಗಿ ಬಂದು ಭಾಷ್ಯಾಭ್ಯಾಸದ ಕ್ರಮವನ್ನು ತೋರಿಸಿಕೊಟ್ಟಂತಾಯಿತು. ಯತಿಗಳಾದ ತಾವು ನಿತ್ಯಸಂಚಾರಿಗಳಾದ ಪರಮಹಂಸರಾಗಿರುತ್ತೀರಿ. ಆದರೂ ನಮ್ಮಂಥವರನ್ನನುಗ್ರಹಿಸಲು ನಿರಪೇಕ್ಷರಾಗಿ ಯದೃಚ್ಛೆಯಿಂದ ಸಂಚರಿಸುತ್ತಿರುತ್ತೀರಿ. ನಾನು ಇಂದಿನಿಂದ ಈ ಪ್ರಮಾಣತರ್ಕದ ದೃಷ್ಟಿಯ ಹುಚ್ಚನ್ನು ಬಿಟ್ಟು ತಮ್ಮ ಆದೇಶದಂತೆ ಪ್ರಮಾತೃವಿಗೇ ಆಧಾರವಾದ ಅನುಭವಸ್ವರೂಪ ಪ್ರತ್ಯಗಾತ್ಮದೃಷ್ಟಿಯನ್ನೇ ಅನುಸರಿಸಿ ಭಾಷ್ಯಾಭ್ಯಾಸ ಮಾಡುತ್ತೇನೆ. ತಾವು ನನ್ನನ್ನು ಆಶೀರ್ವದಿಸಬೇಕು''–ಎಂದರು.

ಆ ಕೂಡಲೇ ಪರಮಹಂಸರಾದ ಭಾಷ್ಯಾನಂದಭಾರತೀ ಮಹಾಸ್ವಾಮಿಗಳವರು 'ಶ್ರೀಶಂಕರರು ನಿಮಗೆ ಪ್ರತ್ಯಗ್ದೃಷ್ಟಿಯನ್ನು ಕರುಣಿಸಲಿ' ಎಂದು ಎದ್ದು ನಿಂತವರೇ 'ಜೈಶಂಕರಭಗವಾನ್' ಎಂದು ಗರ್ಜನೆ ಮಾಡುತ್ತ ಹೊರಟೇ ಬಿಟ್ಟರು. ಅವರು ಕಣ್ಮರೆಯಾಗುವವರೆಗೂ ಸಾಂಬಶಾಸ್ತ್ರಿಗಳು ನೋಡುತ್ತಲೇ ನಿಂತಿದ್ದರು.

# 38. ವೇದಾಂತದ ಒಳಗುಟ್ಟು–3

## (ಜನವರಿ 1975)

''ಸೃಷ್ಟಿಗೆ ಮೊದಲು ಬ್ರಹ್ಮವು ಒಂದೇ ಇತ್ತು; ಅದು ಬಹಳವಾಗಬೇಕೆಂದು ಬಯಸಿತು, ಬಹಳವಾಯಿತು' ಎಂಬ ಶ್ರುತಿಯ ಆಧಾರದಿಂದ ಅದ್ವೈತವೇ ಜಗತ್ಕಾರಣವಾಯಿತೆಂದು ತಾವು ಹೇಳಿದಿರಿ; ಆದರೆ 'ಕ್ಯಾಂಟ್' ಎಂಬ ಪಾಶ್ಚಾತ್ಯ ತತ್ತ್ವಚಿಂತಕನ ಅಭಿಪ್ರಾಯದಂತೆ: ಕಾಲ, ದೇಶ, ಕಾರ್ಯಕಾರಣಭಾವರಹಿತವಾದ ತತ್ತ್ವವೆಂಬುದು ನಮಗೆ ಅನುಭವದಲ್ಲಿಲ್ಲ, ಕಾಲವಿಲ್ಲದ ಜಗತ್ತು ಪದಾರ್ಥಗಳು ಹೇಗಿವೆಯೋ ತಿಳಿಯದು; ಆದ್ದರಿಂದ ವಿಚಾರಮಾಡಲು ಹೊರಟಕೂಡಲೆ ಕಾಲದೇಶಗಳ

ಕಲ್ಪನೆಯು ಬಂದೇ ತೀರುತ್ತದೆ. ನೀವೇ ಉದಾಹರಿಸಿರುವ ಶ್ರುತಿಯಲ್ಲಿಯೂ ಸರಿಯಾಗಿ ಪರಿಶೀಲಿಸಿದರೆ 'ಅಗ್ರೇ' ಎಂಬ ಶಬ್ದದಿಂದ ಸೃಷ್ಟಿಗೆ ಪೂರ್ವದಲ್ಲಿ ಎಂಬ ಕಾಲವೂ 'ಬ್ರಹ್ಮವು ಬಹಳವಾಯಿತು' ಎಂದದ್ದರಿಂದ ಕಾರ್ಯಕಾರಣಭಾವವೂ ಸೂಚಿತವಾಗಿಯೇ ಇದೆ. ಇನ್ನು ಅದ್ವೈತವೆಲ್ಲಿ ಬಂತು ಶಾಸ್ತ್ರಿಗಳೆ''–ಎಂದು ಪ್ರೊಫೆಸರ್ ಡಿ. ರಾಘವೇಂದ್ರನ್‌ರವರು ಶ್ಯಾಮಸುಂದರಶಾಸ್ತ್ರಿಗಳನ್ನು ಕೇಳಿದರು.

''ಅದ್ವೈತಗ್ರಂಥವಾದ 'ಪಂಚದಶಿಯಲ್ಲಿಯೇ' ಮಲಗಿದ್ದು ಎಚ್ಚತ್ತವನಿಗೆ ನಿದ್ರೆಯೊಳಗಿನ ತಮಸ್ಸಿನ ಸ್ಮೃತಿಯು ಉಂಟಾಗುವದರಿಂದ 'ಸುಷುಪ್ತಿಯಲ್ಲಿ ಆತ್ಮನೂ ತಮಸ್ಸೂ ಇದ್ದಂತಾಯಿತು'–ಎಂದು ಹೇಳಿರುವದರಿಂದ ತಮಗೆ ಅರಿವಿಲ್ಲದಂತೆಯೇ ಅದ್ವೈತಿಗಳು ದ್ವೈತವನ್ನು ಒಪ್ಪಿಯೇ ಇದ್ದಾರೆ'' ಎಂದು ಉಭಯವೇದಾಂತ ವಿಶಾರದ ಶ್ರೀ|| ರಾಮಾನುಜಂರವರೂ ಧ್ವನಿಗೂಡಿಸಿದರು. ಅದ್ವೈತವೆಂಬುದೇ ಅಸಮಂಜಸ, ಅದು ಅಸಂಭವವೇ ಸರಿ–ಎಂಬ ಇವರಿಬ್ಬರ ವಾದಕ್ಕೆ ಏನು ಉತ್ತರವನ್ನು ಕೊಡಬೇಕೆಂಬುದೇ ಶಾಸ್ತ್ರಿಗಳಿಗೆ ಹೊಳೆಯಲಿಲ್ಲ.

ಹೀಗೆ ಚರ್ಚೆ ಮಾಡುತ್ತಾ ಬೆಂಗಳೂರು ಕೆಂಪುತೋಟದ ಒಂದು ಸ್ಥಳದಲ್ಲಿ ಸೇರಿದ್ದ ಈ ಜಿಜ್ಞಾಸುಗಳಿದ್ದಲ್ಲಿಗೆ 'ನಾರಾಯಣ' ಎಂದು ಭಗವನ್ನಾಮಸ್ಮರಣೆಯನ್ನು ಮಾಡುತ್ತಾ ತರುಣ ಶಿಷ್ಯನೊಡಕೂಡಿದ ಸಂನ್ಯಾಸಿಗಳೊಬ್ಬರು ಬಂದರು. ಎಲ್ಲರಿಗೂ ಆಶ್ಚರ್ಯವಾಯಿತು. ಕೂಡಲೆ ಆ ಸಂನ್ಯಾಸಿಗಳಿಗೆ ಅಲ್ಲಿದ್ದವರೆಲ್ಲರೂ ನಮಸ್ಕರಿಸಿದರು. ಆ ತರುಣಶಿಷ್ಯನು ಅಲ್ಲಿದ್ದ ಎತ್ತರವಾದ ಹಾಸುಗಲ್ಲಿನ ಮೇಲೆ ಒಂದು ಕೃಷ್ಣಾಜಿನವನ್ನು ಹರಡಲಾಗಿ ಸಂನ್ಯಾಸಿಗಳು ಅದರ ಮೇಲೆ ಆಸೀನರಾದರು. ಉಳಿದವರೆಲ್ಲರೂ ಹಸಿರುಹುಲ್ಲಿನ ಚಾಪೆಯ ಮೇಲೆ ಕುಳಿತರು. ಆಗ ತರುಣನು ಸಂನ್ಯಾಸಿಗಳ ಹೆಸರು 'ಭಾಷ್ಯಾನಂದಭಾರತಿ' ಗಳೆಂದೂ ಇವರು ಶಂಕರಸಿದ್ಧಾಂತದ ರಹಸ್ಯಗಳನ್ನೆಲ್ಲ ಚೆನ್ನಾಗಿ ಬಲ್ಲವರೆಂದೂ ತಾನೂ ಸಹ ಇವರಲ್ಲಿ ಭಾಷ್ಯಾಭ್ಯಾಸವನ್ನು ಮಾಡುತ್ತಿರುವದಾಗಿಯೂ ಸಭೆಗೆ ಪರಿಚಯಮಾಡಿಕೊಟ್ಟನು.

ಆಗ ಯತಿಗಳು ಹೀಗೆಂದರು: ''ಜಿಜ್ಞಾಸುಗಳಿರ, ಅದ್ವೈತಸಿದ್ಧಾಂತವನ್ನು ಶ್ರೀಶಂಕರಭಗವತ್ಪಾದರ ಅಭಿಪ್ರಾಯದಂತೆ ಅರಿತುಕೊಳ್ಳಬೇಕಾದರೆ ಒಂದು ಒಳಗುಟ್ಟನ್ನು ತಿಳಿಯಬೇಕಾಗಿದೆ. ಅದೇನೆಂದರೆ: ನಮಗೆ ಸಹಜವಾಗಿ ಇಂದ್ರಿಯಗಳ ಮೂಲಕ ಹೊರಗೆ ಕಾಣುವ ದ್ವೈತಪ್ರಪಂಚವನ್ನು ಅರಿಯುವ ವ್ಯವಹಾರದೃಷ್ಟಿ ಅಥವಾ ಲೌಕಿಕದೃಷ್ಟಿಯೆಂಬುದೊಂದು. ಇದಕ್ಕಿಂತ ವಿಲಕ್ಷಣವಾದ ಯಾವ ದ್ವೈತಪ್ರಪಂಚದ

ಹಂಗೂ ಇಲ್ಲದ ತಾನೇ ತಾನಾದ ಸ್ವಯಂಸಿದ್ಧವಾದ **ಪರಮಾರ್ಥದೃಷ್ಟಿ ಅಥವಾ ಸಾಕ್ಷಿದೃಷ್ಟಿ.** ಈ ಎರಡನ್ನೂ ವಿಂಗಡಿಸಿಕೊಳ್ಳದೆ ಇದ್ದರೆ ಪರಮಾರ್ಥವನ್ನು ಇದ್ದದ್ದು ಇದ್ದಂತೆ ಅರಿಯಲಾಗುವದಿಲ್ಲ. 'ವ್ಯವಹಾರ'ವೆಂಬ ಶಬ್ದದಲ್ಲಿ ದೇಶ, ಕಾಲ, ಕಾರ್ಯಕಾರಣಭಾವ, ಶಾಸ್ತ್ರ, ಗುರು, ಶಿಷ್ಯ–ಎಂಬ ಎಲ್ಲಾ ದ್ವೈತವೂ ಅಡಕವಾಗಿಬಿಟ್ಟಿದೆ. ಇದೇ ಜೀವರುಗಳ ಸಂಸಾರವೆಂಬುದು. ಆದ್ದರಿಂದ ಸಂಸಾರಗೋಚರವಾದ ವ್ಯವಹಾರವನ್ನು ಮೀರಿ ಕೇವಲ 'ಅನುಭವ' ದಿಂದ ನೋಡಿದಾಗ ಪರಮಾರ್ಥದೃಷ್ಟಿಯ ಅರಿವಾಗುವದು. **ಆಚಾರ್ಯರು ದಿಕ್ಕಾಲಮನಸ್ಸುಗಳು, ಕ್ರಿಯಾಕಾರಕಫಲಗಳು, ಎಲ್ಲವೂ ಆತ್ಮನಲ್ಲಿ ಕಲ್ಪಿತವೆಂದೂ ವ್ಯವಹಾರದೃಷ್ಟಿಯಲ್ಲಿ ಮಾತ್ರವೇ ಅವು ತೋರುವವೆಂದೂ ಸ್ಪಷ್ಟವಾಗಿ ತಿಳಿಸಿರುತ್ತಾರೆ.**

''ಇನ್ನು ಕಾಲವಿಲ್ಲದ ಜಗತ್ತು, ಪದಾರ್ಥಗಳಾಗಲಿ ಅವುಗಳ ಅನುಭವವಾಗಲಿ ಇಲ್ಲವೆಂಬುದು ಸರಿಯಲ್ಲ. ಏಕೆಂದರೆ ಗಾಢನಿದ್ರೆಯಲ್ಲಿ ನಾವು ಕೇವಲ ಅನುಭವಸ್ವರೂಪರಾಗಿಯೇ ಇದ್ದುಕೊಂಡಿರುವಾಗ ಅಲ್ಲಿ ಯಾವ ಕಾಲದೇಶಗಳೂ ತೋರಿಕೊಳ್ಳುವದಿಲ್ಲ. ಎಚ್ಚತ್ತ ಮೇಲೆ 'ಸುಖಮಹಮಸ್ವಾಪ್ಸಮ್' ಎಂದು ಮಾಡುವ ಕಾಲ ಅಹಮಾದಿಗಳ ಪರಾಮರ್ಶವು ಎಚ್ಚರದವಸ್ಥೆಗೆ ಒಳಪಟ್ಟದ್ದೇ ಹೊರತು ನಿಜವಾಗಿ ಸುಷುಪ್ತಿಯಲ್ಲಿ ಅವು ಇದ್ದುದರ ಸ್ಮೃತಿಯಿಲ್ಲ. ಅಲ್ಲಿ ಕಾಲವಿರುವದೆಂದೇನೂ ತಾತ್ಪರ್ಯವಲ್ಲ. ಇದು ಸುಷುಪ್ತಿಯ ಅನುಭವವನ್ನು 'ವ್ಯವಹಾರ'ವೆಂಬ ಮೂಸೆಯಲ್ಲಿಟ್ಟು ಹೇಳಿದ್ದೆಂದೇ ತಿಳಯಬೇಕು. ಇದೂ ಕೂಡ ಅದ್ವಿತೀಯಾತ್ಮನ ಅನುಭವದ ಕಡೆಗೆ ಜಿಜ್ಞಾಸುವಿನ ಲಕ್ಷ್ಯವನ್ನು ಎಳೆಯುವದಕ್ಕಾಗಿಯೇ ಹೊರತು ದ್ವೈತಸತ್ಯತ್ವವನ್ನು ಸ್ಥಾಪಿಸುವದಕ್ಕಲ್ಲ. ಶ್ರೀಶಂಕರಾಚಾರ್ಯರು ತಮ್ಮ ಸೂತ್ರಭಾಷ್ಯದಲ್ಲಿಯೂ ಉಪನಿಷದ್ಭಾಷ್ಯಗಳಲ್ಲಿಯೂ ಅಲ್ಲಲ್ಲಿ ಈ ವಿಚಾರಗಳನ್ನು ಸ್ಪಷ್ಟಪಡಿಸಿದ್ದಾರೆ. ನೀವುಗಳು ಕೇವಲ ತರ್ಕವನ್ನವಲಂಬಿಸದೆ ಅನುಭವಸ್ವರೂಪದಿಂದ ನೆಲೆನಿಂತು ದ್ವೈತದ ತಿರುಳನ್ನು ಪರೀಕ್ಷಿಸಿರಿ. ಆಗ ಅದು ಅದ್ವೈತಾತ್ಮನಲ್ಲಿಯೇ ಕರಗಿ ಒಂದಾಗಿ ಆತ್ಮನೊಬ್ಬನೇ ಪರಮಾರ್ಥಸತ್ಯನೆಂಬ ಅರಿವುಂಟಾಗುವದು'' ಎಂದು ಹೇಳುತ್ತಾ 'ಜಯ ಜಯ ಶಂಕರಭಗವಾನ್' ಎಂದು ಘೋಷಣೆ ಮಾಡುತ್ತಾ ಹೊರಟೇ ಬಿಟ್ಟರು. ಕೃಷ್ಣಾಜಿನ ದೊಡನೆ ಆ ತರುಣನೂ ಅವರನ್ನು ಹಿಂಬಾಲಿಸಿ ಕಣ್ಮರೆಯಾದನು.

# 39. ವೇದಾರ್ಥರಹಸ್ಯ-1

## (ಮಾರ್ಚ್ 1975)

ಅದೊಂದು ಸಭೆ. ಅಲ್ಲಿ ಅಧ್ಯಕ್ಷರು, ಭಾಷಣಕಾರರು-ಮುಂತಾದ ವ್ಯವಸ್ಥೆಯೇನೂ ಇರಲಿಲ್ಲ; ಸುಮ್ಮನೆ ಕೆಲವರು ಒಂದೆಡೆ ಸೇರಿ ಒಬ್ಬೊಬ್ಬರಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದರು. ಉಳಿದವರು ಕೇಳುತ್ತಿದ್ದರು. ಮಾಧ್ವಮತಾನುಯಾಯಿಗಳಾದ ಒಬ್ಬರು ಆಚಾರ್ಯರು ''ಶ್ರುತ್ಯರ್ಥವು ದ್ವೈತಪರವಾಗಿಯೇ ಇದೆ; 'ಚಕ್ಷುರ್ವೈ ಸತ್ಯಮ್' ಎಂದು ವೇದದಲ್ಲಿರುವದರಿಂದ ಪ್ರಪಂಚವು ಮಿಥ್ಯೆಯಲ್ಲ . ಶ್ರುತಿವಾಕ್ಯಗಳನ್ನು ಪದವಾಕ್ಯ ಪ್ರಮಾಣಗಳಿಂದ ದ್ವೈತಪರವಾಗಿ ಸಿದ್ಧಾಂತ ಮಾಡಿ 'ಸಿವಿಲ್ ಕೋಡ್' ಎಂಬ ಪುಸ್ತಕಗಳಲ್ಲಿ ಪ್ರಸಿದ್ಧಪಡಿಸಲಾಗಿದೆ. ಆದ್ದರಿಂದ ಪೂರ್ಣಪ್ರಜ್ಞರ ಮತದಂತೆ ವೇದಾರ್ಥವು ದ್ವೈತವೇ ಎಂದಾಗುತ್ತದೆ'' ಎಂದು ಗಂಭೀರವಾಗಿ ಪ್ರತಿಪಾದಿಸಿದರು.

ಅನಂತರ ಮತ್ತೊಬ್ಬರು ತ್ರಿನಾಮಧಾರಿಗಳಾದ ಪಂಡಿತರೆದ್ದು ''ಭೇದಾಭೇದ ಗಳೆರಡೂ ಸತ್ಯವೇ. ಜೀವ, ಪರಮಾತ್ಮ ಜಗತ್ತುಗಳಿಗೆ ಅಂಶಾಂಶಿಭಾವವೇ ಇದೆ. ವೇದವಾಕ್ಯಗಳು ಈ ಸಿದ್ಧಾಂತಕ್ಕೇ ಅನುಗುಣವಾಗಿವೆ. ಭೇದ ಮಾತ್ರವನ್ನೇ ಹೇಳುವ ದ್ವೈತಮತವು ಯುಕ್ತಿಹೀನ ಹಾಗೂ ವೇದಬಾಹಿರವಾಗಿದೆ. ಆದ್ದರಿಂದ **ವಿಶಿಷ್ಟಾದ್ವೈತ ಸಿದ್ಧಾಂತವೇ** ಸರ್ವೋತ್ತಮವಾದದ್ದು'' ಎಂದು ತಮ್ಮ ವಿದ್ವತ್ಪೂರ್ಣವಾದ ವಾಣಿಯಿಂದ ತಿಳಿಸಿದರು.

ಕೊನೆಗೆ ಭಸ್ಮರುದ್ರಾಕ್ಷಧಾರಿಗಳಾದ ಶಾಸ್ತ್ರಿಗಳೊಬ್ಬರು ''ಅದ್ವೈತವೇ ವೇದಾರ್ಥವು. ಶ್ರೀಶಂಕರಭಗವತ್ಪಾದರು ಇದನ್ನು ಚೆನ್ನಾಗಿ ಪ್ರತಿಪಾದಿಸಿದ್ದಾರೆ. ವೇದವಾಕ್ಯಗಳು ಅದ್ವೈತವೇ ಪರಮಾರ್ಥವೆಂದೂ ನಾನಾತ್ವವು ಮಿಥ್ಯೆಯೆಂದೂ ಹೇಳುತ್ತಿವೆ. ಅನುಭವದಲ್ಲೂ ದ್ವೈತವು ಆಗಾಗ್ಗೆ ಬಾಧಿತವಾಗುತ್ತಿದ್ದು ಅಸತ್ಯವೆಂದು ಗೊತ್ತಾಗಿದೆ. ಕಾಲದೇಶಗಳ ಕಟ್ಟಿಗೆ ಒಳಪಟ್ಟು ಕಾಣುವ ದ್ವೈತವು ಪ್ರತಿಕ್ಷಣವೂ ತನ್ನ ಸ್ವರೂಪವನ್ನು ಬದಲಾಯಿಸುತ್ತಿದೆ. ಹೀಗಿರುವಲ್ಲಿ ಅದು ಸತ್ಯವು ಹೇಗಾದೀತು? ಅದ್ವೈತವೇ ವೇದಸಮ್ಮತವಾದ ಪರಮಾರ್ಥವು''-ಎಂದು ಉದ್ಘೋಷಿಸಿದರು.

ಹೀಗೆಯೇ ವಾದವಿವಾದಗಳು ಮುಂದುವರಿದಂತೆಲ್ಲ 'ವೇದಾರ್ಥವು ಅದ್ವೈತವೆಂಬುದು ನಮಗೆ ಒಪ್ಪಿಲ್ಲ'- ಎಂದು ಮೊದಲು ಮಾತನಾಡಿದ್ದ ಇಬ್ಬರು ಪಂಡಿತರು ಗಟ್ಟಿಯಾಗಿ ಕಿರುಚುತ್ತಾ 'ಈ ವಿಷಯಕ್ಕೆ ವಾಕ್ಯಾರ್ಥವೇ ನಡೆಯಲಿ, ಯಾರು

ಗೆಲ್ಲುವರೋ ನೋಡೋಣ' ಎಂದು ಕೂಗೆಬ್ಬಿಸಿದರು. ಆಗ ಶ್ರೋತೃಗಳು ಗುಂಪಿನಲ್ಲಿದ್ದ ಒಬ್ಬ ವೃದ್ಧರಾದ ಗಣ್ಯಸದ್ಗೃಹಸ್ಥರು ಎದ್ದು ನಿಂತು "ಪಂಡಿತೋತ್ತಮರುಗಳೆ, ಸ್ವಲ್ಪ ಶಾಂತವಾಗಿರಿ; ತಾವುಗಳೆಲ್ಲರೂ ವ್ಯಾಕರಣ, ತರ್ಕ, ಮೀಮಾಂಸಾದಿ ಶಾಸ್ತ್ರಗಳಲ್ಲಿ ಪರಿಣತರು. ಎಲ್ಲರೂ ವೇದಪ್ರಮಾಣವನ್ನು ಒಪ್ಪಿರುವವರೇ ಆಗಿರುತ್ತೀರಿ. ಹೀಗಿದ್ದರೂ ಒಂದೇ ವೇದವು ನಿಮ್ಮಲ್ಲಿ ಮತಭೇದವನ್ನೇಕೆ ಉಂಟುಮಾಡಿದೆಯೆಂಬುದನ್ನು ಎಂದಾದರೂ ವಿಚಾರಿಸಿದ್ದೀರಾ? ರಬ್ಬರಿನಂತೆ ಯಾವ ಕಡೆಗಾದರೂ ಒಲಿಯುವಂತೆ ಇರುವ ಅಸ್ಪಷ್ಟವಾದ ಅಭಿಪ್ರಾಯವುಳ್ಳ ಈ ವೇದವನ್ನು ನಾವೇಕೆ ಒಪ್ಪಬೇಕು? ವೇದದಲ್ಲಿ ಪ್ರತಿಪಾದಿಸಿರುವ ತತ್ತ್ವವಾಗಲಿ, ವೇದೋಕ್ತ ಕರ್ಮಗಳ ಒಲವಾಗಲಿ, ಸ್ವರ್ಗಾದಿಗಳಾಗಲಿ ಈಗ ಅನುಭವಕ್ಕೆ ಬಾರದಿರುವ ವಿಷಯಗಳಾಗಿದ್ದಲ್ಲಿ ಕುರುಡು ನಂಬಿಕೆಯಿಂದ ಅವುಗಳನ್ನೆಲ್ಲ ಅನುಸರಿಸುವದಾದರೂ ಏಕೆ? ಕರ್ಮಗಳನ್ನು ಯೋಗಪೂರ್ವಕವಾಗಿ ಮಾಡಿದರೆ ಚಿತ್ತಶುದ್ಧಿಯುಂಟಾಗುವದೆಂದು ಪ್ರತ್ಯಕ್ಷಫಲವನ್ನು ಕೊಡುವವೆಂದು ಹೇಳಿರುವಲ್ಲಿ ನೀವುಗಳು ಯಾರಾದರೂ ಅದನ್ನು ಮಾಡಿ ನೋಡಿದ್ದೀರಾ? ನಿಮಗೆ ಅಂಥ ಫಲವೇನಾದರೂ ಕಂಡು ಬಂದಿದೆಯೆ? ಇಲ್ಲಿಯೇ ಫಲವನ್ನು ಕೊಡುವವೆಂದು ಬರೆದಿರುವ ಕೆಲವು ಉಪಾಸನೆಗಳನ್ನಾದರೂ ನೀವು ಮಾಡಿ ನೋಡಿದ್ದೀರಾ? 'ತತ್ತ್ವ' ಎಂಬುದು ಎಲ್ಲರಿಗೂ ಒಂದೇ ರೀತಿಯಾಗಿ ತಾನೆ ಇರಬೇಕು? ಉದಾಹರಣೆಗೆ ಅಂಕಗಣಿತದಲ್ಲಿ 'ಮೂರಕ್ಕೆ ನಾಲ್ಕು ಸೇರಿದರೆ ಏಳಾಗುತ್ತದೆ' ಎಂಬ ತತ್ತ್ವವು ಯಾವದಾದರೂ ದೇಶಕಾಲ, ಜನಾಂಗಗಳಲ್ಲಿ ಬದಲಾಯಿಸುವದುಂಟೆ? ಪ್ರಪಂಚಕ್ಕೆಲ್ಲ ಅದು ಸಮಾನವಲ್ಲವೆ? ಹಾಗೆಯೇ ವೇದದಲ್ಲೂ ಸರ್ವಸಮ್ಮತವಾದ ತತ್ತ್ವವೊಂದಿರಬೇಕಲ್ಲವೆ? ಆ ತತ್ತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಲ್ಲವೆ? ಬರಿಯ ಪಾಂಡಿತ್ಯಪ್ರದರ್ಶನದಿಂದ ಏನು ಫಲ?" ಎಂದರು.

ಆಗ ಇನ್ನೊಬ್ಬ ವೃದ್ಧರು ಎದ್ದು 'ಈ ಹಿರಿಯರ ಮಾತು ತುಂಬ ಸಮಂಜಸವಾಗಿದೆ. ಇಲ್ಲಿರುವವರಿಗೆಲ್ಲ ವೇದದಲ್ಲೂ ಪರಮೇಶ್ವರನಲ್ಲೂ ಶ್ರದ್ಧೆಯಿರುವದರಿಂದ ನಾವೆಲ್ಲರೂ ಸ್ವಲ್ಪ ಹೊತ್ತು ಒಂದೇ ಮನಸ್ಸಿನಿಂದ "ಭಗವಂತ! ನಮಗೆ ವೇದರಹಸ್ಯವನ್ನು ಯಾವ ಸಂಶಯವೂ ಇಲ್ಲದಂತೆ ತಿಳಿಸಿಕೊಡಪ್ಪ ಎಂದು ಪ್ರಾರ್ಥಿಸೋಣ" ಎಂದರು. ಎಲ್ಲರೂ ಅದಕ್ಕೆ ಒಪ್ಪಿದರು. ಕೆಲವು ಕ್ಷಣ ಸಭೆಯು ನಿಶ್ಶಬ್ದವಾಯಿತು. ಅಷ್ಟರಲ್ಲೇ 'ಓಂ' ಎಂದು ದೀರ್ಘವಾಗಿ ಉಚ್ಚರಿಸುತ್ತಾ ತೇಜಸ್ವಿಗಳಾದ ಯತಿವರ್ಯರೊಬ್ಬರು ಒಬ್ಬ ತರುಣಬ್ರಹ್ಮಚಾರಿಯೊಡನೆ ಸಭೆಯಲ್ಲಿ ಪ್ರತ್ಯಕ್ಷರಾದರು. ಎಲ್ಲರೂ ಭಯಭಕ್ತಿಗಳಿಂದ ಮೇಲಕ್ಕೆದ್ದು ಸ್ವಾಗತಿಸಿ ವಂದಿಸಿದರು. ಯತಿಗಳು ಉಚ್ಚಾಸನದಲ್ಲಿ ಮಂಡಿಸಿದ ಮೇಲೆ ಎಲ್ಲರೂ ಒಮ್ಮತದಿಂದ "ಪೂಜ್ಯರೆ, ಈ ದಿನ ನಮಗೆ ತಾವು ವೇದಾರ್ಥರಹಸ್ಯವನ್ನು

ತಿಳಿಸೋಣವಾಗಬೇಕು; ನಾವೆಲ್ಲರೂ ಈವರೆಗೂ ಚರ್ಚಿಸಿ ತೀರ್ಮಾನವನ್ನು ಕಾಣದೆ ತುಂಬ ನಿರಾಶರಾಗಿದ್ದೇವೆ. ತಾವು ಅನುಗ್ರಹ ಮಾಡಿ ಸರ್ವಸಮ್ಮತವಾದ ಅರ್ಥವನ್ನು ತಿಳಿಸಿಕೊಡಬೇಕು'' ಎಂದು ಪ್ರಾರ್ಥಿಸಿದರು. ಆಗ ಯತಿಗಳೊಡನೆ ಬಂದಿದ್ದ ಬ್ರಹ್ಮಚಾರಿಯು ಆ ಸಂನ್ಯಾಸಿಗಳ ಹೆಸರು 'ಭಾಷ್ಯಾನಂದಭಾರತಿ' ಗಳೆಂದೂ ಈ ದಿನ ಸಂಜೆಯಾಗಿರುವದರಿಂದಲೂ ಮತ್ತುಗುರುಗಳು ಮೌನವ್ರತದಲ್ಲಿರುವದರಿಂದಲೂ ನಾಳೆ ಬೆಳಗ್ಗೆ ''ವೇದಾರ್ಥರಹಸ್ಯ''ವನ್ನು ತಿಳಿಸುತ್ತಾರೆಂದು ಸಭೆಗೆ ಪರಿಚಯಮಾಡಿಕೊಟ್ಟನು. ಆ ದಿನದ ಸಭೆ ಮುಕ್ತಾಯಗೊಂಡಿತು.

## 40. ವೇದಾರ್ಥರಹಸ್ಯ–2

### (ಏಪ್ರಿಲ್ 1975)

ಇಂದಿನ ಸಭೆಯಲ್ಲಿ ಶ್ರೀಭಾಷ್ಯಾನಂದಭಾರತಿಗಳವರು ಉಚ್ಚಾಸನದಲ್ಲಿ ಮಂಡಿಸಿದ್ದಾರೆ. ವೈದಿಕವಿದ್ವಾಂಸರುಗಳು ಅವರ ಸಮೀಪದಲ್ಲಿ ಸ್ವಲ್ಪ ಎತ್ತರವಾದ ಸ್ಥಳದಲ್ಲಿಯೂ ಉಳಿದ ಜಿಜ್ಞಾಸುಗಳು ಸ್ವಲ್ಪ ದೂರದಲ್ಲಿಯೂ ಕುಳಿತಿದ್ದಾರೆ. ಅತ್ಯಂತ ನಿಶ್ಯಬ್ದ ವಾತಾವರಣದಲ್ಲಿ ಯತಿಗಳು ವಿಷಯಗಳನ್ನು ನಿರೂಪಿಸತೊಡಗಿದರು.

**''ಆಸ್ತಿಕಮಹಾಶಯರೆ, ವೇದವು ವರ್ಣಾಶ್ರಮಧರ್ಮ, ಅದಕ್ಕಾಗುವ ಫಲ, ಕರ್ಮೋಪಾಸನೆಗಳ ದೃಷ್ಟಾದೃಷ್ಟಫಲಗಳು, ಜೀವರುಗಳ ಅಸ್ತಿತ್ವ, ಲೋಕಾಂತರಗಳೇ ಮುಂತಾದ ಅಮೋಘ ವಿಷಯಗಳನ್ನು ತಿಳಿಸುವ ಜ್ಞಾನದೀಪವಾಗಿದೆ. ಇಂಥ ಸರ್ವಜ್ಞಕಲ್ಪವಾದ ವೇದವು ತನಗಿಂತ ಸರ್ವಜ್ಞನಾದ ಪರಮಾತ್ಮನಿಂದಲೇ ಅವನ ಉಸಿರಿನಂತೆ ನಿರಾಯಾಸವಾಗಿ ಹೊರಬಂದಿದೆ. ವೇದದ ಕೊನೆಯ ಭಾಗಗಳಾದ ಉಪನಿಷತ್ತುಗಳಲ್ಲಿ ಪರಬ್ರಹ್ಮವನ್ನು ಪ್ರತಿಪಾದಿಸಿ ಈಶ್ವರ, ಆತ್ಮ–ಮುಂತಾದ ಶಬ್ದಗಳಿಂದ ಅದನ್ನು ಕರೆದು 'ಅದೇ ಇಡಿಯ ಜಗತ್ತಿನ ಆತ್ಮನಾಗಿದೆ'–ಎಂದು ತಿಳಿಸಿರುತ್ತದೆ. ಈ ಆತ್ಮನನ್ನು ಇಲ್ಲಿಯೇ ಕಂಡುಕೊಂಡಾಗ ಶೋಕಮೋಹಗಳಿಂದ ಬಿಡುಗಡೆಯಾಗಿ ಮೋಕ್ಷವೆಂಬ ಪ್ರತ್ಯಕ್ಷಫಲವು ಇಲ್ಲಿಯೇ ಅನುಭವಕ್ಕೆ ಬರುತ್ತದೆ''–ಎಂಬುದು ವೇದದಿಂದಲೇ ಗೊತ್ತಾಗಬೇಕಾಗಿದೆ.**

"ಪರಮಾರ್ಥತತ್ತ್ವವು ಸಾರ್ವತ್ರಿಕವಾದ ಅನುಭವಕ್ಕೆ ಗೋಚರವಾಗಿದ್ದು ಎಲ್ಲರಿಗೂ ಅದನ್ನು ಅರಿತುಕೊಳ್ಳುವ ಅವಕಾಶವಿದೆಯೆಂಬುದನ್ನು ತಿಳಿಸುವದಕ್ಕಾಗಿ ಉಪನಿಷತ್ತುಗಳಲ್ಲಿ ತತ್ತ್ವಜ್ಞಾನಪ್ರಾಪ್ತಿಗೆ ಉಪಾಯವಾಗಿ ಕೆಲವು ಪ್ರಕ್ರಿಯೆಗಳನ್ನು ಉಪಯೋಗಿಸಿರುತ್ತದೆ. ಉದಾಹರಣೆಗೆ ಕಣ್ಣಿನಿಂದ ಹೊರಪ್ರಪಂಚವನ್ನೆಲ್ಲ ನೋಡುತ್ತೇವೆ. ಆದರೆ ಅದೇ ಕಣ್ಣಿನಿಂದ ಆತ್ಮನನ್ನು ನೋಡಲಾರೆವು. ಆದರೂ ಕಣ್ಣಿನಿಂದ ರೂಪವನ್ನು ಕಂಡೆವು–ಎಂಬ ಅನುಭವವು ಏತರ ಬಲದಿಂದ ಆಗುತ್ತದೆ? ಕಣ್ಣು ಕಣ್ಣಾಗಿರುವದು ಯಾವ ಚೈತನ್ಯದ ಆಧಾರದಿಂದ? ಎಂದು ವಿಚಾರಿಸಿದಾಗ ಈ ಆತ್ಮನ ಅನುಭವವು ನೇರಾಗಿ ದೊರಕುವದು. ಹೀಗೆಯೇ ಎಚ್ಚರ, ಕನಸು, ತನಿನಿದ್ರೆ–ಎಂಬ ಮೂರವಸ್ಥೆಗಳೂ ಸರ್ವರಿಗೂ ಅನುಭವಗೋಚರವಾಗಿದ್ದರೂ ಈ ಅವಸ್ಥೆಗಳ ಸಾಕ್ಷಿಯೇ ಆತ್ಮನು–ಎಂದು ವೇದವು ತಿಳಿಸಿದ ಮೇಲೆಯೇ ಗೊತ್ತಾಗುತ್ತದೆ. ಹೀಗೆ ಮೊದಲು ಅನುಭವ, ಅನಂತರ ಅನುಭವಾನುಸಾರಿಯಾದ ವೇದವಾಕ್ಯ–ಇವುಗಳ ಬಲದಿಂದ ವೇದಾರ್ಥನಿರ್ಣಯವು ಯಾವ ಸಂಶಯವೂ ಇಲ್ಲದೆ ಉಂಟಾಗುತ್ತದೆ."

ಶ್ರೀಭಾಷ್ಯಾನಂದರ ಈ ಉಪದೇಶವನ್ನು ಕೇಳಿದ ಮಾಧ್ವಮತಾನುಯಾಯಿಗಳಾದ ಆಚಾರ್ಯರೊಬ್ಬರು ಕೂಡಲೆ ಎದ್ದು "ಪೂಜ್ಯರೆ, ವೇದವು ಪ್ರಮಾಣವೆಂಬುದು ಸ್ವತಃಸಿದ್ಧವಾಗಿರಬೇಡವೆ? ತಾವು ತಿಳಿಸುವಂತೆ ಅನುಭವವೇ ಪ್ರಥಮ ಪ್ರಮಾಣ, ಅನಂತರ ಅನುಭವಾನುಸಾರಿಯಾದ ವೇದವಾಕ್ಯವು ಪ್ರಮಾಣವನ್ನು ಎಂದಾದರೆ ವೇದಕ್ಕೆ ಎರಡನೆಯ ಸ್ಥಾನವು ಬಂದಂತಾಯಿತಲ್ಲವೆ? ಈ ರಹಸ್ಯವನ್ನು ಬಿಡಿಸೋಣವಾಗಲಿ" ಎಂದು ಪ್ರಾರ್ಥಿಸಿದರು.

ಆಗ ಯತಿಗಳು "ಅನುಭವವೆಂದರೆ ಪರಬ್ರಹ್ಮವೇ. **'ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ'** ಎಂದು ಉಪನಿಷತ್ತಿನಲ್ಲಿದೆ. ಇಂಥ ಪರಬ್ರಹ್ಮವು ಅಪ್ರಮೇಯವು ತನ್ನ ಸಿದ್ಧಿಗೆ ಮತ್ತೊಂದು ಪ್ರಮಾಣವನ್ನು ಬಯಸುವದಿಲ್ಲ. ವೇದವು ಇಂಥ ಬ್ರಹ್ಮವನ್ನು ತಿಳಿಸುವದರಿಂದಲೇ ತಾನೂ ಪ್ರಮಾಣವಾಗಿದೆ. ಇನ್ನೂ ಮಿಗಿಲಾಗಿ ನೋಡಿದರೆ ಬ್ರಹ್ಮಕ್ಕೇ ವೇದವೆಂದೂ ಹೆಸರಿದೆ. ಆದ್ದರಿಂದ ವೇದಪ್ರಾಮಾಣ್ಯವು ಈ ಅನುಭವಸ್ವರೂಪನಾದ ಆತ್ಮನ ಹಿಂತಡಿಕೆಯಿಂದ ಮತ್ತಷ್ಟು ಪ್ರಬಲವಾದಂತೆಯೇ ಆಯಿತು. ಆತ್ಮನ ಸ್ವಭಾವವನ್ನು ವಿಮರ್ಶೆಮಾಡಿರುವ ವೇದವು ತಾನೂ ಆತ್ಮನನ್ನು ನೇರಾಗಿ ತಿಳಿಸಲಾರೆನೆಂದೂ ಆತ್ಮನಿಂದಲೇ ತಾನೂ ಸಿದ್ಧವಾಗಿರುವದಾಗಿಯೂ ಹೇಳುತ್ತಿದೆ. ಹೀಗೆ ಅನುಭವಗಮ್ಯವಾದ ತತ್ತ್ವವನ್ನು ತಿಳಿಸುವ ವೇದವು ತನ್ನ ಕರ್ಮಕಾಂಡದ ಭಾಗಕ್ಕೂ ನಿರತಿಶಯವಾದ ಪ್ರಾಮಾಣ್ಯವನ್ನು ಈ ಜ್ಞಾನಕಾಂಡದ ಬಲದಿಂದಲೇ ಪಡೆದು

ಕೊಂಡಂತಾಯಿತು. ಆದ್ದರಿಂದ ವೇದವು ತಿಳಿಸುವ ಕರ್ಮೋಪಾಸನೆಗಳು ಅವುಗಳ ದೃಷ್ಟಾದೃಷ್ಟಫಲಗಳೂ ಜನ್ಮಾಂತರಲೋಕಾಂತರಗಳೂ ಈಗಲೇ ಅನುಭವಕ್ಕೆ ಬಾರದಿದ್ದರೂ ಪ್ರಮಾಣಗಳಿಂದೇ ನಿಶ್ಚಯವಾಯಿತು.

''ಈಗ ವೇದಾರ್ಥವು ಎಲ್ಲರಿಗೂ ಸಮ್ಮತವಾಗಿರಬೇಕಾದರೆ ಮೇಲೆ ತಿಳಿಸಿದಂತೆ ಅನುಭವಕ್ಕೆ ಹೊಂದಿಸಿಯೇ ವೇದವಾಕ್ಯಗಳ ಅರ್ಥವನ್ನು ವಿವರಿಸಬೇಕೆಂದಾಯಿತು. ಪದವಾಕ್ಯಪ್ರಮಾಣಗಳೆಂಬ ವ್ಯಾಕರಣದ, ಮೀಮಾಂಸಾ, ತರ್ಕಶಾಸ್ತ್ರಗಳನ್ನೂ ವೇದವಾಕ್ಯಾರ್ಥನಿರ್ಣಯಕ್ಕೆ ಸಹಾಯವಾಗಿ ಉಪಯೋಗಿಸುವಾಗ ಅವು ಅನುಭವಾನುಸಾರಿಯಾಗಿರಬೇಕೆಂಬುದನ್ನೂ ನೆನಪಿಟ್ಟರೆ ಎಲ್ಲರಿಗೂ ವೇದದ ಅರ್ಥವು ಒಂದೇ ರೀತಿಯಾಗಿ ಉಂಟಾಗುವದರಲ್ಲಿ ಸಂಶಯವಿಲ್ಲ . ಆಸ್ತಿಕರಾದ ತಾವೆಲ್ಲರೂ ಸಾರ್ವತ್ರಿಕಾನುಭವಾಧಾರದಿಂದ ಶಾಸ್ತ್ರಗಳ ಪ್ರಾಮಾಣ್ಯದೊಡನೆ ವೇದಾರ್ಥವನ್ನು ನಿಶ್ಚಯಿಸಿರಿ. ಶ್ರುತಿಯುಕ್ತಿ ಅನುಭವಗಳ ಸಾಮರಸ್ಯದಿಂದ ಸಿದ್ಧವಾಗುವ ಸರ್ವಸಮ್ಮತವಾದ ವೇದಾರ್ಥವನ್ನು ಮನಗಂಡು ಕೃತಕೃತ್ಯರಾಗಿರಿ'' ಎಂದು ಹೇಳುತ್ತಿದ್ದಂತೆಯೇ ''ಓಂ ನಮೋ ನಾರಾಯಣಾಯ'' ಎಂದು ಘರ್ಜನೆ ಮಾಡುತ್ತಾ ತರುಣ ಶಿಷ್ಯನೊಡನೆ ಅದೃಶ್ಯರಾಗಿಬಿಟ್ಟರು.

## 41. ಕರ್ಮಫಲತ್ಯಾಗ

### (ಮೇ 1975)

'ಫಲದ ಆಶೆಯಿಲ್ಲದೆ ಕರ್ತವ್ಯಕರ್ಮವನ್ನು ಸ್ವಧರ್ಮಕ್ಕನುಗುಣವಾಗಿ ಮಾಡಬೇಕು; ಭಗವಂತನ ಉಪದೇಶವು ಗೀತೆಯಲ್ಲಿ ಹೀಗಿದೆ' ಎಂದು ಸದಾಶಿವರಾಯರು ತಮ್ಮ ಪತ್ನಿಯಾದ ಉಮಾಬಾಯಿಯವರೊಡನೆ ಮಾತನಾಡುತ್ತಿದ್ದಾಗ ಅಲ್ಲೇ ಇದ್ದ ಆವರ ಮಗನಾದ ಗಣಪತಿಯು ನಡುವೆ ಬಾಯಿ ಹಾಕಿ 'ಅಪ್ಪ, ಇದು ಹೇಗೆ ಸಾಧ್ಯ? ಒಂದು ವೇಳೆ ವೈದಿಕಕರ್ಮಗಳನ್ನಾದರೂ ಹೀಗೆ ಮಾಡಬಹುದು; ಏಕೆಂದರೆ ಅವುಗಳ ಫಲವು ಅದೃಷ್ಟ. ಆದರೆ ಲೌಕಿಕಕರ್ಮಗಳನ್ನು ಸಂಗತ್ಯಾಗಫಲತ್ಯಾಗ ಪೂರ್ವಕವಾಗಿ ಮಾಡುವದು ಹೇಗಾದೀತು? ಉದಾಹರಣೆಗೆ: ನಾನೇ ಒಂದು ಬ್ಯಾಂಕಿನಲ್ಲಿ ಕೆಲಸದಲ್ಲಿದ್ದೇನೆ. ತಿಂಗಳಾದ ಬಳಿಕ ವೇತನವನ್ನು ತೆಗೆದುಕೊಳ್ಳದೆ ಇರುವದು ಸಾಧ್ಯವೆ?' ಎಂದನು. ಸದಾಶಿವರಾಯರು ಮಗನ ಕುತೂಹಲಕ್ಕೆ ತಲೆದೂಗಿ 'ಸರಿಯಪ್ಪ, ನಿನ್ನ ಪ್ರಶ್ನೆ. ಆದರೆ ಆದರ ಉತ್ತರವು ನನಗೆ ಹೊಳೆಯಲಿಲ್ಲವಲ್ಲ!' ಎಂದು ಚಿಂತಿಸುತ್ತಿದ್ದರು.

ಅದೇ ದಿನ ಸಂಜೆ ಮೂವರೂ ಒಟ್ಟುಗೂಡಿ ಗಾಳಿ ಸೇವನೆಗೆ ಹೋಗುತ್ತಿರುವಾಗ ಯಾರೋ ಸ್ನೇಹಿತರು ಸದಾಶಿವರಾಯರಿಗೆ ಆ ಊರಿಗೆ ಭಗವನ್ನಾಮಾನಂದರೆಂಬ ಸಾಧುಗಳು ಬಂದಿದ್ದಾರೆಂದೂ ಅಧ್ಯಾತ್ಮವಿಚಾರದ ಪ್ರಶ್ನೆಗಳಿಗೆ ಮಾತ್ರ ಉತ್ತರಿಸುವರೆಂದೂ ಉಳಿದ ಕಾಲದಲ್ಲಿ ಮೌನದಿಂದಿರುವರೆಂದೂ ತಿಳಿಸಿದರು. ಸದಾಶಿವರಾಯರಿಗೆ ಕುತೂಹಲವು ಕೆರಳಿ ತಮ್ಮ ಪತ್ನಿ ಹಾಗೂ ಪುತ್ರನೊಡಗೂಡಿ ಸಾಧುಗಳ ದರ್ಶನಕ್ಕೆ ಹೋದರು. 'ದರ್ಶನಾದೇವ ಸಾಧವಃ' ಎಂದಂತೆ ಆ ಸಾಧುಗಳು ರಾಯರನ್ನು ಕಂಡೊಡನೆ 'ಅಪ್ಪ ನಿನ್ನ ಮನಸ್ಸಿನಲ್ಲಿರುವ ಸಂಶಯವನ್ನು ಈಗಲೆ ಪರಿಹರಿಸುವೆನು; ಕೇಳು. ಕರ್ಮಗಳನ್ನು ಲೌಕಿಕವೈದಿಕಗಳೆಂದು ವಿಂಗಡಿಸಿರುವದು ಕೇವಲ ವ್ಯವಹಾರ ಮಾತ್ರ. ಎಲ್ಲಾ ಕ್ರಿಯೆಗಳೂ ಆ ಭಗವಂತನ ಪ್ರೇರಣೆಯಿಂದಲೇ ಜರುಗುತ್ತವೆ. ಹೀಗಿರುವಾಗ ನಾವು ಕರ್ಮಗಳಿಗಿಂತ ಅವುಗಳ ಹಿಂತಡಿಕೆಯಾದ ಭಗವಂತನಲ್ಲಿ ಮನಸ್ಸಿಡುವದೇ ಕರ್ಮಯೋಗವು. ಯಾವ ಕರ್ಮವನ್ನೇ ಮಾಡಲಿ, ಪ್ರತಿಕ್ಷಣವೂ ಫಲವನ್ನೇ ಅನುಸಂಧಾನ ಮಾಡುತ್ತಿದ್ದರೆ ಅದು ನಡೆದೀತೆ? ಉದಾಹರಣೆಗೆ: ಒಬ್ಬ ಸಂಗೀತವಿದುಷಿಯು ಭಾರಿ ಕಚೇರಿ ಮಾಡುತ್ತಿರುವಾಗ ಪ್ರತಿ ಅರ್ಧಗಂಟೆಗೂ ದುಡ್ಡೆಷ್ಟಾಯಿತೆಂದು ಚಿಂತಿಸುತ್ತಿದ್ದರೆ ಆಕೆಯ ಸಂಗೀತವು ಯಶಸ್ವಿಯಾದೀತೆ? ಹೀಗೆಯೇ ವೇತನವನ್ನೇ ಪ್ರತಿದಿನವೂ ಚಿಂತಿಸುವವನು ಬ್ಯಾಂಕ್ ಕೆಲಸ ಮಾಡಲಾದೀತೆ? ಆದ್ದರಿಂದ ಕರ್ತವ್ಯಕರ್ಮವನ್ನೇ ಭಗವಂತನೆಂದು ಭಾವಿಸಿ Work is Worship ಎಂದಂತೆ ಭಗವಂತನ ಪೂಜೆಯಾಗಿ ಮಾಡಿದಲ್ಲಿ ದೇವರು ಮೆಚ್ಚುವನು' ಎಂದು ಹೇಳುತ್ತಿದ್ದಂತೆಯೇ ಮೌನವನ್ನು ಧರಿಸಿದರು. ರಾಯರು ಸಂತುಷ್ಟರಾಗಿ ಸಪರಿವಾರರಾಗಿ ಹಿಂದಿರುಗಿದರು.

## 42. ಸಂಕಲ್ಪತ್ಯಾಗ

### (ಜೂನ್ 1975)

'ವಿಷಯಗಳಲ್ಲಿಯೂ ಅವುಗಳ ಪ್ರಾಪ್ತಿಗಾಗಿ ಮಾಡಬೇಕಾದ ಕರ್ಮಗಳಲ್ಲಿಯೂ ಆಸಕ್ತನಾಗದೆ ಮನಸ್ಸಿನಲ್ಲಿರುವ ಸಂಕಲ್ಪಗಳನ್ನು ತ್ಯಾಗಮಾಡಿದವನೇ ಜ್ಞಾನಕ್ಕೆ ತಕ್ಕವನಾಗುವನು' ಎಂದು ಗೀತೆಯಲ್ಲಿ ಹೇಳಿರುವ ವಿಷಯವನ್ನು ರಾಮರಾಯರು ವಿವರಿಸುತ್ತಿದ್ದರು. ಅದನ್ನು ಕೇಳಿದ ಶಂಕರರಾಯರು 'ಅದು ಹೇಗೆ ಸಾಧ್ಯ? ಊಟ, ತಿಂಡಿ, ಬಟ್ಟೆ, ಮನೆ–ಎಲ್ಲರಿಗೂ ಬೇಕಲ್ಲವೆ? ಅವುಗಳನ್ನು ಸಂಪಾದಿಸಲು ಯೋಚಿಸದೆ, ಸಂಕಲ್ಪಗಳನ್ನು ಮಾಡದೆ ಹೇಗೆ ಸಾಧ್ಯ? ಆದ್ದರಿಂದ ಬದುಕಿರುವವರೆಗೂ ಸಂಕಲ್ಪ ತ್ಯಾಗವು ಅಸಾಧ್ಯವೇ ಸರಿ' ಎಂದರು. ಮತ್ತೊಬ್ಬರಾದ ಶ್ರೀನಿವಾಸರಾಯರು 'ಇದೆಲ್ಲ

ಯಾರೋ ಯೋಗಿಗಳು, ಅಥವಾ ಸಮಾಧಿನಿಷ್ಠರಿಗೆ ಹೇಳಿದ್ದು; ಸಾಮಾನ್ಯರಿಗಲ್ಲ ಎಂದರು. ಇನ್ನೊಬ್ಬರಾದ ಕೇಶವರಾಯರು 'ಹಾಗಾದರೆ ಗೀತೋಪದೇಶವು ಸಂಸಾರಿಗಳಾದ ನಮ್ಮಂಥವರಿಗಲ್ಲವೆನ್ನಿ' ಎಂದರು. ಅದಕ್ಕೆ ರಾಮರಾಯರು 'ಹಾಗಲ್ಲ, ಯೋಗಿಗಳು, ಹುಚ್ಚರು–ಮುಂತಾದವರಿಗೆ ಸಂಸಾರಬಾಧೆಯೇ ಇರುವದಿಲ್ಲ, ಅವರಿಗೇಕೆ ಬೇಕು, ಈ ಉಪದೇಶ? ಸಂಸಾರಿಗಳಾದ ನಮಗೇ ಇದರ ಅಗತ್ಯವಿದೆ; ಆದರೆ ಇದನ್ನು ಸಾಧಿಸಲು ಏನೋ ದಾರಿಯಿರಬೇಕು; ಯೋಚಿಸೋಣ'–ಎನ್ನುವಷ್ಟರಲ್ಲೇ ಒಬ್ಬರು ಸಾಧುಗಳು ಎದುರಿಗೇ ಬಂದರು. ಅವರಿಗೆ ವಿಷಯಗಳನ್ನೆಲ್ಲ ತಿಳಿಸಿದ ಬಳಿಕ ಅವರು ಹೀಗೆಂದರು:–

''ಅಯ್ಯ ಜಿಜ್ಞಾಸುಗಳಿರಾ, ಸಂಕಲ್ಪತ್ಯಾಗವು ಮುಖ್ಯಾರ್ಥದಲ್ಲಿ ಸಂಸಾರಿಗಳಿಗೆ ಸಾಧ್ಯವಿಲ್ಲ; ಅದು ವಿವೇಕವೈರಾಗ್ಯನಿಷ್ಠರಾದ ಉತ್ತಮಾಧಿಕಾರಿಗಳಿಗೆ ಮಾತ್ರ ದಕ್ಕುವದಾಗಿದೆ. ಆದರೆ ಮತ್ತೊಂದು ರೀತಿಯಿಂದ ನೀವೂ ಸಂಕಲ್ಪತ್ಯಾಗಮಾಡಬಹುದು. ನಿಮ್ಮೆಲ್ಲರ ಹೃದಯದಲ್ಲಿಯೂ ನಿಮ್ಮ ಸಂಕಲ್ಪಗಳೆಲ್ಲಕ್ಕೂ ಸಾಕ್ಷಿಯಾಗಿ ಭಗವಂತನಿದ್ದಾನೆ. ಅವನಿಂದಲೇ ಮನಸ್ಸು ಪ್ರೇರಿತವಾಗಿ ವ್ಯಾಪಾರ ಮಾಡುತ್ತದೆ. ಆದ್ದರಿಂದ ಈಗ ನೀವುಗಳು ವ್ಯವಹಾರದಲ್ಲಿ 'ನನಗೆ ಅದು ಬೇಕು, ಇದು ಬೇಕು, ನಾನು ಹೀಗೆ ಮಾಡುತ್ತೇನೆ, ಇಂಥದ್ದು ಮಾಡುವದಿಲ್ಲ' ಎಂದು ಹಟ ಹಿಡಿಯುವದಕ್ಕಿಂತ 'ಭಗವಂತ, ಈ ಹೃದಯವು ನಿನ್ನದು; ಇದರಲ್ಲಿರುವ ಮನಸ್ಸು, ಸಂಕಲ್ಪ, ಎಲ್ಲವೂ ನಿನ್ನದೇ; ನೀನು ನಿಯೋಗ ಮಾಡಿದಂತೆ ನಾನು ನಡೆಯುತ್ತೇನೆ. ನನಗೆ ಯಾವದು ಒಳ್ಳೆಯದು, ಯಾವದು ಕೆಟ್ಟದ್ದು ತಿಳಿಯದು; ಆದ್ದರಿಂದ ಇನ್ನು ಮುಂದೆ ನನ್ನ ಕಾಮನೆಗಳೆಲ್ಲವನ್ನೂ ನಿನಗೇ ಒಪ್ಪಿಸಿರುವೆನು. ನೀನೇ ನನ್ನ ಹೃದಯಸಾರಥಿಯಾಗಿ ಜೀವನರಥವನ್ನು ನಡೆಯಿಸು'–ಎಂದು ಅರ್ಪಿಸಿಬಿಡುವದೇ ಸಂಕಲ್ಪತ್ಯಾಗವು. ಆಗ ನಿಮ್ಮ ಸಂಕಲ್ಪಗಳಿಗೆ ಸತ್ಯಸಂಕಲ್ಪನಾದ ಭಗವಂತನ ಬೆಂಬಲವು ದೊರೆತು ಅವು ಪರಿಪೂರ್ಣವಾಗಿ ಕೊನೆಗೆ ನಿಃಸಂಕಲ್ಪರಾಗಿ ಸುಖಿಗಳಾಗುವಿರಿ; ಯೋಚಿಸಿರಿ'' ಎಂದು ಹೇಳುತ್ತಿರುವಾಗಲೇ ಅದೃಶ್ಯರಾಗಿಬಿಟ್ಟರು.

## 43. ಸ್ವಕರ್ಮಣಾ ತಮಭ್ಯರ್ಚ್ಯ

(ಆಗಸ್ಟ್ 1975)

ಗೋವಿಂದಯ್ಯನೂ ಸಿದ್ದಪ್ಪನೂ ಬಾಲ್ಯಸ್ನೇಹಿತರು. ಒಂದೇ ಊರಿನವರೂ ಹೌದು. ಇಬ್ಬರೂ ದೊಡ್ಡವರಾದಮೇಲೆ ಎಲ್ಲೆಲ್ಲಿಯೋ ಇದ್ದುಕೊಂಡಿದ್ದರು. ಆದರೆ

ದೈವಕೃಪೆಯಿಂದಲೊ, ಎಂಬಂತೆ ಇಬ್ಬರೂ ರೈಲ್ವೆ ಇಲಾಖೆಯಲ್ಲೇ ಕೆಲಸಕ್ಕೆ ಸೇರಿದ್ದರು. ಇಬ್ಬರೂ ಅಷ್ಟೇನೂ ವಿದ್ಯಾವಂತರಲ್ಲವಾದ್ದರಿಂದ ಸ್ಟೇಷನ್ನುಗಳಲ್ಲಿ ಪೋರ್ಟರುಗಳಾಗಿ ಕರ್ತವ್ಯನಿರ್ವಹಣೆಯನ್ನು ಮಾಡುತ್ತಿದ್ದರು. ಆಗಾಗ್ಗೆ ಬೇರೆಬೇರೆಯ ಊರುಗಳಿಗೆ ವರ್ಗವಾಗುತ್ತಿದ್ದುದರಿಂದ ಎಷ್ಟೋ ವರ್ಷಗಳು ಒಬ್ಬರಿಗೊಬ್ಬರಿಗೆ ಭೇಟಿಯೇ ಇರಲಿಲ್ಲ. ಕೊನೆಗೆ ಒಂದು ಬಾರಿ ಇಬ್ಬರಿಗೂ ಒಂದೇ ಊರಿಗೆ ವರ್ಗವಾಯಿತು. ಆ ವೇಳೆಗಾಗಲೇ ಒಬ್ಬರನ್ನೊಬ್ಬರು ಗುರುತು ಹಿಡಿಯಲಾರದಷ್ಟು ಬದಲಾಯಿಸಿದ್ದರು. ಆದರೂ ಒಂದು ದಿನ ಇಬ್ಬರೂ ಸೇರಿದಾಗ ಹಳೆಯ ಪರಿಚಯವೂ ಸ್ನೇಹವೂ ಮತ್ತೆ ಬೆಳೆಯಿತು.

ಗೋವಿಂದಯ್ಯನು ಬಾಲ್ಯದಿಂದಲೂ ಅಧ್ಯಾತ್ಮದ ಕಡೆಗೆ ಒಲವುಳ್ಳವನಾಗಿದ್ದುದರಿಂದ ತಾನು ಇದ್ದಸ್ಥಳದಲ್ಲಿ ಭೇಟಿಯಾಗುವ ಸಾಧುಸತ್ಪುರುಷರುಗಳನ್ನು ಪರಿಚಯ ಮಾಡಿಕೊಳ್ಳುತ್ತಿದ್ದನು. ಕೆಲವು ವೇಳೆ ಬಿಡುವಿದ್ದಾಗ ಅಂಥವರ ಉಪದೇಶಗಳನ್ನು ಕೇಳುತ್ತಿದ್ದುದೂ ಉಂಟು. ಆದರೂ ಅವನಿಗೆ ಸರ್ಕಾರಿನೌಕರಿಯ ನಿರ್ಬಂಧದಿಂದ ಮನಸ್ಸಿದ್ದರೂ ಯಾವ ಅಧ್ಯಾತ್ಮಸಾಧನವನ್ನೂ ಮಾಡಲು ಹೆಚ್ಚು ಅವಕಾಶವಾಗುತ್ತಿರಲಿಲ್ಲ. ಇದೊಂದು ಕೊರತೆಯು ಅವನನ್ನು ಬಾಧಿಸುತ್ತಿತ್ತು. ಆದರೂ ತನ್ನ ಆಪ್ತರೊಡನೆ ಬಿಡುವಾದಾಗಲೆಲ್ಲ ಏನಾದರೊಂದು ಪುರಾಣಕಥೆಯನ್ನೋ ಮಹಾತ್ಮರಚರಿತ್ರೆಯನ್ನೋ ಹೇಳುತ್ತಾ ಕಾಲವನ್ನು ಕಳೆಯುತ್ತಿದ್ದನು. ಸಿದ್ದಪ್ಪನಿಗೆ ಗೋವಿಂದಯ್ಯನ ವಿಷಯದಲ್ಲಿ ಗೌರವವು ಮೂಡಲು ಇದು ಕಾರಣವಾಗಿತ್ತು.

ಒಂದು ದಿನ ಇಬ್ಬರೂ ಸಕಾಲಕ್ಕೆ ತಮ್ಮ ಕರ್ತವ್ಯದ ಮೇಲೆ ಸ್ಟೇಷನ್ನಿಗೆ ಬರುವ ವೇಳೆಗೆ ಸರಿಯಾಗಿ ಬಂದ ರೈಲಿನಿಂದ ನಾರಾಯಣ! ಎಂದು ಧ್ವನಿ ಮಾಡುತ್ತಾ ಒಬ್ಬ ಸಂನ್ಯಾಸಿಗಳು ಇಳಿದರು. ಇಬ್ಬರಿಗೂ ಅವರನ್ನು ನೋಡಿ ಆನಂದವಾಯಿತು. ಆ ಸಂನ್ಯಾಸಿಗಳು ಎಲ್ಲಿಗೂ ಹೋಗದೆ ಪ್ಲಾಟುಫಾರಂನಲ್ಲಿಯೇ ಸ್ವಲ್ಪ ದೂರದಲ್ಲಿ ಮರದಡಿಯಲ್ಲಿದ್ದ ಕಲ್ಲುಬೆಂಚಿನ ಮೇಲೆ ಕುಳಿತರು. ಇವರಿಬ್ಬರೂ ತಮ್ಮ ಕರ್ತವ್ಯಗಳನ್ನು ಮುಗಿಸಿ ಸ್ವಲ್ಪ ಬಿಡುವು ಮಾಡಿಕೊಂಡು ಸ್ಟೇಷನ್‌ಮಾಸ್ತರರ ಅಪ್ಪಣೆ ಪಡೆದು ಆ ಸಂನ್ಯಾಸಿಗಳಿದ್ದಲ್ಲಿಗೆ ಹೋಗಿ ನಮಸ್ಕರಿಸಿದರು. ಅವರು ಗೋವಿಂದಯ್ಯನನ್ನು ಕುರಿತು 'ಅಪ್ಪ! ನಿನಗೆ ಅಧ್ಯಾತ್ಮಸಾಧನವನ್ನು ಮಾಡಲು ವೇಳೆಯಿಲ್ಲವೆಂಬ ಕೊರಗು ಇದೆಯಲ್ಲವೆ?' ಎಂದ ಕೂಡಲೆ ಗೋವಿಂದಯ್ಯನಿಗೆ ಆಶ್ಚರ್ಯವಾಯಿತು. ತನ್ನ ಮುಖವನ್ನು ಕಂಡ ಕೂಡಲೆ ಮನಸ್ಸಿನಲ್ಲಿದ್ದುದನ್ನು ಹೇಳಿದ ಆ ಸಂನ್ಯಾಸಿಗಳ ವಿಷಯಕ್ಕೆ ಗೋವಿಂದಯ್ಯನಿಗೆ ತುಂಬ ಗೌರವವುಂಟಾಯಿತು. ಸಂನ್ಯಾಸಿಗಳು ಮುಂದುವರೆದು ಇಂತೆಂದರು:

''ಅಣ್ಣಗಳಿರ, ನೀವಿಬ್ಬರೂ ಇರುವ ಇಲಾಖೆಯಲ್ಲಿ ಅಧ್ಯಾತ್ಮಚಿಂತನೆಗೆ ಬೇಕಾದಷ್ಟು ಅವಕಾಶವಿದೆ. ನೀವು ಪ್ರತಿದಿನವೂ ನಿಮ್ಮಲ್ಲಿಗೆ ಬರುವ ಮತ್ತು ಹೊರಡುವ ರೈಲುಗಳು, ಗೂಡ್ಸುಗಾಡಿಗಳನ್ನು ನಿಮ್ಮ ಒಳಗಣ್ಣಿನಿಂದ ನೋಡುವದನ್ನು ಅಭ್ಯಾಸ ಮಾಡಿರಿ. ಹೇಗೆಂದರೆ: ನಿಮ್ಮ ರೈಲುಗಳನ್ನೇ ನೀವು ಭಗವಂತನೆಂತ ಭಾವಿಸಿರಿ. ರೈಲುಗಾಡಿಗಳಲ್ಲಿ ಮುಂಭಾಗದಲ್ಲಿರುವ ಎಂಜಿನ್ನನ್ನು ನೋಡಿರಿ. ಅದರಲ್ಲಿ ಯಾವಾಗಲೂ ನೀರು, ಬೆಂಕಿ–ಇದ್ದೇ ಇರುತ್ತದೆ. ಭಗವಂತನ ವಿಭೂತಿಗಳಾದ ಜಲ, ತೇಜಸ್ಸುಗಳು ಯಾವಾಗಲೂ ಪವಿತ್ರವಾದವುಗಳು. ಆದ್ದರಿಂದ ಎಂಜಿನ್ನು ಭಗವಂತನ ಒಂದು ಪವಿತ್ರವಾದ ದೇಹವೆಂತ ಭಾವಿಸಿರಿ. ಇನ್ನು ರೈಲು ಹೊರಡುವಾಗ ಎಂಜಿನ್ನು ಸಿಳ್ಳೆ ಹಾಕುವದು ಸರಿಯಷ್ಟೆ. ಅದನ್ನು ಅನುಸಂಧಾನ ಮಾಡಿದರೆ 'ಓಂ' ಎಂದೇ ಕೇಳಬಂದೀತು. ದೀರ್ಘವಾದ 'ಓಂ' ಎಂಬ ಮಂತ್ರೋಚ್ಚಾರಣೆಯೇ ಇದೆಂತ ಭಾವಿಸಿರಿ. ಇನ್ನು ರೈಲು ಬರುವ ಮುಂಚೆ ನೀವು ಅದರ ಆಗಮನವನ್ನು ಸೂಚಿಸಲು ಗಂಟೆ ಹೊಡೆಯಬೇಕಷ್ಟೆ! ಇದನ್ನು ದೇವರ ಪೂಜೆಯ ಆರಂಭದಲ್ಲಿ ಮಾಡುವ ಘಂಟಾನಾದವೆಂತ ತಿಳಿಯಿರಿ. ದೇವರ ಉತ್ಸವವು ಬರುವಾಗ ಎಲ್ಲರೂ ಭಕ್ತಿಯಿಂದ ಕೈಕಟ್ಟಿಕೊಂಡು ನಿಲ್ಲುವಂತೆ ರೈಲು ಬರುವಾಗ ಸ್ಟೇಷನ್‌ಮಾಸ್ಟರ್ ಮುಂತಾಗಿ ಎಲ್ಲ ನೌಕರರೂ ಸಮವಸ್ತ್ರಧಾರಿಗಳಾಗಿ ಕಾಯ್ದುಕೊಂಡು ನಿಂತಿರುವರಷ್ಟೆ! ಅವರನ್ನೆಲ್ಲ ಭಗವದ್ಭಕ್ತರೆಂತ ತಿಳಿಯಿರಿ.''

''ಇನ್ನು ಭಗವಂತನಿಗೆ ಬಡವರು, ಬಲ್ಲಿದರು, ಮೇಲು, ಕೀಳು, ಒಳ್ಳೆಯದು, ಕೆಟ್ಟದ್ದು–ಎಂಬ ಭೇದವಿಲ್ಲದೆ ಇರುವಂತೆ ರೈಲೂ ಕೂಡ ಯಾವ ಭೇದವನ್ನೂ ಎಣಿಸುವದಿಲ್ಲ. ಅದು ಟಿಕೇಟುಕೊಂಡವರು, ಕೊಳ್ಳದಿದ್ದವರು, ಶ್ರೀಮಂತರು, ಭಿಕ್ಷುಕರು, ಸಭ್ಯರು, ಅಪರಾಧಿಗಳು, ರೋಗಿಗಳು, ಆರೋಗ್ಯವಂತರು–ಎಲ್ಲರನ್ನೂ ಒಂದೇ ಸಮನೆ ಕೊಂಡೊಯ್ಯುವದು. ಗೂಡ್ಸ್‌ಗಾಡಿಯು ಧಾನ್ಯಗಳು, ವಸ್ತ್ರಗಳು–ಮುಂತಾದ ಬೆಲೆ ಬಾಳುವ ಪದಾರ್ಥಗಳಂತೆಯೇ ಚರ್ಮ, ಮಾಂಸ, ಗೊಬ್ಬರ ಎಲ್ಲವನ್ನೂ ಒಯ್ಯುವದು. ರೈಲಿಗೆ ಯಾವ ವಸ್ತುಗಳಬಗ್ಗೆಯೂ ತಾರತಮ್ಯವಿಲ್ಲ. ಅದು ಎಲ್ಲರನ್ನೂ ಒಂದೇ ವೇಳೆಗೆ ಗೊತ್ತಾದ ಸ್ಥಳಕ್ಕೆ ಕರೆದೊಯ್ಯುವದು. ಅಂದಮೇಲೆ ಅದೇ ದೇವರೆಂತ ಭಾವಿಸ ಬಹುದಲ್ಲವೆ? ಆದ್ದರಿಂದ ನೀವು ಇನ್ನು ಮುಂದೆ ಈ ಮನೋಭಾವವನ್ನೇ ಬೆಳೆಸಿಕೊಳ್ಳುತ್ತಾ ರೈಲನ್ನೇ ದೇವರೆಂದೂ ನಿಮ್ಮ ಡ್ಯೂಟಿಯನ್ನೇ ಭಗವಂತನ ಆರಾಧನೆಯೆಂದೂ ತಿಳಿದು ಮಾಡುತ್ತಿರಿ. ಆಗ ನೀವು ಮಾಡುವ ಕರ್ಮವೆಲ್ಲವೂ ಭಗವದರ್ಚನೆಯಾದೀತು. ನಿಮ್ಮ ಮನಸ್ಸನ್ನು ಮಾತ್ರ ಯಾವಾಗಲೂ ಆ ಭಗವಂತನಲ್ಲೇ ನೆಲೆಗೊಳಿಸಿರಿ'' ಎಂದು ಹೇಳುತ್ತಿದ್ದಂತೆಯೇ ನಾರಾಯಣ! ಎಂದು ಘರ್ಜನೆ ಮಾಡುತ್ತಾ ಹೊರಟು ಅದೃಶ್ಯರಾಗಿ ಬಿಟ್ಟರು. ಗೋವಿಂದಯ್ಯನೂ ಸಿದ್ದಪ್ಪನೂ ಬೆರಗಾಗಿ ಸ್ವಲ್ಪ ಹೊತ್ತಾದ ನಂತರ ತಮ್ಮ ಕೆಲಸಗಳಿಗೆ ಹಿಂದಿರುಗಿದರು.

# 44. ದಾನಂ ದಾತೃವಶಂ ಪ್ರೋಕ್ತಮ್

## (ಸೆಪ್ಟೆಂಬರ್ 1975)

ಸುಬ್ಬಯ್ಯಶೆಟ್ಟರು ಭಾರಿ ಶ್ರೀಮಂತರಲ್ಲದಿದ್ದರೂ ಬಡವರೇನೂ ಆಗಿರಲಿಲ್ಲ. ದಾನಧರ್ಮಪರೋಪಕಾರಗಳಲ್ಲಿ ಅವರು ಸಾಕಷ್ಟು ಪ್ರಸಿದ್ಧರೇ ಆಗಿದ್ದರು. ಆಗಾಗ್ಗೆ ತಮ್ಮ ಮನೆಯಲ್ಲಾಗಲೀ ದೇವಾಲಯಗಳಲ್ಲಾಗಲೀ ಏನಾದರೊಂದು ಅನುಷ್ಠಾನವನ್ನು ಏರ್ಪಡಿಸುವದು, ಪೂಜಾವ್ರತಾದಿಗಳನ್ನು ಕೈಗೊಳ್ಳುವದು, ದಾನಧರ್ಮಗಳನ್ನು ಮಾಡುವದು–ಇವು ಅವರ ಹವ್ಯಾಸವಾಗಿತ್ತು. ಕೆಲವು ಸಂದರ್ಭಗಳಲ್ಲಿ ಕೀರ್ತಿಗಾಗಿ ಮಾಡುತ್ತಿದ್ದುದೂ ಉಂಟು. ಇವರ ಕಾರ್ಯಗಳಲ್ಲಿ ಸಲಹೆಗಾರರಾಗಿ ಸ್ನೇಹಿತರಾಗಿದ್ದವರು ರಾಜಯ್ಯಶೆಟ್ಟರು. ಯಾವಾಗಲೂ ಸುಬ್ಬಯ್ಯಶೆಟ್ಟರು ರಾಜಯ್ಯಶೆಟ್ಟರನ್ನು ಕೇಳದೆ ಏನೊಂದು ಉತ್ಸವವನ್ನೂ ಏರ್ಪಡಿಸುತ್ತಿರಲಿಲ್ಲ. ರಾಜಯ್ಯಶೆಟ್ಟರ ಸ್ವಭಾವವು ಸ್ವಲ್ಪ ವಿಲಕ್ಷಣವಾದದ್ದು. ಎಲ್ಲಾ ಕಾರ್ಯಗಳಲ್ಲಿಯೂ ಅವರು ಮಿತವ್ಯಯಪದ್ಧತಿಯನ್ನೇ ಅನುಸರಿಸುತ್ತಿದ್ದರು. ಅದನ್ನೇ ಧಾರ್ಮಿಕ ಕಾರ್ಯಗಳ ವಿಚಾರಕ್ಕೂ ಅನ್ವಯಿಸುತ್ತಿದ್ದರು. ತನ್ನ ಸ್ನೇಹಿತರಿಗೂ ತಿಳಿವಳಿಕೆ ಕೊಡುವಾಗ ಈ ಸ್ವಭಾವವನ್ನು ಬಳಸಿಕೊಳ್ಳುತ್ತಿದ್ದರು.

ಒಂದು ಸಂದರ್ಭದಲ್ಲಿ ಸುಬ್ಬಯ್ಯಶೆಟ್ಟರು ಅನುಷ್ಠಾನವೊಂದನ್ನೇರ್ಪಡಿಸಿದರು. ಕಾರ್ಯಕ್ರಮದಂತೆ ಪೂಜೆ, ಜಪ, ಹೋಮ, ದಾನಾದಿಗಳ ವ್ಯವಸ್ಥೆಯೆಲ್ಲವೂ ಇತ್ತು. ಋತ್ವಿಜರೂ ಪುರೋಹಿತರೂ ಆಹ್ವಾನಿತರಾಗಿದ್ದರು. ಆದರೆ ಈ ಬಾರಿ ಅವರಿಗೆ ತಮ್ಮ ಅನುಷ್ಠಾನಕಾಲಕ್ಕೆ ಯಾರಾದರೊಬ್ಬ ಸಾಧುಗಳನ್ನು ಬರಮಾಡಿಕೊಳ್ಳಬೇಕೆಂಬ ಕುತೂಹಲವಿತ್ತು. ಆ ವೇಳೆಗೆ ಸರಿಯಾಗಿ ಹೃಷಿಕೇಶದ ಕಡೆಯಿಂದ 'ಉದಾರಚರಿತ' ರೆಂಬ ಸಾಧುಗಳೊಬ್ಬರು ಅವರ ಊರಿಗೆ ದಯಮಾಡಿಸಿದ್ದಾರೆಂತ ತಿಳಿಯಿತು. ಕೂಡಲೆ ಸುಬ್ಬಯ್ಯಶೆಟ್ಟರು ಸಾಧುಗಳ ಬಳಿಗೆ ಹೋಗಿ ಅವರ ದರ್ಶನವನ್ನು ಪಡೆದು ತಾವು ನಡೆಯಿಸುತ್ತಿರುವ ಅನುಷ್ಠಾನಕ್ಕೆ ದಯಮಾಡಿಸಬೇಕೆಂತ ಬೇಡಿಕೊಂಡರು. ಸಾಧುಗಳು ಬರುವುದಾಗಿ ಒಪ್ಪಿಕೊಂಡಾಗ ಸುಬ್ಬಯ್ಯಶೆಟ್ಟರ ಆನಂದಕ್ಕೆ ಪಾರವಿರಲಿಲ್ಲ.

ಅನುಷ್ಠಾನಗಳು ಮೂರು ದಿನಗಳ ಕಾಲ ಏರ್ಪಾಡಾಗಿತ್ತು. ಶಾಸ್ತ್ರೋಕ್ತರೀತಿಯಿಂದ ಆಚಾರ್ಯರೂ ಋತ್ವಿಜರೂ ಸೇರಿ ಪೂಜಾ ಜಪಹೋಮಾದಿಗಳನ್ನೆಲ್ಲ ನಡೆಯಿಸಿದರು. ಸಾಧುಗಳು ಪ್ರತಿದಿನವೂ ಹಾಜರಿರುತ್ತಿದ್ದರಾದರೂ ಮೌನವಾಗಿರುತ್ತಿದ್ದರು. ಪೂಜಾ ಸಾಮಗ್ರಿಗಳು, ದಾನಸಾಮಗ್ರಿಗಳು–ಮುಂತಾಗಿ ಎಲ್ಲವನ್ನೂ ಆಗಾಗ್ಗೆ ನೋಡುತ್ತಿದ್ದರು. ಪುರೋಹಿತರು ದಕ್ಷಿಣೆ ಕೇಳುತ್ತಿದ್ದುದು, ಸುಬ್ಬಯ್ಯಶೆಟ್ಟರು, ಚವಕಾಸಿಮಾಡಿ

ಕೊಡುತ್ತಿದ್ದುದನ್ನೂ ಒಂದೆರಡು ಸಲ ಗಮನಿಸಿದ್ದರು. ಅನುಷ್ಠಾನವೆಲ್ಲವೂ ಪೂರೈಸಿ ಕೊನೆಯ ದಿನ ಪೂರ್ಣಾಹುತಿಯಾದ ಅನಂತರ ದಾನಧರ್ಮಗಳಿಗೆ ಮುಂಚೆ ಸಾಧುಗಳ ಉಪದೇಶದ ಏರ್ಪಾಡಿತ್ತು. ಸಮಯಕ್ಕೆ ಸರಿಯಾಗಿ ಸಾಧುಗಳು ಉಪದೇಶವನ್ನು ಹೀಗೆ ಆರಂಭಿಸಿದರು.

''ಶೆಟ್ಟರೆ, ನಿಮ್ಮ ಧಾರ್ಮಿಕಬುದ್ಧಿಯನ್ನೂ ಕರ್ಮಶ್ರದ್ಧೆಯನ್ನೂ ನಾನು ತುಂಬ ಮೆಚ್ಚಿದ್ದೇನೆ. ಆದರೆ ನೀವು ಯಾವದನ್ನೂ ಸ್ವತಂತ್ರವಾಗಿ ಮಾಡದೆ ನಿಮ್ಮ ಸಲಹೆಗಾರರ ಇಷ್ಟದಂತೆ ನಡೆಯುತ್ತಿರುವದು ನನಗೆ ಸರಿಯಾಗಿ ತೋರುತ್ತಿಲ್ಲ. ಧಾರ್ಮಿಕ ಕಾರ್ಯಗಳಲ್ಲಿ ಯಾರ ಸಲಹೆಯನ್ನೂ ಕೇಳಬಾರದು. ಬಲಿರಾಜನು ತಾನು ದಾನಮಾಡುವಾಗ ಗುರುಗಳಾದ ಶುಕ್ರಾಚಾರ್ಯರು ಕೊಟ್ಟ ಸಲಹೆಯನ್ನು ಕೂಡ ತಿರಸ್ಕರಿಸಿದನು. **'ದಾ॒ನಂ ದಾತೃವಶಂ'** ಎಂಬಂತೆ ದಾನ ಮಾಡುವದು ಮಾಡುವವನ ಇಷ್ಟಕ್ಕೆ ಒಳಪಟ್ಟದ್ದೇ ಹೊರತು ಬೇರೆಯಲ್ಲ. ನಿಮ್ಮ ಸಲಹೆಗಾರರು ನಿಮಗೆ ಆಗಾಗ್ಗೆ ಹೇಳುತ್ತಿರುವ ಮಿತವ್ಯಯಬುದ್ಧಿಯು ಅನುಷ್ಠಾನದ ಶಕ್ತಿಯನ್ನೇ ಕಳೆದುಬಿಟ್ಟಿದೆ. ವಾಜಶ್ರವಸನೆಂಬಾತನು ಮಾಡಿದ ಗೋದಾನದಂತೆ ಇಲ್ಲಿ ಎಲ್ಲವೂ ನ್ಯೂನವಾಗಿದೆ. ಉಪಯೋಗಕ್ಕೆ ಬಾರದಂಥ ಅಗ್ಗವಾದ ಪದಾರ್ಥಗಳನ್ನೇ ಹೊಂದಿಸಿಕೊಂಡು ವಿತ್ತಶಾಠ್ಯದಿಂದ ಕೂಡಿ ಮಾಡುವ ಕರ್ಮವು ನಿಮಗೆ ವಿಪರೀತಫಲವನ್ನೇ ಕೊಟ್ಟೀತು. ನೀವು ಈ ಸಮಯದಲ್ಲಿ ಸ್ವಬುದ್ಧಿಯನ್ನು ಉಪಯೋಗಿಸಿ ದಾನಧರ್ಮಗಳಿಗೆ ಅತ್ಯುತ್ತಮವಾದ ವಸ್ತುಗಳನ್ನೇ ತರಬೇಕಾಗಿತ್ತು. ಈಗ ನೀವು ಬ್ರಾಹ್ಮಣರಿಗೆ ಕೊಡುತ್ತಿರುವ ವಸ್ತುಗಳು ತೀರ ಅನುಪಯುಕ್ತವಾಗಿವೆ. ಬ್ರಾಹ್ಮಣರನ್ನು ನೀವು **'ವಿಷ್ಣುಸ್ವರೂಪ'** ರೆಂತ ಪೂಜಿಸಿ ದಾನಮಾಡಬೇಕಲ್ಲವೆ? ದೇವರಿಗೆಂತಲೇ ಅರ್ಪಿಸುವ ವಸ್ತುಗಳು ನಾವು ಆಶೆಪಟ್ಟು ಆರಿಸಿತಂದ ಪದಾರ್ಥಗಳಿಗಿಂತಲೂ ಉತ್ತಮವಾಗಿರಬೇಕಲ್ಲವೆ? ಈ ಬಗ್ಗೆ ಮುಂದಾದರೂ ನೀವು ತಿದ್ದಿಕೊಳ್ಳಿರಿ.

''ಇನ್ನು ದಾನಕೊಡುವದು ತೆಗೆದುಕೊಂಡವನನ್ನು ಉದ್ಧಾರ ಮಾಡುವದಕ್ಕಲ್ಲ. ಸಾತ್ತ್ವಿಕದಾನವೆಂಬುದು ದೇಶಕಾಲಪಾತ್ರಗಳನ್ನರಿತು ಅನುಪಕಾರಿಯಾದವನಿಗೆ ಕೇವಲ ದಾನಕೊಡಬೇಕೆಂಬ ಬುದ್ಧಿಯಿಂದ ಮಾತ್ರ ಮಾಡತಕ್ಕದ್ದಾಗಿದೆ. ನೀವು ಮಾಡಿದ ವಿನಿಯೋಗವು ಪರಿಣಾಮದಲ್ಲಿ ಏನಾಗಬಹುದೆಂಬವರೆಗೂ ಆಲೋಚಿಸುವದು ಉತ್ತಮ. ಈ ದೃಷ್ಟಿಯಿಂದ ನೀವು ಒಬ್ಬ ಶ್ರೋತ್ರಿಯನಿಗೆ ಒಂದು ಪಂಚೆಯನ್ನು ದಾನ ಮಾಡಿದರೆ ಅವನು ಅದನ್ನುಟ್ಟು ಆಹ್ನಿಕಾದಿಗಳನ್ನು ಆಚರಿಸಿದರೆ ನಿಮಗೆ ನಿಜವಾಗಿಯೂ ದಾನದ ಫಲವು ದಕ್ಕುವದು. ಈ ಅರ್ಥದಲ್ಲಿ ನೀವು ದೇವರ ವಿಗ್ರಹಗಳನ್ನು

ಅಲಂಕರಿಸುವದಕ್ಕಿಂತ ಹೆಚ್ಚಿನ ಪುಣ್ಯವನ್ನು ಸಂಪಾದಿಸಿದಂತಾಯಿತು. ಆದ್ದರಿಂದ ನಿಮ್ಮ ಮನಃಪೂರ್ವಕವಾಗಿ, ಔದಾರ್ಯದಿಂದ, ಯಾರನ್ನೂ ಈ ಬಗ್ಗೆ ಸಲಹೆ ಕೇಳದೆ, ಅಥವಾ ಕೇಳಿದರೂ ನಿಮಗಿಂತ ಉದಾರಿಗಳಾದವರನ್ನು ಕೇಳಿ ಸರಿಯಾದ ದ್ರವ್ಯಗಳನ್ನು ಒದಗಿಸಿಕೊಂಡು ಶ್ರದ್ಧಾವಿತ್ತವಿಧಿಗಳನ್ನು ನ್ಯೂನವಿಲ್ಲದಂತೆ ಅನುಸರಿಸಿ ಕೀರ್ತಿಗಾಗಿ ಆಶೆಪಡದೆ ಚಿತ್ತಶುದ್ಧಿಗಾಗಿ ಅನುಷ್ಠಾನಗಳನ್ನು ಮಾಡಿರಿ. ನಿಮಗೆ ಕಲ್ಯಾಣವಾಗುವದು'' ಎಂದು ಹೇಳಿ ಮೌನವನ್ನು ಧರಿಸಿದರು.

ಆಗ ಸುಬ್ಬಯ್ಯಶೆಟ್ಟರು ತಮ್ಮ ಅಪರಾಧಕ್ಕಾಗಿ ಸ್ವಾಧುಗಳಲ್ಲಿ ಕ್ಷಮಾಪಣೆ ಕೇಳಿ ಆ ಸಾಧುಗಳನ್ನು ಪೂಜಿಸಿ ಅವರ ಸೂಚನೆಯಂತೆ ದಾನಧರ್ಮಗಳನ್ನು ಉತ್ತಮ ರೀತಿಯಿಂದ ನೆರವೇರಿಸಿದರು. ಮುಂದೆ ಎಂದೂ ಅವರು ರಾಜಯ್ಯಶೆಟ್ಟರ ಸಲಹೆಯನ್ನು ಕೇಳಲಿಲ್ಲ.

# 45. ದರ್ವೀ ಪಾಕರಸಂ ಯಥಾ

## (ಅಕ್ಟೋಬರ್ 1975)

ಶ್ಯಾಮಶಾಸ್ತ್ರಿಗಳು ಬಹು ದೊಡ್ಡವಿದ್ವಾಂಸರು. ಅವರ ತಂದೆಯವರೂ ಒಳ್ಳೆಯ ಶಾಸ್ತ್ರಜ್ಞರೇ ಆಗಿದ್ದರು. ಆದ್ದರಿಂದ ಚಿಕ್ಕವಯಸ್ಸಿನಲ್ಲೇ ಶ್ಯಾಮಶಾಸ್ತ್ರಿಗಳಿಗೆ ಉಪನಯನ ವಾದ ಅನಂತರ ಕ್ರಮವಾಗಿ ವೇದಾಧ್ಯಯನ, ಸಂಸ್ಕೃತಭಾಷಾಪರಿಚಯಗಳ ಅನಂತರ, ಶಾಸ್ತ್ರಪಾಠಗಳೂ ತಂದೆಯವರಿಂದಲೇ ಆಗಿತ್ತು. ಮುಂದೆ ಅವರು ಕಾಶೀಕ್ಷೇತ್ರಕ್ಕೆ ಹೋಗಿ ನ್ಯಾಯವ್ಯಾಕರಣಮೀಮಾಂಸಾದಿಶಾಸ್ತ್ರಗಳನ್ನೂ ಅಧ್ಯಯನಮಾಡಿ ವೇದಾಂತಶಾಸ್ತ್ರ ಪಾರಂಗತರೂ ಆದರು. ಅನೇಕ ವಿದ್ವತ್ ಸಭೆಗಳಲ್ಲಿ ಭಾಗವನ್ನು ವಹಿಸಿ ತಮ್ಮ ಪಾಂಡಿತ್ಯ ಪ್ರದರ್ಶನ ಮಾಡಿ ಕೀರ್ತಿಯನ್ನು ಸಂಪಾದಿಸಿದ್ದರು. ಕಡೆಗೆ ವಯಸ್ಸಾಗುತ್ತಾ ಬಂದಂತೆ ಅವರಿಗೆ ಯಾವದಾದರೊಂದು ತೀರ್ಥಕ್ಷೇತ್ರದಲ್ಲಿ ಆಯುಶ್ಯೇಷವನ್ನು ಕಳೆಯಬೇಕೆಂದು ಮನಸ್ಸಾಯಿತು. ಅವರಿಗೆ ಇದ್ದ ಒಬ್ಬನೇ ಮಗನು ತಂದೆಯ ವಿದ್ಯೆಯನ್ನು ಅನುಕರಣ ಮಾಡದಿದ್ದರೂ ಲೌಕಿಕ ವಿದ್ಯಾನಿಪುಣನಾಗಿ ಉನ್ನತ ಸರಕಾರಿಯ ಹುದ್ದೆಯಲ್ಲಿದ್ದನು. ಶಾಸ್ತ್ರಿಗಳಿಗೆ ನಡುವಯಸ್ಸಿನಲ್ಲೇ ಕುಟುಂಬವಿಯೋಗವಾಗಿದ್ದು ಮುಂದೆ ಅವರು ಮಗನೊಡನೆಯೇ ಇರುವ ಆಲೋಚನೆ ಮಾಡಿದ್ದರು. ಮಗನೂ ಸೊಸೆಯೂ ತಮ್ಮಲ್ಲಿ ಪೂರ್ಣಭಕ್ತಿಯುಳ್ಳವರಾಗಿದ್ದು ಪ್ರೇಮಪೂರ್ವಕವಾಗಿ ನೋಡಿಕೊಳ್ಳುತ್ತಿದ್ದುದರಿಂದಲೂ ಕೊನೆಗಾಲಕ್ಕೆ ಪುತ್ರನ ಸಾನ್ನಿಧ್ಯವು ಅಗತ್ಯವಾದ್ದರಿಂದಲೂ ಶಾಸ್ತ್ರಿಗಳು ಮಗನೊಡನೆಯೇ

ಇದ್ದುಕೊಂಡಿದ್ದರು. ದೈವಕೃಪೆಯಿಂದ ಅವರ ಮಗನಿಗೆ ಒಂದು ಸಲ ಉಜ್ಜಯಿನಿಯೆಂಬ ಸುಪ್ರಸಿದ್ಧವಾದ ತೀರ್ಥಕ್ಷೇತ್ರಕ್ಕೆ ವರ್ಗವಾಯಿತು. ಶ್ಯಾಮಶಾಸ್ತ್ರಿಗಳಿಗೆ ಇದರಿಂದ ಸಂತೋಷವೇ ಆಗಿತ್ತು.

ಒಂದು ದಿನ ಶಾಸ್ತ್ರಿಗಳು ಉಜ್ಜಯಿನೀಧರ್ಮಕ್ಷೇತ್ರದಲ್ಲಿ ನರ್ಮದಾಸ್ನಾನ ಮಾಡಿಕೊಂಡು ಬರುತ್ತಿರುವಾಗ ಆ ಊರಿಗೆ ಒಬ್ಬ ಮಠಾಧಿಪತಿಗಳು ದಯಮಾಡಿಸಿರುವದಾಗಿಯೂ ಅವರ ದರ್ಶನಕ್ಕೆ ಹೋಗೋಣವೆಂದೂ ಅವರ ಸ್ನೇಹಿತರಾದ ರಂಗಾಶಾಸ್ತ್ರಿಗಳು ಕರೆದರು. ಶ್ಯಾಮಶಾಸ್ತ್ರಿಗಳು ಒಪ್ಪಿ ಗುರುದರ್ಶನಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಂಡು ಹೊರಟರು. ಸಮಯಕ್ಕೆ ಸರಿಯಾಗಿ ಗುರುದರ್ಶನವೂ ಆಯಿತು. ಗುರುಗಳು ಶಾಸ್ತ್ರಿಗಳನ್ನು ಕಂಡ ಕೂಡಲೆ ಸಂಸ್ಕೃತಭಾಷೆಯಲ್ಲೇ ಮಾತನಾಡಿಸುತ್ತಾ 'ಕರೀಶ್ಯಾಮಶಾಸ್ತ್ರಿಗಳೆಂದರೆ ನೀವೇಯೊ? ಎಂದು ಕೇಳಿದರು. ಶಾಸ್ತ್ರಿಗಳು ಹೆಸರಿಗೆ ತಕ್ಕಂತೆ ಕಪ್ಪಗಿದ್ದುದು ನಿಜ. ಆದರೆ ಗುರುಗಳು ಹಾಗೆ ಸಂಬೋಧಿಸಿದುದಕ್ಕಾಗಿ ಬಹಳ ಆಶ್ಚರ್ಯವಾಯಿತು. ತಮ್ಮ ಪಾಂಡಿತ್ಯವಾಸನೆಯಿಂದ ಶಾಸ್ತ್ರಿಗಳು ಉತ್ತರಕೊಡುತ್ತಾ ''ಶ್ಯಾಮನೆಂದರೇ ಕಪ್ಪು ಎಂದರ್ಥ. ಆದ್ದರಿಂದ 'ಕರಿ' ಎಂಬ ವಿಶೇಷಣವು ವ್ಯರ್ಥವಲ್ಲವೆ?'' ಎಂದು ಗುರುಗಳಿಗೇ ಪ್ರಶ್ನೆ ಹಾಕಿಬಿಟ್ಟರು. ಕೂಡಲೆ ಗುರುಗಳು 'ಭವಾನ್ ಪಂಡಿತವ್ರುಂದೇ ಕರೀವ' ಎಂದು ಹೇಳಿದ್ದನ್ನು ಕೇಳಿ ಬೆರಗಾದರು. ಕರೀ ಎಂದರೆ ಸಂಸ್ಕೃತಭಾಷೆಯಲ್ಲಿ 'ಆನೆ' ಎಂದರ್ಥ. 'ಪಂಡಿತರುಗಳ ಗುಂಪಿನಲ್ಲಿ ನೀವು ಸಲಗನಂತೆ ಇದ್ದೀರಿ'–ಎಂಬ ಗುರುಗಳ ವಾಕ್ಯವು ಅಲ್ಲಿದ್ದವರನ್ನೆಲ್ಲ ತಲೆದೂಗುವಂತೆ ಮಾಡಿತು. ಗುರುಗಳ ಮಹಿಮೆಯನ್ನು ಅಷ್ಟರಿಂದಲೇ ಗುರುತಿಸಿದ ಶಾಸ್ತ್ರಿಗಳು ಮತ್ತೊಮ್ಮೆ ನಮಸ್ಕಾರ ಮಾಡಿ ಈ ದೀನನನ್ನು ಉದ್ಧಾರ ಮಾಡಬೇಕೆಂದು ಬೇಡಿಕೊಂಡರು. ಆಗ ಗುರುಗಳು ಇಂತೆಂದರು:

''ಶಾಸ್ತ್ರಿಗಳೆ, ನೀವು ಪೂರ್ಣ ವಿದ್ಯಾವಂತರು. ಅನುಷ್ಠಾನಪರರು. ಇವೆಲ್ಲನಮಗೆ ತುಂಬ ಮೆಚ್ಚುಗೆಯಾಗಿದೆ. ಆದರೆ ನಿಮ್ಮ ಪಾಂಡಿತ್ಯವು ಕೇವಲ ಭುಕ್ತಿಗಾಗಿಯೇ ವಿನಿಯೋಗವಾಗಿರುವದು ನಮಗೆ ಇಷ್ಟವಾಗಿಲ್ಲ. ಶಾಸ್ತ್ರಗಳನ್ನೆಲ್ಲ ಎಷ್ಟು ಓದಿದರೇನು? ಅದರ ಸಾರವನ್ನು ತಿಳಿಯದಿದ್ದರೆ ಆ ಪ್ರಯತ್ನಗಳೆಲ್ಲ ವ್ಯರ್ಥವೇ ಸರಿ. 'ಮಾನವ ಜನ್ಮವು ಬಂದಿರುವದು ಅದರಲ್ಲಿಯೂ ಬ್ರಾಹ್ಮಣ್ಯವು ದೊರೆತಿರುವದು–ಕ್ಷುದ್ರವಾದ ಕಾಮಗಳ ಭೋಗಕ್ಕಾಗಿ ಅಲ್ಲ. ಮತ್ತೇನೆಂದರೆ ಕಷ್ಟವಾದ ತಪಸ್ಸಿಗೂ ಮತ್ತು ಈ ದೇಹತ್ಯಾಗಾ ನಂತರ ಪಡೆಯಬೇಕಾದ ಅನಂತಸುಖಕ್ಕೂ ತಕ್ಕ ಸಾಧನಗಳನ್ನು ಮಾಡುವದಕ್ಕಾಗಿ ಬಂದಿದೆ' ಎಂದು ಮನುಸ್ಮೃತಿಕಾರರು ಹೇಳಿದ್ದು ನೆನಪಿದೆಯಷ್ಟೆ! ನೀವು ಓದಿರುವ

ಶಾಸ್ತ್ರಗಳ ಕೊನೆಯ ಮಜಲು ಯಾವದು? ಅವುಗಳ ಗುರಿ ಏನು? ಎಂಬುದನ್ನು ಈವರೆಗೆ ಯೋಚಿಸಿರುವಿರಾ? ಹಾಗಿಲ್ಲದಿದ್ದರೆ ನಿಮ್ಮ ಶಾಸ್ತ್ರಶ್ರಮವು ವ್ಯರ್ಥವಾದಂತೆಯೇ ಸರಿ. ದೊಡ್ಡ ಪಾತ್ರೆಯಲ್ಲಿ ಅಡುಗೆಯನ್ನು ಮಾಡುವಾಗ ಅದು ತಳಹಿಡಿಯಬಾರದೆಂತ ಆಗಾಗ್ಗೆ ಉದ್ದವಾದ ಸೌಟಿನಿಂದ ತೊಳಸುತ್ತಲೇ ಇರುವರಷ್ಟೆ? ಪಾಕವೆಲ್ಲ ಪೂರ್ಣವಾದ ಮೇಲೆ ಆ ಸೌಟನ್ನು 'ನೀನು ಬಹಳ ಸಲ ಮುಳುಗಿ ಎದ್ದೆಯಲ್ಲ, ಪಾಯಸವು ರುಚಿಯಾಗಿದೆಯೆ?' ಎಂದು ಕೇಳಿದರೆ ಸೌಟು ಉತ್ತರವನ್ನು ಕೊಡಬಲ್ಲದೆ? ಹಾಗೆ ನಿಜವನ್ನು ತಿಳಿಯದೆ ಶಾಸ್ತ್ರ ಪಾಂಡಿತ್ಯವನ್ನು ಸುಮ್ಮನೆ ಬೆಳೆಯಿಸಿಕೊಂಡಲ್ಲಿ ಯಾವ ಪುರುಷಾರ್ಥವು ದೊರಕೀತು?

''ಇನ್ನಾದರೂ ನೀವು ಶಾಸ್ತ್ರದ ಒಳಮರ್ಮವನ್ನು ತಿಳಿಯಲು ಪ್ರಯತ್ನ ಮಾಡಿರಿ. ನೀವು ಅಭ್ಯಾಸ ಮಾಡಿರುವ ವೇದಾಂತಶಾಸ್ತ್ರವು ಕೇವಲ ವಾದಕ್ಕಲ್ಲ, ಅದು ನಿಮ್ಮ ಆತ್ಮನನ್ನು ನೀವು ತಿಳಿಯಲು ಉಪಾಯವಾಗಿರುವದು. ವೇದಾಂತದಲ್ಲಿ ಹೇಳಿರುವಂತೆ ನನ್ನ ಆತ್ಮನು ನಿಜವಾಗಿಯೂ ಅಸಂಸಾರಿಯೆ? ನಿತ್ಯಶುದ್ಧಬುದ್ಧ ಮುಕ್ತಸ್ವಭಾವನೆ? ಅವನನ್ನು ಈಗಲೇ ಇಲ್ಲಿಯೇ ಕಂಡುಕೊಳ್ಳಬಹುದೆ? ಎಂಬುದನ್ನು ಮನನ ಮಾಡುತ್ತಾ ಬನ್ನಿರಿ. 'ಭಗವಂತ, ನಾನು ನಿನಗೆ ಶರಣು ಬಂದಿರುವೆನು. ಜಿಜ್ಞಾಸುಭಕ್ತನಾಗಿರುವೆನು; ನಿನ್ನ ತತ್ತ್ವವನ್ನು ನನಗೆ ತಿಳಿಯಿಸಿಕೊಟ್ಟು ನನ್ನ ಹೃದಯದಲ್ಲಿ ಜ್ಞಾನದೀಪವನ್ನು ಬೆಳಗಿಸಿ ಉದ್ಧಾರಮಾಡು' ಎಂದು ಬೇಡಿಕೊಳ್ಳಿರಿ. ನಿಮಗೆ ಕಲ್ಯಾಣವಾಗುವದು'' ಎಂದು ತಿಳಿಸಿದಾಗ ಶಾಸ್ತ್ರಿಗಳು ಕೃತಕೃತ್ಯನಾದೆ–ಎಂದು ಗುರುಚರಣದಲ್ಲೇ ತಮ್ಮ ಶಿರಸ್ಸನ್ನಿಟ್ಟು ವಂದಿಸಿದರು.

## 46. ಆಮನನ್ತಿ ಚೈನಮಸ್ಮಿನ್

### (ನವಂಬರ್ 1975)

ಸುಬ್ಬಾಶಾಸ್ತ್ರಿಗಳು ವೆಂಕಟಾಪುರದ ಸ್ಥಳಪುರೋಹಿತರು. ಅವರ ತಂದೆಯವರು ಅದೇ ವೃತ್ತಿಯಲ್ಲಿದ್ದವರು. ಚಿಕ್ಕಂದಿನಿಂದಲೂ ವೇದಾಧ್ಯಯನ, ಧರ್ಮಶಾಸ್ತ್ರ ಪ್ರಯೋಗಗಳ ಅಭ್ಯಾಸ, ಸ್ವಲ್ಪ ಜ್ಯೋತಿಷ–ಇವುಗಳನ್ನು ಬಲ್ಲವರಾಗಿದ್ದ ಸಂದರ್ಭಾನುಸಾರ ಕಾವೇರೀಮಾಹಾತ್ಮ್ಯ, ಗರುಡಪುರಾಣ, ಮುಂತಾದವುಗಳನ್ನು ಪ್ರವಚನ ಮಾಡುವದನ್ನೂ ಅಭ್ಯಾಸ ಮಾಡಿಕೊಂಡಿದ್ದರು. ಅಲ್ಪಸ್ವಲ್ಪ ಜಮೀನಿನಲ್ಲಿ ಉತ್ಪತ್ತಿಯೂ ಬರುತ್ತಿತ್ತು, ಆಚಾರವಿಚಾರಗಳಲ್ಲಿಯೂ ವ್ಯವಹಾರದಲ್ಲಿಯೂ ನಿಪುಣರಾಗಿದ್ದ ಶಾಸ್ತ್ರಿಗಳು ಸುತ್ತಮುತ್ತ ಒಳ್ಳೆಯ ಹೆಸರನ್ನೂ ಸಂಪಾದಿಸಿದ್ದರು. ಆದರೆ

ಎಲ್ಲಿಗೂ ಪರಸ್ಥಳಗಳಿಗೆ ಯಾತ್ರೆ ಹೋದವರಲ್ಲ. ತೀರ್ಥಕ್ಷೇತ್ರಗಳ ವಿಷಯದಲ್ಲಿ ಅವರಿಗೆ ಗೌರವವಿದ್ದಿತಾದರೂ ಪರಸ್ಥಳಗಳಲ್ಲಿ ತಮ್ಮ ಸದಾಚಾರಗಳಿಗೆ ಲೋಪವುಂಟಾಗ ಬಹುದೆಂಬ ಭಯ. ಕ್ಷೇತ್ರಗಳು ಇತ್ತೀಚೆಗೆ ಕೇವಲ ಪ್ರವಾಸಿಗಳ ಆಕರ್ಷಣಾಸ್ಥಳಗಳಾಗಿ ಮಾರ್ಪಡುತ್ತಿರುವದು, ಅಲ್ಲಿಯ ಆಡಳಿತಗಳಲ್ಲಿ ಹಣದಪಾತ್ರವೇ ಮುಖ್ಯವಾಗಿರುವದು– ಇವು ಅವರಿಗೆ ಹಿಡಿಸಿರಲಿಲ್ಲ. ಆದರೆ ಅನಾದಿಕಾಲದಿಂದಲೂ ಹಿಂದೂಗಳಿಗೆ ಯಾತ್ರಾಸ್ಥಳವಾಗಿದ್ದು ಸುಪ್ರಸಿದ್ಧವಾಗಿರುವ ಕಾಶಿಯನ್ನಾದರೂ ಒಂದು ಬಾರಿ ಯಾತ್ರೆ ಮಾಡಿ ಬರಬೇಕೆಂದು ಅವರ ಧರ್ಮಪತ್ನಿ ನಾಗಮ್ಮನವರು ಆಗಾಗ್ಗೆ ಜ್ಞಾಪಿಸುತ್ತಿದ್ದರು. ಕಾಲಕರ್ಮಸಂಯೋಗವೂ ಕೂಡಿದ್ದರಿಂದ ಒಂದು ಬಾರಿ ಪತ್ನೀಸಮೇತರಾಗಿ ಕಾಶಿಯಾತ್ರೆಗೆ ಹೊರಟೇಬಿಟ್ಟರು.

ಶ್ರೀ ಶಾಸ್ತ್ರಿಗಳು ಯಾತ್ರಾಕ್ರಮದಿಂದ ನಡುನಡುವೆ ಸಿಕ್ಕಿದ ಪುಣ್ಯಸ್ಥಳವನ್ನೆಲ್ಲ ಸಂದರ್ಶನಮಾಡುತ್ತಾ ಕಾಶಿಯನ್ನು ತಲುಪಿದರು. ಅಲ್ಲಿ ಗಂಗಾಸ್ನಾನ, ವಿಶ್ವೇಶ್ವರನ ದರ್ಶನ–ಮುಂತಾಗಿ ಎಲ್ಲವೂ ಆಯಿತು. ತೀರ್ಥಯಾತ್ರಾವಿಧಿಗಳನ್ನು ಪೂರೈಸಿ ಯಥಾಶಕ್ತಿಯಾಗಿ ದಾನಧರ್ಮಗಳನ್ನೂ ನೆರವೇರಿಸಿದರು. ಆಗಾಗ್ಗೆ ತಮ್ಮ ಆಚಾರವಿಚಾರಗಳಿಗೂ ಆಯಾ ಸ್ಥಳದ ನಡೆವಳಿಕೆಗಳಿಗೂ ವ್ಯತ್ಯಾಸವು ಕಂಡುಬರುತ್ತಾದರೂ ಕ್ಷೇತ್ರವೆಂಬ ಭಕ್ತಿಭಾವದಿಂದ ಮನಸ್ಸನ್ನು ಸರಿಪಡಿಸಿಕೊಳ್ಳುತ್ತಿದ್ದರು. ಹೀಗೆ ಯಾತ್ರೆಯನ್ನು ಪೂರೈಸಿಕೊಂಡು ಗಂಗೆಯನ್ನು ತೆಗೆದುಕೊಂಡು ಬಂದು ರಾಮೇಶ್ವರನಿಗೂ ಅಭಿಷೇಕ ಮಾಡಿಸಿ ತಮ್ಮ ಸಂಕಲ್ಪವನ್ನು ಪೂರ್ಣಗೊಳಿಸಿಕೊಂಡು ಸುಖವಾಗಿ ಊರನ್ನು ಸೇರಿದರು. ಸ್ಥಳದಲ್ಲಿಯೂ ಒಂದು ದಿನ ಗಂಗಾಪೂಜೆ ಸಮಾರಾಧನೆಗಳನ್ನು ಏರ್ಪಡಿಸಿ ಎಲ್ಲವನ್ನೂ ಸಿದ್ಧಗೊಳಿಸಿಕೊಂಡರು. ಆದರೂ ಅವರಿಗೆ ಯಾತ್ರೆ ಮಾಡುವ ಮುಂಚೆ ಇದ್ದ ಮನಸ್ಸಿನ ಸ್ಥಿತಿಗೂ ಈಗ ಯಾತ್ರೆಯನ್ನು ಮುಗಿಸಿಕೊಂಡು ಬಂದ ಮೇಲೂ ತಮ್ಮಲ್ಲಿ ಏನೂ ಬದಲಾವಣೆಯಾಗದಿರುವ ವಿಷಯಕ್ಕೂ ತುಂಬ ಆತಂಕವುಂಟಾಗಿತ್ತು. ತೀರ್ಥಕ್ಷೇತ್ರಯಾತ್ರೆಯ ಪರಿಣಾಮವೇನೆಂಬುದನ್ನು ತಿಳಿಯಬೇಕೆಂದು ಹಂಬಲಿಸುತ್ತಿದ್ದರು.

ಹೀಗಿರುವಲ್ಲಿ ಶ್ರೀಶಾಸ್ತ್ರಿಗಳು ಗಂಗಾಸಮಾರಾಧನೆಯನ್ನು ಏರ್ಪಾಡು ಮಾಡಿದ ದಿನ ಆ ಊರಿಗೆ ಅನಿರೀಕ್ಷಿತವಾಗಿ ದಯಮಾಡಿಸಿದ್ದ 'ಭಾಷ್ಯಸ್ವಾಮಿ' ಗಳೆಂಬ ಯತಿಗಳನ್ನು ಕಂಡು ತಮ್ಮ ಮನೆಗೆ ಆಹ್ವಾನಿಸಿದರು. ಯತಿಗಳು ಸಂತೋಷದಿಂದಲೇ ಶಾಸ್ತ್ರಿಗಳ ಮನೆಗೆ ದಯಮಾಡಿಸಿ ಪೂಜಾದಿಗಳೆಲ್ಲವೂ ನೆರವೇರಿದ ಅನಂತರ ತಮ್ಮ ಉಪದೇಶ ಭಾಷಣದಲ್ಲಿ ಹೀಗೆ ಅಪ್ಪಣೆ ಕೊಡಿಸಿದರು:

"ಭಗವದ್ಭಕ್ತರೆ, ಶ್ರೀ ಶಾಸ್ತ್ರಿಗಳು ಪವಿತ್ರಕಾಶೀಯಾತ್ರೆಯನ್ನು ಪೂರೈಸಿಕೊಂಡು ಬಂದು ಈ ದಿನ ನಿಮ್ಮೆಲ್ಲರಿಗೂ ಗಂಗಾತೀರ್ಥವನ್ನು ಹಂಚಿ ನಿಮ್ಮಗಳಿಗೂ ಒಂದು ಸುಯೋಗವನ್ನು ಕಲ್ಪಿಸಿರುವದು ಸರಿಯಷ್ಟೆ. ಆದರೆ ಬಾದರಾಯಣರು ತಮ್ಮ ಬ್ರಹ್ಮಸೂತ್ರಗಳಲ್ಲಿ ಪಠಿಸಿರುವ ಒಂದು ಸೂತ್ರವೂ ಅದರ ಶಾಂಕರಭಾಷ್ಯವೂ ಈಗ ನನಗೆ ನೆನಪಿಗೆ ಬರುತ್ತಿದೆ. ಜಾಬಾಲಶಾಖೆಯವರು ಪಠಿಸುವ ಮಂತ್ರವೊಂದರಲ್ಲಿ ಅನಂತನೂ ಅವ್ಯಕ್ತನೂ ಆದ ಆತ್ಮನು ಅವಿಮುಕ್ತದಲ್ಲಿ ಪ್ರತಿಷ್ಠಿತನಾಗಿರುವನು. ವಿಮುಕ್ತನೆಂದರೆ ಜೀವನು. ಈ ಜೀವನು ವರಣಾ ಮತ್ತು ನಾಸಿಗಳ ನಡುವೆ ಇದ್ದುಕೊಂಡಿರುವನು. ಇಂದ್ರಿಯಕೃತವಾದ ಸರ್ವಪಾಪಗಳನ್ನೂ ಯಾವದು ನಿವಾರಣೆ ಮಾಡುವದೋ ಅದು ವರಣಾ. ಹಾಗೆಯೇ ಸರ್ವಪಾಪಗಳನ್ನೂ ನಾಶ ಮಾಡುವದೇ ನಾಸೀ. ಈ ಭ್ರೂಸಹಿತನಾಸಿಕೆಯನ್ನೇ ವರಣಾನಾಸೀ–ಎಂದು ಹೆಸರಿಸಿರುತ್ತದೆ. ಹೀಗೆ 'ಹುಬ್ಬುಗಳಿಗೂ ಮೂಗಿಗೂ ನಡುವೆ ಇರುವ ಸಂಧಿಯಿದೆಯಲ್ಲ ಆ ಇದು ದ್ಯುಲೋಕಕ್ಕೂ ಪರಮಲೋಕಕ್ಕೂ ಸಂಧಿಯು' ಎಂದು ಅಲ್ಲಿ ವಿವರಿಸಿರುತ್ತದೆ. ಜಾಬಾಲರು ಹೇಳುವ ಈ ಮಂತ್ರದಲ್ಲಿ ಪರಮಾತ್ಮನನ್ನೇ ಗಾನಮಾಡಿರುತ್ತದೆ. ಆದ್ದರಿಂದ ಭ್ರೂಮಧ್ಯದಲ್ಲಿ ಪ್ರಾಣವನ್ನು ಧಾರಣೆ ಮಾಡಿಕೊಂಡು ಓಂ ಎಂದು ಧ್ಯಾನ ಮಾಡುತ್ತಾ ಶರೀರವನ್ನು ಬಿಡುವವನು ಪರಮಗತಿಯನ್ನೇ ಹೊಂದುವನು. ಈ ತತ್ತ್ವವನ್ನೇ ಪುರಾಣಗಳಲ್ಲಿ ಭೌತಿಕವಾಗಿ ವರಣಾ ಮತ್ತು ಅಸಿ ಎಂಬ ನದಿಗಳ ಸಂಗಮದಲ್ಲಿರುವ ವಾರಣಾಸಿಯೆಂದೂ ಅವಿಮುಕ್ತಕ್ಷೇತ್ರ ವೆಂದೂ ಹೊಗಳಿದೆ. ಅಲ್ಲಿರುವ ವಿಶ್ವೇಶ್ವರನೆಂಬ ದೇವನು ವಿಶ್ವಕ್ಕೂ ಆತ್ಮನಾದ ಪರಬ್ರಹ್ಮವೇ. ಆ ಪರಮಾತ್ಮನನ್ನು ಅರಿತುಕೊಂಡರೇ ಮಾನವನು ಮುಕ್ತನಾಗುವನು. ಕಾಶೀ ಎಂಬುದು ಕಾಶತೇ ಪ್ರಕಾಶತೇ–ಇತಿ ಕಾಶೀ ಎಂಬರ್ಥದಲ್ಲಿ ಯಾವ ಸ್ಥಳದಲ್ಲಿ ಚೈತನ್ಯರೂಪನಾದ ಆತ್ಮನು ಕಂಡು ಬರುವನೋ ಅದೇ ಕಾಶಿಯು. ನಿಜವಾಗಿ ನೋಡಿದರೆ ಈ ಶರೀರಕ್ಕಿಂತ ಬೇರೆಯಾದ ಕಾಶಿಯಿಲ್ಲ. ಇದನ್ನು ತಿಳಿದು ಈ ದೇಹದಲ್ಲಿರುವ ತುರೀಯನೇ ವಿಶ್ವೇಶ್ವರನೆಂದು ಕಂಡುಕೊಂಡವನೂ ಭ್ರೂಮಧ್ಯವೆಂಬ ವಾರಣಾಸಿಯಲ್ಲಿ ಧಾರಣಾಯೋಗದಿಂದ ಆ ವಿಶ್ವೇಶ್ವರನನ್ನು ಉಪಾಸನೆ ಮಾಡುವವನೂ ನಿಜವಾದ ಕಾಶಿಯ ಸಂದರ್ಶಕರಾಗುವರು. ಯಾತ್ರೆಯ ಗುಟ್ಟೆಲ್ಲ ಇಲ್ಲಿದೆ. ಶ್ರೀ ಶಾಸ್ತ್ರಿಗಳಿಗೆ ಈ ಯಾತ್ರಾಫಲವಾಗಿ ಅವರ ಹೃದಯಕಾಶಿಯಲ್ಲಿ ವಿಶ್ವೇಶ್ವರನ ದರ್ಶನವಾಗಲೆಂದು ಹರಸುತ್ತೇನೆ" ಎಂದು ಹೇಳಿ ತಮ್ಮ ಉಪದೇಶವನ್ನು ಪೂರೈಸಿದರು. ಆಗ ಶಾಸ್ತ್ರಿಗಳಿಗೆ ನಿಜವಾದ ಕಾಶೀಯಾತ್ರೆಯ ಪರಿಚಯವಾಯಿತು.

# 47. ಅಧ್ಯಾತ್ಮವಿದ್ಯೆ

## (ಆಗಸ್ಟ್ 1976)

ಭಗವದ್ಗೀತೆಯಲ್ಲಿ ಶ್ರೀಕೃಷ್ಣಭಗವಂತನು ತನ್ನ ವಿಭೂತಿಗಳನ್ನು ಉಪಾಸನೆಗೆಂದು ಬಣ್ಣಿಸಿರುವ ಸಂದರ್ಭದಲ್ಲಿ 'ಅಧ್ಯಾತ್ಮವಿದ್ಯಾ ವಿದ್ಯಾನಾಮ್' ಎಂದು ಹೇಳಿಕೊಂಡಿರುತ್ತಾನೆ. ಅಧ್ಯಾತ್ಮವೆಂದರೆ ಆತ್ಮನಿಗೆ ಸಂಬಂಧಪಟ್ಟದ್ದು. ಪ್ರಪಂಚವನ್ನೆಲ್ಲ ಅಧ್ಯಾತ್ಮ ಅಧಿಭೂತ, ಅಧಿದೈವ–ಎಂದು ಮೂರು ಭಾಗಗಳಾಗಿ ವಿಂಗಡಿಸಿ ವಿಚಾರಕ್ಕೆ ತೆಗೆದುಕೊಳ್ಳುವದು ಮೋಕ್ಷಶಾಸ್ತ್ರದಲ್ಲಿ ಕಂಡುಬರುತ್ತದೆ. ಅಲ್ಲಿ ಆತ್ಮನೆಂದರೆ ಶರೀರವು. ಶರೀರದ ಒಳಗಡೆಯಿರುವದನ್ನೆಲ್ಲ ಅಧ್ಯಾತ್ಮವೆಂಬ ರಾಶಿಯಲ್ಲಿ ಸೇರಿಸಿರುತ್ತದೆ. ಆದರೆ ಅಧ್ಯಾತ್ಮವಿದ್ಯೆ–ಎಂಬ ಶಬ್ದದಲ್ಲಿ ಮುಖ್ಯವಾಗಿ ನಮ್ಮೆಲ್ಲರಿಗೂ, ಪ್ರಪಂಚವೆಲ್ಲಕ್ಕೂ ತಿರುಳಾಗಿರುವ ತತ್ತ್ವವನ್ನೇ ಆತ್ಮವೆಂದು ಕರೆದಿರುತ್ತದೆ. ಈ ಆತ್ಮನ ವಿಷಯವಾದದ್ದೇ ಅಧ್ಯಾತ್ಮವಿದ್ಯೆಯು.

ಈ ವಿದ್ಯೆಗೆ ಬ್ರಹ್ಮವಿದ್ಯೆಯೆಂಬ ಹೆಸರೂ ಉಂಟು. ಹಿರಣ್ಯಗರ್ಭಬ್ರಹ್ಮನು ತನ್ನ ಮಗನಿಗೆ ಹೇಳಿದ ವಿದ್ಯೆಯಿದಾದ್ದರಿಂದಲೂ ಎಲ್ಲಕ್ಕಿಂತಲೂ ದೊಡ್ಡದಾಗಿರುವ ಅನಂತವಾದ ತತ್ತ್ವವನ್ನು ಕುರಿತದ್ದಾದ್ದರಿಂದಲೂ ಇದಕ್ಕೆ ಬ್ರಹ್ಮವಿದ್ಯೆಯೆಂದು ಹೆಸರು. ಇದು ಎಲ್ಲಾ ವಿದ್ಯೆಗಳಿಗೂ ಪ್ರತಿಷ್ಠೆ–ಎಂದರೆ ಇದರಲ್ಲಿಯೇ ಯಾವ ವಿದ್ಯೆಯಾದರೂ ಕೊನೆಗಾಣಬೇಕಾಗಿದೆ. "ಇದೇ ಎಲ್ಲಕ್ಕೂ ಸಾರವು. ಇದೇ ಪರಮಾರ್ಥಸತ್ಯವಾಗಿರ ತಕ್ಕದ್ದು. ಇದೇ ಎಲ್ಲರ ಆತ್ಮನು. ಅದೇ ನೀನಾಗಿರುವೆಯಯ್ಯಾ, ಶ್ವೇತಕೇತುವೆ" ಎಂದು ಉದ್ದಾಲಕನೆಂಬುವನು ತನ್ನ ಮಗನಿಗೆ ಉಪದೇಶಿಸಿರುತ್ತಾನೆ. ಹೀಗೆ ಸರ್ವರೂಪ ದಿಂದಲೂ ತೋರಿಕೊಳ್ಳುತ್ತಾ ಎಲ್ಲಕ್ಕೂ ಎಲ್ಲರಿಗೂ ಆತ್ಮನಾಗಿರುವ ಪರಮಾರ್ಥ ಸತ್ಯರೂಪವಾಗಿರುವ ತತ್ತ್ವಕ್ಕೆ ಬ್ರಹ್ಮವೆಂದು ಹೆಸರು. ಅದರ ನಿಜವನ್ನು ಅರಿತುಕೊಳ್ಳುವ ವಿದ್ಯೆಯೇ ಬ್ರಹ್ಮವಿದ್ಯೆ ಅಥವಾ ಅಧ್ಯಾತ್ಮವಿದ್ಯೆ.

ಭೌತಿಕವಿಜ್ಞಾನಶಾಸ್ತ್ರದಲ್ಲಿ ನಮ್ಮ ಜೀವನಕ್ಕೆ ಬೇಕಾದ ಅನೇಕ ಸೌಕರ್ಯಗಳನ್ನು ಕಂಡುಹಿಡಿಯಲಾಗಿದೆ. ಆದರೆ ಹೊಸಹೊಸ ಶೋಧಗಳಿಂದ ನಮಗೆ ಜೀವನ ಸೌಕರ್ಯಗಳು ಹೆಚ್ಚುಹೆಚ್ಚಾಗಿ ಲಭಿಸಿದಷ್ಟೂ ಅಷ್ಟೇ ವೇಗದಿಂದ ಅಥವಾ ಅದಕ್ಕೂ ಹೆಚ್ಚಿನ ವೇಗದಿಂದ ನಮ್ಮ ಕಾಮಗಳು ಹೆಚ್ಚುತ್ತಿವೆ. ಎಷ್ಟು ಕಾಮೋಪಭೋಗಗಳು ದೊರೆತರೆ ತಾನೆ ನಮ್ಮ ಆಶೆಯು ತೃಪ್ತಿಯಾಗಿ ಮನಸ್ಸಿಗೆ ಶಾಂತಿಯು ಸಿಕ್ಕೀತು? ಯಯಾತಿಯಂಥವನಿಗೂ ಯೌವನವನ್ನು ಎರವಲಾಗಿ ತೆಗೆದುಕೊಂಡು

ದಿವ್ಯಭೋಗಗಳನ್ನು ಅನುಭವಿಸಿದರೂ ಕಾಮವು ಹಿಂಗಲಿಲ್ಲ. ಹೀಗೆ ಈಗ್ಗೆ ಭೌತಿಕವಿಜ್ಞಾನವು ನಮಗೆ ಎಷ್ಟು ಅನುಕೂಲ್ಯಗಳನ್ನು ಕಲ್ಪಿಸಿಕೊಟ್ಟಿದ್ದರೂ ನಮಗೆ ಹಿಂದಿನವರಿಗಿಂತ ಹೆಚ್ಚಿನ ಕಾಮವೇ ಉಂಟಾಗಿರುತ್ತದೆ. ನಮಗೆ ರೋಗ, ಮುಪ್ಪು, ಸಾವು–ಮುಂತಾದವುಗಳ ಬಾಧೆಯು ಎಂದಿಗೂ ಸ್ವಲ್ಪವೂ ಉಂಟಾಗದಂತೆ ಮಾಡುವದಕ್ಕಾಗಲಿ, ಕಾಮಕ್ರೋಧಾದಿಗಳು ನಮ್ಮ ಮನಸ್ಸನ್ನು ಬೇಗುದಿಗೊಳಿಸದಂತೆ ಮಾಡುವದಕ್ಕಾಗಲಿ, ವಿಜ್ಞಾನಶಾಸ್ತ್ರದಿಂದ ಎಂದಿಗೂ ಆಗುವಂತಿಲ್ಲ. ಏಕೆಂದರೆ ಅದಕ್ಕೆ ಬಾಹ್ಯವಿಷಯಗಳ ಪರಿಶೀಲನೆಯ ಕ್ರಮವೊಂದು ತಿಳಿದಿದೆಯೇ ಹೊರತು ನಮ್ಮ ಅಂತರಸ್ವಭಾವವನ್ನು ಪರೀಕ್ಷಿಸುವದು ಅದರಿಂದಾಗುವಂತಿಲ್ಲ. ಅಧ್ಯಾತ್ಮಪ್ರಪಂಚವು ಅದರ ಕ್ಷೇತ್ರಕ್ಕೆ ಸೇರಿರುವದಿಲ್ಲ.

ಆದರೆ ಉಪನಿಷತ್ತುಗಳಲ್ಲಿ ಪ್ರಸಿದ್ಧವಾಗಿರುವ ಅಧ್ಯಾತ್ಮವಿದ್ಯೆಯ ವಿಚಾರ ಕ್ರಮವೇ ಬೇರೆಯಾಗಿರುತ್ತದೆ. ನಮ್ಮ ನಿಜವಾದ ಸ್ವಭಾವವನ್ನು ನಾವು ಅರಿತುಕೊಳ್ಳದೆ ಅವಿದ್ಯೆಯಿಂದ 'ನಾವು ಹುಟ್ಟುವವರು, ಮುಪ್ಪನ್ನನುಭವಿಸುವವರು, ಸಾಯುವವರು'–ಎಂದು ಮುಂತಾಗಿ ಎಲ್ಲ ಅಂಜಿಕೆಯನ್ನು ಹುಟ್ಟುಹಾಕಿಕೊಂಡಿರುವೆವು. ನಮ್ಮ ನಿಜವಾದ ಸ್ವಭಾವವು ಬ್ರಹ್ಮವೇ ಆಗಿರುತ್ತದೆ. ನಾವು ಪರಿಚ್ಛಿನ್ನರಾದ ಜೀವಾತ್ಮರಲ್ಲ; ನಮಗೆ ಹುಟ್ಟಿಲ್ಲ, ಮುಪ್ಪಿಲ್ಲ, ಮರಣವೂ ಇಲ್ಲ ಎಂದೇ ಉಪನಿಷತ್ತುಗಳಲ್ಲಿ ತಿಳಿಸುತ್ತಿದೆ. 'ನಾನು ಅಭಯವಾದ ಬ್ರಹ್ಮವೇ' ಎಂದು ಯಾವನು ಅರಿತುಕೊಳ್ಳುವನೋ ಅವನು ಆ ಜ್ಞಾನಮಾತ್ರದಿಂದ ಅಭಯವಾದ ಬ್ರಹ್ಮವೇ ಆಗಿಬಿಡುತ್ತಾನೆ–ಎಂದು ಫಲವನ್ನೂ ಹೇಳಿರುತ್ತದೆ. ಆದ್ದರಿಂದ ಅಧ್ಯಾತ್ಮವಿದ್ಯೆಯಿಂದ ನಾವು ಈಗಲೆ ಇಲ್ಲಿಯೇ ಅಜಾದ್ವಯಬ್ರಹ್ಮಸ್ವರೂಪರಾಗಿರುತ್ತೇವೆ ಎಂದು ಕಂಡುಕೊಂಡು ನಲಿಯಬಹುದಾಗಿದೆ. ಶ್ರೀಶಂಕರಭಗವತ್ಪಾದರು 'ಸ ವಾ ಏಷ ಮಹಾನಜ ಆತ್ಮಾ....' ಎಂಬ ಉಪನಿಷದ್ವಾಕ್ಯಕ್ಕೆ ಧೈರ್ಯವಾಗಿ "ನನ್ನ ಆತ್ಮನೂ ನಿಮ್ಮ ಆತ್ಮನೂ ಎಲ್ಲರ ಆತ್ಮನೂ ಒಬ್ಬನೇ; ಅವನು ನಿಜವಾಗಿಯೂ ಹುಟ್ಟುಮುಪ್ಪು ಸಾವುಗಳಿಲ್ಲದ ಅಭಯಸ್ವರೂಪನೇ ಆಗಿರುತ್ತಾನೆ. ಇದನ್ನು ನೀವು ಅರಿತುಕೊಂಡರಾಯಿತು; ಎಂದೆಂದಿಗೂ ಯಾವ ಅನರ್ಥಕ್ಕೂ ಪಕ್ಕಾಗದ ಆತ್ಮನೇ ನನ್ನ ಸ್ವರೂಪವಾಗಿದ್ದರೂ ಹೀಗೆ ದುಃಖಪಡುತ್ತಿದ್ದೇನಲ್ಲ! ಎಂದು ನೀವೆ ಆಶ್ಚರ್ಯಪಡುವಿರಿ" ಎಂದು ಹೇಳಿರುತ್ತಾರೆ. ಆದರೆ ಈ ಅರ್ಥವನ್ನು ಮೇಲ್ಕಂಡ ಉಪನಿಷದ್ವಾಕ್ಯಕ್ಕೆ ಎಲ್ಲಾ ಆಚಾರ್ಯರೂ ಹೇಳುತ್ತಿಲ್ಲ. ಆದರೂ ಈಗ ಶಂಕರಾಚಾರ್ಯರು ಎದುರಿಗೆ ಇಲ್ಲದಿದ್ದರೂ ಅವರ ಗ್ರಂಥಗಳಿವೆ. ಅವುಗಳನ್ನು ಓದಿ ಅರಗಿಸಿಕೊಳ್ಳುವ ಶಕ್ತಿಯೂ ನಮಗಿದೆ. ಆದ್ದರಿಂದ ಈಗಲೂ ನಾವು ಪ್ರಯತ್ನ ಮಾಡಿ ಅಧ್ಯಾತ್ಮವಿದ್ಯೆಯಿಂದ ನಮ್ಮ ಪರಮಾರ್ಥಸ್ವಭಾವವನ್ನು ಕಂಡುಕೊಳ್ಳಬಹುದಾಗಿದೆ.

ಅಧ್ಯಾತ್ಮವಿದ್ಯೆಗೆ ಎರಡು ಮಾರ್ಗಗಳಿರುತ್ತವೆ. ನಮಗೂ ಜಗತ್ತಿಗೂ ಸಾರವಾಗಿರುವ ಆತ್ಮವಸ್ತುವನ್ನು ಇದ್ದದ್ದು ಇದ್ದಂತೆ ನಿಃಸಂಶಯವಾಗಿ ಅರಿತುಕೊಳ್ಳುವದು ಒಂದು ಬಗೆ. ಇದಕ್ಕೆ ಜ್ಞಾನಮಾರ್ಗವೆಂದು ಹೆಸರು. ಪರಮಾತ್ಮನು ಎಲ್ಲೆಲ್ಲಿಯೂ ಇರುತ್ತಾನೆ; ಎಲ್ಲರಿಗೂ ಆತ್ಮನಾಗಿರುತ್ತಾನೆ–ಎಂಬ ವೇದಾಂತ ವಾಕ್ಯವನ್ನೂ ಗುರುವಚನವನ್ನೂ ನಂಬಿ ಶ್ರದ್ಧೆಯಿಂದ ಭಾವನೆ ಮಾಡುತ್ತಿರುವದು ಇನ್ನೊಂದು ಬಗೆ. ಇದಕ್ಕೆ ಉಪಾಸನಾಮಾರ್ಗವೆಂದು ಹೆಸರು. ಜ್ಞಾನಮಾರ್ಗವು ಉತ್ತಮಾಧಿಕಾರಿಗಳಿಗೆ ಸುಲಭವಾಗಿ ದೊರಕುತ್ತದೆ. ಉಪಾಸನಾಮಾರ್ಗವು ಮಂದಮಾಧ್ಯಮಾಧಿಕಾರಿಗಳಿಗೆ ತಕ್ಕದ್ದಾಗಿರುತ್ತದೆ. ಭಾವನೆಯೆಂಬುದು ಮನುಷ್ಯ ಮಾತ್ರಕ್ಕೆಲ್ಲ ಇದ್ದುಕೊಂಡೇ ಇರುವದು. ನಮ್ಮಲ್ಲಿ ಅನೇಕರ ಜೀವನವು ಭಾವನಾಮಯವಾಗಿರುತ್ತದೆ. ಆದ್ದರಿಂದ ಉಪಾಸನೆಯ ಮಾರ್ಗವು ಬಹುಜನರಿಗೆ ಸುಲಭದ್ದಾಗಿರುತ್ತದೆ. 'ವಿದ್ಯಾ', 'ಜ್ಞಾನ' ಎಂಬ ಶಬ್ದಗಳನ್ನು ಉಪನಿಷತ್ತುಗಳಲ್ಲಿ ಯಥಾರ್ಥವಾಗಿ ಅರಿತುಕೊಳ್ಳುವದು, ಭಾವನೆ ಮಾಡುವದು–ಎಂಬ ಎರಡಕ್ಕೂ ಉಪಯೋಗಿಸಿರುತ್ತದೆ. ಆದ್ದರಿಂದ ಈ ಎರಡೂ ಅಧ್ಯಾತ್ಮವಿದ್ಯೆಯೇ, ಬ್ರಹ್ಮ ವಿದ್ಯೆಯೇ–ಆಗಿರುತ್ತದೆ.

ಅಧ್ಯಾತ್ಮವಿದ್ಯೆ ಎಂಬ ಶಬ್ದವನ್ನು ಜ್ಞಾನವೆಂಬ ಅರ್ಥದಲ್ಲಿ ಬಳಸುವಾಗ ಅದು ಲೌಕಿಕವಾದ ಜ್ಞಾನದಂಥ ಒಂದು ಜ್ಞಾನವೆಂದು ತಿಳಿಯಬಾರದು. ಶಾಸ್ತ್ರೀಯಭಾವನೆಯು ಲೌಕಿಕವಾದ ಭಾವನೆಯ ರೀತಿಯದೇ ಆಗಿದ್ದರೂ ನಿರಂತರವಾಗಿ ಶಾಸ್ತ್ರೋಕ್ತವಾದ ರೀತಿಯಲ್ಲಿಯೇ ಭಾವನೆಮಾಡಬೇಕಾಗುತ್ತದೆಯಾದ್ದರಿಂದ ಅದರಲ್ಲಿ ಲೌಕಿಕವಾದ ಭಾವನೆಗಿಂತ ಸ್ವಲ್ಪ ವೈಲಕ್ಷಣ್ಯವು ಇದ್ದೇ ಇರುತ್ತದೆ. ಹೇಗೆ ಆಗಲಿ, ಬ್ರಹ್ಮವಿದ್ಯೆ ಅಥವಾ ಈ ಅಧ್ಯಾತ್ಮವಿದ್ಯೆಯನ್ನು ಒಂದಾನೊಂದು ಕ್ರಮಕ್ಕೆ ಒಳಪಟ್ಟೇ ವಿಚಾರಮಾಡ ಬೇಕಾಗುತ್ತದೆ. ಅಥವಾ ಭಾವನೆ ಮಾಡಬೇಕಾಗುತ್ತದೆ. ಈ ವಿಚಾರ ಮತ್ತು ಭಾವನೆಯ ಕ್ರಮವನ್ನು ಬಲ್ಲವರಿಂದ ತಿಳಿದೇ ಮುಂದುವರಿಯಬೇಕು.

ಯಾಜ್ಞವಲ್ಕ್ಯರು ಮೈತ್ರೇಯಿಗೆ ಉಪದೇಶಿಸಿರುವ ಸಂದರ್ಭದಲ್ಲಿ 'ಎಲ್ಲವೂ ತನಗಾಗಿ ಪ್ರಿಯವಾಗಿರುತ್ತದೆ' ಎಂದು ತಿಳಿಸಿದ್ದಾರೆ. ಆದ್ದರಿಂದ ನಮಗಿಂತ ಪ್ರಿಯವಾದದ್ದು ನಮಗೆ ಯಾವದೊಂದೂ ಇಲ್ಲವೆಂದಾಯಿತು. ಯಾವ ತನಗಾಗಿ ಈ ಲೋಕದಲ್ಲಿ ನಮಗೆ ಎಲ್ಲವೂ ಬೇಕಾಗಿರುವದೋ ಆ ತನ್ನ ಸ್ವರೂಪವನ್ನು ಅರಿತುಕೊಳ್ಳುವ ಅಧ್ಯಾತ್ಮವಿದ್ಯೆಯೇ ಎಲ್ಲಕ್ಕೂ ಹೆಚ್ಚಿನದೆಂದಾಯಿತು. ಬಾಹ್ಯ ವಸ್ತುಗಳ ವಿಚಾರವಾಗಿ ತಿಳಿವಳಿಕೆಯನ್ನು ಸಂಪಾದಿಸಿಕೊಳ್ಳಬೇಕೆಂದು ನಾವು ಹವಣಿಸುತ್ತಿರುವದು ಅವುಗಳಿಗಾಗಿ ಅಲ್ಲ, ಮತ್ತೇನೆಂದರೆ ನಮ್ಮ ಆತ್ಮನಿಗಾಗಿಯೇ. ಹೀಗೆ ಆತ್ಮನಿಗಿಂತ ಬೇರೆಯಾಗಿ ತೋರುತ್ತಿರುವ

ಅನಾತ್ಮವಸ್ತುಗಳ ವಿದ್ಯೆಯೂ ತನಗಾಗಿಯೇ ಅಗಿರುವದರಿಂದ ತನ್ನ ಆತ್ಮನ ನಿಜವನ್ನು ಅರಿತುಕೊಳ್ಳುವ ಅಧ್ಯಾತ್ಮವಿದ್ಯೆಯೇ ಎಲ್ಲಕ್ಕಿಂತಲೂ ಹೆಚ್ಚಿನವಿದ್ಯೆಯೆಂದಾಯಿತು. ಆದ್ದರಿಂದಲೇ ಯಾಜ್ಞವಲ್ಕ್ಯರು ಎಲ್ಲಕ್ಕಿಂತಲೂ ಮುಖ್ಯವಾಗಿ 'ಆತ್ಮನನ್ನೇ ಕಂಡುಕೊಳ್ಳಬೇಕು, ಅದಕ್ಕಾಗಿ ಆತ್ಮನ ವಿಷಯವಾಗಿ ಶ್ರವಣಮಾಡಬೇಕು; ಮನನಮಾಡಬೇಕು; ನಿದಿಧ್ಯಾಸನ ಮಾಡಬೇಕು'–ಎಂದು ಉಪದೇಶಿಸಿರುತ್ತಾರೆ.

'ಆತ್ಮನ ದರ್ಶನವನ್ನೇ ಮಾಡಿಕೊಳ್ಳಬೇಕು' ಎಂಬಲ್ಲಿ ಆತ್ಮದರ್ಶನವೆಂದರೆ ಸಾಕ್ಷಾತ್ಕಾರವೆಂದೂ ಬರಿಯ ಜ್ಞಾನವು ಏತಕ್ಕೂ ಬರುವದಿಲ್ಲವಾದ್ದರಿಂದ ಅಪರೋಕ್ಷ ಜ್ಞಾನವನ್ನೇ ಇಲ್ಲಿ ಉಪದೇಶಿಸಿದೆಯೆಂದೂ ಹಲವರು ಹೇಳುತ್ತಾರೆ. ಇದರಲ್ಲಿ ನಿಜದಂಶವೂ ಇದೆ. ಏಕೆಂದರೆ ಆತ್ಮನ ಸ್ವರೂಪವಾದ ಅನುಭವವು ನಮಗೆ ಉಂಟಾಗುವದೇ ಆತ್ಮದರ್ಶನವಾಗಿರುತ್ತದೆ. ಇಲ್ಲಿ ಆತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವದು–ಎಂದರೆ ಎದುರಿಗೆ ಕಂಡುಕೊಳ್ಳುವದು–ಎಂದೇನೂ ಅಭಿಪ್ರಾಯವಲ್ಲ. ಏಕೆಂದರೆ ಆತ್ಮನು 'ಯತ್ ಸಾಕ್ಷಾದಪರೋಕ್ಷಾದ್ ಬ್ರಹ್ಮ' ಎಂದಂತೆ ಯಾವಾಗಲೂ ನೇರಾಗಿ ಅಪರೋಕ್ಷವಾಗಿಯೇ ಇರುತ್ತಾನೆ. ಮೇರು ಪರ್ವತ, ಸ್ವರ್ಗ–ಮುಂತಾದವುಗಳಂತೆ ಪರೋಕ್ಷನಾಗಿರುವದಿಲ್ಲ. ಆ ಆತ್ಮನೇ ಬ್ರಹ್ಮವು–ಎಂದು ಶ್ರುತಿಗಳು ಘಂಟಾಘೋಷವಾಗಿ ಸಾರುತ್ತಿವೆ. ಆದ್ದರಿಂದ ದೇಶದಲ್ಲಾಗಲಿ, ಕಾಲದಲ್ಲಾಗಲಿ, ದೂರವಿದ್ದು ಕಾಣಿಸದೆ ಇರುವದನ್ನು ಎದುರಿಗೆ ಕಾಣಬರುವಂತೆ ಮಾಡಿಕೊಳ್ಳುವದು ಎಂಬರ್ಥದಲ್ಲಿ ಆತ್ಮನ ದರ್ಶನವನ್ನು ಶಾಸ್ತ್ರದಲ್ಲಿ ಉಪದೇಶಿಸಿರುವದಿಲ್ಲ. ನಮ್ಮ ಸ್ವರೂಪವೇ ನಮಗೆ ವ್ಯವಹಿತವಾಗಿದೆ, ದೂರವಾಗಿದೆ–ಎಂಬ ಮಾತಿಗೆ ಎಂದಿಗಾದರೂ ಅರ್ಥವಿದ್ದೀತೆ? ಈಗ ನಮಗೆ ತೋರುತ್ತಿರುವ ಆತ್ಮರೂಪವು ಸಂಸಾರಿರೂಪ. ಅದರ ನಿಜವಾದ ಸ್ವರೂಪವು ಬ್ರಹ್ಮರೂಪ. ಆದ್ದರಿಂದ ಅಸಂಸಾರಿಯಾಗಿರುವ ನಿತ್ಯಶುದ್ಧಬುದ್ಧಮುಕ್ತಸ್ವಭಾವದ ಬ್ರಹ್ಮವೇ ನಾನು ಎಂಬ ಅನುಭವವೇ ಆತ್ಮದರ್ಶನವು.

ಭಾವನಾಪ್ರಧಾನವಾದ ಉಪಾಸನೆಯಲ್ಲಿ ಮಾತ್ರ ಧ್ಯೇಯವಾದ ಬ್ರಹ್ಮದ ಸಾಕ್ಷಾತ್ಕಾರವು ಅವಶ್ಯವಾಗಿರುತ್ತದೆ. ಏಕೆಂದರೆ ಬ್ರಹ್ಮವನ್ನು ಶಾಸ್ತ್ರದಲ್ಲಿ ಉಪದೇಶಿಸಿರುವಂತೆ ಇಂಥಿಂಥ ಗುಣವುಳ್ಳದ್ದು–ಎಂದು ಭಾವನೆಮಾಡಿಕೊಂಡು ಅದೇ ನಾನೆಂಬ ಭಾವನೆಯು ಬಲಿಷ್ಠವಾಗಿ ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವವರೆಗೂ ಅದನ್ನು ಮಾಡಲೇಬೇಕಾಗಿರುತ್ತದೆ. 'ದೇವತೆಯೇ ತಾನಾಗಿ ದೇವತೆಗಳನ್ನು ಸೇರುವನು', 'ಯಾವಾಗಲೂ ಅದೇ ಭಾವದಿಂದ ಭಾವಿತನಾದವನು ಆಯಾ ಧ್ಯೇಯವನ್ನು ಸೇರುವನು' ಎಂದು ಶ್ರುತಿಸ್ಮೃತಿಗಳಲ್ಲಿ ತಿಳಿಸಿದೆ. ಆದ್ದರಿಂದ ಒಂದೇ ಫಲವುಳ್ಳ ಉಪಾಸನೆಗಳಲ್ಲಿ

ಯಾವದಾದರೊಂದನ್ನು ಆರಿಸಿಕೊಂಡು ಉಪಾಸ್ಯವಿಷಯದ ಸಾಕ್ಷಾತ್ಕಾರದಿಂದ ಆ ಫಲವು ದೊರಕುವವರೆಗೂ ತತ್ಪರನಾಗಿ ಸಾಧನೆ ಮಾಡಬೇಕು.

ಮೇಲ್ಕಂಡ ವಿಷಯಗಳನ್ನು ಇನ್ನೂ ವಿಸ್ತಾರವಾಗಿ ಶ್ರೀಶ್ರೀಗಳವರು ತಮ್ಮ 'ಅಧ್ಯಾತ್ಮವಿದ್ಯೆ' ಎಂಬ ಗ್ರಂಥದಲ್ಲಿ 26 ಉಪನ್ಯಾಸಗಳ ರೂಪದಲ್ಲಿ ವಿವರಿಸಿರುತ್ತಾರೆ. ಕುತೂಹಲವುಳ್ಳ ವಾಚಕರು ಕಾರ್ಯಾಲಯದಲ್ಲಿ ದೊರಕುವ ಆ ಗ್ರಂಥವನ್ನು ತರಿಸಿಕೊಂಡು ಓದಿ ಕೃತಾರ್ಥರಾಗಬೇಕೆಂದು ಪ್ರಾರ್ಥಿಸಿದೆ.

# 48. ವೈರಾಗ್ಯ ಚಕ್ರವರ್ತಿ

## (ಅಕ್ಟೋಬರ್ 1978)

ನಾನು ಈಚೆಗೆ (ತಾ|| 5–8–78 ರಂದು) ಬಳ್ಳಾರಿ ನಗರದಿಂದ ಹತ್ತು ಮೈಲು ದೂರದಲ್ಲಿರುವ 'ಹಗರಿ' ಎಂಬಲ್ಲಿಗೆ ಹೋಗಿ ಅಲ್ಲಿ ಚಾತುರ್ಮಾಸ್ಯವ್ರತಕ್ಕೆ ಕುಳಿತಿದ್ದ ಶ್ರೀ ಕಾಂಚೀಕಾಮಕೋಟಿ ಜಗದ್ಗುರುಗಳಾದ ವೃದ್ಧಶ್ರೀಶ್ರೀಗಳವರ ದರ್ಶನವನ್ನು ಪಡೆದೆನು. ಆಗ್ಗೆ ನಡೆದ ಕೆಲವು ಸಂಗತಿಗಳನ್ನು ಇಲ್ಲಿ ವಾಚಕರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಶ್ರೀಶ್ರೀಗಳವರು ಸ್ವಚ್ಛ ಕನ್ನಡದಲ್ಲಿ ಮಾತನಾಡುತ್ತಾರೆ. ಇಳಿವಯಸ್ಸಿನಲ್ಲಿಯೂ ಅವರಿಗೆ ಜ್ಞಾಪಕಶಕ್ತಿಯು ಚೆನ್ನಾಗಿದೆ. ಪ್ರತಿದಿನವೂ ಈಗಲೂ (ಚಾತುರ್ಮಾಸ್ಯಕಾಲ ಬಿಟ್ಟು) 25 ಕಿಲೋಮೀಟರು ನಡೆಯುತ್ತಾರೆ. ವಯಸ್ಸು 90 ವರ್ಷಗಳಿರಬಹುದು. ಅರ್ಧಕಟ್ಟಿದ ದೇವಾಲಯದಲ್ಲಿ ಹಗರೀ ಹೊಳೆಯ ದಂಡೆಯಲ್ಲಿರುವ ಒಂದು ಫ್ಯಾಕ್ಟರಿಯ ಆವರಣದಲ್ಲಿ ಶ್ರೀಗಳವರ ಬಿಡಾರ. ಬಿದಿರುಚಾಪೆಗಳಿಂದ ಮರೆಮಾಡಲ್ಪಟ್ಟ (ಕುಟೀರದಂತಿರುವ) ಆ ದೇವಾಲಯದಲ್ಲಿ ಎಂಟೇ ಜನ ಪರಿವಾರದವರೊಂದಿಗೆ ಗುರುಗಳು ಇದ್ದಾರೆ. ದೇವರುಗಳ ಸಮೂಹ, ಪೂಜೆಗಳ ವೈಭವ, ಬೆಳ್ಳಿ ಬಂಗಾರದ ವಸ್ತುಗಳಾಗಲೀ ಆರ್ಭಟವಾಗಲೀ ಅಲ್ಲಿರಲಿಲ್ಲ. ಮರದ ಲೋಟ, ಕೃಷ್ಣಾಜಿನ, ಕಮಂಡಲು, ಎರಡೇ ನೂಲಿನ ಬಟ್ಟೆಗಳು, ಶ್ರೀಗಳ ಆಸ್ತಿ . ಸರಳ, ಸಾತ್ತ್ವಿಕ, ಸದಾಚಾರಗಳ ಪ್ರತ್ಯಕ್ಷದರ್ಶನವು ಎಂಥವರನ್ನೂ ಭಕ್ತಿಭಾವಪರವಶರನ್ನಾಗಿ ಮಾಡುತ್ತದೆ. ಶ್ರೀಗಳವರು ದಕ್ಷಿಣೆಯನ್ನು ಸ್ವೀಕರಿಸುವದಿಲ್ಲ, ಇದು ಕಡ್ಡಾಯದ ಅಪ್ಪಣೆ. ಸಾರ್ವಜನಿಕರಿಗೆ ದರ್ಶನವನ್ನು ಕೊಡುವಾಗಲೂ ನೆಲದ ಮೇಲೆ ಒಂದು ಕೃಷ್ಣಾಜಿನವನ್ನು

ಹಾಕಿಕೊಂಡು ಗುರುಗಳು ಕುಳಿತಿರುತ್ತಾರೆ. ಯಾರು ಬೇಕಾದರೂ ಬಂದು ದರ್ಶನವನ್ನು ಪಡೆಯಬಹುದು. ನಿಜವಾದ ವೈರಾಗ್ಯವೇ ಮೂರ್ತಿವೆತ್ತಂತಿರುವ ಪರಮಹಂಸ ಪರಿವ್ರಾಜಕರು ಶ್ರೀಗಳವರು. ಕಲಿಯುಗದಲ್ಲಿಯೂ ಇಂಥ ಆದರ್ಶಸಂನ್ಯಾಸಿಗಳನ್ನು ಕಂಡ ನಾನೇ ಧನ್ಯನೆಂದುಕೊಂಡೆನು.

ಪ್ರಶ್ನೆ: ವಿಠಲಶಾಸ್ತ್ರಿಗಳು ಚೆನ್ನಾಗಿದ್ದಾರೆಯೆ? ನಿಮ್ಮ ಶ್ರೀಗಳು 50 ವರ್ಷಗಳ ಕಾಲ ಮೂಲಾವಿದ್ಯೆಯ ಖಂಡನೆ ಮಾಡಿದರು. ಈಚೆಗೆ ಯಾರಾದರೂ ಅದಕ್ಕೆ ಸೂಕ್ತವಾದ ಖಂಡನೆಯನ್ನು ಬರೆದಿರುವರೇನು?

ಉತ್ತರ: ಇಲ್ಲ, ಸ್ವಾಮಿ. ಆದರೆ ಈಚೆಗೆ ಶೃಂಗೇರಿಜಗದ್ಗುರುಗಳ ಸಂಮುಖದಲ್ಲಿ ಒಂದು ವಿದ್ವತ್‌ಸಭೆ ನಡೆದು ವಾದವಿವಾದಗಳಾದ ಮೇಲೂ ವಿಠಲಶಾಸ್ತ್ರಿಗಳು 'ಮೂಲಾವಿದ್ಯಾ–ಭಾಷ್ಯವಾರ್ತಿಕವಿರುದ್ಧಾ' ಎಂಬ ಗ್ರಂಥವನ್ನು ಬರೆದು ಪ್ರಕಾಶಗೊಳಿಸಿದ್ದಾರೆ. ಮತ್ತೇನೂ ವಾದವಿವಾದಗಳು ಮುಂದುವರೆಯಲಿಲ್ಲ.

ಪ್ರಶ್ನೆ: (ಶ್ರೀಗಳು ನಸುನಗುತ್ತಾ) ವೇದಾಂತಸುಬ್ಬಯ್ಯನವರು ನಿಮ್ಮ ಶ್ರೀಗಳ ವಾದವನ್ನು ಖಂಡಿಸಿರುವರಲ್ಲವೆ?

ಉತ್ತರ: ಅವರ ದಾರಿಯೇ ಬೇರೆ. ಅವರು ಶಂಕರಭಾಷ್ಯದ ಮೇಲೆಯೇ ತಪ್ಪು ಹೊರಿಸುವ ಮಟ್ಟದಲ್ಲಿದ್ದಾರೆ.

ಪ್ರಶ್ನೆ: ಹೌದು; ಭಾಷ್ಯದಲ್ಲಿ ನಿರ್ಗುಣಬ್ರಹ್ಮವನ್ನೇ ಹೇಳಿಲ್ಲ, ಶಕ್ತಿ ಸಹಿತನಾದ ಈಶ್ವರನನ್ನೇ ಹೇಳಿದೆ–ಎಂಬ ತೃತೀಯಪಂಥವನ್ನು ಅವರು ಹಿಡಿದಿರುವಂತಿದೆ. ಇರಲಿ. ನಿಮ್ಮ ಶ್ರೀಗಳು ಸಿದ್ಧಿ ಹೊಂದಿ ಎಷ್ಟು ದಿನಗಳಾದವು?

ಉತ್ತರ: ಮೂರು ವರ್ಷಗಳಾದವು ಸ್ವಾಮಿ.

ಪ್ರಶ್ನೆ: ಇನ್ನೊಂದು ವರ್ಷಕ್ಕೆ ಅವರ ಶತಮಾನೋತ್ಸವವಾಗಬೇಕಲ್ಲವೆ? ಅವರು ದೇಹವನ್ನು ಬಿಟ್ಟಾಗ 96 ವರ್ಷಗಳು. ಆವರೆಗೂ ಕೆಲಸ ಮಾಡುತ್ತಿದ್ದರೆ?

ಉತ್ತರ: ಕೊನೆಯ ಆರು ತಿಂಗಳು ಮಾತ್ರ ಕೆಲಸ ಮಾಡಲಾಗಲಿಲ್ಲ.

ಪ್ರಶ್ನೆ: ಹೌದು. ಶಾಂಕರವೇದಾಂತಕ್ಕಾಗಿ ತಮ್ಮ ಜೀವಿತವನ್ನೇ ಅರ್ಪಿಸಿಕೊಂಡ ಮಹನೀಯರವರು. (ಹೀಗೆ ಹೇಳುವಾಗ ಶ್ರೀಗಳು ಗದ್ಗದಕಂಠರಾದರು) ಹನ್ನೆರಡು ವರ್ಷಗಳ ಕೆಳಗೆ ಅವರು ನಮ್ಮನ್ನು ನೋಡಲು ಕಂಚಿಗೆ ಬಂದಿದ್ದರಲ್ಲವೆ?

ಉತ್ತರ: ಹೌದು ಸ್ವಾಮಿ, ವಿಠಲಶಾಸ್ತ್ರಿಗಳವರೊಡನೆ ಬಂದಿದ್ದರು. ಆಗ್ಗೆ ತಾವು ಅವರಿಗೆ ವೈರಾಗ್ಯದ ಕುರುಹಾಗಿ ವ್ಯಾಘ್ರಾಜಿನವನ್ನು ಕೊಡೋಣವಾಗಿತ್ತು.

ಪ್ರಶ್ನೆ: ನೆನಪಿದೆ. ಆಗ "ವ್ಯಾಖ್ಯಾನತೋ ವಿಶೇಷಪ್ರತಿಪತ್ತಿಃ"–ಎಂದು ಹೇಳುವರಲ್ಲ, ನೀವು ವ್ಯಾಖ್ಯಾನಕಾರರನ್ನೇಕೆ ಖಂಡಿಸುವಿರಿ?" ಎಂದು ಕೇಳಲಾಗಿತ್ತು.

ಉತ್ತರ: ಹೌದು. ಅದಕ್ಕೆ "ವಿಶೇಷಪ್ರತಿಪತ್ತಿಯಾದರೆ ಬಹಳ ಸಂತೋಷ. ಅದರ ಬದಲು ವಿರುದ್ಧ ಪ್ರತಿಪತ್ತಿಯಾದರೆ ಏನು ಮಾಡಬೇಕು?" ಎಂದಿದ್ದರು.

ಪ್ರಶ್ನೆ: "ಹಾಗೆಲ್ಲಿದೆ? ತೋರಿಸಿರಿ" ಎಂದು ಕೇಳಿದ್ದೆವಲ್ಲವೆ?

ಉತ್ತರ: ಹೌದು. ಆಗ ನಮ್ಮ ಶ್ರೀಗಳು "ರೂಪೋಪನ್ಯಾಸಾಚ್ಚ" (ಬ್ರ. ಸೂ. 1–2–23) ಎಂಬ ಸೂತ್ರಕ್ಕೆ ಶಂಕರಾಚಾರ್ಯರು ಬರೆದಿರುವ ಭಾಷ್ಯಾಭಿಪ್ರಾಯಕ್ಕೆ ವಿರುದ್ಧವಾಗಿ 'ಭಾಮತೀ'ಕಾರರೂ ಅವರಿಗೆ ವಿರುದ್ಧವಾಗಿ 'ಕಲ್ಪತರು' ಕಾರರೂ ಅವರಿಗೆ ವಿರುದ್ಧವಾಗಿ 'ಪರಿಮಳ'ಕಾರರೂ ಬರೆದಿರುವದನ್ನು ಉದಾಹರಿಸಿ ವಿಶೇಷಪ್ರತಿಪತ್ತಿಯ ಬದಲು ವಿಪ್ರತಿಪ್ರತ್ತಿಯೇ ಆಗಿದೆ' ಎಂದಿದ್ದರು.

ಪ್ರಶ್ನೆ: ಹೌದು, ನಾನೂ ನೋಡಿದ್ದೇನೆ. ನಿಮ್ಮ ಶ್ರೀಗಳ ವಿರೋಧಿಗಳಿಗೆ ನಾವು ಉತ್ತರಕೊಡಬಹುದಾಗಿತ್ತಾದರೂ ನಾನು ಸಂನ್ಯಾಸಿಯಾದ್ದರಿಂದ ಸಂನ್ಯಾಸಧರ್ಮಕ್ಕೆ ವಿರುದ್ಧವಾಗಿ ಯಾರನ್ನೂ ನಿಂದಿಸುವ ಅಥವಾ ಮನನೋಯಿಸುವ ಕೆಲಸ ಮಾಡಲು ಇಷ್ಟಪಡಲಿಲ್ಲ, ತಿಳಿಯಿತೆ?

ಉತ್ತರ: ತಿಳಿಯಿತು. (ಹೀಗೆಂದು ನಮಸ್ಕರಿಸಿ ಅಲ್ಲಿಂದ ಹೊರಟೆನು).

# 49. ಶ್ರೀಶ್ರೀಭಗವತ್ಪಾದರೊಡನೆ ಸಂದರ್ಶನ–1

## (ಅಕ್ಟೋಬರ್ 1980)

ಇಟಲಿದೇಶದ ಅಲೆಸಾಂಡ್ರೋ ಬ್ರುಸ್ಕೇಟಿನಿ (Allessandro Bruchettini) ಎಂಬುವರು ಅಧ್ಯಾತ್ಮಪ್ರೇಮಿಗಳಾದ ಮಿಸೆಸ್ ಅಮೆಲಿಟಾ ಬೊಟಾರೊ (Amelitta Botaro) ಎಂಬ ವೃದ್ಧಮಹಿಳೆಯೊಂದಿಗೆ ಈಚೆಗೆ ಭಾರತಕ್ಕೆ ಬಂದಿದ್ದು ಬೆಂಗಳೂರು ಗಾಂಧೀನಗರದಲ್ಲಿರುವ ಅನಂತಸ್ವಾಮಿ ಆಶ್ರಮದಲ್ಲಿ ತಾ|| 9–9–80ರಿಂದ ಐದು

ದಿನಗಳ ಕಾಲ ಶ್ರೀ ಭಗವತ್ಪಾದಸ್ವಾಮಿಗಳೆಂಬ ಸಂನ್ಯಾಸಿಗಳೊಡನೆ ಸಂದರ್ಶನವನ್ನು ನಡೆಯಿಸಿ ವೇದಾಂತವಿಚಾರಗಳನ್ನು ಕುರಿತು ಚರ್ಚಿಸಿದರು. ಅಧ್ಯಾತ್ಮಜಿಜ್ಞಾಸುಗಳ ದೃಷ್ಟಿಯಿಂದ ಈ ಸಂಭಾಷಣೆಗಳು ಅನೇಕ ಮಹತ್ತ್ವದ ವಿಷಯಗಳಿಂದ ಕೂಡಿದ್ದವಾಗಿದ್ದದ್ದರಿಂದ ವಾಚಕವೃಂದಕ್ಕೆ ಉಪಯೋಗವಾಗಲೆಂದು ಪ್ರಶ್ನೋತ್ತರ ರೂಪವಾಗಿ ಅವುಗಳನ್ನು ಇಲ್ಲಿ ವರದಿ ಮಾಡಿದ್ದೇನೆ. ಪ್ರಾರಂಭಕ್ಕೆ ಶ್ರೀ ಭಗವತ್ಪಾದರ ಮತ್ತು ಬ್ರುಸ್ಕೇಟನಿಯವರ ಸೂಕ್ಷ್ಮಪರಿಚಯವನ್ನೂ ಕೊಡಲಾಗಿದೆ.

## ಶ್ರೀ ಭಗವತ್ಪಾದಸ್ವಾಮಿಗಳು

ಊರು, ಆಶ್ರಮ, ವಿಳಾಸ–ಮೊದಲಾದ ಯಾವ ಉಪಾಧಿಗಳೂ ಇಲ್ಲದ, ಹಾಗೂ ಶಿಷ್ಯರ ಮೂಲಕ ಮಾತ್ರವೇ ಇರುವ ಜಾಗವನ್ನು ತಿಳಿದುಕೊಳ್ಳಬೇಕಾದಂಥ, ಅನಿಕೇತರೂ ಸ್ಥಿರಮತಿಗಳೂ ಆದ, ಪೂರ್ಣವೈರಾಗ್ಯ, ಶಮದಮಶಾಂತ್ಯಾದಿಗುಣಸಂಪನ್ನರಾದ ಪರಿವ್ರಾಜಕರಿವರು. ಕನ್ನಡಭಾಷೆಯನ್ನು ಚೆನ್ನಾಗಿಬಲ್ಲವರು. ಕಾರ್ಯಾಲಯದ ಸಂಸ್ಥಾಪಕರಾದ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು 1955ರಲ್ಲಿ ದಾವಣಗೆರೆಯಲ್ಲಿ ಚಾತುರ್ಮಾಸ್ಯವ್ರತವನ್ನು ಕೈಗೊಂಡಾಗ ಇವರು ಶಿಷ್ಯರಾಗಿ ಬಳಿಸಾರಿ ಶ್ರೀಶ್ರೀಗಳವರ ಬೋಧೆಯಿಂದ ಪ್ರಭಾವಿತರಾದರು. ಮುಂದೆ ಹನ್ನೆರಡುವರ್ಷಗಳ ಕಾಲ ಶ್ರೀಶ್ರೀಗಳವರ ಅನುಯಾಯಿಗಳಾಗಿ ಗುರುಗಳನ್ನು ಸೇವಿಸುತ್ತಾ ವೇದಾಂತರಹಸ್ಯಗಳನ್ನು ತಿಳಿದುಕೊಂಡವರಾದರು. 'ಪರಮಾರ್ಥಚಿಂತಾಮಣಿ' ಗ್ರಂಥವನ್ನು ನೇರಾಗಿ ಗುರುಮುಖದಿಂದ ಪಾಠಹೇಳಿಸಿಕೊಂಡು ಮನನಮಾಡಿ ಅದರಲ್ಲಿ ಪರಿಣತಿಯನ್ನು ಹೊಂದಿ ಈಗಲೂ ಇವರು ತಮ್ಮ ಪ್ರವಚನಗಳಿಗೆ ಈ ಗ್ರಂಥವನ್ನೇ ಪ್ರಧಾನವಾಗಿಟ್ಟು ಕೊಂಡಿರುತ್ತಾರೆ. ಸುಲಭ ದೃಷ್ಟಾಂತಗಳಿಂದ ಅನುಭವಪೂರ್ಣವಾಗಿ ಹೃದಯಸ್ಪರ್ಶಿಯಾದ ಮೃದುಶೈಲಿಯಲ್ಲಿ ಇವರು ನಡೆಯಿಸುವ ಪ್ರವಚನಗಳು ಶ್ರೋತೃಗಳನ್ನು ತಲ್ಲೀನರನ್ನಾಗಿ ಮಾಡುವವು. ಶಾಸ್ತ್ರಪ್ರಕ್ರಿಯೆಗಳ ಗಡಿಬಿಡಿಯಿಂದ ಹೊರತಾದ–ಆದರೆ ಪೂರ್ಣವಾಗಿ ಶಾಸ್ತ್ರಾಧಾರವುಳ್ಳ ವೇದಾಂತಪ್ರಕ್ರಿಯೆಗಳನ್ನು ಅದರಲ್ಲಿಯೂ ಅವಸ್ಥಾತ್ರಯಪ್ರಕ್ರಿಯೆಯನ್ನು ಪ್ರತಿಪಾದಿಸುವದರಲ್ಲಿ ಇವರು ಸಿದ್ಧಹಸ್ತರಾಗಿರುವರು. ಇಂಥ ಮಹನೀಯರು ಈಗ ಪೃಚ್ಛಕರ ಸಂಶಯಗಳನ್ನು ಪರಿಹರಿಸಲಿದ್ದಾರೆ.

## ಶ್ರೀ॥ ಬ್ರುಸ್ಕೆಟನಿಯವರು

ಇಟಲಿ ದೇಶದವರಾದ ಇವರು ತಮ್ಮ 23ನೆಯ ವಯಸ್ಸಿನಲ್ಲಿಯೇ 'ಸೂಫಿ' ಹಾಗೂ ಇತರ ತತ್ತ್ವಶಾಸ್ತ್ರಗಳಲ್ಲಿ 'ಡಾಕ್ಟರೇಟ್' ಪದವಿಯನ್ನು ಪಡೆದು ಅನಂತರ ಭಾರತೀಯ ತತ್ತ್ವಜ್ಞಾನ (ವೇದಾಂತ)ವನ್ನು ಅಧ್ಯಯನ ಮಾಡಿರುತ್ತಾರೆ. ಈಗ ಅವರಿಗೆ 42 ವರ್ಷಗಳು. ಈ ಅವಧಿಯಲ್ಲಿ ಎಂಟು–ಹತ್ತು ಬಾರಿ ಭಾರತಕ್ಕೆ ಬಂದು ವೇದಾಂತ ವಿಚಾರದಲ್ಲಿ ಶ್ರೀರಮಣಾಶ್ರಮದ ಸಾಧುಗಳು, ಕೇರಳದ ಶ್ರೀಕೃಷ್ಣಮೆನನ್, (ಆತ್ಮಾನಂದರು) ಮದ್ರಾಸಿನ ಡಾ॥ ಟಿ.ಎಂ.ಪಿ. ಮಹದೇವನ್–ಮುಂತಾದ ಪ್ರತಿಷ್ಠಿತರೊಡನೆ ವಿಚಾರವಿನಿಮಯ ಮಾಡಿಕೊಂಡಿರುತ್ತಾರೆ. ಶೃಂಗೇರಿ ಜಗದ್ಗುರುಗಳ ಸಂದರ್ಶನವೂ ಇವರಿಗೆ ಲಭ್ಯವಾಗಿದೆ. 1972ರಲ್ಲಿ ಬೆಂಗಳೂರಿನಲ್ಲಿ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳನ್ನು ಪ್ರಥಮ ಬಾರಿಗೆ ದರ್ಶನ ಮಾಡಿ ವೇದಾಂತ ವಿಚಾರಗಳನ್ನು ಚರ್ಚಿಸಿದಾಗ ಇವರಿಗೆ ತೃಪ್ತಿಯುಂಟಾಯಿತು. ಅಂದಿನಿಂದ ಪ್ರತಿವರ್ಷವೂ ಬಂದು ಶ್ರೀಶ್ರೀಗಳವರ ದರ್ಶನವನ್ನು ಪಡೆಯುತ್ತಿದ್ದರು. ಶ್ರೀಗಳ ಜೀವಿತ ಕಾಲದಲ್ಲಿ ತಮ್ಮ ಸಂಶಯಗಳನ್ನೆಲ್ಲ ಸಾಕಷ್ಟು ಬಗೆಹರಿಸಿಕೊಂಡು ಪರಿಶುದ್ಧಶಾಂಕರ ವೇದಾಂತ ವ್ಯಾಸಂಗಕ್ಕೆ ಖಾಯಂ ವಿದ್ಯಾರ್ಥಿಯಾದರು. 1977 ರಿಂದ 'ಮಾಂಡೂಕ್ಯರಹಸ್ಯ ವಿವೃತಿಃ' ಎಂಬ ಶ್ರೀಶ್ರೀಗಳವರ ಸಂಸ್ಕೃತಗ್ರಂಥವನ್ನು ಈ ವರದಿಗಾರನ ಮೂಲಕ ಇಂಗ್ಲಿಷಿಗೆ ಭಾಷಾಂತರಿಸುವ ವ್ಯವಸ್ಥೆಯನ್ನು ಕೈಗೊಂಡು ಬಹಳ ಮಟ್ಟಿಗೆ. ಆಂಗ್ಲಾನುವಾದವು ಪೂರೈಸಿರುವ ಆ ಗ್ರಂಥವನ್ನು ವ್ಯಾಸಂಗಮಾಡಿರುವ ಇವರು ವೇದಾಂತ ಪ್ರಕ್ರಿಯೆಗಳನ್ನು ಚೆನ್ನಾಗಿ ಮನನ ಮಾಡಿಕೊಂಡಿರುವ ಉತ್ತಮಾಧಿ ಕಾರಿಗಳಾಗಿದ್ದಾರೆ. ''ಮಾಂಡೂಕ್ಯೋಪನಿಷತ್ತಿನ ಅವಸ್ಥಾತ್ರಯಪ್ರಕ್ರಿಯೆಯು ನನ್ನ ಜೀವನದಲ್ಲಿಯೇ ಒಂದು ಹೊಸ ತಿರುವನ್ನು ಕೊಟ್ಟಿತು. ಶ್ರೀಶ್ರೀಗಳವರ ಅಸಾಧಾರಣವಾದ ಬರಹ–ಬೋಧೆಗಳಿಂದ ವೇದಾಂತ ಮಾರ್ಗದಲ್ಲಿ ನನಗೆ ಸಂಪೂರ್ಣ ತೃಪ್ತಿಯು ಸಿಕ್ಕಿದೆ'' ಎಂದು ಇವರು ತಿಳಿಸುತ್ತಾರೆ. ಭಾರತಕ್ಕೆ ಬಂದಾಗಲೆಲ್ಲ ಹೊಳೆನರಸೀಪುರಕ್ಕೆ ಬಂದು ಶ್ರೀಶ್ರೀ ಸಮಾಧಿಯನ್ನು ಸಂದರ್ಶಿಸಿ ಕೆಲಕಾಲ ಅಲ್ಲಿಯೇ ಧ್ಯಾನಮಗ್ನರಾಗಿ ಕುಳಿತುಕೊಳ್ಳುವ ಅವಕಾಶವನ್ನು ಇವರು ಎಂದಿಗೂ ಕಳೆದುಕೊಳ್ಳುವದಿಲ್ಲ. ಇವರ ಸಂಪರ್ಕದಿಂದಲೇ ಶ್ರೀಮತಿ ಅಮೆಲಿಟಾ ಬೊಟಾರೋರವರೂ ಪ್ರಭಾವಿತರಾಗಿದ್ದು ವೇದಾಂತವಿಚಾರದಲ್ಲಿ ಸಾಕಷ್ಟು ಪರಿಶ್ರಮಹೊಂದಿರುತ್ತಾರೆ. ಇಂಥ ಶ್ರೇಷ್ಠ ಜಿಜ್ಞಾಸುಗಳೇ ಈಗ ಪೃಚ್ಛಕರಾಗಿರುತ್ತಾರೆ.

## ಪ್ರಶ್ನೋತ್ತರಗಳು

**1. ಪ್ರಶ್ನೆ:** ಎಚ್ಚರಕನಸುಗಳಿಗೆ ಸಮಾನವಾದ ದೇಶಕಾಲಗಳಿಲ್ಲ. ಆದ್ದರಿಂದ ಎಚ್ಚರದಲ್ಲಿ ಕನಸಿನ ನೆನಪು ಬರುವದೆಂಬುದು ಹೊಂದುವದಿಲ್ಲ. ಅದು ಸ್ಮೃತ್ಯಾಭಾಸ ಎಂದೂ ನನಗೆ ಗೊತ್ತಾಗಿದೆ. ಆದರೆ ವ್ಯಾವಹಾರಿಕವಾಗಿ ಕನಸಿನ ಸ್ಮೃತಿಯು ಎಚ್ಚರದಲ್ಲಿ ಬರುವದೆಂದು ನಾವು ಒಪ್ಪಿದಾಗ ಅದೇ ಅಂತಸ್ತಿನಲ್ಲಿಯೇ ಒಂದು ಸಮಾಧಾನವು ಬೇಕಾಗಿದೆ. ಅದೇನೆಂಬುದನ್ನು ಹೇಳಬಲ್ಲಿರಾ?

**ಉತ್ತರ:** ಎಚ್ಚರದ ಅವಸ್ಥೆಯು ತೋರಿಕೊಳ್ಳುವ ಮೊದಲು ಆತ್ಮನು ತಾನೊಬ್ಬನೇ ಇರುವನು. ಅವನೇ ಆಧ್ಯಾತ್ಮಿಕಾಧಿಭೌತಿಕಾಧಿದೈವಿಕವಿಭಾಗದಿಂದ ವಿಂಗಡವಾಗಿ ಕಾಣುವ ಇಡಿಯ ಎಚ್ಚರದವಸ್ಥೆಯಾಗಿ ಆ ಕಾಲಕ್ಕೆ ಹೊರತೋರಿಕೊಳ್ಳುವನು. ಹಾಗೆಯೇ 'ತಾನೊಬ್ಬನೇ' ಕನಸಾಗಿಯೂ ತೋರಿಕೊಳ್ಳುತ್ತಾನಷ್ಟೆ! ಪರಮಾರ್ಥವಾಗಿ ನೋಡಿದರೆ ಈ ಎರಡು ಹುಸಿತೋರಿಕೆಗಳಿಗೂ ಪರಸ್ಪರವಾಗಿ ಯಾವದೇ ಕಾಲದೇಶಕಾರ್ಯಕಾರಣ ಸಂಬಂಧಗಳಿಲ್ಲ–ಎಂಬುದು ಸ್ಪಷ್ಟವಾಗಿದೆ. ಹೀಗಿದ್ದರೂ ವ್ಯಾವಹಾರಿಕವಾಗಿ ಹೇಳಹೊರಟಾಗ ಆತ್ಮನು ಎಚ್ಚರದವಸ್ಥೆಯಾಗಿ ತೋರಿಕೊಂಡ ಸಮಯದಲ್ಲಿ ''ಕನಸು–ನಿದ್ರೆಗಳೆಂಬ ಅವಸ್ಥೆಗಳೂ ಉಂಟು''–ಎಂಬ ಕಲ್ಪನೆ ನಮಗೆ ಬಂದಿರುತ್ತದೆ. ಆದರೆ ಆ ಕಲ್ಪನಾರೂಪದಿಂದಲೂ ಕಂಡಿರುವವನು ಆತ್ಮನೇ ಎಂಬಿದನ್ನು ಮರೆಯಬಾರದು. ಅಂದರೆ ಜಾಗ್ರದಾದಿ ಎಲ್ಲಾ ಕಲ್ಪನೆಗಳಿಗೂ ಆಶ್ರಯವಾಗಿರುವ ಅಂತಃಕರಣರೂಪದಿಂದಲೂ ಅದೇ ಆತ್ಮನೇ ಅಜ್ಞರಿಂದ ವಿಕಲ್ಪಿತನಾಗಿರುತ್ತಾನೆಂದಾಯಿತು. ಎಚ್ಚರದಲ್ಲುಂಟಾಗುವ ಈ ಕನಸುನಿದ್ರೆಗಳ ನೆನಪು ಆತ್ಮನನ್ನು ಗುರುತಿಸಲು ಒಂದು ರೀತಿಯಿಂದ ಉಪಾಯವಾಗಿಯೇ ಇದ್ದಂತಾಯಿತು. ಆದ್ದರಿಂದ ಎಚ್ಚರದಲ್ಲಿ ಕನಸು–ನಿದ್ರೆಗಳ ಸ್ಮೃತಿಯು ಅಂತಃಕರಣದ ಮೂಲಕ ಬರಬಹುದಾಗಿದೆ. ಇಲ್ಲಿ ಅಂತಃಕರಣದ ಸ್ಥಾನವೇನೆಂಬುದನ್ನು ಒಂದು ದೃಷ್ಟಾಂತದಿಂದ ಸ್ಪಷ್ಟಪಡಿಸಬಹುದು. ಪರಸ್ಪರ ದೂರದಲ್ಲಿರುವ ಸುಶಿಕ್ಷಿತರಿಬ್ಬರು ಒಬ್ಬರಿಗೊಬ್ಬರು ಒಂದು ಸಂದೇಶವನ್ನು ಕಳುಹಿಸುವಂಥ ಸಂದರ್ಭವೊಂದು ಒದಗಿದೆಯೆಂದಿಟ್ಟುಕೊಳ್ಳಿ. ಆಗ ಒಬ್ಬ ಸುಶಿಕ್ಷಿತನು ತನ್ನ ಸೇವಕನ ಮೂಲಕ ಹೇಳಿಕಳುಹಿಸುವ ಸಂದೇಶವನ್ನು ಸೇವಕನು ತನ್ನ ಭಾಷೆಯಿಂದ ಮಾತ್ರ ಇನ್ನೊಬ್ಬನಿಗೆ ಹೇಳಲು ಸಾಧ್ಯವಾಗುತ್ತದೆ. ಆದರೆ ಸಂದೇಶವನ್ನು ಕೇಳುವವನೇನೂ ಈ ಸೇವಕನ ಶಬ್ದಪ್ರಯೋಗಗಳನ್ನು ಪರಮಾರ್ಥವಾಗಿ ಗ್ರಹಿಸುವದಿಲ್ಲ. ವಿಷಯವನ್ನು ಮಾತ್ರ ಸ್ವೀಕರಿಸುತ್ತಾನೆ. ಹಾಗೆಯೇ ''ಬುದ್ಧಿ'' ಸೇವಕನು ''ಕನಸಿನ ನೆನಪು ಈಗ ಉಂಟಾಗಿದೆ'' ಎಂದು ಎಚ್ಚರದಲ್ಲಿ ಹೇಳಿದರೆ ಆತ್ಮನು ಅದನ್ನು

ತನ್ನ ಆಭಾಸವಾಗಿಯೇ ಪರಿಗ್ರಹಿಸುವನು. ಈ ಅಭಿಪ್ರಾಯದಲ್ಲಿ ಎಚ್ಚರದಲ್ಲುಂಟಾದ ಕನಸಿನ ನೆನಪನ್ನು ಸ್ವೀಕರಿಸಲಡ್ಡಿಯಿಲ್ಲ.

2. ಪ್ರಶ್ನೆ*: ನಾನು ಮೊದಲಿನಿಂದಲೂ ಭಗವದ್ಭಾವನೆ, ಕರ್ಮಯೋಗ, ಪಾರಾಯಣ, ನಾಮಸ್ಮರಣಾದಿಗಳನ್ನು ಮಾಡುತ್ತಿದ್ದೆನು. ಈಚೆಗೆ ವೇದಾಂತದಲ್ಲಿ ಪ್ರವೇಶವು ದೊರಕಿ 'ಆತ್ಮನೊಬ್ಬನೇ ಪರಮಾರ್ಥವು. ಇದೆಲ್ಲವೂ ಆತ್ಮನೇ' ಎಂಬ ಅರಿವು ಚೆನ್ನಾಗಿ ಮೂಡಿದೆ. ಮೊದಲಿನ ಸಾಧನೆಗಳ ಆವಶ್ಯಕತೆ ಈಗ ಕಂಡು ಬರುವದಿಲ್ಲವಾದರೂ ನನ್ನ ಮನಸ್ಸು ಸಹಜವಾಗಿ ಹಿಂದಿನ ಸಾಧನೆಗಳನ್ನು ಮಾಡುತ್ತಲೇ ಇರುತ್ತದೆ. ಇದು ಹೇಗೆ?

ಉತ್ತರ: ಇದು ಅಭ್ಯಾಸಬಲದಿಂದಾದದ್ದು. ಒಬ್ಬ ಗಾಣಿಗನು ತನ್ನ ಮುದಿ ಎತ್ತನ್ನು ಗಾಣದಿಂದ ಬೇರ್ಪಡಿಸಿ ಬೇರೆಯ ಜಾಗದಲ್ಲಿ ಕಟ್ಟಿದ್ದನು. ಅದಕ್ಕೆ ಕೆಲಸವೇನೂ ಇರಲಿಲ್ಲ. ಆದರೂ ಆ ಎತ್ತು ತನ್ನನ್ನು ಕಟ್ಟಿದ್ದ ಗೂಟದ ಸುತ್ತಲೂ ಅಭ್ಯಾಸ ಬಲದಿಂದ ತಿರುಗುತ್ತಲೇ ಇತ್ತು. ಹಾಗೆಯೇ ಅಂತಃಕರಣವೂ ಆತ್ಮಸ್ವರೂಪವನ್ನು ಗುರುತಿಸಿದ ಅನಂತರವೂ ಸದಾಭ್ಯಾಸಬಲದಿಂದ ನಾಮಸ್ಮರಣಾದಿಗಳನ್ನು ಮಾಡುತ್ತಿದ್ದರೆ ದೋಷವೇನೂ ಇಲ್ಲ. ಜ್ಞಾನಿಯ ಕರ್ಮಗಳೆಲ್ಲ ಬಾಧಿತಾನುವೃತ್ತಿಯಿಂದ ಸಾಗುತ್ತಿರುವವು. ಆದ್ದರಿಂದ ಅವು ಕರ್ಮಾಭಾಸಗಳೇ ಆಗಿರುವವು.

3. ಪ್ರಶ್ನೆ: ನನಗೆ ವಿವೇಕಕಾಲದಲ್ಲಿ ಅಧ್ಯಾತ್ಮಯೋಗದ ಮಾರ್ಗದಂತೆ ಮನಸ್ಸು ಹಿಂದಕ್ಕೆ ಸರಿದು ಆತ್ಮನಲ್ಲಿ ನಿಂತುಬಿಡುವದು ಸಾಧ್ಯವಾಗುತ್ತದೆ. ಆದರೆ ಅದು ಪುನಃ ವ್ಯವಹಾರದತ್ತ ಮುಖವಾದಾಗ 'ನಾನು' 'ಜಗತ್ತು' ಮುಂತಾಗಿ ದ್ವೈತವೆಲ್ಲ ತೋರಲಾರಂಭಿಸಿ ಸುಖದುಃಖಗಳಿಗೆ ತುತ್ತಾಗಿಬಿಡುತ್ತದೆ. ಇದನ್ನು ಹೇಗೆ ನಿವಾರಿಸಬೇಕು?

ಉತ್ತರ: 'ದ್ವೈತವೆಲ್ಲವೂ ಆತ್ಮನಲ್ಲಿ ಕಲ್ಪಿತವೇ'–ಎಂಬ ನಿಶ್ಚಯವು ದೃಢವಾಗುವವರೆಗೆ ಹೀಗಾಗುವದು ಸಹಜ. ನಾನು ಎಂಬಿದು ಮೊದಲುಗೊಂಡು ತೋರುವ ಎಲ್ಲಾ ವಿಕಲ್ಪಗಳೂ ಆತ್ಮವ್ಯಾಪ್ತವಾದವುಗಳೇ, ಆತ್ಮನ ಹಿನ್ನೆಲೆಯಿಲ್ಲದ ತೋರಿಕೆಯೆಂಬುದೇ ಇಲ್ಲ–ಎಂದು ಕಂಡುಕೊಳ್ಳಬೇಕು. 'ಆತ್ಮಸತ್ಯಾನುಬೋಧ' ವೆಂದು ಇದನ್ನು ಕರೆಯುವರು. ಒಬ್ಬ ಹಾದಿಹೋಕನು ರಾತ್ರಿ ವೇಳೆಯಲ್ಲಿ ದೇವಾಲಯವನ್ನು ಪ್ರವೇಶಿಸಿ ಮಳೆ ಬರುತ್ತಿದ್ದುದರಿಂದ ಅಲ್ಲಿಯೇ ತಂಗಿದ್ದನು. ಆಗ ಅವನು ದೇವಾಲಯವನ್ನು ಒಳಗೆ ಚೆನ್ನಾಗಿ ನೋಡಿರಲಿಲ್ಲ. ಬೆಳಗಿನ ಝಾವದಲ್ಲೆದ್ದು ಹೊರಗಡೆಗೆ ಹೋಗಲು ಯತ್ನಿಸಿದಾಗ ಅಲ್ಲಿದ್ದ ಹುಲಿಯನ್ನು ಕಂಡು ಬೆದರಿದನು. ಅನಂತರ ಚೆನ್ನಾಗಿ

* ಎರಡು ಮತ್ತು ಮೂರನೆಯದು ಅಮೆಲಿಟಾ ಬೊಟಾರೊರವರ ಪ್ರಶ್ನೆ.

ಬೆಳಕಾಗುವವರೆಗೂ ಹೇಗೋ ಒದ್ದಾಡಿ ಹೊರಬಂದಾಗ ಅದು ಕಲ್ಲಿನಲ್ಲಿ ಮಾಡಿದ್ದ ಬಣ್ಣದ ಹುಲಿಯೆಂತ ತಿಳಿಯಿತು. ಆಗ ಅವನ ಭಯವು ಪೂರ್ಣವಾಗಿ ಹೋಯಿತು. ಈ ಉದಾಹರಣೆಯಲ್ಲಿ ಅವನ ಮನಸ್ಸು ಹೇಗೆ 'ಹುಲಿಯೆಂಬುದೆಲ್ಲ ಕಲ್ಲೇ' ಎಂಬ ನಿಶ್ಚಯದಿಂದ ನಿರ್ಭಯವಾಯಿತೋ ಹಾಗೆ ಒಳಗೂ ಹೊರಗೂ ತೋರುವದೂ ಅಡಗುವದೂ ಆತ್ಮನೇ–ಎಂಬ ದೃಢನಿಶ್ಚಯವುಂಟಾದಾಗ ಮನಸ್ಸು ಸುಖದುಃಖಗಳಿಂದ ಪೂರ್ಣವಾಗಿ ಬಿಡುಗಡೆಯನ್ನು ಹೊಂದುತ್ತದೆ. ಇನ್ನೂ ಸಾಧನಸ್ಥಿತಿಯಲ್ಲಿರುವವರಿಗೆ ಒಳಸರಿದಾಗ ಎಲ್ಲವೂ ಆತ್ಮನು, ಹೊರಬಂದಾಗ ಅನಾತ್ಮವೆಂಬ ಭ್ರಾಂತಿಯು–ಹುಲಿಯ ನಿಜವನ್ನರಿಯದವನಿಗೆ ಭಯವು ಇದ್ದಂತೆ–ಇರುತ್ತದೆ. ಆದರೆ ಆ ಭ್ರಾಂತಿಕಾಲದಲ್ಲಿಯೂ ಆತ್ಮನೊಬ್ಬನೇ ಇದ್ದವನು ಎಂಬ ಪರಮಾರ್ಥಸತ್ಯವು ಅನುಭವಕ್ಕೆ ಬಂದಾಗ ಈ ವಿಕಲ್ಪವು ಇಲ್ಲವಾಗುವದು.

# 50. ಶ್ರೀ ಶ್ರೀ ಭಗವತ್ಪಾದರೊಡನೆ ಸಂದರ್ಶನ–2

**(ಡಿಸೆಂಬರ್ 1980)**

**ಪ್ರಶ್ನೆ:** ಮಾಂಡೂಕ್ಯೋಪನಿಷತ್ತನ್ನು ಓದಿದ ಅನಂತರ ಅವಸ್ಥಾತ್ರಯ ವಿವೇಕತರ್ಕದಿಂದ ಪರಮಾರ್ಥವನ್ನು ನೋಡುವಾಗ ನನ್ನ ದೃಷ್ಟಿಯೇ ಬದಲಾಯಿಸಿತು. ಆದ್ದರಿಂದ ಅವಸ್ಥೆಗಳ ತಿರುಳೇನು? ಎಂಬಿದನ್ನು ವಿವರಿಸೋಣವಾಗಬೇಕು.

**ಉತ್ತರಃ** ಅವಸ್ಥಾತ್ರಯದ ಬಗ್ಗೆ ಎಲ್ಲಾ ವಿಚಾರಗಳನ್ನೂ ಪ್ರಸ್ತಾಪಿಸಲು ಈ ಅಲ್ಪಕಾಲದಲ್ಲಿ ಸಾಧ್ಯವಿಲ್ಲ. ಆದರೆ ಅವಸ್ಥೆಗಳ ಹೆಗ್ಗುರುತುಗಳು, ಅವುಗಳ ಅಧ್ಯಾರೋಪ–ಇಷ್ಟನ್ನು ಸದ್ಯಕ್ಕೆ ತಿಳಿಸುವೆನು. ಮೊದಲನೆಯದಾಗಿ ಅವಸ್ಥೆ ಎಂಬ ಮಾತಿಗೆ ಬಾಲ್ಯ, ಯೌವನ, ವೃದ್ಧಾಪ್ಯಗಳಂತೆ ಎಚ್ಚರಕನಸುನಿದ್ರೆಗಳು ವಿಕಾರಗಳಲ್ಲ. ಏಕೆಂದರೆ ಬಾಲ್ಯಾದಿಗಳು ಒಮ್ಮೆ ಬಂದು ಹೋದ ಮೇಲೆ ಮತ್ತೆ ಬರಲಾರವು. ಆದರೆ ಎಚ್ಚರ ಕನಸುಗಳು ಮತ್ತೆಮತ್ತೆ ತೋರಿಹಾರುತ್ತಿರುವದು ಅನುಭವದಲ್ಲಿದೆ. ಎರಡನೆಯದಾಗಿ ಅವಸ್ಥೆ ಎಂಬ ಮಾತಿಗೆ ಒಂದು ನಿಲುಗಡೆಯ ಹಂತ (Stage) ಎಂದೂ ಅರ್ಥವಲ್ಲ. ಏಕೆಂದರೆ ನಿಲುಗಡೆಯ ಹಂತದಲ್ಲಿ ಒಂದು ವಸ್ತುವು ಒಂದು ಕಡೆಯಿಂದ ಸಾಗಿ ಬಂದು ಇನ್ನೊಂದು ಹಂತದಲ್ಲಿ ನಿಲ್ಲುತ್ತದೆ. ಈ ಸ್ಥಿತಿಯನ್ನು ಅವಸ್ಥೆ ಎನ್ನುತ್ತಾರೆ. ಆದರೆ ಎಚ್ಚರ, ಕನಸು, ನಿದ್ರೆಗಳು ಹೀಗಲ್ಲ ; ಅವು ಕಾಲ, ದೇಶ, ಕಾರ್ಯಕಾರಣಭಾವಗಳಿಗೆ ಒಳಪಟ್ಟಿರುವದಿಲ್ಲ. ಆ ಅವಸ್ಥೆಗಳಲ್ಲಿಯೇ ಈ ಭೇದಗಳು

ಅಡಕವಾಗಿರುತ್ತವೆ. ಆದ್ದರಿಂದ ಇವುಗಳನ್ನು ಹಂತವೆಂದೂ ಕಲ್ಪಿಸುವಂತಿಲ್ಲವಾಗಿದೆ. ಹಾಗಾದರೆ ಅವಸ್ಥೆಯೆಂದರೇನು? ಎಂಬ ಪ್ರಶ್ನೆಗೆ **'ಪರಮಾರ್ಥವು ತಾನು ತೋರಿಕೊಳ್ಳುವ ಪ್ರಕಾರ'** ಎಂಬಿದೇ ಇಲ್ಲಿ ಉತ್ತರವಾಗಿದೆ. ಯಾವದೇ ಒಂದು ಅವಸ್ಥೆಯಾಗಿ ಪರಮಾರ್ಥವು ತೋರಿ ಕೊಂಡಾಗಲೂ ಅಧ್ಯಾತ್ಮಾದಿ ವಿಭಾಗಗಳು, ಕಾಲದೇಶಾದಿಗಳು, ಜೀವೇಶ್ವರರು, ನಮಗೆ ತಿಳಿದದ್ದೆಲ್ಲವೂ, ತಿಳಿಯದ್ದೆಲ್ಲವೂ– ಅಂತೂ ನಾನು ಇಂಥವನು– ಎಂಬಿದನ್ನೂ ಸೇರಿಸಿಕೊಂಡೇ ಒಟ್ಟಿನ ದೃಶ್ಯರಾಶಿಯೆಲ್ಲವೂ ಒಮ್ಮೆಗೇ ತೋರುವ ಆತ್ಮನ ಆವಿರ್ಭಾವವೇ ಅವಸ್ಥೆಯು . **ಮೂರನೆಯದಾಗಿ** ಈ ಅವಸ್ಥೆಗಳು ಒಂದು ತೋರುವಾಗ ಮತ್ತೊಂದು ಯಾವಾಗಲೂ ಎಲ್ಲಿಯೂ ಇರುವದೇ ಇಲ್ಲವೆಂಬುದನ್ನೂ ಗಮನಿಸಬೇಕು. ಆದ್ದರಿಂದ ಪರಮಾರ್ಥಕ್ಕಿಂತ ಹೊರಚ್ಚಾದ ಬೇರೊಂದು ಅವಸ್ಥೆಯಿದೆಯೆಂತ ಕಲ್ಪಿಸಲೂ ಬಾರದಾಗಿದೆ; ಎಂದರೆ ಪರಮಾರ್ಥವೇ ತಾನುತಾನಾಗಿದ್ದುಕೊಂಡೇ ಇಡಿಯ ಒಂದೊಂದು ಅವಸ್ಥೆಯಾಗಿಯೂ ತೋರಿ ಕೊಳ್ಳುತ್ತದೆ– ಎಂದಾಯಿತು. **ನಾಲ್ಕನೆಯದಾಗಿ** ಈ ತೋರಿಕೆಗಳು ಪರಮಾರ್ಥದ ಸ್ವತಂತ್ರ ತೋರಿಕೆಗಳಾದ್ದರಿಂದ ಇವುಗಳಿಗೆ ಅನ್ಯೋನ್ಯವಾಗಿ ಕಾರ್ಯಕಾರಣಭಾವವಾಗಲಿ, ಸಂಬಂಧವಾಗಲಿ ಏನೂ ಇರುವದಿಲ್ಲ. **ಐದನೆಯದಾಗಿ** ಎಚ್ಚರವು ಮೊದಲನೆಯದು, ಕನಸು ಎರಡನೆಯದು– ಎಂಬೀ ಕ್ರಮವೂ ಸರಿಯಲ್ಲ. ಈ ಅವಸ್ಥೆಗಳನ್ನು ಹಾಗೆ ಎಣಿಸಲು ಬರುವದಿಲ್ಲ. ಆದರೆ ಈ ಮೂರವಸ್ಥೆಗಳು ಎಂಬ ಭ್ರಾಂತಿಗೆ ಕಾರಣವೇನೆಂದರೆ: ಪರಮಾರ್ಥವು ಒಂದವಸ್ಥೆಯಾಗಿ ತೋರಿಕೊಂಡಾಗ ಅದರಲ್ಲಿ ಉಂಟಾಗುವ ಕಲ್ಪನೆಗಳ ನಿಮಿತ್ತದಿಂದ ಸಾಪೇಕ್ಷವಾಗಿ ಉಳಿದೆರಡನ್ನೂ ವಿಕಲ್ಪಿಸಲಾಗುತ್ತದೆ. ಒಂದವಸ್ಥೆಯನ್ನು ಎಚ್ಚರ– ಎಂದು ಭಾವಿಸಿದರೆ ಅದಕ್ಕನುಗುಣವಾಗಿ ಕನಸುನಿದ್ರೆಗಳಿವೆ– ಎಂದೂ ಅದೇ ಸ್ಥಿತಿಯಲ್ಲಿ ಕಲ್ಪನೆಯು ಬರುತ್ತದೆ. ಈ ಸಾಪೇಕ್ಷಕಲ್ಪನೆಗಳ ಸಮೇತವಾದ ಇಡಿಯ ಅವಸ್ಥೆಯೇ ಪರಮಾರ್ಥದ ತೋರಿಕೆ ಎಂದು ಅನುಭವದಲ್ಲಿ ಕಂಡುಕೊಂಡಾಗ ಅವಸ್ಥೆಗಳ ತಿರುಳೆಲ್ಲ ಪರಮಾರ್ಥವೇ ಎಂದು ಸಿದ್ಧವಾಗುತ್ತದೆ. ಸದ್ಯಕ್ಕೆ ಇಷ್ಟು ವಿಷಯಗಳನ್ನು ಮನನ ಮಾಡಬಹುದು.

**ಪ್ರಶ್ನೆ:** ಆತ್ಮನಲ್ಲಿ ಅವಸ್ಥೆಗಳ ಅಧ್ಯಾರೋಪವೆಂದರೇನು? ಅಧ್ಯಾರೋಪದ ಉದ್ದೇಶವಾದರೂ ಏನು? ತಿಳಿಸೋಣವಾಗಲಿ.

**ಉತ್ತರ: ಅಧ್ಯಾರೋಪವೆಂಬಿದು ಪರಮಾರ್ಥವನ್ನರಿತುಕೊಳ್ಳಲು ಶ್ರುತಿಯೇ ಕಲ್ಪಿಸಿರುವ ಉಪಾಯ ಮಾತ್ರವು.** ಇದರ ಉದ್ದೇಶ– ಜಿಜ್ಞಾಸುವನ್ನು ತತ್ತ್ವದಲ್ಲಿ ನೆಲೆಗೊಳಿಸುವದೇ ಆಗಿದೆ. ಅವಸ್ಥೆಗಳನ್ನೇ ಇಡಿಯಾಗಿ ಅಧ್ಯಾರೋಪ

ಮಾಡಿರುವದೂ ಶ್ರುತಿಯ ಕೆಲಸವೇ. ಆದ್ದರಿಂದ ಅಧ್ಯಾರೋಪದ ರಹಸ್ಯವನ್ನು ಅರಿಯೋಣ. ಹುಣಸೇ ಬೀಜಗಳ ಆಟದಲ್ಲಿ ಸೋತವನು ತನ್ನಲ್ಲಿ ಕಾಳು ಇಲ್ಲವಾದಾಗ ಕಲ್ಲಿನ ಹರಳುಗಳಿಂದ ಮುಂದುವರಿಸಬಹುದೆಂಬ ಆಟದ ನಿಯಮವುಳ್ಳ ಒಂದು ಕ್ರೀಡೆಯಿದೆ. ಬಿಜಾಪುರದ ಕಡೆಯಲ್ಲಿ ಇದನ್ನು 'ಕಂಕು ಹಾಕಿ ಕಾಳು ತೆಗೆಯುವದು' ಎಂದು ಕರೆಯುತ್ತಾರೆ. ಈ ಆಟದಲ್ಲಿ ಕಲ್ಲಿನ ಹರಳೇನೂ ಬೀಜಗಳಲ್ಲ. ಹಾಗೆಯೇ ಕಲ್ಲು ಹರಳಿನ ಸ್ಥಾನದಲ್ಲಿರುವ ಅವಸ್ಥೆಗಳನ್ನು ಪರಮಾರ್ಥದಲ್ಲಿ ಆರೋಪಿಸಿ ಅನಂತರ ಕಾಳು ಗೆದ್ದಂತೆ ಪರಮಾರ್ಥದಲ್ಲಿ ನೆಲೆಗೊಳ್ಳುವದೇ ಅಧ್ಯಾರೋಪಾಪವಾದವೆನಿಸುವದು. ಈ ಅಪವಾದದ ಫಲವಾಗಿ ಲಭಿಸುವ ಬ್ರಾಹ್ಮೀಸ್ಥಿತಿಯು ಹೊಸದೇನಲ್ಲ, ಮೊದಲೇ ಇದ್ದದ್ದೇ. ಇದ್ದ ಕಾಳನ್ನೇ ಗೆದ್ದಂತೆ ನಾವು ಮೊದಲೇ ಬ್ರಹ್ಮವಾಗಿಯೇ ಇದ್ದುಕೊಂಡಿರುವ ಸ್ವರೂಪವನ್ನೇ ಕಂಡುಕೊಳ್ಳುವಿಕೆ. ಇದರಿಂದ ಈ ಅರಿವಿಗೆ ಮುಂಚೆ ನಮ್ಮನ್ನು ಕಾಡುತ್ತಿದ್ದ ಮುಪ್ಪು, ಸಾವು, ಶೋಕಮೋಹಾದಿ ಭ್ರಾಂತಿಗಳು ಪೂರ್ಣವಾಗಿ ಇಲ್ಲವಾಗಿ ಬಿಡುವವು. ಪರಮಾರ್ಥದ ಅರಿವಿಗಾಗಿ ಈ ಅವಸ್ಥೆಗಳ ಅಧ್ಯಾರೋಪವೂ ಅನಂತರ ಅಪವಾದವೂ ಸಂಭವಿಸಿದಾಗ ತಾನೆಂಬ ಸ್ವರೂಪಾನುಭವದಲ್ಲಿ ನೆಲೆಯುಂಟಾಗಿ ಬಿಡುವದು. ಈ 'ತಾನು' ಮುಂಚೆಯೂ ಇದ್ದುಕೊಂಡೇ ಇತ್ತು ಎಂದೂ ಹೊಸದಲ್ಲವೆಂದೂ ಆಗಲೇ ತಿಳಿಯುತ್ತದೆ. ತಾನೆಂಬ ಅನುಭವಗಮ್ಯವಾದ ಸಚ್ಚಿದಾನಂದತತ್ತ್ವವು ನಿರ್ವಿಶೇಷವೂ ನಿರ್ವಿಕಾರವೂ ಕೂಟಸ್ಥವೂ ಆಗಿರುತ್ತದೆ. ಅಧ್ಯಾರೋಪಾಪವಾದಗಳಿಂದ ಎಳ್ಳಷ್ಟೂ ಅದರಲ್ಲಿ ಏನೂ ವ್ಯತ್ಯಾಸವಾಗುವದಿಲ್ಲ. ಇದೇ ಅಧ್ಯಾರೋಪಾಪವಾದದ ಸಾರವು.

**ಪ್ರಶ್ನೆ:** ಇತ್ತೀಚೆಗೆ ನಾನು ಹೊಳೆನರಸೀಪುರದಿಂದ ಹಿಂದಿರುಗಿ ಬರುವಾಗ ಒಂದು ಸ್ಥಳದಲ್ಲಿ ಸೂರ್ಯಾಸ್ತವಾಗುತ್ತಿರುವ ದೃಶ್ಯವನ್ನು ಬಯಲಲ್ಲಿ ನೋಡುತ್ತಾ ನಿಂತೆನು. ಸೃಷ್ಟಿ ಸೌಂದರ್ಯವನ್ನು ಏಕಾಗ್ರತೆಯಿಂದ ನೋಡುತ್ತಿದ್ದುದರ ಫಲವಾಗಿ ಒಂದು ವಿಧವಾದ ಆನಂದವು ಹೊರತೋರಿಕೊಂಡಿತು. ಕಡೆಗೆ ಆ ಆನಂದದ ಅರಿವೂ ಇಲ್ಲದ ತೂಷ್ಣೀಂಸ್ಥಿತಿಯೂ ಅನುಭವಕ್ಕೆ ಬಂದಿತು. ಈ ಆನಂದದ ಹಾಗೂ ತೂಷ್ಣೀಂಸ್ಥಿತಿಗಳ ತತ್ತ್ವವೇನು?

**ಉತ್ತರ:** ಸೌಂದರ್ಯವೆಂಬುದು ಭಗವಂತನ ವಿಭೂತಿರೂಪವೇ ಆಗಿದೆ. ಆ ಭಗವಂತನು ನಮ್ಮ ಆತ್ಮನೇ ಆಗಿದ್ದು ಆನಂದರೂಪನಾಗಿದ್ದುಕೊಂಡೇ ಇರುವನು. ನಮ್ಮ ಮನಸ್ಸು ಮಾತ್ರ ವ್ಯವಹಾರದಲ್ಲಿ ಮುಳುಗಿದ್ದಾಗ 'ನಾನು ಇಂಥವನು' ಎಂಬ ಪರಿಚ್ಛಿನ್ನಭಾವನೆಯಿಂದ ಕೂಡಿ ಸುಖದುಃಖಗಳಿಂದ ಘಾಸಿಯಾಗುತ್ತಿರುವದು. ಅದೇ ಮನಸ್ಸು ಯಾವದಾದರೊಂದು ಅಪೂರ್ವವಾದ ಹಾಗೂ ಅದ್ಭುತವಾದ ವಸ್ತುವನ್ನು

ಕಂಡಾಗ ಕೊಂಚ ಕಾಲ ನಾನು ನನ್ನದೆಂಬ ವೃತ್ತಿರಹಿತವಾಗಿ ಬಿಡುವದು. ಹೀಗೆ ಅದು ತನ್ನತನವನ್ನು ಕಳೆದುಕೊಂಡಾಗಲೇ ಅಖಂಡನಾದ ಆತ್ಮನಲ್ಲಿ ಒಂದಾಗಿಬಿಡುವದು. ಅಥವಾ ಆತ್ಮನೇ ಆ ಮನಸ್ಸಿನಲ್ಲಿ ಆವಿರ್ಭವಿಸುವನು. ಇದೇ ನಿಮಗೆ ತೋರಿಕೊಂಡ ಆನಂದಾನುಭವವು. ಅನುಭವಕಾಲದಲ್ಲಿ ಮನಸ್ಸಿನ ಹೊಯ್ದಾಟವು ಪೂರ್ಣವಾಗಿ ನಿಂತಿರುವದರಿಂದ ಕೇವಲ ಆತ್ಮಸ್ವರೂಪವೊಂದೇ ಅನುಭವಕ್ಕೆ ಬರುತ್ತದೆ. ಕೊನೆಗೆ 'ಆನಂದ' ಎಂಬ ಅನಿಸಿಕೆಯೂ ಮರೆಯಾಗಿ ತೂಷ್ಣೀಂಭಾವವು ನಮ್ಮದಾಗುತ್ತದೆ. ಈ ಸ್ಥಿತಿಯು ನಿಜವಾಗಿಯೂ ಆತ್ಮನೇ ಆಗಿದೆ. ಇದನ್ನರಿತೇ ಶಾಸ್ತ್ರಗಳಲ್ಲಿ ವಿಶ್ವವೆಲ್ಲವೂ ಬ್ರಹ್ಮಮಯವೆಂದು ಹೇಳಿರುತ್ತದೆ. ವಿಶ್ವವು ಆನಂದರೂಪವಾದ ಪರಬ್ರಹ್ಮದ ಆವಿರ್ಭಾವವೇ ಆಗಿದ್ದು ಒಳಗೂ ಅದೇ ಆನಂದವೇ ಆತ್ಮನಾಗಿಯೂ ಇದ್ದುಕೊಂಡಿರುವದರಿಂದ ಮನಸ್ಸೆಂಬ ಉಪಾಧಿಬಂಧನವು ಕಳಚಿಹೋದಾಗ ತಾನೇ ತಾನಾದ ಸ್ಥಿತಿಯಲ್ಲಿ ಅದು ಅನುಭವಕ್ಕೆ ಬರುವದು. ಇದೇ ನಿಮಗೆ ಉಂಟಾದ ಅನುಭವದ ತತ್ತ್ವವಾಗಿದೆ. ಇದು ಸ್ವಾಭಾವಿಕವಾದ ತತ್ತ್ವವೇ ಆಗಿರುತ್ತದೆ. ಉಪಾಧಿಗಳ ಮೂಲಕ ಹೊರತೋರಿದಂತೆ ಭಾಸವಾಗುತ್ತದೆ. ಅಷ್ಟೆ. ತೂಷ್ಣೀಂ ಸ್ಥಿತಿಯ ಅನುಭವವೂ ಆತ್ಮಾನುಭವವೇ ಎಂಬುದರಲ್ಲಿ ಸಂಶಯವಿಲ್ಲ. ಪ್ರತ್ಯಯಗಳ ರೂಪವಾದ ಮನಸ್ಸಿನ ವ್ಯಾಪಾರಗಳು ಯಾವದಾದರೊಂದು ಬಾಹ್ಯ ನಿಮಿತ್ತದಿಂದ ಪುಣ್ಯದ ಫಲವಾಗಿ ಕೊಂಚಕಾಲ ಶಾಂತವಾದಾಗ ಆತ್ಮಸ್ವರೂಪವು ತಾನೊಂದೇ ಕೇವಲವಾಗಿ ಪ್ರತಿಭಾಸವಾಗುತ್ತದೆ. ಈ ಆತ್ಮಾನುಭವವನ್ನೇ ಗುರುತಿಟ್ಟುಕೊಂಡಲ್ಲಿ ಮತ್ತೆಮತ್ತೆ ಪ್ರಯತ್ನದಿಂದ ಮನಸ್ಸನ್ನು ಒಳಮುಖವಾಗಿ ಮಾಡಿಕೊಂಡು ಈ ನಿರ್ವ್ಯಾಪಾರಸ್ಥಿತಿಗೆ ಒಯ್ಯಬಹುದು. ಇದೊಂದು ಸಾಧನವಾದರೂ ಕಡೆಯಲ್ಲಿ ಫಲರೂಪವಾಗಿ ಪರಿಣಾಮವಾಗಿ ಶಾಂತಿಯನ್ನು ಕೊಡುವದು.

## 51. ಶ್ರೀ ಶ್ರೀ ಭಗವತ್ಪಾದರೊಡನೆ ಸಂದರ್ಶನ–3

### (ಜನವರಿ 1981)

**ಪ್ರಶ್ನೆ:** 'ಆತ್ಮಪ್ರತ್ಯಯ' ವೆಂದರೇನು? ಮಾಂಡೂಕ್ಯದಲ್ಲಿರುವ ''ಏಕಾತ್ಮಪ್ರತ್ಯಯಸಾರಂ'' ಎಂಬಲ್ಲಿ ಸಾರ–ಎಂಬ ಮಾತಿನ ಸ್ವಾರಸ್ಯವೇನು?

**ಉತ್ತರಃ** ಆತ್ಮಪ್ರತ್ಯಯ ಎಂಬಲ್ಲಿ ಆತ್ಮನೇ ಪ್ರತ್ಯಯ–ಎಂಬ ಅಭೇದವನ್ನು ಸ್ವೀಕರಿಸಬೇಕು. ಕಲ್ಲುಗೊಂಬೆಯ ಶರೀರ–ಎಂದರೆ ಶರೀರವೆಂಬುದು ಹೇಗೆ ಕಲ್ಲೇ

ಆಗಿರುವದೋ ಹಾಗೆಯೇ ಇಲ್ಲಿಯೂ ತಿಳಿಯಬೇಕು. ಏಕೆಂದರೆ ಆತ್ಮನು ಯಾವ ಪ್ರತ್ಯಯಕ್ಕೂ ವಿಷಯನಲ್ಲವಾದ್ದರಿಂದ ಪ್ರತ್ಯಯರೂಪವಾದ ಪ್ರಯತ್ನವು ಇಲ್ಲಿ ಬೇಕಿರುವದಿಲ್ಲ. ಹೇಗೆಂದರೆ ಜಾರುಬಂಡೆಯನ್ನು ಜಾರುವಹುಡುಗರಿಗೆ ಅದನ್ನು ಏರುವವರೆಗೆ ಮೆಟ್ಟಿಲುಗಳ ಸಹಾಯವು ಬೇಕಾದರೂ ಬಂಡೆಯಿಂದ ಜಾರುವಾಗ ಯಾವ ಪ್ರಯತ್ನವಿಶೇಷವೂ ಬೇಕಿಲ್ಲವೋ ಹಾಗೆ ಆತ್ಮನ ಕಡೆಗೆ ಅಂತಃಕರಣವನ್ನು ಒಯ್ಯಲು ಹಾಗೂ ಅನಾತ್ಮಪ್ರತ್ಯಯಗಳಿಂದ ಅಂತಃಕರಣವನ್ನು ಬೇರ್ಪಡಿಸಲು ಆತ್ಮ ಪ್ರತ್ಯಯಾನುಸಂಧಾನವು ಮೊದಲಿಗೆ ಬೇಕಾದರೂ ಆತ್ಮನನ್ನು ಸಮೀಪಿಸಿದಂತೆಲ್ಲ ಪ್ರತ್ಯಯದ ಪ್ರತ್ಯಯತ್ವವು ಕರಗಿ ಅದು ಆತ್ಮನಾಗಿಯೇ ಬಿಡುವದು. ಆಗ ಏಕನಾದ ಎಂದರೆ ಅವಸ್ಥಾತ್ರಯಗಳಿಗೂ ಸಾಕ್ಷಿಯಾದ ಆತ್ಮನು ತಾನೇ ಎಂಬ ಅರಿವಾಗುವದು. ಈ ಅರಿವು ಪ್ರತ್ಯಯರೂಪವಾಗಿರುವದಿಲ್ಲ ಮತ್ತೇನೆಂದರೆ ಕೇವಲ ಚೈತನ್ಯ ರೂಪವೇ ಆಗಿರುತ್ತದೆ. ಇಲ್ಲಿ ಅರಿಯುವ ಯಾವ ಪ್ರಯತ್ನ ವಿಶೇಷಗಳೂ ಇರುವದಿಲ್ಲ.

ಈಗ ಪ್ರತ್ಯಯಶಬ್ದವನ್ನು ಉಪಯೋಗಿಸಿರುವದರ ಸ್ವಾರಸ್ಯವೇನೆಂದು ತಿಳಿಯೋಣ. ಮೊದಲಿಗೆ ಅಂತಃಕರಣವು ಆತ್ಮನನ್ನು ಸಮೀಪಿಸಿದಾಗ ತನ್ನತನವನ್ನು ಕಳೆದುಕೊಂಡಿತಷ್ಟೆ! ಆ ಬಳಿಕ ಆತ್ಮನೊಬ್ಬನೇ ಅನುಭವಗೋಚರನಾದಾಗ ಆತ್ಮ–ಅನುಭವ–ಪ್ರತ್ಯಯ–ಎಲ್ಲವೂ ಆತ್ಮನೇ ಆಗಿಬಿಟ್ಟಿರುತ್ತದೆ. ಹೀಗಿದ್ದರೂ ಪ್ರತ್ಯಯದ ವೇಷದಲ್ಲಿ ಆತ್ಮನು ಮತ್ತೆ ತೋರಿಕೊಳ್ಳಬಹುದಾಗಿದೆ. ಇದು ಅನುಭವದ ದಾರ್ಢ್ಯವನ್ನು ಪ್ರಕಟಿಸುವ ನಿಮಿತ್ತವಾಗಿರುವದು. ಇಂಥ ಅನುಭವವು ಜ್ಞಾನಿಗಳಿಗೆ ಸಹಜವಾಗಿರುತ್ತದೆ. ಈ ಅರ್ಥದಲ್ಲಿಯೂ 'ಆತ್ಮಪ್ರತ್ಯಯ' ವೆಂದು ಕರೆಯಬಹುದಾಗಿದೆ. ಆದರೆ ಪ್ರತ್ಯಯದಂತೆ ಕಂಡಿದೆ–ಎಂಬರ್ಥದಲ್ಲಿ ಮಾತ್ರ ಇಲ್ಲಿ ಪ್ರತ್ಯಯಶಬ್ದ ಪ್ರಯೋಗವೇ ಹೊರತು ಇದು ಎಂದಿಗೂ ವೃತ್ತಿರೂಪವಾದ ಮಾನಸಿಕ ಪ್ರತ್ಯಯವಲ್ಲ. ಹೀಗೆ ಈ ಆತ್ಮನೇ ಆಗಿರುವ ಪ್ರತ್ಯಯವು 'ಸಾರವೂ' ಆಗಿದೆ. ಸಾರವೆಂದರೆ ಪ್ರಮಾಣವೆಂತ ಉಪಚಾರಕ್ಕಾಗಿ ಕರೆಯಬಹುದು.

'ಸಾರ' ಎಂಬ ಮಾತಿಗೆ ಇನ್ನೂ ಒಂದು ಸ್ವಾರಸ್ಯವನ್ನು ಹೇಳಬಹುದು. ಏನೆಂದರೆ: ಆತ್ಮಸ್ವರೂಪವು ಈ ಆತ್ಮಪ್ರತ್ಯಯಕ್ಕೂ ವಿಷಯವಲ್ಲ; ಏಕೆಂದರೆ ಯಾವ ಪ್ರತ್ಯಯದಿಂದಲೂ ಆತ್ಮನನ್ನು ವಿಷಯನನ್ನಾಗಿ ಮಾಡಿಕೊಳ್ಳಲಾಗುವದಿಲ್ಲ. ಆದ್ದರಿಂದ 'ಪ್ರತ್ಯಯಸಾರ'–ಎಂಬಿದನ್ನು 'ಪ್ರತ್ಯಯಸಾಕ್ಷಿ' ಎಂಬರ್ಥದಲ್ಲಿ ಪ್ರಯೋಗಿಸಿದೆ–ಎಂದಾಯಿತು. ಈ ಸಾಕ್ಷಿಯು ನಿತ್ಯನೂ ಕೂಟಸ್ಥನೂ ಏಕನೂ ಆಗಿರುವನು. ಆದ್ದರಿಂದ ಈತನು ಪ್ರತ್ಯಯಗಳಂತೆ ಬಂದೂ ಹೋಗಿ ಮಾಡುವವನಲ್ಲ. ಆತ್ಮಸ್ವರೂಪದ

ನಿಶ್ಚಿತಾನುಭವವುಂಟಾದಾಗ ಹಿಂದೆ–ಈಗ–ಮುಂದೆ–ಎಂಬ ವ್ಯವಹಾರವೂ ಬಾಧಿತವಾಗಿರುತ್ತದೆ. ಹೀಗೆ ಆತ್ಮನ ಬೆಳಕಿನಲ್ಲಿಯೇ ಪ್ರತ್ಯಯದ ಅಸ್ತಿತ್ವವೂ ಸಿದ್ಧವಾಗಬೇಕಾಗಿರುವದರಿಂದ ಆತ್ಮನು 'ಪ್ರತ್ಯಯಸಾರ' ನೆನಿಸಿರುತ್ತಾನೆ.

**ಪ್ರಶ್ನೆ:** ಒಂದು ಕಲ್ಪನೆ (Thought) ಅಂತಃಕರಣದಲ್ಲಿ ತೋರುವಾಗ ಇನ್ನೊಂದು ತೋರುವದಿಲ್ಲ. ಮತ್ತೆಮತ್ತೆ ತೋರಿಹಾರುವ ಕಲ್ಪನೆಗಳಿಗೆ ಪರಸ್ಪರ ಕಾರ್ಯಕಾರಣ ಭಾವಗಳೇನೂ ಇರುವದಿಲ್ಲ. ಅದರಂತೆಯೇ ಆತ್ಮನಲ್ಲಿ ಎಚ್ಚರ, ಕನಸು, ನಿದ್ರೆಗಳೆಂಬ ಕಲ್ಪನೆಗಳು ತೋರಿ ಮಾಯವಾಗುತ್ತಿರುವವು. ಆದರೆ ಅನುಭವಸ್ವರೂಪನಾದ ಆತ್ಮನ ನೆರವು ಇಲ್ಲದೆ ಈ ತೋರಿಕೆಗಳೂ ಕೂಡ ಅಸ್ತಿತ್ವವನ್ನು ಹೊಂದುವಂತಿಲ್ಲ. ಹೀಗಿರುವಲ್ಲಿ ಅನುಭವಸ್ವರೂಪನಾದ ಆತ್ಮನ ಇರವೊಂದನ್ನು ಬಿಟ್ಟರೆ ಯಾವ ತೋರಿಕೆಗಳಿಗೂ ಏನೇನೂ ಬೆಲೆಯಿರುವದಿಲ್ಲವಲ್ಲವೆ? ಈ ನನ್ನ ಅಭಿಪ್ರಾಯವು ಸರಿಯೆ?

**ಉತ್ತರ:** ಬಹಳ ಸರಿಯಾಗಿದೆ. ಹಗ್ಗವನ್ನರಿಯದಾಗ ನೀರಿನ ಕೋಡಿ, ಹಾವು, ಡೊಂಕುಕೋಲು, ನೆಲದಬಿರುಕು ಮುಂತಾದ ವಿಕಲ್ಪಗಳು ತೋರಿದ್ದು ಹಗ್ಗದ ನಿಜವು ಪರಮಾರ್ಥಾತ್ಮನ ಅನುಭವದಲ್ಲಿ ನೆಲೆನಿಂತಾಗ ಅವಸ್ಥಾತ್ರಯಕಲ್ಪನೆಗಳೂ ಆಗ್ಗೆ ಕಂಡುಬಂದಿದ್ದ ದ್ವೈತಸತ್ತ್ವ, ದ್ವೈತಾಭಾವ–ಕಲ್ಪನೆಗಳೂ ಇಲ್ಲವಾಗುವವು. ನಿಮ್ಮ ಸಂಸ್ಕಾರವು ಅತ್ಯುತ್ತಮವಾದುದಾಗಿದೆ. ಈ ರೀತಿಯಾದ ಆತ್ಮ ನಿಶ್ಚಯವು ಎಲ್ಲರಿಗೂ ಬರಲಾರದು.

**ಪ್ರಶ್ನೆ*:** ನಾನು ಹಿಂದೆ ಕೇಳಿದ್ದಂತೆ ವಿವೇಕನಿಶ್ಚಯದಿಂದ ಆತ್ಮನೊಳಕ್ಕೆ ಸರಿದು ಪುನಃ ಹೊರಬಂದಾಗ ಕಂಡು ಬರುವ ದ್ವೈತಾಭಾಸವೂ ಆತ್ಮಮಾತ್ರವೇ. ತೋರಿದ್ದು ಪ್ರತ್ಯಯಗಳ ಆಭಾಸವಷ್ಟೇ–ನಿಜವಲ್ಲ ಎಂದು ನಾನು ತಿಳಿದಿದ್ದೇನೆ–ಈ ಅನುಭವವು ಸರಿಯೆ?

**ಉತ್ತರ:** ಸರ್ವಥಾ ಸರಿಯಾಗಿದೆ. ಇಂಥ ಅನುಭವದಲ್ಲಿ ನೆಲೆಗೊಳ್ಳುವದನ್ನೇ ಜ್ಞಾನನಿಷ್ಠೆ ಎನ್ನುವರು. ಈ ನಿಶ್ಚಯವು ಹೊಸದಾಗಿ ಉಂಟಾದಂತೆ ಕಂಡರೂ ಹಾಗಿಲ್ಲ, ಇದ್ದದ್ದೇ ಅನುಭವಗೋಚರವಾಗಿರುತ್ತದೆ. ಇನ್ನು ನೀವು ಮತ್ತೇನೂ ಸಂಶಯಗಳಿಗೆ ಒಳಗಾಗಬೇಕಾಗಿಲ್ಲ. ಸದ್ಗುರುಗಳ ಕೃಪೆ ನಿಮ್ಮ ಮೇಲೆ ಪೂರ್ಣವಾಗಿದೆ. ಓಂ!.

---

* ಇದು ಅಮೆಲಿಟಾ ಬೊಟಾರೋ–ರವರ ಪ್ರಶ್ನೆ.

# 52. ಅಮೆರಿಕಾದಲ್ಲಿ ಉಪಾಕರ್ಮ

## (ಉಪನ್ಯಾಸಕರು: ಶ್ರೀ ಜಿ.ವಿ. ಸುಬ್ಬಾರಾವು, ತಣುಕು, ಆಂಧ್ರಪ್ರದೇಶ)

## (ಅಕ್ಟೋಬರ್ 1983)

(ಸೂಚನೆ: ಶ್ರೀ ಜಿ.ವಿ. ಸುಬ್ಬಾರಾವ್‌ರವರು ಆಂಧ್ರಪ್ರದೇಶದ 'ತಣುಕು' ಎಂಬ ಊರಿನವರು. ಇವರ ತಂದೆಯವರು ವೇದವೇದಾಂಗಪಾರಂಗತರೂ ಪಂಡಿತವರ್ಯರೂ ಆಗಿರುವ ವೇ|| ಗಂಡಿಕೋಟ ಸುಬ್ರಹ್ಮಣ್ಯಶಾಸ್ತ್ರಿಗಳು. ಶ್ರೀ ಸುಬ್ಬಾರಾವ್‌ರವರು ಕಳೆದ 37 ವರ್ಷಗಳಿಂದ ಅಮೆರಿಕಾದಲ್ಲಿದ್ದಾರೆ. ಎರಡುವರ್ಷಕ್ಕೊಮ್ಮೆ ಸಕುಟುಂಬರಾಗಿ ಭಾರತದೇಶಕ್ಕೆ ಬಂದು ಕೆಲವು ಕಾಲವಿದ್ದು ಹೋಗುತ್ತಾರೆ. ಇವರು ಅಮೆರಿಕಾದ U.N.O.ಸಂಸ್ಥೆಯಲ್ಲಿ ಎನರ್ಜಿ ಚೀಫ್ ಆಗಿ ಕೆಲಸ ಮಾಡುತ್ತಿದ್ದಾರೆ. ಜೊತೆಗೆ (1) Hindu Society Temples of North America ಸಂಸ್ಥೆಯ (2) ಭಾರತೀಯ ವಿದ್ಯಾಭವನ ಮತ್ತು(3) Telugu Associationಗಳ ಟ್ರಸ್ಟಿಗಳೂ ಆಗಿರುತ್ತಾರೆ. ಇಂಥ ಮಹನೀಯರು ಈ ವರ್ಷ ಯಜುರ್ವೇದೋಪಾಕರ್ಮದ ದಿನ (23–8–1983 ನೇ ಮಂಗಳವಾರ) ಸಂಜೆ 7–30 ಕ್ಕೆ ತಣುಕು ಗ್ರಾಮದಲ್ಲಿ ಸೇರಿದ್ದ ಬ್ರಾಹ್ಮಣಮಹಾಸಭೆಯಲ್ಲಿ ಮಾಡಿದ ಭಾಷಣದ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ. ಈ ಸಭೆಯ ಅಧ್ಯಕ್ಷತೆಯನ್ನು ಆ ಊರಿನ ಜನಪ್ರಿಯ ಡಾಕ್ಟರರಾದ ಶ್ರೀ|| ಗೋಪಾಲಕೃಷ್ಣರವರು ವಹಿಸಿದ್ದರು. ಇವರು ನಾಯಿಡು ಜನಾಂಗದವರು. ಇದೊಂದು ಹಿಂದೂಧರ್ಮದ ಭಾವೈಕ್ಯಸಂಗಮದ ಉದಾಹರಣೆಯಾಗಿದೆ. ಸಂ.)

### "ಪೂಜ್ಯ ವೈದಿಕಮಹಾಜನರೆ, ಸಮಾಜಬಾಂಧವರೆ,"

ಈ ದಿನ ಇದೇ ವೇಳೆಗೆ (ಅಮೆರಿಕೆಯ ಕಾಲಮಾನದಂತೆ ಬೆಳಗ್ಗೆ 7–30ಕ್ಕೆ ಉತ್ತರ ಅಮೆರಿಕಾದಲ್ಲಿನ ಟೆಂಪಲ್ಸ್ ಸೊಸೈಟಿಯ ಶ್ರೀ ಗಣಪತಿ ದೇವಾಲಯದಲ್ಲಿ ಸುಮಾರು ಮುನ್ನೂರು ಜನರು ಹಿಂದೂ ವೈದಿಕಸನಾತನಧರ್ಮಾವಲಂಬಿಗಳು, ಭಾರತದ ನಾನಾ ಪ್ರಾಂತ್ಯಗಳಿಂದ ಬಂದವರು) ಒಂದೇ ಕಡೆಯಲ್ಲಿ ಸೇರಿ ಉಪಾಕರ್ಮವನ್ನು ನಡೆಸುತ್ತಾರೆ. ಈ ವಿಚಾರವನ್ನು ಒಮ್ಮೆಗೇ ನೀವು ನಂಬದೆ ಇರಬಹುದು. ಆದರೆ ಪ್ರತಿವರ್ಷವೂ ಈ ಕಾರ್ಯಕ್ರಮವನ್ನು ನಾನೇ ಖುದ್ದು ಹಾಜರಿದ್ದು ನಡೆಸುತ್ತೇನಾದ್ದರಿಂದಲೂ ಆ ನಾನೇ ಈಗ ನಿಮ್ಮ ಮುಂದೆ ಹೇಳುತ್ತಿರುವದರಿಂದಲೂ ನೀವು ಸಂಶಯಪಡಲು ಕಾರಣವೇ ಇರುವದಿಲ್ಲ. ಈ ಬಾರಿ ಮಾತ್ರ ನಾನು ಈ ಸಮಯಕ್ಕೆ

ಭಾರತದಲ್ಲಿ ನಿಮ್ಮೊಡನೆ ಇದ್ದೇನೆ. ಇರಲಿ. ಈ ದಿನ ಗಾಯತ್ರೀ ಮಂತ್ರಾರ್ಥದ ವಿಚಾರವಾಗಿಯೂ ಅದರ ಮಹಿಮೆಯನ್ನು ಕುರಿತು ಅಲ್ಲಿ ಉಪನ್ಯಾಸಗಳೂ ನಡೆಯುವವು. ಈ ಸಂದರ್ಭಕ್ಕೆ ಅಮೆರಿಕಾದೇಶೀಯರು ಬರುತ್ತಾರೆ. ಅವರಿಗೆಲ್ಲ 'ಗಾಯತ್ರೀ' ಎಂಬ ಮಾತೇ ಬಹಳ ಪ್ರಿಯವಾಗಿದೆ. ಭಾರತದೇಶದ ಋಷಿಗಳ ಹೆಸರುಗಳ, ಹಾಗೂ ಮಂತ್ರಗಳ ಉಚ್ಚಾರಣೆ ಮಾಡಿದ್ದೇ ಆದರೆ ಅಮೆರಿಕೆಯವರು ಮೋಹಿತರಾಗಿಬಿಡುತ್ತಾರೆ. ಅವರು ಗಾಯತ್ರೀ ಮಂತ್ರಾರ್ಥವನ್ನು ಕೇಳಿದಾಗ 'ಆಹಾ! ಇದೊಂದು ಅದ್ಭುತ Science' ಎಂಬ ಉದ್ಗಾರ ಮಾಡುತ್ತಾರೆ. ಬಾಹ್ಯಪ್ರಪಂಚದ ಭೋಗಗಳ ರಾಶಿಯಿಂದ ಬೇಸತ್ತು ಮಾನಸಿಕಶಾಂತಿಗಾಗಿ ಪರದಾಡುತ್ತಿರುವ ಅವರಿಗೆ 'ಉಪಾಕರ್ಮ'ವು ಒಂದು ಸೋಜಿಗವಾಗಿ ಕಂಡುಬರುತ್ತಿದೆ.

ಈಗ ಉಪಾಕರ್ಮದ ಪ್ರಧಾನ ಅಂಗವಾದ 'ವೇದಾರಂಭಣ' ದ ಕಾಲಕ್ಕೆ ಉಚ್ಚರಿಸುವ ಹಾಗೂ ವೇದಗಳ ಸಾರವಾದ ಗಾಯತ್ರೀ ಮಂತ್ರದ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಗಾಯತ್ರೀಮಂತ್ರದ ಉಪಾಸ್ಯ ದೇವತೆಯು ಸೂರ್ಯನು. ಪ್ರತ್ಯಕ್ಷವಾಗಿ ಕಾಣಬರುವ ದೇವತೆಯು ಇವನಾದ್ದರಿಂದಲೂ ರುದ್ರಾಧ್ಯಾಯದಲ್ಲಿ ಹೊಗಳಿರುವಂತೆ 'ಆಬಾಲಗೋಪವಿದಿತ'ನಾದವನಾದ್ದರಿಂದಲೂ ಇವನನ್ನು ಕುರಿತು ನಮ್ಮ ಬುದ್ಧಿವೃತ್ತಿಗಳನ್ನು ಪ್ರೇರಿಸುವಂತೆ ಗಾಯತ್ರೀ ಮಂತ್ರದಲ್ಲಿ ಪ್ರಾರ್ಥಿಸಲಾಗಿದೆ. ಮನುಷ್ಯನಿಗೆ ಬುದ್ಧಿಗೆ ಸಮಾನವಾದ ಐಶ್ವರ್ಯವು ಮತ್ತೊಂದಿಲ್ಲ. ಎಲ್ಲವೂ ಇದ್ದು ಅದೊಂದು ಸರಿಯಾಗಿಲ್ಲವಾದರೆ ಹುಚ್ಚಾಸ್ಪತ್ರೆಗೆ ಹೋಗಬೇಕಾಗುವದು. ಅಥವಾ ಅಸುರನಾಗಿ ಬಾಳುತ್ತಾ ಜಗತ್ತಿನ ಕ್ಷಯಕ್ಕೆ ಕಾರಣನಾಗಿ ವಿಶ್ವಕ್ಕೆಲ್ಲ ಮಿತ್ರನಾಗುವ ಬದಲು ಶತ್ರುವಾಗಬೇಕಾಗುವದು. ಆದ್ದರಿಂದ ನಾವು ವಿಶ್ವಾಮಿತ್ರರಾಗಬೇಕಾದರೆ ಗಾಯತ್ರೀ ಮಂತ್ರೋಪಾಸ್ಯನಾದ ಸವಿತೃದೇವನನ್ನೇ ಮೊರೆಹೋಗಬೇಕು. ನಮ್ಮ ಪ್ರಾಚೀನಋಷಿಗಳು ಈ ತತ್ತ್ವವನ್ನೇ ಕಂಡುಕೊಂಡವರಾಗಿದ್ದುದರಿಂದಲೇ ತ್ರಿಕಾಲದಲ್ಲಿಯೂ ತಮ್ಮ ಬುದ್ಧಿಶುದ್ಧಿಗಾಗಿ ವಿಶ್ವಾಮಿತ್ರನಿಂದ ದೃಷ್ಟವಾದ ಗಾಯತ್ರಿಯನ್ನು ಜಪಿಸುತ್ತಿದ್ದರು. ಇತ್ತೀಚಿನ ಕಾಲಕ್ಕೆ ಜನರ ಮನಸ್ಸು ಇನ್ನೂ ಮಲಿನವಾದದ್ದರ ಫಲವಾಗಿ ಧ್ಯಾನಕ್ಕಾಗಿ 'ಗಾಯತ್ರಿ'ಯೆಂಬ ಸಗುಣಸಾಕಾರದೇವತೆಯನ್ನೇ ಬಲ್ಲವರು ಪ್ರಚಾರಕ್ಕೆ ತಂದರು. ನಾಮರೂಪರಹಿತವಾದ ತತ್ತ್ವಕ್ಕೇ ನಾಮರೂಪಗಳನ್ನು ಅಧ್ಯಾಸಮಾಡಿ ಸ್ತ್ರೀದೇವತೆಯಾಗಿ ಭಾವಿಸಿ ಶ್ರೀಮಾತೆಯೆಂದು ಹೊಗಳಿ ರೂಪಾಕಾರಾದಿಗಳನ್ನು ನಿರ್ದೇಶಿಸಿದರು. ಸೂರ್ಯಾಂತರ್ಗತವಾದ 'ಭರ್ಗ'ವೆಂಬ ದಿವ್ಯ ತೇಜಸ್ಸೇ ಗಾಯತ್ರೀ ದೇವಿಯೆಂದೂ ವ್ಯವಹರಿಸಲ್ಪಟ್ಟಿತು. ನಿಜವೇನೆಂದರೆ ಸೂರ್ಯಾದಿತೇಜೋಮಯ ಭೂತಗಳೂ ಪರಮತೇಜೋರೂಪವಾದ ಬ್ರಹ್ಮದ ಬೆಳಕಿನಿಂದಲೇ ಬೆಳಗುತ್ತಿವೆ.

ಹಾಗೆಂದೇ ಶ್ರುತಿಸ್ಮೃತಿಗಳಲ್ಲಿದೆ. ಇಂಥ ತೇಜಸ್ಸನ್ನು ಚಿಂತಿಸುವವನು ಬ್ರಹ್ಮತೇಜಸ್ಸಿನಿಂದ ಬೆಳಗುವನೆಂದು ಹೇಳತಕ್ಕದ್ದೇನಿದೆ? ವಸಿಷ್ಠರನ್ನು ಹೊಗಳುವಾಗ ವಿಶ್ವಾಮಿತ್ರನು 'ಬ್ರಹ್ಮತೇಜೋ ಬಲಂ ಬಲಮ್' ಎಂದೇ ಉದ್ಗರಿಸಿದನು. ವಸಿಷ್ಠರ ಹೆಸರು ಶ್ರೀಮದ್ರಾಮಾಯಣದಲ್ಲಿ ಬರುವಾಗಲೆಲ್ಲ ವಾಲ್ಮೀಕರು 'ವಸಿಷ್ಠೋ ಜಪತಾಂ ವರಃ' (ಜಪನಿಷ್ಠರಲ್ಲಿ ಅಗ್ರಗಣ್ಯರಾದ ವಸಿಷ್ಠರು) ಎಂದೇ ಉಲ್ಲೇಖಿಸುತ್ತಾರೆ. ಹೀಗೆ ಗಾಯತ್ರಿಯು ಮಾನವನ ಉದ್ಧಾರಕ್ಕೆ ನೇರ ಕಾರಣಳಾಗಿರುವದರಿಂದ ಅಧಿಕಾರಿಗಳಾದ ಸಾಧಕರಿಗೆ ಕೇವಲ ಚಿಕ್ಕವಯಸ್ಸಿನಲ್ಲೇ (ಎಂಟನೆಯ ವರ್ಷದಲ್ಲೇ) ಗಾಯತ್ರಿಯನ್ನುಪದೇಶಿಸುವ 'ಉಪನಯನ'ವೆಂಬ ಸಂಸ್ಕಾರವು ರೂಢಿಗೆ ಬಂದಿದೆ. ಗಾಯತ್ರೀಜಪವನ್ನು ಮಾಡಲು ಬಾರದವನು ಸಹ ಮಾನಸಿಕವಾಗಿ ಮಂತ್ರಾರ್ಥವನ್ನು ಅನುಸಂಧಾನ ಮಾಡಿಕೊಳ್ಳಬಹುದು. ಇದು ಪ್ರಪಂಚದ ಎಲ್ಲ ಮಾನವರಿಗೂ ಸಾಧ್ಯ. ಆದ್ದರಿಂದಲೇ ಅಮೆರಿಕೆಯವರು ಈ ಮಂತ್ರಾರ್ಥದ ವಿಷಯಕ್ಕೆ ಆಕರ್ಷಿತರಾಗಿರುತ್ತಾರೆ. ನಾವು ಇನ್ನು ಮೇಲಾದರೂ ಯಾಂತ್ರಿಕವಾಗಿ ಈಗ ಮಾಡುತ್ತಿರುವ ಗಾಯತ್ರೀ ಜಪವನ್ನು ಅಂತಃಕರಣಸಂಸ್ಕಾರಕ್ಕಾಗಿ ತಿರುಗಿಸಿಕೊಂಡು ತೇಜೋನುಸಂಧಾನದೊಡನೆ ಉಚ್ಚರಿಸಿದರೆ ಅದು ದೊಡ್ಡ ತಪಸ್ಸಾದೀತು. ಈ ಶುಭದಿನದಿಂದಲೇ ನಾವು ಇಂಥ ಅಧ್ಯಾತ್ಮಸಾಧನೆಯನ್ನು ಕೈಗೊಂಡು ಋಷಿಗಳಾಗಲು ಪ್ರಯತ್ನಿಸೋಣ'' ಎಂದು ತಿಳಿಸಿದರು.

## ಶ್ರೀ ದೇವರಾಯ ಕುಲಕರ್ಣಿಯವರ ಉಪನ್ಯಾಸ

ಆ ದಿನ ಸಭೆಯಲ್ಲಿ ಹಾಜರಿದ್ದ ಶ್ರೀ ದೇವರಾಯರು ಹೀಗೆ ತಿಳಿಸಿದರುಃ– ''ಗಾಯತ್ರಿ ಮಂತ್ರಕ್ಕೆ ಪರಬ್ರಹ್ಮ ಪರವಾಗಿ, ಸೂರ್ಯನ ಪರವಾಗಿ, ಅನ್ನ ಪರವಾಗಿ ಮೂರು ಅರ್ಥಗಳನ್ನು ವೇದಭಾಷ್ಯಕಾರರು ತಿಳಿಸಿದ್ದಾರೆ. ಪರಬ್ರಹ್ಮಪರವಾದ ಅರ್ಥದಲ್ಲಿ ಅಧಿ ಕಾರಿಭೇದದಿಂದ ಉಪಾಸ್ಯ, ಜ್ಞೇಯ ಎಂದು ಬ್ರಹ್ಮವನ್ನು ವಿಂಗಡಿಸಿ ಸಮನ್ವಯಗೊಳಿಸಬೇಕು. ನಿತ್ಯಶುದ್ಧಬುದ್ಧಮುಕ್ತಪರಬ್ರಹ್ಮವನ್ನು ಗಾಯತ್ರಿಯೆಂದೂ ಹೆಸರಿಸಬಹುದಾದರೆ ಅದು 'ಪರೋರಜ'ವಾಗಿದೆ–ಎಂದರೆ ವ್ಯವಹಾರಾತೀತವಾಗಿ ನಿರ್ವಿಕಲ್ಪವಾಗಿದೆ. ಇಂಥ ಪುಣ್ಯಾಪುಣ್ಯಗಳನ್ನು ಮೀರಿದ 'ಪರೋರಜ'ವೆನಿಸಿರುವ ಬ್ರಹ್ಮವು, ಗಾಯತ್ರಿಯನ್ನು ವ್ಯಾಹೃತಿಗಳಲ್ಲಿಯೂ ವ್ಯಾಹೃತಿಗಳನ್ನು ಪ್ರಣವದಲ್ಲಿಯೂ ಲಯಮಾಡಿಕೊಂಡು ಆ ಪ್ರಣವಚಿಂತನೆಯಲ್ಲೇ ತತ್ಪರರಾಗಿರುವ ಪರಮಹಂಸರಿಗೆ ಮಾತ್ರ ಲಭ್ಯವಾಗಿದೆ. ಉಳಿದವರಿಗೆ ಸೂರ್ಯಮಂಡಲಾಂತರ್ಗತ ಹಿರಣ್ಯಗರ್ಭ ಪುರುಷನೆನಿಸಿದ ನಾರಾಯಣಸ್ವರೂಪದಿಂದ ಉಪಾಸ್ಯವಾಗಿದೆ. 'ಗಯೇಭ್ಯಃ ಪಾಪೇಭ್ಯಃ

ತ್ರಾಯತೇ ಇತಿ ಗಾಯತ್ರಿ'–ಎಂಬ ಅರ್ಥವಿಶೇಷದಿಂದ ಸರ್ವಪಾಪಗಳಿಂದಲೂ ಮೇಲೆದ್ದಿರುವ ಹಿರಣ್ಯಗರ್ಭಪುರುಷನನ್ನೇ ಗಾಯತ್ರೀ ಎಂಬ ಶಬ್ದವೂ ತಿಳಿಸುತ್ತದೆ. ಅಂತೂ ಉಪಾಸಕರಾದವರು ಮಾತ್ರ ಗಾಯತ್ರಿಯನ್ನು ಸ್ತ್ರೀರೂಪದಿಂದಲೂ ಪುರುಷರೂಪದಿಂದಲೂ ತಮ್ಮ ಇಷ್ಟಾನುಸಾರವಾಗಿ ಚಿಂತಿಸಬಹುದು. ತೇಜಸ್ಸನ್ನು ಸ್ತ್ರೀಯೆಂದಾಗಲಿ, ಪುರುಷನೆಂದಾಗಲಿ ನಿರ್ದೇಶಿಸಲು ಬರುವದಿಲ್ಲವಷ್ಟೆ! ಆದರೆ ತೇಜಸ್ತತ್ತ್ವವು ಮಾತ್ರ ಉಪಾಸಕರ ಇಷ್ಟಾನುಸಾರ ಹಾಗೆ ಹಾಗೆಯೇ ಒಲಿಯಬಹುದಾಗಿದೆ. ಇರಲಿ.

ಇನ್ನು ಸೂರ್ಯಪರವಾಗಿ ಗಾಯತ್ರೀ ಮಂತ್ರಕ್ಕೆ ಅರ್ಥಮಾಡಿದಾಗ ಅದು ಕರ್ಮಿಗಳಿಗೆ ಉಪಯುಕ್ತವಾಗಿರುತ್ತದೆ. ಯಜ್ಞಯಾಗಾದಿಗಳನ್ನು ಮಾಡುವವರಿಗೆ ಸೂರ್ಯನು ಮುಖ್ಯನು. ಏಕೆಂದರೆ ಸೂರ್ಯೋದಯವಿಲ್ಲದೆ ಆಹುತಿ ಪ್ರದಾನಗಳಿರುವದಿಲ್ಲ. ಹಾಗೆಯೇ ವಾರ, ತಿಥಿ, ನಕ್ಷತ್ರಾದಿರೂಪನಾದ–ಕಾಲಪುರುಷನ ಪಂಚಾಂಗಗಳು ಸೂರ್ಯೋದಯಶತಮಾನಕಾಲಕ್ಕೂ ಗ್ರಹಗಳ ಸಂಚಾರಕ್ಕೂ ಅಧೀನ ವಾಗಿವೆ. ಕಾಲಜ್ಞಾನವಿಲ್ಲದೆ ಕರ್ಮಾನುಷ್ಠಾನ ಮಾಡುವಂತಿಲ್ಲ. ಲೌಕಿಕ ಕರ್ಮನಿಷ್ಠರಿಗೆ ಕೂಡ ಕಾಲಪುರುಷನಾದ ಸೂರ್ಯನೇ ದಿಕ್ಕಾಗಿರುತ್ತಾನೆ. ಏಕೆಂದರೆ ಸೂರ್ಯ ಚಲನೆಯಿಲ್ಲದೆ ಭಾನುವಾರದ ರಜವಾಗಲಿ, ತಾರೀಖುಗಳ ಮುಂದುವರಿಗೆ ಸಂಬಳವಾಗಲಿ ಸಿಗುವಂತಿಲ್ಲ. ಆದ್ದರಿಂದ ಕರ್ಮಿಗಳಿಗೂ ಆರಾಧ್ಯ ದೇವನು ಸೂರ್ಯನು. ಅವನ ದಿವ್ಯತೇಜಸ್ಸನ್ನೇ ಉದಯಾಸ್ತಮಯಕಾಲಗಳಲ್ಲಿ ಎರಡು ಹೊತ್ತೂ ಸಕಲಕರ್ಮ ಕರ್ತೃಗಳೂ ಧ್ಯಾನಮಾಡಬೇಕಾಗಿದೆ.

ಇನ್ನು ಅನ್ನಪರವಾಗಿ ಗಾಯತ್ರೀ ಮಂತ್ರಕ್ಕೆ ಅರ್ಥಮಾಡಿದಾಗ ಎಲ್ಲಾ ಸಸ್ಯಗಳನ್ನೂ ಪೋಷಿಸುವ ಪೂಷನೇ ಅನ್ನಪತಿಯಾಗಿರುತ್ತಾನೆ. ಅವನ ಅನುಗ್ರಹವೇ ನಮಗೆ ಅನ್ನಪ್ರಾಪ್ತಿಗೂ ಅನ್ನವು ಪಚನವಾಗಿ ಆರೋಗ್ಯವು ಲಭಿಸುವದಕ್ಕೂ ಕಾರಣವು. ಇಂಥ ಅನ್ನದೇವನನ್ನು ಯಾರು ತಾನೆ ಮರೆಯಲಾದೀತು? ಎಲ್ಲಾ ಪ್ರಾಣಿಗಳ ಅನ್ನರೂಪನಾಗಿಯೂ ಸವಿತೃದೇವನೇ ಇದ್ದುಕೊಂಡಿರುವನು. ಯುಧಿಷ್ಠಿರನಿಗೆ ಹದಿನಾಲ್ಕು ವರ್ಷಗಳ ವನವಾಸಕಾಲದಲ್ಲಿ ಪ್ರತಿದಿನವೂ ಅತಿಥಿ ಸತ್ಕಾರಕ್ಕಾಗಿ ಅನ್ನವನ್ನು ದಯಪಾಲಿಸಿ ಅಕ್ಷಯಪಾತ್ರೆಯನ್ನು ಕೊಟ್ಟವನೇ ಸೂರ್ಯನಲ್ಲವೆ? ಹೀಗೆ ಗಾಯತ್ರೀ ಮಂತ್ರಕ್ಕೆ ಮೂರು ವಿಧವಾದ ಅರ್ಥಗಳೂ ಹೊಂದುತ್ತಿದ್ದು ಕರ್ಮಿಗಳಿಗೂ, ಉಪಾಸಕರಿಗೂ ಜ್ಞಾನಿಗಳಿಗೂ ಸೂರ್ಯಭಗವಂತನೇ ಗತಿಯಾಗಿರುವನು. ಇವನ ಮಹಿಮೆಗೆ ಕೊನೆಯಿಲ್ಲ.

ಇನ್ನೊಂದು ವಿಚಾರ. ಸಂಧ್ಯಾವಂದನಕಾಲಕ್ಕೆ ಸೂರ್ಯನಿಗೆ ಅರ್ಪಿಸುವ ಅರ್ಘ್ಯ (ಪೂಜೆ) ಪ್ರಧಾನವು ವೇದದಲ್ಲಿ ಕೂಡ ಸ್ತುತಿಸಲ್ಪಟ್ಟಿದೆ. ಅಲ್ಲಿರುವ ಕಥೆಯಂತೆ ಗಾಯತ್ರಿಯಿಂದ ಅಭಿಮಂತ್ರಿಸಲ್ಪಟ್ಟ ನೀರು ವಜ್ರಾಯುಧವಾಗಿ ಪರಿಣಮಿಸಿ ಸೂರ್ಯನ ಉದಯಾಸ್ತಗಳಿಗೆ ಅಡ್ಡಿಗೊಳಿಸುತ್ತಾ ಇದ್ದ ರಾಕ್ಷಸರನ್ನು ಸಂಹರಿಸಿ 'ಮಂದೇಹಾರುಣ' ವೆಂಬ ದ್ವೀಪಕ್ಕೆ ಎಸೆಯುತ್ತದೆ–ಎಂದು ಕಂಡುಬರುತ್ತದೆ. ಇದು ಉದಯಾಸ್ತಮಯಕಾಲಕ್ಕೆ ಸೂರ್ಯನನ್ನು ಧ್ಯಾನ ಮಾಡಬೇಕು–ಎಂಬ ವಿಧಿಯನ್ನು ಹೊಗಳುವ ಅರ್ಥವಾದ ಮಾತ್ರವಾಗಿದೆ. ನಿಜವೇನೆಂದರೆ: ನಮ್ಮ ಅಜ್ಞಾನವೃತ್ತಿಗಳೇ ರಾಕ್ಷಸರು. ಸೂರ್ಯನನ್ನು ನಾವು ಹೃದಯಕ್ಕೆ ತಂದುಕೊಂಡು ಧ್ಯಾನಿಸುವದೇ ಸೂರ್ಯೋದಯವು. ಯಾವನು ಬೆಳಗ್ಗೆ ಎದ್ದು ಸೂರ್ಯನಿಗೆ ನಮಸ್ಕರಿಸದೆ ತನ್ನ ಕೆಲಸಕ್ಕೇ ತೊಡಗಿಬಿಡುವನೋ ಅಂಥವನಿಗೆ ಬಾಹ್ಯಪ್ರಪಂಚದಲ್ಲಿ ಸೂರ್ಯೋದಯವಾಗಿದ್ದರೂ ಅಧ್ಯಾತ್ಮಪ್ರಪಂಚದಲ್ಲಿ ಆಗಿರುವದೇ ಇಲ್ಲ, ಅಂಥವನು ಖಂಡಿತ ಕತ್ತಲೆಯಲ್ಲೇ ಇರುತ್ತಾನೆ. ಅವನ ವ್ಯವಹಾರವೂ ನಿಶಾಚರರ ವ್ಯವಹಾರಕ್ಕೇ ಸಮಾನವಾಗಿದ್ದು ಅವನಿಗೆ ಪ್ರತಿಕೂಲವಾಗಿರುವದು. ಆದ್ದರಿಂದ ತನ್ನ ಆಧ್ಯಾತ್ಮಿಕ ಸೂರ್ಯೋದಯಕ್ಕಾಗಿ ಪ್ರತಿಯೊಬ್ಬನೂ ಅರ್ಘ್ಯಪ್ರದಾನವನ್ನು ಮಾಡಿ ಗಾಯತ್ರಿಯನ್ನು ಜಪಿಸಲೇಬೇಕು. ಬೇರೆ ಯಾವ ಕರ್ಮವನ್ನು ಮಾಡಲಿ, ಮಾಡದಿರಲಿ–ಜಪಮಾತ್ರದಿಂದ ಮಾನವನು ಉದ್ಧಾರವಾಗಲೆಂದೇ ಸಂಧ್ಯಾವಂದನೆ–ಸೂರ್ಯೋಪಾಸನೆಗಳನ್ನು ಶಾಸ್ತ್ರದಲ್ಲಿ ಹೇಳಿದೆ. ಉಪಾಕರ್ಮದ ನೆಪದಿಂದ ನಾವು ಈ ದಿನ ಗಾಯತ್ರಿಯನ್ನು ಸ್ಮರಿಸಿದ್ದೇವೆ. ನಮಗೆಲ್ಲ ವೇದಮಾತೆಯು ಜ್ಞಾನವನ್ನು ಕರುಣಿಸಲಿ!''

## 53. ಜಿಜ್ಞಾಸುಗಳೊಬ್ಬರ ಕಣ್ಮರೆ

### (ಫೆಬ್ರುವರಿ 1984)

ಶ್ರೀಪರಮಹಂಸ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರ ವೇದಾಂತ ಚಿಂತನಕ್ರಮದಲ್ಲಿ ಸಾರಗ್ರಾಹಿಗಳಾದ ಅನೇಕ ವಿದೇಶಿಯ ಜಿಜ್ಞಾಸುಗಳಲ್ಲಿ ಇತ್ತೀಚೆಗೆ ನಿಧನರಾದ ಶ್ರೀ ರೇನೇ ಅಲ್ಲಾರ್ (Rene Allar) ಎಂಬುವರೂ ಒಬ್ಬರು. ನನಗೆ ತಿಳಿದಂತೆ ಇವರನ್ನು ಪರಿಚಯ ಮಾಡಿಕೊಡುವೆನು.

ಫ್ರಾನ್ಸ್ ದೇಶದ ರಾಜಧಾನಿಯಾದ ಪ್ಯಾರಿಸ್ ನಗರದಲ್ಲಿ ವಾಸಿಸುತ್ತಿದ್ದ ಇವರನ್ನು ನಾನು 1982ನೆಯ ಆಗಸ್ಟ್ ಮಾಹೆಯಲ್ಲಿ ಅಲ್ಲಿಗೆ ಹೋಗಿದ್ದಾಗ ಶ್ರೀಮತಿ ಗಿಬರ್ಟ್ ರೋಸೆರೆ ಎಂಬ ಮಹಿಳೆಯೊಬ್ಬರ ಮನೆಯಲ್ಲಿ ಭೇಟಿ ಮಾಡಿದ್ದೆನು. ಅನಂತರ ತಾ||

15–10–82 ರಂದು ಶ್ರೀಯುತರು ನನ್ನನ್ನು ತಮ್ಮ ಮನೆಗೆ ಕರೆದೊಯ್ದು ಲಂಡನ್ನಿನ ಶ್ರೀ. A.J. Alston ಎಂಬುವರು ಬರೆದಿದ್ದ "A Sankara Source Book" ಎಂಬ ಗ್ರಂಥವನ್ನು ನನಗೆ ಕೊಟ್ಟಿದ್ದರು.

ಶಾಂಕರವೇದಾಂತದಲ್ಲಿ ಸಂಪೂರ್ಣವಾಗಿ ಆಸಕ್ತಿಯನ್ನು ಹೊಂದಿದ್ದ ಇವರು ಪೂಜ್ಯ ಶ್ರೀ ಶ್ರೀಗಳವರ ಗ್ರಂಥಗಳನ್ನೆಲ್ಲ ಬಹಳವಾಗಿ ಮೆಚ್ಚಿಕೊಂಡಿದ್ದರು. ಮತ್ತು ಅವುಗಳನ್ನು ಚೆನ್ನಾಗಿ ಅಧ್ಯಯನ ಮಾಡಿ ತಮ್ಮಲ್ಲಿಗೆ ಬಂದ ಇತರ ಜಿಜ್ಞಾಸುಗಳಿಗೂ ಹೇಳಿ ವಿಚಾರವಿನಿಮಯವನ್ನು ಮಾಡಿಕೊಳ್ಳುತ್ತಿದ್ದರು. 1971 ರಲ್ಲಿ ಅಕಸ್ಮಾತ್ತಾಗಿ ಇವರಲ್ಲಿಗೆ ಬಂದ ಇಟಲಿ ದೇಶದ ಜಿಜ್ಞಾಸುಗಳಾದ Sri. Allessandro Bruchettini ಎಂಬ ಮಹಾಶಯರಿಗೂ ಇವರು ಶ್ರೀ ಶ್ರೀಗಳವರ ಗ್ರಂಥಗಳ ಹಾಗೂ ವಿಚಾರಸರಣಿಯ ಪರಿಚಯವನ್ನು ಮಾಡಿಸಿದ್ದರಿಂದ ಬ್ರುಸ್ಕೇಟನಿಯವರು ಈಚೆಗೆ ಭಾರತದೇಶಕ್ಕೆ ಬಂದಾಗಲೆಲ್ಲ ಎರಡು ಮೂರು ಬಾರಿ ಹೊಳೆನರಸೀಪುರದ ಅಧ್ಯಾತ್ಮಪ್ರಕಾಶ ಕಾರ್ಯಾಲಯಕ್ಕೆ ಭೇಟಿಯನ್ನು ನೀಡುವದಕ್ಕೂ ಗ್ರಂಥಪ್ರಕಟನೆಗೆ ಯಥೋಚಿತ ದ್ರವ್ಯ ಸಹಾಯವನ್ನು ನೀಡಿ ಪ್ರೋತ್ಸಾಹಿಸುವದಕ್ಕೂ ಅವಕಾಶವಾಯಿತು. ಬ್ರುಸ್ಕೇಟನಿಯವರು 1971 ರಿಂದಲೇ ಶ್ರೀ ಶ್ರೀಗಳವರ ಭಕ್ತರಾಗಿದ್ದುಕೊಂಡು ಸಾಕ್ಷಾತ್ತಾಗಿ ಶ್ರೀಗಳೊಡನೆ ಅನೇಕ ಬಾರಿ ಸಂಭಾಷಿಸಿ ಪ್ರಭಾವಿತರಾಗಿ ಈಗಲೂ ಗುರುಗಳ ಪರಮಭಕ್ತರಾಗಿ ಬಾಳುತ್ತಿದ್ದಾರೆ. ಸ್ವಾಧ್ಯಾಯ, ಪ್ರವಚನಗಳನ್ನು ಕೈಬಿಡಬಾರದು–ಎಂಬ ವೇದೋಕ್ತಿಗೆ ತಕ್ಕಂತೆ ಸೇವೆ ಸಲ್ಲಿಸಿದ ಶ್ರೀ ರೇನೇ ಅಲ್ಲಾರ್‌ರವರು ETRE (ಸತ್ಯ) ಎಂಬ ಫ್ರೆಂಚ್ ಭಾಷೆಯ ಮಾಸಪತ್ರಿಕೆಯನ್ನೂ ಪ್ರಕಟಿಸುತ್ತಿದ್ದರು. ಶ್ರೀಶ್ರೀಗಳವರ ಹಾಗೂ ನಾನು ಬರೆದ ಅನೇಕ ಲೇಖನಗಳನ್ನು ಫ್ರೆಂಚ್ ಭಾಷೆಗೆ ಪರಿವರ್ತಿಸಿ ಶ್ರೀಯುತರು ಅದರಲ್ಲಿ ಪ್ರಕಟಿಸಿದ್ದಾರೆ. ಇಂಥ ಮಹನೀಯರ ಆತ್ಮಕ್ಕೆ ಗುರುದೇವರು ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವೆನು.

## 54. ಪಾಶ್ಚಾತ್ತ್ಯರ ಜ್ಞಾನಪಿಪಾಸೆ

### (ಮಾರ್ಚಿ 1988)

ಫ್ರಾನ್ಸ್ ದೇಶದ ಒಬ್ಬ ಜಿಜ್ಞಾಸುವಾದ Mr. Yaun L.E.Boucher ಎಂಬವರ ಆಹ್ವಾನದ ಮೇಲೆ ನಾನು ಆರು ವರ್ಷಗಳ ಹಿಂದೆ ಫ್ರಾನ್ಸ್ ದೇಶಕ್ಕೆ ಹೋಗಿದ್ದೆನು. ಅಲ್ಲಿದ್ದ ಸುಮಾರು ಎರಡು ತಿಂಗಳಷ್ಟು ಕಾಲವೂ ಶ್ರೀಯಾನ್ ದಂಪತಿಗಳಿಗೆ ಪ್ರತಿ ದಿನ ಆರುಘಂಟೆಗಳ ಕಾಲ ಶಾಂಕರವೇದಾಂತದ ಅಸಾಧಾರಣ ಪ್ರಕ್ರಿಯೆಯನ್ನು ಕುರಿತು

ಪಾಠವನ್ನು ನಡೆಯಿಸುತ್ತಿದ್ದೆನು. ವಿಶೇಷವಾಗಿ ಅವಸ್ಥಾತ್ರಯಪ್ರಕ್ರಿಯೆಯನ್ನು ಕುರಿತು ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರ ಸಾರ್ವತ್ರಿಕ ಪೂರ್ಣಾನುಭವಾಧಾರವುಳ್ಳ ಚಿಂತನಾಕ್ರಮದಂತೆ ವಿಷಯಗಳನ್ನು ವಿವರಿಸುತ್ತಿದ್ದೆನು. ನಡುನಡುವೆ ಯಾನ್ ದಂಪತಿಗಳು ಕೇಳುತ್ತಿದ್ದ ಪ್ರಶ್ನೆಗಳಿಗೂ ಉತ್ತರವನ್ನು ನೀಡುತ್ತಿದ್ದೆನು. ಕಡೆಯಲ್ಲಿ ಶ್ರೀ ಶ್ರೀಗಳವರು ರಚಿಸಿರುವ ಎಲ್ಲಾ ಸಂಸ್ಕೃತ ಗ್ರಂಥಗಳನ್ನೂ ಅವರಿಗೆ ಅಧ್ಯಯನಕ್ಕಾಗಿ ಒದಗಿಸಿಕೊಟ್ಟಿದ್ದೆನು. ನಾನು ಸ್ವದೇಶಕ್ಕೆ ಹಿಂತಿರುಗಿದ ಅನಂತರವೂ ಯಾನ್‌ರವರು ಪತ್ರ ವ್ಯವಹಾರದ ಮೂಲಕ ಸಂಬಂಧವನ್ನು ಇರಿಸಿಕೊಂಡಿದ್ದರು. ಇಂಥ ಜಿಜ್ಞಾಸುವಿನ ಬಗ್ಗೆ ನನಗೆ ಬಹಳ ಸಂತೋಷವಾಗಿತ್ತು

ಈಚೆಗೆ 1987ನೇ ಡಿಸೆಂಬರ್ ಮಾಹೆಯಲ್ಲಿ ಶ್ರೀ ಯಾನ್‌ರವರಿಂದ ನನಗೆ ಒಂದು ಪತ್ರವು ಬಂದಿತು. ಅದರಲ್ಲಿ ಅವರು ಹೀಗೆ ತಿಳಿಸಿದ್ದಾರೆ. "ಪೂಜ್ಯ ಗುರುಗಳೆ, ಅನೇಕ ವರ್ಷಗಳ ಪರಿಶ್ರಮದ ಫಲವಾಗಿ ನಾನು ಸಿದ್ಧಗೊಳಿಸಿ ಫ್ರಾನ್ಸ್ ಯೂನಿವರ್ಸಿಟಿಗೆ ಸಮರ್ಪಿಸಿದ್ದ 350 ಪುಟಗಳ, "Sleep, Dreams and Awakening, An Essay on Shankara's Vedanta hemestic" ಎಂಬ ಮಹಾಪ್ರಬಂಧಕ್ಕೆ ಮಾನ್ಯತೆಯು ದೊರೆತು ನನ್ನನ್ನು "Doctor of Letters" and "Specialist in Indian Philosophical Studies" ಎಂದು ಗೌರವಿಸಿರುತ್ತಾರೆ. ಇದು ಶೇಕಡ ತೊಂಭತ್ತು ಭಾಗ ನಿಮಗೆ ಸಂದ ಗೌರವವಾಗಿದೆ. ಈ ಆನಂದವನ್ನು ನಾನು ಈಗ ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ; ಇದೊಂದು ಶುಭಸಮಾಚಾರ"–ಎಂದು ಬರೆದಿರುತ್ತಾರೆ. ಈ ಪತ್ರವನ್ನು ಓದಿ ನನಗೆ ಆದ ಆನಂದವು ಅಷ್ಟಿಷ್ಟಲ್ಲ. ಕಡೆಗೂ ನನ್ನ ವಿದೇಶ ಪ್ರವಾಸವು ಸತ್ಫಲವನ್ನುಂಟು ಮಾಡಿತೆಂಬ ತೃಪ್ತಿಯೂ ನನಗೆ ಉಂಟಾಯಿತು. ಶ್ರೀ ಯಾನ್‌ರವರು ಅದೇ ಪತ್ರದಲ್ಲಿ ತಿಳಿಸಿರುವಂತೆ ಡಾಕ್ಟರೇಟ್ ನೀಡುವ ಕಾಲದಲ್ಲಿ ನಡೆದ ಸಂದರ್ಶನದಲ್ಲಿ ಇಬ್ಬರು ಸಂಸ್ಕೃತವಿದ್ವಾಂಸರೂ ಒಬ್ಬರು ತತ್ತ್ವಶಾಸ್ತ್ರಜ್ಞರೂ ಇದ್ದು ಅವರುಗಳು ಯಾನ್‌ರವರನ್ನು ಶ್ರೀ ಸ್ವಾಮಿಗಳ ವಿಚಾರವಾಗಿಯೂ ನನ್ನ ವಿಚಾರವಾಗಿಯೂ ವಿಶೇಷ ಪ್ರಶ್ನೆಗಳನ್ನು ಮಾಡಿ ಕುತೂಹಲದಿಂದ ಎಲ್ಲಾ ವಿವರಗಳನ್ನು ತಿಳಿದುಕೊಂಡರಂತೆ. ಶ್ರೀ ಯಾನ್‌ರವರು ಶ್ರೀಗಳವರು ಸಂಸ್ಕೃತಭಾಷೆಯಲ್ಲಿ ರಚಿಸಿರುವ ಎಲ್ಲಾ ಗ್ರಂಥಗಳನ್ನೂ ತಮ್ಮ ಪ್ರಬಂಧದ ಕಡೆಯಲ್ಲಿ ಹೆಸರಿಸಿ ಕೃತಜ್ಞತೆಯನ್ನು ಸೂಚಿಸಿದ್ದಾರಂತೆ. ಹೀಗೆ ವಿದೇಶದಲ್ಲಿ ಶಾಂಕರವೇದಾಂತವು ಗೌರವಿಸಲ್ಪಟ್ಟಿರುವದು ಶಂಕರಾಚಾರ್ಯರ ಶಿಷ್ಯರೆಲ್ಲರಿಗೂ ಸಂತೋಷವನ್ನುಂಟುಮಾಡುವ ವಿಷಯವಾಗಿದೆ. ಶ್ರೀಶ್ರೀಗಳವರ ವಿದ್ವತ್ತು ಎಂಥ ಪ್ರಭಾವಶಾಲಿಯಾದುದು–ಎಂಬುದೂ ಇದರಿಂದ ತಿಳಿದು ಬರುತ್ತದೆ.

ಈ ಮೇಲಿನ ವೃತ್ತಾಂತದಿಂದ ತಿಳಿದು ಬರುವ ಎರಡು ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸುವದು ಅನುಚಿತವೆನಿಸಲಾರದು. (1) ಪಾಶ್ಚಾತ್ತ್ಯರ ತತ್ತ್ವಪಿಪಾಸೆ, ಶ್ರದ್ಧೆ ಹಾಗೂ ಕಾರ್ಯನಿಷ್ಠೆಗಳು ಪ್ರಶಂಸಾರ್ಹವಾಗಿವೆ. ಅವರು ಯಾವದಾದರೊಂದು ವಿಷಯವು ಅಪೂರ್ವವಾಗಿದ್ದು ಬೆಲೆಬಾಳತಕ್ಕದ್ದೆಂದು ಮನಗಂಡರೆ ಅದು ಎಷ್ಟೇ ತಮಗೆ ಅಪರಿಚಿತವಾಗಿರಲಿ, ಅಭ್ಯಾಸದ ತೊಡಕುಗಳಿರಲಿ, ಭಾಷೆ, ಸಂಪ್ರದಾಯಗಳ ಹಿನ್ನೆಲೆಯಿಲ್ಲದೆ ಇರಲಿ—ಇವು ಯಾವದನ್ನೂ ಲೆಕ್ಕಿಸದೆ ಹೇಗಾದರೂ ಪ್ರಯತ್ನಿಸಿ ವಿಷಯಗಳನ್ನು ಅರಿತುಕೊಂಡು ಚಿಂತನೆ ಮಾಡಿ ಅದರಲ್ಲಿ ಸಿದ್ಧಿಯನ್ನು ಕಂಡುಕೊಳ್ಳುತ್ತಾರೆ. ಅಲ್ಲಿಯವರೆಗೂ ಅವರು ತಮ್ಮ ಪ್ರಯತ್ನಗಳಿಂದ ಹಿಮ್ಮೆಟ್ಟುವದಿಲ್ಲ. ಇಂಥ ಛಲವೂ ಸತತ ಪರಿಶ್ರಮಪ್ರಯತ್ನಗಳೂ ನಮಗೆ ನಿಜವಾಗಿಯೂ ಅನುಕರಣೀಯವಾಗಿವೆ. ಈ ಪಾಠವನ್ನು ನಾವು ಪಾಶ್ಚಾತ್ತ್ಯರಿಂದ ಕಲಿಯಲೇಬೇಕು. ಹಾಗಿಲ್ಲದೆ ಅವರು ಬಿಡಲು ಸಿದ್ಧವಾಗಿರುವ ದುರ್ಗುಣಗಳನ್ನೂ ಆಚಾರಗಳನ್ನೂ ನಾವು ಕಲಿಯುವೆವು—ಎಂದರೆ ಎಂಥ ಹಾಸ್ಯಾಸ್ಪದವಾದ ಸಂಗತಿಯಾದೀತು?

(2) ಫ್ರಾನ್ಸ್ ದೇಶದ ವಿಶ್ವವಿದ್ಯಾಲಯದಲ್ಲಿ ಗೌರವಿಸಲ್ಪಟ್ಟಿರುವ ವೇದಾಂತ ದರ್ಶನಕ್ಕೆ ನಮ್ಮಲ್ಲಿ ಇನ್ನೂ ಸರಿಯಾದ ಸ್ಥಾನಗೌರವಗಳು ಸಮಾಜದಲ್ಲಿಯೂ ವಿಶ್ವವಿದ್ಯಾನಿಲಯಗಳಲ್ಲಿಯೂ ದೊರಕದೆ ಇರುವದು ಶೋಚನೀಯವೇ ಸರಿ. ಹೇಗೆಂದರೆ ಅಲ್ಪಸ್ವಲ್ಪವಾಗಿ ವೇದಾಂತದ ಬಗ್ಗೆ ಸ್ಥಾನಮಾನಗಳು ಸಕಲವಿದ್ಯಾನಿಲಯಗಳಲ್ಲಿ ದೊರತಿರಬಹುದಾದರೂ ಅದೇನೂ ಮಹತ್ತ್ವದ್ದಲ್ಲ. ಉದಾಹರಣೆಗೆ ಕನ್ನಡ ಭಾಷೆಯಲ್ಲಿಯೇ ಕಳೆದ ಅರವತ್ತುವರ್ಷಗಳಿಂದಲೂ ನೂರಾರು ವೇದಾಂತ ಅಧ್ಯಾತ್ಮಸಾಹಿತ್ಯ ಗ್ರಂಥಗಳನ್ನು ಬರೆದು ಪ್ರಕಟ ಮಾಡಿ ಕನ್ನಡ ಜನತೆಗೆ ಬಿಟ್ಟು ಹೋಗಿರುವ ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಂಸ್ಥಾಪಕರಿಗೆ ಸ್ವದೇಶದಲ್ಲಿಯೇ ಏನೂ ಪುರಸ್ಕಾರವು ಸಿಗಲಿಲ್ಲ. ಅವರು ಸ್ಥಾಪಿಸಿರುವ ಸಂಸ್ಥೆಗಾಗಲಿ, ಬರೆದಿರುವ ಗ್ರಂಥಗಳಿಗಾಗಲಿ—ಈವರೆಗೂ ಯಾವ ಪ್ರೋತ್ಸಾಹವೂ ಪ್ರಯತ್ನಪಟ್ಟರೂ ದೊರೆತಿರುವದಿಲ್ಲ. ಇದು ನಮ್ಮ ಅಜ್ಞಾನಜಾಡ್ಯವನ್ನು ಎತ್ತಿತೋರಿಸುತ್ತದೆ. ಇದರಿಂದ ತಿಳಿದುಬರುವದೇನೆಂದರೆ: ಕನ್ನಡಿಗರು ತತ್ತ್ವವಿಚಾರಕ್ಷೇತ್ರದಲ್ಲಿ ಎಷ್ಟು ಹಿಂದುಳಿದಿದ್ದಾರೆಂದೂ, ಇರಬಹುದಾದ ಕೆಲವೇ ತತ್ತ್ವವೇತ್ತರಿಗೆ ಪುರಸ್ಕಾರವು ಸಿಗದೆ ಕನ್ನಡ ಭಾಷಾ ಸರಸ್ವತಿಯು ಸೊರಗುತ್ತಿದ್ದಾಳೆಂದೂ ಕಂಡುಕೊಳ್ಳಬಹುದಾಗಿದೆ. ಇಂಥ ಜಾಡ್ಯದಿಂದ ಕನ್ನಡಿಗರು ಪಾರಾಗುವದು ಯಾವಾಗಲೊ, ತಿಳಿಯದು.

# 55. ವೇದಾಂತಸಂಪ್ರದಾಯ *

## (ಡಿಸೆಂಬರ್ 1994)

ಸಂಪ್ರದಾಯ ಎಂಬಿದು ಕಟ್ಟಳೆ, ಆಚರಣೆ–ಎಂಬರ್ಥದಲ್ಲಿ ಸಾಮಾನ್ಯರ ಬಳಕೆಯಲ್ಲಿದೆ. ಆದರೆ ವೇದಾಂತಪ್ರಪಂಚದಲ್ಲಿ ಇದಕ್ಕೆ ಬೇರೆಯ ಅರ್ಥವಿದೆ. ಈ ಶಬ್ದದ ವ್ಯುತ್ಪತ್ತಿಯು ಹೀಗಿದೆ. 'ಸಮ್ಯಕ್ ಪ್ರದೀಯತೇ ಅಸ್ಮೈ ಇತಿ ಸಂಪ್ರದಾಯಃ' ಎಂಬ ವಿವರಣೆಯಂತೆ ಚೆನ್ನಾಗಿ ಎಂದರೆ ಅನುಭವಗಮ್ಯವಾಗಿ ತತ್ತ್ವವನ್ನು ಗುರುವು ಶಿಷ್ಯನಿಗೆ ತಿಳಿಸಿಕೊಡುವಿಕೆ–ಎಂದರ್ಥವಾಗುತ್ತದೆ. ಇದರಿಂದ ಗುರುಶಿಷ್ಯಪರಂಪರೆಯೂ ಸಿದ್ಧವಾಗುತ್ತದೆ. ಹೇಗೆಂದರೆ ಆ ಬ್ರಹ್ಮತತ್ತ್ವವನ್ನು ಗುರುವೇ ತಿಳಿಸಿಕೊಡಬೇಕು. ತಿಳಿಯಲಿಚ್ಛಿಸುವವನು ಶಿಷ್ಯನಾಗಿಯೇ ಸ್ವೀಕರಿಸಬೇಕು–ಎಂದು ಗೊತ್ತಾಗುವದರಿಂದ ಈ ಗುರುಶಿಷ್ಯಪರಂಪರೆಯಿಂದ ನಡೆದುಬಂದಿರುವ ಬೋಧನಕ್ರಮವನ್ನು ವೇದಾಂತಸಂಪ್ರದಾಯವೆನ್ನುತ್ತಾರೆ. ಆದ್ದರಿಂದ ಅಧ್ಯಾತ್ಮವಿದ್ಯೆಯ ಕ್ಷೇತ್ರದಲ್ಲಿ ಗುರು–ಶಾಸ್ತ್ರ–ಉಪದೇಶ–ಸಂಪ್ರದಾಯಗಳಿಗೆ ಅಗ್ರಸ್ಥಾನವಿದೆ.

ಮುಂಡಕೋಪನಿಷತ್ತಿನಲ್ಲಿ ಈ ಸಂಪ್ರದಾಯವನ್ನು ಬೆಂಬಲಿಸುವ ಮಂತ್ರವು ಹೀಗಿದೆಃ **'ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್'** ಇದರ ಅಭಿಪ್ರಾಯವೇನೆಂದರೆ ಆ ಬ್ರಹ್ಮವನ್ನು ಅರಿತುಕೊಳ್ಳಲಿಚ್ಛಿಸುವವನು ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವನ್ನೇ ಬಳಿ ಸಾರಬೇಕು. ಏಕೆಂದರೆ ಬ್ರಹ್ಮವಿದ್ಯೆಯು ಗುರುವಿನ ಮೂಲಕವೇ ಶಿಷ್ಯನಿಗೆ ಬರಬೇಕಾಗಿದೆ. ಶಿಷ್ಯನು ಒಂದು ವೇಳೆ ಎಂಥ ಶಾಸ್ತ್ರಜ್ಞನಾಗಿದ್ದರೂ ಸ್ವತಂತ್ರವಾಗಿ ಬ್ರಹ್ಮಜ್ಞಾನಕ್ಕೆ ಪ್ರಯತ್ನಮಾಡಬಾರದು–ಎಂದು ತಿಳಿದುಬರುತ್ತದೆ. ಸಾಮಾನ್ಯವಾಗಿ ಯಾವ ಶಾಸ್ತ್ರವನ್ನೇ ಆಗಲಿ, ಯಾವನೊಬ್ಬನೂ ತಾನೇ ಪುಸ್ತಕದ ಮೂಲಕ ಕಲಿಯಲಾರನು. ಈ ವಿಷಯದಲ್ಲಿ ಒಂದು ಹಳೆಯಕಥೆ ಹೀಗಿದೆ –ರಾಜವೈದ್ಯನಿಗೆ ಒಬ್ಬ ಮಗನಿದ್ದನು. ಒಂದು ದಿನ ವೈದ್ಯನು ಪ್ರವಾಸ ಹೋಗಿರಲಾಗಿ ಅರಮನೆಯಿಂದ ರಾಜವೈದ್ಯನ ಮಗನಿಗೆ ಕರೆ ಬಂದಿತು. ಅಲ್ಲಿಹೋಗಿ ನೋಡಲಾಗಿ ರಾಜನ ಪರಿವಾರದಲ್ಲಿಒಬ್ಬನಿಗೆ ಜ್ವರ ಬಂದಿತ್ತು ಅದಕ್ಕೆ ಔಷಧವನ್ನು ಕೊಡಲೇಬೇಕಾಗಿತ್ತು. ವೈದ್ಯಪುತ್ರನು ಆಯುರ್ವೇದಶಾಸ್ತ್ರವನ್ನು ಓದಿದ್ದನಾದರೂ ಅನುಭವವಿರಲಿಲ್ಲ. ಆಗ 'ಕಂಟಕಾರಿಕಷಾಯ'ದಿಂದ ಜ್ವರ ನಿವಾರಣೆಯಾಗುತ್ತದೆಯೆಂದು ತಿಳಿದಿದ್ದನಾದ್ದರಿಂದ ಕಂಟಕವೆಂದರೆ ಮುಳ್ಳೆಂದೂ ಅದಕ್ಕೆ

* ದಿವಂಗತರು 20–1–93 ರಂದು ಚಿತ್ರದುರ್ಗದ ಸಪ್ತಾಹದಲ್ಲಿ ಮಾಡಿದ ಉಪನ್ಯಾಸದ ಸಾರಾಂಶ.

'ಅರಿ' ಎಂದರೆ ಶತ್ರುವೆಂದೂ ಮುಳ್ಳಿಗೆಶತ್ರು ಎಂದರೆ ಎಕ್ಕಡ (ಜೋಡು) ವೆಂದೂ ಅರ್ಥಮಾಡಿದನಂತೆ. ನಿಜವೇನೆಂದರೆ ಕಂಟಕಾರಿಯೆಂಬುದು ಒಂದು ಗಿಡಮೂಲಿಕೆಯ ಹೆಸರು. ಅದರ ಪರಿಚಯವನ್ನು ಬಲ್ಲವರಿಂದ ಅವನು ತಿಳಿದಿರಲಿಲ್ಲ. ಹೀಗೆ ಶಾಸ್ತ್ರವು ತಿಳಿದಿದ್ದರೂ ಅನುಭವವಿಲ್ಲದ್ದರಿಂದ ವೈದ್ಯಪುತ್ರನು ಮೋಸಹೋದಂತೆ ವೇದಾಂತಶಾಸ್ತ್ರದಲ್ಲಿಯೂ ಅನುಭವಿಯಾದ ಗುರುವು ದೊರಕಲಿಲ್ಲವಾದರೆ ಶಿಷ್ಯನು ಉದ್ಧಾರವಾಗಲಾರನು. ಆದ್ದರಿಂದಲೇ ವೇದಾಂತವನ್ನು ಸಂಪ್ರದಾಯಜ್ಞರಿಂದಲೇ ಪಡೆದು ಕೊಳ್ಳಬೇಕು– ಎಂದು ಸಿದ್ಧವಾಗುತ್ತದೆ.

ಅಧ್ಯಾತ್ಮವಿದ್ಯೆಯನ್ನು ಆದಿಗುರು ಶ್ರೀಮನ್ನಾರಾಯಣನು ಬ್ರಹ್ಮನಿಗೆ ಉಪದೇಶ ಮಾಡಿದನೆಂದು ಸಂಪ್ರದಾಯ ಪರಂಪರೆಯಲ್ಲಿ ತಿಳಿಸಲಾಗಿದೆ. ಅಲ್ಲಿಂದ ಮುಂದೆ ಗುರುಶಿಷ್ಯಪರಂಪರೆಯು ಬೆಳೆಯುತ್ತಾ ಈವರೆಗೂ ಅವಿಚ್ಛಿನ್ನವಾಗಿ ಮುಂದುವರಿದಿದೆ. ಹೀಗೆಯೇ ಮುಂದುವರಿಯುತ್ತದೆ. ಈಗಲೂ ವೇದಾಂತತತ್ತ್ವವನ್ನರಿಯಲಿಚ್ಛಿಸುವವರು ಗುರುಮುಖದಿಂದಲೇ ಶ್ರವಣ ಮಾಡಬೇಕೆಂದು ಕಟ್ಟುಪಾಡಿರುತ್ತದೆ. ಆದರೆ ಶಿಷ್ಯನು ಅಧಿಕಾರಿಯಾಗಿದ್ದು ಗುರುವನ್ನು ಬಳಿಸಾರಿದರೂ ಒಂದು ವೇಳೆ ಗುರುವು ತತ್ತ್ವೋಪದೇಶ ಮಾಡದೆಹೋದರೆ ಹೇಗೆ? ಎಂಬ ಸಂಶಯಕ್ಕೆ ಉತ್ತರವೇನೆಂದರೆ: ಹಾಗಾಗಲಾರದು. ಏಕೆಂದರೆ ಯೋಗ್ಯನಾದ ಶಿಷ್ಯನಿಗೆ ಗುರುವು ತತ್ತ್ವೋಪದೇಶ ಮಾಡಲೇಬೇಕೆಂದು ನಿಯಮವಿರುತ್ತದೆಯಾಗಿ ಯಾವ ಗುರುವೂ ಯೋಗ್ಯಶಿಷ್ಯನನ್ನು ತಿರಸ್ಕರಿಸುವದಿಲ್ಲವೆಂದೇ ತಿಳಿಯಬೇಕು.

ಇನ್ನು ಬ್ರಹ್ಮವಿದ್ಯೆಯನ್ನು ಸ್ವತಂತ್ರವಾಗಿ ಏಕೆ ವಿಚಾರಮಾಡಬಾರದೆಂಬುದಕ್ಕೆ ಕಾರಣವು ಹೀಗಿದೆ: ಬ್ರಹ್ಮವೆಂಬುದು ತಿಳಿಯುವವನ ಆತ್ಮಸ್ವರೂಪಕ್ಕಿಂತ ಬೇರೆಯಲ್ಲ. ಆದ್ದರಿಂದ ಅದನ್ನು ಜಿಜ್ಞಾಸುವು ತಾನೇ ತನ್ನೊಳಗೇ ಕಂಡುಕೊಳ್ಳಬೇಕಾಗಿದೆ. ಈ ರಹಸ್ಯವು ಜಿಜ್ಞಾಸುವಿಗೆ ತಿಳಿದಿರುವದಿಲ್ಲವಾಗಿ ಅವನು ಉಳಿದ ವಸ್ತುಗಳನ್ನು ತಿಳಿಯುವದಕ್ಕೆ ಹೇಗೆ ಇಂದ್ರಿಯಮನೋಬುದ್ಧಿಗಳ ಮೂಲಕ ಹೊರಮುಖವಾಗಿ ವಿಚಾರ ಮಾಡಲು ಹೊರಡುವನೋ ಹಾಗೆಯೇ ಬ್ರಹ್ಮಾನ್ವೇಷಣೆಗೂ ಪ್ರಯತ್ನ ಮಾಡುತ್ತಾನೆ. ಆಗ ಅವನು ಬ್ರಹ್ಮದಿಂದ ದೂರನಾಗುವನೇ ಹೊರತು ಹತ್ತಿರವಾಗಲಾರನು. ಈ ಕಾರಣದಿಂದಲೇ ಗುರುವೂ ಅವನ ಉಪದೇಶವೂ ಜಿಜ್ಞಾಸಾಕ್ರಮವೂ ಶಿಷ್ಯನಿಗೆ ಬೇಕಾಗುತ್ತದೆ. ಶಾಸ್ತ್ರವನ್ನೋದಿದರೂ ಅದನ್ನು ಅಂತರ್ಮುಖವಾಗಿ ಬಳಸುವ ರಹಸ್ಯವನ್ನು ಗುರುವೇ ತಿಳಿಸಬೇಕಾಗಿದೆ. ಇದೇ ಸಂಪ್ರದಾಯದ ಗುಟ್ಟಾಗಿದೆ. ಆದ್ದರಿಂದ ವೇದಾಂತ ಸಂಪ್ರದಾಯವು ಗುರುಶಿಷ್ಯರ ನಡುವೆ ಏರ್ಪಟ್ಟಿದ್ದು ಬ್ರಹ್ಮವಿದ್ಯೆಗೆ

ದ್ವಾರವಾಗಿದೆ. ಈಗಿನಕಾಲಕ್ಕೆ 'ಸಂಪ್ರದಾಯ' ವೆಂಬ ಶಬ್ದವು ಬೇರೆಬೇರೆಯ ಸಂದರ್ಭಗಳಲ್ಲಿ ಅರ್ಥಾಪಕರ್ಷವನ್ನು ಹೊಂದಿದೆಯಾದರೂ ವೇದಾಂತಜಿಜ್ಞಾಸುಗಳು ಮಾತ್ರ ಎಚ್ಚರವಾಗಿದ್ದು ಸರಿಯಾದ ಸಂಪ್ರದಾಯಬೋಧವನ್ನೇ ಆಶ್ರಯಿಸಿದಲ್ಲಿ ಕೃತಾರ್ಥರಾಗುವದು ನಿಶ್ಚಯವೇ ಆಗಿದೆ. ಇಂಥ ಗುರುಸಂಪ್ರದಾಯವನ್ನರಿತು ಕೃತಾರ್ಥರಾಗೋಣ.

## 56. ಆತ್ಮಾನುಭವವೆಂದರೇನು? *

### (ಮೇ 1995)

'ಅನುಭವ' ಎಂಬಿದು ಲೋಕದ ಜನರಲ್ಲಿ ಬಹಳ ಬಳಕೆಯಲ್ಲಿರುವ ಶಬ್ದವಾಗಿದೆ. 'ನನಗೆ ಆಗಾಗ್ಗೆ ನೆಗಡಿಯಾಗುತ್ತದೆ; ಅದರ ಅನುಭವವಿದೆ'–ಎಂದು ಒಬ್ಬನು ತನ್ನ ರೋಗಾನುಭವವನ್ನು ತಿಳಿಸುತ್ತಾನೆ. ಮತ್ತೊಬ್ಬನು 'ನಾನು ಜನರಿಗೆ ಸಾಲಕೊಟ್ಟು ಅದು ವಸೂಲಾಗದೆ ಇರುವ ಅನುಭವವಿದೆ' ಎನ್ನುತ್ತಾನೆ. ಹಾಗೆಯೇ ಮತ್ತೊಬ್ಬನು 'ನಾನು ಹೆಣ್ಣುಮಕ್ಕಳಿಗೆ ವರಾನ್ವೇಷಣೆ ಮಾಡಿ ಮದುವೆ ಮಾಡಿದ ಅನುಭವವಿದೆ'–ಎನ್ನುತ್ತಾನೆ. ಇವೆಲ್ಲ ಲೋಕಾನುಭವಗಳೇ ಸರಿ. ಮನುಷ್ಯನಿಗೆ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ–ಮುಂತಾದ ಉಪಕರಣಗಳಿರುವದರಿಂದ ಅವುಗಳ ಮೂಲಕ ತನಗೆ ಆಗಬಹುದಾದ ವೇದನೆಗಳನ್ನು ಬೇರೊಬ್ಬರಿಗೂ ತಿಳಿಸುತ್ತಾನೆ. ಆದರೆ ಯಾವನು ತಾನೇ ಆ ಅನುಭವವನ್ನು ಹೊಂದಿರುತ್ತಾನೋ ಅವನಿಗೂ ಅದನ್ನು ಸುಮ್ಮನೆ ಕೇಳಿದವನಿಗೂ ಬಹಳ ವ್ಯತ್ಯಾಸವಿದೆ. ಏಕೆಂದರೆ ಹಾಗೆ ಕೇಳಿದವನಿಗೆ ನೇರಾಗಿ ಅನುಭವವೇನೂ ಆಗಿರುವದಿಲ್ಲ. ರೋಗಿಗೆ ಆಗಿರುವ ರೋಗಾನುಭವವು ಆ ರೋಗದ ವಿಜ್ಞಾನದಲ್ಲಿ ನಿಷ್ಣಾತನಾದ ಡಾಕ್ಟರಿಗೇನೂ ಅನುಭವವಾಗಿರುವದಿಲ್ಲವಷ್ಟೆ. ಆದ್ದರಿಂದ ಇಂಥ ಅನುಭವಗಳನ್ನು ''ವೈಯಕ್ತಿಕಾನುಭವ'' ವೆಂದು ಕರೆಯುತ್ತಾರೆ. ವೇದಾಂತದರ್ಶನದಲ್ಲಿ ಈ ಅನುಭವವು ಉಪಯೋಗಕ್ಕೆ ಬಾರದ್ದಾಗಿದೆ.

ಇನ್ನೊಂದು ಅನುಭವವನ್ನು ದರ್ಶನಕಾರರಲ್ಲಿ ಕೆಲವರು ಉದಾಹರಿಸುತ್ತಾರೆ. ಉದಾಹರಣೆಗೆ ಕೆಲವರು ತಾವು ಧ್ಯಾನಸ್ಥಿತಿಯಲ್ಲಿದ್ದಾಗ ಒಂದು ಜ್ಯೋತಿಯು ಕಾಣಿಸಿತು–ಎನ್ನುವರು. ಅದು ಕಂಡಿರುವ ಬಗ್ಗೆ ಉಳಿದವರಿಗೆ ಅವರ ಮಾತೇ ಪ್ರಮಾಣವಾಗಿರುತ್ತದೆ. ಹಾಗೆಯೇ 'ಸಮಾಧಿ ಸ್ಥಿತಿಯಲ್ಲಿ ನಾನು ಭಗವಂತನ ದರ್ಶನವನ್ನು

---

* ಶ್ರೀಯುತರು 14–3–93ರಂದು ಮೈಸೂರಿನಲ್ಲಿ ಮಾಡಿದ ಉಪನ್ಯಾಸದ ಸಾರಾಂಶ,

ಪಡೆದೆನು' ಎಂದು ಮತ್ತೊಬ್ಬನು ಹೇಳಬಹುದು. ಅದನ್ನು ಬೇರೊಬ್ಬನು ಸಮರ್ಥಿಸುವದೂ ಆಗಲಾರದು. ಏಕೆಂದರೆ ಅವನಿಗೆ ಆ ದರ್ಶನವಾಗಿರುವದಿಲ್ಲ. ಆದರೆ ಅಲ್ಲಗಳೆಯುವದೂ ಸಾಧ್ಯವಿಲ್ಲ. ಏಕೆಂದರೆ ಮತ್ತೊಬ್ಬನ ಅನುಭವವನ್ನು ಬೇರೊಬ್ಬನು ಇಲ್ಲವೆನ್ನುವದು ಹೇಗಾದೀತು? ಇದೇ ರೀತಿಯಾಗಿ ಹುಚ್ಚು ಹಿಡಿದವನಿಗೆ, ಸನ್ನಿಯಾದವನಿಗೆ, ಗ್ರಹ (ದೆವ್ವ) ಬಡಿದವನಿಗೆ–ಇತ್ಯಾದಿ ಜನರಿಗೆ ಅವರವರಿಗೇ ಮೀಸಲಾದ ಬೇರೆ ಬೇರೆಯ ಜಾತಿಯ ಅನುಭವಗಳಾಗಿರುತ್ತವೆ. ಇವೆಲ್ಲವೂ ವೈಯಕ್ತಿಕವೇ ಹೊರತು ಸಾರ್ವತ್ರಿಕವಲ್ಲ. ಆದರೆ ವೇದಾಂತಿಗಳು ಮಾತ್ರ ಇಂಥ ಯಾವ ವೈಯಕ್ತಿಕಾನುಭವಗಳನ್ನೂ ಉದಾಹರಿಸುವದಿಲ್ಲ. ಹಾಗೂ ಇವುಗಳ ಆಧಾರದಿಂದ ಯಾವ ಸಿದ್ಧಾಂತವನ್ನೂ ಸ್ಥಾಪಿಸುವದಿಲ್ಲ. ವಿಚಾರಕರು ಇದನ್ನು ಗಮನಿಸಬೇಕು.

ಹಾಗಾದರೆ ವೇದಾಂತಿಗಳು ಸಹ 'ಅನುಭವ' ಎಂಬ ಮಾತನ್ನು ಮತ್ತೆ ಮತ್ತೆ ಬಳಸುವರಲ್ಲವೆ? ಅವರ ತೀರ್ಮಾನದಂತೆಯೇ ಆಗಲಿ, ಅನುಭವವೆಂದರೇನು? ಎಂದು ಕೇಳಿದರೆ ಅವರು ಕೊಡುವ ಉತ್ತರವೇನೆಂದರೆ: **ಅನುಭವ–ಎಂದರೂ ಆತ್ಮ–ಎಂದರೂ ಒಂದೇ–ಎಂದು ತಿಳಿಸುತ್ತಾರೆ.** ಶ್ರುತಿಯಲ್ಲಿ '**ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ**' ಎಂದಿದೆ. ಈ ಆತ್ಮನೇ ಸರ್ವರ ಅನುಭವದಲ್ಲಿಯೂ ಸಿದ್ಧನಾಗಿರುವ ಬ್ರಹ್ಮವು–ಎಂದು ಅವರು ಹೇಳುತ್ತಾರೆ. ಈ ಆತ್ಮಾನುಭವವು ವೈಯಕ್ತಿಕವಲ್ಲ, ಸಾರ್ವತ್ರಿಕವಾಗಿದೆ. ಹೇಗೆಂದರೆ 'ಆತ್ಮಾ' ಎಂದರೆ ತಾನು ಎಂದರ್ಥ. ಯಾವನಿಗೇ ಆಗಲಿ, ತಾನು–ಎಂಬುದು ಗೊತ್ತಿಲ್ಲವೆಂದಾಗಲಿ, ಮರೆತು ಹೋಗಿದೆ–ಎಂದಾಗಲಿ–ಅನುಭವವಿದೆಯೆ? ಖಂಡಿತ ಇರುವದಿಲ್ಲ. ಆದ್ದರಿಂದಲೇ 'ಈ ಆತ್ಮನು ನಾನು' ಎಂಬಿದು ಸಾರ್ವತ್ರಿಕವಾಗಿರುತ್ತದೆ. ಸಾರ್ವತ್ರಿಕವೆಂದರೆ ದೇಶ, ಕಾಲ, ವ್ಯಕ್ತಿಗಳನ್ನೆಲ್ಲ ವ್ಯಾಪಿಸಿಕೊಂಡು ಅವುಗಳಿಗಿಂತ ಮಿಗಿಲಾಗಿ ಅವು ಯಾವದರ ಹಂಗೂ ಇಲ್ಲದೆ ತಾನೇ ತಾನಾಗಿ ಇರತಕ್ಕದ್ದು– ಎಂದಭಿಪ್ರಾಯ. ಇಂಥ ತಾನೆಂಬ ಆತ್ಮನು ಸ್ವತಃ ಅನುಭವರೂಪನಾಗಿಯೇ ಇದ್ದಾನೆ. ಉಳಿದ ಅನುಭವಗಳೆಲ್ಲ ಈ ಆತ್ಮನು ಸಿದ್ಧನಾದ ಮೇಲೆ ಸಿದ್ಧವಾಗಬೇಕಾಗಿವೆ. ಆದರೆ ಈ ಆತ್ಮನು ತಾನು ಇದೇನೆ–ಎಂಬಿದನ್ನು ಸಿದ್ಧಪಡಿಸಲು ಪ್ರಮಾಣಗಳನ್ನಾಗಲಿ, ಕರಣವನ್ನಾಗಲಿ, ಅಂತಃಕರಣವೃತ್ತಿಗಳನ್ನಾಗಲಿ ಅವಲಂಬಿಸಬೇಕಾಗಿಲ್ಲ. ಆದ್ದರಿಂದ ಈ ಆತ್ಮಾನುಭವವು ತಾನೇ ಆಗಿದೆ. ಆತ್ಮನು ಸ್ವತಃ ಸಿದ್ಧನು, ಅಥವಾ ಸ್ವಯಂಸಿದ್ಧನು. ಶಾಸ್ತ್ರವು ಕೂಡ ಈ ಆತ್ಮನನ್ನು ತನಗೆ ವಿಷಯವಾಗಿಸಿಕೊಂಡು ತಿಳಿಸಲಾರದು. ಮತ್ತೇನೆಂದರೆ ಶಾಸ್ತ್ರವೇ ಈ ಆತ್ಮನ ಬೆಳಕಿನಲ್ಲಿ ತಾನು ಶಾಸ್ತ್ರವೆನಿಸುತ್ತದೆ. ಸೂರ್ಯನನ್ನು ನೋಡಲು ದೀಪವು ಹೇಗೆ ಬೇಡವೋ ಹಾಗೆ ಸ್ವಯಂಸಿದ್ಧನಾದ ಆತ್ಮನನ್ನು ಬೆಳಗಲು ಯಾವ ಪ್ರಮಾಣವೂ ಬೇಡ.

ಹೀಗೆ ಸರ್ವರ ಆತ್ಮನೂ ಸ್ವತಃಸಿದ್ಧನೂ ಉಳಿದೆಲ್ಲ ಅನುಭವಗಳಿಗೂ ಮೂಲವೂ ಆದ ಪ್ರತ್ಯಗಾತ್ಮನನ್ನು ಗುರುತಿಸಿ ತಾನೇ ಆತ್ಮನಾಗಿ ಉಳಿದುಕೊಳ್ಳುವದನ್ನೇ ವೇದಾಂತಿಗಳು ಅನುಭವವೆನ್ನುವರು. ಆದ್ದರಿಂದ ಆತ್ಮನನ್ನು ತಿಳಿಯಲೆಳಸುವದು ಆತ್ಮಾನುಭವವಲ್ಲ, ತಾನು ಆತ್ಮನಾಗಿ ಉಳಿದುಕೊಳ್ಳುವದೇ ನಿಜವಾದ ಆತ್ಮವಿದ್ಯೆಯು–ಎಂದು ಹೇಳುತ್ತಾರೆ. ಹೀಗೆ ವೇದಾಂತಿಗಳ ಅನುಭವಕ್ಕೂ ಪ್ರಮಾಣವಾದಿಗಳ ಅನುಭವಕ್ಕೂ ಅಜಗಜಾಂತರವಿದೆ. ಜಿಜ್ಞಾಸುಗಳು ಈ ನಿಜವನ್ನರಿಯಬೇಕು. ಶಂಕರವೇದಾಂತದಲ್ಲಿ ಮಾತ್ರವೇ– ಅದರಲ್ಲಿಯೂ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ ವಿಚಾರಸರಣಿಯಲ್ಲಿ ಮಾತ್ರವೇ ಈ ಆತ್ಮಾನುಭವವನ್ನು ಅಂಗೈನೆಲ್ಲಿಕಾಯಿಯಂತೆ ತಿಳಿಸಲಾಗಿದೆ. ಇದು ಬರಿಯ ಹೊಗಳಿಕೆಯಲ್ಲವೆಂಬುದು ವಿಚಾರಮಾಡಿದಾಗಲೇ ಮನವರಿಕೆಯಾದೀತು.

## 57. ಬ್ರಹ್ಮವು ಇದೆಯೆಂದು ಏಕೆ ಒಪ್ಪಬೇಕು? *

### (ಅಕ್ಟೋಬರ್ 1995)

ಲೋಕದಲ್ಲಿ ಬಹುಜನರು ಪ್ರಾಪಂಚಿಕವಿಚಾರಗಳಲ್ಲಿಯೇ ಸದಾಕಾಲವೂ ಮುಳುಗಿರುತ್ತಾರಾದ್ದರಿಂದ ಅವರಿಗೆ ಬ್ರಹ್ಮಜಿಜ್ಞಾಸೆಯು ಎಟಕುವಂತೆಯೇ ಇಲ್ಲ. ಎಲ್ಲಿಯೋ ಯಾವಾಗಲೋ ದೇವರನೆನಪು ಬಂದರೆ ಒಮ್ಮೆ ಕೈ ಮುಗಿದು ಅಥವಾ ನಮಸ್ಕರಿಸಿ ಮತ್ತೆ ವ್ಯವಹಾರದಲ್ಲಿ ತಲ್ಲೀನರಾಗುತ್ತಾರೆ. ಇಂಥವರು ದೇವಾಲಯಗಳಿಗೆ ಭೇಟಿ ನೀಡುವದಾಗಲಿ ಉತ್ಸವಾದಿಗಳಲ್ಲಿ ಭಾಗವಹಿಸುವದಾಗಲಿ ಅಪರೂಪವೇ ಸರಿ. ಆದರೆ ಇಂಥವರಿಗಿಂತಲೂ ವಿಲಕ್ಷಣರಾದ ಕೆಲವು ಕುತರ್ಕಬುದ್ಧಿಯ ಜನರು ದೇವರು ಎಲ್ಲಿದ್ದಾನೆ? ಏನು ಮಾಡುತ್ತಿದಾನೆ? ಅವನನ್ನು ಕಂಡಿರುವವರು ಯಾರು? ಇತ್ಯಾದಿಯಾಗಿ ಚರ್ಚೆ ಮಾಡುತ್ತಾ ಅಲ್ಪ ಶ್ರದ್ಧೆಯುಳ್ಳವರನ್ನೂ ದಾರಿತಪ್ಪಿಸುವದುಂಟು. ಇದು ಹಿಂದಿನಿಂದಲೂ ಇದ್ದದ್ದೇ ಆಗಿದೆ. ಆದ್ದರಿಂದ ಉಪನಿಷತ್ತುಗಳಲ್ಲಿ ದೇವರ ವಿಷಯವಾಗಿ ಏನು ಹೇಳಿದೆ? ಅವನನ್ನು ಏಕೆ ಒಪ್ಪಬೇಕು? ಎಂಬೀ ವಿಚಾರದಲ್ಲಿ ಈಗ ಚಿಂತನ ಮಾಡೋಣ.

ಮತಧರ್ಮಗಳಲ್ಲಿ ದೇವರನ್ನು ಒಪ್ಪಿದ್ದರೂ ಅವನು ನಮಗಿಂತ ಬೇರೆ–ಎಂದು ತಿಳಿಸುತ್ತಾರೆ. ಹಾಗೂ ಅವನು ಯಾವದೋ ಲೋಕದಲ್ಲಿ ತನ್ನ ಪಾಡಿಗೆ ತಾನು ಇದ್ದಾನೆಂದೂ ಅವನ ಜ್ಞಾನ–ಶಕ್ತಿ–ಬಲ–ಐಶ್ವರ್ಯ–ವಿಭೂತಿಗಳು ಅಪರಿಮಿತವಾದವುಗಳೆಂದೂ

---

* ಶ್ರೀಯುತರು 22–1–93 ರಂದು ಚಿತ್ರದುರ್ಗದ ವೇದಾಂತಸಪ್ತಾಹದಲ್ಲಿ ಮಾಡಿದ ಉಪನ್ಯಾಸದ ಸಾರಾಂಶ.

ಅವನೇ ಲೋಕಗಳನ್ನು ಆಳುತ್ತಾನೆಂದೂ ಅವನನ್ನು ನಂಬಿದರೆ ಪುಣ್ಯ-ಸ್ವರ್ಗಪ್ರಾಪ್ತಿಗಳೆಂದೂ ನಂಬದೇಇದ್ದರೆ ಅಥವಾ ದೂಷಿಸಿದರೆ ಪಾಪ, ನರಕ ಪ್ರಾಪ್ತಿಗಳೆಂದೂ ತಿಳಿಸುತ್ತಾರೆ. ಇಷ್ಟು ಹೊರತು ದೇವರನ್ನು ನಂಬುವದಿಲ್ಲ-ಎನ್ನುವವರಿಗೆ ಅವರಲ್ಲಿ ಉತ್ತರವೇನೂ ಇಲ್ಲ. ಆದರೆ ಉಪನಿಷತ್ತುಗಳಲ್ಲಿ ದೇವರನ್ನು ಮಾನವ ಸಾಮಾನ್ಯಕ್ಕೆ ಪರಿಚಯ ಮಾಡಿಕೊಟ್ಟಿರುವ ರೀತಿಯೇ ಬೇರೆಯಾಗಿರುತ್ತದೆ. ಅದೇನೆಂಬುದನ್ನು ಈಗ ತಿಳಿಯೋಣ.

ದೇವರು ಎಂಬುದನ್ನು ಉಪನಿಷತ್ತುಗಳಲ್ಲಿ 'ಬ್ರಹ್ಮ , ಆತ್ಮಾ' ಎಂಬ ಎರಡು ಶಬ್ದಗಳಿಂದ ಕರೆಯಲಾಗಿದೆ. ಅದರಲ್ಲಿಯೂ ಆತ್ಮಶಬ್ದವು ಬಹಳ ಸಮೀಪವಾಗಿದೆ. ಆತ್ಮ ಎಂದರೆ ಕನ್ನಡದಲ್ಲಿ 'ತಾನು' ಎಂದರ್ಥ. ತಾನು ಎಂಬುದು ಇದೆಯೊ, ಇಲ್ಲವೊ-ಎಂದು ಯಾರಿಗೂ ಸಂದೇಹವೇ ಬರುವಂತಿಲ್ಲ. ಏಕೆಂದರೆ ಹಾಗೆ ಯಾರಿಗೆ ಸಂಶಯ ವುಂಟಾಗಬಹುದೋ ಅವನೇ ತಾನಾಗಿರುತ್ತಾನೆ. ಇದನ್ನೇ 'ಅಪರೋಕ್ಷ' ಎನ್ನುವರು. ಹೀಗೆ ತನ್ನ ಆತ್ಮನೇ ಆಗಿರುವ ದೇವರು ಬ್ರಹ್ಮವೇ-ಎಂಬಿದು ಮತ್ತೊಂದು ಉಪದೇಶವಾಗಿದೆ. ಸಂಸ್ಕೃತಭಾಷೆಯಲ್ಲಿನ ಈ ಬ್ರಹ್ಮಶಬ್ದವು-ಆ ವಸ್ತುವು ಎಲ್ಲಕ್ಕಿಂತ ದೊಡ್ಡದು, ಮಿಗಿಲಾದದ್ದು , ಶುದ್ಧವಾದದ್ದು, ಜ್ಞಾನಸ್ವರೂಪವಾದದ್ದು, ಕಾಮಕರ್ಮಗಳ ಬಂಧವಿಲ್ಲದ್ದು-ಇತ್ಯಾದಿ ವಿಶೇಷಾರ್ಥಗಳನ್ನು ಕೊಡುತ್ತದೆ. ಆದ್ದರಿಂದ ಯಾವನೇ ವಿಚಾರಕನಿಗೆ 'ತಾನು' ಎಂಬಿದು ಅಪರೋಕ್ಷವಾಗಿ ಸಿದ್ಧವಾಗಿದ್ದರೂ 'ತಾನು ಬ್ರಹ್ಮವೇ' ಎಂದು ತಿಳಿದಿರುವದಿಲ್ಲ. ಇದನ್ನೇ ವೇದಾಂತದಲ್ಲಿ ಅವಿದ್ಯೆ (ತಪ್ಪು ತಿಳಿವಳಿಕೆ) ಎನ್ನುವರು. ಇದನ್ನು ಹೋಗಲಾಡಿಸಿಕೊಂಡಲ್ಲಿ ತಾನು ಬ್ರಹ್ಮವೇ...ಎಂಬಿದು ಕೂಡಲೆ ಮನದಟ್ಟಾಗು ವದು.

ಈಗ ಬ್ರಹ್ಮವು ಸಂಸಾರಿಯೊ, ಅಸಂಸಾರಿಯೊ? ಎಂಬಿದನ್ನು ವಿಚಾರ ಮಾಡೋಣ. ಶಾಸ್ತ್ರಗಳ ಹೇಳಿಕೆಯಂತೆ ಅದು ಅಸಂಸಾರಿ-ಎಂದರೆ ಯಾವದೇ ಹುಟ್ಟು ಸಾವು, ಹಸಿವು-ಬಾಯಾರಿಕೆ, ಶೋಕಮೋಹಗಳಿಲ್ಲದ್ದು. ಮತ್ತು ಹೀಗೆಂದು ಅರಿತವನಿಗೂ ಇದೇ ಫಲವಾಗುತ್ತದೆ-ಎಂದೂ ಅಲ್ಲಿ ಪ್ರತಿಪಾದಿಸಿರುತ್ತದೆ. ಆದ್ದರಿಂದ ಇಂಥ ಬ್ರಹ್ಮವೇ ತಾನೆಂದು ಅರಿತುಕೊಳ್ಳಬೇಕಾದರೆ ಶಾಸ್ತ್ರ-ಆಚಾರ್ಯರ ಮೂಲಕ ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕಾಗುತ್ತದೆ. ಇದು ಹಾಗಿರಲಿ. ಅಜ್ಞಾನಿಗಳಿಗೆ ಬ್ರಹ್ಮವು ಇದೆ-ಎಂಬಿದನ್ನು ಮನಗಾಣಿಸಿಕೊಡುವದು ಹೇಗೆ? ಎಂಬ ಪ್ರಶ್ನೆಗೆ ಉಪನಿಷತ್ತುಗಳಲ್ಲಿ ಈ ಕೆಳಗಿನ ಉತ್ತರವನ್ನು ನೀಡಲಾಗಿದೆ.

ನಾವು ಎದುರಿಗೆ ಕಾಣುತ್ತಿರುವ ಚೇತನಾಚೇತನವಸ್ತುಗಳಿಂದ ಕೂಡಿರುವ ಹಾಗೂ ವಿವಿಧವಾದ ನಾಮರೂಪಗಳಿಂದ ಕೂಡಿ ತೋರುತ್ತಾ ನಮ್ಮ ಮನಸೆಳೆಯುತ್ತಿರುವ ಈ ಪ್ರಪಂಚವೇ ಬ್ರಹ್ಮವು ಇದೆ–ಎಂಬಿದಕ್ಕೆ ಸಾಕ್ಷಿಯಾಗಿದೆ. ಏಕೆಂದರೆ ಇಲ್ಲಿರುವ ಸೃಷ್ಟಿ ವೈಚಿತ್ರ್ಯವನ್ನು ನೋಡಿದರೆ ಇದು ಮನುಷ್ಯರು ಯಾರೂ ಮಾಡಿದ್ದಲ್ಲ–ಎನಿಸುತ್ತದೆ. ನಿರಾಲಂಬವಾದ ಆಕಾಶದಲ್ಲಿ ಸೂರ್ಯನಂಥ ಭಾರಿಯ ಗ್ರಹವನ್ನು ತೂಗುಹಾಕಿ ಅವನು ಪೂರ್ವದಿಂದ ಪಶ್ಚಿಮಕ್ಕೆ ಸಂಚರಿಸುವಂತೆ ಮಾಡಿರುವವನು ಯಾರು? ಬೆಂಕಿಯು ಮೇಲಕ್ಕೇ ಉರಿಯುವಂತೆಯೂ ನೀರು ತಗ್ಗು ಪ್ರದೇಶಕ್ಕೇ ಹರಿಯುವಂತೆಯೂ ಮಾಡಿರುವವನಾರು? ಭೂಮಿಯಲ್ಲಿ ಹಾಕಿದ ಬೀಜವು ಮೊಳೆತು ಗಿಡವಾಗಿ ಮರವಾಗಿ ಫಲಭರಿತವಾಗುವಂತೆ ಯಾರು ಮಾಡಿದರು? ಚಿಕ್ಕ ನೆಲ್ಲಿಕಾಯಿಯು ಮರದಲ್ಲಿ ಬಿಡವಂತೆಯೂ ದಪ್ಪ ಬೂದುಗುಂಬಳವು ಬಳ್ಳಿಯಲ್ಲಿ ಬಿಡುವಂತೆಯೂ ಮಾಡಿದವರಾರು? ಹಸು ಕಪ್ಪಗಿದ್ದರೂ ಹಾಲು ಬೆಳ್ಳಗಿರುವಂತೆ ಯಾರು ಮಾಡಿದರು? ಇಂಥ ನೂರಾರು ಪ್ರಶ್ನೆಗಳಿಗೆ ಉತ್ತರವೇನೆಂದರೆ 'ಬ್ರಹ್ಮವೊಂದು ಇರಬೇಕು' ಎಂಬಿದೇ ಆಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಮಾನವನು ಎಂಥ ಕಷ್ಟ ಬಂದಿದ್ದರೂ ಬದುಕಬೇಕು–ಎಂದು ಏಕೆ ಬಯಸುತ್ತಾನೆ? ಎಂದರೆ ಬಾಳಿನಲ್ಲಿ ಆನಂದವಿರುವದೇ ಕಾರಣವಾಗಿದೆ. ಆ ಆನಂದವನ್ನು ಅರಿತ ಜ್ಞಾನಿಗಳು ಜಗತ್ತಿನ ಯಾವ ವಸ್ತುವನ್ನೂ ಬಯಸದೆ ಎಲ್ಲರಿಗಿಂತ ನೆಮ್ಮದಿಯಾಗಿರುತ್ತಾರೆ. ಶಾಂತರಾಗಿ ತೃಪ್ತರಾಗಿ ಅಭಯವಾಗಿರುತ್ತಾರೆ. ಇದು ಬ್ರಹ್ಮವು ಅವರ ಆತ್ಮನೇ–ಎಂಬ ವಿಜ್ಞಾನದ ಕೊಡುಗೆಯಾಗಿದೆ. ನಾವು ಇಂಥ ಆಧ್ಯಾತ್ಮಿಕವಿಜ್ಞಾನ ಸಂಪನ್ನರಾದರೆ ಬ್ರಹ್ಮವನ್ನು ಏಕೆ ಒಪ್ಪಬೇಕು? ಎಂದು ಎಂದಿಗೂ ಕೇಳಲಾರೆವು.

# ಭಾಗ 2

(ಶಂಕರ ಭಾಸ್ಕರ ಪತ್ರಿಕೆಯಿಂದ)

## 1. ಶಂಕರರ ಹಿತೋಪದೇಶ (ಇಂದ್ರಿಯನಿಗ್ರಹ)

(ಜನವರಿ 1988)

"ಸಮ್ಯಗ್ದರ್ಶನಲಕ್ಷಣಪ್ರಜ್ಞಾಸ್ಥೈರ್ಯಂ ಚಿಕೀರ್ಷತಾ
ಆದೌ ಇಂದ್ರಿಯಾಣಿ ಸ್ವವಶೇ ಸ್ಥಾಪಯಿತವ್ಯಾನಿ"

(ಗೀ. ಭಾ. 2–60 ರ ಅವತರಣಿಕೆ)

"ಸಮ್ಯಗ್ದರ್ಶನರೂಪದ ಪ್ರಜ್ಞಾಸ್ಥಿರತೆಯನ್ನು ಹೊಂದಬೇಕೆಂದು ಬಯಸುವ ಜಿಜ್ಞಾಸುವು ಅಥವಾ ಸಾಧಕನು ಮೊಟ್ಟಮೊದಲು ಇಂದ್ರಿಯಗಳನ್ನು ತನ್ನ ಸ್ವಾಧೀನದಲ್ಲಿ ಇಟ್ಟುಕೊಳ್ಳಬೇಕು" ಎಂಬುದು ಇದರ ಅರ್ಥವು.

ಶ್ರೀಶಂಕರಾಚಾರ್ಯರ ಭಾಷ್ಯದ ಉಪದೇಶದಂತೆ ಜಿಜ್ಞಾಸುಗಳು ಹೆಚ್ಚಿನ ಜ್ಞಾನನಿಷ್ಠೆಯಲ್ಲಿ ನೆಲೆನಿಲ್ಲುವುದೇ ಕೊನೆಯ ಮಜಲಾಗಿದೆ. ಅದನ್ನೇ ಈ ಮೇಲಿನ ವಾಕ್ಯದಲ್ಲಿ 'ಪ್ರಜ್ಞಾಸ್ಥಿರತೆ' ಎಂಬ ಶಬ್ದದಿಂದ ಹೇಳಿದ್ದಾರೆ.

ಆತ್ಮಸ್ವರೂಪದ ವಿಷಯದ ಜ್ಞಾನವು (ಆತ್ಮಪ್ರತ್ಯಯವು) ಹುಟ್ಟಿ ಪರಿಪಕ್ವವಾಗಿ ಪ್ರತಿಪಕ್ಷವಿಹೀನವಾಗಿ ಕೇವಲ ಅದ್ವಿತೀಯ ಆತ್ಮಾನುಭವದಲ್ಲಿಯೇ ಸಹಜವಾಗಿ ನೆಲೆನಿಂತಿರುವುದೇ 'ಪರಾಜ್ಞಾನನಿಷ್ಠೆ' (ಹೆಚ್ಚಿನ ಜ್ಞಾನನಿಷ್ಠೆ) ಎಂದು ಭಗವದ್ಗೀತಾಭಾಷ್ಯದ 18ನೇ ಅಧ್ಯಾಯದ 55ನೆಯ ಶ್ಲೋಕದ ಭಾಷ್ಯದಲ್ಲಿ ಆಚಾರ್ಯರು ಅಪ್ಪಣೆ ಕೊಡಿಸಿದ್ದಾರೆ. ಇಲ್ಲಿ ಹೇಳಿರುವ ವಿಷಯಗಳನ್ನು ಸಂಕ್ಷಿಪ್ತವಾಗಿ ಮೊದಲು ನೋಡೋಣ.

1. ನಾನು ಇಂಥವನು ಎಂಬ ಅನಿಸುವಿಕೆಯು ತೋರಿದ್ದನ್ನೂ ಅಡಗಿದ್ದನ್ನೂ ಸಹ ಬೆಳಗುತ್ತ ನಿತ್ಯಚಿನ್ಮಾತ್ರವಾದ ಸಾಕ್ಷಿಸ್ವರೂಪವೇ ತಾನು (ಅಥವಾ ನಿಜವಾದ ನಾನು) ಎಂಬ ಅನುಭವಪೂರ್ವಕವಾದ ನಿಶ್ಚಯವು ಶಾಸ್ತ್ರ ಆಚಾರ್ಯರ ಉಪದೇಶದಿಂದ ತನ್ನಲ್ಲಿ ಹುಟ್ಟುವದೇ 'ಆತ್ಮಪ್ರತ್ಯಯ' 'ಆತ್ಮಜ್ಞಾನ' ಎನಿಸುತ್ತದೆ.

2. ಈಗ 'ನಾನು' ಎಂದರೆ ಶರೀರವು ಎಂಬುದು ಎಷ್ಟು ಸಹಜವಾಗಿರುವುದೋ ಅಷ್ಟೇ ಸಹಜವಾಗಿ ಸಾಕ್ಷಿಸ್ವರೂಪವೇ ತಾನು ಎಂಬುದು ಅಂತಃಕರಣದಲ್ಲಿ ಅಪ್ರಯತ್ನವಾಗಿ (ಸಹಜವಾಗಿ) ನಿಂತಿರುವದೇ ಜ್ಞಾನದ ಪರಿಪಾಕವು.

3. ಇನ್ನು ಆತ್ಮನಲ್ಲದ ಅನಾತ್ಮರೂಪದ ಪ್ರಪಂಚವು ಇಂದ್ರಿಯಮನಸ್ಸುಗಳ ದೃಷ್ಟಿಯಿಂದ ನಿಜವಾಗಿರುವಂತೆ ಕಾಣುತ್ತಿದ್ದರೂ ಆತ್ಮಸ್ವರೂಪವಾದ ಸಾಕ್ಷಿಯನ್ನು ಬಿಟ್ಟು ಇದಕ್ಕೆ ಅಸ್ತಿತ್ವವೇ ಇಲ್ಲವೆಂದೂ, ಪ್ರಪಂಚವು ತೋರುವಾಗಲೂ ಈ ಸಾಕ್ಷಿಸ್ವರೂಪದಿಂದ ಪೂರ್ಣವಾಗಿ ವ್ಯಾಪಿಸಲ್ಪಟ್ಟೇ ಇರುವದರಿಂದ ಇದು ಬರೀ ಹುಸಿತೋರಿಕೆ ಎಂದು ಬಾಧಿತಗೊಳಿಸಿಕೊಂಡು ನೋಡುವದರಿಂದಲೂ, ಈ ಸಾಕ್ಷಿಸ್ವರೂಪದ ದೃಷ್ಟಿಯಿಂದ ಪ್ರಪಂಚವೆಂಬ ಮಾತೇ ಇಲ್ಲದ್ದರಿಂದ ಇವೆಲ್ಲವೂ ಕೇವಲಾತ್ಮನೇ ಎಂದೂ ವಿವೇಕದಿಂದ ಕಂಡುಕೊಂಡಾಗ ಕೇವಲ ಅದ್ವಿತೀಯ ಆತ್ಮಸ್ವರೂಪದಲ್ಲಿ ಸಹಜವಾಗಿ ನೆಲೆನಿಲ್ಲುವಿಕೆ ಬಂದಿರುತ್ತದೆ. ಇದೇ ಪರಾಜ್ಞಾನನಿಷ್ಠೆ ಸಮ್ಯಗ್ದರ್ಶನಲಕ್ಷಣಪ್ರಜ್ಞಾಸ್ಥೈರ್ಯ ಎಂಬುದು.

ಇದನ್ನು ಸಾಧಿಸಲು ಅಥವಾ ಈ ಮಜಲನ್ನು ತಲುಪಲು ಸಾಧಕನಾದ ಜಿಜ್ಞಾಸುವು ಸತತಪ್ರಯತ್ನವನ್ನು ಎಂದರೆ ವಿವೇಕವೈರಾಗ್ಯಾದಿಗಳಿಂದಲೂ ಕೂಡಿಕೊಂಡು ಸಾಧನೆ ಮಾಡಬೇಕು ಎಂದು ಗೀತೆಯ 18ನೆಯ ಅಧ್ಯಾಯದ 55ನೇ ಶ್ಲೋಕದ ಭಾಷ್ಯದಲ್ಲಿ ಆಚಾರ್ಯರು ಹೇಳಿದ್ದಾರೆ.

ಹೀಗೆ ಹೆಚ್ಚಿನ ಜ್ಞಾನನಿಷ್ಠೆಯನ್ನು ಪಡೆಯಲು ಸಾಧಕನು ಮಾಡಬೇಕಾದ ಮೊದಲನೆಯ ಕೆಲಸವೆಂದರೆ ಇಂದ್ರಿಯಗಳನ್ನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಬೇಕು– ಎಂಬುದನ್ನು ಈ ಲೇಖನದ ಆರಂಭದ ವಾಕ್ಯದಲ್ಲಿ ಆಚಾರ್ಯರು ತಿಳಿಸಿದ್ದಾರೆ. ಅದೇಕೆ? ಎಂದರೆ ಅದರ ಕಾರ್ಯವನ್ನು ಈ ಎರಡನೆಯ ಅಧ್ಯಾಯದ 60ನೇ ಶ್ಲೋಕದ ಭಾಷ್ಯದಲ್ಲಿ ವಿವರಿಸಿದ್ದಾರೆ.

**"ಪ್ರಕಾಶಮ್ ಏವ ಪಶ್ಯತಃ ವಿವೇಕವಿಜ್ಞಾನಯುಕ್ತಂ ಮನಃ"**

ಈ ಜಿಜ್ಞಾಸುವು ಆತ್ಮಸ್ವರೂಪದ ವಿವೇಕವಿಜ್ಞಾನ ಉಳ್ಳವನಾಗಿದ್ದರೂ ಸಹ , ಈ ಸಾಧಕನು ಮೇಧಾವಿಯಾಗಿದ್ದರೂ ಸಹ ಬಲಿಷ್ಠವಾದ ಇಂದ್ರಿಯಗಳು– ಮನಸ್ಸನ್ನು ಕದಡಿ ಆತ್ಮಸ್ವರೂಪದಲ್ಲಿ ನೆಲೆನಿಲ್ಲುವಿಕೆಯಿಂದ ತಪ್ಪಿಸಿಬಿಡುತ್ತವೆ ಎಂಬುದನ್ನು ಈ 60ನೇ ಶ್ಲೋಕದಲ್ಲಿ ವರ್ಣಿಸಿದ್ದಾರೆ.

ಈ ಇಂದ್ರಿಯಗಳು–ಹೊರಗೆ ಜಗತ್ತಿದೆ, ನಾನು ಜಗತ್ತಿನಲ್ಲಿದ್ದೇನೆ, ನನಗೆ ಭೋಗಗಳು ಬೇಕು–ಎಂಬ ಬುದ್ಧಿಯನ್ನು ಹುಟ್ಟಿಸಿ ಆತ್ಮಸ್ವರೂಪವೇ ತಾನು ಎಂಬ ವಿವೇಕಪೂರ್ವಕನಿಶ್ಚಯದಿಂದ–ಜಾರಿಸಿಬಿಡುತ್ತವೆ. ಆದ್ದರಿಂದ ಶರೀರಸ್ಥಿತಿಗೆ ಬೇಕಾದಷ್ಟೇ ವಿಷಯಗಳನ್ನು ಶಾಸ್ತ್ರಸಮ್ಮತವಾಗಿ ಸೇವಿಸುತ್ತಾ ಹೆಚ್ಚಿನ ಭೋಗಗಳಿಗೆ

ಎಳೆಸುವ ಇಂದ್ರಿಯಗಳನ್ನೆಲ್ಲಾ ಹಿಂಜಗ್ಗಿಕೊಂಡು ಸ್ವಾಧೀನದಲ್ಲಿ ಇಟ್ಟುಕೊಳ್ಳಬೇಕು. ಇದನ್ನೇ ಮುಂದೆ ''ತಾನಿ ಸರ್ವಾಣಿ ಸಂಯಮ್ಯ''– (ಗೀ. 2.61) ''ಧ್ಯಾಯತೋ ವಿಷಯಾನ್ ಪುಂಸಃ....'' (ಗೀ. 2.6ರಿಂದ 68ರ ವರೆಗಿನ) ಮುಂತಾದ ಅನೇಕ ಶ್ಲೋಕಗಳ ಭಾಷ್ಯದಲ್ಲಿ ಭಗವಾನ್ ಶಂಕರರು ವಿವರಿಸಿದ್ದಾರೆ.

## 2. ಆತ್ಮವಿಜ್ಞಾನಕ್ಕೆ ಸಾಧನಗಳು

### (ಜುಲೈ 1988)

ಮೋಕ್ಷ ಅಥವಾ ಸಂಸಾರದಿಂದ ಬಿಡುಗಡೆ ಎಂಬುದು ಆತ್ಮವಿಜ್ಞಾನದಿಂದಲೇ ಆಗುತ್ತದೆ. ಆತ್ಮವಿಜ್ಞಾನಕ್ಕೆ ಅರ್ಹತೆಯನ್ನು ಪಡೆಯಲು ಪೂರ್ವಭಾವಿಯಾಗಿ ಕೆಲವು ಸಾಧನೆಗಳನ್ನು ಜಿಜ್ಞಾಸುವು ಮಾಡಬೇಕಾಗಿರುತ್ತದೆ.

ಶ್ರೀಶಂಕರಭಗವತ್ಪಾದರ ಪ್ರಸ್ಥಾನತ್ರಯಭಾಷ್ಯದ ಪ್ರಕಾರ ಸಾಧನೆಗಳು ಒಟ್ಟು ಮೂರು ಪ್ರಕಾರಗಳಾಗಿವೆ. (1) ಪರಂಪರಾಸಾಧನೆಗಳು (2) ಸಹಕಾರಿ ಸಾಧನೆಗಳು (3) ಸಾಕ್ಷಾತ್‌ಸಾಧನೆಗಳು ಎಂಬಿವುಗಳೇ ಮೂರು ಪ್ರಕಾರಗಳು. ಇದರಲ್ಲಿ–(1) ಕರ್ಮಯೋಗ, ಜಿಜ್ಞಾಸಾಭಕ್ತಿಯಿಂದ ಮಾಡಿದ ಉಪಾಸನೆ ಇವು ಪರಂಪರಾಸಾಧನೆಗಳು (2) ಅಮಾನಿತ್ವಾದಿಗುಣಗಳು (ಗೀ. 13–7 ರಿಂದ 11), ಬುದ್ಧಿವಿಶುದ್ಧತ್ವಾದಿಗುಣಗಳು (ಗೀ. 18–51ರಿಂದ 84), ಸಾಧನ ಚತುಷ್ಟಯಸಂಪತ್ತು (ಸೂ–1–1–1) ಇವು ಸಹಕಾರಿಸಾಧನೆಗಳು. (3) ಶ್ರವಣ–ಮನನ–ನಿದಿಧ್ಯಾಸನ ಇವು ಸಾಕ್ಷಾತ್‌ಸಾಧನಗಳು (ಬೃ–ಭಾ.2–4–5 ಹಾಗೂ ತೈ–2ನೇ ವಲ್ಲಿಯ ಅವತರಣಿಕೆ) ಎಂದು ಸಾಧನೆಗಳ ವಿಭಾಗವನ್ನು ಮಾಡಬಹುದಾಗಿದೆ.

ಈ ಮೂರು ಬಗೆಯ ಸಾಧನೆಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡು ತನ್ನ ಸ್ಥಿತಿಯನ್ನು ತಾನು ತಿಳಿದುಕೊಂಡು ಜಿಜ್ಞಾಸುವು ಆಯಾಯ ಸಾಧನೆಗಳನ್ನು ಕೈಕೊಳ್ಳಬೇಕಾಗುವದು.

ಈ ಮೂರು ಪ್ರಕಾರದ ಸಾಧನೆಗಳನ್ನು ಎಲ್ಲರೂ ಈಗಲೇ ಆರಂಭಿಸ ಬೇಕೆಂದೇನೂ ತಾತ್ಪರ್ಯವಲ್ಲ. ಈ ಜನ್ಮದಲ್ಲಾಗಲಿ ಜನ್ಮಾಂತರದಲ್ಲಾಗಲಿ ಮೊದಲಿನ ಸಾಧನೆಗಳಾದ ಕರ್ಮಯೋಗ ಉಪಾಸನೆ ಮುಂತಾದವುಗಳನ್ನು ಮಾಡಿದ್ದರೆ ಅವನು ಪುನಃ ಅವುಗಳನ್ನು ಮಾಡಬೇಕಾದದ್ದಿಲ್ಲ. ಆಗ ಅವನಿಗೆ ಎರಡನೆ ಗುಂಪಿನ ಸಾಧನೆಗಳಾದ ಅಮಾನಿತ್ವಾದಿಗಳು, ಬುದ್ಧಿವಿಶುದ್ಧತ್ವಾದಿಗಳು, ಸಾಧನಚತುಷ್ಟಯಸಂಪತ್ತಿ

ಮೊದಲಾದವುಗಳು ಬಂದುಬಿಟ್ಟಿರುತ್ತವೆ. ಇದೇ ಈ ಹಿಂದೆ ಪರಂಪರಾಸಾಧನೆಗಳನ್ನು ಮಾಡಿದ್ದನೆಂಬುದಕ್ಕೆ ಗುರುತು. ಇನ್ನು ಈ ಸಹಕಾರಿಸಾಧನೆಗಳನ್ನು ಈ ಮೊದಲೇ ಅಳವಡಿಸಿಕೊಂಡ ಸಾಧಕನು ಮೂರನೇ ಪ್ರಕಾರದ ಸಾಕ್ಷಾತ್ ಸಾಧನೆಗಳಾದ ಶ್ರವಣ, ಮನನ, ನಿದಿಧ್ಯಾಸನಗಳಿಗೇ ನೇರವಾಗಿ ಅರ್ಹನಾಗುತ್ತಾನೆ. ಅದರಲ್ಲಿಯೂ ಉತ್ತಮಾಧಿಕಾರಿಗೆ ಶ್ರವಣಮಾತ್ರವೇ ಸಾಕು. "ಯೇಷಾಂ ಪುನಃ ನಿಪುಣಮತೀನಾಂ...." ಮುಂತಾದ ವಾಕ್ಯಗಳಲ್ಲಿ (ಸೂ. ಭಾ. 4-1-2) ಶ್ರೀಶಂಕರರು ತಿಳಿಸಿದ್ದಾರೆ. ಶ್ರವಣಮಾತ್ರಕ್ಕೆ ಆತ್ಮವಿಜ್ಞಾನನಿಷ್ಠೆಯು ನೆಲೆನಿಲ್ಲದಿದ್ದರೆ ಅದರೊಂದಿಗೆ ಮನನವನ್ನೂ ಮಾಡಬೇಕು. ಆಗಲೂ ಜ್ಞಾನನಿಷ್ಠೆ ದಕ್ಕದಿದ್ದರೆ ನಿದಿಧ್ಯಾಸನವನ್ನು ಸಹಾಯಕ್ಕೆ ತೆಗೆದುಕೊಳ್ಳಬೇಕು.

ಇವುಗಳಲ್ಲಿ ಮೊದಲಿನ ಎರಡು ಗುಂಪುಗಳು ಕರ್ತೃತಂತ್ರಸಾಧನೆಗಳಾಗಿವೆ. ಸಾಕ್ಷಾತ್ ಸಾಧನೆಗಳು ಮಾತ್ರ ವಸ್ತುತಂತ್ರ ಸಾಧನೆಗಳಾಗಿದ್ದು ವಿವೇಕಪ್ರಧಾನವಾಗಿವೆ. ಮೊದಲಿನ ಸಾಧನೆಗಳು (ಕರ್ಮಯೋಗ, ಉಪಾಸನೆ, ಹಾಗೂ ಅಮಾನಿತ್ವಾದಿಗಳು) ಹೆಚ್ಚಾಗಿ ಭಾವನಾಪ್ರಧಾನವಾಗಿರುತ್ತವೆ.

# 3. ಇಬ್ಬರು ವೇದಾಂತಭಾಸ್ಕರರು

## (ಅಕ್ಟೋಬರ್ 1988)

### "ಮಾಸಾನಾಂ ಮಾರ್ಗಶೀರ್ಷೋಽಹಮ್"

ಭಗವಂತನು ಮಾರ್ಗಶಿರಮಾಸವು ತನ್ನ ವಿಭೂತಿ ಎಂದು ಗೀತೆಯಲ್ಲಿ ಹೇಳಿದ್ದಾನೆ.

ನಮ್ಮ ಜೀವಮಾನದಲ್ಲಿ ಈ ಮಾಸದಲ್ಲಿಯೇ ಜನಿಸಿದ "ಇಬ್ಬರು ವೇದಾಂತ ಭಾಸ್ಕರರನ್ನು" ಸ್ಮರಿಸಿಕೊಂಡಾಗ ಈ ಮಾಸದ ಮಾಹಾತ್ಮ್ಯವು ಇನ್ನೂ ಹೆಚ್ಚು ನಮ್ಮ ಮನಸ್ಸಿಗೆ ತಟ್ಟುತ್ತದೆ. ಈ ಇಬ್ಬರಲ್ಲಿ ಒಬ್ಬರು "ಮಾರ್ಗಶಿರ ಶುದ್ಧ ಪೂರ್ಣಿಮೆಯ ದಿನ ಅವತರಿಸಿದ "ಭಗವಾನ್ ರಮಣಮಹರ್ಷಿಗಳು". ಇನ್ನೊಬ್ಬರು "ಪರಮಪೂಜ್ಯ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು."

ಭಗವಾನ್ ರಮಣಮಹರ್ಷಿಗಳು ತಮ್ಮ ಎಂಟನೇ ವಯಸ್ಸಿನಲ್ಲಿಯೇ ಆತ್ಮಾನುಭವವನ್ನು ಪಡೆದು ಅರುಣಾಚಲಕ್ಷೇತ್ರಕ್ಕೆ ಬಂದು ತಿರುವಣ್ಣಾಮಲೈಯಲ್ಲಿ

ನೆಲಸಿದವರು. ಸ್ವತಃ ಆತ್ಮಜ್ಞಾನನಿಷ್ಠರಾಗಿದ್ದು ಕೇವಲ ತಮ್ಮ ನಡತೆಯಿಂದಲೇ ಹೆಚ್ಚಾಗಿ ಜನಗಳಿಗೆ ಮಾರ್ಗದರ್ಶನ ಮಾಡಿದ ನಿಜವಾದ ಮಹಾತ್ಮರು. ಇವರು ಈ ಕಾಲದ ಶ್ರೀದಕ್ಷಿಣಾಮೂರ್ತಿಗಳಾಗಿದ್ದು ಕೇವಲ ಮೌನವ್ಯಾಖ್ಯಾನದಿಂದಲೇ ತತ್ತ್ವವನ್ನು ಬೋಧಿಸಿ ಜಿಜ್ಞಾಸುಗಳ ಅಜ್ಞಾನವನ್ನು ಕಳೆಯುತ್ತಿದ್ದರು.

ಒಮ್ಮೆ ಮಹರ್ಷಿಗಳ ವರ್ಧಂತಿಯು ಆಶ್ರಮದಲ್ಲಿ ಭಾರೀ ವಿಜೃಂಭಣೆಯಿಂದ ನಡೆದಿತ್ತು. ಗಣ್ಯಭಕ್ತರೆಲ್ಲರೂ ಮಹರ್ಷಿಗಳನ್ನು ಹೊಗಳಿ ಉಪನ್ಯಾಸ ಮಾಡಿದ ಬಳಿಕ ಕಾರ್ಯದರ್ಶಿಗಳು ಧ್ವನಿವರ್ಧಕಯಂತ್ರದಲ್ಲಿ ''ಈಗ ಪರಸ್ಥಳದಿಂದ ಬಂದ ಭಕ್ತರಿಗೆ ಮೊದಲು ಭೋಜನವನ್ನೇರ್ಪಡಿಸಿದೆ. ಆ ಬಳಿಕ ಇಲ್ಲಿ ಬಂದಿರುವ ಸಾಧುಗಳಿಗೆ ಊಟದ ವ್ಯವಸ್ಥೆ ಮಾಡಲಾಗುವದರಿಂದ ದಯವಿಟ್ಟು ಸಾಧುಗಳೆಲ್ಲರೂ ಸ್ವಲ್ಪ ಕಾಲ ಆ ಕಡೆಗೆ ಕುಳಿತುಕೊಳ್ಳಬೇಕಾಗಿ ಪ್ರಾರ್ಥನೆ'' ಎಂದು ಪ್ರಕಟಿಸಿದರು. ಆಗ ಮಹರ್ಷಿಗಳು ಹೊರಗೆ ಒಂದು ಕಡೆ ಕುಳಿತಿದ್ದರು. ಈ ಪ್ರಕಟನೆಯನ್ನು ಕೇಳಿದೊಡನೆಯೇ ಅವರು ಎದ್ದು ಹೋಗಿ ಸಾಧುಗಳ ಗುಂಪಿನಲ್ಲಿ ಕೊನೆಗೆ ಕುಳಿತುಕೊಂಡುಬಿಟ್ಟರು! ಅತಿಥಿಗಳಿಗೆ ಎಲೆ ಹಾಕಿದ ಬಳಿಕ ಮಹರ್ಷಿಗಳು ಊಟಕ್ಕೆ ಕುಳಿತುಕೊಳ್ಳಬೇಕಾದ ತಮ್ಮ ನಿಯತಸ್ಥಳದಲ್ಲಿ ಅವರಿರಲಿಲ್ಲ. ಅವರನ್ನು ಕರೆತರಲು ಹೊರಗೆ ನೋಡಿದರೆ ಎಲ್ಲಿಯೂ ಕಾಣಿಸಲಿಲ್ಲ. ಕೊನೆಗೆ ಹುಡುಕುತ್ತಾ ಹೋಗಲು ಸಾಧುಗಳ ಜೊತೆಗೆ ಕೊನೆಯಲ್ಲಿ ಕುಳಿತದ್ದನ್ನು ನೋಡಿ ''ತಾವು ಮೊದಲು ಊಟಕ್ಕೆ ದಯಮಾಡಿಸಬೇಕು'' ಎಂದು ಕೇಳಿದಾಗ ''ಏಕೆ? ನಾನು ಸಾಧುವಲ್ಲವೇನು?'' ಎಂದು ಕೇಳಿದರಂತೆ. ಆಗ ಕಾರ್ಯದರ್ಶಿಗಳು ಕ್ಷಮೆ ಕೇಳಿ ಮೊದಲು ಮಹರ್ಷಿಗಳೊಂದಿಗೆ ಸಾಧುಗಳಿಗೆಲ್ಲರಿಗೂ ಊಟಕ್ಕೆ ಹಾಕಿ ಆ ಬಳಿಕ ಅತಿಥಿಗಳಿಗೆ–ಪ್ರತಿಷ್ಠಿತರಿಗೆ ಹಾಕಿದರಂತೆ. ಹೀಗೆ ತಮ್ಮ ನಡತೆಯಿಂದಲೇ ಜನಗಳಿಗೆ ಬುದ್ಧಿಯನ್ನು ಕಲಿಸುವ ಮಹಾತ್ಮರಾಗಿದ್ದರು. ಭಾರತದಲ್ಲಿಯ ಗಣ್ಯವ್ಯಕ್ತಿಗಳೂ ಪರದೇಶದಿಂದ ಪ್ರವಾಹರೂಪದಿಂದ ಬರುತ್ತಿದ್ದ ಜಿಜ್ಞಾಸುಗಳೂ ಈ ಮಹಾತ್ಮರ ಸಾನ್ನಿಧ್ಯದಲ್ಲಿ ಹೆಚ್ಚಿನ ಉಪದೇಶದ, ಉಪನ್ಯಾಸದ ಸಹಾಯವಿಲ್ಲದಿದ್ದರೂ ಅಧ್ಯಾತ್ಮಸಾಧನೆಯ ಬಗೆಗಿನ ಸಂಶಯಗಳಿಗೆ ಸೂಕ್ತವಾದ ಪರಿಹಾರವನ್ನು ಕಂಡುಕೊಂಡು ನೆಮ್ಮದಿ ಹೊಂದುತ್ತಿದ್ದರು.

ಮುಖ್ಯವಾಗಿ ''ಎಲ್ಲ ಯೋಚನೆಗಳಿಗೂ 'ನಾನು' ಎಂಬುದು ಮೂಲವಾಗಿದೆ. ಈ 'ನಾನು' ಎಂಬುದು ಎಲ್ಲಿಂದ ಬರುತ್ತಿದೆ? ಅದರ ಮೂಲವೇನು? ಎಂಬುದನ್ನು ಕಂಡು ಹಿಡಿಯಿರಿ'' ಎಂಬುದೇ ಇವರ ಪ್ರಧಾನ ಉಪದೇಶವಾಗಿತ್ತು. ಕಾವ್ಯಕಂಠಗಣಪತಿಶಾಸ್ತ್ರಿ, ದೇವರಾತರಂಥ ಮಹಾ ವಿದ್ಯಾವಂತರೂ ಅನೇಕ ದೊಡ್ಡ ವಿದ್ವಾಂಸರೂ ಸಹ ಇವರ

ಸಾನ್ನಿಧ್ಯದಲ್ಲಿ ಅಧ್ಯಾತ್ಮಜ್ಞಾನದ ಬಗ್ಗೆ ಹೊಸ ಬೆಳಕನ್ನು ಪಡೆಯುತ್ತಿದ್ದರು. ''ಇಂಥ ನಿತ್ಯವಿದೇಹಸ್ಥಿತಿಯಲ್ಲಿಯೇ ನೆಲೆನಿಂತ ಶ್ರೀರಮಣಮಹರ್ಷಿಗಳನ್ನು ಸ್ಮರಿಸಿಕೊಳ್ಳುವದು, ಅವರನ್ನು ಕುರಿತು ಪ್ರಕಟವಾದ ಸಾಹಿತ್ಯಗಳನ್ನು ಅಧ್ಯಯನ ಮಾಡುವದು'' ಈಗ್ಗೆ ಬಹಳೇ ಅವಶ್ಯವಾಗಿದೆ. ಹೀಗೆ ವೇದಾಂತಭಾಸ್ಕರರಾಗಿದ್ದ ಶ್ರೀರಮಣ ಮಹರ್ಷಿಗಳ ಸ್ಮರಣೆಯೇ ಜಿಜ್ಞಾಸುಗಳಿಗೆ ಒಂದು ಸ್ಫೂರ್ತಿಯನ್ನೀಯುತ್ತದೆ.

ಇನ್ನು ಪೂಜ್ಯ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ಅವತರಿಸಿದ್ದು ಮಾರ್ಗಶಿರ ಬಹುಳ ಅಷ್ಟಮೀ ದಿನವಾಗಿದೆ. ಈ ಮಹಾತ್ಮರು ಗೃಹಸ್ಥಾಶ್ರಮದಲ್ಲಿದ್ದಾಗಲೇ ಬ್ರಹ್ಮನಿಷ್ಠರಾಗಿದ್ದು ಶ್ರೀಶಂಕರಭಗವತ್ಪಾದರವರ ಪ್ರಸ್ಥಾನತ್ರಯಭಾಷ್ಯಗಳನ್ನೆಲ್ಲವನ್ನೂ ಕನ್ನಡದಲ್ಲಿ ಹೊರತಂದು ಲೋಕೋಪಕಾರ ಮಾಡಿದ್ದೇ ಅಲ್ಲದೆ ಸಂಸ್ಕೃತ, ಇಂಗ್ಲೀಷು–ಕನ್ನಡ ಭಾಷೆಗಳಲ್ಲಿ ನೂರಾರು ಗ್ರಂಥಗಳನ್ನು ರಚಿಸಿ ಜಿಜ್ಞಾಸುಗಳಿಗೆ ಆತ್ಮಜ್ಞಾನಕ್ಕೆ ಬೇಕಾಗಿರುವ ಎಲ್ಲ ಬಗೆಯ ಉಪದೇಶಗಳನ್ನೂ ನೀಡಿರುವ ಮಹಾಮಹಿಮರಿವರು. ಆದ್ದರಿಂದಲೇ ಇವರು ''ಕನ್ನಡನಾಡಿನ ಅಭಿನವಶಂಕರಭಗವತ್ಪಾದ''ರೆನಿಸಿದ್ದಾರೆ. ಈ ಮಹಾತ್ಮರು ತೊಂಬತ್ತೈದು ವರ್ಷಗಳವರೆಗೆ ಬದುಕಿದ್ದು ಸುಮಾರು ಎಪ್ಪತ್ತುವರ್ಷಗಳನ್ನು **''ಆ ಸುಪ್ತೇಃ ಆ ಮೃತೇಃ ಕಾಲಂ ನಯೇತ್ ವೇದಾಂತಚಿಂತಯಾ''** ಎಂಬ ಉಕ್ತಿಯಂತೆ ಪ್ರವಚನ, ಲೇಖನಗಳ ಮೂಲಕ ವೇದಾಂತವನ್ನು ಬೋಧಿಸಿ ಶಾಂಕರವೇದಾಂತದ ವಿಷಯಕ್ಕಿರುವ ತಪ್ಪುಗ್ರಹಿಕೆಗಳನ್ನು ಕಳೆದಿರುವ ''ಜ್ಞಾನಭಾಸ್ಕರರಾಗಿ ಕನ್ನಡನಾಡಿನಲ್ಲಿ ದೇದೀಪ್ಯಮಾನ ರಾಗಿ ಬೆಳಗಿದ ಮಹಾತ್ಮರಿವರು.'' ಭಾರತ ಹಾಗೂ ಪರದೇಶಗಳಿಂದ ಬಂದ ಜಿಜ್ಞಾಸುಗಳಿಗೆ ಯೋಗ್ಯಮಾರ್ಗದರ್ಶನವನ್ನು ನೀಡಿ ವಿವೇಕದ ಬೆಳಕನ್ನು ಪಸರಿಸಿದ ಜ್ಞಾನಜ್ಯೋತಿಯಾಗಿದ್ದವರು ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು. ''ಮನುಷ್ಯನಾಗಿ ಹುಟ್ಟಿದ ಬಳಿಕ ಆತ್ಮಜ್ಞಾನವನ್ನು ಹೊಂದಿ ಬದುಕಿರುವಾಗಲೇ ಮೋಕ್ಷವನ್ನು ಅನುಭವದಲ್ಲಿಯೇ ಕಂಡುಕೊಳ್ಳುವದೇ ಮುಖ್ಯ'' ಎಂಬಿದು ಇವರ ಬೋಧದ ಸಾರವು.

ಇಂಥ ಇಬ್ಬರು ವೇದಾಂತಭಾಸ್ಕರರನ್ನು ಸ್ಮರಿಸಿಕೊಳ್ಳುವದೇ ಒಂದು ಮಹದ್ಭಾಗ್ಯ. ನಮ್ಮೆಲ್ಲರಿಗೂ ಇವರ ಅನುಗ್ರಹವು ಉಂಟಾಗಲಿ.

# 4. ಬ್ರಹ್ಮವನ್ನು ಅರಿಯುವ ಬಗೆ

## (ವೇದಾಂತದ ಒಗಟು)

## (ಜನವರಿ 1989)

"ಯಾವನು ನಾನು ಬ್ರಹ್ಮವನ್ನು ತಿಳಿದಿರುವೆನೆನ್ನುವನೋ ಅವನು ತಿಳಿದವನಲ್ಲ. ಯಾವನು ಬ್ರಹ್ಮವು ತಿಳಿಯಬರತಕ್ಕದ್ದಲ್ಲ, ತಿಳಿಯಲ್ಪಡುವದಲ್ಲವಾದ್ದರಿಂದ ತಿಳಿಯಲಿಲ್ಲ ಎನ್ನುವನೋ ಅವನು ಬ್ರಹ್ಮವನ್ನು ಸರಿಯಾಗಿ ತಿಳಿದವನು" ಎಂಬ ಅಭಿಪ್ರಾಯದ ವಾಕ್ಯವು ಕೇನೋಪನಿಷತ್ತಿನಲ್ಲಿ (2–3) ಬಂದಿದೆ.

ಯಾವದಾದರೊಂದು ವಸ್ತುವನ್ನು ಅಥವಾ ಸಂಗತಿಯನ್ನು ತಿಳಿದವನು "ಅದು ನನಗೆ ಗೊತ್ತಿದೆ" ಎಂದು ಹೇಳಿದಾಗ ಅವನು ಅದನ್ನು ತಿಳಿದವನು ಎಂದಾಗುತ್ತದೆ. "ನನಗೆ ಅದು ಗೊತ್ತಿಲ್ಲ" ಎಂದವನು ತಿಳಿಯದವನು ಎಂದಾಗುತ್ತದೆ. ಲೋಕ ವ್ಯವಹಾರವು ಹೀಗಿರುವಾಗ 'ಬ್ರಹ್ಮವನ್ನು ತಿಳಿದಿದ್ದೇನೆ, ಎಂಬುವನು ಅದನ್ನು ತಿಳಿಯಲಿಲ್ಲ, ಅದು ತಿಳಿದಿಲ್ಲ ಎಂಬುವನೇ ಸರಿಯಾಗಿ ತಿಳಿದವನು' ಎಂಬ ಮಾತು ಹೇಗೆ ಸರಿಯಾದೀತು? ಎಂದು ತಟ್ಟನೆ ಯಾರಿಗಾದರೂ ತೋರುತ್ತದೆ.

**"ಯಸ್ಯಾಮತಂ ತಸ್ಯ ಮತಮ್। ಮತಂ ಯಸ್ಯ ನ ವೇದ ಸಃ ।**
**ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್" ॥ (ಕೆ.2–3)**

ಯಾವನಿಗೆ ಅದು ತಿಳಿಯಲಿಲ್ಲವೋ ಅವನೇ ತಿಳಿದವನು. ಯಾವನಿಗೆ ಅದು ತಿಳಿದಿದೆಯೋ ಅವನಿಗೆ ಅದು ತಿಳಿಯಲಿಲ್ಲ. ಆದ್ದರಿಂದ ತಿಳಿದವನಿಗೆ ಬ್ರಹ್ಮವು ತಿಳಿಯ ಬಂದಿರುವುದಿಲ್ಲ, ತಿಳಿದು ಬಂದಿರುವವನಿಗೆ ಆ ಬ್ರಹ್ಮತತ್ತ್ವವು ತಿಳಿದಿರುವದೇ ಇಲ್ಲ ಎಂಬುದು ಈ ಮಂತ್ರದ ಸರಳಾರ್ಥವು.

ಈ ಮೇಲಿನ ಮಾತುಗಳು ಒಗಟಿನಂತೆ ಅರ್ಥವಾಗದ ರೀತಿಯಲ್ಲಿ ಬಂದಿವೆ. ಲೋಕದಲ್ಲಿ ಒಗಟುಗಳನ್ನು ಹೇಳಿದಾಗ ಬುದ್ಧಿವಂತರು ಮಾತ್ರ ಅದರ ರಹಸ್ಯವನ್ನರಿತು ಅದನ್ನು ವಿವರಿಸುತ್ತಾರೆ. ಉದಾಹರಣೆಗೆ–

**ಕಲ್ಲರಳಿ ಹೂವಾಗಿ।**
**ಎಲ್ಲರಿಗೂ ಬೇಕಾಗಿ।**
**ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ ।**
**ಬಲ್ಲವರು ಹೇಳಿ ಸರ್ವಜ್ಞ।**

ಎಂಬುದೊಂದು ಒಗಟು. ಇದರ ರಹಸ್ಯವು ಸುಣ್ಣ ಎಂಬುದು. ಹೀಗೆಯೇ 'ಬ್ರಹ್ಮ' ವೆಂಬ ತತ್ತ್ವವು ಪ್ರತಿಯೊಬ್ಬನ ನಿಜಸ್ವರೂಪವೇ ಆಗಿದೆ; ಎಂದರೆ ಅದೇ ತಾನಾಗಿದ್ದಾನೆ. ಬ್ರಹ್ಮವು ತನಗಿಂತ ಬೇರೆ ಅಲ್ಲ, ನಿಜವಾಗಲೂ 'ನಾನು ಎಂದು ಹೇಳಿಕೊಳ್ಳುವದಕ್ಕೆ ಅರ್ಹವಾದ ತತ್ತ್ವವು. ಈಗಿನ 'ನಾನು ಇಂಥವನು' ಎಂದು ನಾವು ಹೇಳಿಕೊಳ್ಳುತ್ತಿರುವ ಈ ನಾನೆಂಬ ಅನಿಸುವಿಕೆಯು ತೋರಿದ್ದನ್ನೂ ಅಡಗಿದ್ದನ್ನೂ (ನಿದ್ರೆಯಲ್ಲಿ ಅಡಗಿರುವದು–ಎಚ್ಚರ ಕನಸುಗಳಲ್ಲಿ ತೋರುವದು ಈ ಎರಡನ್ನೂ) ಬೆಳಗುತ್ತಿರುವ ಕೇವಲಾನುಭವಸ್ವರೂಪವೇ–ಅರ್ಥಾತ್ ನಿಜವಾದ ನಾನು ಅಥವಾ ತಾನೇ ಬ್ರಹ್ಮವು.

ಹೀಗಿರುವಾಗ ವ್ಯವಹಾರದಲ್ಲಿ 'ನಾನು' ಎಂಬುವನು ತನಗೆ ಅರಿಯುವ ಸಾಧನಗಳಾದ ಬುದ್ಧಿ ಮನಸ್ಸು ಇಂದ್ರಿಯಗಳಿಂದ ಹೊರಗಿನ ವಸ್ತುಗಳನ್ನೂ ಒಳಗಿನ ಭಾವಗಳನ್ನೂ ಅರಿಯುವಂತೆ ಈ ಬ್ರಹ್ಮತತ್ತ್ವವನ್ನು ವಿಷಯೀಕರಿಸಿ ಅರಿಯಲಾಗುವದಿಲ್ಲ. ಮತ್ತೇನೆಂದರೆ–ವಿವೇಕದಿಂದ ಬ್ರಹ್ಮತತ್ತ್ವದ ಕಡೆಗೆ ಶಾಸ್ತ್ರ ಹಾಗೂ ಆಚಾರ್ಯರ ಉಪದೇಶದಂತೆ ತಿರುಗಿದಾಗ ತಾನೇ ಬ್ರಹ್ಮತತ್ತ್ವವಾಗಿ ಉಳಿದುಕೊಳ್ಳುತ್ತಾನೆ. ಈ ಉಳಿದುಕೊಳ್ಳುವದಕ್ಕೇ ತಿಳಿಯುವದು ಎಂದು ಹೇಳುತ್ತಾರೆ. ಈಗ ಬ್ರಹ್ಮವನ್ನು ವಿಷಯೀಕರಿಸಿ ಅರಿಯಲಿಲ್ಲ, ಬ್ರಹ್ಮವು ಅರಿಯತಕ್ಕ ವಿಷಯವಲ್ಲ ಎಂಬ ಅನುಭವವೇ ನಿಂತಿರುತ್ತದೆ. ಆದ್ದರಿಂದ ಬ್ರಹ್ಮವು ತಿಳಿದುಬರತಕ್ಕ ವಿಷಯಗಳಂತೆ ಅಲ್ಲ ಎಂದು ಯಾವಾತನು ಕಂಡುಕೊಂಡನೋ ಅವನೇ ನಿಜವಾಗಲೂ ತಿಳಿದವನು. ಅರ್ಥಾತ್ ಬ್ರಹ್ಮವಾಗಿ ಉಳಿದವನು–ಎಂಬುದು ಇಲ್ಲಿ ರಹಸ್ಯವು. ಇದರಂತೆಯೇ ಬ್ರಹ್ಮವನ್ನು ನಾನು ತಿಳಿದೆ ಎಂಬುವನು ಬ್ರಹ್ಮವಾಗಿ ಉಳಿಯಲಿಲ್ಲವಾದ್ದರಿಂದಲೂ ಇನ್ನೂ ತಾನು ತಿಳಿಯುವವನಾಗಿಯೇ (ಜ್ಞಾತೃ) ಉಳಿದನಾದ್ದರಿಂದಲೂ ಅವನು ತಿಳಿಯಲಿಲ್ಲ–ಎಂಬಿದೇ ಇಲ್ಲಿ ರಹಸ್ಯ.

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರಿಗೆ ಅಮೇರಿಕೆಯ ಒಬ್ಬ ಜಿಜ್ಞಾಸುವು ಮಾಡಿದ ಪ್ರಶ್ನೆಗೆ ಅವರು ಕೊಟ್ಟಿರುವ ಉತ್ತರವನ್ನು ಅವಲೋಕಿಸಿದರೆ ಈ ವಿಷಯವು ಸ್ಪಷ್ಟವಾಗುವುದು. ಆ ಸಂವಾದವು ಹೀಗಿದೆ:

**ಪ್ರಶ್ನೆ**: ಆತ್ಮನನ್ನು ಅರಿಯುವದೆಂದರೇನು?

**ಉತ್ತರ**: ಆತ್ಮಸ್ವರೂಪವು ಯಾವುದೇ ಸಾಧನೆಯಿಂದ ತಿಳಿದುಬರತಕ್ಕ ವಿಷಯವಲ್ಲ ಎಂಬುದನ್ನು ಅನುಭವದಲ್ಲಿ ಕಂಡುಕೊಳ್ಳುವದೇ ಆತ್ಮಜ್ಞಾನವು.

ಆದ್ದರಿಂದ ಬ್ರಹ್ಮತತ್ತ್ವವು ನಮ್ಮ ಸ್ವರೂಪವೇ ಹೊರತು ಅದು ಅರಿಯಲ್ಪಡುವ ವಿಷಯವಲ್ಲ ಎಂದು ಅನುಭವಪೂರ್ವಕ ಕಂಡುಕೊಳ್ಳುವದೇ ನಿಜವಾದ ಬ್ರಹ್ಮವಿಜ್ಞಾನವು ಎಂಬುದೇ ಮೇಲಿನ ಒಗಟಿನ ರಹಸ್ಯವು.

# 5. ಜೀವಾತ್ಮನು ಪರಮಾತ್ಮನೇ

## (ಏಪ್ರಿಲ್ 1989)

ಬ್ರಹ್ಮಸೂತ್ರದ ವಾಕ್ಯಾನ್ವಯಾಧಿಕರಣದಲ್ಲಿ (1–4–19 ರಿಂದ 22) ಮೂರು ಜನ ಅದ್ವೈತಾಚಾರ್ಯರ ಅಭಿಪ್ರಾಯಗಳನ್ನು ಶ್ರೀಬಾದರಾಯಣರು ಸೂತ್ರರೂಪಗಳಿಂದ ಬರೆದಿದ್ದಾರೆ.

**(1) ಆಶ್ಮರಥ್ಯ (2) ಔಡುಲೋಮಿ (3) ಕಾಶಕೃತ್ಸ್ನ** ಎಂಬುವರೇ ಈ ಮೂವರು ಆಚಾರ್ಯರು. ಇವರಲ್ಲಿ ಜೀವನು ಈಗ ಎಂದರೆ ಅವಿದ್ಯಾವಸ್ಥೆಯಲ್ಲಿ ಜೀವನೇ ಆಗಿದ್ದಾನೆ. ಇವನ ಸ್ವರೂಪವು ಬ್ರಹ್ಮವೇ ಆಗಿದ್ದರೂ ಅವಿದ್ಯೆ ಇರುವವರೆಗೆ ಅದರ ಪ್ರಯೋಜನವಿಲ್ಲದ್ದರಿಂದ ಈಗ ಇವನು ಜೀವನೇ ಆಗಿದ್ದಾನೆ. ಅವಿದ್ಯೆ ಹೋದ ಬಳಿಕ ಈ ಜೀವನೇ ಬ್ರಹ್ಮಸ್ವರೂಪನಾಗುತ್ತಾನೆ ಎಂಬುದು **ಆಶ್ಮರಥ್ಯ** ಆಚಾರ್ಯರ ಅಭಿಪ್ರಾಯವು.

ಇನ್ನು ಜೀವನು ಈಗ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ ಸುಖದುಃಖಾದಿ ವೇದನೆಗಳು ಇವೆಲ್ಲವುಗಳಿಂದ ಕೂಡಿರುವುದರಿಂದ ಈಗ ಇವನು ಜೀವನೇ ಆಗಿದ್ದಾನೆ. ಜ್ಞಾನವನ್ನು ಪಡೆದು ಧ್ಯಾನಾದಿ ಅನುಷ್ಠಾನದಿಂದ ಪರಿಶುದ್ಧನಾಗಿ ಮರಣಕಾಲದಲ್ಲಿಯೂ ಸಹ ಬ್ರಹ್ಮಭಾವನೆಯಿಂದಲೇ ಶರೀರವನ್ನು ಬಿಟ್ಟ ಬಳಿಕ ಕಾಲಾಂತರದಲ್ಲಿ ಬ್ರಹ್ಮತತ್ತ್ವವನ್ನೇ ಸೇರಿ ಬ್ರಹ್ಮನೇ ಆಗುತ್ತಾನೆ ಎಂಬುದು **ಔಡುಲೋಮಿ** ಆಚಾರ್ಯರ ಅಭಿಪ್ರಾಯದ ಸಾರವು.

ಈ ಎರಡೂ ಮತಗಳಲ್ಲಿ ಜೀವನಿಗೂ ಪರಮಾತ್ಮನಿಗೂ ಈಗ ಭೇದವಿದ್ದು ಆ ಬಳಿಕ ಐಕ್ಯವು ಸಂಭವಿಸುವುದೆಂಬುದು ಲಕ್ಷಿಸತಕ್ಕ ವಿಷಯವು.

ಆದರೆ ಮೂರನೆಯವರಾದ **ಕಾಶಕೃತ್ಸ್ನಾಚಾರ್ಯರು** ಹೇಳುವದೇನೆಂದರೆ **ಅಸ್ಯೈವ ಪರಮಾತ್ಮನಃ ಅನೇನಾಪಿ ವಿಜ್ಞಾನಾತ್ಮಭಾವೇನ ಅವಸ್ಥಾನಾತ್ ಉಪಪನ್ನಮ್ ಇದಮ್ ಅಭೇದೇನ ಉಪಕ್ರಮಣಮ್ ಇತಿ ಕಾಶಕೃತ್ಸ್ನ ಆಚಾರ್ಯೋ ಮನ್ಯತೇ (ಬ್ರ. ಸೂ. ಭಾ. 1–4–22)** ಇದೇ ಪರಮಾತ್ಮನೇ ಈ ವಿಜ್ಞಾನಾತ್ಮರೂಪದಿಂದಲೂ ಇದ್ದುಕೊಂಡಿರುವದರಿಂದ ಈ ರೀತಿಯಲ್ಲಿ ಅಭೇದರೂಪದಿಂದ ಉಪಕ್ರಮವನ್ನು ಮಾಡಿದೆ ಎಂಬುದು ಇದರ ಅರ್ಥವು.

ಇಲ್ಲಿ ಶ್ರೀಶಂಕರರು ಹೇಳುವದೇನೆಂದರೆ **'ಕಾಶಕೃತ್ಸ್ನಸ್ಯ ಆಚಾರ್ಯಸ್ಯ ಅವಿಕೃತಃ ಪರಮೇಶ್ವರಃ ಜೀವೋ ನಾನ್ಯಃ ಇತಿ ಮತಮ್'** ಕಾಶಕೃತ್ಸ್ನ ಆಚಾರ್ಯನ

ಮತದಲ್ಲಿ ಜೀವನು ಯಾವ ವಿಕಾರವನ್ನು ಹೊಂದದಿರುವ ಪರಮೇಶ್ವರನೇ ಹೊರತು ಮತ್ತೊಬ್ಬನಲ್ಲ ಎಂಬುದು ಇದರ ಅರ್ಥವು.

ವ್ಯವಹಾರದೃಷ್ಟಿಯಿಂದ ಅವಿದ್ಯೆಯು ಜೀವನಿಗೆ ನೈಸರ್ಗಿಕವಾಗಿರುವುದು. ಜೀವತ್ವ ಎಂದರೆ ಸುಖದುಃಖಭೋಗಿಯೂ, ಕರ್ತೃವೂ ಆಗಿರುವುದು. ಈ ದೃಷ್ಟಿಯಿಂದಲೇ ಆತ್ಮಜ್ಞಾನವು ಉಂಟಾದಾಗ ಅವಿದ್ಯೆಯು ಬಾಧಿತವಾಗಿ ಜೀವನಿಗೆ ಸಂಸಾರದಿಂದ ಬಿಡುಗಡೆಯಾಗುವದು ಮುಂತಾದದ್ದೆಲ್ಲವೂ ಅಧ್ಯಾರೋಪಿತ ದೃಷ್ಟಿಯಿಂದಲೇ ವೇದಾಂತಶಾಸ್ತ್ರದಲ್ಲಿ ಒಪ್ಪಿರುವದೇ ಹೊರತು ಪರಮಾರ್ಥವಲ್ಲ. ಕೇವಲ ಅದ್ವಿತೀಯಪರಬ್ರಹ್ಮತತ್ತ್ವ ಮಾತ್ರವೇ ಪರಮಾರ್ಥವು. ಆದ್ದರಿಂದ ಜೀವನಾಗಿ ಕಾಣುತ್ತಿರುವಾಗಲೇ ಈ ಜೀವನು ತನ್ನ ಮೂಲರೂಪದಲ್ಲಿ ಬ್ರಹ್ಮವೇ ಆಗಿದ್ದಾನೆ.

ಈ ಕಾರಣದಿಂದಲೇ ಶ್ರುತಿಯು ''ತತ್ ತ್ವಮ್ ಅಸಿ'' ನೀನು ಅದೇ (ಆ ಬ್ರಹ್ಮವೇ) ಆಗಿದ್ದೀಯೆ ಎಂದು ಹೇಳಿದೆ. ಹೊಸದಾಗಿ ಬ್ರಹ್ಮವಾಗುವದಲ್ಲ, ಆಗಿಯೇ ಇದ್ದಾನೆ ಎಂಬ ಈ ವಾಕ್ಯವು ಕಾಶಕೃತ್ಸ್ನ ಆಚಾರ್ಯರ ಅಭಿಪ್ರಾಯಕ್ಕೇ ಹೊಂದಿಕೊಳ್ಳುವದಾದ್ದರಿಂದ ಇವರ ಮತವೇ ಶ್ರುತಿಸಮ್ಮತ ಎಂಬುದು ಸಾರವು.

ಸಾರ್ವತ್ರಿಕ ಪೂರ್ಣಾನುಭವದ ಕಣ್ಣಿನಿಂದ ನೋಡಿದಾಗ ಈ ವಿಷಯವು ಇನ್ನೂ ಸ್ಪಷ್ಟವಾಗುತ್ತದೆ. ಎಚ್ಚರ ಹಾಗೂ ಸ್ವಪ್ನಗಳಿರುವಂತೆ ತೋರುವಾಗ ಮಾತ್ರವೇ ಆಯಾ ಅವಸ್ಥೆಯಲ್ಲಿರುವಂತೆ ಕಾಣುವ ಶರೀರೇಂದ್ರಿಯಮನೋಬುದ್ಧಿಗಳು ಉಪಾಧಿಯಿಂದಲೇ ಇಡೀ ಅವಸ್ಥೆಗೆ ಆಧಾರವಾಗಿರುವ ಕೇವಲ 'ತಾನು' ನಾನು ಇಂಥವನು ಎಂಬ ಜೀವರೂಪವನ್ನು ಹೊಂದಿದವನಂತೆ ಕಾಣಿಸುತ್ತಾನೆ. ಗಾಢನಿದ್ರೆಯಲ್ಲಿ ಉಪಾಧಿಗಳು ಇಲ್ಲವಾದ್ದರಿಂದ 'ತಾನು' ಬರೀ ತಾನಾಗಿ (ಕೇವಲ ನಿಜವಾದ ತಾನಾಗಿ) ಉಳಿದಿರುತ್ತಾನೆ. ಆದ್ದರಿಂದ ತನ್ನ ಸ್ವರೂಪವನ್ನು ಗುರುತಿಸಿದಾಗ ಇರುವಂತೆ ತೋರಿದ ಉಪಾಧಿಗಳೂ ಉಪಾಧಿಯ ಮೂಲಕ ಇರುವಂತೆ ತೋರುವ ಜೀವತ್ವವೂ ಅವಿದ್ಯಾಕಲ್ಪಿತಗಳೇ ಹೊರತು ಪರಮಾರ್ಥವಲ್ಲ. ಹೀಗಿರುವದರಿಂದಲೇ ಜೀವನಾಗಿ ಕಾಣುತ್ತಿರುವಾಗಲೂ ಸಹ ಈ ಜೀವನು ಬ್ರಹ್ಮವೇ ಆಗಿದ್ದಾನೆ.

ನಿತ್ಯಶುದ್ಧಬುದ್ಧಮುಕ್ತಸ್ವಭಾವೇ ಕೂಟಸ್ಥನಿತ್ಯೇ ಏಕಸ್ಮಿನ್ ಅಸಂಗೇ ಪರಮಾತ್ಮನಿ ತದ್ವಿಪರೀತಂ ಜೈವಂ ರೂಪಂ ವ್ಯೋಮ್ನೀವ ತಲಮಲಾದಿ ಪರಿಕಲ್ಪಿತಮ್ । (ಬ್ರ.ಸೂ.ಭಾ.1–3–19)

ಆದ್ದರಿಂದ ಅನುಭಾವಿಗಳಾದ ಬ್ರಹ್ಮನಿಷ್ಠರಾದ ಸದ್ಗುರುಗಳ ಹಾಗೂ ಉಪನಿಷತ್ತುಗಳ ಬೋಧೆಯನ್ನನುಸರಿಸಿ ತನ್ನ ನಿತ್ಯನಿಸ್ಸಂಸಾರಿಯಾಗಿರುವ ಸ್ವರೂಪವನ್ನು ಗುರುತಿಸಿ ಅವಿದ್ಯಾಕಲ್ಪಿತವಾಗಿರುವ ಜೀವತ್ವವನ್ನು ಬಾಧಿತಗೊಳಿಸಿಕೊಳ್ಳುವದೇ ಮಾನವಜನ್ಮದ ಸಾರ್ಥಕ್ಯವು. ಇದನ್ನೇ 'ಮೋಕ್ಷ'ವೆನ್ನುತ್ತಾರೆ. ನಾನೆಂಬ ಬುದ್ಧಿಯು ಈಗ ಎಷ್ಟು ಗಟ್ಟಿಯಾಗಿರುವದೋ "ದೇಹವೇ ಮುಂತಾದವುಗಳನ್ನು ನೋಡುತ್ತಿರುವ ಚೈತನ್ಯವೇ ನಾನು" ಎಂಬ ತಿಳಿವಳಿಕೆಯೂ ಅಷ್ಟರಮಟ್ಟಿಗೇ ಗಟ್ಟಿಯಾಗಬೇಕು. ಆಗ ಮಾತ್ರವೇ ವೇದಾಂತದ ಪೂರ್ಣಪ್ರಯೋಜನವಾಗುವದು. ವೇದಾಂತವೆಂಬುದು ಮಾಡಬೇಕಾದ ಒಂದು ಕರ್ಮವಲ್ಲ; ಅಥವಾ ಆಡಬೇಕಾದ ಶಾಸ್ತ್ರದ ಮಾತೂ ಅಲ್ಲ. ವೇದಾಂತಜ್ಞಾನವೆಂಬುದು ಆತ್ಮಸ್ವರೂಪದ ಅರಿವು. ಆತ್ಮನನ್ನರಿತವರಿಗೆ ಮಾತ್ರವೇ ವೇದಾಂತದ ಪ್ರಯೋಜನವಾಗುವದು. ಹಾವಿನಂತೆ ತೋರುತ್ತಿದ್ದರೂ ಅದು ಹಗ್ಗವೇ ಎಂಬ ತತ್ತ್ವವನ್ನು ಬಲ್ಲವರಾದ್ದರಿಂದ ಸಮರ್ಥರು ಧೈರ್ಯದಿಂದ ಅದನ್ನು ಹಿಡಿದುಕೊಂಡರು; ಪಂಡಿತನು ವೇದಾಂತದ ಮಾತುಗಳನ್ನು ಎಷ್ಟು ಹೇಳುತ್ತಿದ್ದರೂ ಹಗ್ಗವು ಹಾವಿನಂತೆ ಇರುವದುಂಟೆಂಬುದನ್ನು ಬಲ್ಲವನಾದರೂ, ಇದು ಹಾವೋ, ಹಗ್ಗವೋ–ಎಂಬ ಸಂದೇಹವು ಆತನಿಗೆ ಹೋಗಿರಲಿಲ್ಲವಾದ್ದರಿಂದ ಅವನಿಗೆ ಭಯವಾಯಿತು. ಶಾಸ್ತ್ರಪಾಂಡಿತ್ಯದ ಒಣಮಾತಿನ ಬಾಯಿವೇದಾಂತದಿಂದ ಮುಕ್ತಿಯು ದೊರಕಲಾರದು. ಅದು ಅನುಭವದಲ್ಲಿ ನಿಲ್ಲಬೇಕು. ಜಗತ್ತಿನ ತತ್ತ್ವವನ್ನು ಸಮರ್ಥರಂತೆ ನಿಸ್ಸಂದೇಹವಾಗಿ ತಿಳಿದಿರುವವನಿಗೇ ಮುಕ್ತಿಯಾಗುವದೆಂದು ವೇದಾಂತ ಸಿದ್ಧಾಂತವು.

ವೇದಾಂತಮತದಲ್ಲಿ ಅಭಿಮಾನವಿದ್ದ ಮಾತ್ರಕ್ಕೇ ಅಥವಾ ವೇದಾಂತದ ಮಾತನ್ನು ಆಡುತ್ತಿದ್ದ ಮಾತ್ರಕ್ಕೇ ಅಥವಾ ಸಂನ್ಯಾಸವೇ ಮುಂತಾದ ವೇಷವನ್ನು ಹಾಕಿಕೊಂಡ ಮಾತ್ರಕ್ಕೇ ಆತ್ಮಜ್ಞಾನವಿಲ್ಲದೆ ಮೋಕ್ಷವಾಗಲಾರದೆಂದು ವೇದಾಂತದ ಡಂಗುರವು.

> ನ ಮತಾಭಿನಿವೇಶೇನ ನ ಭಾಷಾವೇಷಮಾತ್ರತಃ
> ಮುಕ್ತಿರ್ವಿನಾಽತ್ಮವಿಜ್ಞಾನಮಿತಿ ವೇದಾನ್ತಡಿಣ್ಡಿಮಃ ॥

# 6. ಆತ್ಮನು ನಿತ್ಯಚಿನ್ಮಾತ್ರಸ್ವರೂಪನೇ

## ಸುರೇಶ್ವರಸಿಂಹವಾಣೀ

## (ಅಕ್ಟೋಬರ್ 1989)

ಅಲುಪ್ತದೃಷ್ಟಿರಾತ್ಮಾಯಂ ಯಥೋಕ್ತಃ ಸ್ವಪ್ನಬೋಧಯೋಃ ।
ಪ್ರಾಜ್ಞೇಽಪಿ ಚ ತಥೈವಾಯಂ ಯದ್ವೈ ತದಿತಿ ವಾಕ್ಯತಃ ॥
ಅತಿಕಾರಕಹೇತುಶ್ಚ ಯಥಾತ್ಮಾಯಂ ಸುಷುಪ್ತಿಗಃ ।
ಕೂಟಸ್ಥದೃಷ್ಟಿಮಾತ್ರತ್ವಾತ್ ತಥಾ ಸ್ವಪ್ನಪ್ರಬೋಧಯೋಃ ॥

–ಬೃಹದಾರಣ್ಯಕಭಾಷ್ಯವಾರ್ತಿಕ–4.3.1907, 1908

ಸಾಮಾನ್ಯವಾಗಿ ಜನಗಳು ಭಾವಿಸಿರುವದೇನೆಂದರೆ: "ನಾವು ಎಚ್ಚರದ ಅವಸ್ಥೆಯಲ್ಲಿ ಅರಿವಿನ ಸ್ವಭಾವವುಳ್ಳವರಾಗಿ ಹೊರಗಿನ ವಸ್ತುಗಳನ್ನೂ ಒಳಗಿನ ಭಾವನೆಗಳನ್ನೂ ಅರಿಯುತ್ತಿರುತ್ತೇವೆ. ಹೀಗೆಯೇ ಸ್ವಪ್ನರೂಪದಲ್ಲಿಯೂ ಸಹ ಅರಿಯುತ್ತಿರುತ್ತೇವೆ. ಆದರೆ ನಿದ್ರೆಯಲ್ಲಿ ನಮಗೆ ಅರಿವು ಇರುವದಿಲ್ಲ. ಹಾಗೂ ಅಲ್ಲಿ ಏನೊಂದೂ ಇರುವದಿಲ್ಲ. ಎಚ್ಚರ ಬಂದೊಡನೆಯೇ ಅಂತಃಕರಣ (ಮನಸ್ಸು, ಬುದ್ಧಿ ಹಾಗೂ ಇಂದ್ರಿಯಗಳು) ಶರೀರವೂ ನಮಗೆ ಅಂಟಿಕೊಳ್ಳುತ್ತವೆಯಾದ್ದರಿಂದ ನಾವು ಸುಖದುಃಖಾದಿಗಳನ್ನು ಅನುಭವಿಸುತ್ತಿದ್ದೇವೆ"– ಎಂದು.

ಆದರೆ ಶ್ರುತಿಯ ಬೋಧವನ್ನನುಸರಿಸಿ ಬ್ರಹ್ಮನಿಷ್ಠರ ಉಪದೇಶದಂತೆ ನಮ್ಮ ಜೀವನವನ್ನು ನಾವು ನೂತನದೃಷ್ಟಿಯಿಂದ ನೋಡುವ ಒಳನೋಟದ ಕಲೆಯನ್ನು ಕರಗತ ಮಾಡಿಕೊಂಡಾಗ ಗೊತ್ತಾಗುವದೇನೆಂದರೆ ನಿಜವಾದ ನಾನಾಗಿರುವ, ಅರ್ಥಾತ್ ತಾನೇ ತಾನಾಗಿರುವ ನಮ್ಮೆಲ್ಲರ ನಿಜವಾದ ಇರುವಿಕೆಯಾಗಿರುವ ಆತ್ಮಸ್ವರೂಪದ ದೃಷ್ಟಿಯಿಂದ ಆತ್ಮನೇ ಆಗಿರುವ ತಾನು–ಅರ್ಥಾತ್ ನಿಜವಾದ ನಾನು–ನಿತ್ಯಚಿನ್ಮಾತ್ರನಾದ ಅದ್ವಿತೀಯ ನಿಃಸಂಸಾರಿಯು ಎಂಬ ಅನುಭವವೇ ನಿಂತುಬಿಡುವದು. ಇದು ಹೇಗೆ? ಎಂಬುದನ್ನು ಶ್ರೀಸುರೇಶ್ವರರು ತಮ್ಮ ಸಿಂಹಗರ್ಜನೆಯಿಂದ ಹೇಳಿ ನಮ್ಮನ್ನು ಎಚ್ಚರಿಸಿದ್ದಾರೆ. ಆ ಗರ್ಜನೆಯೇ ಈ ಎರಡೂ ಶ್ಲೋಕಗಳ ಅಭಿಪ್ರಾಯವು. ಅದರ ಸಂಕ್ಷಿಪ್ತ ಅಭಿಪ್ರಾಯವನ್ನು ಇಲ್ಲಿ ಕೊಡಲಾಗಿದೆ.

ಎಚ್ಚರಸ್ವಪ್ನಗಳಲ್ಲಿ ತಾನು ಹೇಗೆ ಅರಿವಿನ ಸ್ವಭಾವದವನೋ ಹಾಗೆಯೇ ಗಾಢನಿದ್ರೆಯಲ್ಲಿಯೂ ಸಹ ತಾನು ಕೇವಲ ಚಿನ್ಮಾತ್ರನೇ ಆಗಿದ್ದಾನೆ. ಹಾಗಿದ್ದರೂ ಅಲ್ಲಿ

ಏಕೆ ತಿಳಿಯುವದಿಲ್ಲ? ಎಂಬುದಕ್ಕೆ ಶ್ರುತಿಯು (ಬೃ. 4.3.21 ರಿಂದ 30 ರ ವರೆಗೆ) ಗಾಢನಿದ್ರೆಯಲ್ಲಿ ತಾನಲ್ಲದ–ತನ್ನಿಂದ ಅರಿಯಿಸಿಕೊಳ್ಳುವ–ಇನ್ನೊಂದು ಎಂಬುದೇ ಇಲ್ಲ. ಕೇವಲ ತಾನೇ ತಾನಾಗಿ ಅದ್ವಿತೀಯನಾಗಿರುವದರಿಂದಲೇ ಏನನ್ನೂ ಅರಿಯಲಿಲ್ಲ. ಆದರೆ ಆತ್ಮನ ಅರಿವಿನ ಸ್ವಭಾವವೇನೂ ಹೋಗಿರುವದಿಲ್ಲ. ಏಕೆಂದರೆ ಆ ಕೇವಲ ಚಿನ್ಮಾತ್ರ ಸ್ವಭಾವವು ನಿತ್ಯವಾದದ್ದು, ಅವಿನಾಶಿಯಾದದ್ದು, ಬದಲಾಗದಿರುವ ಕೂಟಸ್ಥದೃಷ್ಟಿ (ಎಂದರೆ ಬರೀ ಅರಿವಿನ ಗಟ್ಟಿ) ಯಾಗಿರುವದು ಎಂದು ಬೋಧಿಸುವದನ್ನು ಲಕ್ಷಿಸಿದಾಗ ತಾನು ನಿತ್ಯಚಿನ್ಮಾತ್ರಸ್ವರೂಪನೇ ಎಂಬ ಅನುಭವವು ನೆಲೆನಿಂತುಬಿಡುತ್ತದೆ.

ಹೀಗೆಯೇ ಎಚ್ಚರಕನಸುಗಳಲ್ಲಿ ನಮಗೆ ಶರೀರಾದಿಸಂಘಾತವೂ ದ್ವೈತ ಪ್ರಪಂಚವೂ ಗಂಟುಬಿದ್ದಿರುವದರಿಂದ ನಾವು ಸಂಸಾರಿಗಳಾಗಿದ್ದೇವೆ ಎಂಬುದೂ ಸಹ ಅವಿವೇಕದ ಫಲವೇ ಆಗಿರುತ್ತದೆ. ಈ ಅವಿವೇಕವನ್ನು ತೊಲಗಿಸಲೋಸುಗ ಶ್ರುತಿಯು ''ಅತಿಕ್ರಾಮತಿ ಮೃತ್ಯೋಃ ರೂಪಾಣಿ'' (ಬೃ.4.3.7). ಮೃತ್ಯುರೂಪಗಳನ್ನು ಎಂದರೆ ಹುಸಿತೋರಿಕೆಗಳನ್ನು–ಅವಿದ್ಯಾಕಲ್ಪಿತಗಳಾದ–ಶರೀರ, ಇಂದ್ರಿಯ, ಮನಸ್ಸು, ಬುದ್ಧಿ ಹಾಗೂ ಸುಖದುಃಖಾದಿ ವೇದನೆಗಳೆಂಬ ಮೃತ್ಯುರೂಪಗಳನ್ನು ಈಗಲೇ ಮೀರಿದವನಾಗಿರುತ್ತಾನೆ. ಎಚ್ಚರಸ್ವಪ್ನಗಳು ತೋರುತ್ತಿರುವಾಗಲೇ ಅವುಗಳನ್ನು ಮೀರಿದ–ಅವುಗಳ ಅಂಟಿಲ್ಲದ–ಸ್ವರೂಪನಾಗಿದ್ದಾನೆ. ಹೇಗೆ ಸಿನಿಮಾ ನಡೆದಿರುವಾಗಲೇ ರಜತಪರದೆಯು ಆ ಚಿತ್ರಗಳ ಅಂಟಿಲ್ಲದೆ ಅವುಗಳನ್ನೆಲ್ಲಾ ಮೀರಿರುವದೋ ಹಾಗೆಯೇ ತಾನೇ ತಾನಾಗಿರುವ ಈ ಆತ್ಮನು ಎಚ್ಚರಸ್ವಪ್ನಗಳು ತೋರುತ್ತಿರುವಾಗಲೇ ಗಾಢನಿದ್ರೆಯಲ್ಲಿರುವಂತೆ ಅದ್ವಿತೀಯನಾಗಿಯೇ–ಅಸಂಸಾರಿಯಾಗಿಯೇ–ಇದ್ದಾನೆ. ಏಕೆಂದರೆ ಅವನು ಕೂಟಸ್ಥದೃಷ್ಟಿಮಾತ್ರನು ಎಂದರೆ ಆ ಸ್ವರೂಪದಲ್ಲಿ ಬದಲಾವಣೆ ಎಂಬುದು ಎಂದೂ ಹೇಗೂ ಇರುವದಿಲ್ಲ.

ಈ ಬೋಧನೆಯನ್ನನುಸರಿಸಿ ಜಿಜ್ಞಾಸುವು ಈಗಲೇ ''ನಾನು ಇಂಥವನು'' ಎಂಬ ಅನಿಸುವಿಕೆಗೂ ಆಧಾರವಾಗಿರುವ ನಿಜವಾದ ನಾನಾಗಿರುವ ತನ್ನ ಸ್ವರೂಪವನ್ನು ಶಾಸ್ತ್ರ ಹಾಗೂ ಆಚಾರ್ಯರ ಉಪದೇಶವನ್ನನುಸರಿಸಿ ತನ್ನಲ್ಲಿಯೇ ಅನುಭವದಿಂದ ಗುರುತಿಸಿದಾಗ ಆ ಕೇವಲಾನುಭವಸ್ವರೂಪವೇ ತಾನಾಗಿರುತ್ತಾನೆ. ಆ ದೃಷ್ಟಿಯಿಂದ ಈ ಮೊದಲಿದ್ದ ''ನಾನು ಇಂಥವನು'' ಎಂಬ ಅನಿಸುವಿಕೆಯೂ ಅದಕ್ಕೆ ಸಂಬಂಧಿಸಿದ ದ್ವೈತಪ್ರಪಂಚವೂ ಬಾಧಿತವಾಗಿಬಿಡುವದರಿಂದ–ಎಂದರೆ ತೋರುತ್ತಿದ್ದರೂ ಇದು ಕೇವಲ ಹುಸಿತೋರಿಕೆಯೇ ಎಂದು ಗೊತ್ತಾಗುವದರಿಂದ–ಈಗಲೇ, ಗಾಢನಿದ್ರೆಯಲ್ಲಿ ಇರುವಂತೆಯೇ ಅದ್ವಿತೀಯಚಿನ್ಮಾತ್ರನೇ ಆಗಿರುವನೆಂಬ ಅನುಭವವೇ ನಿಂತುಬಿಡುವದು ಎಂಬುದು ಈ ಲೇಖನದ ಆರಂಭದಲ್ಲಿಯ ಎರಡು ವಾರ್ತಿಕಗಳ ಅಭಿಪ್ರಾಯವು.

ಶ್ರೀಸುರೇಶ್ವರರ ಈ ಸಿಂಹಗರ್ಜನೆಯಿಂದ ಜಿಜ್ಞಾಸುಗಳು ''ನಾನು ಸಂಸಾರಿ'' ಎಂಬ ರೂಪದ ಸ್ವಪ್ನದ ಕನವರಿಕೆಯಿಂದ ನಿತ್ಯಚಿನ್ಮಾತ್ರನಾದ ಅದ್ವಿತೀಯಸ್ವರೂಪದ ಎಚ್ಚರವನ್ನು ಪಡೆದು ಧನ್ಯರಾಗುವದರಲ್ಲಿ ಸಂಶಯವೇ ಇಲ್ಲ.

# 7. ಆತ್ಮಸತ್ಯಾನುಬೋಧ

## ವೇದಾಂತಪಿತಾಮಹವಾಣೀ

## (ಜನವರಿ 1990)

ಸರ್ವಾನುಭವಸಮ್ಮತವಾಗಿಯೂ ಅತಿಸರಳವಾಗಿಯೂ ಅತಿ ಸುಲಭವಾಗಿಯೂ ಪರಮಾರ್ಥತತ್ತ್ವವನ್ನು ಉಪದೇಶಿಸಿ ಈಗಲೇ ಜಿಜ್ಞಾಸುವಿನ ಅನುಭವದಲ್ಲಿಯೇ ಕೊನೆಗಾಣುವಂತೆ ಬೋಧಿಸುವವರಲ್ಲಿ ಶ್ರೀಗೌಡಪಾದಾಚಾರ್ಯರು ಅಗ್ರಗಣ್ಯರು. ಆದ್ದರಿಂದಲೇ, ಶ್ರೀಶಂಕರರು "ಪರಮಗುರುಮಮುಂ ಪಾದಪಾತೈರ್ನತೋಽಸ್ಮಿ" ಎಂದೂ ಸಂಪ್ರದಾಯವಿದರಾದ ಆಚಾರ್ಯರೆಂದೂ ಇವರನ್ನು ಹೊಗಳಿದ್ದಾರೆ. ಇವರನ್ನು **ವೇದಾಂತಭೀಷ್ಮಪಿತಾಮಹರು** ಎನ್ನಬಹುದು.

ಅತಿ ಸರಳ ಹಾಗು ಸುಲಭವಾಗಿ ಬೋಧಿಸಿದ್ದರಿಂದಲೇ ಈ ಉಪದೇಶವನ್ನು ಗ್ರಹಿಸುವುದು ಒಳದೃಷ್ಟಿಯ ಅರಿವಿಲ್ಲದ, ಸೂಕ್ಷ್ಮತತ್ತ್ವವನ್ನು ಗುರುತಿಸಲಾಗದ ಅಂತಃಕರಣ ಉಳ್ಳವರಿಗೆ ತುಂಬಾ ಕಷ್ಟಕರವಾಗಿರುತ್ತದೆ. ಬೆಳಕಿನಲ್ಲಿರುವ ವಿವಿಧವಸ್ತುಗಳನ್ನೇ ನೋಡುವದರಲ್ಲಿ ಮಗ್ನರಾದವರಿಗೆ ಬೆಳಕನ್ನು ಮಾತ್ರವೇ ಗ್ರಹಿಸುವದು ಹೇಗೆ ಕಷ್ಟವೆನಿಸುವದೋ ಅಥವಾ ಬೆಳಕಿನಲ್ಲಿ ಕಾಣುವ ವಸ್ತುಗಳ ವಿಷಯದ ನೋಟವನ್ನು ಕೈಬಿಡುವದು ಹೇಗೆ ಕಷ್ಟವೋ ಹಾಗೆಯೇ ಆತ್ಮತತ್ತ್ವವನ್ನು ಸರಳವಾಗಿ ಸುಲಭವಾಗಿ ಬೋಧಿಸಿದಾಗ ಆ ಪರಮಾರ್ಥತತ್ತ್ವದ ಬೆಳಕಿನಲ್ಲಿ ಕಾಣುತ್ತಿರುವ ಅನಾತ್ಮವಸ್ತುಗಳನ್ನೇ ನೋಡುವದನ್ನು ಕೈಬಿಡುವುದು ಅಷ್ಟೇ ಕಷ್ಟವಾಗಿರುತ್ತದೆ. ಆ ಕಾರಣದಿಂದಲೇ ಅತಿ ಸುಲಭವಾದ ಸರಳವಾದ ಈ ತತ್ತ್ವದ ಸ್ವಭಾವ ಹಾಗೂ ನಿರೂಪಣೆಗಳೇ ಅನಧಿಕಾರಿಗೆ ಮುಖ್ಯವಾದ ಅಡ್ಡಿಯಾಗಿರುತ್ತದೆ. ಆದರೆ ಅಧಿಕಾರಉಳ್ಳವರಿಗೆ ಇದರಷ್ಟು ಸುಲಭಸುಖಕರವಾದದ್ದು ಇನ್ನೊಂದಿಲ್ಲ ಎಂಬ ಅಭಿಪ್ರಾಯವನ್ನು ಶ್ರೀಶಂಕರರು ಒಂದು ಸಂದರ್ಭದಲ್ಲಿ ಭ.ಗೀ. 18.50ರ ಭಾಷ್ಯದಲ್ಲಿ ಹೇಳಿದ್ದಾರೆ.

ಅಂಥ ಉಪದೇಶದ ಸಾರಾಂಶವನ್ನು ಈಗ ನೋಡೋಣ. ಶ್ರೀಗೌಡಪಾದರು ಇದನ್ನ ಹೀಗೆ ಆರಂಭಿಸುತ್ತಾರೆ. ಗಾಢನಿದ್ರೆಯಲ್ಲಿ ''ನಾನು ಇಂಥವನು, ಇದು ಪ್ರಪಂಚವು'' ಎಂಬ ಭೇದವಿಲ್ಲದ ಬರೀ ಇರವು, ಬರೀಬಚ್ಚಅರಿವು, ನಾನು ಹಾಗೂ ಸುಖ ಎಂಬ ವಿಭಾಗದ ಆಯಾಸವಿಲ್ಲದ ಬರಿಬಚ್ಚ ಆನಂದಸ್ವರೂಪವಾಗಿರುವದು ಎಲ್ಲರಿಗೂ ಸಹಜವಾದ ಅನುಭವವು. ಇದನ್ನು ಎಚ್ಚರದ ಬುದ್ಧಿಯ ದೃಷ್ಟಿಯನ್ನು ಬಿಟ್ಟು ಗಾಢನಿದ್ರೆಯಲ್ಲಿ ಹೇಗಿತ್ತೋ ಹಾಗೆಯೇ ಅದೇ ದೃಷ್ಟಿಯಿಂದ ನೋಡಬೇಕು. ಹಾಗೆ ನೋಡಲು ಬಾರದವರಿಗೆ ಇದು ಅರ್ಥವಾಗುವದಿಲ್ಲ, ಇರಲಿ. ಗಾಢನಿದ್ರೆಯಲ್ಲಿ ಇನ್ನೊಂದಿರದ ಬರೀ ತಾನೇ ತನ್ನ ಇರುವಿಕೆಯೇ ಇದೆ ಎಂದಾಯಿತು, ಇದರಿಂದ ಏನು ಪ್ರಯೋಜನ? ಎಂಬುದು ಪ್ರಶ್ನೆ. ಪ್ರಯೋಜನವೇನಾದರೂ ಇರಲಿ, ಈ ಬರೀ ತಾನಾಗಿರುವ ಇರುವಿಕೆಯನ್ನೇ ಶ್ರೀಗೌಡಪಾದರು 'ಅದ್ವಯ' ಎಂದು ಕರೆದಿದ್ದಾರೆ. ಈ ಅದ್ವಯನಾದ ತಾನೇ ಕನಸಿನ ಅವಸ್ಥೆಯ ರೂಪವನ್ನು ಅರ್ಥಾತ್ ಕನಸಿನಲ್ಲಿ ''ನಾನು ಇಂಥವನು'', ''ಇದು ಪ್ರಪಂಚವು'' ಎಂಬ ಎರಡೂ ರೂಪಗಳನ್ನು ಹೊಂದಿದವನಂತೆ ಕಾಣುತ್ತಾನೆ. ಈ ತೋರಿಕೆಗೇ 'ಮನಸ್ಸು' ಎಂದು ಹೆಸರು. ನಿಜವಾಗಲೂ ಯಾವ ಬದಲಾವಣೆಯೂ ತನ್ನಲ್ಲಿ ಆಗದೆಯೇ ಇಡೀ ಕನಸಿನ ಅವಸ್ಥೆಯೇ ಆದಂತೆ ತೋರಿರುವ ಕೇವಲ ತಾನಾಗಿರುವ ಅದ್ವಯನಾದ ಆತ್ಮನಿಗೇ 'ಮನಸ್ಸು' ಎಂದು ಹೆಸರು. ಹೀಗೆಯೇ ಇದೇ ಅದ್ವಯನಾದ ತಾನೇ ಇಡೀ ಎಚ್ಚರದ ಅವಸ್ಥೆಯಾಗಿ–ಎಚ್ಚರದಲ್ಲಿಯ ನಾನು, ಹಾಗೂ ಪ್ರಪಂಚವಾದಂತೆ–ನಿಜವಾಗಿ ಮಾರ್ಪಾಡಾಗದಿದ್ದರೂ ಆದಂತೆ ತೋರಿಕೊಂಡದ್ದಕ್ಕೇ 'ಮನಸ್ಸು' ಎನ್ನುತ್ತಾರೆ. ಈ ಮನಸ್ಸು ತನ್ನ ಮನಸ್ಸಿನತನವನ್ನು ಬಿಟ್ಟರೆ–ಅಮನಸ್ಸಾದರೆ–ದ್ವೈತವೆಂಬುದು ಕಂಡು ಬರುವದೇ ಇಲ್ಲ. ಇದನ್ನು ಸರಳಸುಲಭವಾದ ಸಾರ್ವತ್ರಿಕಾನುಭವದ–ದೃಷ್ಟಿಯಿಂದ ಅನುಭವದಲ್ಲಿ ಕಂಡುಕೊಳ್ಳಬೇಕು.

ಹಾಗಾದರೆ ಮನಸ್ಸು ಅಮನಸ್ಸಾಗುವದು ಯಾವಾಗ? ಎಂಬುದು ಪ್ರಶ್ನೆ. ಇದಕ್ಕೆ ಉತ್ತರವೇನೆಂದರೆ: ಎರಡು ಪ್ರಸಂಗಗಳಲ್ಲಿ ಇದು ಅಮನಸ್ಸಾಗುತ್ತದೆ. ಮೊದಲನೆಯದು ಸಹಜವಾಗಿ ಗಾಢನಿದ್ರೆಯಲ್ಲಿ (ಅಥವಾ ತತ್‌ಸಮವಾದ ದ್ವೈತಭಾವವಿಲ್ಲದಿರುವ ಅವಸ್ಥೆಗಳಲ್ಲಿ) ಅಮನಸ್ಸಾಗುತ್ತದೆ. ಆದರೆ ಇದರಿಂದ ಏನೂ ಪ್ರಯೋಜನವಿಲ್ಲ. ಏಕೆಂದರೆ ಮತ್ತೆ ಎಚ್ಚರ, ಅಥವಾ ಕನಸಿನಅವಸ್ಥೆ ಬಂದಾಗ ಮತ್ತೆ ಮನಸ್ಸಾಗಿಯೇ ತೋರುತ್ತದೆ. ಆದ್ದರಿಂದ ಇದರಿಂದ ಏನೂ ಪ್ರಯೋಜನವಿಲ್ಲ. ಹಾಗಾದರೆ ಇನ್ನೊಂದಾವುದು? ಎಂಬ ಪ್ರಶ್ನೆಗೆ ವಿವೇಕದರ್ಶನ, ಅಭ್ಯಾಸ ವೈರಾಗ್ಯಗಳೆಂಬ ಸಾಧನೆಗಳಿಂದ ಆತ್ಮಮಾತ್ರವೇ (ಅದ್ವಯನಾದ ತಾನು ಮಾತ್ರವೇ) ಸತ್ಯನೆಂದೂ ಮನಸ್ಸಾಗಿ ತೋರುವದು ಬರೀ

ಹುಸಿತೋರಿಕೆ (ಆತ್ಮನನ್ನರಿಯದಾಗ ಆತ್ಮನೇ ಹಾಗಾದಂತೆ ಎಂದರೆ ಅದ್ವಯನೇ ದ್ವಯವಾದಂತೆ ತೋರಿರುವನು) ಎಂದು ಅನುಭವದಲ್ಲಿ ಕಂಡುಕೊಂಡು ತೋರುವ ದ್ವೈತ ಪ್ರಪಂಚವನ್ನು ಬಾಧಿತಗೊಳಿಸಿಕೊಂಡಾಗ ಸಂಪೂರ್ಣವಾಗಿ ಅಮನಸ್ಕಾಗುತ್ತದೆ.

''ಶಾಸ್ತ್ರಾಚಾರ್ಯೋಪದೇಶಮ್ ಅನು ಅವಬೋಧೇನ'' ಎಂದು ಶ್ರೀಶಂಕರರು 32ನೇ ಕಾರಿಕೆಯ ಭಾಷ್ಯದಲ್ಲಿ ಸೂಚಿಸಿದ್ದಾರೆ. ಆತ್ಮತತ್ತ್ವವನ್ನು ಬೋಧಿಸುವ ಶಾಸ್ತ್ರ ಹಾಗೂ ಗುರುಗಳ ಉಪದೇಶವನ್ನನುಸರಿಸಿ ''ನಾನು ಇಂಥವನು'' ಎಂಬ ಈಗಿನ ಈ ಅಹಂಪ್ರತ್ಯಯಕ್ಕೂ ಹಿಂದೆ ಇರುವವನನ್ನು ಗುರುತಿಸಿ ಈಗಿನ ಅಹಂಪ್ರತ್ಯಯದಿಂದ ಬೇರ್ಪಡಿಸಿಕೊಂಡು ಅನುಭವಸ್ವರೂಪನೇ ತಾನಾಗಿ ನಿಲ್ಲುವದೇ **'ವಿವೇಕವು'**. ಆಗ ಅಂತಃಕರಣವು ಆ ಪರಮಾರ್ಥಸ್ವರೂಪನಾದ ಆತ್ಮನಂತೆಯೇ ಭಾವಿಸತೊಡಗುತ್ತದೆ. ಇದೇ **'ದರ್ಶನವು'**. ಇಲ್ಲಿ ಇದೆರಡೂ ಏಕಕಾಲದಲ್ಲಿ ನಡೆಯುವದರಿಂದ ಇದೆರಡೂ ಸೇರಿ **''ವಿವೇಕದರ್ಶನ''** ಎಂಬ ಒಂದೇ ಸಾಧನೆಯಾಗಿದೆ.

ಈ ಮೇಲೆ ಹೇಳಿದ ವಿವೇಕದರ್ಶನವನ್ನು ಜಿಜ್ಞಾಸುವು ಮತ್ತೆಮತ್ತೆ ಅನುಸರಿಸುತ್ತಾ ಇದರ ಸಹಜತೆ (ಜ್ಞಾನನಿಷ್ಠೆ) ಬರುವವರೆಗೂ ಪುನಃಪುನಃ ಪ್ರಯತ್ನಿಸುವದೇ ಅಭ್ಯಾಸವು. ಇದರಿಂದ ಅಮನಸ್ಕವು ಉಂಟಾಗುತ್ತೆ ಇದೇ ಆತ್ಮಸತ್ಯಾನುಬೋಧವು.

# 8. ಆತ್ಮಶಬ್ದದ ನಿರ್ವಚನ

## (ಜುಲೈ 1991)

ಸಾಮಾನ್ಯವಾಗಿ ಆತ್ಮ ಎಂಬ ಶಬ್ದವು 'ತಾನು' ಅಥವಾ 'ನಾನು' ಎಂಬುದನ್ನು ಪ್ರತಿನಿಧಿಸುತ್ತದೆ. ವ್ಯವಹಾರದಲ್ಲಿ 'ಆತ್ಮಹತ್ಯೆ' ಎಂದಾಗ ದೇಹವನ್ನೇ ಆತ್ಮ ಎಂಬ ಅರ್ಥದಲ್ಲಿ ಬಳಸುತ್ತಾರೆ. 'ಆತ್ಮನಿಗ್ರಹ' ಎಂಬಲ್ಲಿ ಇಂದ್ರಿಯಗಳನ್ನೂ, 'ಆತ್ಮಸಂಯಮನ' ಎಂಬಲ್ಲಿ ಮನಸ್ಸನ್ನೂ 'ಆತ್ಮ' ಎಂಬ ಶಬ್ದದಿಂದ ಕರೆಯಲಾಗುತ್ತದೆ.

ಆದರೆ ಇವು ಯಾವವೂ ನಿಜವಾದ ಆತ್ಮಸ್ವರೂಪವೆಂದು ಹೇಳಲು ಅರ್ಹವಾಗಿಲ್ಲ– ಅರ್ಥಾತ್ 'ನಾನು' ಎಂದುಕೊಳ್ಳಲು ಯೋಗ್ಯವಾದವುಗಳಲ್ಲ. ವೇದಾಂತ ಶಾಸ್ತ್ರದ ಬೋಧನೆಯಂತೆ ಆತ್ಮಶಬ್ದದ ವ್ಯುತ್ಪತ್ತಿಯು ಹೇಗಿರುವದೆಂಬುದನ್ನು ಶ್ರೀಶಂಕರಭಗವತ್ಪಾದರು ಕಠೋಪನಿಷತ್ತಿನ 2–1–1 ಮಂತ್ರಕ್ಕೆ ಭಾಷ್ಯವನ್ನು ಬರೆಯುವಾಗ ತಿಳಿಸಿದ್ದಾರೆ. ಆ ಶ್ಲೋಕವು ಹೀಗಿದೆ.

**ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ।**
**ಯಚ್ಚಾಸ್ಯ ಸಂತತೋ ಭಾವಃ ತಸ್ಮಾದಾತ್ಮೇತಿ ಕೀರ್ತ್ಯತೇ ॥**

ಇಲ್ಲಿ (1) ಆಪ್ನೋತಿ ಎಂದರೆ ವ್ಯಾಪಿಸುವವನು (2) ಆದತ್ತೇ ಎಂದರೆ ತನ್ನೊಳಗಿಟ್ಟುಕೊಂಡವನು (3) ಅತ್ತಿ ಎಂದರೆ ಎಲ್ಲವನ್ನೂ ಅನುಭವಿಸುವವನು (4) ತಾನು ಇರವಿನ ಸ್ವರೂಪನಾಗಿ ಈ ಪ್ರಪಂಚಕ್ಕೆ ಸಾತತ್ಯವನ್ನು ಅರ್ಥಾತ್ ಕಡಿವಡೆಯದಿರುವಿಕೆಯನ್ನು ಕೊಟ್ಟಿರುವವನು ಆತ್ಮನು ಎಂಬುದು ಇದರ ಅರ್ಥವು.

ಸೂತ್ರಭಾಷ್ಯದಲ್ಲಿ 1–1–4ರಲ್ಲಿ ಹೇಳಿರುವಂತೆ ''ಅಹಂಪ್ರತ್ಯಯವ್ಯತಿರೇಕೇಣ ತತ್ ಸಾಕ್ಷೀ'' ಈಗ ನಮಗೆಲ್ಲರಿಗೂ 'ನಾನು' 'ನಾನು' ಎನಿಸುವದಕ್ಕಿಂತ ಬೇರೆಯಾಗಿ, ಇದಕ್ಕೆ ಸಾಕ್ಷಿಯಾಗಿ ನಿಜವಾದ ನಾನು ಎಂದುಕೊಳ್ಳಲು ಯೋಗ್ಯವಾದ 'ತಾನು' ಎಂಬ ನಮ್ಮೆಲ್ಲರ ಸ್ವರೂಪವೇ ನಿಜವಾದ ''ಆತ್ಮ'ನಾಗಿದೆ. ಆ ಸ್ವರೂಪಕ್ಕೆ ಈ ಮೇಲೆ ಹೇಳಿದ ಲಕ್ಷಣಗಳು ಹೊಂದುತ್ತವೆ. ಅದು ಹೇಗೆ? ಎಂಬುದನ್ನು ಈಗ ನೋಡೋಣ.

1. ನಿಜವಾದ ತಾನೇ ತಾನಾಗಿರುವ ನಮ್ಮ ಇರುವಿಕೆಯು ಅರ್ಥಾತ್ ಸ್ವರೂಪವು ತನ್ನಲ್ಲಿ ತೋರಿದ ಪ್ರಪಂಚವೆಲ್ಲವನ್ನೂ ವ್ಯಾಪಿಸಿರುತ್ತದೆ.

ಅಧ್ಯಾತ್ಮ (ಶರೀರದಿಂದ ಅಂತಃಕರಣದವರೆಗೆ), ಅಧಿಭೂತ, (ಹೊರಗಿನ ಪ್ರಪಂಚ ಸಕಲದೇವರೂ ಸಹ), ಅಧಿದೈವ, (ಗ್ರಹ ನಕ್ಷತ್ರ ಲೋಕ ಲೋಕಾಂತರಗಳು) ಅನಾದಿ ಅನಂತವಾಗಿರುವಂತೆ ಕಾಣುವ ಕಾಲ, ದೇಶ, ಭಾವಗಳೂ, ಅದರೊಳಗಿನ ಕಾರ್ಯಕಾರಣ ಭಾವಗಳೂ ಸಹ ಸೇರಿದ ಇಡೀ ಪ್ರಪಂಚವು ಎಚ್ಚರ, ಹಾಗೂ ಕನಸಿನ ಅವಸ್ಥೆಗಳಲ್ಲಿ ಕಾಣುತ್ತದೆ. ಈ ಎರಡೂ ಅವಸ್ಥೆಗಳನ್ನೂ ಈ ನಿಜವಾದ ನಾನಾಗಿರುವ (ತಾನಾದ) ಸಾಕ್ಷಿಸ್ವರೂಪವೇ ವ್ಯಾಪಿಸಿರುತ್ತದೆ. ಆದ್ದರಿಂದ ''ಆಪ್ನೋತಿ ಇತಿ ಆತ್ಮಾ''.

2. ಹೀಗೆ ಸಾಕ್ಷಿಸ್ವರೂಪವು ಪ್ರಪಂಚವನ್ನೆಲ್ಲಾ ವ್ಯಾಪಿಸಿರುವದಲ್ಲದೆ ಆ ಇಡೀ ಪ್ರಪಂಚವನ್ನು ತನ್ನೊಳಗಿಟ್ಟುಕೊಂಡಿರುತ್ತದೆ. ಮತ್ತು ಗಾಢನಿದ್ರೆಯಲ್ಲಿ ಎಲ್ಲವನ್ನೂ ತನ್ನೊಳಗಡಗಿಸಿಕೊಂಡಿರುತ್ತದೆ. ಹೀಗೆ ತನ್ನೊಳಗಿಟ್ಟುಕೊಂಡಿರುವದರಿಂದ 'ಆದತ್ತೇ' ಎಂದರೆ ತನ್ನಲ್ಲಿ ಸೇರಿಸಿಕೊಂಡಿದೆಯಾದ್ದರಿಂದ ಈ ನಿಜವಾದ 'ನಾನು' (ತಾನು) ಆತ್ಮನು ಎಂಬುದು ಸಮಂಜಸವಾಗಿದೆ.

3. ಶಬ್ದಸ್ಪರ್ಶಾದಿ ಹೊರಗಿನ ಭೋಗಗಳೂ ಕಾಮ, ಕ್ರೋಧ, ಶಾಂತಿ, ಆನಂದ, ರೋಗಾನುಭವ, ಭೋಗಾನುಭವ, ದಿವ್ಯಾನುಭವ, ಭವ್ಯಾನುಭವ,

ಯೋಗಾನುಭವಗಳೇ ಮೊದಲಾದ ಅಂತಃಕರಣದಲ್ಲಿಯ ಮಾರ್ಪಾಡುಗಳೂ ಸಹ ಈ ಅನುಭವಸ್ವರೂಪನಾದ (ಕೇವಲ ಚಿನ್ಮಾತ್ರನಾದ) ತಾನಾಗಿರುವ ನಿಜವಾದ ನಾನಾದ ಸಾಕ್ಷಿಸ್ವರೂಪದಲ್ಲಿಯೇ ಕೊನೆಗೊಳ್ಳುವವಾದ್ದರಿಂದ ಈ ಆತ್ಮನನ್ನು 'ಅತ್ತಿ' ಅನುಭವಿಸುವವನು ಎಂದು ಅಧ್ಯಾರೋಪದೃಷ್ಟಿಯಿಂದ ವರ್ಣಿಸಿರುತ್ತದೆ.

4. ಈ ಪ್ರಪಂಚವು ನಿತ್ಯವೂ ಬದಲಾವಣೆ ಹೊಂದುತ್ತಿರುತ್ತದೆ. ಒಂದು ಅಣುವಿನಿಂದ ಆರಂಭಿಸಿ ಸಕಲವೂ ಬದಲಾವಣೆ ಹೊಂದುತ್ತಲೇ ಇರುತ್ತದೆ. ಒಳಗಿನ ಎಂದರೆ ಅಂತಃಕರಣದಲ್ಲಿಯ ವೃತ್ತಿಗಳಂತೂ ಪ್ರತಿಕ್ಷಣಕ್ಕೂ ಬೇರೆಬೇರೆಯಾಗುತ್ತಲೇ-ಬದಲಾಗುತ್ತಲೇ ಇವೆ. ಹೀಗೆ ಎಲ್ಲವೂ ಕ್ಷಣಿಕವೇ ಆಗಿದೆ. ಒಂದು ವೇಳೆ ಯಾವ ಕಾಲಾಕಾಶಗಳಲ್ಲಿ ಈ ಬದಲಾವಣೆಯು ತೋರುವದೋ ಅವು ಬದಲಾಗುವದಿಲ್ಲವಲ್ಲಾ? ಎಂದೆನಿಸಬಹುದು. ವ್ಯಾವಹಾರಿಕವಾಗಿ ಇದು ನಿಜವಾದರೂ ಪೂರ್ಣಾನುಭವದ ದೃಷ್ಟಿಯಿಂದ ವಿಚಾರಿಸಿದರೆ ಪ್ರಪಂಚಕ್ಕೆ ಸಾತತ್ಯವು ಎಂದರೆ ನಿತ್ಯತ್ವವು-ಕಡಿವಡೆಯದೆ ಇರುವದೆಂಬುದು ಎಂದಿಗೂ ಹೊಂದುವದಿಲ್ಲ.

ಚೆನ್ನಾಗಿ ವಿಚಾರಿಸಿದರೆ ಅನಿತ್ಯವಾಗಿರುವ ಈ ಪ್ರಪಂಚಕ್ಕೆ ಇಷ್ಟು ನಿತ್ಯತ್ವವು ಸಾತತ್ಯಭಾವವು ಬಂದಿರುವದು ಈ ಪ್ರಪಂಚದ ತೋರಿಕೆಗೆ ಆಧಾರವಾಗಿರುವ ಕೇವಲ ತಾನೇ ತಾನಾದ ಸಾಕ್ಷಿಸ್ವರೂಪನಾದ ನಿಜವಾದ ನಾನಾಗಿರುವ ಆತ್ಮನಿಂದಲೇ.

ಒಂದು ಸಿನಿಮಾದಲ್ಲಿ ಕಥೆ ನಡೆಯುತ್ತಿದ್ದರೆ ಅದು ಸಂತತವಾಗಿ ಕಡಿವಡೆಯದೆ ನಡೆಯುತ್ತಿರುವವೆಂದೇ ಭ್ರಾಂತಿಯಾಗುತ್ತದೆ. ಒಂದು ಹಾಡನ್ನು ಹಾಡುವ ನಾಯಕ ನಾಯಕಿಯರು ನಿಜವಾಗಲೂ ಹಾಡುವದಿಲ್ಲ. ಒಂದು ಕ್ಷಣಕ್ಕೆ ಒಂದು ವೇಷ ಒಂದು ದೃಶ್ಯ. ಮತ್ತೊಂದು ಕ್ಷಣಕ್ಕೆ ಬೇರೆ ವೇಷ ಬೇರೆ ದೃಶ್ಯ-ಹೀಗೆ ಸ್ಪಷ್ಟವಾಗಿ ಅನಿತ್ಯವಾಗಿರುವದು ಕಾಣುತ್ತಿದ್ದರೂ ಅದು ಸಂತತವಾಗಿ ಕಡಿವಡೆಯದೆ ನಡೆಯುವಂತೆ ಕಾಣುವದು, ನಿತ್ಯವಾಗಿರುವ ಆರ್ಕಲ್ಯಾಂಪಿನ (ದೀಪದ) ಬೆಳಕಿನಿಂದಲೇ ಎಂಬುದು ಹೇಗೋ ಹಾಗೆಯೇ ಇದು ಸಹ ಇದೆ.

ಆದ್ದರಿಂದ 'ಆತ್ಮ' ಎಂಬುದಕ್ಕೆ ಅರ್ಹವಾದದ್ದು ನಮ್ಮೆಲ್ಲರ ನಿಜಸ್ವರೂಪವಾದ ಸಾಕ್ಷಿಸ್ವರೂಪವೇ ಹೊರತು ಅಹಂಕಾರಾದಿ ದೇಹದವರೆಗಿನದಾವುದೂ ಅರ್ಹವಲ್ಲ. ಇಂಥ ಆತ್ಮನೇ ತಾನೆಂಬುದನ್ನು ಅನುಭವದಿಂದ ಕಂಡುಕೊಳ್ಳುವದೇ ಜ್ಞಾನವು.

# 9. ಅನುಭವ

## (ಜನವರಿ 1992)

**ವಿಜ್ಞಾತೇರ್ಯಸ್ತು ವಿಜ್ಞಾತಾ ಸ ತ್ವಮಿತ್ಯುಚ್ಯತೇ ಯತಃ ||**
**ಸ ಸ್ಯಾದನುಭವಸ್ತಸ್ಯ ತತೋಽನ್ಯೋ ಅನುಭವೋ ಮೃಷಾ||**

ಉಪದೇಶಸಾಹಸ್ರೀ–12–8.

'ನಾನು ಅರಿತೆನು' ಎಂಬ ಜ್ಞಾನವೃತ್ತಿಯನ್ನು ಯಾವಾತನು ಅರಿಯುವನೋ, ಆ 'ತಾನಾಗಿರುವ ತತ್ತ್ವವೇ ನೀನು' ಎಂದು ಶ್ರುತಿಯು ಹೇಳಿರುವದರಿಂದ, ಆ ತಾನಾಗಿರುವ ತನ್ನ ನಿಜವಾದ ಇರವೇ **ಅನುಭವವು** ಅರ್ಥಾತ್ ಅನುಭವ ಸ್ವರೂಪವು. ಈ ಕೇವಲಾನುಭವ ಸ್ವರೂಪವನ್ನುಳಿದು ಮಿಕ್ಕದಾದ–ತೋರಿಹಾರುವ ಅನುಭವಗಳೆಲ್ಲವೂ ಹುಸಿತೋರಿಕೆಗಳು–ಎಂಬುದು ಮೇಲಿನ ಶ್ಲೋಕದ ಸರಳಾರ್ಥವು.

ಲೋಕದಲ್ಲಿ ಹೊರಗಿನ ವಸ್ತುಗಳಿಗೂ ನಮ್ಮ ಇಂದ್ರಿಯಗಳಿಗೂ ಸಂಬಂಧವು ಬಂದಾಗ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ಅನುಭವವು ಉಂಟಾಗುತ್ತದೆ. ಇದನ್ನು 'ಪ್ರತ್ಯಯಾನುಭವ' (Perceptions) ಎನ್ನುತ್ತಾರೆ. ಇದರಂತೆಯೇ ಕೋಪ, ಆನಂದ, ಮತ್ಸರ, ಭಕ್ತಿ ಕಾಮ–ಮುಂತಾದ ಒಳ್ಳೆ ಹಾಗೂ ಕೆಟ್ಟಭಾವಗಳು ಅಂತಃಕರಣದಲ್ಲಿ ಹುಟ್ಟುತ್ತವೆ. ಈ ಬಗೆಯ ಅನುಭವಗಳನ್ನು 'ವೇದನಾನುಭವಗಳು' (Feelings or Emotions) ಎನ್ನುತ್ತಾರೆ.

ದೇವತೆಗಳ ಉಪಾಸನೆ, ಯೋಗದ ಸಾಧನೆ ಮುಂತಾದ ವಿಶೇಷ ಸಾಧನೆಗಳನ್ನು ಮಾಡಿದವರಿಗೆ ದೇವತಾಸಾಕ್ಷಾತ್ಕಾರ, ದಿವ್ಯಾನುಭವ, ಭವ್ಯಾನುಭವ, ಅಣಿಮಾದಿ ಸಿದ್ಧಿಗಳ ಅನುಭವ, ಜನ್ಮಾಂತರಾದಿಗಳ ಅನುಭವ, ಭೂತಭವಿಷ್ಯಗಳ ಅನುಭವ, ದೂರದರ್ಶನ, ದೂರಶ್ರವಣ, ಒಬ್ಬರ ಮನಸ್ಸಿನಲ್ಲಿರುವದನ್ನು ಹೇಳುವದೇ ಮುಂತಾದ ವಿಶೇಷ ವಿಚಿತ್ರ ಅನುಭವಗಳೂ ಇರುತ್ತವೆ. ಇದಲ್ಲದೆ ನಿರ್ವಿಕಲ್ಪಸಮಾಧಿಯೇ ಮೊದಲಾದ ವಿಶೇಷಾನುಭವಗಳೂ ಕೆಲವರಿಗೆ ಇರುತ್ತವೆ. ಇವುಗಳನ್ನು 'ವಿಶೇಷಾನುಭವಗಳು' (Divine or Mystic Experience) ಎನ್ನುತ್ತಾರೆ.

ಯಾವದೇ ಒಂದು ವಿಷಯವು 'ನನಗೆ ಗೊತ್ತಿಲ್ಲ' ಅಥವಾ 'ಗೊತ್ತಿದೆ,' 'ಈಗ ಗೊತ್ತಾಯಿತು' ಎಂದು ಪ್ರಾಮಾಣಿಕವಾಗಿ ಹೇಳುವಾಗ ಅಜ್ಞಾನದ ಅನುಭವ, ಜ್ಞಾನದ ಅನುಭವಗಳನ್ನು ಹೊರಪಡಿಸುತ್ತೇವೆ.

ಹೀಗೆ ಮೇಲೆ ವರ್ಣಿಸಿದ ಪ್ರತ್ಯಯಾನುಭವ, ವೇದನಾನುಭವ, ಜ್ಞಾನಾಜ್ಞಾನಗಳ ಅನುಭವಗಳು ಉಂಟಾಗಬೇಕಾದರೆ ಅಂತಃಕರಣ ಅಥವಾ ಮನಸ್ಸು ಇರಲೇಬೇಕು. ಹಾಗೂ ಅದರೊಂದಿಗೆ ತಾನು ತಾದಾತ್ಮ್ಯಭಾವವನ್ನು ಹೊಂದಲೇಬೆಕು. ಈ ಎಲ್ಲ ಬಗೆಯ ಅನುಭವಗಳೂ ಕಾಲ, ದೇಶ, ಕಾರ್ಯಕಾರಣಭಾವಗಳಿಗೆ ಒಳಪಟ್ಟೇ ಇರುತ್ತವೆ. ಹಾಗೂ ಬಂದು ಹೋಗುವ ತೋರಿ ಅಡಗುವ ಸ್ವಭಾವ ಉಳ್ಳವುಗಳಾಗಿರುತ್ತವೆ. ವ್ಯಕ್ತಿವ್ಯಕ್ತಿಗೆ ಬೇರೆಬೇರೆಯಾಗಿಯೂ ಇರುತ್ತವೆ. ಎಚ್ಚರದ ಅವಸ್ಥೆಗೆ ಸೇರಿರುವ ಈ ಅನುಭವಗಳು ಆ ಅವಸ್ಥೆಗೇ ಒಳಪಟ್ಟಿರುತ್ತವೆ.

ಮೇಲೆ ವಿವರಿಸಿದ ಅನುಭವಗಳು–ಜ್ಞಾನಾಜ್ಞಾನವೃತ್ತಿಗಳು ತೋರಿದ್ದನ್ನೂ ಅಡಗಿದ್ದನ್ನೂ ಸಹ ಬೆಳಗುತ್ತಾ–ಅರಿಯುತ್ತಾ ಇರುವ ಕೇವಲ ತಾನಾದ ತನ್ನ ನಿಜವಾದ ಇರುವಿಕೆಯನ್ನೇ ಇಲ್ಲಿ 'ಅನುಭವ', 'ಅನುಭವಸ್ವರೂಪ' ಎಂದು ಕರೆದಿರುತ್ತದೆ.

ಇದು ಅನುಭವಿಸಲ್ಪಡುವ ಅನುಭವವಲ್ಲ; ಕೇವಲ ಚಿನ್ಮಾತ್ರವಾಗಿ ಕೇವಲ ಇರುವಿಕೆ ಮಾತ್ರವಾಗಿರುವ ಪ್ರತಿಯೊಬ್ಬರ ಸಹಜ ಸ್ವಭಾವವು. ಇದನ್ನೇ ವೇದಾಂತದಲ್ಲಿ 'ಅನುಭವಸ್ವರೂಪ', 'ಅನುಭವ', ಎಂದು ಮುಂತಾಗಿ ಕರೆದಿರುತ್ತದೆ. ಇದೇ ಆತ್ಮಸ್ವರೂಪವು.

''ಈ ಸಿದ್ಧಾನುಭವ, ಮೂಲಾನುಭವವೇ ನೀನಾಗಿರುವಿ. ಈಗ ತಿಳಿದುಕೊಂಡಿರುವ ನಾನು ಇಂಥಿಂಥವನು ಎಂಬುದು ನಿಜವಾದ ನೀನಲ್ಲ'' ಎಂದು ಉಪನಿಷತ್ತುಗಳು ನಮಗೆ ಬೋಧಿಸುತ್ತವೆ. 'ನಾನು ಅರಿತೆನು,' 'ನನಗೆ ಇಂಥ ಅನುಭವವು ಬಂದಿತು', ಎಂಬುದನ್ನು ಅನುಭವಸ್ವರೂಪವೇ ಆಗಿರುವ –ನಿಜವಾದ ನಾನಾಗಿರುವ, ಅಥವಾ ತಾನಾಗಿರುವ ಯಾವ ನೀನು ಪ್ರಕಾಶಿಸುತ್ತಿರುವೆಯೋ (ಬೆಳಗುತ್ತಿರುವೆಯೋ) ಆ ಕೇವಲಾನುಭವ ಸ್ವರೂಪವೇ ನೀನು''–ಎಂಬುದು ಉಪನಿಷದ್ಬೋಧೆಯ ತಾತ್ಪರ್ಯವು. ಆದ್ದರಿಂದ ''ಆತ್ಮನ ಅನುಭವ ನನಗೆ ಬರಬೇಕು' 'ಆತ್ಮಾನುಭವ ಉಂಟಾಗಬೇಕು' ಮುಂತಾಗಿ ತಿಳಿಯುವುದು ತಪ್ಪು. ಅನುಭವಸ್ವರೂಪನಾದ ಆತ್ಮನೇ ನೀನು. ನಿನಗೆ ಆತ್ಮನ ಅನುಭವ ಎಂಬುದೆಲ್ಲವೂ ಗ್ರಹಿಕೆ'' ಎಂದು ಶಾಸ್ತ್ರವು ನಮಗೆ ತಿಳಿಸುತ್ತದೆ.

ಈ ಬೋಧವನ್ನನುಸರಿಸಿ ಅನುಭವಸ್ವರೂಪವೇ ತಾನಾಗಿ ಉಳಿದಾಗ ಆ ಸ್ವರೂಪವನ್ನುಳಿದು ಮಿಕ್ಕ ಎಲ್ಲ ಬಗೆಯ ಅನುಭವಗಳೂ ಅಂತಃಕರಣವಿರುವಾಗ ಮಾತ್ರ ತೋರಿಹಾರುವ ಹುಸಿತೋರಿಕೆಗಳೇ ಆಗಿರುತ್ತವೆ. ಇದನ್ನೇ **''ಸ ಸ್ಯಾತ್ ಅನುಭವಸ್ತಸ್ಯ ತತೋಽನ್ಯೋ ಅನುಭವೋ ಮೃಷಾ''** ಎಂಬ ಮಾತಿನಿಂದ ಹೇಳಿರುತ್ತದೆ.

# 10. ಕಾಣಿಸುವವನಲ್ಲ !

## (ಅಕ್ಟೋಬರ್ 1992)

ನಾವೆಲ್ಲರು ಕಣ್ಣು ಮೊದಲಾದ ಇಂದ್ರಿಯಗಳನ್ನು ಉಪಯೋಗಿಸಿ ಹೊರಗಿನ ವಸ್ತುಗಳನ್ನು ನೋಡುತ್ತೇವೆ. ಮಾಲಿಕ್ಯುಲ್ಸ್–ಆಟಮ್ಸ್–ಇಲೆಕ್ಟ್ರಾನ್ಸ್–ಪ್ರೋಟಾನ್ಸ್–ನ್ಯೂಟ್ರಾನ್ಸ್ ಮೊದಲಾದ ಸೂಕ್ಷ್ಮವಸ್ತುಗಳನ್ನು ಸೂಕ್ಷ್ಮದರ್ಶಕ ಯಂತ್ರಗಳ ಸಹಾಯದಿಂದ ನೋಡುತ್ತೇವೆ. ಹೀಗೆ ಪ್ರಪಂಚವೆಲ್ಲವೂ ಪ್ರತ್ಯಕ್ಷಗೋಚರವಾಗಿದೆ. ಭೌತಿಕವಿಜ್ಞಾನವು ಈ ಪ್ರತ್ಯಕ್ಷಪ್ರಮಾಣವನ್ನೇ ಮುಖ್ಯವಾಗಿ ಇಟ್ಟುಕೊಂಡಿರುತ್ತದೆ. ''ಅಕ್ಷಂ ಅಕ್ಷಂ ಪ್ರತಿ–ಪ್ರತ್ಯಕ್ಷಂ'' ಎಂಬ ವ್ಯುತ್ಪತ್ತಿಯನ್ನನುಸರಿಸಿ ಅಕ್ಷ ಎಂದರೆ ಇಂದ್ರಿಯ, ಅದಕ್ಕೆ ಗೋಚರವಾದದ್ದು ಎಂದರೆ ಕಾಣಿಸಿದ್ದು ಪ್ರತ್ಯಕ್ಷ ಎಂದರ್ಥ. ಹೀಗೆಯೇ ಸುಖ, ದುಃಖ ಮೊದಲಾದ ಭಾವಗಳು ಮನಸ್ಸಿಗೆ ಅಥವಾ ಅಂತಃಕರಣಕ್ಕೆ ಗೋಚರವಾಗಿರುತ್ತವೆ. ಆದ್ದರಿಂದ ಇವುಗಳನ್ನು **''ಮಾನಸಪ್ರತ್ಯಕ್ಷ''** ಎಂದು ಕರೆಯುತ್ತಾರೆ.

ವೇದಾಂತದಲ್ಲಿ ಹೇಳಿರುವ ಆತ್ಮನು ಎಂದರೆ ಪ್ರತಿಯೊಬ್ಬರ ನಿಜಸ್ವರೂಪವು ಹೀಗೆ ಇಂದ್ರಿಯಗಳಿಗಾಗಲಿ ಮನಸ್ಸಿನ ವೃತ್ತಿಗಳಿಗಾಗಲಿ ಕಾಣಿಸತಕ್ಕ ತತ್ತ್ವವಲ್ಲ.

ಶ್ರೀಶಂಕರರು **''ನಾಯಮರ್ಥಃ ಪ್ರತ್ಯಕ್ಷಾದಿಗೋಚರಃ ರೂಪಾದ್ಯಭಾವಾತ್''** ಈ ಆತ್ಮಸ್ವರೂಪಕ್ಕೆ ರೂಪಾದಿಗಳಿಲ್ಲದ್ದರಿಂದ ಇದು ಪ್ರತ್ಯಕ್ಷಗೋಚರವಲ್ಲ (ಸೂ. ಭಾ. 2–1–6) ಎಂದಿದ್ದಾರೆ. ಪ್ರತ್ಯಕ್ಷದ ಆಧಾರದಿಂದಲೇ ಹೊರಡತಕ್ಕ ಅನುಮಾನಾದಿ ಇತರ ಪ್ರಮಾಣಗಳಿಗೂ ಈ ಆತ್ಮನು ವಿಷಯನಲ್ಲ ಎಂದು ಇಲ್ಲಿಯೇ **''ಲಿಂಗಾದ್ಯಭಾವಾಚ್ಚ ನಾನುಮಾನಾದೀನಾಮ್''** ಎಂದು ಹೇಳಿದ್ದಾರೆ. ಹಾಗಾದರೆ ಈ ಆತ್ಮನನ್ನು ಏತರಿಂದ ತಿಳಿದುಕೊಳ್ಳಬೇಕು? ಎಂಬ ಪ್ರಶ್ನೆಗೆ **''ಆಗಮಮಾತ್ರ ಸಮಧಿಗಮ್ಯ ಏವ ತು ಅಯಮರ್ಥೋ ಧರ್ಮವತ್''**, ಧರ್ಮ ಎಂಬುದು ಹೇಗೆ ಆಗಮ (ವೇದ) ದಿಂದಲೇ ತಿಳಿದು ಬರುವದೋ ಹಾಗೆಯೇ ವೇದದಿಂದಲೇ ಈ ಆತ್ಮನು ತಿಳಿದುಬರುತ್ತಾನೆ ಎಂಬ ಉತ್ತರವನ್ನು ಇಲ್ಲಿಯೇ ಕೊಟ್ಟಿದ್ದಾರೆ. ಅಂತೂ ಪ್ರಮಾಣಗಳಿಗೆ ಆತ್ಮನು ಕಾಣಿಸುವವನಲ್ಲ. ವೇದಗಳ ಬೋಧೆಯಿಂದಲೇ ಇವನು ತಿಳಿದುಬರುತ್ತಾನೆ ಎಂಬುದು ತಾತ್ಪರ್ಯ.

ಧರ್ಮವೇ ಮೊದಲಾದವುಗಳನ್ನು ಶಾಸ್ತ್ರದಲ್ಲಿ ಹೇಳಿದ್ದರಿಂದ ಹೇಗೆ ನಂಬುಪವೋ ಹಾಗೆಯೇ ಆತ್ಮನಿದ್ದಾನೆ ಎಂಬುದನ್ನು ಬರೀ ನಂಬಿಕೆಯಿಂದಲೇ ಒಪ್ಪಬೇಕೆ?

ಎಂಬ ಪ್ರಶ್ನೆಗೆ ಶ್ರೀಶಂಕರರು ಬ್ರ.ಸೂ.ಭಾ. 1–1–2ರಲ್ಲಿ ಕೊಟ್ಟಿರುವ ಉತ್ತರ: **ನ ಧರ್ಮಜಿಜ್ಞಾಸಾಯಾಮಿವ ಶ್ರುತ್ಯಾದಯ ಏವ ಪ್ರಮಾಣಂ ಬ್ರಹ್ಮಜಿಜ್ಞಾಸಾಯಾಮ್। ಕಿಂ ತು, ಶ್ರುತ್ಯಾದಯಃ ಅನುಭವಾದಯಶ್ಚ ಯಥಾಸಂಭವಮ್ ಇಹ ಪ್ರಮಾಣಂ। ಅನುಭವಾವಸಾನತ್ವಾತ್ ಭೂತವಸ್ತುವಿಷಯತ್ವಾಚ್ಚ ಬ್ರಹ್ಮಜ್ಞಾನಸ್ಯ॥**

ಈ ಬ್ರಹ್ಮವಿಜ್ಞಾನವು ಅನುಭವದಲ್ಲಿ ಕೊನೆಗೊಳ್ಳತಕ್ಕದಾದ್ದರಿಂದಲೂ ಮೊದಲೇ ಇದ್ದುಬಿಟ್ಟಿರುವ ಪ್ರತಿಯೊಬ್ಬರ ಸ್ವರೂಪವೇ ಆಗಿರುವದರಿಂದಲೂ ಈ ಆತ್ಮವಿಜ್ಞಾನದ ವಿಷಯದಲ್ಲಿ ಬರೀ ಶ್ರುತಿಯ (ವೇದದ) ಹೇಳಿಕೆ ಮಾತ್ರವೇ ಅಲ್ಲದೆ ತನ್ನ ಅನುಭವವೂ ಪ್ರಮಾಣವಾಗಿರುತ್ತದೆ ಎಂದು ಉತ್ತರಿಸಿದ್ದಾರೆ. ಆದ್ದರಿಂದ ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಆತ್ಮನು ಕಾಣಿಸುವವನಲ್ಲವಾದರೂ ಆತ್ಮನು ಸ್ವತಃ ಅನುಭವಸ್ವರೂಪನೇ ಆಗಿರುವುದರಿಂದ ಅನುಭವದಿಂದಲೇ ಈ ಸ್ವರೂಪವನ್ನು ಕಂಡುಕೊಳ್ಳಬೇಕು. ಇದನ್ನೇ ಶ್ರುತಿಯು **"ಅಯಮಾತ್ಮಾ ಸರ್ವಾನುಭೂಃ"** (ಬೃ. 2–5–19) ಎಂದಿದೆ.

ಆದ್ದರಿಂದ ಬರೀ ಶಾಸ್ತ್ರದ ಮಾತನ್ನೇ ನಂಬಿ ಆತ್ಮಸ್ವರೂಪವಿದೆ, ಆತ್ಮನಿದಾನೆ ಎಂದು ತಿಳಿಯಬೇಕಾಗಿಲ್ಲ. ಪ್ರತಿಯೊಬ್ಬ ಜಿಜ್ಞಾಸುವೂ ಶ್ರುತಿಯ ಬೋಧೆಯಂತೆ ತನ್ನೊಳಗೆ ತಿರುಗಿ ತಾನೇ ಕೇವಲಾನುಭವಸ್ವರೂಪನಾಗಿರುವದನ್ನು ಕಂಡುಕೊಳ್ಳಬೇಕೇ ಹೊರತು ಬುದ್ಧಿ, ಮನಸ್ಸು, ಇಂದ್ರಿಯಗಳೆಂಬ ಪ್ರಮಾಣಗಳನ್ನು ಉಪಯೋಗಿಸಿ ಹೊರಗಿನ ವಸ್ತುಗಳನ್ನು ಕಂಡುಕೊಂಡಂತೆ ಅಥವಾ ಒಳಗಿನ ಸುಖದುಃಖಾದಿಗಳನ್ನು ಕಂಡುಕೊಂಡಂತೆ ಆತ್ಮನನ್ನು ಕಂಡುಕೊಳ್ಳಲಾಗದು. ಹಾಗಾದರೆ ಅನುಭವದಿಂದ ಕಂಡುಕೊಳ್ಳುವುದೇನೆಂದರೇನು? ಇದನ್ನು ಬಿಡಿಸೋಣ.

ಶ್ರೀಶಂಕರಾಚಾರ್ಯರು ಹೇಳುವುದೇನೆಂದರೆ "–ನಾನು ಇದ್ದೇನೆ. ಆದ್ದರಿಂದ ವಿಚಾರಿಸುತ್ತೇನೆ. ವಿಚಾರಿಸಲಿ ಬಿಡಲಿ ನನ್ನ ಇರುವಿಕೆ ಇದ್ದೇ ಇದೆ. ಹೀಗೆ ಪ್ರತಿಯೊಬ್ಬನ ಇರುವಿಕೆಯು ಸ್ವತಃಸಿದ್ಧವಾಗಿ ವಿಚಾರಕ್ಕಿಂತಲೂ ಮೊದಲು ಇದ್ದುಬಿಟ್ಟಿರುವದೇ ಸರ್ವರಿಗೂ ಅನುಭವವು. ಯಾವದಾದರೊಂದು ವಸ್ತುವು ಇದೆಯೋ ಇಲ್ಲವೋ ಎಂಬುದನ್ನು ನಿಶ್ಚಯಿಸಲು ಒಬ್ಬನು ಪ್ರಮಾಣಗಳನ್ನು ಉಪಯೋಗಿಸುತ್ತಾನೆ. ಆದರೆ ನಾನು ಇದ್ದೇನೆಯೋ ಇಲ್ಲವೋ ಎಂಬುದನ್ನು ಪ್ರಮಾಣದಿಂದ ನಿಶ್ಚಯಿಸಬೇಕಾದ ಅಗತ್ಯವೇ ಇಲ್ಲ. ತಾನು ಮೊದಲೇ ಸ್ವತಃಸಿದ್ಧನಾಗಿದ್ದೇ ಇನ್ನೊಂದನ್ನರಿಯಲು ಬುದ್ಧಿ ಮನಸ್ಸು ಇಂದ್ರಿಯಗಳನ್ನು ಉಪಯೋಗಿಸುತ್ತಾನೆ. ಹೀಗೆ ತನ್ನ ಇರುವಿಕೆಯು

ಅನುಭವಸಿದ್ಧ. ತನ್ನಿಂದಲೇ ಬುದ್ಧಿ , ಮನಸ್ಸು, ಇಂದ್ರಿಯಗಳೆಂಬ ಪ್ರಮಾಣಗಳಿವೆ ಎಂಬುದು ಸಿದ್ಧವಾಗಬೇಕು. ಈ ಪ್ರಮಾಣಗಳಿಂದ ಹೊರಗಿನ ವಸ್ತುಗಳ ಇರುವಿಕೆಯು ಸಿದ್ಧವಾಗಬೇಕು. ಗಾಢನಿದ್ರೆಯಲ್ಲಿ ಬುದ್ಧಿ, ಮನಸ್ಸು, ಇಂದ್ರಿಯಾದಿ ಯಾವುದೇ ಪ್ರಪಂಚವಿಲ್ಲದಿದ್ದರೂ ತನ್ನ ಇರುವಿಕೆಯು ಸ್ವಲ್ಪವೂ ಮುಕ್ಕಾಗದೆ ಇದ್ದುಬಿಟ್ಟಿದೆ. ಈ ಅನುಭವಸ್ವರೂಪವೇ ಆತ್ಮನಾಗಿರುವದರಿಂದ ಈ ಆತ್ಮನು ಕಾಣಿಸುವವನಲ್ಲ. ಇದನ್ನೇ ಅಪ್ರಮೇಯನು ಎಂದರೆ ಪ್ರಮಾಣಗಳಿಗೆ ಗೋಚರನಲ್ಲ ಎಂದು "ಏತದಪ್ರಮಯಂ ಧ್ರುವಂ" (ಬೃ. 4–4–20); "ಅನಾಶಿನೋಽಪ್ರಮೇಯಸ್ಯ" (ಭ.ಗೀ. 2–18) ಎಂದು ಹೇಳಿರುತ್ತದೆ."

ಆದ್ದರಿಂದ ಆತ್ಮನು ಕಾಣಿಸುವವನಲ್ಲ, ನೋಡುವವನಾದ ತಾನೇ ಆತ್ಮನು. ಇಲ್ಲಿ ನೋಡುವವದೆಂಬುದು ಕ್ರಿಯೆಯಲ್ಲ, ಸಹಜವಾದ ತನ್ನ ಕೇವಲ ಇರುವಿಕೆಯೇ. ಪ್ರಮಾಣಗಳನ್ನು ಉಪಯೋಗಿಸಿ ನೋಡುವ ಕ್ರಿಯೆಯನ್ನು ಬಿಟ್ಟಾಗ ತಾನೇ ಕೇವಲ ಇರವಿನ ಸ್ವರೂಪನಾಗಿ ಉಳಿದಿರುತ್ತಾನೆ.

## 11. ಅವಸ್ಥೆಗಳು ಎಷ್ಟು?

### (ಜನವರಿ 1993)

ಸಾಮಾನ್ಯವಾಗಿ ಎಲ್ಲರೂ ಈ ಮೇಲಿನ ಪ್ರಶ್ನೆಗೆ ಉತ್ತರ ಕೊಡಬಲ್ಲರು. ಆದ್ದರಿಂದಲೇ ಸಾಮಾನ್ಯಜನರು ಈ ಪ್ರಶ್ನೆಯನ್ನು ಯಾರಲ್ಲಿಯೂ ಮಾಡುವುದಿಲ್ಲ. ಆದರೆ ಜ್ಞಾನಿಗಳು ಸಾಮಾನ್ಯಜನರನ್ನು ಕಂಡಾಗ ಈ ಪ್ರಶ್ನೆಯನ್ನು ಹಾಕುತ್ತಾರೆ. ಹಾಗಾದರೆ ಸಾಮಾನ್ಯಜನರಿಗೆ ತಿಳಿದ ವಿಚಾರ ಜ್ಞಾನಿಗಳಿಗೆ ತಿಳಿಯದೆ? ಎಂದರೆ ಹಾಗಲ್ಲ. ಎಲ್ಲರೂ ತಿಳಿದುಕೊಂಡಿರುವ ಮೂರು ಅವಸ್ಥೆಗಳು ಎಂಬ ತಿಳಿವಳಿಕೆ ಸರಿಯಲ್ಲವೆಂದು ಜ್ಞಾನಿಗಳು ಮಾತ್ರ ಬಲ್ಲರು. ಹಾಗಾದರೆ ನಿಜವಾಗಿ ಅವಸ್ಥೆಗಳು ಎಷ್ಟು? ಎಂದು ವಿಚಾರಮಾಡೋಣ.

ಶಾಸ್ತ್ರವು ಮೂರು ಹಂತಗಳಲ್ಲಿ ಈ ವಿಷಯವನ್ನು ವಿಚಾರಮಾಡಿ ಒಂದು ನಿರ್ಣಯ ಕೊಟ್ಟಿದೆ.

1. ಲೌಕಿಕ ಹಂತ
2. ವೈದಿಕ ಹಂತ
3. ಪಾರಮಾರ್ಥಿಕ ಹಂತ

ಮೊದಲನೆಯದಾಗಿ ಲೌಕಿಕ ಹಂತದಲ್ಲಿ ವಿಚಾರ ಮಾಡುವಾಗ ಎಚ್ಚರ, ಸ್ವಪ್ನ, ಸುಷುಪ್ತಿ ಮತ್ತು ತುರೀಯ ಎಂಬ ನಾಲ್ಕು ಅವಸ್ಥೆಗಳು ಉಂಟು. ಈ ನಾಲ್ಕರಲ್ಲಿ ಮೊದಲನೆಯ ಮೂರನ್ನು ಎಲ್ಲರೂ ಬಲ್ಲರು. ನಾಲ್ಕನೆಯದಾದ ತುರೀಯನನ್ನು ಯಾರೂ ತಿಳಿಯರು. ಆ ತುರೀಯ ತತ್ತ್ವವೇ ನಮ್ಮೆಲ್ಲರ ನಿಜಸ್ವರೂಪ. ಈ ನಮ್ಮ ನಿಜ ಸ್ವರೂಪವನ್ನು ಅರಿಯುವುದರಿಂದಲೇ ನಮಗೆ ಶಾಶ್ವತವಾದ ಶಾಂತಿ ದೊರಕುವುದು.

ಇಲ್ಲಿ ಎಚ್ಚರ ಸ್ವಪ್ನಗಳನ್ನು ಸಾಮಾನ್ಯ ಜನರು ತಿಳಿದಿರುವಂತೆಯೇ ಒಪ್ಪಿಕೊಂಡು ಎಚ್ಚರ ಸ್ವಪ್ನಗಳಲ್ಲಿ ದ್ವೈತದರ್ಶನವು, ಉಪಾಧಿಗಳು, ಜನ್ಮಮರಣಗಳು, ಕಾಮ ಕರ್ಮ ಫಲ ಸಂಕೋಲೆ ಮುಂತಾದ ದ್ವಂದ್ವಗಳ ಕಾಟವುಂಟು; ಸುಷುಪ್ತಿಯಲ್ಲಿ ದ್ವೈತ ದರ್ಶನವಿಲ್ಲದ್ದರಿಂದ ದ್ವಂದ್ವಗಳಿಲ್ಲ ಎಂದು ಎಲ್ಲರಿಗೂ ತಿಳಿದಿದೆ, ಇದು ಸರಿ–ಎಂದು ಅನುವಾದ ಮಾಡಿಕೊಂಡು ಈ ಮೂರು ಅವಸ್ಥೆಗಳು ಬಂದು ಇದ್ದು ಹೋಗುತ್ತಿರುವುದನ್ನು ಯಾವ ಚೈತನ್ಯವು ನಿರ್ವಿಕಾರದಿಂದ ಬೆಳಗುತ್ತಿದೆಯೋ ಅದು ತುರೀಯಸ್ಥಾನದಲ್ಲಿರುವ ಆತ್ಮ; ಅದೇ ನಮ್ಮ ನಿಜಸ್ವರೂಪವೇ ಹೊರತು ಈ ಅವಸ್ಥೆಯ ಒಳಗೆ ದೇಹಪರಿಚ್ಛಿನ್ನ ಸ್ವರೂಪವಲ್ಲ–ಎಂದು ಮಂದಾಧಿಕಾರಿಗಳಿಗೆ ತಿಳಿಸುವ **ಲೌಕಿಕಹಂತ** ಇದು.

ಇನ್ನು ಸ್ವಲ್ಪ ವಿಚಾರಪರರಾದ ಮುಮುಕ್ಷುಗಳಿಗಾಗಿ ಎರಡನೆಯ ಹಂತ ಹೊರಟಿದೆ. ಇಲ್ಲಿ ಮೇಲೆ ತಿಳಿಸಿರುವಂತೆ ಎಚ್ಚರ ಸ್ವಪ್ನಗಳು ದ್ವೈತಾವಸ್ಥೆಯನ್ನು ತೋರಿಸುತ್ತಿರುವುದು. ದ್ವಂದ್ವಾದಿಗಳು, ಜನ್ಮಮರಣಾದಿಗಳು, ಇವುಗಳ ಕಾಟ– ಇವುಗಳ ವಿಚಾರಕ್ಕಿಂತಲೂ ಇವುಗಳ ಸ್ವಭಾವವನ್ನು ಕುರಿತು ಮಾಡುವ ವಿಚಾರಕ್ಕೆ ಪ್ರಾಮುಖ್ಯತೆ ಇರುತ್ತವೆ. ಇವುಗಳೆಲ್ಲವೂ ಆಯಾ ಅವಸ್ಥೆಗಳಲ್ಲಿ ಮಾತ್ರ ತೋರುತ್ತಿದ್ದು ತೋರಿ ಹಾರುವ ಸ್ವಭಾವವುಳ್ಳವುಗಳಾಗಿವೆ. ಕಾಲದೇಶಗಳೂ, ಕಾರ್ಯಕಾರಣಗಳೂ ಸಮಾನವಾಗಿ ಆಯಾ ಅವಸ್ಥೆಗಳಲ್ಲಿಯೇ ಬೆಲೆಯುಳ್ಳದ್ದಾಗಿಯೂ ಮತ್ತೊಂದು ಅವಸ್ಥೆಗೆ ಬಂದಾಗ ಬೆಲೆಯೇ ಇಲ್ಲದ್ದಾಗಿಯೂ ಇರುತ್ತವೆ. ಎರಡು ಅವಸ್ಥೆಗಳ ಸಾಮ್ಯದಿಂದ ಎರಡನ್ನು ಒಂದೇ ಗುಂಪಿಗೆ ಸೇರಿಸಿ ಎರಡೂ ಸ್ವಪ್ನವೇ ಎಂದು ಜ್ಞಾನಿಗಳು ತೀರ್ಮಾನಿಸಿರುವರು. **"ಸ್ವಪ್ನಜಾಗರಿತಸ್ಥಾನೇ ಹ್ಯೇಕಮಾಹುರ್ಮನೀಷಿಣಃ''** ಸ್ವಪ್ನಜಾಗ್ರತ್ತುಗಳನ್ನು ವಿಚಾರಪರರು ಒಂದೇ ಎನ್ನುವರು.

ಈ ಎಚ್ಚರ ಸ್ವಪ್ನಗಳಲ್ಲಿ ಆತ್ಮನನ್ನರಿಯದಿರುವುದೆಂಬ ಜ್ಞಾನಾಭಾವವು ಆತ್ಮನನ್ನೇ ತಪ್ಪಾಗಿ ಅರಿತಿರುವುದೆಂಬ ಮಿಥ್ಯಾಜ್ಞಾನವೂ ಸಮಾನವಾಗಿರುತ್ತದೆ. ಹೇಗೆಂದರೆ ತನಗೆರಡನೆಯದಿಲ್ಲದ ತಾನೊಬ್ಬನೇ ನಿದ್ರೆ ಮಾಡುವಾಗ ಕಂಡ ಕನಸಿನಲ್ಲಿ ದ್ವೈತಪ್ರಪಂಚ, ಕಾಲ, ದೇಶ, ಪಂಚಭೂತಗಳು, ಜೀವರಾಶಿಗಳು ಕ್ರಿಯಾಕಾರಕಫಲ

ಎಂದು ಮುಂತಾಗಿ ಸಕಲವೂ ಆಗಿ ತೋರಿದ್ದು ತಾನೇ ಎಂಬುದು ಎಲ್ಲರ ಅನುಭವದಲ್ಲಿದೆ. ತನ್ನ ಸ್ವರೂಪದ ಅರಿವಿಲ್ಲದ್ದಕ್ಕಾಗಿ ತನ್ನನ್ನೇ ತಪ್ಪಾಗಿ ಈ ರೀತಿ ಕಂಡೆವೆಂಬುದೂ ಎಲ್ಲರಿಗೂ ತಿಳಿದಿದೆ. ಇದೇ ರೀತಿ ಎಚ್ಚರವೂ ಸಹ ಎಂದು ನಮ್ಮ ನಿಜಸ್ವರೂಪವನ್ನು ಅರಿತಾಗ ತಿಳಿಯುತ್ತದೆ. ಆದ್ದರಿಂದ ಎಚ್ಚರಸ್ವಪ್ನಗಳೆಂಬ ಕನಸು, ಸುಷುಪ್ತಿ ಎಂಬ ನಿದ್ದೆ ಇವುಗಳನ್ನು ಸಾಕ್ಷಿಯಾಗಿ ನಿರ್ವಿಕಾರವಾಗಿ ಬೆಳಗುತ್ತಿರುವ ಆತ್ಮನನ್ನು ಗುರುತು ಹಿಡಿಯುವುದೆಂಬ ಎಚ್ಚರ ಎಂಬ ವಿಚಾರಕ್ರಮದಿಂದ ಆತ್ಮನಲ್ಲಿ ನೆಲೆನಿಲ್ಲಿಸುವ ಮಧ್ಯಮಾಧಿಕಾರಿಗಳ ವೈದಿಕ ಹಂತ ಇದು.

ಇನ್ನು ಮೂರನೆಯದಾದ **ಪಾರಮಾರ್ಥಿಕ ಹಂತ.** ಇಲ್ಲಿ ಅವಸ್ಥೆಗಳ ಬಣ್ಣ ಬಯಲಾಗುವುದು. ಏಕೆಂದರೆ ನಾವು ಯಾವುದನ್ನು ಅವಸ್ಥೆ ಎಂದು ಮಾಡಿಕೊಂಡಿರುವೆವೋ ಅದು ಅವಸ್ಥೆಯೇ ಅಲ್ಲ. ಇದಕ್ಕೆ ಎರಡು ಕಾರಣಗಳು.

(1) ಅವಸ್ಥೆ ಎಂದರೆ ಸಮಾನವಾದ ಕಾಲದೇಶಗಳಲ್ಲಿ ತೋರುವ ಅವಯವವುಳ್ಳ ವಸ್ತುಗಳಿಗೆ ಕಾಲನಿಮಿತ್ತದಿಂದಲೂ, ದೇಶನಿಮಿತ್ತದಿಂದಲೂ, ವಸ್ತುನಿಮಿತ್ತದಿಂದಲೂ ಆಗುವ ಉಪಾಧಿಗಳ ಬದಲಾವಣೆ. ಈ ಕಾಲ, ದೇಶ, ವಸ್ತುಗಳು, ಅವಯವಗಳು ಅವಸ್ಥೆಯ ಒಳಗೆ (ಎಚ್ಚರ ಅಥವಾ ಸ್ವಪ್ನ) ತೋರುತ್ತಿರುವುದರಿಂದ ಇಡೀ ಅವಸ್ಥೆಗೆ ಉಪಾಧಿಗಳಾಗಲಿ, ಬದಲಾವಣೆಯಾಗಲಿ ಇರುವುದಿಲ್ಲ. ಆದ್ದರಿಂದಲೇ ಎಚ್ಚರ ಅವಸ್ಥೆಯಲ್ಲ, ಸ್ವಪ್ನ ಅವಸ್ಥೆಯಲ್ಲ.

(2) ಆತ್ಮನನ್ನರಿಯದಿದ್ದಾಗ ಆತ್ಮನನ್ನೇ ತಪ್ಪಾಗಿ ಎಚ್ಚರ ಸ್ವಪ್ನಗಳೆಂದು ತಿಳಿದಿರುತ್ತೇವಾದ್ದರಿಂದ ಇವು ಅವಸ್ಥೆಗಳೇ ಅಲ್ಲ. ಪರಿಪೂರ್ಣ ಆತ್ಮನೇ.

ಮೂರು ಅವಸ್ಥೆಗಳೆಂದಾಗಲಿ, ನಾಲ್ಕು ಅವಸ್ಥೆಗಳೆಂದಾಗಲಿ ಹೇಳುವುದು ತಪ್ಪು. ಅವಸ್ಥೆಗಳು ಎಷ್ಟು ಎಂಬ ಪ್ರಶ್ನೆಯೇ ತಪ್ಪು. "ಆತ್ಮೈವೇದಂ ಸರ್ವಂ."

## 12. ತತ್ತ್ವದರ್ಶಿಗಳೆಂದರೆ ಯಾರು?

**(ಏಪ್ರಿಲ್ 1993)**

ಶ್ರೀಶಂಕರಾಚಾರ್ಯರು ಭಗವದ್ಗೀತೆಯ ಎರಡನೆಯ ಅಧ್ಯಾಯದ 16ನೇ ಶ್ಲೋಕದ ಭಾಷ್ಯದ ಕೊನೆಯ ಭಾಗದಲ್ಲಿ ತತ್ತ್ವದರ್ಶಿಗಳೆಂದರೆ ಯಾರು? ಎಂಬುದನ್ನು ವಿವರಿಸುತ್ತಾರೆ. ಈ ವಾಕ್ಯವು ಹೀಗಿದೆ–

**ತತ್ ಇತಿ ಸರ್ವನಾಮ, ಸರ್ವಂ ಚ ಬ್ರಹ್ಮ ತಸ್ಯ ನಾಮ ತತ್ ಇತಿ ತದ್ಭಾವಃ ಬ್ರಹ್ಮಣಃ ಯಾಥಾತ್ಮ್ಯಂ । ತತ್ ದ್ರಷ್ಟುಂ ಶೀಲಂ ಯೇಷಾಂ ತೇ ತತ್ತ್ವದರ್ಶಿನಃ ॥** ಸಂಸ್ಕೃತದಲ್ಲಿ 'ತತ್'–ಅದು–ಎಂಬುದು ವ್ಯಾಕರಣದ ಪ್ರಕಾರ ಸರ್ವನಾಮವು. ಸರ್ವವೂ ಆಗಿರುವ–ಅಥವಾ ಆಗಿರುವಂತೆ ತೋರುವ–ವಸ್ತುವೇ 'ಬ್ರಹ್ಮ'ವು. ಆದ್ದರಿಂದ ಬ್ರಹ್ಮಸ್ವರೂಪಕ್ಕೆ 'ತತ್' (ಅದು) ಎಂದು ಹೆಸರು. ಅದರ ಭಾವವು ಎಂದರೆ ಬ್ರಹ್ಮಸ್ವರೂಪವು ಹೇಗಿದೆಯೋ ಹಾಗೆಯೇ ಅದನ್ನು ವರ್ಣಿಸುವ ಪ್ರಕಾರವೇ 'ತತ್ತ್ವ'. ''ಇಂಥ ಸರ್ವವೂ ಆಗಿರುವಂತೆ ತೋರುವ, ಹಾಗೆ ತೋರಿದರೂ ತನ್ನಲ್ಲಿ ಯಾವ ಬದಲಾವಣೆಯು ಇಲ್ಲದೆ ಇದ್ದಂತೆಯೇ ಇರುವ ಬ್ರಹ್ಮತತ್ತ್ವವನ್ನು ಸಹಜವಾಗಿ ನೋಡುವ ಸ್ವಭಾವವು ಯಾರಿಗಿದೆಯೋ ಅವರು ತತ್ತ್ವದರ್ಶಿಗಳು'' –ಎಂಬುದು ಈ ವಾಕ್ಯದ ತಾತ್ಪರ್ಯವು. ಹೀಗೆ ಬ್ರಹ್ಮತತ್ತ್ವವನ್ನೇ ಕಾಣುವ ಸ್ವಭಾವ ಉಳ್ಳವರೇ ತತ್ತ್ವದರ್ಶಿಗಳು.

ಈಗ ತತ್ತ್ವದರ್ಶಿಗಳಲ್ಲದವರಿಗೆ ಹೊರಗಿನ ಪ್ರಪಂಚವು (ಆಧಿದೈವಿಕ–ಆಧಿಭೌತಿಕ ಪ್ರಪಂಚವು ಕಾಲ–ದೇಶ–ಕಾರ್ಯ–ಕಾರಣಭಾವದಿಂದ ನಿಯಮಿತವಾಗಿಯೂ, ಅನೇಕ ಜೀವರುಗಳಿಂದ ಕೂಡಿದ್ದಾಗಿಯೂ) ಕಾಣುತ್ತದೆ. ಇದರಂತೆಯೇ ಶರೀರದಿಂದ ಒಳಗಡೆಗೆ ಪ್ರಾಣಗಳು, ಕರ್ಮೇಂದ್ರಿಯಗಳು, ಜ್ಞಾನೇಂದ್ರಿಯಗಳು, ಮನಸ್ಸು, ಬುದ್ಧಿ 'ನಾನು' ಇಂಥವನು(ಳು) ಎಂಬ ಅನಿಸುವಿಕೆ, ಸುಖದುಃಖಾದಿ ವೇದನೆಗಳು ಸಹ ಸೇರಿದ ಒಟ್ಟು ಮುದ್ದೆಯಾದ ಆಧ್ಯಾತ್ಮಿಕ ಪ್ರಪಂಚ–(ಇದನ್ನೇ ಕಾರ್ಯಕರಣಸಂಘಾತ ಎನ್ನುತ್ತಾರೆ). ಇದೆಲ್ಲ ನಿಜವಾಗಿಯೂ ಇದ್ದುಬಿಟ್ಟಿರುವದೆಂದೇ ಕಾಣುತ್ತದೆ.

ಆದರೆ ಈ ಶ್ಲೋಕದಲ್ಲಿ (ಗೀ–2–16) ಹೇಳಿರುವುದೇನೆಂದರೆ: ಯಾವುದು ನಿಜವಾಗಿಲ್ಲವೋ, ಇರುವಂತೆ ತೋರುವದೋ ಅದು 'ಇದೆ' ಎಂದು ಅನಿಸಿದರೂ ಅದಕ್ಕೆ ನಿಜವಾಗಲೂ ಇರುವಿಕೆಯು (ಅಸ್ತಿತ್ವವು) ಇಲ್ಲ, ಎಂದರೆ ನಿಜವಾಗಲೂ ಇರತಕ್ಕದ್ದಲ್ಲ, ಆದರೆ ಯಾವದು ನಿಜವಾಗಲೂ ಇರತಕ್ಕದ್ದೋ ಅದು ಯಾವಾಗಲೂ ಇಲ್ಲದಂತಾಗುವುದಿಲ್ಲ, ಈ ಎರಡು ಮಾತುಗಳ ನಿರ್ಣಯವನ್ನು ತತ್ತ್ವದರ್ಶಿಗಳು ಕಂಡಿರುತ್ತಾರೆ–ಎಂಬುದು ಈ ಶ್ಲೋಕದಲ್ಲಿ ಹೇಳಿರುವ ವಿಷಯವು.

ಇಲ್ಲಿ ಜಿಜ್ಞಾಸುಗಳು ಲಕ್ಷಿಸತಕ್ಕ ವಿಷಯವೇನೆಂದರೆ–'ನಾನು ಇಂಥವನು' ಎಂಬುದು ಮೊದಲುಗೊಂಡು ಅದಕ್ಕೆ ಅಂಟಿಕೊಂಡು ತೋರುವ ಒಳ–ಹೊರಗಿನ ಪ್ರಪಂಚವೆಲ್ಲವೂ ತೋರಿಹಾರತಕ್ಕ ಹುಸಿತೋರಿಕೆಯಾಗಿದೆ. ಇದು ತೋರಿದಾಗಲೂ ತೋರದಿರುವಾಗಲೂ ಯಾವ ಬದಲಾವಣೆಯನ್ನೂ ಹೊಂದದೆ ಈ ತೋರಿಕೆಯ ಅಂಟು

ಸ್ವಲ್ಪವು ಇಲ್ಲದೆ ಇರತಕ್ಕ ಪ್ರತಿಯೊಬ್ಬರ ನಿಜವಾದ ಇರುವಿಕೆಯೇ–ನಾನು ಎಂಬುದಕ್ಕೆ ಆಚೆಗಿರುವ– ನಿಜವಾದ ತಾನಾಗಿರುವ ತತ್ತ್ವವೇ 'ಬ್ರಹ್ಮ' ಎಂದು ಹೇಳಿದೆ. ಈ ಬ್ರಹ್ಮತತ್ತ್ವವು ಅರ್ಥಾತ್ ನಿಜವಾದ ತಾನೇ ಪರಮಸತ್ಯವು. ಅದು ಯಾವಾಗಲೂ (ಎಂದರೆ ಈ ಪ್ರಪಂಚವು ತೋರಿದರೂ ತೋರದಿದ್ದರೂ) ಇಲ್ಲದಂತಾಗುವುದಿಲ್ಲ. ಆ ಬ್ರಹ್ಮತತ್ತ್ವದ ಆಧಾರದಲ್ಲಿ ನಿಜವಾಗಿರುವಂತೆ ತೋರಿಹಾರತಕ್ಕ ಈ ಸಮಗ್ರ ಪ್ರಪಂಚಕ್ಕೆ ತನ್ನದೇ ಆದ ಇರಿವಿಕೆ ಎಂದಿಗೂ ಇಲ್ಲ. ಆದ್ದರಿಂದ ಬ್ರಹ್ಮತತ್ತ್ವವು ಮಾತ್ರವೇ ಸತ್ಯವು, ನಿಜವಾಗಿರತಕ್ಕದ್ದು. ಅದೇ ನಿಜವಾದ ತಾನು, ತಾನಲ್ಲದ್ದೆಲ್ಲವೂ ಹುಸಿತೋರಿಕೆಯು–ಎಂಬುದನ್ನು ತತ್ತ್ವದರ್ಶಿಗಳು ತಮ್ಮ ಅನುಭವದಲ್ಲಿ ಕಂಡುಕೊಂಡಿರುತ್ತಾರೆ. ಆದ್ದರಿಂದ ನಿಜವಾಗಿಲ್ಲದ್ದು ಇದ್ದಂತೆ ತೋರಿದರೂ ಅದಕ್ಕೆ ಅಸ್ತಿತ್ವವಿಲ್ಲ–ನಿಜವಾಗಿರತಕ್ಕದ್ದು ಯಾವಾಗಲೂ ಇಲ್ಲದಂತಾಗುವುದಿಲ್ಲ ಎಂಬ ಮಾತಿನ ನಿರ್ಣಯವು ತತ್ತ್ವದರ್ಶಿಗಳಿಗೆ –ಬ್ರಹ್ಮದ ಯಥಾರ್ಥಸ್ವರೂಪವನ್ನು ಕಂಡು ಕೊಂಡವರಿಗೆ ಚೆನ್ನಾಗಿ ಗೊತ್ತಿರುತ್ತದೆ. ಹೀಗೆ ಕಂಡುಕೊಂಡವರೇ ತತ್ತ್ವದರ್ಶಿಗಳು.

ಹೇ ಅರ್ಜುನಾ! ನೀನೂ ಸಹ ಈ ತತ್ತ್ವದರ್ಶಿಗಳ ದೃಷ್ಟಿಯನ್ನೇ ಸಂಪಾದಿಸಿ ಸುಖದುಃಖಾದಿ ವೇದನೆಗಳ ಸಮೇತವಾಗಿ ತೋರುವ ಎಲ್ಲವೂ ಮೃಗಜಲದಂತೆ ಬರೀ ಹುಸಿತೋರಿಕೆಗಳೇ ಆಗಿವೆ ಎಂಬುದನ್ನು ಚೆನ್ನಾಗಿ ಮನಸ್ಸಿನಲ್ಲಿ ಅನುಭವಪೂರ್ವಕವಾಗಿ ನಿಶ್ಚಯಿಸಿ, ಶೋಕ–ಮೋಹಗಳನ್ನು ಬಿಟ್ಟು ಬ್ರಹ್ಮವೇ ಆಗಿರುವ ಆತ್ಮಸ್ವರೂಪ ಮಾತ್ರವೇ ಸತ್ಯ ಎಂಬ ದೃಷ್ಟಿಯನ್ನನುಸರಿಸಿ ಈ ದ್ವಂದ್ವಗಳನ್ನು ಸಹಿಸಿಕೋ. ಅರ್ಥಾತ್ ಇವೆಲ್ಲವುಗಳನ್ನು ಆತ್ಮವ್ಯಾಪ್ತವಾಗಿ ಕಂಡು ಬಾಧಿತಗೊಳಿಸಿಕೋ ಎಂಬುದು ಒಟ್ಟು ಉಪದೇಶದ ಸಾರವು. ವ್ಯವಹಾರದಲ್ಲಿ ಒಂದು ಸಿನಿಮಾ ನಡೆಯುತ್ತಿರುವಾಗ ಅಲ್ಲಿ ಕಾಣುವ ಬೊಂಬೆಗಳೆಲ್ಲವೂ ಅವುಗಳಿಗೆ ಆಧಾರವಾಗಿ ಹಿಂತಡಿಕೆಯಾಗಿರುವ ಬಿಳಿಯ ಪರದೆಯ ಮೇಲೆಯೇ ಕಾಣುತ್ತದೆ. ಸಿನಿಮಾದಲ್ಲಿ ಕಾಣುವ ದೃಶ್ಯಗಳು ನಿಜವಾಗಿರುವಂತೆ ಭಾಸವಾದರೂ ಅವುಗಳಿಗೆ ನಿಜವಾದ ಇರುವಿಕೆ, ಅಸ್ತಿತ್ವ ಇಲ್ಲ. ಆ ಚಿತ್ರಗಳಿಗೆ ಆಧಾರವಾದ ಬಿಳಿಯ ಪರದೆಯು (Screen) ನಮಗೆ ಕಾಣುವುದಿಲ್ಲವೆನಿಸಿದರೂ ಅದೇ ನಿಜವಾಗಿರತಕ್ಕದ್ದು. ಸಿನಿಮಾ ತೋರಿದರೂ ತೋರದಿದ್ದರೂ ತನ್ನಲ್ಲಿ ಬದಲಾವಣೆಯಾಗದೆ ಆ ಹುಸಿತೋರಿಕೆಯ ಅಂಟು ಸ್ವಲ್ಪವೂ ಇಲ್ಲದೆ ಇರುವ ಪರದೆಯೇ ಪರಮಾರ್ಥಸತ್ಯವು. ಅದು ಎಂದಿಗೂ ಇಲ್ಲದ್ದಾಗುವುದಿಲ್ಲ ಬೊಂಬೆಗಳಿಗೆ ಎಂದಿಗೂ (ತೋರುವಾಗಲೇ) ಸ್ವತಂತ್ರವಾದ ಇರುವಿಕೆ ಇಲ್ಲ. ಇದರಂತೆ ನಮ್ಮೆಲ್ಲರ ನಿಜಸ್ವರೂಪ ವಾದ ಬ್ರಹ್ಮತತ್ತ್ವವೇ ಪರಮಾರ್ಥಸತ್ಯವು. ತೋರಿಹಾರುವ ಪ್ರಪಂಚವೆಲ್ಲವೂ ಹುಸಿ ತೋರಿಕೆಯು. ಈ ಸತ್ಯವನ್ನು ಅನುಭವದಿಂದ ಕಂಡುಕೊಂಡ ಧೀರರೇ ತತ್ತ್ವದರ್ಶಿಗಳು.

# 13. ಅಧ್ಯಾತ್ಮಯೋಗ ಅಥವಾ ನಿದಿಧ್ಯಾಸನ

## (ಅಕ್ಟೋಬರ್ 1993)

ಏಕಾಂತದಲ್ಲಿ ಕುಳಿತು ಈ ಕೆಳಗಿನ ಸಂಗತಿಗಳನ್ನು ನಿಮ್ಮ ಅನುಭವಕ್ಕೆ ಹೊಂದಿಸಿಕೊಂಡು ಹಾಗಿದೆಯೇ ಇಲ್ಲವೆ? ಎಂದು ಕಂಡುಕೊಳ್ಳಲು ಪ್ರಯತ್ನಿಸಿರಿ.

1. ನಮಗೆ ಹೊರಗಿನ ವಿಷಯಗಳು ಇವೆ ಎಂಬುದಕ್ಕೆ ನಮ್ಮ ಇಂದ್ರಿಯಗಳೇ ಪ್ರಮಾಣಗಳಾಗಿವೆ. ಇಂದ್ರಿಯಗಳಿಗೆ ವೇದ್ಯವಾಗದ ವಿಷಯಗಳು ಹೊರಗೆ ಇವೆ ಎಂಬ ಮಾತು ಅರ್ಥವಿಲ್ಲದ್ದು.

2. ಇಂದ್ರಿಯಗಳು ಒಳಗಿವೆ. ವಿಷಯಗಳು ಹೊರಗಿವೆ, ಇಂದ್ರಿಯಗಳು ವಿಷಯಗಳನ್ನು ಗ್ರಹಿಸುವಾಗ ಆಯಾ ವಿಷಯಗಳನ್ನು ವ್ಯಾಪಿಸಿ ದೇಶಕಾಲ ಕಾರ್ಯಕಾರಣ ಭಾವಗಳಿಂದೊಡಗೂಡಿ ಜ್ಞಾನ ಮಾಡಿಕೊಳ್ಳುತ್ತವೆ. ಏಕೆಂದರೆ ವಿಷಯಗಳೆಲ್ಲಾ ಈ ಸಂಬಂಧದಿಂದಲೇ ಇರುವವಾದ್ದರಿಂದ ಹಾಗೆಯೇ ತಿಳಿಯಬೇಕಾಗುವುದು. ಆದರೆ ವಿಷಯಗಳು ಮಾತ್ರ ಇಂದ್ರಿಯಗಳನ್ನು ಎಂದೂ ತಿಳಿಯಲಾರವು.

3. ಮನಸ್ಸು ಇಂದ್ರಿಯಗಳೆಲ್ಲವನ್ನೂ ಒಟ್ಟಾರೆ ತಿಳಿಯಬಲ್ಲದು. ಹೊರಗಿರುವ ಇಂದ್ರಿಯಗಳಿರುವುದಕ್ಕೆ ಒಳಗಿರುವ ಮನಸ್ಸೇ ಪ್ರಮಾಣವು.

4. ಮನಸ್ಸು ಇಂದ್ರಿಯಗಳನ್ನು ವ್ಯಾಪಿಸುತ್ತದೆ. ಇಂದ್ರಿಯಗಳು ಮನಸ್ಸನ್ನು ವ್ಯಾಪಿಸಲಾರವು. ಮನಸ್ಸು ಆಲೋಚಿಸಬಲ್ಲುದು, ಇಂದ್ರಿಯಗಳು ಈ ಕೆಲಸ ಮಾಡಲಾರವು.

5. ಮನಸ್ಸನ್ನು ಬಿಟ್ಟರೆ ಇಂದ್ರಿಯಗಳಿಗೆ ಅಸ್ತಿತ್ವವೇ ಇಲ್ಲ, ಮನಸ್ಸೇ ಗೋಳಕಗಳಲ್ಲಿ ಬಂದಾಗ ಇಂದ್ರಿಯವೆನಿಸುತ್ತದೆ. ಆದ್ದರಿಂದ ವಿಷಯ ಹಾಗು ಇಂದ್ರಿಯಗಳಿಗೆ ಮನಸ್ಸೇ "ಆತ್ಮವು".

6. ನಿಶ್ಚಯಮಾಡುವ ಬುದ್ಧಿಯನ್ನುಳಿದು ಮನಸ್ಸೆಂಬುದಿಲ್ಲ, ಬುದ್ಧಿ ಒಳಗಿದೆ. ಮನಸ್ಸು ಹೊರಗಿದೆ. ಬುದ್ಧಿಯು ನಿಶ್ಚಯಿಸಬಲ್ಲದು. ಮನಸ್ಸಿಗೆ ಈ ಶಕ್ತಿ ಇಲ್ಲ, ಬುದ್ಧಿಯು ತನ್ನ ಮುಂದಿರುವ ಮೂರನ್ನೂ ಏಕಕಾಲಕ್ಕೆ ವಿಷಯೀಕರಿಸುತ್ತದೆ. ಆದ್ದರಿಂದ ಮನಸ್ಸು ಮೊದಲಾದ ಮೂರಕ್ಕೂ ಬುದ್ಧಿಯೇ "ಆತ್ಮ".

7. "ನಾನು" ಎಂಬುದಿಲ್ಲದೆ ಬುದ್ಧಿಗೆ ಅಸ್ತಿತ್ವವಿಲ್ಲ. ನಾನೇ ಬುದ್ಧಿಯಾಗಿ ನಿಶ್ಚಯಿಸುವೆನು, ಮನಸ್ಸಾಗಿ ಆಲೋಚಿಸುವೆನು, ಇಂದ್ರಿಯಗಳಾಗಿ ನೋಡುವೆನು.

8. "ನಾನು" ಭೋಕ್ತೃವು. ಬುದ್ಧಿಗೆ ಭೋಗ ಮಾಡಲು ಬಾರದು. ಬುದ್ಧ್ಯಾದಿ ಮುಂದಿನ ಎಲ್ಲವುಗಳನ್ನೂ "ನಾನು" ವಿಷಯೀಕರಿಸುತ್ತೇನೆ. ಇವು ಯಾವುದರಿಂದಲೂ "ನಾನು" ಎಂಬುದನ್ನು ವಿಷಯೀಕರಿಸಲಾಗುವುದಿಲ್ಲ.

9. ಪ್ರಮಾಣ ವ್ಯವಹಾರವೆಲ್ಲಕ್ಕೂ "ನಾನು" ಎಂಬುದೇ (ಪ್ರಮಾತೃವೇ) ಆಧಾರ. ಪ್ರಮಾಣಗಳಿಂದ 'ನಾನು' ಸಿದ್ಧವಾಗಿಲ್ಲ. "ನಾನು" ವಿನಿಂದಲೇ ಪ್ರಮಾಣಗಳೆಲ್ಲಾ ಸಿದ್ಧವಾಗಿವೆ. ಎಂತಲೇ "ನಾನಿದ್ದೇನೆ" ಎಂಬ ಬಗ್ಗೆ ಯಾರಿಗೂ ಸಂಶಯವು ಎಂದೂ ಬರುವದೇ ಇಲ್ಲ. ಅಂತೂ ಸರ್ವವ್ಯವಹಾರಕ್ಕೂ ಈ "ನಾನು" ಎಂಬುದೇ ಆಧಾರ– "ಆತ್ಮ"ವಾಗಿದೆ. ಯಾವುದೇ "ಇದೆ" ಎನ್ನಬೇಕಾದರೆ ಮೊದಲು "ನಾನು" ಇದ್ದೇ ತೀರಬೇಕು. ಇದಿಲ್ಲದೆ ಇನ್ನೊಂದೆಂಬುದಿರಲೇ ಆರದು.

10. ನಮಗೆ ಎಚ್ಚರದಲ್ಲಿ "ನಾನು" ಹಾಗೂ ಇದಕ್ಕೆ ಹೊಂದಿಕೊಂಡಿರುವ ಸಮಗ್ರ ಪ್ರಪಂಚವೆಲ್ಲವೂ (1) ದೇಹ, ಇಂದ್ರಿಯ, ಮನಸ್ಸು, ಪ್ರಾಣ, ಬುದ್ಧಿ ಮೊದಲಾದ ಆಧ್ಯಾತ್ಮಿಕ ಪ್ರಪಂಚ (2) ಆಕಾಶ, ವಾಯು, ಅಗ್ನಿ, ಜಲ, ಭೂಮಿ, ಅನೇಕ ಜನಗಳು, ವಿಷಯಗಳು ಮೊದಲಾದ ಆಧಿಭೌತಿಕ ಪ್ರಪಂಚ (3) ಸೂರ್ಯ, ಚಂದ್ರ ಗ್ರಹ, ನಕ್ಷತ್ರಲೋಕ ಲೋಕಾಂತರಗಳಾದ ಆಧಿದೈವಿಕ ಪ್ರಪಂಚ (4) ನಿನ್ನೆ ಮೊನ್ನೆ ಇಂದು ನಾಳೆ ವರ್ಷ ಯುಗ ಎಂಬ ಅನಂತ ಕಾಲವೂ (Time) (5) ಮೇಲೆ ಕೆಳಗೆ ಹಿಂದೆ ಮುಂದೆ ಅಲ್ಲಿ ಇಲ್ಲಿ ಎಂಬ ಅನಂತವಾದ ದೇಶವೂ (Space) (6) ಇವುಗಳಿಗನುಸರಿಸಿದ ಕಾರ್ಯಕಾರಣಭಾವಗಳೂ ಕಾಣುತ್ತಿರುತ್ತವೆ.

11. ಕನಸಿನಲ್ಲಿಯೂ ಮೇಲೆ ವರ್ಣಿಸಿದ ರೀತಿಯಲ್ಲಿ ಅಲ್ಲಿದ್ದ "ನಾನು" ವನ್ನನುಸರಿಸಿ ಎಚ್ಚರದಂತೆಯೇ ಸರ್ವವೂ ತೋರಿಕೊಳ್ಳುತ್ತಿರುತ್ತದೆ. ಇವುಗಳಲ್ಲಿ ಎಂದರೆ ಎಚ್ಚರಕನಸುಗಳಲ್ಲಿ ಒಂದು ತೋರುವಾಗ ಇನ್ನೊಂದು ತೋರಲಾರದು. ಇಷ್ಟೇ ಅಲ್ಲ, ಎಲ್ಲಿಯೂ ಇರಲೇ ಆರದು.

12. ಇನ್ನು ಗಾಢನಿದ್ರೆಯಲ್ಲಿ ಈ 'ನಾನು' ಮೊದಲುಗೊಂಡು ಇದರ ಈ ಯಾವ ಪರಿವಾರವೂ ಇರುವುದಿಲ್ಲ ಎಂಬುದು ಸರ್ವರಿಗೂ ಅನುಭವಗಮ್ಯವಾದದ್ದು.

13. ಈ ಅನುಭವವನ್ನು ನಾವು ಈಗಿನ ಎಚ್ಚರದ 'ನಾನು'ನಿಂದ, ಇದರ ಸಾಧನೆಗಳಾದ ಬುದ್ಧಿ ಮನಸ್ಸು ಮಾತುಗಳ ಮುಖಾಂತರ ಹೊರಪಡಿಸುವೆವಾದರೂ ಈ ಅನುಭವವು ಮಾತ್ರ ಈ 'ನಾನಿ'ನ ಕ್ಷೇತ್ರಕ್ಕೆ ಸೇರಿದ್ದಲ್ಲ. ಏಕೆಂದರೆ ''ನಾನು'' ಎಂಬುದಿದ್ದಿಲ್ಲ ಎಂಬುದೇ ಈ ಅನುಭವವಾಗಿದೆ.

14. ಎಚ್ಚರ ಕನಸುಗಳಲ್ಲಿ ಒಂದೊಂದು ಬಗೆಯ ''ನಾನು'' ಇರುವುದನ್ನೂ ನಿದ್ರೆಯಲ್ಲಿ ಅದಾವುದೂ ಇಲ್ಲದ್ದನ್ನೂ ಹೇಳುವ ಈ ಅನುಭವವು ಇಂದ್ರಿಯ ಬುದ್ಧಿ ಮನಸ್ಸು ''ನಾನು'' ಮುಂತಾದವುಗಳಲ್ಲಿ ಏತಕ್ಕೂ ಒಳಪಟ್ಟದ್ದಲ್ಲ. ಈ ಅನುಭವಕ್ಕೆ ''ತಾನು'' ಎಂಬ ಹೆಸರನ್ನು ಸದ್ಯಕ್ಕೆ ವಿಷಯವನ್ನು ತಿಳಿಯುವ ಸೌಲಭ್ಯಕ್ಕೋಸ್ಕರ ಇಟ್ಟುಕೊಳ್ಳೋಣ.

ಈಗ ನೀವು ನಿಮ್ಮ ಬುದ್ಧಿಯಿಂದ ಹೊರಗಿನ ವಿಷಯಗಳ ಬಗ್ಗೆ ಹಾಗೂ ನಾನಿನ ಬಗ್ಗೆ ವಿಚಾರಿಸುವುದನ್ನು ನಿಲ್ಲಿಸಿ ಸದ್ಯ ಸ್ವಲ್ಪ ಸಮಯವಾದರೂ ಈ 'ತಾನು' ಎಂಬ ಅನುಭವದ ಸ್ಮರಣೆ ಮಾಡಿಕೊಂಡು ಅತ್ತ ಗಮನಿಸಿರಿ.

15. ನಿದ್ರೆಯಲ್ಲಿ ನೀವಿರುವ ಬಗೆಯನ್ನು ಕುರಿತು ವಿಚಾರಿಸಲು ಹೊರಡಿರಿ ಹಾಗೂ ಅಲ್ಲಿದ್ದ ಅನುಭವವನ್ನು ಸರಿಯಾಗಿ ಈ ಬುದ್ಧಿಯಲ್ಲಿ ಇಳಿಸಿಕೊಳ್ಳಿರಿ.

16. ಈಗ ನಿಮ್ಮಲ್ಲಿ ಈ ಮೊದಲಿಲ್ಲದ ಹೊಸದೊಂದು ವೃತ್ತಿಯು ಹುಟ್ಟುತ್ತದೆ. ಅದೇನೆಂದರೆ 'ನಾನು' ಹಾಗೂ ಅದರ ಪರಿವಾರವಿಲ್ಲದೆಯೇ 'ತಾನು' ಇದೇನೆ. ಇದಕ್ಕೆ ನಿದ್ರೆಯೇ ಪ್ರಮಾಣ. ಆ 'ತಾನು' ವನ್ನು ಬಿಟ್ಟು ಎಚ್ಚರವಾಗಲಿ ಕನಸಾಗಲಿ ಇರುವದಿಲ್ಲ. ಆದರೆ ಎಚ್ಚರವಿಲ್ಲದಿದ್ದರೂ ಕನಸಿಲ್ಲದಿದ್ದರೂ ಸ್ವತಂತ್ರವಾಗಿ ''ತಾನು'' ಇದ್ದೇ ಇದೆ ಎಂಬ ವೃತ್ತಿಯನ್ನು ಗಟ್ಟಿಯಾಗಿ ಪಟ್ಟು ಹಿಡಿಯಿರಿ.

17. ಈ ಹಿಂದೆ ''ನಾನು'' ಎಂಬುದು ನ್ಯಾಯಾಧೀಶನಾಗಿ ತನ್ನೆದುರಿನ ಎಲ್ಲಕ್ಕೂ ನಿರ್ಣಯ ಕೊಡುತ್ತಿತ್ತಲ್ಲವೆ? ಈಗ ಈ ''ತಾನು'' ಎಂಬ ಅನುಭವವನ್ನನುಸರಿಸಿದ ವೃತ್ತಿಯನ್ನು ನ್ಯಾಯಾಧೀಶನ ಸ್ಥಾನಕ್ಕೆ ಕೂಡಿಸಿ ಈ ''ನಾನು'' ವನ್ನು ಕೆಳಗೆ (Witness Box) ಆರೋಪಿ ಸ್ಥಾನದಲ್ಲಿ ನಿಲ್ಲಿಸಿ ಈ ಕೆಳಗಿನ ನಿರ್ಣಯಗಳು ಬರುವವರೆಗೂ ಮತ್ತೆಮತ್ತೆ ವಿಚಾರ ಮಾಡುತ್ತಲೂ ಅನುಭವದಲ್ಲಿ ನಿಂತು ನಿಂತು ನೋಡುತ್ತಲೂ ಮೊದಲು ಸಾಕಿಕೊಂಡ ಗಟ್ಟಿಯಾಗಿರುವ ಪೂರ್ವಗ್ರಹ ಗಳನ್ನು ಸಡಿಲಿಸುತ್ತಲೂ ಇದಕ್ಕೆ ಪೋಷಕವಾಗಿ ಈ ಕ್ರಮವನ್ನರಿತವರ ಸಂಗ ಶ್ರವಣಾದಿಗಳನ್ನು ಮಾಡುತ್ತಲೂ ''ನಾನು'' ಹಾಗೂ ಅದಕ್ಕೆ ಸಂಬಂಧಪಟ್ಟ ವಿಚಾರಗಳ ಚಿಂತೆಯಿಂದ ಈ ಪ್ರಸ್ತುತ ವಿಚಾರವು ಕೆಡದಂತೆ ಬಲ್ಲವರ

ಸಲಹೆಯೊಂದಿಗೆ ಕರ್ಮಯೋಗ, ನಾಮಸ್ಮರಣೆ, ಭಗವದ್ಭಾವನೆ, ಸರ್ವಕರ್ಮ ಸಮರ್ಪಣೆ, ವಿಷಯ ಭೋಗದಲ್ಲಿ ದೋಷದರ್ಶನ ಮುಂತಾದ ಸಾಧನೆಗಳನ್ನು ಮಾಡುತ್ತಲೂ ಎಚ್ಚರದಿಂದಿರಿ. ಸಂತತ ಪ್ರಯತ್ನಿಸಿರಿ, ಧೈರ್ಯಗೆಡದಿರಿ. ಕೊನೆಗೆ ಈ ನಿರ್ಣಯಗಳು ಬಂದು ಅಲ್ಲಿಯೇ ನಿಶ್ಚಿತವಾಗಿ ನೆಲೆನಿಲ್ಲುವಿರಿ. ಯಾರು ಕರ್ಮಯೋಗ ಉಪಾಸನಾದಿಗಳನ್ನು ಈ ಜನ್ಮದಲ್ಲಿಯಾಗಲಿ ಜನ್ಮಾಂತರದಲ್ಲಿಯಾಗಲಿ ಮಾಡಿಕೊಂಡು ಅಮಾನಿತ್ವಾದಿ ಗುಣಗಳನ್ನೂ ಶಮದಮಾದಿ ಸಾಧನೆಗಳನ್ನೂ ಹೊಂದಿದವರಾಗಿರುವರೋ ಅವರಿಗೆ ಈ ಯೋಗದಲ್ಲಿ ಸುಲಭವಾಗಿ ಪ್ರವೇಶವು ದೊರೆಯುತ್ತದೆ. ಯಾರಿಗೆ ಪ್ರಯತ್ನಿಸಿದರೂ ಈ ಯೋಗದಲ್ಲಿ ಗತಿಯು ಬರುವದಿಲ್ಲವೋ ಅಂಥವರು ಪೂರ್ವಸಾಧನೆಗಳಲ್ಲಿ ಉಂಟಾಗಿರುವ ಕೊರತೆಯನ್ನು ಪೂರೈಸಿಕೊಳ್ಳಲು ಅವುಗಳನ್ನು ಬಲ್ಲವರ ಸಲಹೆಯೊಂದಿಗೆ ಆಚರಿಸುತ್ತಿರಬೇಕು. ಹಾಗೂ ಆತ್ಮವಿಚಾರದ ಶ್ರವಣ ಮನನಗಳನ್ನೂ ನಡೆಸುತ್ತಿರಬೇಕು. ಮನಸ್ಸು ಒಳಕ್ಕೆ ಬಂದಾಗ ಶ್ರವಣಾದಿಗಳನ್ನೂ ಮನಸ್ಸು ಬಾಹ್ಯಕ್ಕೆ ಬಂದರೆ ಕರ್ಮಯೋಗಾದಿ ಗಳನ್ನೂ ಆಚರಿಸುತ್ತಾ ಪ್ರಯತ್ನ ಮಾಡುತ್ತಿರಬೇಕು.

||ಓಂ ಶಾಂತಿಃ ಶಾಂತಿಃ ಶಾಂತಿಃ||

## 14. ಅದ್ವಿತೀಯಾತ್ಮಾನುಭವ

### (ಜುಲೈ 1995)

ಅದ್ವಿತೀಯಾತ್ಮಾನುಭವದ ಸ್ವರೂಪವನ್ನು ಹೀಗೆ ಅರ್ಥಮಾಡಿಕೊಳ್ಳಬೇಕು:

1. ತಾನು, ತನ್ನಲ್ಲಿ ಎಚ್ಚರದ ಅವಸ್ಥೆ– ಆ ಅವಸ್ಥೆಯಲ್ಲಿ 'ನಾನು' ಹಾಗೂ ಪ್ರಪಂಚ ಎಂಬ ಭೇದ–ಎಂಬ ಅನುಭವವನ್ನು ಮೊದಲು ಗ್ರಹಿಸಬೇಕು.

2. ತನ್ನಲ್ಲಿಯೇ ತೋರಿದ ಕನಸಿನ ಅವಸ್ಥೆಯನ್ನು ತಾನೇ ಪರಿಪೂರ್ಣವಾಗಿ ವ್ಯಾಪಿಸಿದಂತೆ ಈ ಎಚ್ಚರವೆಲ್ಲವನ್ನೂ ತಾನೇ ವ್ಯಾಪಿಸಿದ್ದಾನೆ.

3. ಆದ್ದರಿಂದ ತಾನು ಇಲ್ಲಿಯವರೆಗೆ, ಇಲ್ಲಿಂದೀಚೆಗೆ ಎಚ್ಚರದ ಅವಸ್ಥೆ ಎಂದು ಗಡಿಯನ್ನು ತೋರಿಸುವದು ಅಸಾಧ್ಯ. ಸಕ್ಕರೆಯಲ್ಲಿ ನಿರ್ಮಿಸಿದ ಆನೆಯಲ್ಲಿ ಇಲ್ಲಿಯವರೆಗೆ ಸಕ್ಕರೆ, ಇಲ್ಲಿಂದೀಚೆಗೆ ಆನೆ ಎಂದು ಮೇರೆಯನ್ನು ಹೇಗೆ ಗೊತ್ತುಮಾಡಲಾಗುವದಿಲ್ಲವೋ ಹಾಗೆಯೇ ಇದೂ ಸಹ.

4. ತಾನಾಗಿರುವ ಸಾಕ್ಷಿಸ್ವರೂಪವು ಕಾಲದೇಶಾದಿಭಾವಗಳನ್ನು ಮೀರಿ ಇರುವದರಿಂದ ಅದನ್ನು ಒಂದು ಎಂದು ಹೇಳಲಾಗದು. ಹಾಗೆಯೇ ಎಚ್ಚರದ ಅವಸ್ಥೆಯೊಳಗೇ ಕಾಲದೇಶಾದಿಭಾವಗಳಿರುವದರಿಂದ ಅವಸ್ಥೆಯೂ ಸಹ ಕಾಲದಲ್ಲಿ, ದೇಶದಲ್ಲಿ ಆಗುವ ಘಟನೆಯಲ್ಲವಾದ್ದರಿಂದ ಇದು ಎರಡನೆಯದು ಎಂದು ಹೇಳುವ ಹಾಗಿಲ್ಲ.

5. ಆದ್ದರಿಂದ ಬರೀ ತಾನೇ ತಾನಾಗಿರುವ ಸ್ವರೂಪವೇ ಸತ್ಯವು, ಎಚ್ಚರದ ಅವಸ್ಥೆಯು ಬರೀ ವಿಕಲ್ಪವು ಎಂದು ನಿರ್ಣಯಿಸಬೇಕಾಗುವದು. ಆದ್ದರಿಂದ ಸರಿಯಾಗಿ ಅರಿತರೆ ಇದೆಲ್ಲವೂ ಬರೀ ತಾನೇ; ಅರಿಯದಿದ್ದಾಗ ಆ ಅದ್ವಿತೀಯನಾದ ತಾನೇ ಎಚ್ಚರದ ಅವಸ್ಥೆಯಾದಂತೆ ತೋರುತ್ತಾನೆ.

ಹೀಗೆ ಆತ್ಮನು ಯಾವಾಗಲೂ ಅದ್ವಿತೀಯನೇ ಎಂಬುದನ್ನು ಲಕ್ಷಿಸಿದಾಗ–ಎಚ್ಚರದ ಅವಸ್ಥೆಯನ್ನೆಲ್ಲಾ ತಾನೇ ವ್ಯಾಪಿಸಿರುವದನ್ನು ಕಂಡಾಗ–ಪ್ರಪಂಚವು ಉಪಶಮವಾಯಿತು. ಕೇವಲಾತ್ಮಸ್ವರೂಪವು ಮಾತ್ರವೇ ಮಿಕ್ಕಿರುತ್ತದೆ. ಹೀಗೆ ಅದ್ವಿತೀಯಾತ್ಮಾನುಭವವೇ ಈ ವಿವೇಕಕ್ಕೆ ಪ್ರಯೋಜನವಾಗಿರುತ್ತದೆ. ಈಗ ಪ್ರಯೋಜನವನ್ನು ಬಯಸುವ 'ನಾನು', ನನಗೆ ಆಗಬೇಕಾದ ಪ್ರಯೋಜನ, ಅದಕ್ಕೆ ಸಾಧನ ಮೊದಲಾದದ್ದೆಲ್ಲವೂ ಬಾಧಿತವಾಗಿ ಕೇವಲಾತ್ಮ ಸ್ವರೂಪದಲ್ಲಿಯೇ ನೆಲೆನಿಲ್ಲುವದೆಂಬುದೇ ವಿವೇಕದ ಕೊನೆಯಲ್ಲಿ ಬರತಕ್ಕ ಫಲ. ಇದನ್ನು ಬೃಹದಾರಣ್ಯಕದ 2–4–14 ರಲ್ಲಿ **ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಜಿಘ್ರತಿ ||** ಎಂಬ ಮಾತಿನಿಂದ ಎಲ್ಲಿ ಅವಿದ್ಯೆಯಿಂದ ದ್ವೈತವಿರುವಂತೆ ಕಾಣುವದೋ ಅಲ್ಲಿ ಒಬ್ಬನು ತನಗನ್ಯವಾದ ಘ್ರಾಣೇಂದ್ರಿಯದಿಂದ (ಮೂಗಿನಿಂದ) ಅದಕ್ಕೆ ಬೇಕಾದ (ಎಂದರೆ ಇಂದ್ರಿಯಕ್ಕೆ ಬೇಕಾದ) ವಾಸನೆಯನ್ನು ಮೂಸುತ್ತಾನೆ–ಎಂದು ಹೇಳಿದೆ. ಇದೇ ಅವಿದ್ಯಾದೃಷ್ಟಿ. ಆದರೆ ಮೇಲೆ ಹೇಳಿದ ವೇದಾಂತಶಾಸ್ತ್ರದ ಪರಿಪೂರ್ಣದೃಷ್ಟಿಯ ಪ್ರಕಾರ **ಯತ್ರ ತ್ವಸ್ಯ ಸರ್ವಂ ಆತ್ಮೈವ ಅಭೂತ್ ತತ್ರ ಕೇನ ಕಂ ಜಿಘ್ರೇತ್?** ಎಲ್ಲಿ ಈ ಬ್ರಹ್ಮವೇತ್ತನಿಗೆ ಎಲ್ಲವೂ ಆತ್ಮನೇ ಆಯಿತೋ ಅರ್ಥಾತ್ ತಾನಲ್ಲದ ಜಾಗ್ರದವಸ್ಥೆ ಎಂಬುದೇ ಇಲ್ಲ ಎಂದಾಯಿತೋ ಆಗ ಯಾವನು ಏತರಿಂದ ಏನನ್ನು ಮೂಸುವನು? (ನೋಡುವನು, ಕೇಳುವನು, ಅರಿಯುವನು ಇತ್ಯಾದಿ) ಎಂದು ಎಲ್ಲ ವ್ಯವಹಾರವೂ ಅದ್ವಿತೀಯಾತ್ಮಾನುಭವದಿಂದ ಬಾಧಿತವಾಗುವದನ್ನೇ ಇಲ್ಲಿ ತಿಳಿಸಿರುತ್ತದೆ. ಇದೇ ಅದ್ವಿತೀಯಾತ್ಮಾನುಭವವು. ಈ ರೀತಿಯಾಗಿ ಎಚ್ಚರದ ಅವಸ್ಥೆಯು ಅಧ್ಯಾರೋಪದಿಂದ ಈ ಆತ್ಮನೇ ಎಲ್ಲವೂ ಆಗಿರುವಂತೆ ತೋರಿದ್ದಾನೆಂದು ಆರೋಪಿಸಿ ಆತ್ಮನಲ್ಲಿ

ವೈಶ್ವಾನರತ್ವದ ಅಧ್ಯಾರೋಪಮಾಡಿ ಈಗಿನ 'ನಾನು' ಇಂಥವನು ಎಂಬ ಅಧ್ಯಾಸವನ್ನು ಕಳೆಯುತ್ತದೆ. ಆ ಬಳಿಕ ಆತ್ಮನ ವ್ಯಾಪ್ತಿಯನ್ನು ಕಂಡಾಗ ವೈಶ್ವಾನರತ್ವವೂ ಬಾಧಿತವಾಗಿ ವೈಶ್ವಾನರನಾಗಿ ತೋರುವವನು ನಿಜವಾಗಲೂ ನಿಷ್ಪ್ರಪಂಚನಾದ ತುರೀಯನಾಗಿರುವ ನೆಂದು ತಿಳಿಸಿರುವದೇ ಇಲ್ಲಿ ಅನುಸರಿಸುವ–ಅಧ್ಯಾರೋಪ ಅಪವಾದ ಪ್ರಕ್ರಿಯೆಯು.

ಹೀಗೆ ಇಡೀ ಎಚ್ಚರದ ಅವಸ್ಥೆಯೇ ಬಾಧಿತವಾಗಿ ಅದ್ವಿತೀಯ ಆತ್ಮ ಮಾತ್ರವೇ ಮಿಗಿಲಾದಾಗ ಈ ಎಚ್ಚರದ ಅವಸ್ಥೆಯೊಳಗಿನ ಕಲ್ಪನೆಗಳಾದ ನಿದ್ರೆ, ಕನಸು ಎಂಬ ಭಾವನೆಗಳೂ ಬಾಧಿತವಾಗುತ್ತದೆ. ಇಲ್ಲಿ ಗಮನಿಸಬೇಕಾದ ಮುಖ್ಯ ವಿಷಯ ಹೀಗಿದೆ:

ನಾವು ಈಗ ತಿಳಿದಿರುವಂತೆ 'ಇದು ಎಚ್ಚರ, ಇದಲ್ಲದೆ ನಮಗೆ ನಿದ್ರೆ ಎಂಬ ಅವಸ್ಥೆಯೊಂದುಂಟು. ಅದೂ ಅಲ್ಲದೆ ಆ ನಿದ್ರೆಯಲ್ಲಿಯೆ ಅಲ್ಪ ಕಾಲ ಕನಸು ಆಗುತ್ತಿರುತ್ತದೆ' ಎಂದು ಅನಿಸುತ್ತದೆ. ಆದರೆ ಇದರಲ್ಲಿ ನಿಜವೇನೆಂದರೆ–ತಾನೇ ತಾನಾಗಿರುವ ಆತ್ಮಸ್ವರೂಪನಾದ ತನ್ನಲ್ಲಿ ಯಾವದೇ ದ್ವೈತಾವಸ್ಥೆಯು ತೋರಿದಾಗಲೂ ಅದು ಆಗ 'ಇದು ಎಚ್ಚರ–ಇದೇ ಸತ್ಯ' ಎನಿಸಿರುತ್ತದೆ. ಹಾಗೂ ಆಗ ಈ ಅವಸ್ಥೆಯೇ ಅಲ್ಲದೆ ನಮಗೆ ಕನಸು ಎಂಬ ಒಂದವಸ್ಥೆಯೂ, ಮಲಗಿದಾಗ ನಿದ್ರೆ ಎಂಬ ಅವಸ್ಥೆಯೂ ಇದಕ್ಕಿಂತ ಬೇರಾಗಿ ಇದ್ದೇ ಇವೆ ಎನಿಸುತ್ತದೆ. ಉದಾಹರಣೆಗೆ ನಾವು ಒಂದು ಕನಸಿನಲ್ಲಿದ್ದೇವೆಂದು ಭಾವಿಸಿರಿ. ಆಗ ಅದು ಎಚ್ಚರವೆಂದೇ ಅನಿಸುವದಲ್ಲದೆ ಇದಲ್ಲದೆ ಕನಸು ನಿದ್ರೆಗಳೂ ನಮಗಿವೆ ಎಂದೇ ಅನಿಸುತ್ತದೆ. ಆದರೆ ಎಚ್ಚೆತ್ತಾಗ ಅದೆಲ್ಲವೂ ಕನಸೇ, ಹುಸಿತೋರಿಕೆಯೇ ಎಂದಾಗುವದರಿಂದ ಅಲ್ಲಿರುವಾಗ ಅನಿಸಿದ (ಆ ಅವಸ್ಥೆಗಿಂತ ಬೇರಾಗಿ ನಿದ್ರೆ, ಕನಸುಗಳಿವೆ ಎಂದುಕೊಂಡಿರುವ) ಎಲ್ಲ ಭಾವಗಳೂ ಬರೀ ವಿಕಲ್ಪಗಳೇ ಆಗುತ್ತವೆ. ಹೀಗೆಯೇ ಈಗಿನ ಈ ಎಚ್ಚರದ ಸ್ಥಿತಿಯೂ ಇದೆ. ಆದ್ದರಿಂದ ಅವಸ್ಥಾತ್ರಯಗಳಿವೆ ಎಂಬುದೇ ವಿಕಲ್ಪ, ತಪ್ಪು ತಿಳಿವಳಿಕೆಯ ಫಲ ಎಂದು ಸಿದ್ಧವಾಗುತ್ತದೆ. ಇದನ್ನೇ ಐತರೇಯ ಉಪನಿಷತ್ತಿನಲ್ಲಿ **ತಸ್ಯ ತ್ರಯ ಆವಸಥಾಃ ತ್ರಯಃ ಸ್ವಪ್ನಾಃ** । (ಐ. 1–3–12) ಈ ಆತ್ಮನಿಗೆ ಈ ಮೂರು ಅವಸ್ಥೆಗಳು. ಇವು ಮೂರು ಸ್ವಪ್ನಗಳು–ಎಂಬುದು ಇದರ ಅರ್ಥವು. ಶ್ರೀಸುರೇಶ್ವರಾಚಾರ್ಯರು ತಮ್ಮ ಬೃಹದ್ವಾರ್ತಿಕದಲ್ಲಿ **ಸುಪ್ತಃ ಪ್ರಬುದ್ಧ ಇತ್ಯೇವಂ ಸ್ವಪ್ನಂ ಪಶ್ಯತಿ ಚೇತಿ ಯಃ। ವಿಕಲ್ಪ ಏಷ ಭೂತಾನಾಂ ಅವಿದ್ಯಾ ರಾತ್ರಿಶಾಯಿನಾಂ॥** (ಬೃ.ವಾ.) ಎಂದಿದ್ದಾರೆ. 'ನಾನು ಮಲಗಿದ್ದೆ, ಈಗ ಎಚ್ಚೆತ್ತಿದ್ದೇನೆ. ಮಧ್ಯೆ ಯಾವಾಗಾದರೂ ಕನಸನ್ನು ಕಾಣುತ್ತೇನೆ' ಎಂಬೀ ಪರಿಯಲ್ಲಿ–ತಮ್ಮ ಆತ್ಮಸ್ವರೂಪವನ್ನರಿಯದಿರುವದೆಂಬ ಅವಿದ್ಯಾರೂಪದ ರಾತ್ರಿಯಲ್ಲಿ ಮಲಗಿದವರಾಗಿ–ಜನರು ಬಡಬಡಿಸುತ್ತಿದ್ದಾರೆ ಎಂದಿದ್ದಾರೆ.

# 15. ಸ್ವಪ್ನದೃಷ್ಟಿಯ ವಿವೇಚನೆ

## (ಜುಲೈ 2004)

## (ಶಾಂಕರವೇದಾಂತ ಸೌರಭ ಗ್ರಂಥದಿಂದ)

ಶ್ರೀ ಶಂಕರರ ಪ್ರಸ್ಥಾನತ್ರಯಭಾಷ್ಯಗಳಲ್ಲಿರುವ ಅತ್ಯವಶ್ಯ ವಿಷಯಗಳನ್ನು ಸಂಗ್ರಹಿಸಿರುವ 'ಕೈಪಿಡಿ' ಮತ್ತೆ ಮತ್ತೆ ಮನನ ಚಿಂತನೆಗಳನ್ನು ಮಾಡಿ ನಿಶ್ಚಿತ ತಿಳಿವಳಿಕೆಯನ್ನು ಪಡೆಯಲು ಸಾಧನವಾಗಿರುವ ಪಠ್ಯಪುಸ್ತಕ **ಶಾಂಕರವೇದಾಂತ ಸೌರಭ.**

**ಸ್ವಪ್ನದೃಷ್ಟಿಯ ವಿವೇಚನೆ** : ಕೇವಲ ತಾನೇ ತಾನಾದ ಆತ್ಮಸ್ವರೂಪದ ದೃಷ್ಟಿಯಿಂದ ಮಾತ್ರವೇ ಜಾಗ್ರತ್ ಸ್ವಪ್ನಗಳು ತನ್ನಲ್ಲಿ ತೋರಿ ಅಡಗುವ ಹುಸಿತೋರಿಕೆಗಳು. ಇವುಗಳ ನಿಜವು ಆತ್ಮನೇ ಎಂಬ ನಿರ್ಣಯದ ದೃಷ್ಟಿಯಿಂದ ಎಚ್ಚರ–ಕನಸು ಎರಡೂ ಒಂದೇ ಆಗಿವೆ. ಆತ್ಮವಿಜ್ಞಾನವು ಬಂದೊಡನೆಯೇ ಎಚ್ಚರದ ಅವಸ್ಥೆಯೂ ಸಹ ಬಾಧಿತವಾಗಿ ಬಿಡುತ್ತದೆ. ಆದ್ದರಿಂದ ಎಚ್ಚರ, ಕನಸು ನಿಜವಾಗಿಯೂ ಸಹ ಬಾಧಿತವಾಗಿ ಬಿಡುತ್ತದೆ. ಆದ್ದರಿಂದ ಎಚ್ಚರ, ಕನಸು, ನಿಜವಾಗಲೂ ಆತ್ಮನಾಗಿದೆ. ಆತ್ಮನೇ ಇರತಕ್ಕದ್ದು. ಎಚ್ಚರ ಕನಸುಗಳು ಯಾವಾಗಲೂ ಇಲ್ಲ ಎಂಬುದನ್ನು ತಿಳಿಸಲೋಸುಗವೇ ಈ ಸ್ವಪ್ನಾನುಭವ ದೃಷ್ಟಿಯ ವಿಮರ್ಶೆಯು ಬಂದಿದೆ– ಎಚ್ಚರ ಕನಸುಗಳೆಂಬ ಮಾತು – ಪ್ರತ್ಯಯಗಳನ್ನು ಬಳಸುವಾಗ 'ನಾವು' (ನಾನು) ಆತ್ಮರಾಗಿರುತ್ತೇವೆ. ಕೇವಲ ತಾನಾಗಿ ಉಳಿದಾಗ ಈ ಮಾತುಗಳೇ ಇಲ್ಲ. ಇದನ್ನು ಚೆನ್ನಾಗಿ ಗ್ರಹಿಸುವುದಕ್ಕೆ ಪ್ರಕರಣವು ಬಂದಿದೆ. ಆದ್ದರಿಂದ ಇದು ಬೌದ್ಧರ ಮೊಂಡುವಾದವಲ್ಲ, ವೇದಾಂತದ ಅನುಭವಪೂರ್ಣವಾದ ಅದ್ವಯಾತ್ಮಬೋಧವು.

ಒಂದ ಕನಸಿನಲ್ಲಿದ್ದಾಗ ಅಲ್ಲಿ ನಮಗೆ ಯಾರಾದರೊಬ್ಬರು ''ಈಗಿರುವ ಈ ಎಚ್ಚರದ ಜಗತ್ತು ಸಹ ಕನಸಿಗೆ ಸಮವಾದದ್ದೇ ಆಗಿದೆ''– ಎಂದು ಹೇಳಿದಾಗ 'ಎಂದಿಗೂ ಎಚ್ಚರ ಕನಸುಗಳು ಸಮಾನವಾಗುವದೇ ಇಲ್ಲ' ಎಂದು ಪ್ರತಿಭಟಿಸುತ್ತೇವೆ. ಏಕೆಂದರೆ ಅಗ ಅದೇ ಎಚ್ಚರವೆನಿಸುತ್ತಿದ್ದು 'ಇದಲ್ಲದ ಕನಸೊಂದಿದೆ' ಎಂಬ ಭಾವನೆಯೇ, ಹಾಗೂ ಆಗಿನ ಕಾಲದೇಶಕಾರ್ಯಕಾರಣಭಾವಗಳು ನಿತ್ಯ ಸತ್ಯ ಅನಂತ ಅಪಾರವಾಗಿಯೇ ಇರುವವೆಂದು ನಮಗೆ ಆಗನಿಸುತ್ತಿರುತ್ತದೆ. ಈ ಮಾತನ್ನು ಚೆನ್ನಾಗಿ ಮನದಂದರೆ ಎಚ್ಚರದ ಅಭಿಮಾನವೆಂಬ ಪಿಶಾಚಿಯು ಓಡಿಹೋಗುತ್ತದೆ.

ಶ್ರೀಶಂಕರಾಚಾರ್ಯರು 'ಆತ್ಮನನ್ನರಿಯದಿರುವಾಗ ನಾವು ಆತ್ಮನನ್ನೇ ಜಗತ್ತು ಎಂದು ವಿಕಲ್ಪಿಸುತ್ತೇವೆ. ಇದಕ್ಕೆ ಮಿಥ್ಯಾಜ್ಞಾನ (ತಪ್ಪುತಿಳುವಳಿಕೆ) ಎನ್ನುತ್ತಾರೆ' ಎಂದು

ತಿಳಿಸಿ ಒಂದು ದೃಷ್ಟಾಂತವನ್ನು ಅನುಭವದಲ್ಲಿ ತೋರಿಸಿದ್ದಾರೆ. ''ಯಥಾ ಹಿ ಅವಿಭಾಗೇಽಪಿ ಪರಮಾತ್ಮನಿ ಮಿಥ್ಯಾಜ್ಞಾನಪ್ರತಿಬದ್ಧೋ ವಿಭಾಗವ್ಯವಹಾರಃ ಸ್ವಪ್ನವತ್ ಅವ್ಯಾಹತಃ ಸ್ಥಿತೌ ದೃಶ್ಯತೇ, ಏವಮೇವ ಅಪೀತಾವಪಿ ಮಿಥ್ಯಾಜ್ಞಾನ ಪ್ರತಿಬದ್ಧೈಃ। ವಿಭಾಗಶಕ್ತಿಃ ಅನುಮಾಸ್ಯತೇ'' (ಸೂ, ಭಾ. 2–1–9)–ಯಾವ ವಿಭಾಗವೂ ಇಲ್ಲದ ಪರಮಾತ್ಮನಲ್ಲಿ ಹೇಗೆ ಮಿಥ್ಯಾಜ್ಞಾನ ನಿಮಿತ್ತವಾದ ವ್ಯವಹಾರವೂ ಕನಸಿನಲ್ಲಿರುವಂತೆ ಯಾವ ಅಡ್ಡಿಯೂ ಇಲ್ಲದೆ (ಅವ್ಯಾಹತವಾಗಿ ಅರ್ಥಾತ್ ನಿರಂತರವಾಗಿರುವಂತೆ) ಸ್ಥಿತಿಕಾಲದಲ್ಲಿ (ಎಂದರೆ ಈಗಿನ ಎಚ್ಚರದ ಜಗತ್ತಿನ ಸ್ಥಿತಿಕಾಲದಲ್ಲಿ ) ಕಾಣಬರುತ್ತಿರುವದೋ ಹಾಗೆ ಪ್ರಲಯದಲ್ಲಿಯೂ ಮಿಥ್ಯಾಜ್ಞಾನ ನಿಮಿತ್ತವಾಗಿಯೇ (ಎಂದರೆ ತಪ್ಪು ತಿಳಿವಳಿಕೆಯು ತೊಲಗದಿರುವದರಿಂದಲೇ) ಈ ಜಗತ್ತು ವಿಭಾಗಶಕ್ತಿಯನ್ನಿಟ್ಟುಕೊಂಡೇ ಲಯವಾಗಿದೆ– ಎಂದು ಅನುಮಾನದಿಂದ ಕಲ್ಪಿಸಬಹುದಾಗಿದೆ– ಎಂಬುದು ಈ ವಾಕ್ಯದ ಅರ್ಥವು. ಇಲ್ಲಿ ''ಸ್ವಪ್ನವತ್ ಅವ್ಯಾಹತಃ'' ಎಂಬ ವಿಶೇಷಣದ ಸ್ವಾರಸ್ಯವೇನೆಂದರೆ – ನಾವು ಕನಸಿನಲ್ಲಿದ್ದಾಗ ಅಲ್ಲಿಯ ಆ ಪ್ರಪಂಚವು ಕಡಿವಡೆಯದೆ ಅನಾದಿ ಅನಂತವಾಗಿರುವ ಹಾಗೆಯೇ ಅನೇಕ ಸಲ ಸೃಷ್ಟಿಪ್ರಲಯಗಳನ್ನು ಹೊಂದುತ್ತಾ ಇರುವ ಸತ್ಯವಾದ ಪ್ರಪಂಚವೆಂದೇ ಭಾವಿಸುತ್ತೇವೆ. ಹಾಗೆಯೇ ಪರಮಾರ್ಥಜ್ಞಾನವಿಲ್ಲದಾಗ ಈ ಪ್ರಪಂಚವೂ ಅನೇಕಸಲ ಸೃಷ್ಟಿ ಪ್ರಲಯಗಳಾಗುತ್ತಾ ಅನಾದಿ ಅನಂತವಾಗಿರುವದೆಂದೇ ಅನಿಸುವದು ನ್ಯಾಯವಾಗಿದೆ. ಇದರಿಂದ ನಾವು ತಿಳಿಯಬೇಕಾದದ್ದೆಂದರೆ ಕನಸಿನಲ್ಲಿರುವಾಗ ಆ ಪ್ರಪಂಚವೇ ಸತ್ಯ, ನಿತ್ಯ . ಎಚ್ಚರದಲ್ಲಿ ಈ ಪ್ರಪಂಚವೇ ಸತ್ಯ, ನಿತ್ಯ. ಪರಮಾರ್ಥ ವಾಗಿ ಎರಡೂ ಹುಸಿತೋರಿಕೆಗಳು ; ವ್ಯಾವಹಾರಿಕವಾಗಿ ಕನಸಿಗಿಂತ ಎಚ್ಚರವು ಹೆಚ್ಚು ಸತ್ಯವೆಂದು ತೋರುತ್ತದೆ. ಆದರೆ ಪರಮಾರ್ಥದೃಷ್ಟಿಯನ್ನೇ ಅವಲಂಬಿಸಲು ಎಚ್ಚರದ ಅವಸ್ಥೆ ಇದೆ ಎಂಬುದನ್ನು ಕೈಬಿಟ್ಟು ಕೇವಲ ಕನಸಿನಲ್ಲಿಯೇ ಇದ್ದ ಅನುಭವಮಾತ್ರವನ್ನೇ ತೆಗೆದುಕೊಂಡರೆ ಎಚ್ಚರದ ಅವಸ್ಥೆಯ ಅಭಿಮಾನವೂ, ಸತ್ಯಬುದ್ಧಿಯೂ ಹೊರಟುಹೋಗಿ ಹೇಗೆ ಕನಸಿನ ಪರಮಾರ್ಥವು ಕೇವಲಾತ್ಮನೋ ಹಾಗೆಯೇ ಎಚ್ಚರದ ಪರಮಾರ್ಥವೂ ಕೇವಲಾತ್ಮನೇ ಆಗಿದೆ ಎಂಬ ಅನುಭವದಲ್ಲಿ ನೆಲೆನಿಲ್ಲಲು ಹೆಚ್ಚು ಅನುಕೂಲವಾಗುವದು. ಇದೇ ಎಚ್ಚರ ಸ್ವಪ್ನಗಳ ಅಧ್ಯಾರೋಪ–ಕೇವಲ ಅದ್ವಿತೀಯನಾದ ಆತ್ಮನ ಬೋಧ ಎಂಬ ಪ್ರಕ್ರಿಯೆಯು.

# 16. ಭಗವದ್ಭಕ್ತ ಸಂತಶ್ರೇಷ್ಠ ಶ್ರೀಶಂಕರರು

## (ಏಪ್ರಿಲ್ 2005)

ಈಶ್ವರಶರಣಾಗತಿ, ಭಗವದ್ಭಕ್ತಿಗಳನ್ನು ಲೋಕದಲ್ಲಿ ಸಕಲ ಸಾಧು ಸಂತರೂ, ಮಹಾತ್ಮರೂ ಶಿವಶರಣರೂ, ಜನರಿಗೆ ಬೋಧಿಸುತ್ತಾ ಬಂದಿದ್ದಾರೆ. ಭಗವದ್ಭಕ್ತಿಯು ಮೋಕ್ಷಕ್ಕೆ, ಸಾರ್ವಜನೀನ, ಸಾರ್ವಕಾಲಿಕವಾದ ಏಕೈಕ ಸಾಧನ. ಇಂಥ ಈ ಭಕ್ತಿಯನ್ನು ಶ್ರೀಶಂಕರರು ತಮ್ಮ ವಿಪುಲ ಸ್ತೋತ್ರ ಸಾಹಿತ್ಯ, ಭಾಷ್ಯಗಳಲ್ಲಿ ಸುಂದರವಾಗಿ ನಿರೂಪಿಸಿರುವರು.

ಅವಿದ್ಯಾಯವಸ್ಥಾಯಾಂ ಕಾರ್ಯಕರಣಸಂಘಾತವಿವೇಕದರ್ಶಿನೋ ಜೀವಸ್ಯ ಅವಿದ್ಯಾತಿಮಿರಾನ್ಧಸ್ಯ ಸತಃ ಪರಸ್ಮಾದಾತ್ಮನಃ ಕರ್ಮಾಧ್ಯಕ್ಷಾತ್ ಸರ್ವಭೂತಾಧಿ ವಾಸಾತ್ ಸಾಕ್ಷಿಣಃ ಚೇತಯಿ ತುಃ ಈಶ್ವರಾತ್ ತದನುಜ್ಞಯಾ ಕರ್ತೃತ್ವ ಭೋಕ್ತೃತ್ವ ಲಕ್ಷಣಸ್ಯ ಸಂಸಾರಸ್ಯ ಸಿದ್ಧಿಃ । ತದನುಗ್ರಹೇತುಕೇನೈವ ಚ ವಿಜ್ಞಾನೇನ ಮೋಕ್ಷ ಸಿದ್ಧಿರ್ಭವಿತುಮರ್ಹತಿ (ಸೂ.ಭಾ. 2.3.41)– ಅವಿದ್ಯೆಯ ಅವಸ್ಥೆಯಲ್ಲಿ ಶರೀರೇಂದ್ರಿಯ–ಮನಸ್ಸು–ಬುದ್ಧಿ ಮುಂತಾದವುಗಳ ಗುಂಪನ್ನೂ ನಿಜವಾಗಿ ತಾನಾಗಿರುವ ತನ್ನ ಸ್ವರೂಪವನ್ನೂ ವಿಂಗಡಿಸಿಕೊಳ್ಳದೆ ಅವಿವೇಕದಿಂದ 'ಇದೇ ನಾನು' ಎಂದುಕೊಂಡು ಅವಿದ್ಯೆಯ ಕಣ್ಣುಪೊರೆಯಿಂದ ಕುರುಡನಾದ ಜೀವನಿಗೆ ಪರಮಾತ್ಮನೂ, ಕರ್ಮಾಧ್ಯಕ್ಷನೂ, ಸರ್ವಭೂತಗಳಲ್ಲಿರುವವನೂ, ಸಾಕ್ಷಿಯೂ, ಎಲ್ಲರಿಗೂ ಚೈತನ್ಯವೀಯುವವನೂ ಆದ ಈಶ್ವರನ ಅನುಜ್ಞೆಯಿಂದಲೇ ಜೀವನಿಗೆ ಕರ್ತೃತ್ವ, ಭೋಕ್ತೃತ್ವರೂಪದ ಸಂಸಾರದಸಿದ್ಧಿಯು. ಎಂದರೆ ಕರ್ಮಕ್ಕೆ ತಕ್ಕ ಫಲವಾಗುವದು ಹಾಗೂ ಈಶ್ವರನ ಅನುಗ್ರಹದಿಂದಲೇ ಆತ್ಮವಿಜ್ಞಾನದಿಂದ ಮೋಕ್ಷ ಸಿದ್ಧಿಯು ಆಗುತ್ತದೆ. ಇದು ಈಶ್ವರಶರಣಾಗತಿ. ಅಜ್ಞರ ಕಾಮ್ಯಭಕ್ತಿಗೂ ಸಹ ಈಶ್ವರ ಶರಣಾಗತಿಯು ಬೇಕು.

''ಏವಂ ಭಗವತಃ ಸತ್ಯಪ್ರತಿಜ್ಞತ್ವಂ ಬುದ್ಧ್ವಾ ಭಗವದ್ಭಕ್ತೇಃ ಅವಶ್ಯಂಭಾವಿ ಮೋಕ್ಷಫಲಂ ಅವಧಾರ್ಯ ಭಗವಚ್ಛರಣೈಕಪರಾಯಣೋ ಭವೇತ್ ಇತಿ ವಾಕ್ಯಾರ್ಥಃ (ಗೀತಾಭಾಷ್ಯ 18–65) – ಭಗವಂತನು ಸತ್ಯಪ್ರತಿಜ್ಞನು ಎಂಬುದನ್ನು ನಿಶ್ಚಯಿಸಿ ಅವನ ಪ್ರಾಪ್ತಿಯೇಬೇಕೆಂದು ಭಗವಂತನಿಗೆ ಶರಣಾಗುವುದೊಂದೇ ಕೊನೆಯ ಸಾಧನೆ, ಅದರಲ್ಲಿಯೇ ನಿರತನಾಗಬೇಕು.

ಭಕ್ತೇಃ ಪುನಃ ಗ್ರಹಣಾತ್ ಭಕ್ತಿಮಾತ್ರೇಣ ಕೇವಲ ಶಾಸ್ತ್ರಸಂಪ್ರದಾನೇ ಪಾತ್ರಂ ಭವತಿ ಇತಿ ಗಮ್ಯತೇ (ಗೀತಾಭಾಷ್ಯ 18–68) – ಬರಿಯ ಭಕ್ತಿಮಾತ್ರದಿಂದಲೇ ಈ ಗೀತಾಶಾಸ್ತ್ರವನ್ನು ಅರಿಯುವದಕ್ಕೆ ಪಾತ್ರನಾಗುತ್ತಾನೆ, ಯೋಗ್ಯನಾಗುತ್ತಾನೆ, ಜ್ಞಾನನಿಷ್ಠೆಗೆ ಬೇಕಾಗುವ ಎಲ್ಲಸಾಧನಗಳನ್ನೂ ಅಮಾನಿತ್ವಾದಿಗಳು, ಬುದ್ಧಿವಿಶುದ್ಧತ್ವಾದಿ ಸಾಧನಗಳೂ ಭಗವಂತನ ಅನುಗ್ರಹದಿಂದ ಲಭ್ಯವಾಗಿ ಆತ್ಮವಿಜ್ಞಾನವೂ ದೊರಕುತ್ತದೆ. ಆತ್ಮಜ್ಞಾನ ರೂಪದ ಪರಾಭಕ್ತಿಯೇ ಗೀತಾಶಾಸ್ತ್ರದ ಪರಮಬೋಧವು.

'ಸ್ವಕರ್ಮಣಾ ಭಗವತಃ ಅಭ್ಯರ್ಚನಭಕ್ತಿಯೋಗಸ್ಯ ಸಿದ್ಧಿಪ್ರಾಪ್ತಿಃ ಫಲಂ ಜ್ಞಾನ ನಿಷ್ಠಾಯೋಗ್ಯತಾ ಯನ್ನಿಮಿತ್ತಾ ಜ್ಞಾನನಿಷ್ಠಾ ಮೋಕ್ಷಫಲಾವಸಾನಾ । ಸ ಭಗವದ್ಭಕ್ತಿ ಯೋಗಃ ಅಧುನಾ ಸ್ತೂಯತೇ ಶಾಸ್ತ್ರಾರ್ಥ ಉಪಸಂಹಾರಪ್ರಕರಣೇ ಶಾಸ್ತ್ರಾರ್ಥ–ನಿಶ್ಚಯದಾರ್ಢ್ಯಾಯ ॥' ತನ್ನ ಕರ್ಮಗಳನ್ನು ಭಗವಂತನಿಗೆ ಅರ್ಪಿಸುವುದರಿಂದ ಭಕ್ತಿಯೋಗ, (ಜಿಜ್ಞಾಸಾ ಭಕ್ತಿ) ಅದರ ಫಲವೇ ಜ್ಞಾನನಿಷ್ಠೆ, ಅದರಿಂದ ನೇರಾದ ಮೋಕ್ಷ ಎಂಬುದು ಆಚಾರ್ಯರು ತಿಳಿಸಿರುವ ಸಾಧನಕ್ರಮವು. ಕರ್ಮಯೋಗ, ಭಕ್ತಿಯೋಗ (ಧ್ಯಾನಯೋಗವೂ ಸೇರಿದಂತೆ) ಜ್ಞಾನನಿಷ್ಠೆ, ಮೋಕ್ಷ ಇವು ಗೀತಾಶಾಸ್ತ್ರದ ಸಾಧನ ಸೋಪಾನಗಳು.

ಶ್ರೀ ಶಂಕರರು ಶ್ರೇಷ್ಠ ಭಗವದ್ಭಕ್ತರು, ಶ್ರೇಷ್ಠ ಸಂತರು ಎಂಬ ಮನವರಿಕೆಯನ್ನು ನೀಡುತ್ತದೆ. ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀಮಹಾಸ್ವಾಮಿಗಳಂತೆ 'Shankara is not a logician, but a saint –ಶಂಕರರು ತಾರ್ಕಿಕರಲ್ಲ, ಸಂತರು.

# ಭಾಗ 3

# ಇತರ ಲೇಖನಗಳು

## 1. ಕ್ಷೇತ್ರಕ್ಷೇತ್ರಜ್ಞರ ಜ್ಞಾನ

### (10.11.1991ರಲ್ಲಿ ಜಿಜ್ಞಾಸುವಿನ ಪ್ರಶ್ನೆಗೆ ಬರೆದ ಉತ್ತರ )

ಪ್ರಶ್ನೆ : ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರಿಂದ ವಿರಚಿತ ''ಭಗವದ್ಗೀತೆಯ ಉಪನ್ಯಾಸಗಳು'' ಭಾಗ 2 ಪುಟ 3, (5ನೆಯ ಮುದ್ರಣ)ದಲ್ಲಿ ''ಈ ಶರೀರವನ್ನು ಯಾವ ಆತ್ಮನು ತನ್ನ ಜ್ಞಾನದಿಂದ ವಿಷಯೀಕರಿಸುತ್ತಿರುವನೋ ಅವನೇ ಕ್ಷೇತ್ರಕ್ಷೇತ್ರಜ್ಞ'' ಎಂದು ಹೇಳಿದೆ. ಇದು ಶರೀರ–ಇಂದ್ರಿಯ–ಮನ–ಬುದ್ಧಿ ಮೊದಲಾದವುಗಳನ್ನು ನಾನೇ ನೇರಾಗಿ ಅರಿಯುವದರಿಂದ ಇಲ್ಲಿನಾನೆಂಬುವ ಈ ಜೀವ ಭಾವವೇ ಕ್ಷೇತ್ರಜ್ಞನೆನಿಸಬಲ್ಲನೇ? ಇದರ ಹೊರತಾಗಿ ಬೇರೆ ಜ್ಞಾನ ಎಂಬುದು ಇರಲಾರದು

ಮುಂದೆ ಇದೇ ಪುಟ 5ರಲ್ಲಿ ''ಕ್ಷೇತ್ರಕ್ಷೇತ್ರಜ್ಞರ ಜ್ಞಾನ ವು ಎಂದರೆ, ಕ್ಷೇತ್ರದಿಂದ ಕ್ಷೇತ್ರಜ್ಞನನ್ನು ವಿಂಗಡಿಸಿಕೊಂಡು ಅರಿಯುವ ಜ್ಞಾನವೇ ಜ್ಞಾನವು, ಮಿಕ್ಕಿದ್ದೆಲ್ಲವೂ ಅಜ್ಞಾನವೇ''

ಮೇಲೆ ಹೇಳಿದಂತೆ ಈ ಶರೀರವೇ ಕ್ಷೇತ್ರ, ಅದನ್ನು ಅರಿಯುವವನೇ ಎಂದರೆ 'ನಾನೇ' ಕ್ಷೇತ್ರಜ್ಞ ಎಂದ ಬಳಿಕ ಮತ್ತೆ ಇಲ್ಲಿ ತಿಳಿಯಪಡಿಸಿದಂತೆ, ಇವೆರಡರ –ಕ್ಷೇತ್ರ–ಕ್ಷೇತ್ರಜ್ಞರ ಜ್ಞಾನವೇ ಜ್ಞಾನವೆಂದು ಹೇಳಿರುವುದು ಯಾವ ಅರ್ಥ ಎಂಬುದು ತಿಳಿಯದಾಗಿದೆ. ಇಲ್ಲಿ ಕ್ಷೇತ್ರ – ಕ್ಷೇತ್ರಜ್ಞರೆಂದು ವಿಷಯೀಕರಿಸುವ ಜ್ಞಾನವು ಯಾವದು ಎಂಬುದು ನಿಮ್ಮ ಪ್ರಶ್ನೆ.

ಭಗವದ್ಗೀತೆಯ 13ನೆಯ ಅಧ್ಯಾಯದ 1ನೇ ಶ್ಲೋಕದಲ್ಲಿ ''ಈ ಶರೀರವು ಕ್ಷೇತ್ರ. ಇದನ್ನು ಆಪಾದ ಮಸ್ತಕವೂ (ಕಾಲಿನ ಉಗುರಿನಿಂದ ತಲೆಯವರೆಗೂ) ವ್ಯಾಪಿಸಿ, 'ಇದು ನನ್ನ ಶರೀರ' ಎಂದು ಅರಿಯುವವನು ಕ್ಷೇತ್ರಜ್ಞನು'' ಎಂಬ ವಾಕ್ಯದಲ್ಲಿ 'ಕ್ಷೇತ್ರಜ್ಞ' ಎಂದರೆ 'ನಾನು ಇಂಥವನು (ಳು) ಎಂಬ ಅಹಂಪ್ರತ್ಯಯನಾದ ಜೀವನು' ಎಂದೇ ಅರ್ಥ. ಇಲ್ಲಿ 'ಸ್ವಾಭಾವಿಕೇನ ಔಪದೇಶಿಕೇನ ವಾ' ಎಂಬ ವಾಕ್ಯದಲ್ಲಿಯ ಸ್ವಾರಸ್ಯ ವೇನೆಂದರೆ :–

'ಸ್ವಾಭಾವಿಕೇನ' ಎಂದರೆ (1) ನಾನು ಮನುಷ್ಯ– ಹೆಂಗಸು–ಗಂಡಸು–ಮುದುಕ–ಹುಡುಗ ಇತ್ಯಾದಿ ಭಾವಗಳಿಂದ ಅರಿಯುವದು ಎಂಬುದು **ಒಂದು ಅರ್ಥ.** (2) ಎರಡನೆಯದು, ನಾನು ಶರೀರಕ್ಕಿಂತ ಬೇರೆಯಾಗಿದ್ದು ಜನ್ಮಾಂತರ ಲೋಕಾಂತರಗಳಿಗೆ ಕರ್ಮಫಲಕ್ಕನುಗುಣವಾಗಿ ಹೋಗತಕ್ಕವನು ಎಂಬುದು **ಎರಡನೆಯ ಅರ್ಥ.** (3) ಇನ್ನು ಅನುಭವರೂಪನೂ, ಚಿನ್ಮಾತ್ರನೂ, ಅಸಂಗನೂ ಆಗಿರುವ ತಾನು ಕನಸಿನ ಶರೀರವನ್ನು ವ್ಯಾಪಿಸಿದಂತೆ ಈ ಶರೀರವನ್ನು ವ್ಯಾಪಿಸಿದವನಾಗಿ ಅರಿಯುವವನು, ಅರ್ಥಾತ್ ಬೆಳಗುವವನು ಎಂಬುದು **ಮೂರನೆಯ ಅರ್ಥ.** ಈ ಮೂರರಲ್ಲಿ ಮೊದಲನೆಯದು 'ಸ್ವಾಭಾವಿಕೇನ' ಎಂದರೆ ಅವಿದ್ಯಾಸ್ವಭಾವದಿಂದ ಅರಿಯುವದು. ಎರಡನೆಯದು ಧರ್ಮ–ಶಾಸ್ತ್ರ ದೃಷ್ಟಿಯಿಂದ ಶರೀರಕ್ಕಿಂತ ಬೇರೆಯಾಗಿರುವ ತನ್ನನ್ನು ಅರಿಯುವದು. ಮೂರನೆಯದು ವೇದಾಂತದ ಪರಮಾರ್ಥ ದೃಷ್ಟಿಯಿಂದ ಅರಿಯುವದು. ಇದೂ ಶಾಸ್ತ್ರದೃಷ್ಟಿಯೇ ಆಗಿದೆ. ಎರಡನೆಯದು ವೈದಿಕ ವ್ಯವಹಾರ ದೃಷ್ಟಿ. ಮೊದಲನೆಯದು ಲೌಕಿಕವ್ಯವಹಾರದೃಷ್ಟಿ. ಮೂರನೆಯದು ಪರಮಾರ್ಥದೃಷ್ಟಿ. 'ಸ್ವಾಭಾವಿಕೇನ' ಎಂಬುದು ಲೌಕಿಕದೃಷ್ಟಿಯನ್ನೂ, 'ಔಪದೇಶಿಕೇನ' ಎಂಬುದು ವೈದಿಕ ವ್ಯವಹಾರ ಹಾಗೂ ಪರಮಾರ್ಥದೃಷ್ಟಿಗಳನ್ನೂ ತೋರಿಸುತ್ತದೆ. 'ಔಪದೇಶಿಕೇನ' ಎಂದರೆ ಶಾಸ್ತ್ರ ಹಾಗೂ ಗುರುಗಳ ಉಪದೇಶದ ದೃಷ್ಟಿಯಿಂದ ಎಂದರ್ಥ. ಇದು ಹೀಗಿದ್ದರೂ ಈ 1ನೇ ಶ್ಲೋಕದಲ್ಲಿ ಕೇವಲ ವ್ಯಾವಹಾರಿಕ ಹಾಗೂ ವೈದಿಕ ವ್ಯವಹಾರ ದೃಷ್ಟಿಗಳನ್ನೇ ಮುಖ್ಯವಾಗಿ ಹಿಡಿದಿರುತ್ತದೆ. ಆದ್ದರಿಂದ ಎರಡನೆಯ ಶ್ಲೋಕದಲ್ಲಿ 'ಕ್ಷೇತ್ರಜ್ಞಂಚಾಪಿಮಾಂವಿದ್ಧಿ....'' ಎಂಬಲ್ಲಿ , 'ಮಾಂಪರಮೇಶ್ವರಂ ಅಸಂಸಾರಿಣಂ ವಿದ್ಧಿ ಜಾನೀಹಿ । ಸರ್ವಕ್ಷೇತ್ರೇಷು ಯಃ..... ಇತಿ ಅಭಿಪ್ರಾಯಃ॥' ಎಂದಿದ್ದಾರೆ. ಬ್ರಹ್ಮಾದಿಸ್ತಂಭ ಪರ್ಯಂತವಾದ ಎಲ್ಲರ ಆತ್ಮನಾಗಿ ಯಾವ ಉಪಾಧಿಗಳೂ ಎಂದೂ ಇಲ್ಲದವನಾಗಿ ಸತ್–ಅಸತ್ ಎಂಬ ಪ್ರತ್ಯಯಗಳಿಗೆ ಅಗೋಚರನಾಗಿ (ಶಬ್ದಗಳಿಗೂ ಅಗೋಚರನಾಗಿ) ಇರುವವನೇ ನಿಜವಾದ ಕ್ಷೇತ್ರಜ್ಞನೆಂದು ತಿಳಿ ಎಂಬುದು ಈ ವಾಕ್ಯದ ತಾತ್ಪರ್ಯವು. ಇಲ್ಲಿ ಪರಮಾರ್ಥ ದೃಷ್ಟಿಯನ್ನು ಉಪಯೋಗಿಸಿ ಮೊದಲಿನ ಶ್ಲೋಕದಲ್ಲಿ ಹೇಳಿದ ಲೌಕಿಕ, ವೈದಿಕ ವ್ಯವಹಾರ ದೃಷ್ಟಿಗಳನ್ನು ಅಲ್ಲಗಳೆದಿವೆ, ಬಾಧಿತಗೊಳಿಸಿವೆ. ಒಟ್ಟಿನಲ್ಲಿ ಮೊದಲನೆಯ ಶ್ಲೋಕದಲ್ಲಿ ಕ್ಷೇತ್ರಜ್ಞ ಎಂದರೆ, ನಾನು ಇಂಥವನು(ಳು) ಎಂಬ ಅಹಂಪ್ರತ್ಯಯನು–ಜೀವನು. (Ego- or I notion), ಎರಡನೆಯ ಶ್ಲೋಕದಲ್ಲಿ ತಾನೇ ತಾನಾಗಿರುವ ಕೇವಲ ಅದ್ವಿತೀಯ– ಸಾಕ್ಷಿ ಸ್ವರೂಪನು, ಎಂಬುದು ಸಾರಾಂಶವು. ಶರೀರದಲ್ಲಿರುವವನಾಗಿ ಸುಖದುಃಖಗಳನ್ನು ಅನುಭವಿಸುವವನಾಗಿ, ಯಾವ ಜೀವನು ಕಾಣುವನೋ ಆ ಜೀವನು (ಅನೇಕ ಉಪಾಧಿಗಳಲ್ಲಿ ಕಾಣುವ ಎಲ್ಲ

ಜೀವರೂ ಸಹ) ಪರಮಾರ್ಥವಾಗಿ ಅಸಂಸಾರಿಯಾದ ಕೇವಲಾತ್ಮಸ್ವರೂಪನೇ (ಸ್ವರೂಪರೇ) ಆಗಿರುವನೆಂಬುದನ್ನು ಅನುಭವದಲ್ಲಿ ಕಂಡುಕೊಳ್ಳುವದೇ ಕ್ಷೇತ್ರ–ಕ್ಷೇತ್ರಜ್ಞರ ಜ್ಞಾನವು. ಈಗ ಮೊದಲನೆಯ ಶ್ಲೋಕದಲ್ಲಿ ಹೇಳಿದ ಕ್ಷೇತ್ರಜ್ಞನೂ ಸಹ ಕ್ಷೇತ್ರದಲ್ಲಿಯೇ ಸೇರಿಹೋಗುತ್ತಾನೆ. ಇದು ಕ್ಷೇತ್ರ ಕ್ಷೇತ್ರಜ್ಞಶಬ್ದಗಳ ಉಪಯೋಗದ ಪದ್ಧತಿ. ಇನ್ನು ಕ್ಷೇತ್ರ ಕ್ಷೇತ್ರಜ್ಞರನ್ನು ವಿಷಯೀಕರಿಸುವ ಜ್ಞಾನ ಎಂದರೇನು ? ''ಏನ ಜ್ಞಾನೇನ ಕ್ಷೇತ್ರ ಕ್ಷೇತ್ರಕ್ಷೇತ್ರಜ್ಞೌ ವಿಷಯೀಕ್ರಿಯೇತೇ '' ಎಂಬ ಮಾತಿನಿಂದ ಹೇಳಿದ ಜ್ಞಾನಸ್ವರೂಪವೇನು ? ಎಂಬುದನ್ನು ನೋಡೋಣ.

## ಜ್ಞಾನದ ಸ್ವರೂಪ

13ನೇ ಅಧ್ಯಾಯದ ಕೊನೆಯಲ್ಲಿ ಎಂದರೆ 34ನೇ ಶ್ಲೋಕದಲ್ಲಿರುವ, ''ಕ್ಷೇತ್ರ ಕ್ಷೇತ್ರಜ್ಞಯೋಃ ಏವಮಂತರಂ ಜ್ಞಾನ ಚಕ್ಷುಷಾ'' ಎಂಬಲ್ಲಿ ಭಾಷ್ಯದಲ್ಲಿ ಹೇಳಿದ ''ಶಾಸ್ತ್ರಾಚಾರ್ಯಪ್ರಸಾದ ಉಪದೇಶಜನಿತಂ ಆತ್ಮಪ್ರತ್ಯಯಿತಂ ಜ್ಞಾನಂ ಚಕ್ಷುಃ '' ಎಂಬ ಮಾತಿನಿಂದ ಹೇಳಿದ ಆತ್ಮಪ್ರತ್ಯಯವೇ ಈ ಜ್ಞಾನವು. ಈ ಬಗ್ಗೆ 'ಸೌರಭ'ದಲ್ಲಿರುವ 'ಆತ್ಮಪ್ರತ್ಯಯ' (ಪುಟ 306) 'ಆತ್ಮಸ್ವರೂಪವೂ ಆತ್ಮಪ್ರತ್ಯಯವೂ' (ಪುಟ 312ರಲ್ಲಿ) ಹಾಗೂ 'ವಿದ್ಯೆಯ ಸ್ವರೂಪ' (ಪುಟ 168)ಇವುಗಳನ್ನು ಚೆನ್ನಾಗಿ ಲಕ್ಷ್ಯವಿಟ್ಟು ನೋಡಬೇಕು. ಇದನ್ನೇ ಆತ್ಮಾವಗತಿ– ಅವಗತಿ ಎಂದು ಹೇಳುತ್ತಾರೆ. 18ನೇ ಅಧ್ಯಾಯದ 55ನೇ ಶ್ಲೋಕದ ಭಾಷ್ಯದಲ್ಲಿ ''ಯತ್ ಆತ್ಮಾನುಭವ ನಿಶ್ಚಯ ಅವಸಾನತ್ವಂ'' ಎಂಬುದರಲ್ಲಿಯೂ ಹೇಳಿದ ಜ್ಞಾನನಿಷ್ಠೆಯೇ ಈ ಕ್ಷೇತ್ರ ಕ್ಷೇತ್ರಜ್ಞರ ಜ್ಞಾನವು. ''ಯಾವ ಜ್ಞಾನದಿಂದ ಕ್ಷೇತ್ರ ಕ್ಷೇತ್ರಜ್ಞಗಳೆರಡೂ ವಿಷಯೀಕರಿಸಲ್ಪಡುವವೋ ಆ ಜ್ಞಾನವು'' ಎಂಬುದು ಇದೇ ಆಗಿದೆ. ''ಗೀತಾ ಶಾಸ್ತ್ರಾರ್ಥ ವಿವೇಕಃ'' ಎಂಬ ಸಂಸ್ಕೃತ ಗ್ರಂಥದಲ್ಲಿ (ಪುಟ 109–110ರಲ್ಲಿ) ಶ್ರೀಗಳವರು ಈ ವಿಷಯವನ್ನು ಬಹಳ ಸ್ಪಷ್ಟವಾಗಿ ಬರೆದಿದ್ದಾರೆ. (ಎ) ಕ್ಷೇತ್ರಕ್ಷೇತ್ರಜ್ಞರ ಜ್ಞಾನ ಎಂದರೆ ಆತ್ಮನ ಸ್ವರೂಪವೇ ಆದ 'ಜ್ಞ' ಸ್ವರೂಪವಲ್ಲ (ಬಿ) ಇಂದ್ರಿಯ ಅಂತಃಕರಣ (ಮನಸ್ಸು), ಇವುಗಳಲ್ಲಿ ಉಂಟಾಗುವ ಪ್ರತ್ಯಯಾನುಭವ – ವೇದನಾನುಭವಗಳಲ್ಲ. ಅರ್ಥಾತ್ ಪ್ರತ್ಯಕ್ಷಾದಿವಿಷಯಗಳ, ಇಲ್ಲವೇ ಸುಖದುಃಖಾದಿ ಭಾವನೆಗಳ ಜ್ಞಾನದಂತೆಯೂ ಅಲ್ಲ. ಒಟ್ಟಿನಲ್ಲಿ ಇದು ವೃತ್ತಿಜ್ಞಾನವಲ್ಲ, ಏಕೆಂದರೆ ವೃತ್ತಿಜ್ಞಾನ ಸಂಪಾದನೆಗೆ ಅಮಾನಿತ್ವಾದಿ ಸಾಧನೆಗಳೂ, ವೈರಾಗ್ಯಾದಿಗಳೂ, ಶಾಸ್ತ್ರಾಚಾರ್ಯರ ಉಪದೇಶಾದಿಗಳೂ ಅವಶ್ಯವಾಗಿರುವದಿಲ್ಲ. ಚುರುಕಾದಿಬುದ್ಧಿಶಕ್ತಿ ಇದ್ದುಬಿಟ್ಟರೆ ಹೊರಗಿನ ವಿಷಯಗಳ ಬಗ್ಗೆ, ಒಳಗಿನ ಭಾವಗಳ ಬಗ್ಗೆ ತಿಳಿಸಿಹೇಳುವ ಸಾಯಿಂಟಿಸ್ಟರು, ಪ್ರೊಫೆಸರರು,

ಶಾಲಾಮಾಸ್ತರರು ಮುಂತಾದವರ ಬೋಧನ ಸಹಾಯವಿದ್ದರೆ ಸಾಕು, ಆ ವೃತ್ತಿಜ್ಞಾನಗಳು ಉಂಟಾಗುತ್ತವೆ. ಅವುಗಳ ಸಂಪಾದನೆಗೆ ''ಇಂದ್ರಿಯಾರ್ಥೇಷು ವೈರಾಗ್ಯಂ'' ಮೊದಲಾದ ಜ್ಞಾನಸಾಧನೆಗಳೂ ವಿರುದ್ಧವೇ ಆಗುತ್ತವೆ. ಆದರೆ ಈ ಕ್ಷೇತ್ರಕ್ಷೇತ್ರಜ್ಞರ ಜ್ಞಾನವು ''ಅಮಾನಿತ್ವಾದಿ ಭಾವನಾ ಪರಿಪಾಕ ನಿಮಿತ್ತಂ' ತತ್ತ್ವಜ್ಞಾನಂ.....'' (ಗೀ–ಭಾ. 13–11) ಮುಂತಾಗಿ ಬರೆದ ಆಚಾರ್ಯರ ಉಕ್ತಿಯಂತೆ ಈ ಜ್ಞಾನವು ತನ್ನ ವೃತ್ತಿತ್ವವನ್ನು ಬಾಧಿಸಿಕೊಂಡು ಆತ್ಮನಂತೆಯೇ ಭಾವಿಸುತ್ತಿರುವ ಅಂತಃಕರಣಸ್ಥಿತಿಯು. ಕೆಂಡದಲ್ಲಿ ಬಿದ್ದ ಕಟ್ಟಿಗೆ ಸುಟ್ಟ ಬಳಿಕ ಕಾಣುವ ಆಕಾರ ಮಾತ್ರದಿಂದ ಈ ಜ್ಞಾನವು ಇರುತ್ತದೆ. ಬೆಂಕಿಗೆ ಆಕಾರವಿಲ್ಲ. ಹಾಗೆಯೇ ಆತ್ಮನ ಸ್ವರೂಪ ಭೂತಜ್ಞಾನವು 'ಜ್ಞ' ಸ್ವರೂಪವು. ಅಲ್ಲಿ ಜ್ಞಾನಾಜ್ಞಾನ ವ್ಯವಹಾರವಿಲ್ಲ. ಇಲ್ಲಿ ಈ ಆತ್ಮ ಪ್ರತ್ಯಯವು (ನಿಶ್ಚಿತ ವಿಜ್ಞಾನವು ಅಥವಾ ಅವಗತಿಯು) ವೃತ್ತಿಯಂತೆ ತೋರಿದರೂ ಆತ್ಮವ್ಯಾಪ್ತವಾಗಿರುವದರಿಂದ ತಾನೂ ಬಾಧಿತವಾಗಿ ಇತರ ದ್ವೈತ ಪ್ರಪಂಚವೆಲ್ಲವನ್ನೂ ಬಾಧಿತಗೊಳಿಸಿ ಕೇವಲಾತ್ಮನನ್ನೇ ಉಳಿಸಿರುತ್ತದೆ.

## ನಿಶ್ಚಿತವಿಜ್ಞಾನದ ಬಗ್ಗೆ

13ನೇ ಅಧ್ಯಾಯದ 26ನೇ ಶ್ಲೋಕದ ಭಾಷ್ಯದಲ್ಲಿ ''ಅಧ್ಯಾಸರೂಪ ಸಂಯೋಗವೇ ಕ್ಷೇತ್ರಕ್ಷೇತ್ರಜ್ಞರ ಸಂಯೋಗ'' ಎಂದು ಹೇಳಿದ ಬಳಿಕ ''ಯಥಾ ಶಾಸ್ತ್ರಂ....... ಏವಂ ನಿಶ್ಚಿತ ವಿಜ್ಞಾನಃ ಯಃ'' ಎಂಬವರೆಗಿನ ಭಾಗವನ್ನು ಚೆನ್ನಾಗಿ ನೋಡಬೇಕು. ಇದರ ಸಾರವೇನೆಂದರೆ :ಕ್ಷೇತ್ರಜ್ಞನು ನಿತ್ಯನಿರುಪಾಧಿಕನೂ, ಸತ್ ಅಸತ್ ಎಂಬ ಶಬ್ದ ಪ್ರತ್ಯಯಗಳಿಗೆ ನಿಲುಕದವನೂ ಆದ ಅದ್ವಿತೀಯ ಬ್ರಹ್ಮತತ್ತ್ವವು. ಅದೇ ನಿಜವಾದ ನಾನು. ಅದೇ ಜ್ಞೇಯವು ಎಂದರೆ ಅರಿಯಬೇಕಾದ ಪರಮಾರ್ಥ ತತ್ತ್ವವು. ''ಜ್ಞೇಯಂ ಬ್ರಹ್ಮ ಸ್ವರೂಪೇಣ ಯಃ ಪಶ್ಯತಿ'' ಅದೇ ನಾನು – ಎಂದು ಅನುಭವದಲ್ಲಿ ಕಂಡುಕೊಳ್ಳುವದು. ಹೀಗೆ ಕಂಡುಕೊಂಡಾಗ, 'ಈಗಿನ ಈ ನಾನು ಇಂಥವನು' ಎಂಬುದು ಬಾಧಿತವಾಗಿ ತಾನೇ ತಾನಾಗಿರುತ್ತಾನೆ. ಇದರಂತೆಯೇ ಕ್ಷೇತ್ರವು (ನಾನೆಂಬ ಅನಿಸುವಿಕೆ ಮೊದಲುಗೊಂಡು ಸರ್ವವೂ ಎಂದರೆ ವ್ಯಕ್ತಾವ್ಯಕ್ತಪ್ರಪಂಚವು) ಮಾಯಾನಿರ್ಮಿತವಾದ ಆನೆ, ಕನಸಿನಲ್ಲಿಯ ವಸ್ತುಗಳು, ಗಂಧರ್ವನಗರಾದಿಗಳಂತೆ ನಿಜವಾಗಿಲ್ಲದಿದ್ದರೂ ನಿಜವಾಗಿ ಇರುವಂತೆ ತೋರುವ ಹುಸಿ ತೋರಿಕೆಗಳು ಎಂಬುದನ್ನು ಅನುಭವದಲ್ಲಿ ಕಂಡುಕೊಳ್ಳುವದೇ ನಿಶ್ಚಿತ ವಿಜ್ಞಾನವು. ಇದನ್ನು 34ನೇ ಶ್ಲೋಕದ ಭಾಷ್ಯದಲ್ಲಿ ''ಕ್ಷೇತ್ರಕ್ಷೇತ್ರಜ್ಞರ ಅಂತರವನ್ನು ನಾನು ಹಿಂದೆ ಹೇಳಿರುವಂತೆ ಹಾಗೂ

ಇವುಗಳ ಭೇದವನ್ನು ಹಿಂದೆ (26ನೇ ಶ್ಲೋಕದಲ್ಲಿ) ತೋರಿಸಿರುವಂತೆ'' ಎಂಬ ಮಾತಿನಿಂದ ಹೇಳಿದ್ದಾರೆ. ಇದೇ ಕ್ಷೇತ್ರಕ್ಷೇತ್ರಜ್ಞರ ಜ್ಞಾನವು.

ಇಲ್ಲಿ ಈ ಜ್ಞಾನದಿಂದ ಕ್ಷೇತ್ರಜ್ಞನನ್ನು ಅರ್ಥಾತ್ ತಾನು ಎಂಬ ಪರಮಾರ್ಥ ತತ್ತ್ವವನ್ನು ವಿಷಯೀಕರಿಸಿಲ್ಲ. ಆದರೆ ಅದು ವಿಷಯೀಕರಿಸಲು ಬಾರದ ಕೇವಲ ತಾನೇ ತಾನಾದ ಚಿನ್ಮಾತ್ರನಾದ (ಅನುಭವ ಸ್ವರೂಪವಾದ) ಅದ್ವಿತೀಯ ತತ್ತ್ವವು. ನಿತ್ಯನಿರುಪಾಧಿಕವಾದದ್ದು ಎಂದು ಅನುಭವದಲ್ಲಿ ಕಂಡಿರುವದೇ ಕ್ಷೇತ್ರಜ್ಞನನ್ನು ವಿಷಯೀಕರಿಸಿದಂತೆ, ಹಾಗೂ ಕ್ಷೇತ್ರವು ಮಾಯಾನಿರ್ಮಿತ ಆನೆಯಂತೆ ಹುಸಿ ತೋರಿಕೆಯು ಎಂಬುದನ್ನು ಅನುಭವದಲ್ಲಿ ಕಂಡುಕೊಂಡಿದ್ದೇ ಕ್ಷೇತ್ರವನ್ನು ವಿಷಯೀಕರಿಸಿದಂತೆ ಎಂದು ತಿಳಿದುಕೊಳ್ಳಬೇಕು. ಇದೇ ಕ್ಷೇತ್ರ ಕ್ಷೇತ್ರಜ್ಞರ ಜ್ಞಾನವು. ಇದೇ ಆತ್ಮಜ್ಞಾನವು, ಬ್ರಹ್ಮಜ್ಞಾನವು ಎಂಬುದು (ಗೀ–13–2ರಲ್ಲಿ ತಿಳಿಸಿದೆ) ಭಗವಂತನ ಮತವು.

## 2. ಪರಮಗುರುಗಳ ಪ್ರಬೋಧ

''ಅಜಂ ಅನಿದ್ರಂ ಅಸ್ವಪ್ನಂ ಅನಾಮಕಂ ಅರೂಪಕಂ ।
ಸಕೃದ್ವಿಭಾತಂ ಸರ್ವಜ್ಞಂ ನೋಪಚಾರಃ ಕಥಂಚನ ॥ – ಗೌ.ಕಾ.3–36

ಶ್ರೀ ಶಂಕರಾಚಾರ್ಯರ ಪರಮಗುರುಗಳಾದ ಶ್ರೀಮತ್ ಗೌಡಪಾದಾಚಾರ್ಯರು ಜಿಜ್ಞಾಸುಗಳಿಗೆ ಬೋಧಿಸಿದ ಮಾಂಡೂಕ್ಯಕಾರಿಕೆಗಳಲ್ಲಿ ಸಾರಾಂಶರೂಪವಾದ ಈ ಕಾರಿಕೆಯು ಅತ್ಯಂತ ಮಹತ್ವದ್ದಾಗಿದೆ.

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ಈ ಕಾರಿಕೆಯ ಅರ್ಥವನ್ನು ಕುರಿತು ಹೇಳುವಾಗ ''ನನಗೆ ಎಚ್ಚರ, ಕನಸು, ನಿದ್ರೆಗಳಿವೆ ಎಂಬ ಕನಸಿನಲ್ಲಿ ಈಗ ಇದ್ದುಹಾಗೆ ಬಡಬಡಿಸುತ್ತಿರುವಿರಿ. ಇದು ಅಜ್ಞಾನ ನಿದ್ರೆಯಿಂದ ಬಂದದ್ದು. ನಿಮ್ಮ ನಿಜವಾದ ಸ್ವರೂಪದ ಜ್ಞಾನವು ಬಂದು ಈ ಅಜ್ಞಾನ ನಿದ್ರೆಯಿಂದ ಎಚ್ಚೆತ್ತಾಗ ನನಗೆ ಎಂದೂ ಎಚ್ಚರ, ಕನಸು, ನಿದ್ರೆಗಳು ಬರಲೇ ಇಲ್ಲವೆಂಬ ಸುಪ್ರಭಾತವು ಅನುಭವದಲ್ಲಿ ಬಂದುಬಿಡುವುದು,'' ಎಂಬುದೇ ಇದರ ಸಾರವು ಎಂದು ಹೇಳಿದ್ದರು.

ಇದನ್ನೇ ಶ್ರೀಶಂಕರರು ಈ ಕಾರಿಕೆಯನ್ನು ವಿವರಿಸುವಾಗ ಅವಿದ್ಯಾ ನಿಮಿತ್ತಂ ಹಿ ಜನ್ಮ ರಜ್ಜುಸರ್ಪವತ್ ಇತಿ ಅವೋಚಾಮ । ಸಾ ಚ ಅವಿದ್ಯಾ ಆತ್ಮಸತ್ಯಾನು

ಬೋಧೇನ ನಿರುದ್ಧಂ । ಅತಃ ಅಜಂ ಎಂದಿದ್ದಾರೆ. ಅವಿದ್ಯೆಯಿಂದಲೇ ಹುಟ್ಟಿದಂತೆ ತೋರುವದೇ ಹೊರತು ಅವಿದ್ಯೆಯು ''ಆತ್ಮನೇ ಸತ್ಯನು. ಆತ್ಮನಲ್ಲದ ಇನ್ನೊಂದೆಂಬುದಿಲ್ಲವೇ ಇಲ್ಲ'' ಎಂಬ ಬೋಧೆಯಿಂದ ಬಾಧಿತವಾಗಲು ನಿತ್ಯವು, 'ಅಜ' ವಾಗಿರುವ – ಎಂದೂ ಹುಟ್ಟಿಲ್ಲದ ಹಾಗೂ (ಅಜ ಎಂಬ ಶಬ್ದ ಪ್ರತ್ಯಯಗಳೂ ಇಲ್ಲದ) ಕೇವಲಾತ್ಮನೇ ಉಳಿಯುವದರಿಂದ ಈ ಪರಮಾರ್ಥ ತತ್ತ್ವವು ಅಜವು. ಅವಿದ್ಯೆ ಎಂಬ ನಿದ್ರೆಯಿಂದ ಎಚ್ಚೆತ್ತಿರುವದರಿಂದ ಅನಿದ್ರವು, ಎಂದಿಗೂ ನಿದ್ರೆ ಎಂಬ ದೋಷವಿಲ್ಲದ್ದು. ಅದ್ವಯಸ್ವರೂಪನಾದ ಆತ್ಮಮಾತ್ರವೇ ಇರುವದರಿಂದ ಆತ್ಮನಿಗಿಂತ ಬೇರೆಯಾಗಿ ದ್ವೈತ ಪ್ರಪಂಚವಿರುವದೆಂದೂ, ಅದು ಸತ್ಯವೆಂದೂ ತಪ್ಪಾಗಿ ತಿಳಿಯುವ ರೂಪದ ವಿಪರೀತಜ್ಞಾನವು ತೊಲಗಿರುವದರಿಂದ ಇದು ಅಸ್ವಪ್ನವು. ವಸ್ತುವನ್ನರಿಯದಿರುವದೇ ನಿದ್ರೆ. ವಿಪರೀತವಾಗಿ ತಿಳಿಯುವದೇ ಕನಸು. ವಿದ್ಯೆಯಿಂದ ಇವೆರಡೂ ಬಾಧಿತವಾದಾಗ ತನ್ನ ಸ್ವರೂಪದಲ್ಲಿ ಎಂದೆಂದಿಗೂ ಇವೆರಡೂ ಇಲ್ಲವೇ ಇಲ್ಲವೆಂಬ ಅನುಭವವೇ ನಿಂತಿರುತ್ತದೆ. ಆದ್ದರಿಂದ ಅಸ್ವಪ್ನವು ಹೀಗೆ ಇನ್ನೊಂದಿಲ್ಲದ ಅದ್ವಿತೀಯನಾದ್ದರಿಂದ ಅನಾಮಕವು – ಎಂದರೆ ಯಾವ ಹೆಸರೂ ಇಲ್ಲದ್ದು. ಅರೂಪಕಂ ಎಂದರೆ ಯಾವ ರೂಪವೂ ಇಲ್ಲದ್ದು. 'ಸಕೃದ್ವಿಭಾತಂ' ನಿತ್ಯವೂ ಚಿನ್ಮಾತ್ರವಾಗಿರುವ ಸ್ವಯಂ ಜ್ಯೋತಿಯು. ತಿಳಿಯದಿರುವದು, ತಿಳಿಯುವದು ಎಂಬ ಭೇದವು. ಭೂಮಿಯ ಮೇಲಿನ ರಾತ್ರಿ ಹಗಲುಗಳಂತೆ ಈ ಬುದ್ಧಿಯಲ್ಲಿ ಆಗುತ್ತಿರುತ್ತವೆ. ಆದರೆ ಈ ಅದ್ವಿತೀಯ ಆತ್ಮಸ್ವರೂಪವು ಸೂರ್ಯನಂತೆ ನಿತ್ಯಚೈತನ್ಯಜ್ಯೋತಿ ಸ್ವಭಾವವುಳ್ಳದ್ದಾಗಿರುವದರಿಂದ ಇದು ಸಕೃದ್ವಿಭಾತವು. ಇದನ್ನೇ ಶ್ರೀಶಂಕರರು ''ಗ್ರಹಣಾಗ್ರಹಣೇಹಿ ರಾತ್ರ್ಯಹನಿ'' ಎಂದು ವಿವರಿಸಿ ಈ ತತ್ತ್ವದಲ್ಲಿ ಅವಿದ್ಯೆ ಎಂಬ ತಮಸ್ಸೇ ಇಲ್ಲದಿರುವದರಿಂದಲೂ ''ನಿತ್ಯ ಚೈತನ್ಯ ಭಾರೂಪತ್ವಾಚ್ಚ'' ಎಂಬ ವಾಕ್ಯಗಳಿಂದ ವಿವರಿಸಿದ್ದಾರೆ. ಅವಿದ್ಯೆ, ವಿದ್ಯೆ ಎಂಬ ವ್ಯವಹಾರವನ್ನೇ ಮೀರಿರುವ ಕೇವಲ ಅರಿವಿನ ಸ್ವರೂಪವೇ ಈ ತಾನು, ಈ ಆತ್ಮನಾದ್ದರಿಂದ ಇದು ಸಕೃತ್‌ವಿಭಾತಂ ಯಾವಾಗಲೂ ಚಿನ್ಮಾತ್ರವು ಎಂಬುದನ್ನು ಇಲ್ಲಿ ಮನದಂದುಕೊಳ್ಳಬೇಕು.

''ಸರ್ವಜ್ಞಂ ಅತ ಏವತತ್ ಸರ್ವಂಚ ತತ್‌ಜ್ಞಪ್ತಿಸ್ವರೂಪಂ ಚ ಇತಿ ಸರ್ವಜ್ಞಂ'' ॥ ಈ ಕಾರಣದಿಂದಲೇ ಈ ಪರಮತತ್ತ್ವವೇ ಎಲ್ಲವೂ ಆಗಿದೆ ಎಂದರೆ ಅವಿದ್ಯಾವಂತರಿಗೆ ಈ ಅದ್ವಿತೀಯ ಆತ್ಮನೇ ಇಡೀ ವಿಶ್ವವಾಗಿರುವಂತೆ ಕಾಣುತ್ತಾನೆ. ಹಾಗೂ ಅದನ್ನೆಲ್ಲವನ್ನೂ ವ್ಯಾಪಿಸಿ ಬೆಳಗುವ ಚಿನ್ಮಾತ್ರನಾದ್ದರಿಂದ ಸರ್ವವೂ 'ಜ್ಞ' ಎಂಬುದೂ ಆಗಿರುವ ಸ್ವರೂಪವಾದ್ದರಿಂದ ಇದು ಸರ್ವಜ್ಞವು. ಇಂಥ ಸ್ವರೂಪವನ್ನು

ಜಿಜ್ಞಾಸುಗಳು ಅನುಭಾವಿಗಳ ಬೋಧವನ್ನನುಸರಿಸಿ ತಮ್ಮಲ್ಲಿ ತಾವು ಕಂಡುಕೊಂಡಾಗ ಈ ಮೇಲೆ ವರ್ಣಿಸಿದ ಕೇವಲಾತ್ಮ ಸ್ವರೂಪರಾಗಿಯೇ ನೆಲೆ ನಿಂತಿರುತ್ತಾರೆ. ಆಗ ಆ ತತ್ತ್ವವೇತ್ತನಿಗೆ ತಿಳಿಯಬೇಕಾದ, ಮಾಡಬೇಕಾದ, ಪಡೆಯಬೇಕಾದ ಯಾವುದೂ ಇರುವದೇ ಇಲ್ಲ. ಇದನ್ನೇ ಇಲ್ಲಿ "ನೋಪಚಾರಃ ಕಥಂಚನ" ಎಂದಿದ್ದಾರೆ. ಹೇಗೆ ಆತ್ಮನನ್ನರಿಯದವರು ಮನಸ್ಸನ್ನು ಸಮಾಧಾನಗೊಳಿಸಲು ಧ್ಯಾನಾದಿಗಳನ್ನು, ಸಮಾಧಿಯೇ ಮುಂತಾದ ಅವಸ್ಥೆಗಳ ಅನುಭವವನ್ನು ಪಡೆಯಲು ಪ್ರಯತ್ನವನ್ನು ಮಾಡಬೇಕಾಗುವದೋ ಈ ಜ್ಞಾನಿಗೆ ಹಾಗಿಲ್ಲ. ಏಕೆಂದರೆ ಈ ಆತ್ಮಸ್ವರೂಪವು ನಿತ್ಯಶುದ್ಧ ನಿತ್ಯಬುದ್ಧ ನಿತ್ಯಮುಕ್ತ ಸ್ವರೂಪವಾಗಿರುವದರಿಂದ ಮಾಡಬೇಕಾದದ್ದು ಪಡೆಯಬೇಕಾದದ್ದು ಏನೂ ಇಲ್ಲ. ಹೀಗೆ ವಿವೇಕದಿಂದ ಅದ್ವಿತೀಯ ಆತ್ಮಸ್ವರೂಪವನ್ನು ಕಂಡಾಗ ಜಿಜ್ಞಾಸುವು ಕೃತಕೃತ್ಯನಾಗುವನು ಎಂಬುದು ಶ್ರೀಗೌಡಪಾದಾಚಾರ್ಯರ ಪ್ರಬೋಧದ ಸಾರಾಂಶವು.

## 3. ಸುರೇಶ್ವರ ಸಿಂಹವಾಣಿ

ಪ್ರಮಾತಾಚ ಪ್ರಮಾಣಂ ಚ ।
ಪ್ರಮೇಯೋ ನಿಶ್ಚಿತಿಸ್ತಥಾ ॥
ಯತ್ ಸಾನ್ನಿಧ್ಯಾತ್ ಪ್ರಸಿಧ್ಯಂತಿ ।
ತತ್ ಸಿದ್ಧೌ ಕಿಮಪೇಕ್ಷತೇ ॥।

–ಬೃ.ಭಾ.ವಾ.(1–4–870)

ಪ್ರಮಾತೃವೂ, ಪ್ರಮಾಣವೂ, ಪ್ರಮೇಯವೂ ಆ ಪ್ರಮೇಯದ ಬಗ್ಗೆ ಉಂಟಾದ ನಿಶ್ಚಯವೂ (ಎಂದರೆ ಪ್ರಮಿತಿಯೂ) ಸಹ ಯಾವನ ಸಾನ್ನಿಧ್ಯದಿಂದ ಪ್ರಸಿದ್ಧವಾಗಿರುವವೋ ಎಂದರೆ ಇವೆ ಎನಿಸಿಕೊಂಡಿವೆಯೋ, ಆ ಸ್ವಯಂಸಿದ್ಧನಾದ – ಕೇವಲ ಅರಿವಿನ ಸ್ವರೂಪನಾದ – ಆತ್ಮನ ಎಂದರೆ ನಿಜವಾದ ತಾನಾಗಿರುವ ತನ್ನ ಸ್ವರೂಪವು ಯಾವ ಪ್ರಮಾಣವನ್ನು ತಾನೇ ಅಪೇಕ್ಷಿಸುತ್ತದೆ? ಅದೇ ಎಲ್ಲವನ್ನೂ ಬೆಳಗುವದರಿಂದ ಅದು ಪ್ರಮಾಣದಿಂದ ಸಿದ್ಧವಾಗತಕ್ಕದ್ದಲ್ಲ. ಸ್ವಯಂಸಿದ್ಧನಾದ ಅಪ್ರಮೇಯನಾದ ತಾನೇ ಎಂಬುದು ಮೇಲಿನ ವಾರ್ತಿಕದ ಸಾರಾಂಶವು.

ಡೆಕಾರ್ಟೆ ಎಂಬುವನು ''ನಾನು ಇದ್ದೇನೆ ಏಕೆಂದರೆ ನಾನು ಆಲೋಚಿಸುತ್ತೇನೆ. ಆದ್ದರಿಂದ ನಾನಿದ್ದೇನೆ'' ಎಂದು ತರ್ಕಿಸಿದ್ದಾನೆ. ಇಲ್ಲಿ ಶ್ರೀಶಂಕರಾಚಾರ್ಯರು ಗೀತಾಭಾಷ್ಯದಲ್ಲಿ (2–18) ಹೇಳಿರುವದೇನೆಂದರೆ – ಸಿದ್ಧೇ ಹಿ ಆತ್ಮನಿ ಪ್ರಮಾತರಿ ಪ್ರಮಿತ್ಸೋಃ ಪ್ರಮಾಣಾನ್ವೇಷಣಾ ಭವತಿ। ನಹಿ ಅಹಂ ಇತ್ಥಂ ಇತಿ ಆತ್ಮಾನಂ ಪ್ರಮಾಯ ಕಶ್ಚಿತ್ ಪ್ರಮಾತಾ ಪ್ರವೃತ್ತೌ ವ್ಯಾಪ್ರಿಯತೇ'' ಎಂದಿದ್ದಾರೆ. ಇದರ ತಾತ್ಪರ್ಯವನ್ನು ವಿವರಿಸುವುದು ಇಲ್ಲಿ ಅವಶ್ಯವಾಗಿದೆ. ಸಂಸ್ಕೃತದಲ್ಲಿ ''ಮಾಜ–ಮಾನೇ'' ಎಂಬ ಧಾತುವಿದೆ. ಇದರ ಅರ್ಥವು ಅಳೆಯುವದು ಎಂದಾಗುತ್ತದೆ. ಈ ಶಬ್ದದ ಮೇಲೆ ಪ್ರಮಾತೃ (ಅಳೆಯುವವನು), ಪ್ರಮಾಣ (ಅಳತೆಯ ಸಾಧನೆ), ಪ್ರಮೇಯಿ (ಅಳೆಯಲ್ಪಡುವ ವಸ್ತು), ಪ್ರಮಿತಿ (ಅಳೆದ ಬಳಿಕ ಬಂದ ನಿಶ್ಚಿತಜ್ಞಾನ) ಎಂಬಿವುಗಳು ಬಂದಿವೆ. 'ನಾನು' ಎಂಬವನು ಪ್ರಮಾತೃವು. ಮನಸ್ಸು, ಬುದ್ಧಿ, ಇಂದ್ರಿಯಗಳು ಪ್ರಮಾಣಗಳು. ಹೊರಗಿನ ವಿಷಯಗಳು ಪ್ರಮೇಯಗಳು. ಆ ಹೊರಗಿನ ವಸ್ತುಗಳ ಬಗೆಗೆ ಉಂಟಾದ ನಿಶ್ಚಿತ ಜ್ಞಾನವೇ ಪ್ರಮಿತಿ. ಇದು ನ್ಯಾಯಶಾಸ್ತ್ರದ ಭಾಷೆ. ಈ ಶಾಸ್ತ್ರದ ಪ್ರಕಾರ ಪ್ರತಿಯೊಂದಕ್ಕೂ 'ಪ್ರಮಾಣವೇನು?' ಎಂದು ಕೇಳುವದು ಸ್ವಾಭಾವಿಕ. ಆದರೆ ಪ್ರಮಾಣಗಳನ್ನು ಬಳಸುವ ಪ್ರಮಾತೃವು ('ನಾನು' ಎಂಬುವನು) ಪ್ರಮಾಣಗಳಿಗಿಂತ ಮೊದಲೇ ಸ್ವಯಂ ಸಿದ್ಧನಾಗಿರುತ್ತಾನಾದ್ದರಿಂದ 'ನಾನು ಇರುವೆನೋ ಇಲ್ಲವೋ' ಎಂದು ಸಂಶಯಮಾಡಿಕೊಳ್ಳಲು ಸಾಧ್ಯವಿಲ್ಲ. ಹಾಗೆ ಮಾಡುವದಕ್ಕೂ ಅವನು ಇರಲೇಬೇಕು. ಹೀಗೆ ಸ್ವಯಂಸಿದ್ಧನಾದ ಪ್ರಮಾತೃವು ಪ್ರಮಾಣಗೋಚರನಲ್ಲ ಎಂಬುದು ಮೇಲೆ ಉದಾಹರಿಸಿದ ಭಾಷ್ಯವಾಕ್ಯದ ಸಾರಾಂಶವು. ಈ ಮೇರೆಗೆ – ನಾನು ಇರುವೆನಾದ್ದರಿಂದ ನಾನು ಯೋಚಿಸುವೆನು. ಯೋಚಿಸಲಿ ಬಿಡಲಿ ನನ್ನ ಇರುವಿಕೆಯು ಸ್ವಯಂಸಿದ್ಧ. ಆದ್ದರಿಂದ ''ನಾನು ಇದ್ದೇನೆ– ಏಕೆಂದರೆ ನಾನು ಯೋಚಿಸುತ್ತಿದ್ದೇನೆ'' ಎಂಬ ಡೆಕಾರ್ಟೆ ಹೇಳಿದ ತರ್ಕವು ಅನುಭವ ಸಮ್ಮತವಲ್ಲ. 'ನಾನು ಇದ್ದೇನೆ' ಎಂಬುದು ಅನುಭವವೇ ಹೊರತು ತರ್ಕವಲ್ಲ. ಹೀಗೆ ಅನುಭವ ಸ್ವರೂಪನಾದ ತನ್ನಿಂದಲೇ ಮನಸ್ಸಿದೆ, ಬುದ್ಧಿಯಿದೆ, ಇಂದ್ರಿಯಗಳಿವೆ ಎಂದು ಪ್ರಮಾಣಗಳ ಸಿದ್ಧಿ ಆಗಬೇಕು. ಆ ಬಳಿಕ ಪ್ರಮೇಯಗಳ ಸಿದ್ಧಿಯಾಗಬೇಕು. ಭಾಷ್ಯದಲ್ಲಿಯ 'ಸಿದ್ಧೇ ಹಿ ಆತ್ಮನಿ' ಎಂಬುದಕ್ಕೆ ಇದೇ ಅರ್ಥವು.

ಇನ್ನು ಪ್ರಮಾತೃತ್ವವು ತೋರಿ ಅಡಗುವ ಸ್ವಭಾವದ್ದಾಗಿದೆ. ಎಚ್ಚರ, ಕನಸಿನ ಅವಸ್ಥೆಗಳಲ್ಲಿ ಅದು ತೋರುತ್ತದೆ. ನಿದ್ರೆಯಲ್ಲಿ ಅಡಗುತ್ತದೆ. ಹೀಗೆ ಪ್ರಮಾತೃತ್ವವು ತೋರಿದ್ದನ್ನೂ, ಅಡಗಿದ್ದನ್ನೂ ಬೆಳಗುತ್ತಿರುವ ಕೇವಲಾನುಭವಸ್ವರೂಪನಾದ ತಾನು

ಎಂದಿಗೂ ಪ್ರಮಾಣಗೋಚರನಲ್ಲ. ವ್ಯವಹಾರದಲ್ಲಿ 'ನಾನು' ಎಂದು ಹೇಳಿಕೊಳ್ಳುವ ಪ್ರಮಾತೃವೇ ಪ್ರಮಾಣಗೋಚರನಲ್ಲದ ಸ್ವಯಂಸಿದ್ಧನೆಂದ ಬಳಿಕ ಈ ಪ್ರಮಾತೃತ್ವವು ತೋರಿದ್ದನ್ನೂ ಅಡಗಿದ್ದನ್ನೂ ಬೆಳಗುವ ಕೇವಲಾನುಭವಸ್ವರೂಪನಾದ ತಾನು ಸ್ವಯಂಸಿದ್ಧನೂ, ಅಪ್ರಮೇಯನೂ ಆಗಿರುವನೆಂಬುದನ್ನು ಹೇಳತಕ್ಕದ್ದೇನಿದೆ?

ಈ ಕೇವಲಾನುಭವಸ್ವರೂಪದ ಬೆಳಕಿನಲ್ಲಿಯೇ ಪ್ರಮಾತೃ ಪ್ರಮಾಣಾದಿ ಸರ್ವವ್ಯವಹಾರವೂ ತೋರುತ್ತ ಅಡಗುತ್ತಿರುವದರಿಂದ ಈ ಸ್ವರೂಪವು ಯಾವ ಪ್ರಮಾಣವನ್ನೂ ಅಪೇಕ್ಷಿಸದ ಸ್ವಯಂಸಿದ್ಧಸ್ವರೂಪವು ಎಂಬುದೇ ನಾವು ಆರಂಭದಲ್ಲಿ ಉದಾಹರಿಸಿದ ವಾರ್ತಿಕದ ಸಾರಾಂಶವು.

ಇಲ್ಲಿ ಒಂದು ರಹಸ್ಯವಿದೆ. ಪ್ರಮಾತೃ ಹಾಗೂ ಸ್ವಯಂಸಿದ್ಧನಾದ ತಾನು (ಸಾಕ್ಷಿ) ಹೀಗೆ ನಿಜವಾದ ಎರಡು ವಸ್ತುಗಳಿಲ್ಲ. ಕೇವಲಾತ್ಮನೇ – ಆತ್ಮಮಾತ್ರವೇ ಇರತಕ್ಕದ್ದು. ಇದನ್ನರಿಯದಿದ್ದಾಗ ಆ ಆತ್ಮನಲ್ಲಿ ದೇಹೇಂದ್ರಿಯ ಮನೋಬುದ್ಧ್ಯಾದಿಗಳು ಇರುವಂತೆ ಕಾಣುತ್ತವೆ. ಹೀಗೆ ಅವಿದ್ಯಾಕಲ್ಪಿತಗಳಾದ ದೇಹೇಂದ್ರಿಯಾದಿಗಳು ಇರುವಂತೆ ತೋರಿದಾಗ ಆ ಕೇವಲಾತ್ಮ ಸ್ವರೂಪನಾದ – ಸ್ವಯಂ ಸಿದ್ಧನಾದ – ಸಾಕ್ಷಿಯೇ (ಪ್ರಮಾತೃ) ವಾಗಿರುವಂತೆ ಕಾಣುತ್ತಾನೆ. ತಾದಾತ್ಮ್ಯಭಾವವನ್ನು – ವಿವೇಕದಿಂದ ಬಾಧಿತಗೊಳಿಸಿ ಕೊಂಡಾಗ ಕೇವಲಾತ್ಮನಾಗಿಯೇ ಮಿಗಿಗುತ್ತಾನೆ. ಇದನ್ನೇ ''ಅನ್ವಿಷ್ಟಃ ಸ್ಯಾತ್ ಪ್ರಮಾತ್ರೈವ ಪಾಪ್ಮದೋಷಾದಿ ವರ್ಜಿತಃ'' (ಸೂ.ಭಾ. 1.1.4) ಎಂದಿದ್ದಾರೆ. ಆದ್ದರಿಂದ ಜಿಜ್ಞಾಸುಗಳು ಹೊರಗಿನ ಪ್ರಮೇಯಗಳನ್ನು ಪ್ರಮಾಣದಿಂದ ಅರಿತುಕೊಳ್ಳುವ ಗಡಿಬಿಡಿಯನ್ನು ಬಿಟ್ಟು ಪ್ರಮಾತೃವಿಗೂ ಸಾಕ್ಷಿಯಾಗಿರುವ ಸ್ವಯಂಸಿದ್ಧನಾದ ಕೇವಲ ತಾನೇ ತಾನಾಗಿರುವ ತಮ್ಮ ನಿಜಸ್ವರೂಪದ ಕಡೆಗೆ ಲಕ್ಷ್ಯವನ್ನು ತಿರುಗಿಸಬೇಕು ಎಂಬುದು ಇಲ್ಲಿ ಮುಖ್ಯ. ಶ್ರೀ ಶ್ರೀಸಚ್ಚಿದಾನಂದೇಂದ್ರಸ್ವರಸ್ವತೀ ಮಹಾಸ್ವಾಮಿಗಳು ಒಂದು ಸಲ ನ್ಯಾಯಶಾಸ್ತ್ರಕ್ಕೂ ವೇದಾಂತಕ್ಕೂ ಏನು ವ್ಯತ್ಯಾಸ ಎಂಬ ಪ್ರಶ್ನೆಗೆ ಎಲ್ಲಿ ''ನ್ಯಾಯಶಾಸ್ತ್ರವು ಸಮಾಪ್ತಿಯಾಗುವುದೋ ಅಲ್ಲಿ ವೇದಾಂತವು ಆರಂಭವಾಗುವದು'' ಎಂದು ಉತ್ತರ ಹೇಳಿದ್ದರು. ಪ್ರಮಾತೃವು ಪ್ರಮಾಣಗಳಿಂದ ಪ್ರಮೇಯಗಳನ್ನು ಅರಿತು ಪ್ರಮಿತಿಯನ್ನು ಸಂಪಾದಿಸಿದರೆ ನ್ಯಾಯಶಾಸ್ತ್ರದ ಕೆಲಸವಾಯಿತು. ಈ ಪ್ರಮಿತಿ, ಪ್ರಮೇಯಗಳು, ಪ್ರಮಾಣಗಳು, ಪ್ರಮಾತೃತ್ವವೂ ಸಹ ಯಾವ ಕೇವಲಾನುಭವ ಸ್ವರೂಪನಾದ ತಾನೇ ತಾನಾದ ಆತ್ಮನ ಬೆಳಕಿನಲ್ಲಿ ಇರುವಂತೆ ತೋರುವ ಹುಸಿ ತೋರಿಕೆಗಳೋ ಆ ಆತ್ಮನನ್ನು ಕುರಿತು ಬೋಧಿಸುವದೇ ವೇದಾಂತ ಶಾಸ್ತ್ರವು ಎಂಬುದು ಶ್ರೀಶ್ರೀಗಳವರ ಉಪದೇಶದ ಸಾರವು.

## 4. Empirical and Transcendental View points

[Letter dated 05.04.1993 from Sri Devarao Kulkarni to one of the Sadhakas who sought his guidance]

Dear Sri J.L. Prasad,

I have received your letter on 25th March 1993 itself but could not write immediately to you as I was busy with some urgent works.

I propose to reply to your letter from two standpoints. The first one is empirical standpoint. From this standpoint, both of us are sailing in the same boat because you are suffering from heart ailment and I am also suffering from Angina Pectoris which also relates to heart. We are equal from the body standpoint of Sadhana. Sri Ramana Maharshi has said that identification with body is the disease of all diseases and you have to give up the wrong identification with the body and give up thinking "I am the Body" etc. Then only you will get cured from this ailment. You have to practice this through Viveka - discrimination. This is the empirical standpoint relating to both of us.

Now I will turn to the transcendental viewpoint of reality. You have maintained in your letter that you are unable to do any Sadhana - even Japa, Naamasmarana or Pooja etc., and that your mind has become so dull that you are unable to practice Viveka and forgetfulness occurs in your mind and hence you are unable to do any Sadhana.

For this, my reply is that first you have to think - "how do I know all these defects of my mind?" The simple answer is that 'It is your own experience'. You are the witnessing principle of your mind. As you are the illuminator of your mind you know the mistakes, dullness, and forgetfulness of the mind. From this standpoint **you are ever free from the mind** and **ever untainted real nature of Consciousness.** So, I request you to turn towards this process of thinking. By this, you can easily conquer the identification with your

mind and remain as the **witnessing principle** of life. This type of thinking does not entail the burden of Sadhanas just as those involved in Japa etc. You have to turn away from the wrong identification with your mind.

Now, I am also practicing the same Sadhana. I think this suggestion will be useful to you also.

## 5. True Nature of Self

Letter dated 01.08.1993

Dear Sri Krishnamurthy,

I am very glad to receive your letter dated 26.07.1993 and noted the contents.

Though you are little away from Dr. Poornachandra Rao (another sadhaka)'s house, you are always very near the Vedanta thoughts which will directly lead to the witnessing principle of true nature of the Self.

In your letter the final judgement or conclusion is the same as it is in Shankara's teaching in Gita Bhaashya (13-26) but the method of approach is very new type of thinking.

In Bhagavad Gita the word Kshetra is used. This world consists of whole phenomenon of waking state including 'me' notion, mind, intellect and other things along with the concept of infinite time, space and causation, with all multiplicity of souls (jeevas) etc. (also called as **vyakta**). From the empirical standpoint, when it disappears temporarily in deep sleep and again raises its ugly head after waking, this temporary disappearance is called in Shastra as **Avyaakruta** i.e., the unmanifested seed form of the universe. These two forms together are called as Kshetra or Prakruti. You have called it as nature in your letter.

The true nature of every one's soul is quite separate from this Kshetra. As It is of the nature of pure Consciousness It illumines the appearance and disappearance of the Kshetra. These two are also called as **Sat and Asat.** Hence it is said in 13-12 that the Self is neither Sat nor Asat. But one thing we have to remember here is that when we feel that Kshetrajna is, there is also Kshetra as well (which is quite separate entity from Kshetrajna). This understanding is wrong. The Kshetrajna or the Self is the only reality. When we use the mind, intellect etc., then we misconceive the very Kshetrajna as Kshetra. The relationship between these two is described by Sri Shankara in Gita 13-26 as relationship between the rope and snake, mirage and desert etc. So, strictly speaking there are no two things as Atma and Anatma. There is Atman alone and the same Atman is misunderstood as Anatma. This is clearly stated by Sri Shankara in Brihadaranyaka - **"Na hi poorvam kashchit Anaatmaa san Atmaa Bhavati, Atmaiva tu Sarvam, Anaatmatvam tu parikalpita maatram (2-4-14).**

In Gita 13th chapter also Sri Shankara clearly states that Kshetragna is the only reality and Kshetra is false appearance due to ignorance (13-26).

In Brihadaranyaka, it is said **Atikraamati mrutyoroopaani** - the Self transcends the mortal forms. To show this Sri Shankara has given two intuitional experiences of universal acceptance. When the Self appears as if he is in the dream state or he goes to the dream state, then He transcends, at that time, the mortal forms and Self alone remains. In this regard aspirants should observe a crucial point which Sri Shankara has pointed out. That is -"when Self appears **as if** he is endowed with these mortal forms (including the corresponding world of the corresponding state), at that time also he remains transcending all the mortal forms and he need not transcend them by any effort. His very nature is untainted by these false appearances. For example, when the film is running, at the same time, the arc lamp is untainted by the colour and vibration etc of the film and transcends all the

modification of films. Sri Sachidaanandendra Saraswati Swamyji used to say that the people go on putting in lot of efforts, money etc. to see a film but if the owner of theater were to say that he shows the arc lamp alone for 3 hours, nobody goes there even if the owner offers some money. That is, people are interested in seeing fleeting objects or images but are not interested in looking at the reality. The second and more important thing is that even while people are seeing the film, they are actually seeing the light of the arc lamp alone, i.e. even when people feel that they are seeing Kshetra they remain secondless Self alone.

From your letter one can understand that one may or may not know the teachings of Shastra but if he has cognized the true nature of the Self, inevitably his thinking will be in the right track and your letter proves this.

## 6. Existance of Time

2.11.1993

***Query by a Sądhaka:** How are we to negate the very existence of the chronological order of time which flows eternally and which is required for all types of dealings?*

**Ans:** In our daily life 'time' is an important factor and all events, things etc., are regulated by this time. From empirical standpoint, time is eternal and it has no beginning or end. We cannot imagine timeless existence of the universe. But from the standpoint of transcendental reality, the time factor is not eternal. To understand this we have to take the comprehensive view of life which is based on universal acceptance. This is to be understood according to the teachings of Vedanta. Some say that the time factor is an imagination of mind. For example, Cantt says that the time is **apriori** notions of the mind while some others say that its existence relies on relativity etc. We have no intention to enter into an argument with these controversies and

statements. According to Vedanta, when the waking state disappears, simultaneously the very existence of the time factor of the waking state also automatically disappears. So, even though it appears as eternal and real in waking state, it is restricted to this waking state alone. In the same way, dream time also appears and disappears with dream. In deep sleep there is no experience of the very existence of the time though from empirical stand point we may say we slept for so many hours.

In deep sleep bereft of the very existence of time factor the pure being of our own Self continues unaffected by the appearance and disappearance of time factor. Therefore when we cognize our true nature of the Self which is beyond the mind and ego and if we realize that this Self alone is transcendental reality, then there will be no desire, curiosity etc. remaining in us regarding the existence of time. This is possible when all types of adjuncts like the existence of time factor, the concept of existence of three states themselves are negated. In this stage our own Self will remain as homogeneous just like a mass of salt. Our own being is **Truth of truth** (Satyasya Satyam) because from empirical standpoint the time factor is truth and our own Self is Truth of the truth. It has no distinction like inside or outside Anantaram, Abaahyam). Through this type of Viveka - discrimination one will be able to take a stand in his true nature and his consciousness naturally gets established i.e., he takes a steadfast stand in this true nature of one's own Self without any fear of falling from this true nature of the Self.

This type discrimination is the only way to realize and take a stand in our true nature of the Self.

# 7. ಗ್ರಂಥಕರ್ತರ ಪರಿಚಯ

## (ಶ್ರೀ ಬಿ.ಟಿ. ದಂಡವತಿ, ಹೊಂಬಳ ಇವರಿಂದ)

## 9.8.1990

ಧಾರವಾಡ ಜಿಲ್ಲೆಯ ಎರೆನಾಡಿನ ಬಯಲುಸೀಮೆಯ ಗದಗ ತಾಲ್ಲೂಕಿನಲ್ಲಿ ಗದಗದಿಂದ 13 ಕಿಲೋಮೀಟರ್ ದೂರದಲ್ಲಿರುವ ಒಂದು ಹಳ್ಳಿ ಹೊಂಬಳ. ಗ್ರಂಥಕರ್ತರಾದ ಶ್ರೀ ದೇವರಾಯಕುಲಕರ್ಣಿಯವರು ಈ ಊರಿನವರು.

ಈ ಹೊಂಬಳ ಗ್ರಾಮವು ಇವರೇ ಅಲ್ಲದೆ ಇನ್ನೂ ಕೆಲವು ಸುಪ್ರಸಿದ್ಧ ವ್ಯಕ್ತಿಗಳಿಗೆ ಮೂಲಸ್ಥಾನವಾಗಿದೆ. ಅಂತರರಾಷ್ಟ್ರೀಯ ಖ್ಯಾತಿವೆತ್ತ ವಿಶ್ವವಿಖ್ಯಾತ ಸಂಗೀತ ಶಾಸ್ತ್ರಜ್ಞರಾದ ಪಂಡಿತ ಭೀಮಸೇನಜೋಷಿಯವರು ಮೂಲತಃ ಹೊಂಬಳದವರು. ಪ್ರಸಿದ್ಧಸಾಹಿತಿಗಳಾದ ಶ್ರೀ ಚನ್ನವೀರಕಣವಿಯವರು ಹೊಂಬಳದವರು. ಮಧ್ಯಪ್ರದೇಶದ ರಾಜಧಾನಿಯಾದ ಭೋಪಾಲದಲ್ಲಿರುವ ಸುಪ್ರಸಿದ್ಧ ನರ್ತನಕಲಾವಿದರಾದ ಶಂಕರ ಹೊಂಬಳರು ಸಹ ಹೊಂಬಳದವರೇ. ಹೀಗೆ ಅನೇಕ ಪ್ರತಿಭಾವಂತರಿಗೆ ಜನ್ಮವನ್ನಿತ್ತ ಈ ಹೊಂಬಳಗ್ರಾಮವು ಪ್ರಸನ್ನ ವ್ಯಕ್ತಿತ್ವದ ಶಾಂತಸ್ವಭಾವದ ಆತ್ಮಜ್ಞಾನನಿಷ್ಠರಾದ ಅನುಭವಿಸಂತರೆನಿಸಿದ ಶ್ರೀ ದೇವರಾಯರಿಗೂ ಮೂಲಸ್ಥಾನವಾಗಿದೆ.

### ತಂದೆತಾಯಿಗಳು

ಕೋಳಿವಾಡದ ಕುಮಾರವ್ಯಾಸನ ವಂಶಜರಾದ ಇವರ ತಾಯಿ ಶ್ರೀಮತಿ ಯಮುನಾಬಾಯಿ ಹಾಗೂ ಹೊಂಬಳದ ಕುಲಕರಣಿವಂಶಜರಾದ ತಂದೆ ಶ್ರೀ ರಾಘವೇಂದ್ರರಾಯರು (ರೂಢಿಯಲ್ಲಿ ಸಾವಕಾರ ರಾಘಪ್ಪನವರು) ಆಗರ್ಭ ಶ್ರೀಮಂತರೂ ಧರ್ಮಿಷ್ಠರೂ ಉದಾರಿಗಳೂ ದೊಡ್ಡ ಜಮೀನುದಾರರೂ ಆಗಿದ್ದರು.

### ಜನನ, ವಿದ್ಯಾಭ್ಯಾಸ

1922ನೇ ಡಿಸೆಂಬರ್ ಎರಡನೆಯ ತಾರೀಖಿನ ದಿನ ಕೋಳಿವಾಡ ಗ್ರಾಮದಲ್ಲಿ ಶ್ರೀ ದೇವರಾಯರ ಜನನ. ಬಾಲ್ಯ ಹಾಗೂ ಪ್ರೈಮರಿ ವಿದ್ಯಾಭ್ಯಾಸ ಹೊಂಬಳದಲ್ಲಿ ಕೇವಲ ಹದಿನೆಂಟು ತಿಂಗಳು. ಗದಗಿನಲ್ಲಿ ಹೈಸ್ಕೂಲಿನಲ್ಲಿ ಇಂಗ್ಲೀಷು ಅಧ್ಯಯನ. ಅಲ್ಲಿಗೆ ವಿದ್ಯಾಭ್ಯಾಸಕ್ಕೆ ಶರಣು ಹೊಡೆದು ಒಕ್ಕಲುತನಕ್ಕೆ 1938ರಿಂದ 44ರವರೆಗೂ ನಿಂತುಕೊಂಡರು.

## ವೇದಾಂತ – ಸಂಗೀತ

ಮೊದಲಿನಿಂದಲೂ ಮನೆಯಲ್ಲಿ ಸದಾಚಾರ ಹಾಗೂ ಸ್ವತಃ ದೇವರಾಯರಿಗೆ ಹರಿಕಥೆ, ಪುರಾಣ, ಪುರಂದರದಾಸರ ಹಾಡು– ಮುಂತಾದವುಗಳಲ್ಲಿ ಪ್ರೇಮ ಹಾಗೂ ಅಲ್ಪ ಸಂಗೀತದ ಅಭ್ಯಾಸ. ಹೀಗಿದ್ದದ್ದರಿಂದ 1943–44ನೇ ಇಸವಿಯಲ್ಲಿ ಗದಗಿನಲ್ಲಿಯೇ ಇರುತ್ತಿದ್ದ ಭೀಮಸೇನಜೋಷಿಯವರೊಂದಿಗೆ ಹಾರ್ಮೋನಿಯಂ ನುಡಿಸುವದನ್ನೂ ಅಭ್ಯಾಸಮಾಡಿದರು.

1941 ರಲ್ಲಿ ಕರ್ನಾಟಕದ ಪರಮಹಂಸರೆಂದು ಪ್ರಸಿದ್ಧರಾದ ಶ್ರೋತ್ರಿಯ ಬ್ರಹ್ಮನಿಷ್ಠ ಸದ್ಗುರು ಶ್ರೀಶಂಕರಭಟ್ಟ ಅಗ್ನಿಹೋತ್ರಿ (ಮಾಸ್ತರರು) ಯವರ ಪ್ರಭಾವಕ್ಕೆ ಒಳಗಾಗಿ ವೇದಾಂತದಲ್ಲಿ ಪ್ರವೇಶ, ತರಬೇತಿ. ಕಠೋಪನಿಷತ್ತು, ಯೋಗವಾಸಿಷ್ಠ, ವಿವೇಕ ಚೂಡಾಮಣಿ– ಮೊದಲಾದ ಗ್ರಂಥಗಳ ಅವಿರತ ಅಧ್ಯಯನವನ್ನು ಗುರುಗಳಲ್ಲಿ ನಡೆಸಿದರು.

## ಹರಿಕಥಾಪ್ರಯೋಗ

ದೇವರಾಯರಿಗೆ ಸಂಗೀತದೊಂದಿಗೆ ಕವಿತ್ವವೂ ಹುಟ್ಟುಗುಣವಾಗಿ ಬಂದದ್ದರಿಂದ ಚಿಕ್ಕವಯಸ್ಸಿನಲ್ಲಿ ಪದ ಪದ್ಯಗಳನ್ನು ರಚಿಸುತ್ತಿದ್ದ ಇವರು 1945ರಿಂದ 1950ರವರೆಗೂ 'ವೇದಾಂತಹರಿಕಥೆ' ಅಥವಾ 'ವೇದಾಂತಕೀರ್ತನೆ' ಎಂಬ ಹೊಸ ಪ್ರಯೋಗವನ್ನು ಮಾಡಿದರು.

ಈ ದಿಶೆಯಲ್ಲಿ 'ನಚಿಕೇತ', 'ಯಾಜ್ಞವಲ್ಕ್ಯಮೈತ್ರೇಯಿಸಂವಾದ', 'ಚೂಡಾಲಾಖ್ಯಾನ' ಮೊದಲಾದ ಹರಿಕಥಾಕೀರ್ತನೆಗಳನ್ನು ತಾವೇ ರಚಿಸಿ ವಾದ್ಯ ಸಂಗೀತಗಳೊಂದಿಗೆ ಹರಿಕಥೆ ಮಾಡುತ್ತಾ ಹುಬ್ಬಳ್ಳಿ, ಧಾರವಾಡ, ರಾಣೇಬೆನ್ನೂರು, ದಾವಣಗೆರೆ, ಗದಗ ಹೀಗೆ ಉತ್ತರನಾಡಿನಲ್ಲಿ ಸುಪ್ರಸಿದ್ಧರಾಗಿದ್ದರು. 4 ರಿಂದ 6 ಗಂಟೆಗಳವರೆಗೂ ನಡೆಯುತ್ತಿದ್ದ ಈ ವೇದಾಂತಕೀರ್ತನೆಗಳನ್ನು ಇಂದಿಗೂ ಸ್ಮರಿಸಿಕೊಂಡು ಆನಂದಿಸುವವರಿದ್ದಾರೆ. 1948ರಲ್ಲಿ ಹೊಳೆನರಸೀಪುರದಲ್ಲಿ ಶ್ರೀ ಶ್ರೀಗಳವರ ಸನ್ನಿಧಿಯಲ್ಲಿಯೇ 'ನಚಿಕೇತ'ನ ಕಥೆ ಮಾಡಿ ತೋರಿಸಿದರು. ಇದಲ್ಲದೆ 'ಪಂಚದಶಿ'– ಗ್ರಂಥದ ಮೇಲೆ ಪ್ರಭುತ್ವವನ್ನು ಪಡೆದು ಉತ್ತಮರೀತಿಯಲ್ಲಿ ಉಪನ್ಯಾಸ ಮಾಡುತ್ತಿದ್ದರು. ಈ ದೃಷ್ಟಿಯಲ್ಲಿ ಇವರು ಕಳೆದ 45 ವರ್ಷಗಳಿಂದಲೂ ಉಪನ್ಯಾಸದ ರೂಢಿ ಇರುವವರಾಗಿದ್ದಾರೆ.

## ಕಷ್ಟಕಾಲದ ಆರಂಭ

ಉಪಜೀವನಕ್ಕೆ ಬೇಸಾಯ, ಜೀವನಕ್ಕೆ ಸಂಗೀತ ವೇದಾಂತಗಳನ್ನಳವಡಿಸಿಕೊಂಡು ಸುಖವಾಗಿದ್ದ ದೇವರಾಯರಿಗೆ 1944ರಿಂದ ಕಷ್ಟಪರಂಪರೆಗಳು ಬರಲಾರಂಭಿಸಿದವು. ಮನೆಯಲ್ಲಿ ಹುಟ್ಟಿದ ವ್ಯಾಜ್ಯದಿಂದಾಗಿ ಇವರು ತಮ್ಮ ಪಾಲಿಗೆ ಬಂದ 48 ಎಕರೆ ಜಮೀನು ಮನೆಗಳೊಂದಿಗೆ ಕುಟುಂಬದವರಿಂದ ಬೇರೆ ಹೊರಬರಬೇಕಾಯಿತು. 1945ರಿಂದ ಇವರ ಧರ್ಮಪತ್ನಿ ಸೀತಾಬಾಯಿ (ಲಲಿತಾಬಾಯಿ) ಯವರಿಗೆ ಅಭಿಚಾರಬಾಧೆ, ಪಿಶಾಚಬಾಧೆಗಳ ಮೂಲಕ 1950 ರವರೆಗೂ ಭಯಂಕರವಾದ ವಿಚಿತ್ರ ರೋಗಗಳನ್ನು ಅನುಭವಿಸಬೇಕಾಯಿತು.

## ಉಪಾಸನೆಯ ಬಲ

ಇಂಥ ಕಡುಕಷ್ಟಪರಿಸ್ಥಿತಿಯಲ್ಲಿಯೂ ತಮ್ಮ ತಾಯಿಯವರಿಂದ ಬಂದ ಕೋಳಿವಾಡದ ಶ್ರೀ ಮಹಾಮಾಯಾದೇವಿಯ ಉಪಾಸನೆಯ ಬಲದಿಂದ ಅಭಿಚಾರಪ್ರಯೋಗದ ನಿವಾರಣೆಯಾಗಿ ಪಿಶಾಚಬಾಧೆಯ ಪರಿಹಾರಕ್ಕೆ ಶ್ರೀದತ್ತ ಕ್ಷೇತ್ರಗಳಲ್ಲಿ ಪ್ರಸಿದ್ಧವಾದ ಮಹಾರಾಷ್ಟ್ರದ ಶ್ರೀಕ್ಷೇತ್ರ 'ನರಸೋಬವಾಡಿ'ಗೆ ಹೋಗಲು ಪ್ರೇರಣೆಯಾಯಿತು.

## ಕಠಿಣತಪಸ್ಸು ಹಾಗೂ ಸರ್ವಸಮರ್ಪಣೆ

ಶ್ರೀ ದತ್ತಾತ್ರೇಯರ ಆಜ್ಞೆಯಂತೆ ಈ ದಿವ್ಯ ಕ್ಷೇತ್ರದಲ್ಲಿ ಸತತವಾಗಿ ಮೂರು ವರ್ಷ ಈ ದಂಪತಿಗಳು ವಾಸಮಾಡಿದರು. ಆ ಅವಧಿಯಲ್ಲಿ ಇವರ ಶ್ರೀಮತಿಯವರು ಘನಘೋರವಾದ ಚಳಿ, ಮಳೆ, ಬಿಸಿಲು ಆಹಾರಾದಿಗಳನ್ನು ಲೆಕ್ಕಿಸದೆ ಶ್ರೀದತ್ತಗುರುವಿನ ಅಖಂಡಸೇವೆ ಮಾಡಿದರು. ಶ್ರೀದೇವರಾಯರು ಭಗವಂತನ ಆದೇಶದಂತೆ ತಮ್ಮ ಯಾವತ್ತೂ ಆಸ್ತಿಯನ್ನು ಮಾರಾಟಮಾಡಿ ಅನೇಕ ಅನುಷ್ಠಾನ ದಾನಧರ್ಮಾದಿಗಳನ್ನು ಮಾಡಿ ಯಾವುದೇ ಬೇಡಿಕೆಯಿಲ್ಲದೆ ಸರ್ವಸ್ವವನ್ನೂ ಶ್ರೀದತ್ತಚರಣಗಳಲ್ಲಿ ಅರ್ಪಿಸಿದರು. ಈ ಅವಧಿಯಲ್ಲಿ ಹಾಗೂ ಈ ದಂಪತಿಗಳ ಜೀವಮಾನದುದ್ದಕ್ಕೂ 52 ಅಧ್ಯಾಯದ ಶ್ರೀ ಗುರುಚರಿತ್ರೆಯಲ್ಲಿಯ ಎಲ್ಲ ಕಥೆಗಳೂ ಒಂದೊಂದು ಬಗೆಯಿಂದ ಅನುಭವಕ್ಕೆ ಬಂದವು. ಅಂತೂ ಮೂರುವರ್ಷ ಹೋರಾಡಿ ಎಲ್ಲವನ್ನೂ ಕಳೆದುಕೊಂಡು ಪಿಶಾಚ ಬಾಧೆಯನ್ನು ನಿವಾರಿಸಿಕೊಂಡು ಶ್ರೀದತ್ತನ ಪರಮಭಕ್ತಿಯನ್ನು ಸಂಪಾದಿಸಿಕೊಂಡರು.

## ಬಡತನದ ಬಾಳು

1953ರಲ್ಲಿ ಶ್ರೀ ದತ್ತಪ್ರೇರಣೆಯಿಂದ ದಾವಣಗೆರೆಯ 'ಶ್ರೀ ಶಿವಾನಂದ ತೀರ್ಥಗುರು ಅಧ್ಯಾತ್ಮಮಂದಿರ'ದಲ್ಲಿ ಬಂದು ನೆಲೆಸಿ ಎರಡು ಹೊತ್ತು ಉಪನ್ಯಾಸದಿಂದ ಏನು ಬರುವದೋ ಅದರಲ್ಲಿಯೇ ಮೂರು ಮಕ್ಕಳು ಈ ದಂಪತಿಗಳೂ ಕಾಲಹಾಕುವ ದಾರುಣವಾದ ಬಡತನದ ಬಾಳನ್ನು ಸುಮಾರು ಮೂರು ವರ್ಷ ಸಾಗಿಸಬೇಕಾಯಿತು.

1944ರ ವರೆಗೆ ಎರಡುನೂರು ಎಕರೆ ಜಮೀನುದಾರರಾಗಿದ್ದು ಮದುವೆಯಲ್ಲಿ 100 ತೊಲ ಬಂಗಾರಧಾರಣೆ ಮಾಡಿದ ಹೆಂಡತಿಯೊಡನೆ ರಾಜನಂತಿದ್ದ ದೇವರಾಯರು ರಂಕನಾಗಿ ಬಾಳಬೇಕಾಯಿತು.

## ಬೆಂಗಳೂರಿಗೆ ಆಗಮನ

1956ರಲ್ಲಿ ಬೆಂಗಳೂರಿನ ವಿಶ್ವೇಶ್ವರಪುರದ 'ಪರಮಾರ್ಥ ವಿಚಾರ ಸಂಘ' ದವರ ಕರೆಯಂತೆ ಹೋಗಿ ಅಲ್ಲಿ ನೆಲೆಸಿದರು. ದಾವಣಗೆರೆಗಿಂತ ಜೀವನವು ಸ್ವಲ್ಪ ಉತ್ತಮವಾಗಿ ನಡೆಯಿತಾದರೂ 1976ನೇ ಇಸವಿಯವರೆಗೂ ಅಸಾಧ್ಯ ಕಷ್ಟ ಪರಂಪರೆಗಳನ್ನು ಇವರು ಎದುರಿಸಬೇಕಾಯಿತು. ಐವರು ಗಂಡುಮಕ್ಕಳು, ಮೂವರು ಹೆಣ್ಣು ಮಕ್ಕಳ ದೊಡ್ಡ ಸಂಸಾರಪೋಷಣೆಯ ಭಾರ, ಅನೇಕ ರೋಗಗಳ ಬಾಧೆ, ಗತ್ಯಂತರವಿಲ್ಲದೆ ಋಣಕ್ಕೆ ತುತ್ತಾದದ್ದು – ಮುಂತಾಗಿ ನಾನಾಪ್ರಕಾರದ ಸಂಕಟಗಳನ್ನು ಈ ಇಪ್ಪತ್ತು ವರ್ಷಗಳಲ್ಲಿ ಅನುಭವಿಸಬೇಕಾಯಿತು. ಅವರ ಮಾತಿನಲ್ಲಿಯೇ ಹೇಳಬೇಕೆಂದರೆ –ಹರಿಶ್ಚಂದ್ರ, ರಾಮಚಂದ್ರ, ನಳ, ಧರ್ಮರಾಜ, ವಿಕ್ರಮ – ಈ ಐದೂ ಜನರ ಕಷ್ಟಗಳನ್ನೂ ನಾನು ಬೇರೆ ಬೇರೆ ತರಹದಲ್ಲಿ ಬೇರೆ ಬೇರೆ ಪ್ರಸಂಗಗಳಲ್ಲಿ ಅನುಭವಿಸಬೇಕಾಗಿ ಬಂದಿತು– ಎಂದು ಹೇಳುತ್ತಿದ್ದರು.

## ಅಧ್ಯಾತ್ಮಪ್ರಗತಿ

ಬಂಗಾರವನ್ನು ಪುಟಕ್ಕೆ ಹಾಕಿದಷ್ಟೂ ಹೊಳಪು ಬರುವಂತೆ ಶ್ರೀದತ್ತ ಭಕ್ತಿಯ ಬಲವಿದ್ದುದರಿಂದ ಸಕಲಕಷ್ಟಗಳನ್ನೂ ಎದುರಿಸಿದರಲ್ಲದೆ ಅಧ್ಯಾತ್ಮವಿದ್ಯೆಯ ಜೀವನದಲ್ಲಿ ಒಂದು ಹೊಸ ತಿರುವನ್ನು ಶ್ರೀದತ್ತದಯೆಯಿಂದಲೇ ಪಡೆದರು.

1954ರಲ್ಲಿ ದಾವರಣಗೆರೆಯಲ್ಲಿರುವಾಗಲೇ ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಮಹಾಸ್ವಾಮಿಗಳವರ ಪ್ರಭಾವಕ್ಕೊಳಗಾಗಿ ಬೆಂಗಳೂರಿಗೆ ಬಂದ ಬಳಿಕ ಹೊಳೆನರಸೀಪುರಕ್ಕೆ ಹೋಗಿ 1957ರಲ್ಲಿ ಶ್ರೀ ಶ್ರೀಗಳವರಿಂದ ಭಾಷ್ಯಶಾಂತಿಯನ್ನು

ಹೊಂದಿ ಬೆಂಗಳೂರಿನಲ್ಲಿಯೇ ಭಾಷ್ಯಾಭ್ಯಾಸವನ್ನು ಮುಂದುವರಿಸಿದರು. ಹಿಂದೆ ಶ್ರೀಸದ್ಗುರು ಅಗ್ನಿಹೋತ್ರಿಗುರುಗಳ ಬೋಧೆಯ ತಳಹದಿಯಲ್ಲಿ ಸಂಸ್ಕೃತದ ಪರಿಚಯವನ್ನು ಮಾಡಿಕೊಂಡಿದ್ದ ದೇವರಾಯರು ಏಕಲವ್ಯನಂತೆ ಶ್ರೀದತ್ತ ಶ್ರೀಶಂಕರಾಚಾರ್ಯರ, ಶ್ರೀಶ್ರೀಗಳ ಪಟಗಳನ್ನಿಟ್ಟುಕೊಂಡು ಅಧ್ಯಯನವನ್ನು ಆರಂಭಿಸಿದರು. ಶ್ರೀಶ್ರೀಗಳವರು 'ನಿಮಗೆ ಭಾಷ್ಯವನ್ನು ಹೇಳುಕೊಡುವವನು ನಾನಲ್ಲ, ನಿಮ್ಮ ಉಪಾಸ್ಯದೈವನಾದ ಜ್ಞಾನಪ್ರದನಾದ ಶ್ರೀದತ್ತಗುರುವು'' – ಎಂದು ಹೇಳಿದ್ದರಂತೆ. ಶ್ರೀಶ್ರೀಗಳವರ ದಿಗ್ದರ್ಶನದಂತೆ ಕರ್ಮಯೋಗ ಉಪಾಸನಾದಿ ಸಾಧನೆಗಳನ್ನೂ ಭಾಷ್ಯಾಭ್ಯಾಸದ ಮೂಲಕ ವಿವೇಕವನ್ನೂ ಅಳವಡಿಸಿಕೊಳ್ಳುತ್ತಾ 1961ರ ಹೊತ್ತಿಗೆ ಪ್ರಸ್ಥಾನತ್ರಯಭಾಷ್ಯಗಳನ್ನು ಪೂರ್ತಿಯಾಗಿ ಅಧ್ಯಯನ ಮಾಡಿದ್ದಲ್ಲದೆ ಶ್ರೀಶ್ರೀಗಳವರ ಅನೇಕ ಗ್ರಂಥಗಳನ್ನೂ ಅಭ್ಯಸಿಸಿ ಈ ಹೊಸ ಪದ್ಧತಿಯಲ್ಲಿ ವೇದಾಂತವನ್ನು ನಿರೂಪಿಸಲು ಸಾಮರ್ಥ್ಯವನ್ನು ಪಡೆದರು. ಇದು ಬರಿಯ ಪಾಂಡಿತ್ಯದ ಅಧ್ಯಯನವಾಗಿರದೆ ಸಾಧನಸಿದ್ಧಾಂತಗಳ ಸಾಮರಸ್ಯದ ಅನುಭವಪ್ರಧಾನವಾದ ಅಧ್ಯಯನವಾಗಿತ್ತು.

## ಆಂಧ್ರಪ್ರದೇಶ ಪರ್ಯಟನೆ

1963ರಲ್ಲಿ ನಿಖಿಲಾನಂದಗುಪ್ತರೆಂಬ ಸ್ನೇಹಿತರೊಂದಿಗೆ ಶ್ರೀ ದೇವರಾಯರು ಆಂಧ್ರಪ್ರದೇಶದ ಪರ್ಯಟನೆ ಮೊದಲ ಬಾರಿಗೆ ಕೈಗೊಂಡರು. ಈ ಅವಧಿಯಲ್ಲಿ ಶ್ರೀದತ್ತಾತ್ರೇಯರು ಶ್ರೀಪಾದಶ್ರೀವಲ್ಲಭರಾಗಿ ಅವತರಿಸಿದ ಶ್ರೀಕ್ಷೇತ್ರ ಪೀಠಾಪುರದ ಮಹಿಮೆಯನ್ನು ತುಂಬಾ ಕಷ್ಟದಿಂದ ಪರಿಶೋಧನೆ ಮಾಡಿ ಮೊದಲ ಬಾರಿಗೆ ಹೊರಕ್ಕೆ ತಂದರು. ಆ ಬಳಿಕ ಇವರ ಸ್ನೇಹಿತರಾದ ಶ್ರೀಸಜ್ಜನಗಡವಾಸಿ ರಾಮಸ್ವಾಮಿಗಳಿಂದ ಈ ಕ್ಷೇತ್ರವು ಅಭಿವೃದ್ಧಿಯಾಯಿತು. ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳನ್ನೂ ಈ ಕ್ಷೇತ್ರಕ್ಕೆ ಕರೆದೊಯ್ದರು.

ಕೇವಲ 21 ದಿನಗಳಲ್ಲಿಯೇ ಆಂಧ್ರದಲ್ಲಿ ಉಪನ್ಯಾಸಕೊಡುವಷ್ಟರ ಮಟ್ಟಕ್ಕೆ ಆ ಭಾಷೆಯನ್ನು ಶೀಘ್ರವಾಗಿ ಕಲಿತುಕೊಂಡರು.

1968ರಲ್ಲಿ ಮಿತ್ರರಾದ ಶ್ರೀ ಡಿ.ಬಿ. ಗಂಗೊಳ್ಳಿಯವರ ಪರಿಚಯ. ಚಿತ್ರಾಪುರಮಠದ ಧರ್ಮಪ್ರಚಾರಕನ ಕೆಲಸ (1974ರವರೆಗೆ) ಮುಂತಾದವುಗಳನ್ನು **'ಶಾಂಕರವೇದಾಂತ ಸೌರಭ'** ಗ್ರಂಥದ 'ಮೊದಲ ಮಾತು'ಗಳಲ್ಲಿ ವಿಸ್ತಾರವಾಗಿ ಕೊಟ್ಟಿದೆ. ಈ ಅವಧಿಯಲ್ಲಿ ದೇವರಾಯರು ಕನ್ನಡ ಹಾಗೂ ಮರಾಠಿಭಾಷೆಗಳಲ್ಲಿ ಉಪನ್ಯಾಸ ಮಾಡುತ್ತಿದ್ದರು ಮತ್ತು ದೇವರಾಯರು ಇಂಗ್ಲೀಷಿನಲ್ಲಿ ಭಾಷಣ ಮಾಡುವವರೆಗೂ ಆಂಗ್ಲಭಾಷೆಯನ್ನು ಗ್ರಹಿಸಿದರು.

## ಪರದೇಶ ಪ್ರವಾಸ

1978ರಿಂದ ಫ್ರಾನ್ಸಿನ ಶ್ರೀ 'ಯಾನ್ ಲೀಬೋಚರ್' ಎಂಬ ಶಿಷ್ಯರು ಇವರ ಬೋಧೆಯನ್ನು ಅನುಸರಿಸಿ ಶಾಂಕರವೇದಾಂತದಲ್ಲಿ Ph.D. ಮಾಡುವ ಉದ್ದೇಶದಿಂದ 1982ನೇ ಆಗಸ್ಟ್ ತಿಂಗಳಲ್ಲಿ ಫ್ರಾನ್ಸ್ ದೇಶಕ್ಕೆ ಕರೆಸಿಕೊಂಡರು. ಅಲ್ಲಿ ಶ್ರೀ ದೇವರಾಯರು 50 ದಿನಗಳ ಕಾಲ ಇದ್ದು ಅವರಿಗೆ Ph.D. ಗೆ ಬೇಕಾದ ವಿಷಯಗಳನ್ನು ಬೋಧಿಸಿದರು.

1986ರಲ್ಲಿ ಈ ಫ್ರಾನ್ಸಿನ ಶಿಷ್ಯನು ಶಾಂಕರವೇದಾಂತದಲ್ಲಿ Ph.D. ಪಡೆದು ಶ್ರೀ ದೇವರಾಯರಿಗೆ ಕೃತಜ್ಞತೆಯ ಕಾಗದವನ್ನು ಬರೆದು 'ಶ್ರೀಶ್ರೀಗಳವರ ಹಾಗೂ ತಮ್ಮ ಹೆಸರುಗಳನ್ನು ಫ್ರೆಂಚ್ ಯೂನಿವರ್ಸಿಟಿ (ವಿಶ್ವವಿದ್ಯಾಲಯ)ಯಲ್ಲಿ ಶಾಶ್ವತವಾಗಿ ಉಳಿಯುವಂತೆ ಮಾಡಿದ್ದೇನೆಂದು' ತಿಳಿಸಿದನು.

## ಸ್ವದೇಶದಲ್ಲಿ

1975ರಿಂದ ಸುಮಾರು 14 ವರ್ಷಗಳ ಕಾಲವೂ ಆಂಧ್ರಪ್ರಾಂತದಲ್ಲಿಯೇ ತೆಲಗಿನಲ್ಲಿ ಉಪನ್ಯಾಸಮಾಡುತ್ತಾ ಶ್ರೀಶ್ರೀಗಳವರ ಶುದ್ಧ ಶಾಂಕರವೇದಾಂತ ಪ್ರಕ್ರಿಯೆಯನ್ನು ವಿಶೇಷವಾಗಿ ಪ್ರಚಾರಮಾಡಿದರು. ಇವರ ಅನೇಕ ಗ್ರಂಥಗಳು ತೆಲುಗಿನಲ್ಲಿ ಭಾಷಾಂತರವಾಗಿವೆ. ಹೀಗೆ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲಿ ಪ್ರವಾಸಮಾಡಿ ಪ್ರಚಾರಮಾಡಿದರು. ಕಳೆದ ಎರಡು ವರ್ಷಗಳಿಂದಲೂ ಕಲ್ಕತ್ತಾದ ಮಾನಸಕುಮಾರ ಸಂನ್ಯಾಲ್ ಎಂಬ ಜಿಜ್ಞಾಸು ಒಬ್ಬರು ಶ್ರೀ ದೇವರಾಯರಿಂದ ಇಂಗ್ಲೀಷಿನಲ್ಲಿ ಅಂಚೆಯ ಮೂಲಕ ಶಿಕ್ಷಣಪಡೆದು ಒಟ್ಟು 5 ಗ್ರಂಥಗಳನ್ನು ಇಂಗ್ಲೀಷಿನಲ್ಲಿಯೇ ದೇವರಾಯರ ಹೆಸರಿನಲ್ಲಿ ಪ್ರಕಟಿಸಿದ್ದಾರೆ.

## ಗುರುಮಹಿಮೆ

ಕೇವಲ ಮುಲ್ಕಿಪರೀಕ್ಷೆ (ಪ್ರೈಮರಿ) ವಿದ್ಯಾಭ್ಯಾಸಕ್ಕೆ ಶಿಕ್ಷಣಕ್ಕೆ ಶರಣು ಹೊಡೆದು, ಮೇಳಿ ಹಿಡದು ಬೇಸಾಯದ ಕೆಲಸದಲ್ಲಿ ತೊಡಗಿದ ವ್ಯಕ್ತಿಯು ಕನ್ನಡ, ತೆಲುಗು, ಮರಾಠಿ, ಇಂಗ್ಲೀಷ ಭಾಷೆಗಳಲ್ಲಿ ಪರಿಶುದ್ಧ ಶಾಂಕರವೇದಾಂತವನ್ನು ಕುರಿತು ಶಾಂಕರಭಾಷ್ಯದ ಮೇಲೆ, ಪ್ರಭುತ್ವದಿಂದ ಉಪನ್ಯಾಸಗಳನ್ನು ಮಾಡಿ Ph.D. ಪಡೆಯುವ ಹಂಬಲ ಉಳ್ಳ ಪರದೇಶದ ಶಿಷ್ಯನಿಗೆ ಇಂಗ್ಲೀಷಿನಲ್ಲಿ ಪಾಠ ಹೇಳುವ ಹಾಗೂ ಅನೇಕ ಗ್ರಂಥಗಳನ್ನು ರಚಿಸುವ ಮಹಾಮೇಧಾವಿಯಾದನೆಂಬುದು ಪ್ರತ್ಯಕ್ಷವಾಗಿರುವಾಗ ಶ್ರೀ

ಸದ್ಗುರುಪ್ರಸಾದದ ಮಹಿಮೆ ಎಷ್ಟಿದೆ? ಎಂಬುದು ಊಹೆಗೆ ಕೂಡ ನಿಲುಕದ ಸಂಗತಿಯಾಗಿದೆ.

## ಗ್ರಂಥರಚನೆ

ದಾವಣಗೆರೆಯಲ್ಲಿರುವಾಗಲೇ 'ಆತ್ಮಜ್ಞಾನಲಹರಿ' ಎಂಬ ಪದಗಳ ಸಂಗ್ರಹವನ್ನು ಪ್ರಕಟಿಸಿದ್ದರು. ಶ್ರೀಶ್ರೀಗಳವರ ಶಿಷ್ಯತ್ವವಹಿಸಿದ ಬಳಿಕ ಮೊದಲು 'ಶಂಕರದರ್ಶನ' (ಬ್ರಹ್ಮಜ್ಞವಚನ–ತ್ರಿಪದಿ) ಎಂಬ ಗ್ರಂಥವನ್ನು ಬರೆದು ಗುರುಗಳಿಗೆ ಅರ್ಪಿಸಿದರು. ಆ ಬಳಿಕ 'ಶಂಕರಸಂಸ್ಕರಣ' 'ಅಧ್ಯಾತ್ಮಯೋಗ' 'ಭಗವದ್ಗಿತಾ ಲಾವಣಿ' 'ಶ್ರೀದತ್ತನಾಮಾಮೃತ' ಎಂಬ ಪದಗಳ ಸಂಗ್ರಹ ಮುಂತಾದ ಅನೇಕ ಗ್ರಂಥಗಳನ್ನು ರಚಿಸಿದರು. ಇದಲ್ಲದೆ 'ಗಣೇಶವಿದ್ಯೆ' 'ವೇದಾಂತದ ಒಳಗಣ್ಣು' ಮುಂತಾದ ಗ್ರಂಥಗಳನ್ನು ಬರೆದು ಮುಕ್ಕಾಲುಪಾಲು ಗ್ರಂಥಗಳನ್ನು ಕಾರ್ಯಾಲಯ ಹಾಗೂ ಇಂಥ ಪವಿತ್ರ ಸಂಸ್ಥೆಗಳಿಗೇ ಅರ್ಪಿಸಿದ ತ್ಯಾಗಬುದ್ಧಿಯು ದೇವರಾಯರಿಗೆ ಜನ್ಮತಃ ಬಂದಿರುತ್ತದೆ. ಹೀಗೆ ಇವರು ಗ್ರಂಥರಚನಾಸಾಮರ್ಥ್ಯ– ಕವಿತ್ವ, ಸಂಗೀತಜ್ಞಾನ , ಉಪನ್ಯಾಸಕಲೆ, ಬಹುಭಾಷಾಪಟುತ್ವ – ಮುಂತಾಗಿ ಬಹುಮುಖಪ್ರತಿಭೆಯುಳ್ಳವರಾಗಿದ್ದಾರೆ.

## ಕುಟುಂಬದ ಹೊಣೆಗಾರಿಕೆ

ಆಧ್ಯಾತ್ಮಸಾಧನೆ, ಉಪನ್ಯಾಸಗಳನ್ನೇ ಜೀವನವನ್ನಾಗಿಟ್ಟುಕೊಂಡು ಶ್ರೀ ದೇವರಾಯರಿಗೆ ಶ್ರೀದತ್ತಸ್ಥಾನದಲ್ಲಿ ದಿವ್ಯತಪಸ್ಸನ್ನಾಚರಿಸಿ ದತ್ತಸಾಕ್ಷಾತ್ಕಾರವನ್ನು ಪಡೆದು ಪುನರ್ಜನ್ಮವನ್ನೇ ಪಡೆದವರಾದ ಇವರ ಶ್ರೀಮತಿಯವರು ಇವರಿಗೆ ಸಂಸಾರದ ಜವಾಬ್ದಾರಿಯನ್ನು ಸ್ವಲ್ಪವೂ ಹೊರಿಸದೆ 1953ರಿಂದ 1983ರವರೆಗೆ ತಾವೇ ಹೊಣೆಹೊತ್ತು ನಿರ್ವಹಿಸಿದರು. ಐದೂಜನ ಗಂಡುಮಕ್ಕಳಿಗೆ ಉಚ್ಚಶಿಕ್ಷಣ, ಮೂರು ಜನ ಹೆಣ್ಣು ಮಕ್ಕಳ ಮದುವೆ ಮುಂತಾದ ಭಾರವನ್ನೆಲ್ಲ ತಾವೇ ನಿರ್ವಹಿಸಿ ತಮ್ಮ ಪತಿದೇವರಿಗೆ ಆಧ್ಯಾತ್ಮಸಾಧನೆ ಹಾಗೂ ಉಪನ್ಯಾಸಗಳಲ್ಲಿಯೇ ನಿರತರಾಗುವದಕ್ಕೆ ಕಾರಣರಾದರು. ಈ ಮಹಾತಾಯಿಯ ತ್ಯಾಗದಿಂದ ಈಗ ಇವರ ಮಕ್ಕಳೆಲ್ಲರೂ ಒಳ್ಳೊಳ್ಳೆಯ ಸ್ಥಿತಿಗೆ ಬಂದಿದ್ದಾರೆ. ಹಾಗೂ ತಂದೆ–ತಾಯಿಗಳಿಗೆ ವಿಧೇಯರೂ ಸದ್ಗುಣಿಗಳೂ ಆಗಿದ್ದಾರೆ.

# ಕೆಲವು ವ್ಯಕ್ತಿಗಳು

ಶ್ರೀ ದೇವರಾಯರು ತಮ್ಮ ಜೀವನವನ್ನು ಕುರಿತು ನಮ್ಮೊಡನೆ ಹೃದಯ ಬಿಚ್ಚಿ ಮಾತನಾಡುವಾಗ ಕೆಲವು ವ್ಯಕ್ತಿಗಳನ್ನು ಮತ್ತೆ ಮತ್ತೆ ಜ್ಞಾಪಿಸಿಕೊಳ್ಳುತ್ತಿದ್ದರು. ''ಅಧ್ಯಾತ್ಮಪ್ರಗತಿಯಲ್ಲಿ ಸದ್ಗುರುಗಳಾದ ಶ್ರೀಶಂಕರಭಟ್ಟ ಅಗ್ನಿಹೋತ್ರಿ ಮಾಸ್ತರರು, ಶ್ರೀಶ್ರೀಗಳವರು, ಅಲ್ಲದೆ ಶ್ರೀ ನಂಜಪ್ಪಭಾಗವತರು (ಅಥವಾ ಭಗವಚ್ಚೈತನ್ಯರು) ಮುಖ್ಯರೆಂದು ಹೇಳುತ್ತಿದ್ದರು. ಇನ್ನು ಅಧ್ಯಾತ್ಮವಿದ್ಯೆಯ ಪ್ರಗತಿಯು ನಿರಾತಂಕವಾಗಿ ನಡೆಯಲು ಲೌಕಿಕರೀತಿಯ ಹೆಚ್ಚಿನ ಸಹಾಯವನ್ನು ಹೃತ್ಪೂರ್ವಕವಾಗಿ ಸಲ್ಲಿಸಿರುವವರನ್ನೂ ಆಗಾಗ ಸ್ಮರಿಸಿಕೊಳ್ಳುತ್ತಿದ್ದರು. ಶ್ರೀ ನಿಖಿಲಾನಂದಗುಪ್ತರು, ಶ್ರೀದೇವತಾ ಶ್ರೀರಾಮಯ್ಯನವರು ಹಾಗೂ ಪರಮಾರ್ಥ ವಿಚಾರಸಂಘದ ಸರ್ವಸದಸ್ಯರು, ಶ್ರೀಸದ್ಗುರು ಎ. ಶ್ರೀನಿವಾಸಮೂರ್ತಿಗಳವರು, ಲಕ್ಷ್ಮಣಸಾ ಖೋಡೆ ಹಾಗೂ ಅವರ ಕುಟುಂಬದವರು, ಶ್ರೀ ಡಿ.ಬಿ. ಗಂಗೊಳ್ಳಿಯವರು, ಆದೋನಿಯ ಶ್ರೀ ಶ್ರೀ ಎಂ. ಹನುಮಂತರಾವ್‌ರವರು, ಇವರೆಲ್ಲರೂ ಕರ್ನಾಟಕದವರು. ಆಂಧ್ರದಲ್ಲಿ ಗುಡಿವಾಡ ಪ್ರಣವಾಶ್ರಮದ ಶ್ರೀ ಶ್ರೀ ನಿರ್ವಿಕಲ್ಪಾನಂದಭಾರತೀ ಶ್ರೀಗಳು, ಚಿಂತಲಪೂಡಿಯ ವಿಶ್ವನಾಥಮಠದ ಶ್ರೀ ಶ್ರೀ ಬೋಧಾನಂದಪುರಿ ಶ್ರೀಗಳು, ಗುಂಟೂರಿನ ಡಾ|| ಜಿ.ವಿ. ಪೂರ್ಣಚಂದ್ರರಾವ್‌ರವರು, ಖಮ್ಮಂದ ಶ್ರೀ ಜಿ.ವಿ.ಪಿ. ಚಿದಂಬರರಾವ್‌ರವರು ಇನ್ನೂ ಅನೇಕರು.

ಪರದೇಶದಲ್ಲಿ ಮುಖ್ಯವಾಗಿ ಇಟಲಿಯ ''ಅಲೆಸ್ಸ್ಯಾಂಡ್ರೋ ಬ್ರುಸ್ಕೆಟಿನಿ'' ಫ್ರಾನ್ಸಿನ ''ಯಾನ್ ಲೀಬೋಚರ್'' ಮುಂತಾದವರಿಂದ ನಾನು ತುಂಬಾ ಉಪಕೃತನಾಗಿರುತ್ತೇನೆ— ಎಂದು ಹೇಳುತ್ತಿದ್ದರು. ಹಾಗೂ ಈ ಸಹಾಯವೆಲ್ಲವೂ ಶ್ರೀದತ್ತದಯದಿಂದ ಒದಗಿಬಂತು ಎಂದು ಭಕ್ತಿಪೂರ್ವಕವಾಗಿ ಭಗವಂತನನ್ನು ಸ್ಮರಿಸಿಕೊಳ್ಳುತ್ತಿದ್ದರು.

ಇವರ ತತ್ತ್ವವಿವರಣೆಯ ಶೈಲಿಯುವಿಶಿಷ್ಟವಾಗಿದ್ದು ಸಾಧನಸಿದ್ಧಾಂತಗಳ ಸ್ಥಾನಮಾನ ಹಾಗೂ ಅವುಗಳ ಸಮನ್ವಯ, ಭಾಷ್ಯಾಧಾರ, ಅನುಭವ ಸಮ್ಮತವಾಗಿರುವದು, ನಮ್ಮ ಸಹಜವಾಗಿರುವ ವ್ಯಾವಹಾರಿಕ ದೃಷ್ಟಿಯಿಂದಲೇ ಯಾವ ಮಟ್ಟದ ಜಿಜ್ಞಾಸುವೇ ಇರಲಿ, ಅವನು ಆ ತನ್ನ ಮಟ್ಟದಿಂದಲೇ ಮುಂದುವರೆದು ತನ್ನ ಪರಮಾರ್ಥತತ್ತ್ವವನ್ನು ಕಂಡುಕೊಂಡು, ಅದರಲ್ಲಿಯೇ ನೆಲೆನಿಂತು ಆತ್ಯಂತಿಕ ಕೃತಾರ್ಥತೆಯನ್ನು ಪಡೆಯುವಂತಾಗುವದು ಮುಂತಾದ ಗುಣಗಳಿಂದ ಕೂಡಿರುತ್ತದೆ. ಇವರು ಉಪಾಸನಾಜ್ಞಾನಗಳೆರಡರಲ್ಲಿಯೂ (ಸಾಧನಸಿದ್ಧಾಂತಗಳಲ್ಲಿ) ಪರಿಪೂರ್ಣತೆ ಯನ್ನು ಪಡೆದವರು. ನಿಜವಾಗಿಯೂ ಶ್ರೀಶಂಕರರನ್ನು ಅರ್ಥಮಾಡಿಕೊಳ್ಳ

ಬೇಕೆಂಬುವವರು ಅವರ ಅನಂತರ ಬಂದ ಕಲಬೆರೆಕೆಯ ವ್ಯಾಖ್ಯಾನಗಳನ್ನೂ ಹಾಗೂ ಅವರ ಹೆಸರಿನಲ್ಲಿಯೇ ಪ್ರಸಿದ್ಧವಾದ ಗೊಂದಲಮಯ ವೇದಾಂತಸಾಹಿತ್ಯವನ್ನೂ ಕೈಬಿಟ್ಟು ನೇರಾಗಿ **ಶ್ರೀಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯಗಳನ್ನೇ** ನೋಡ ಬೇಕೆಂದು ಇವರ ಅಭಿಪ್ರಾಯ.

ಶ್ರೀ ದೇವರಾಯರು ಮಹಾಮೇಧಾವಿಗಳು, ಸಂಗೀತಜ್ಞರು, ಕವಿಗಳು, ಸಾಹಿತಿಗಳು, ಬಹುಭಾಷಾತಜ್ಞರು, ಉತ್ತಮ ವಕ್ತಾರರು, ಶ್ರೇಷ್ಠ ಉಪಾಸಕರು, ಬ್ರಹ್ಮನಿಷ್ಠರು, ತತ್ತ್ವ ನಿರೂಪಣೆಯ ಶೈಲಿಯ ಅಗಾಧ, ಮುಗ್ಧ-ಸರಳಸ್ವಭಾವ, ಯಾವಾಗಲೂ ಹಸನ್ಮುಖಿ, ಕಾರ್ಯದಕ್ಷರು, ಎಲ್ಲರಲ್ಲಿಯೂ ಆತ್ಮೀಯತೆಯುಳ್ಳವರು. ಭಗವಂತನಲ್ಲಿ ಭಕ್ತಿ, ಶ್ರದ್ಧೆ, ತಾಳ್ಮೆ ಸತತಪ್ರಯತ್ನ ಇವು ಮೂರೂ ಜೀವನದ ಮುಖ್ಯ ಸೂತ್ರಗಳು ಎಂಬುದು ಇವರ ಉಪದೇಶವು. ನಿರಾಡಂಬರ ಸರಳ ಜೀವನಗಳು ಇವರಲ್ಲಿ ಸಹಜವಾಗಿ ಬಂದಿದ್ದವು. ಸದಾ ಹಸನ್ಮುಖಿಗಳಾಗಿರುವ ಇವರು ಅಧ್ಯಾತ್ಮಕ್ಷೇತ್ರದಲ್ಲಿ ಪರಿಪೂರ್ಣತೆಯನ್ನು ಪಡೆದ ಆಧ್ಯಾತ್ಮಯೋಗಿಗಳು. ಇವರಿಗೆ **"ಅಪರಯಾಜ್ಞವಲ್ಕ್ಯ"** ಎಂಬ ಬಿರುದನ್ನು ಆಂಧ್ರದಲ್ಲಿ ಕೊಟ್ಟಿದ್ದಾರೆ. ಅದಕ್ಕೆ ತಕ್ಕಂತೆ ಅತ್ಯಂತ ಆತ್ಮೀಯತೆಯಿಂದ ತತ್ತ್ವಜಿಜ್ಞಾಸುಗಳಿಗೆ ನಿರ್ವಂಚನೆಯಿಂದ ಬೋಧಿಸುವ ದೊಡ್ಡ ಗುಣವು ಇವರಿಗಿತ್ತು. 1970ರಿಂದ 1990ರವರೆಗೂ ಅಖಂಡವಾಗಿ ಅನೇಕ ಕಡೆಗಳಲ್ಲಿ ಪ್ರವಾಸಮಾಡಿರುವ ಇವರು ತಮ್ಮ ಅನಾರೋಗ್ಯ ಪರಿಸ್ಥಿತಿಯಲ್ಲಿಯೂ ಅಧ್ಯಾತ್ಮವಿದ್ಯಾಪ್ರಚಾರವನ್ನೇ ಜೀವನದ ಉಸಿರಾಗಿಸಿಕೊಂಡು ಬದುಕಿದವರು ಶ್ರೀ ದೇವರಾಯರು. ಎಲ್ಲಿ ಹೋದರೆ ಅಲ್ಲಿಯ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವ **'ಅಡ್ಜಸ್ಟ್ ಅಂಡ್ ಅಕಾಮಡೇಟ್'** ಎಂಬ ತತ್ತ್ವವು ಇವರಿಗೆ ಮೈಗೂಡಿಹೋಗಿತ್ತು ಇಂಥ ಮಹಾ ವ್ಯಕ್ತಿ ನಮ್ಮ ಊರಿನವರೆಂದು ಹೇಳಿಕೊಳ್ಳಲು ನಮಗೆಲ್ಲ ಒಂದು ಹೆಮ್ಮೆಯಾಗಿರುತ್ತದೆ.

ಇಂಥ ಮಹನೀಯರು ತಾ|| 7-12-1993ರಂದು ತಮ್ಮ 72ನೆಯ ವಯಸ್ಸಿನಲ್ಲಿ ದೈವಾಧೀನರಾದರು. ಈ ಮಹನೀಯರ ಅಮೋಘವಾದ ಅಧ್ಯಾತ್ಮವಿದ್ಯಾಪ್ರಚಾರ ಸೇವೆಗೆ ಕಾರ್ಯಾಲಯದವರು ತುಂಬು ಕೃತಜ್ಞರಾಗಿರುತ್ತಾರೆ. ಕಾರ್ಯಾಲಯದಿಂದ ಪ್ರಕಟಿತವಾಗಿರುವ ಅವರ ಪುಸ್ತಕಗಳೆಲ್ಲವೂ ಕಾರ್ಯಾಲಯದಲ್ಲಿ ಮಾರಾಟಕ್ಕೆ ದೊರಕುತ್ತವೆ.

# ಪರಿಶಿಷ್ಟ

## ಲೇಖನಗಳ ಮೂಲ – ದಿಕ್ಸೂಚಿ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| | | | | | **ಭಾಗ–I**<br>(ಅಧ್ಯಾತ್ಮಪ್ರಕಾಶ ಪತ್ರಿಕೆಯಿಂದ) | |
| 1. | 33 | 5 | ಜನವರಿ | 1964 | ಶ್ರೀಶ್ರೀಗಳವರ ಆಂಧ್ರಪ್ರದೇಶದ ಪ್ರವಾಸ ವಾರ್ತೆ1 | 1 |
| 2. | 33 | 6 | ಫೆಬ್ರವರಿ | 1964 | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–2 | 8 |
| 3. | 33 | 7 | ಮಾರ್ಚ್ | 1964 | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–3 (ವಿಜಯವಾಡ) (7.11.1963) | 14 |
| 4. | 33 | 8 | ಏಪ್ರಿಲ್ | 1964 | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–4 (ಗುಂಟೂರು) (8.11.63) | 20 |
| 5. | 33 | 9 | ಮೇ | 1964 | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–5 (ಪೀಠಾಪುರ) (11.11.63) | 27 |
| 6. | 33 | 10 | ಜೂನ್ | 1964 | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–6 (ಆಲವಿಲ್ಲಮಲ್ಲವರಂ) (12.11.63) | 34 |
| 7. | 33 | 11 | ಜುಲೈ | 1964 | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–7 (ವಿಜಯನಗರ) (19.11.63) | 40 |
| 8. | 33 | 12 | ಆಗಸ್ಟ್ | 1964 | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–8 (ಪಾರ್ವತೀಪುರಮ್(22.11.63) | 49 |
| 9. | 34 | 1 | ಸಪ್ಟೆಂಬರ್ | 1964 | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–9 (ವಿಶಾಖಪಟ್ಟಣ) (25.11.63) | 55 |
| 10. | 34 | 2 | ಅಕ್ಟೋಬರ್ | 1964 | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–10 (ಅನಕಾಪಲ್ಲಿ) (28.11.63) | 63 |
| 11. | 34 | 3 | ನವೆಂಬರ್ | 1964 | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–11 (ಅನಕಾಪಲ್ಲಿ) (28.11.63) | 71 |
| 12. | 34 | 4 | ಡಿಸೆಂಬರ್ | 1964 | ಶ್ರೀಶ್ರೀಗಳವರ ಆಂ. ಪ್ರ. ಪ್ರ. ವಾರ್ತೆ–12 ಬೆಂಗಳೂರಿಗೆ ಪ್ರಯಾಣ (5.12.63) | 78 |

| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 13. | 41 | 8 | ಏಪ್ರಿಲ್ | 1972 | ಪರಮಾರ್ಥದ ಪಥದಲ್ಲಿ–1 | 87 |
| 14. | 41 | 9 | ಮೇ | 1972 | ಪರಮಾರ್ಥದ ಪಥದಲ್ಲಿ–2 | 91 |
| 15. | 41 | 10 | ಜೂನ್ | 1972 | ಪರಮಾರ್ಥದ ಪಥದಲ್ಲಿ–3 | 93 |
| 16. | 42 | 2 | ಅಕ್ಟೋಬರ್ | 1972 | ಆತ್ಮನನ್ನು ಅರಿಯುವದೆಂದರೆ ಏನು | 97 |
| 17. | 42 | 4 | ಡಿಸೆಂಬರ್ | 1972 | ಗೀತಾಭಾಷ್ಯವಾಕ್ಯಾನುಸಂಧಾನ–1 | 99 |
| 18. | 42 | 5 | ಜನವರಿ | 1973 | ಗೀತಾಭಾಷ್ಯವಾಕ್ಯಾನುಸಂಧಾನ–2 | 101 |
| 19. | 42 | 6 | ಫೆಬ್ರವರಿ | 1973 | ಗೀತಾಭಾಷ್ಯವಾಕ್ಯಾನುಸಂಧಾನ–3 | 103 |
| 20. | 42 | 7 | ಮಾರ್ಚ್ | 1973 | ಗೀತಾಭಾಷ್ಯವಾಕ್ಯಾನುಸಂಧಾನ–4 | 105 |
| 21. | 42 | 8 | ಏಪ್ರಿಲ್ | 1973 | ಗೀತಾಭಾಷ್ಯವಾಕ್ಯಾನುಸಂಧಾನ–5 (ವಿವೇಕ ಪ್ರತ್ಯಯ) | 107 |
| 22. | 42 | 9 | ಮೇ | 1973 | ಗೀತಾಭಾಷ್ಯವಾಕ್ಯಾನುಸಂಧಾನ–6 (ವಿವೇಕ ಪ್ರತ್ಯಯ) | 109 |
| 23. | 42 | 10 | ಜೂನ್ | 1973 | ಗೀತಾಭಾಷ್ಯವಾಕ್ಯಾನುಸಂಧಾನ–7 (ಭಕ್ತಿಪ್ರಸಾದ ಸ್ನೇಹ | 111 |
| 24. | 42 | 11 | ಜುಲೈ | 1973 | ಗೀತಾಭಾಷ್ಯವಾಕ್ಯಾನುಸಂಧಾನ–8 (ಭಗವದ್ಭಾವನಾಭಿನಿವೇಶ) | 113 |
| 25. | 42 | 12 | ಆಗಸ್ಟ್ | 1973 | ಗೀತಾಭಾಷ್ಯವಾಕ್ಯಾನುಸಂಧಾನ–9 (ವಿರತಿ ಎಂಬ ಹಣತೆ) | 115 |
| 26. | 43 | 1 | ಸೆಪ್ಟೆಂಬರ್ | 1973 | ಗೀತಾಭಾಷ್ಯವಾಕ್ಯಾನುಸಂಧಾನ–10 (ಸಮ್ಯಗ್ದರ್ಶನರೂಪದ ಜ್ಞಾನದೀಪ) | 116 |
| 27. | 43 | 2 | ಅಕ್ಟೋಬರ್ | 1973 | ಸುಲಭ ಸಾಧನೆ – ಯದಶ್ನಾಸಿ | 120 |
| 28. | 43 | 6 | ಫೆಬ್ರವರಿ | 1974 | ದೃಷ್ಟಿಯ ದ್ರಷ್ಟೃ (ನೋಟವನ್ನೇ ನೋಡುವವ) | 121 |
| 29. | 43 | 8 | ಏಪ್ರಿಲ್ | 1974 | ಸತ್ಸಂಗತ್ವೇ ನಿಃಸಂಗತ್ವಮ್–1 | 124 |
| 30. | 43 | 9 | ಮೇ | 1974 | ಸತ್ಸಂಗತ್ವೇ ನಿಃಸಂಗತ್ವಮ್–2 | 126 |
| 31. | 43 | 10 | ಜೂನ್ | 1974 | ಯತ್ಕರೋಷಿ | 128 |
| 32. | 43 | 11 | ಜುಲೈ | 1974 | ನಿಜಜೀವನ | 130 |
| 33. | 43 | 12 | ಆಗಸ್ಟ್ | 1974 | ಯತ್ಕರೋಷಿ | 133 |
| 34. | 44 | 1 | ಸೆಪ್ಟೆಂಬರ್ | 1974 | ಮನೋವಿಜ್ಞಾನದ ಮಹಿಮೆ | 135 |

| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 35. | 44 | 2 | ಅಕ್ಟೋಬರ್ | 1974 | ಜೀವನ ಅಸ್ತಿತ್ವ | 136 |
| 36. | 44 | 3 | ನವೆಂಬರ್ | 1974 | ವೇದಾಂತದ ಒಳಗುಟ್ಟು–1 | 140 |
| 37. | 44 | 4 | ಡಿಸೆಂಬರ್ | 1974 | ವೇದಾಂತದ ಒಳಗುಟ್ಟು–2 | 142 |
| 38. | 44 | 5 | ಜನವರಿ | 1975 | ವೇದಾಂತದ ಒಳಗುಟ್ಟು–3 | 145 |
| 39. | 44 | 7 | ಮಾರ್ಚ್ | 1975 | ವೇದಾರ್ಥ ರಹಸ್ಯ–1 | 148 |
| 40. | 44 | 8 | ಏಪ್ರಿಲ್ | 1975 | ವೇದಾರ್ಥ ರಹಸ್ಯ–2 | 150 |
| 41. | 44 | 9 | ಮೇ | 1975 | ಕರ್ಮಫಲತ್ಯಾಗ | 152 |
| 42. | 44 | 10 | ಜೂನ್ | 1975 | ಸಂಕಲ್ಪ ತ್ಯಾಗ | 153 |
| 43. | 44 | 12 | ಆಗಸ್ಟ್ | 1975 | ಸ್ವಕರ್ಮಣಾ ತಮಭ್ಯರ್ಚ್ಯ | 154 |
| 44. | 45 | 1 | ಸಪ್ಟೆಂಬರ್ | 1975 | ದಾನಂ ದಾತೃವಶಂ ಪ್ರೋಕ್ತಮ್ | 157 |
| 45. | 45 | 2 | ಅಕ್ಟೋಬರ್ | 1975 | ದರ್ವೀ ಪಾಕರಸಂ ಯಥಾ | 159 |
| 46. | 45 | 3 | ನವಂಬರ್ | 1975 | ಆಮನನ್ತಿ ಚೈನಮಸ್ಮಿನ್ | 161 |
| 47. | 45 | | ಆಗಸ್ಟ್ | 1976 | ಅಧ್ಯಾತ್ಮವಿದ್ಯೆ | 164 |
| 48. | 48 | | ಅಕ್ಟೋಬರ್ | 1978 | ವೈರಾಗ್ಯ ಚಕ್ರವರ್ತಿ | 168 |
| 49. | 50 | 2 | ಅಕ್ಟೋಬರ್ | 1980 | ಶ್ರೀಶ್ರೀಭಗವತ್ಪಾದರೊಡನೆ ಸಂದರ್ಶನ–1 | 170 |
| 50. | 50 | 4 | ಡಿಸೆಂಬರ್ | 1980 | ಶ್ರೀಶ್ರೀಭಗವತ್ಪಾದರೊಡನೆ ಸಂದರ್ಶನ–2 | 175 |
| 51. | 50 | 5 | ಜನವರಿ | 1981 | ಶ್ರೀಶ್ರೀಭಗವತ್ಪಾದರೊಡನೆ ಸಂದರ್ಶನ–3 | 178 |
| 52. | 53 | 2 | ಅಕ್ಟೋಬರ್ | 1983 | ಅಮೆರಿಕಾದಲ್ಲಿ ಉಪಾಕರ್ಮ | 181 |
| 53. | 53 | 6 | ಫೆಬ್ರವರಿ | 1984 | ಜಿಜ್ಞಾಸುಗಳೊಬ್ಬರ ಕಣ್ಮರೆ | 185 |
| 54. | 57 | 7 | ಮಾರ್ಚ್ | 1988 | ಪಾಶ್ಚಾತ್ತ್ಯರ ಜ್ಞಾನಪಿಪಾಸೆ | 186 |
| 55. | 64 | 4 | ಡಿಸೆಂಬರ್ | 1994 | ವೇದಾಂತಸಂಪ್ರದಾಯ | 189 |
| 56. | 64 | 9 | ಮೇ | 1995 | ಆತ್ಮಾನುಭವವೆಂದರೇನು? | 191 |
| 57. | 65 | 2 | ಅಕ್ಟೋಬರ್ | 1995 | ಬ್ರಹ್ಮವು ಇದೆಯೆಂದು ಏಕೆ ಒಪ್ಪಬೇಕು? | 193 |


## ಭಾಗ 2

## (ಶಂಕರಭಾಸ್ಕರ ಪತ್ರಿಕೆಯಿಂದ)


| | | | | | | |
|---|---|---|---|---|---|---|
| 1. | 1 | 1 | ಜನವರಿ | 1988 | ಶಂಕರರ ಹಿತೋಪದೇಶ (ಇಂದ್ರಿಯನಿಗ್ರಹ) | 196 |
| 2. | 1 | 3 | ಜುಲೈ | 1988 | ಆತ್ಮವಿಜ್ಞಾನಕ್ಕೆ ಸಾಧನಗಳು | 198 |
| 3. | 1 | 4 | ಅಕ್ಟೋಬರ್ | 1988 | ಇಬ್ಬರು ವೇದಾಂತಭಾಸ್ಕರರು | 199 |

| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 4. | 2 | 1 | ಜನವರಿ | 1989 | ಬ್ರಹ್ಮವನ್ನು ಅರಿಯುವ ಬಗೆ (ವೇದಾಂತದ ಒಗಟು) | 200 |
| 5. | 2 | 2 | ಏಪ್ರಿಲ್ | 1989 | ಜೀವಾತ್ಮನು ಪರಮಾತ್ಮನೇ | 202 |
| 6. | 2 | 4 | ಅಕ್ಟೋಬರ್ | 1989 | ಆತ್ಮನು ನಿತ್ಯಚಿನ್ಮಾತ್ರಸ್ವರೂಪನೇ | 207 |
| 7. | 3 | 1 | ಜನವರಿ | 1990 | ಆತ್ಮಸತ್ಯಾನುಬೋಧ | 209 |
| 8. | 4 | 3 | ಜುಲೈ | 1991 | ಆತ್ಮಶಬ್ದದ ನಿರ್ವಚನ | 211 |
| 9. | 5 | 1 | ಜನವರಿ | 1992 | ಅನುಭವ | 214 |
| 10. | 5 | 4 | ಅಕ್ಟೋಬರ್ | 1992 | ಕಾಣಿಸುವವನಲ್ಲ! | 216 |
| 11. | 6 | 1 | ಜನವರಿ | 1993 | ಅವಸ್ಥೆಗಳು ಎಷ್ಟು? | 218 |
| 12. | 6 | 2 | ಏಪ್ರಿಲ್ | 1993 | ತತ್ತ್ವದರ್ಶಿಗಳೆಂದರೆ ಯಾರು? | 220 |
| 13. | 6 | 4 | ಅಕ್ಟೋಬರ್ | 1993 | ಅಧ್ಯಾತ್ಮಯೋಗ ಅಥವಾ ನಿಧಿಧ್ಯಾಸನ | 223 |
| 14. | 8 | 3 | ಜುಲೈ | 1995 | ಅದ್ವಿತೀಯಾತ್ಮಾನುಭವ | 226 |
| 15. | 17 | 3 | ಜುಲೈ | 2004 | ಸ್ವಪ್ನದೃಷ್ಟಿಯ ವಿವೇಚನೆ (ಶಾಂಕರವೇದಾಂತಸೌರಭ ಗ್ರಂಥದಿಂದ) | 229 |
| 16. | 18 | 2 | ಏಪ್ರಿಲ್ | 2005 | ಭಗವದ್ಭಕ್ತಸಂತಶ್ರೇಷ್ಠ ಶ್ರೀಶಂಕರರು | 231 |


## ಭಾಗ 3

### ಇತರ ಲೇಖನಗಳು


| | | |
|---|---|---|
| 1. | ಕ್ಷೇತ್ರ ಕ್ಷೇತ್ರಜ್ಞರ ಜ್ಞಾನ | 233 |
| 2. | ಪರಮ ಗುರುಗಳ ಪ್ರಬೋಧ (ಗೌಡಪಾದಾಚಾರ್ಯರು) | 237 |
| 3. | ಸುರೇಶ್ವರ ಸಿಂಹವಾಣಿ | 239 |
| 4. | Empirical and Transcendental View points | 242 |
| 5. | The nature of SELF | 243 |
| 6. | Existance of Time | 245 |
| 7. | ಗ್ರಂಥಕರ್ತರ ಪರಿಚಯ (ಶ್ರೀ ಬಿ.ಟಿ. ದಂಡವತಿ, ಹೊಂಬಳ) | 247 |
| | ಪರಿಶಿಷ್ಟ | 255 |
| | ಮಂಗಳಾರತಿ ಹಾಡು | 260 |

# ಶ್ರೀ ಶ್ರೀಗಳವರ ಮಂಗಳಾರತಿ ಹಾಡು

ರಾಗ – ಭೈರವಿ (ಉತ್ತರಾದಿ) ತಾಳ – ತ್ರಿಪುಟ

ಮಂಗಲ ಗುರು ಸಚ್ಚಿದಾನಂದೇಂದ್ರ ।
ಮಂಗಲ ವೇದಾಂತಾಂಬುಧಿಚಂದ್ರ ॥

ಆದಿಶಂಕರರ ಪ್ರಸ್ಥಾನತ್ರಯ । ಭಾಷ್ಯ ಸಾಗರದ ಮಂಥನದಿ ।
ಶೋಧಿಸಿ ವೇದಾಂತದ ಪರಿಶುದ್ಧಿಯ । ಸಂಪ್ರದಾಯವನು ತೋರಿಸಿದಿ ॥
ಹಾದಿ ತಪ್ಪಿರುವ ವ್ಯಾಖ್ಯಾನಂಗಳ । ದೋಷವ ಧೈರ್ಯದಿ ಹೊರಗೆಳೆದಿ ।
ಬೋಧಕಾಲದಲಿ ಅನುಭವರೂಪದಿ । ಸಾಧಕರನು ನೆಲೆನಿಲ್ಲಿಸಿದಿ
॥ ಮಂಗಲ ॥ ಜಯ ಮಂಗಲ ॥ 1 ॥

ಜ್ಞಾನಭಕ್ತಿ ವೈರಾಗ್ಯ ಮಾರ್ಗದ । ಮರ್ಮವ ತಿಳಿಸಲು ಸುಜನರಿಗೆ ।
ನಾನಾ ಬಗೆಯಲಿ ಬರೆದು ಪ್ರಕಟಿಸಿದಿ । ಸಂದ್ಗ್ರಂಥಗಳನು ಧರೆಯೊಳಗೆ ॥
ನೀನಧ್ಯಾತ್ಮಪ್ರಕಾಶದ ದೀವಿಗೆ । ನೀಡಿದಿ ಕನ್ನಡಿಗರ ಕೈಗೆ ।
ಮಾನ್ಯ ಸಂಸ್ಕೃತದಿ ಮತ್ತೆ ಆಂಗ್ಲದಲಿ । ಗ್ರಂಥರಚಿಸಿರುವಿ ಎಲ್ಲರಿಗೆ
॥ ಮಂಗಲ ॥ ಜಯ ಮಂಗಲ ॥ 2 ॥

ಮೂಢನಂಬಿಕೆಯ ಕಟ್ಟು ಕಥೆಗಳ । ಗ್ರಹಣದಿ ಶಂಕರ ಭಾಸ್ಕರನ ।
ಪ್ರೌಢಪ್ರಕಾಶವು ಮರೆಯಾಗಿರೆ ನೀ । ಪಠಿಸಿದಿ ಭಾಷ್ಯಮರಶ್ಚರಣ ॥
ನೋಡಲು ಬ್ರಹ್ಮವೆ ಧರಿಸಿತು ಮೊದಲಿಗೆ । ಆದಿಶಂಕರನ ವೇಷವನಾ ।
ಆಗಲೇನು ಆ ಶಂಕರ ನೀ ತೆರ । ಬಂದನು ಇದೆ ನಾಡಿನ ಪುಣ್ಯ
॥ ಮಂಗಲ ॥ ಜಯ ಮಂಗಲ ॥ 3॥

ಪರಬ್ರಹ್ಮ ಸನ್ಮಂಗಲರೂಪ । ಬ್ರಹ್ಮಜ್ಞನೆ ತ್ರಿಗುಣಾತೀತ ।
ನರನ ಶರೀರವ ಧರಿಸಿ ನೀ ಕೃಪಾ । ತೋರಿದಿ ಗುರುಶಂಕರ ದತ್ತ ॥
ಕರುಣಿಸು ನಿನ್ನಯ ಸೇವಾಭಾಗ್ಯ । ದೇಹದಿ ಉಸಿರಿಹ ಪರಿಯಂತ ।
ಚರಣಧೂಲಿಕಣ ದೇವರಾಯನ । ಬಿನ್ನಹವಿದು ಗುರು ಸರ್ವಾತ್ಮ
॥ ಮಂಗಲ ॥ ಜಯ ಮಂಗಲ ॥ 4 ॥

ಗ್ರಂಥರಚನಾಸಾಮರ್ಥ್ಯ-ಕವಿತ್ವ-ಸಂಗೀತಜ್ಞಾನ-ಉಪನ್ಯಾಸಕಲೆ-
ಬಹುಭಾಷಾಪಟುತ್ವ-ಹರಿಕಥಾ ಕೀರ್ತನ ಮುಂತಾದ ಬಹುಮುಖ
ಪ್ರತಿಭಾವಂತರಾದ
ಶ್ರೀ ದೇವರಾಯಕುಲಕರ್ಣಿಯವರಿಂದ ರಚಿತವಾದ ಕೆಲವು ಗ್ರಂಥಗಳು

1. ಶಂಕರಸಂಸ್ಮರಣ ಮತ್ತು ಶಂಕರ ಸಿದ್ಧಾಂತ ಸಂಸ್ಮರಣ
2. ಶಾಂಕರವೇದಾಂತ ಸೌರಭ
3. Adhyama Yoga
4. ಶ್ರವಣ, ಮನನ, ನಿಧಿಧ್ಯಾಸನ
5. ವೇದಾಂತ ಲೇಖನ ಮಾಲೆ (ಈಗ ಇದು ಬಿಡುಗಡೆಯಾಗಿದೆ)
6. ಆತ್ಮಜ್ಞಾನ ಲಹರಿ (ಪದಗಳ ಸಂಗ್ರಹ)
7. ಶಂಕರ ದರ್ಶನ (ಬ್ರಹ್ಮಜ್ಞವಚನ-ತ್ರಿಪದಿ)
8. ಅಧ್ಯಾತ್ಮಯೋಗ (ಕನ್ನಡ)
9. ಶ್ರೀಭಗವದ್ಗೀತಾ ಲಾವಣಿ
10. ಶ್ರೀದತ್ತನಾಮಾಮೃತ
11. ಗಣೇಶವಿದ್ಯೆ
12. ವೇದಾಂತದ ಒಳಗಣ್ಣು
13. Avasthaatraya Viveka Prakriya
14. Teachings of Brahman through the attribution of Avidya & Maya
15. Guide lines to Shankaravedanta

(ವಿ.ಸೂ. 1,2,3,4,5 ಪುಸ್ತಕಗಳು ಕಾರ್ಯಾಲಯದಲ್ಲಿ ಮಾರಾಟಕ್ಕೆ ದೊರೆಯುತ್ತವೆ)

* * *